"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ 12ನೇ ಜುಲೈ 2018
ಗುರುವಾರ

## ವಿಷಯಾನುಕ್ರಮಣಿಕೆ

**1. ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

331 – ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣದ ಗುಣಮಟ್ಟದ ಬಗ್ಗೆ
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು)
276 – ಶಿಕ್ಷಕರ/ಉಪನ್ಯಾಸಕರ ವರ್ಗಾವಣೆ ಬಗ್ಗೆ
– ಶ್ರೀಮತಿ ತಾರಾಅನೂರಾಧ
– ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
304 – ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯುವ ಬಗ್ಗೆ.
– ಶ್ರೀ ಎಂ.ಎ.ಗೋಪಾಲ ಸ್ವಾಮಿ
– ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು)
315 – ಅನುದಾನಿತ ಶಾಲಾ ಶಿಕ್ಷಕರಿಗೆ/ಉಪನ್ಯಾಸಕರಿಗೆ ವೇತನ ತಡೆ ಹಿಡಿದಿರುವ ಬಗ್ಗೆ.
– ಶ್ರೀ ವೈ.ಎ.ನಾರಾಯಣಸ್ವಾಮಿ
– ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
214 – ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಏಕರೂಪ ಪಠ್ಯಕ್ರಮ ಜಾರಿಯ ಬಗ್ಗೆ
– ಶ್ರೀ ಐವನ್ ಡಿ'ಸೋಜಾ
– ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು)
345 – ಜಲವಿದ್ಯುತ್ ಯೋಜನೆಗಳ ಬಗ್ಗೆ.
– ಡಾ: ತೇಜಸ್ವಿನಿ ಗೌಡ
– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)
289 – ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾದ ಹುದ್ದೆಗಳ ಬಗ್ಗೆ.
– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
– ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು)
283 – ಪದವಿಪೂರ್ವ ವೃತ್ತಿ ಶಿಕ್ಷಣ (ಜೆ.ಓ.ಸಿ) ಸಿಬ್ಬಂದಿಗಳ ಪಿಂಚಣಿ ಸೌಲಭ್ಯದ ಬಗ್ಗೆ
– ಶ್ರೀ ಭೋಜೇಗೌಡ
– ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
163 – ಅನ್ನಭಾಗ್ಯ ಯೋಜನೆಯಡಿ ಪಡಿತರ ವಿತರಣೆ ಬಗ್ಗೆ
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್(ಆಹಾರ ನಾಗರೀಕ ಸರಬರಾಜು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಜ್ ವಕ್ಫ್ ಇಲಾಖಾ ಸಚಿವರು)

131 – ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾದ ಶ್ರೀ ಅನ್ವರ್ ಮಾನಪ್ಪಾಡಿ ವರದಿ ಬಗ್ಗೆ.

– ಶ್ರೀ ಅರುಣ ಶಹಾಪುರ

– ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್(ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಇಲಾಖಾ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**3. ನಿಯಮ 330(ಎ) ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಚಿವರಿಂದ ಉತ್ತರ**

**ವಿಷಯ:–** ಪದವಿಪೂರ್ವ ಶಿಕ್ಷಣ ಶಿಕ್ಷಕರ ನೇಮಕಾತಿ ಕಳೆದ ಮೂರು ವರ್ಷಗಳಿಂದ ಇಲಾಖೆಯಲ್ಲಿ ಆಗದೇ ನೊಂದಲವಾಗಿರುವ ಬಗ್ಗೆ.

**4. ವರದಿಯನ್ನೊಪ್ಪಿಸುವುದು**

**5. ಚುನಾವಣಾ ಪ್ರಸ್ತಾವ**

(ಪ್ರಸ್ತಾವವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)

**6. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಗದಗ ಜಿಲ್ಲೆ ರೋಣ ತಾಲ್ಲೂಕಿನ ರೈತರ ಬೆಳೆಗೆ ಹಾನಿಯಾಗುತ್ತಿರುವ ಬಗ್ಗೆ**

– ಶ್ರೀ ಎಸ್.ವ್ಹಿ.ಸಂಕನೂರ

– ಡಾ: ಜಯಮಾಲ ರಾಮಚಂದ್ರ(ಸಭಾನಾಯಕರ)

**ಆ) ಕೃಷಿ ವಿಶ್ವವಿದ್ಯಾಲಯದ ಕೋರ್ಸ್‌ಗಳ ಹೈದರಾಬಾದ್ ಕರ್ನಾತಕ ಭಾಗಕ್ಕೆ ಹಂಚಿಕೆ ಮಾಡುವ ಬಗ್ಗೆ.**

– ಶ್ರೀ ಕೆ.ಬಿ.ಶಾಣಪ್ಪ

– ಡಾ: ಜಯಮಾಲ ರಾಮಚಂದ್ರ (ಸಭಾನಾಯಕರು)

**ಇ) ಮಂಗಳೂರು ವಿಶ್ವವಿದ್ಯಾಲಯದಲ್ಲಿನ ಭ್ರಷ್ಟಾಚಾರದ ಬಗ್ಗೆ.**

– ಶ್ರೀ ಎನ್.ರವಿಕುಮಾರ್

– ಡಾ: ಜಯಮಾಲ ರಾಮಚಂದ್ರ (ಸಭಾನಾಯಕರು)

**ಈ) ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಹರಿಹರಪುರ ಗ್ರಾಮಠಾಣದಲ್ಲಿ ಕೆ.ಎಸ್.ಎಸ್.ಐ.ಡಿ.ಸಿ. ನಿರ್ಮಿಸಿ ನೀಡಿರುವ ವಿಶ್ವ ಮಳಿಗೆ ಬಗ್ಗೆ.**

– ಶ್ರೀ ಎಂ.ಕೆ.ಪ್ರಾಣೇಶ್

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

– ಡಾ: ಜಯಮಾಲ ರಾಮಚಂದ್ರ (ಸಭಾನಾಯಕರು)

**ಉ) ಇಂದಿರಾ ಕ್ಯಾಂಟೀನ್ ಬಗ್ಗೆ**

– ಶ್ರೀ ಬಿ.ಜಿ.ಪಾಟೀಲ್

– ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು) (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಇಲಾಖಾ ಸಚಿವರು)

**7. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಉತ್ತರ**

**ಅ)** ವಿಷಯ:- ರಾಜ್ಯಾದ್ಯಂತ ಮರಾಠ ಸಮಾಜದ ಶೈಕ್ಷಣಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಅಧ್ಯಯನವನ್ನು ದಿನಾಂಕ 24.09.2012 ಮತ್ತು ದಿನಾಂಕ 25.09.2012 ರಂದು ಮರಾಠ ಸಮಾಜದ ಸ್ಥಿತಿಗತಿಗಳನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಮಾನ್ಯ ಶಂಕರಪ್ಪನವರು ಖುದ್ದಾಗಿ ಪರಿಶೀಲಿಸಿ ದಿನಾಂಕ 30.12.2012

– ಶ್ರೀ ಎಸ್.ಎಲ್.ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ

– ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು)(ಹಿಂದುಳಿದ ವರ್ಗಗಳ ಸಚಿವರ ಪರವಾಗಿ)

ಆ) ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಹಾಸನ ಜಿಲ್ಲೆಯ ಸರ್ಕಾರಿ/ಅನುದಾನಿಕ ಪ್ರಾಢಶಾಲೆಗಳ ಶಿಕ್ಷಕರಿಗೆ ಜಿಲ್ಲಾಧಿಕಾರಿಗಳು, ಹಾಸನ ಇವರು ದಿನಾಂಕ 28.07.2018 ರಂದು ಪರೀಕ್ಷೆ ನಡೆಸಲು ಉದ್ದೇಶಿಸಿರುವುದು ಪತ್ರಿಕೆಗಳಲ್ಲಿ ವರಿದಯಾಗಿರುವ ಬಗ್ಗೆ.

– ಶ್ರೀ ಮರಿತಿಬ್ಬೇಗೌಡ

– ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)

ಇ) ಗದಗಿನ ತೋಂಟಧಾರ್ಯ ಮಠದ ಅವರಣಕ್ಕೆ ಹೊಂದಿಕೊಂಡ ಮದ್ಯದ ಅಂಗಡಿಗಳ ನವೀಕರಣಕ್ಕೆ ಪ್ರತಿಭಟನೆ ನಡೆಯುತ್ತಿರುವ ಬಗ್ಗೆ.

– ಶ್ರೀ ಎಸ್.ವ್ಹಿ.ಸಂಕನೂರ್

– ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

ಈ) ವಡ್ಡರ್ಸೆ ಗ್ರಾಮದ ನಿರುದ್ಯೋಗಿ ಅಂಗವಿಕಲ ಯವರ ದೇವೇಂದ್ರ ಸುವರ್ಣ ಕಳೆದ ಒಂದು ವಾರದಿಂದ ರಾಜ್ಯ ಸರ್ಕಾರ ತನಗೆ ನ್ಯಾಯ ನೀಡಬೇಕೆಂದು ಆಗ್ರಹಿಸಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸುತ್ತಿರುವ ಬಗ್ಗೆ.

– ಡಾ: ತೇಜಸ್ವಿನಿ ಗೌಡ

– ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

–

**8. ಪ್ರಕಟಣೆ**

**9. ಗಮನ ಸೆಳೆಯುವ ಸೂಚನೆ**

**ವಿಷಯ:–** ಭಾಷಾ ಅಲ್ಪಸಂಖ್ಯಾತ ಹಿಂದೂ ಧರ್ಮದ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಿ ಆದೇಶ ಹೊರಡಿಸಲು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಧೋರಣೆ ಬಗ್ಗೆ.

– ಶ್ರೀ ಪುಟ್ಟಣ್ಣ
– ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
– ಶ್ರೀ ಐವನ್ ಡಿ'ಸೋಜಾ
– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಮರಿತಿಬ್ಬೇಗೌಡ
– ಶ್ರೀ ಎನ್.ರವಿಕುಮಾರ್
– ಶ್ರೀ ವಿ.ಎಸ್.ಉಗ್ರಪ್ಪ

**10. ವಿತ್ತೀಯ ಕಾರ್ಯಕಲಾಪ**

**2018–19ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

– ಶ್ರೀ ಆಯನೂರು ಮಂಜುನಾಥ್
– ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು)
– ಡಾ: ತೇಜಸ್ವಿನಿ ಗೌಡ
– ಶ್ರೀ ಕೆ.ಗೋವಿಂದರಾಜ್
– ಶ್ರೀ ಎಸ್.ರವಿ
– ಶ್ರೀ ಬಂಡೆಪ್ಪ ಖಾಶೆಂಪೂರ್ (ಸಹಕಾರ ಸಚಿವರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
– ಶ್ರೀ ಐವನ್ ಡಿ'ಸೋಜಾ
– ಶ್ರೀ ಕೆ.ಬಿ.ಶಾಣಪ್ಪ
– ಶ್ರೀಮತಿ ತಾರಾಅನೂರಾಧ
– ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು)
– ಶ್ರೀ ವಿ.ಎಸ್.ಉಗ್ರಪ್ಪ
– ಶ್ರೀ ರುದ್ರೇಗೌಡ

**11. 2018–19ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸರ್ಕಾರದಿಂದ ಉತ್ತರ**

– ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷ ನಾಯಕರು)

**12. ಪ್ರಕಟಣೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**13. 2018–19ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸರ್ಕಾರದಿಂದ ಮುಂದುವರೆದ ಉತ್ತರ**

- **ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)**
- **ಶ್ರೀ ಎಸ್.ವ್ಹಿ.ಸಂಕನೂರ**
- **ಶ್ರೀ ಅರುಣ ಶಹಾಪುರ**
- **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**
- **ಶ್ರೀ ಕೆ.ಸಿ.ಕೊಂಡಯ್ಯ**
- **ಶ್ರೀ ಮರಿತಿಬ್ಬೇಗೌಡ**

**14. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**15. 2018–19ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸರ್ಕಾರದಿಂದ ಮುಂದುವರೆದ ಉತ್ತರ**

- ಶ್ರೀ ಎಸ್.ಆರ್.ಪಾಟೀಲ್
- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಸಚಿವರು)
- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಅ.ದೇವೇಗೌಡ
- ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
- ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)

**16. ಶಾಸನ ರಚನೆ**

**ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2018–07–19**

**– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)**

**(ವಿಧೇಯಕಕ್ಕೆ ಅನುಮೋದನೆ ದೊರೆಯಿತು)**

**ಆ)ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2018**

**– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)**

**(ವಿಧೇಯಕಕ್ಕೆ ಅನುಮೋದನೆ ದೊರೆಯಿತು)**

**ಇ) ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ)(ತಿದ್ದುಪಡಿ) ವಿಧೇಯಕ,2018**

**– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)**

**(ವಿಧೇಯಕಕ್ಕೆ ಅನುಮೋದನೆ ದೊರೆಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2018**

**– ಶ್ರೀ ಡಿ.ಸಿ.ತಮ್ಮ (ಸಾರಿಗೆ ಸಚಿವರು)**

**(ವಿಧೇಯಕಕ್ಕೆ ಅನುಮೋದನೆ ದೊರೆಯಿತು)**

**17. ವಂದನಾರ್ಪಣೆ**

**– ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು)**

**18. ಸಾರಾಂಶ**

**– ಸಭಾಪತಿಯವರು**

**– – –**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(250)12/07/2018/ಎಸ್‌ಪಿಆರ್/ವಿಕೆ/10:10**

**ಕರ್ನಾಟಕ ವಿಧಾನ ಪರಿಷತ್ತು**

***ಗುರುವಾರ, 12ನೇ ಜುಲೈ 2018***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 10 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಯವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

**1. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 331**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಾನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ (ಇನ್‌ಟೇಕ್) ಮತ್ತು ಶಿಕ್ಷಣದ ಗುಣಮಟ್ಟದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಸರ್ಕಾರವು ಒದಗಿಸಿರುವ ಲಿಖಿತ ಉತ್ತರದಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಕುರಿತಾಗಿ ಯಾವುದೇ ಉತ್ತರವಿಲ್ಲ. ಖಾಸಗಿ ವಿಶ್ವವಿದ್ಯಾಲಯಗಳು ಪ್ರಾರಂಭವಾಗಿವೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನಿಂದ ಅನುಮೋದನೆಯನ್ನು ಪಡೆದುಕೊಂಡು ಪ್ರಾರಂಭಿಸಿರುವ ಬೇರೆ ಬೇರೆ ಕಾಲೇಜುಗಳಲ್ಲಿ ಉದಾಹರಣೆಗೆ ಸಿವಿಲ್, ಮೆಕಾನಿಕಲ್, ಕಂಪ್ಯೂಟರ್ ಸೈನ್ಸ್ ಇತ್ಯಾದಿ ವಿಭಾಗಗಳಲ್ಲಿ 60, 120 ವಿದ್ಯಾರ್ಥಿಗಳ ಪ್ರವೇಶಾತಿ ಇರುತ್ತದೆ. ಆದರೆ ಖಾಸಗಿ ವಿಶ್ವವಿದ್ಯಾಲಯಗಳು ಹಣ ಮಾಡುವ ಉದ್ದೇಶದಿಂದ ಒಟ್ಟಾರೆಯಾಗಿ ವರ್ಷಕ್ಕೆ ಸುಮಾರು 1,000 ದಿಂದ 1,500 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಮಾಡಿಕೊಳ್ಳುತ್ತಾರೆ. ಒಂದೊಂದು ವಿಭಾಗದಲ್ಲಿ ಸುಮಾರು 300 ರಿಂದ 400 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಮಾಡುತ್ತಾರೆ. ಇಂತಹ ಪ್ರಕ್ರಿಯೆಗೆ ಸರ್ಕಾರವು ಯಾವ ರೀತಿಯಾಗಿ ಕಡಿವಾಣವನ್ನು ಹಾಕುತ್ತಿದೆ? ಇದರ ಜೊತೆಗೆ ಮೈತ್ರಿ ವಿಶ್ವವಿದ್ಯಾಲಯ ಹಾಗೂ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯಗಳ ಬಗ್ಗೆ ಯಾವುದೇ ರೀತಿಯಾದ ಪ್ರಸ್ತಾಪ ಮಾಡಿಲ್ಲ. ಸದರಿ ವಿಶ್ವವಿದ್ಯಾಲಯಗಳನ್ನು ಸರ್ಕಾರ ನಿಯಂತ್ರಣ ಮಾಡುತ್ತಿಲ್ಲವೇ? ಸದರಿ ವಿಶ್ವವಿದ್ಯಾಲಯಗಳಿಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಿಂದ ಯಾವುದೇ ರೀತಿಯಾದ ಪರಿವೀಕ್ಷಣೆಯನ್ನು ಹಾಗೂ LIC (Local Inquiry Committee) ಮಾಡುತ್ತಿಲ್ಲವೇ? ಈ ಅಂಶಗಳ ಬಗ್ಗೆ ಸರ್ಕಾರವು ಉತ್ತರವನ್ನು ನೀಡಬೇಕು.

ಮುಂದುವರೆದು, ಮೇಲ್ಕಂಡ ವಿಷಯಕ್ಕೆ ಪ್ರತಿಯೊಂದು ಶಾಸನಬದ್ಧ ಕಾಯ್ದೆಗಳ ಸಂಸ್ಥೆಗಳಡಿಯಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಅನುಮೋದಿಸಿದ ಸಂಸ್ಥೆಗಳ ಪಟ್ಟಿಯನ್ನು ಹಾಗೂ ಸಂಪೂರ್ಣ ಮಾಹಿತಿಯನ್ನು ನೀಡುವಂತೆ ಕೋರಿದ್ದೆನು. ಇದಕ್ಕೆ ಪ್ರತ್ಯುತ್ತರವಾಗಿ ಸರ್ಕಾರವು ತನ್ನ ಲಿಖಿತ ಉತ್ತರದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಅಧಿನಿಯಮಗಳಡಿ ರಾಜ್ಯದಲ್ಲಿ 15 ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಸರ್ಕಾರ ಅನುಮೋದನೆ ನೀಡಿದೆ ಎಂಬುದಾಗಿ ಹಾಗೂ ವಿಶ್ವವಿದ್ಯಾಲಯದ ಹೆಸರುಗಳನ್ನು ತಿಳಿಸಿದೆ. ಆದರೆ, ಕೇವಲ ನಾಲ್ಕು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಮಾತ್ರ ಪರಿವೀಕ್ಷಣೆಯನ್ನು ನಡೆಸಿದ್ದಾರೆ. ಇನ್ನುಳಿದ ವಿಶ್ವವಿದ್ಯಾಲಯಗಳಲ್ಲಿ ಏಕೆ ಪರಿವೀಕ್ಷಣೆಯನ್ನು ನಡೆಸಿಲ್ಲ? 2010 ನೇ ಸಾಲಿನಿಂದ ಖಾಸಗಿ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಸದರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕದಿಂದ ಅವುಗಳ ಮೇಲೇ ಸರ್ಕಾರದ ಹಿಡಿತವಿಲ್ಲವೇ? ಅವುಗಳ ಪರಿವೀಕ್ಷಣೆಯನ್ನು ನಡೆಸುತ್ತಿಲ್ಲವೇ? ಲಿಖಿತ ಉತ್ತರದಲ್ಲಿ ತಿಳಿಸಿರುವಂತೆ, ನಾಲ್ಕು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಈ ವರ್ಷದ ಮಾರ್ಚ್, ಏಪ್ರಿಲ್ ಮತ್ತು ಜೂನ್ ಮಾಹೆಗಳಲ್ಲಿ ಪರಿವೀಕ್ಷಣೆಯನ್ನು ನಡೆಸಿದ್ದರೂ ಸಹ ಇಲ್ಲಿಯವರೆಗೆ ಸರ್ಕಾರಕ್ಕೆ ಇನ್ನೂ ಪರಿವೀಕ್ಷಣಾ ವರದಿಗಳನ್ನು ಏಕೆ ಸಲ್ಲಿಸಿಲ್ಲ? ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರುವುದೇನೆಂದರೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿ ಬರುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ಫಲಿತಾಂಶ ಶೇಕಡಾ 60–65 ರಷ್ಟಿರುತ್ತದೆ. ಶೇಕಡಾ 70–75 ರಷ್ಟು ವಿದ್ಯಾರ್ಥಿಗಳ ಫಲಿತಾಂಶ ಬಂದರೆ ಅದೇ ಹೆಚ್ಚು. ಆದರೆ, ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಶೇಕಡಾ 80–90 ರಷ್ಟು ಹೆಚ್ಚಿನ ಅಂಕಗಳನ್ನು ನೀಡುತ್ತಾರೆ. ಇದರಿಂದಾಗಿ ಬೇರೆ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗುತ್ತಿದೆ. ಈ ವಿಚಾರದಲ್ಲಿ ಸರ್ಕಾರವು ಸಂಪೂರ್ಣವಾಗಿ ಗಮನಹರಿಸಬೇಕು. ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ಮಾಡಿದ ಕೆಲವು ವಿದ್ಯಾರ್ಥಿಗಳು ನಾನು ಎಲ್ಲಾ ವಿದ್ಯಾರ್ಥಿಗಳು ಎಂದು ಹೇಳುವುದಿಲ್ಲ, ಪ್ರತಿಭಾವಂತ ವಿದ್ಯಾರ್ಥಿಗಳಾಗಿರುವುದಿಲ್ಲ. ಬೆಂಗಳೂರಿನ ಆರ್.ವಿ.ಕಾಲೇಜು, ಬಿ.ಎಂ.ಎಸ್. ಕಾಲೇಜುಗಳು ಬಹಳ ಹಿಂದಿನ ಕಾಲದಿಂದಲೂ ಪ್ರಸಿದ್ಧವಾಗಿವೆ.

**ಸಭಾಪತಿಯವರು :–** ಈಗ ಏನು ಮಾಡಬೇಕು ಎಂಬುದರ ಬಗ್ಗೆ ಮಾತ್ರವೇ ಹೇಳಿ.

**(ಮುಂದು)**

(251) 12–07–2018 (10–20) ಬಿಎಸ್‌ಡಿ–ಬಿಎನ್‌ಎಸ್

**ಶ್ರೀ ಎನ್. ಅಪ್ಪಾಜಿಗೌಡ (ಮುಂದು)**

ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಒಂದೊಂದು branch ನಲ್ಲಿ ಅವರ ಇಷ್ಟ ಬಂದ ಹಾಗೆ A.I.C.T.E. (All India Council for Technical Education) ಅನುಮತಿಯಿಲ್ಲದೇ ಸುಮಾರು 300–400 ವಿದ್ಯಾರ್ಥಿಗಳನ್ನು intake ಮಾಡಿಕೊಂಡು ಅಡ್ಮಿಷನ್ ಮಾಡಿಕೊಳ್ಳುತ್ತಾರೆ. ಆಗ ಬೇರೆ ಕಾಲೇಜುಗಳಲ್ಲಿ ಅಡ್ಮಿಷನ್ ಇರುವುದಿಲ್ಲ. ಇದರ ಬಗ್ಗೆ ಸರ್ಕಾರ ಕಡಿವಾಣ ಹಾಕಬೇಕು. ಜೊತೆಗೆ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ Ph.D., ಪದವಿ ನೀಡುವಾಗ ದುರುಪಯೋಗ ಆಗುತ್ತಿದೆ. ನಾನು ಕೇಳಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡಿರುವುದಿಲ್ಲ. ಈ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

intake ಮತ್ತು ಗುಣಮಟ್ಟದ ಬಗ್ಗೆ ಸಂಪೂರ್ಣವಾಗಿ ತನಿಖೆ ಆಗಬೇಕು. A.I.C.T.E. ಅನುಮತಿ ಇಲ್ಲದೇ intake ತೆಗೆದುಕೊಂಡಿರುವ ಬಗ್ಗೆ ತನಿಖೆ ಆಗಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಜಿ.ಟಿ. ದೇವೇಗೌಡ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ (ಇನ್‌ಟೇಕ್) ಮತ್ತು ಶಿಕ್ಷಣದ ಗುಣಮಟ್ಟವನ್ನು ಶಾಸನಬದ್ಧ ಕಾಯ್ದೆ ಸಂಸ್ಥೆಗಳ ಅಡಿಯಲ್ಲಿ ಮೇಲ್ವಿಚಾರಣೆ ಮಾಡುವುದೇ ಎಂಬ ಪ್ರಶ್ನೆಯನ್ನು ಕೇಳಿದ್ದು, ಕರ್ನಾಟಕ ರಾಜ್ಯದಲ್ಲಿ ಬರುವ 13 ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳುವ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಪರಿಷತ್‌ನಿಂದ ಕಾಲಕಾಲಕ್ಕೆ ಪರಿವೀಕ್ಷಣೆ ಮಾಡುವ ಕ್ರಮವನ್ನು 2018ರಲ್ಲಿ ಕೈಗೊಂಡಿದ್ದಾರೆ. ಸಂಪೂರ್ಣವಾದ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿದ್ದೇನೆ. ಅದೇರೀತಿ ಪಿ.ಇ.ಎಸ್. ವಿಶ್ವವಿದ್ಯಾಲಯವನ್ನು ದಿನಾಂಕ 13/03/2018ರಂದು, ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ ವಿಶ್ವವಿದ್ಯಾಲಯವನ್ನು ದಿನಾಂಕ 19/03/2018ರಂದು, ರೇವಾ ವಿಶ್ವವಿದ್ಯಾಲಯವನ್ನು ದಿನಾಂಕ 25/04/2018ರಂದು ಹಾಗೂ ದಯಾನಂದ ಸಾಗರ್ ವಿಶ್ವವಿದ್ಯಾಲಯವನ್ನು ದಿನಾಂಕ 19/04/2018ರಂದು ಪರಿವೀಕ್ಷಣೆ ನಡೆಸಲಾಗಿದೆ. ಪರಿವೀಕ್ಷಣೆಯ ವರದಿಯು ಇನ್ನೂ ಬಂದಿರುವುದಿಲ್ಲ. ವರದಿಯನ್ನು ಪಡೆದು, ಎಲ್ಲಾ ಕಡೆ ಪರಿವೀಕ್ಷಣೆ ಮಾಡಲು ಒಂದು ಸಭೆ ಕರೆದು ತುರ್ತು ಆದೇಶ ಮಾಡಿ, ಪರಿವೀಕ್ಷಣೆ ಮಾಡುವ ಕೆಲಸವನ್ನು ನಾನು ಮಾಡುತ್ತೇನೆ. ಕಾನೂನುಬಾಹಿರವಾಗಿ ಹೆಚ್ಚು ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ಪರಿಶೀಲನೆ ಮಾಡಿ ಮಾನ್ಯ ಸದಸ್ಯರಿಗೆ ಮುಂದಿನ ದಿನಗಳಲ್ಲಿ ಮಾಹಿತಿ ಒದಗಿಸುತ್ತೇನೆ.

**ಶ್ರೀ ಎಸ್. ರುದ್ರೇಗೌಡ:- (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರ ಇನ್ನೊಂದು ದುಷ್ಪರಿಣಾಮ ಎಂದರೆ ಲೋಕಸೇವಾ ಆಯೋಗದಿಂದ ನೇಮಕವಾಗುವ ಅಭ್ಯರ್ಥಿಗಳು ಅಂಕಗಳ ಆಧಾರದ ಮೇಲೆ ಆಯ್ಕೆಯಾಗುತ್ತಿದ್ದು, ಈ ರೀತಿಯ ಒಂದು ಅಥವಾ ಎರಡು ವಿಶ್ವವಿದ್ಯಾಲಯಗಳಿಂದ ಬಂದವರು ಮಾತ್ರ ಕೆಲಸ ಪಡೆದುಕೊಳ್ಳುತ್ತಿದ್ದಾರೆ. ಉಳಿದಂತಹ ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ಉನ್ನತ ಶಿಕ್ಷಣ ಪರಿಷತ್ ಕಠಿಣ ನಿಯಮಗಳನ್ನು ಹಾಕಬೇಕೆಂಬುದು ನನ್ನ ಮನವಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ಅಪ್ಪಾಜಿಗೌಡ :-** ಮಾನ್ಯ ಸಭಾಪತಿಯವರೇ, ನಾನು intake ಬಗ್ಗೆ ಕೇಳಿದ್ದು, ಅದರ ಬಗ್ಗೆ ಸರ್ಕಾರ ಮಾಹಿತಿ ಒದಗಿಸಿಲ್ಲ. ಮಾನ್ಯ ಸಚಿವರು ಉತ್ತರ ನೀಡುವಾಗಲೂ ಯಾವ ಯಾವ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಯಾವ್ಯಾವ branch ಗಳಲ್ಲಿ ಎಷ್ಟೆಷ್ಟು intake ಇದೆ ಎಂಬ ಮಾಹಿತಿ ಇಲ್ಲ. ಅಧಿಕಾರಿಗಳು ಮಾನ್ಯ ಸಚಿವರಿಗೆ ಸರಿಯಾದ ಮಾಹಿತಿ ನೀಡದೇ ಮುಚ್ಚಿಡುವ ಹುನ್ನಾರ ನಡೆಸುತ್ತಿದೆ ಎಂಬುದು ನನ್ನ ಭಾವನೆ.

**ಸಭಾಪತಿಯವರು:-** Short ಆಗಿ ಪ್ರಶ್ನೆ ಕೇಳಿ, ಸಚಿವರು ಉತ್ತರ ಹೇಳುತ್ತಾರೆ.

**ಶ್ರೀ ಎನ್. ಅಪ್ಪಾಜಿಗೌಡ :-** ಮಾನ್ಯ ಸಭಾಪತಿಯವರೇ, ಯಾವ್ಯಾವ ಕಡೆಗಳಲ್ಲಿ ಎಷ್ಟೆಷ್ಟು ಸೀಟುಗಳಿವೆ ಎಂಬ ಮಾಹಿತಿ ಉತ್ತರದಲ್ಲಿ ಇಲ್ಲ.

**ಸಭಾಪತಿಯವರು:-** ಅವರು ಹೇಳುವುದು ನಿಜ ಇದೆ, ಎಲ್ಲೆಲ್ಲಿ ಎಷ್ಟೆಷ್ಟು intake ಇದೆ ಎಂಬ ಬಗ್ಗೆ ಮಾನ್ಯ ಸದಸ್ಯರಿಗೆ ಮಾಹಿತಿ ಕೊಡಿ.

**ಶ್ರೀ ಜಿ.ಟಿ. ದೇವೇಗೌಡ:-** Inspection ಗೆ ಹಾಕಿಕೊಂಡು enquiry ಮಾಡಿರುವ ವರದಿ ಇನ್ನೂ ಬಂದಿಲ್ಲ. ಅದರ ಮಾಹಿತಿ ಸಿಗುತ್ತದೆ. ಅದರ ಪೂರ್ಣ ಮಾಹಿತಿಗಳು ಮಾನ್ಯ ಸದಸ್ಯರಿಗೆ ಸಿಗುತ್ತದೆ.

**ಶ್ರೀ ಎನ್. ಅಪ್ಪಾಜಿಗೌಡ:-** 2010ರಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ಪ್ರಾರಂಭವಾಗಿವೆ. 15 private college ಗಳಿಗೆ ಅನುಮತಿ ಕೊಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಹೇಳುವ ಪ್ರತಿಯೊಂದರಲ್ಲಿಯೂ ಮಹತ್ವದ ಅಂಶವಿದೆ. ಇದೆಲ್ಲವೂ ನಡೆಯುತ್ತಿದೆ. ಸರ್ಕಾರಿ ಕಾಲೇಜುಗಳಂತೆ ಇಲ್ಲ, private University ಯವರು ಏನು ಬೇಕಾದರೂ ಲೂಟಿ ಮಾಡುತ್ತಾರೆ ಎನ್ನುವ ಮಾತನ್ನು ಹೇಳುತ್ತಾರೆ. ಆದ್ದರಿಂದ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಮಾನ್ಯ ಸದಸ್ಯರಿಗೆ ಮಾಹಿತಿ ಒದಗಿಸಬೇಕು. ಇವತ್ತು 15 ಸದಸ್ಯರ ಪ್ರಶ್ನೆಗಳಿದ್ದು, ಕೊನೆಯ ಪ್ರಶ್ನೆಗಳಿಗೆ ಮಾತನಾಡಲು ಅವಕಾಶ ಇಲ್ಲ ಎಂದರೆ ದಯವಿಟ್ಟು ಮಾನ್ಯ ಸದಸ್ಯರು ನನ್ನ ಮೇಲೆ ಬೇಜಾರು ಮಾಡಿಕೊಳ್ಳಬಾರದು. Short ಆಗಿ ಮುಗಿಸಿದರೆ ಆಗುತ್ತದೆ. ಇಲ್ಲದಿದ್ದರೆ ಬೇರೆಯವರಿಗೆ ಮಾತನಾಡಲು ಅವಕಾಶ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ಅಪ್ಪಾಜಿಗೌಡ :-** ಮಾನ್ಯ ಸಭಾಪತಿಯವರೇ, ಇದು ಮಹತ್ವದ ವಿಷಯವಾಗಿದ್ದು, ಖಾಸಗಿ ವಿಶ್ವವಿದ್ಯಾಲಯಗಳಿಗೆ ಕಡಿವಾಣ ಹಾಕದಿದ್ದರೆ ಮುಂದಿನ ದಿನಗಳಲ್ಲಿ ಕಷ್ಟವಾಗುತ್ತದೆ.

**ಸಭಾಪತಿಯವರು :-** ಮಾನ್ಯ ಸಚಿವರೇ, ತಾವು ಹೇಳಿದ್ದನ್ನೇ ಹೇಳುತ್ತಿದ್ದೀರಿ. ಅವರಿಗೆ clear-cut ಆಗಿ ಉತ್ತರ ಹೇಳಿ.

**ಶ್ರೀ ಜಿ.ಟಿ. ದೇವೇಗೌಡ:-** ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾಲ್ಕು ವಿಶ್ವವಿದ್ಯಾಲಯಗಳ enquiry report ಇನ್ನೂ ಬಂದಿಲ್ಲ. ಅಂಕಿ ಅಂಶಗಳನ್ನು ತರಿಸುತ್ತೇನೆ. ತಪ್ಪಿದ್ದರೆ ಕಾನೂನು ರೀತ್ಯಾ....

**ಸಭಾಪತಿಯವರು :-** ಯಾವಾಗ ತರಿಸುತ್ತೀರಿ?

**ಶ್ರೀ ಜಿ.ಟಿ. ದೇವೇಗೌಡ:-** ನಾನು first week ನಲ್ಲಿ ಎಲ್ಲಾ ಮಾಹಿತಿ ತರಿಸಿ ಕೊಡುತ್ತೇನೆ.

**ಸಭಾಪತಿಯವರು :-** ಮಾನ್ಯ ಸಚಿವರೇ, ಈ ವಿಷಯವು ನೀವು ತಿಳಿದುಕೊಂಡಷ್ಟು ಸರಳ ಇಲ್ಲ. ಇದರ ಬಗ್ಗೆ ವಿಚಾರ ಮಾಡಿ.

**ಶ್ರೀ ಜಿ.ಟಿ. ದೇವೇಗೌಡ:-** ಹೌದು ಸಭಾಪತಿಯವರೇ, ಕಠಿಣವಾಗಿದೆ, ನಾನು ವಿಚಾರ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ: 325

ಉತ್ತರದ ಪ್ರತಿ ಲಗತ್ತಿಸಿದೆ

**ಶ್ರೀ ಆರ್. ಧರ್ಮಸೇನ :-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದು, ರಾಜ್ಯದ 5588 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 10258 ಕೊಠಡಿಗಳು ಹಾಗೂ 264 ಸರ್ಕಾರಿ ಪ್ರೌಢ ಶಾಲೆಗಳಲ್ಲಿ 949 ಕೊಠಡಿಗಳು ಶಿಥಿಲಗೊಂಡಿವೆ ಎಂದು ಹೇಳಿದ್ದಾರೆ. ಆದರೆ ಇವರು 2017-18ರಲ್ಲಿ ಪ್ರಾಥಮಿಕ ಶಾಲೆಗಳಿಗೆ ರೂ.6,604.95 ಲಕ್ಷ ಮತ್ತು ಪ್ರೌಢ ಶಾಲೆಗಳಿಗೆ ರೂ.4,132.80 ಲಕ್ಷಗಳನ್ನು ಬಿಡುಗಡೆ ಮಾಡಿದ್ದಾರೆ. ಅಂದರೆ ರೂ.4 ಮತ್ತು ರೂ. 6 ಕೋಟಿಗಳಾಯಿತು. ಇದರ ಲೆಕ್ಕ ನನಗೆ ಬರುತ್ತಿರಲಿಲ್ಲ. ಈಗ ಮಾನ್ಯ ಸಂಕನೂರ ರವರ ಬಳಿ ಲೆಕ್ಕ ಮಾಡಿಸಿಕೊಂಡು ಬಂದೆನು. ಒಂದು ಕೊಠಡಿಗೆ ರೂ.7 ಲಕ್ಷ ಕೊಟ್ಟರೆ ಸುಮಾರು ರೂ.770 ಕೋಟಿಗಳಷ್ಟು ಬೇಕಾಗುತ್ತದೆ. ರೂ.5 ಲಕ್ಷ ಕೊಟ್ಟರೆ ಸುಮಾರು ರೂ.550

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿಗಳು ಬೇಕಾಗುತ್ತದೆ. ಆದರೆ ಇವರು ಕೊಡುತ್ತಿರುವ ಹಣದಲ್ಲಿ 100 ಕೊಠಡಿಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸುಮಾರು 11000 ಕೊಠಡಿಗಳು ಬೇಕಾಗಿದ್ದು, ಒಂದು ವರ್ಷಕ್ಕೆ 100 ಕೊಠಡಿಗಳನ್ನು ಕಟ್ಟದಿದ್ದರೆ 11000 ಕೊಠಡಿಗಳನ್ನು ಯಾವಾಗ ಕಟ್ಟುತ್ತಾರೆ? 100 ವರ್ಷ ಕಳೆದರೂ ಆ ಗುರಿಯನ್ನು ತಲುಪುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಮಾನ್ಯ ಸಚಿವರು ಈ ವಿಚಾರದಲ್ಲಿ ನಮ್ಮೆಲ್ಲರಿಗಿಂತ ಬಹಳ ಕಾಳಜಿ ಹೊಂದಿದ್ದು, ಅವರು ಮಂತ್ರಿಗಳಾಗುವುದಕ್ಕೆ ಮುಂಚೆಯೇ ಶಿಕ್ಷಣ ಇಲಾಖೆಯ ಸಚಿವರಾಗಬೇಕೆಂದು ಬಯಸಿದ್ದವರಾಗಿದ್ದಾರೆ. ಅವರು ಏನು ಮಾಡುತ್ತಾರೋ ನನಗೆ ಗೊತ್ತಿಲ್ಲ, ಮಾನ್ಯ ಸಭಾಪತಿಯವರೇ, Teachers' Constituency and Graduates' Constituency ನವರು ಮೇಷ್ಟ್ರುಗಳ ಬಗ್ಗೆ ಮಾತ್ರ ನೋಡಿಕೊಳ್ಳುತ್ತಾರೆ. ಆದರೆ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಹತ್ತಿರ ಕೊಠಡಿಗಳ ಬಗ್ಗೆ ಕೇಳುತ್ತಾರೆ. ಆದ್ದರಿಂದ ಇದಕ್ಕೆ ಏನಾದರೊಂದು ರೂಪುರೇಷೆ ಮಾಡಬೇಕು. ಈಗಾಗಲೇ ಸಾವಿರಾರು ಸರ್ಕಾರಿ ಶಾಲೆಗಳು ಮುಚ್ಚಿವೆ. ಮಂಗಳೂರಿನಲ್ಲಿ ಒಂದು ಮಾದರಿ ಶಾಲೆ ಮಾಡಿ...

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಕೊಠಡಿ ಕಟ್ಟಿಸಿಕೊಡುವುದು ಸ್ಥಳೀಯ ಸಂಸ್ಥೆಗಳಿಂದ ಬಂದಿರುವ ಪ್ರತಿನಿಧಿಗಳ ಜವಾಬ್ದಾರಿಯಾಗಿದೆ.

**ಶ್ರೀ ಆರ್. ಧರ್ಮಸೇನ:–** ಅದೇ ಪರಿಸ್ಥಿತಿಯಾಗಿದೆ. ಸಂಬಳ ಕೊಡಿಸುವುದು ಶಿಕ್ಷಕರ ಕ್ಷೇತ್ರದಿಂದ ಬಂದವರ ಜವಾಬ್ದಾರಿಯಾಗಿದೆ. ದಯಮಾಡಿ ಇದಕ್ಕೆ ಪ್ರಶ್ನೆಗೊಂದು ಉತ್ತರ ಎಂದು ನೀಡಬಾರದು. ಏಕೆಂದರೆ ದೇಶದ ಭವಿಷ್ಯದ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಶಾಲಾ ಕೊಠಡಿಗಳ ಬಗ್ಗೆ ಮಾನ್ಯ ಸಚಿವರು ಬಹಳ ಎಚ್ಚರಿಕೆಯಿಂದ ಉತ್ತರ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎನ್. ಮಹೇಶ್:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಭಿಪ್ರಾಯ ಪಟ್ಟಿರುವುದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾನು ಸದನಕ್ಕೆ ಒಂದು ಮಾಹಿತಿ ಕೊಡುವುದಾದರೆ ಪ್ರಾಥಮಿಕ ಶಾಲೆಗಳಲ್ಲಿ ಶಿಥಿಲವಾದ ಕೊಠಡಿಗಳನ್ನು ಕಟ್ಟಲು ರೂ.1,087 ಕೋಟಿಗಳು ಬೇಕಾಗುತ್ತದೆ. 2017–18ರಲ್ಲಿ ಲಭ್ಯವಿದ್ದ ಅನುದಾನದ ಆಧಾರದ ಮೇಲೆ ಹಾಗೂ ಆದ್ಯತೆ ಮೇಲೆ ಕೊಟ್ಟಿದ್ದೇನೆ. ಆದರೆ ನಿಜವಾಗಿ ನಮಗೆ ರೂ.1,087 ಕೋಟಿಗಳಷ್ಟು ಪ್ರಾಥಮಿಕ ಶಾಲೆಗಳಿಗೆ ಬೇಕಾಗಿದ್ದು, ಪ್ರೌಢ ಶಾಲೆಗಳಿಗೆ ರೂ.1,494 ಕೋಟಿಗಳು ಬೇಕಾಗಿದೆ. ಇಷ್ಟು ಹಣಕಾಸಿನ ಅವಶ್ಯಕತೆ ಇದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

252/12.07.2018/10.30/ಹೆಚ್‌ವಿಃಬಿಎನ್‌ಎಸ್

**ಶ್ರೀ ಎನ್..ಮಹೇಶ್‌ಃ- (ಮುಂದುವರೆದದ್ದು)ಃ-**

ಸನ್ಮಾನ್ಯ ಸಭಾಪತಿಯವರೇ, ಈ ಮೊತ್ತದ ಹಣಕಾಸಿನ ಅವಶ್ಯಕತೆ ಇದೆ. ಪ್ರತಿ ವರ್ಷದ ಆಯವ್ಯಯದಲ್ಲಿ ನಮ್ಮ ಇಲಾಖೆಗೆ ಎಷ್ಟು ಅನುದಾನದ ಲಭ್ಯತೆ ಇದೆ ಎನ್ನುವುದರ ಆಧಾರದ ಮೇಲೆ ಆದ್ಯತೆಯ ಮೇಲೆ ತೆಗೆದುಕೊಂಡಿರುವ ಕೊಠಡಿಗಳ ದುರಸ್ತಿ ಕಾಮಗಾರಿಯ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನೀಡಿದ್ದೇನೆ. ಇಡೀ ಸದನದ ಗಮನಕ್ಕೆ ಕೆಲವೊಂದು ವಿಚಾರಗಳನ್ನು ತರುವುದಕ್ಕೆ ಬಯಸುತ್ತಿದ್ದೇನೆ. ಕಳೆದ ವರ್ಷದಲ್ಲಿ MLALADS (Member of Legislative Assembly Local Area Development Scheme) ನ saved amount ಸುಮಾರು 243 ಕೋಟಿ ರೂಪಾಯಿಗಳನ್ನು ಕಟ್ಟಡಗಳ ರಿಪೇರಿ ಕೆಲಸಕ್ಕಾಗಿ ಸರ್ಕಾರ ನಮಗೆ ನೀಡಿದೆ. ಈಗ ಲಭ್ಯವಿರುವ ಅನುದಾನದಲ್ಲಿ ಸುಮಾರು 1,338 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು ಸುಮಾರು 1,777 ಪ್ರೌಢಶಾಲೆಗಳ ಕಟ್ಟಡ ರಿಪೇರಿ ಮಾಡುವುದಕ್ಕೆ ಸಾಧ್ಯವಿದೆ. ಈ ಬಾರಿಯೂ ಎಲ್ಲ ಮಾನ್ಯ ಸದಸ್ಯರುಗಳು ದಯಮಾಡಿ ಸಹಾಯ ಮಾಡಿದರೆ, ಇದರ ಎರಡರಷ್ಟು ಕಟ್ಟಡಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ತಾವು ದಯಮಾಡಿ ಈ ಬಗ್ಗೆ ಗಮನಹರಿಸಿ, ಈ ಹಣಕಾಸಿನ ಲಭ್ಯತೆ ದೊರೆಯುವಂತೆ ಮಾಡಿದರೆ, ಈ ಕೆಲಸವನ್ನು ದ್ವಿಗುಣ ಪ್ರಮಾಣದಲ್ಲಿ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ಶರಣಪ್ಪ ಮಟ್ಟೂರಃ-** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹೇಳಿದಂತೆ ಶಾಲಾ ಕಟ್ಟಡಗಳ ದುರಸ್ತಿ ಕಾಮಗಾರಿಗಾಗಿ ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಧಾನ ಸಭೆಯ ಸದಸ್ಯರು ಧಾರಾಳವಾಗಿ ಹಣವನ್ನು ಕೊಡುವುದಕ್ಕೆ ಮುಂದಾಗುತ್ತಾರೆ. ಆದರೆ, ಈ ಇಲಾಖೆಯಲ್ಲಿರುವ ಪರಿಸ್ಥಿತಿಯನ್ನು ನೋಡಿದರೆ, ನಾವು ಅನುದಾನವನ್ನು ಕೊಟ್ಟು ಸುಮಾರು 3 ವರ್ಷಗಳಾದರೂ ಸಹ ಆ ಹಣದ ಸದ್ಬಳಕೆಯಾಗುತ್ತಿಲ್ಲ. The Minister can ask any Deputy Commissioner concerned all over the State and he will get the information. ಬೀದರ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿರುವ ಶಾಲಾ ಕಟ್ಟಡಗಳ ದುರಸ್ತಿಗಾಗಿ ಕಳೆದ ಮೂರು ವರ್ಷಗಳ ಹಿಂದೆ ನಾನು ನೀಡಿರುವ ಹಣವನ್ನು ಬಳಸಿಕೊಂಡು ಕೆಲಸವನ್ನು ಮಾಡಿಲ್ಲ. ಹೀಗೆ ಯಾವ ಜಿಲ್ಲೆಯ ಉದಾಹರಣೆಯನ್ನು ಬೇಕಾದರೂ ನಾನು ಕೊಡುವುದಕ್ಕೆ ತಯಾರಿದ್ದೇನೆ. ಸರ್ಕಾರ ಜವಾಬ್ದಾರಿಯನ್ನು ನಿಗದಿಗೊಳಿಸಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

M.L.A.s and M.L.C.s LADS ನಲ್ಲಿ ಕೊಡುವಂತಹ ಹಣವನ್ನು ಬಳಸಿಕೊಂಡು ಕೂಡಲೇ ಎರಡು ಮೂರು ತಿಂಗಳೊಳಗೆ ಕಾಮಗಾರಿಯನ್ನು ಅನುಷ್ಠಾನಗೊಳಿಸುವಂತೆ ಮಾನ್ಯ ಸಚಿವರು ಸೂಚನೆಯನ್ನು ನೀಡಬೇಕೆನ್ನುವುದು ನನ್ನ ಸಲಹೆಯಾಗಿದೆ.

**ಸಭಾಪತಿಯವರುಃ–** ಈ ವಿಚಾರ ಮಾನ್ಯ ಸಚಿವರ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ನಾನು ಮತ್ತೊಮ್ಮೆ ಮಾನ್ಯ ಯೋಜನಾ ಸಚಿವರು ಮತ್ತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಕರೆದು ಒಂದು ಸಭೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು.

**ಶ್ರೀ ಆರ್.ಧರ್ಮಸೇನಃ–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಎಷ್ಟು ಅನುದಾನವನ್ನು ನೀಡುತ್ತದೆ ಅದರ ಆಧಾರದ ಮೇಲೆ ಶಾಲಾ ಕಟ್ಟಡಗಳ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಸರ್ಕಾರ ಅನುದಾನವನ್ನು ನೀಡುತ್ತದೆಯೋ ಬಿಡುತ್ತದೆಯೋ ನನಗೆ ಗೊತ್ತಿಲ್ಲ. ಶಾಲಾ ಕೊಠಡಿಗಳನ್ನು ಎಷ್ಟು ದಿನಗಳೊಳಗಾಗಿ ನಿರ್ಮಿಸಿ ಕೊಡುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಸಭಾಪತಿಯವರುಃ–** ಎಲ್ಲಿ ಕಟ್ಟಿಸಿಕೊಡುತ್ತಾರೋ! ಮಾನ್ಯ ಸಚಿವರೇ, ಮಾನ್ಯ ಧರ್ಮಸೇನರವರು ಉಲ್ಲೇಖ ಮಾಡಿರುವ ಶಾಲೆಗಳ ಬಗ್ಗೆ ಹೇಳಿ.

**ಶ್ರೀ ಎನ್..ಮಹೇಶ್ಃ–** ಸನ್ಮಾನ್ಯ ಸಭಾಪತಿಯವರೇ, ಆದ್ಯತೆಯ ಮೇರೆಗೆ ಎಲ್ಲೆಲ್ಲಿ dilapidated condition ನಲ್ಲಿರುವ ಕೊಠಡಿಗಳಿವೆ ಅವುಗಳನ್ನು ತಕ್ಷಣ ಕೈಗೆತ್ತಿಕೊಂಡು ರಿಪೇರಿ ಮಾಡಲಾಗುತ್ತದೆ.

**ಶ್ರೀ ಆರ್.ಧರ್ಮಸೇನಃ–** ಸನ್ಮಾನ್ಯ ಸಭಾಪತಿಯವರೇ, 11 ಸಾವಿರ ಕೊಠಡಿಗಳ ನಿರ್ಮಾಣ ಕಾರ್ಯಕ್ಕಾಗಿ 1 ವರ್ಷ, 2 ವರ್ಷ ಅಥವಾ 6 ವರ್ಷ ಹೀಗೆ ಒಂದು ಟಾರ್ಗೆಟ್ ಇಟ್ಟುಕೊಳ್ಳಬೇಕಾಗುತ್ತದೆ.

**ಸಭಾಪತಿಯವರುಃ–** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆಃ48(216)ನ್ನು ಕೇಳಿರುವ ಮಾನ್ಯ ಸದಸ್ಯರಾದ ಶ್ರೀಕ ಕೆ.ಪಿ. ನಂಜುಂಡಿಯವರು ಸದನಕ್ಕೆ ಗೈರು ಹಾಜರಾಗಿದ್ದಾರೆ.

ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ಕೇಳಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 46(319) ಕ್ಕೆ ಸರ್ಕಾರ ಕಾಲಾವಕಾಶವನ್ನು ಕೇಳಿದೆ.

**ಶ್ರೀ ಪಿ.ಆರ್.ರಮೇಶ್ಃ–** ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ನನ್ನ ಹಕ್ಕಿಗೆ ಸಂಪೂರ್ಣ ಚ್ಯುತಿಯುಂಟಾಗುತ್ತಿದೆ. ನಾನು ಕೇಳಿರುವ ಎಲ್ಲ ಪ್ರಶ್ನೆಗಳ ಸ್ಥಿತಿ ಈ ರೀತಿ ಆದರೆ, ನಾನು ಏತಕ್ಕಾಗಿ ಈ ಸದನಕ್ಕೆ ಬರಬೇಕು? ನನ್ನ ಹಕ್ಕನ್ನು ಚಲಾವಣೆ ಮಾಡುವುದಕ್ಕೆ ಬಿಡದೆ, ಒಂದಲ್ಲ ಒಂದು ರೀತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಸಂಪೂರ್ಣವಾಗಿ ನನ್ನ ಹಕ್ಕನ್ನು ಕಿತ್ತುಕೊಳ್ಳುತ್ತಿದೆ. ಪ್ರತಿ ನಾಗರಿಕ ತನ್ನ ಮಕ್ಕಳನ್ನು ಓದಿಸುವುದಕ್ಕಾಗಿ ಕಷ್ಟಪಡುತ್ತಿರುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ.

**ಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ಸರ್ಕಾರದಿಂದ ಉತ್ತರ ಬಂದಿದ್ದರೆ ಅದನ್ನು ಕೊಡಿಸುವುದಷ್ಟೇ ನನ್ನ ಕೆಲಸವಾಗಿದೆ.

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮನ್ನು ದೂಷಿಸುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ಆದಷ್ಟು ಬೇಗ ಅವರ ಪ್ರಶ್ನೆಗಳಿಗೆ ಉತ್ತರವನ್ನು ಕೊಡಿ. ಈ ಬಾರಿ ತಡವಾಗಿ ಪ್ರಶ್ನೆಗಳು ಇಲಾಖೆಗಳಿಗೆ ಹೋಗಿರುವುದರಿಂದ ಈ ರೀತಿ ಆಗಿದೆ. ಮುಂದಿನಬಾರಿ ಈ ರೀತಿ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದಾಗಿದೆ.

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಮುಂದಿನ ಬಾರಿ ನಾನು ಈ ಪ್ರಶ್ನೆಗಳನ್ನೇ ಪುನರಾವರ್ತನೆ ಮಾಡಬೇಕಾಗುತ್ತದೆ.

**ಸಭಾಪತಿಯವರು:–** ಮುಂದಿನ ಬಾರಿ ನಾನೇ ತಮಗೆ ಅವಕಾಶವನ್ನು ನೀಡುತ್ತೇನೆ. ಪ್ರಶ್ನೆ ಹಾಕಿ. ಈಗ ಮುಂದಿನ ಪ್ರಶ್ನೆ ಶ್ರೀಮತಿ ತಾರಾಅನೂರಾಧರವರದ್ದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 276**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ತಾರಾಅನೂರಾಧ:–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಾಲಾ ಕಾಲೇಜುಗಳ ಶಿಕ್ಷಕರ/ಉಪನ್ಯಾಸಕರ ವರ್ಗಾವಣೆಯ ಕಾರ್ಯವು ಪ್ರಸ್ತುತ ಯಾವ ಹಂತದಲ್ಲಿದೆ' ಎನ್ನುವ ನನ್ನ ಪ್ರಶ್ನೆಗೆ as usually, 'ರಾಜ್ಯ ಉಚ್ಚ ನ್ಯಾಯಾಲಯದಿಂದ ಕೆಲವು ಪ್ರಕರಣಗಳಲ್ಲಿ ತಡೆಯಾಜ್ಞೆ ಬಂದಿದ್ದು, ತಡೆಯಾಜ್ಞೆಯನ್ನು ತೆರವುಗೊಳಿಸಲು ಇಲಾಖೆಯಿಂದ ಅಗತ್ಯ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಇಡೀ ರಾಜ್ಯದ ಶಿಕ್ಷಕರು ಜಾತಕ ಪಕ್ಷಿಯಂತೆ ಇವತ್ತು ನಾಳೆಯಲ್ಲಿ ವರ್ಗಾವಣೆಯಾಗಬಹುದು ಎಂದು ಕಾಯುತ್ತಿದ್ದಾರೆ. ಗಂಡ ಮೈಸೂರಿನಲ್ಲಿದ್ದರೆ, ಹೆಂಡತಿ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿರುತ್ತಾಳೆ. ಮಕ್ಕಳು ಮತ್ತೆಲ್ಲೋ ಇರುತ್ತಾರೆ. ಇವತ್ತು ನಾಳೆಯಲ್ಲಿ ವರ್ಗಾವಣೆ ಸಿಗಬಹುದೆಂದು ಇವತ್ತಿಗೂ ಕಾಯುತ್ತಲೇ ಇದ್ದಾರೆ, ಎರಡು ವರ್ಷಗಳಾದರೂ ವರ್ಗಾವಣೆಗೆ ಅವಕಾಶವನ್ನು ನೀಡದೆ ಇದ್ದರೆ ಅವರು ವೈಯಕ್ತಿಕ ಜೀವನವನ್ನು ಯಾವ ರೀತಿ ನಡೆಸುತ್ತಾರೆ? ಪತಿಪತ್ನಿ ಇಬ್ಬರೂ ದುಡಿಯದಿದ್ದರೆ ಬದುಕು ಸಾಗುವುದೇ ಇಲ್ಲ. ಶಿಕ್ಷಕರ ವರ್ಗಾವಣೆ ಮಾಡುವುದಕ್ಕೆ ಇಲಾಖೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಚ್ಛಾಶಕ್ತಿ ಇಲ್ಲವೋ ಅಥವಾ ಮಾನ್ಯ ಸಚಿವರಿಗೆ ಮನಸ್ಸಿಲ್ಲವೇ? ಸರ್ಕಾರ ನೀಡಿರುವ ಉತ್ತರದ ಪ್ರಕಾರ ಕೋರ್ಟ್‌ನಲ್ಲಿರುವ ತಡೆಯಾಜ್ಞೆಯನ್ನು ತೆರವುಗೊಳಿಸಬೇಕು. ನಂತರ ಅದಕ್ಕೆ ತಿದ್ದುಪಡಿಯನ್ನು ತರಬೇಕು, ನಂತರ ಘನತೆವೆತ್ತ ರಾಜ್ಯಪಾಲರು ಅದಕ್ಕೆ ಅಂಕಿತವನ್ನು ಹಾಕಬೇಕು ನಂತರ ನಿಯಮಾವಳಿಗಳನ್ನು ರೂಪಿಸಿ ಜಾರಿಗೊಳಿಸಬೇಕಾಗಿದೆ. ಸಿನಿಮಾ ಮಾತಿನಲ್ಲಿ ಹೇಳುವುದಾದರೆ, ನೂತನ ಸಚಿವರ get up ಅನ್ನು ನೋಡಿದರೆ ಪ್ರಾಮಾಣಿಕರಾಗಿ ಕಾಣುತ್ತಾರೆ. ಅದೇ ರೀತಿ ಅವರಿಂದ ಪ್ರಾಮಾಣಿಕ ಉತ್ತರವನ್ನು ಬಯಸುತ್ತಿದ್ದೇನೆ. ನಾನು ಇಡೀ ರಾಜ್ಯದ ಶಿಕ್ಷಕರ ಮತ್ತು ಸದನದಲ್ಲಿರುವ ಶಿಕ್ಷಕರ ಪ್ರತಿನಿಧಿಯಾಗಿ, ಈ ಶೈಕ್ಷಣಿಕ ವರ್ಷದಲ್ಲಾದರೂ ವರ್ಗಾವಣೆ ಆಗುತ್ತದೆಯೇ ಇಲ್ಲವೇ ಎನ್ನುವುದನ್ನು ಅವರು ಪ್ರಾಮಾಣಿಕವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಅರುಣ್ ಶಹಾಪೂರ್‌ರವರ ಪಕ್ಕದಲ್ಲಿ ಶ್ರೀಮತಿ ತಾರಾಅನೂರಾಧರವರಿಗೆ ಸೀಟ್ ಕೊಟ್ಟು ನಾವು ತಪ್ಪು ಮಾಡಿದ್ದೇವೆ.

**ಶ್ರೀ ಎನ್..ಮಹೇಶ್:–** ಸನ್ಮಾನ್ಯ ಸಭಾಪತಿಯವರೇ, ನನ್ನ ಸಹೋದರಿಯಾದ ಶ್ರೀಮತಿ ತಾರಾರವರಿಗೆ ಮೊದಲಿಗೆ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತಿದ್ದೇನೆ. ಕಾರಣವೇನೆಂದರೆ,. . . .

**ಸಭಾಪತಿಯವರು:–** ಮಾನ್ಯ ಸಚಿವರೇ, ಅವರು ತಮಗೆ ಸಿನಿಮಾದಲ್ಲಿ ಹೀರೋ ಪಾರ್ಟ್ ಕೊಡುವಂತಿದೆ.

**ಶ್ರೀ ಎನ್..ಮಹೇಶ್:–** ಸನ್ಮಾನ್ಯ ಸಭಾಪತಿಯವರೇ, thank you very much for the compliment. ಮಾನ್ಯ ಸದಸ್ಯರು ಮಾತನಾಡುತ್ತಾ, as usually ಬರುವಂತಹ ಉತ್ತರ ಎಂದು ಹೇಳಿದರು. ಆದರೆ, an unusual thing has happened. ಅದು ಏನೆಂದರೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಚುನಾವಣೆಗಳು ನಡೆದ ಹಿನ್ನೆಲೆಯಲ್ಲಿ ವರ್ಗಾವಣೆಯ ಪ್ರಕ್ರಿಯೆಗಳು 2–3 ತಿಂಗಳು ಮುಂದಕ್ಕೆ ಹೋಗಿವೆ. ಸುಮಾರು 10 ಕೇಸ್‌ಗಳು ಹೈಕೋರ್ಟ್‌ನಲ್ಲಿ ದಾಖಲಾಗಿವೆ, ಅವುಗಳಲ್ಲಿ 3 ಕೇಸ್‌ಗಳು ಕ್ಲಿಯರ್ ಆಗಿವೆ. ಉಳಿದ 7 ಕೇಸ್‌ಗಳು ಇವತ್ತು ಕೋರ್ಟ್‌ನ ಮುಂದೆ ಬರುತ್ತಿವೆ. ಸಾಧ್ಯವಾದಷ್ಟು ಈ 7 ಕೇಸ್‌ಗಳು ಇವತ್ತು ಕ್ಲಿಯರ್ ಆಗುವ ಸಾಧ್ಯತೆಗಳಿವೆ. ಇದು ಕ್ಲಿಯರ್ ಆದಕೂಡಲೇ ವಿಧಾನಪರಿಷತ್ತಿನ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳ ಮಾನ್ಯ ಸದಸ್ಯರುಗಳ ಸಭೆ ನಡೆಸಲಾಗುತ್ತದೆ. ವರ್ಗಾವಣೆ ನೀತಿಯಲ್ಲಿ ಒಂದಷ್ಟು ಬದಲಾವಣೆಗಳನ್ನು ತರಬೇಕೆನ್ನುವ ಮನವಿಯನ್ನು ಮಾನ್ಯ ಸದಸ್ಯರುಗಳು ಮಾಡಿದ್ದಾರೆ, ಅದರಂತೆ ತಿದ್ದುಪಡಿಯನ್ನು ಮಾಡಲು ಕಳುಹಿಸಿಕೊಟ್ಟಿದ್ದೇವೆ. ಕಡ್ಡಾಯ ವರ್ಗಾವಣೆಯಲ್ಲಿ, terminally ill, cancer, dialysis ಗೆ ಒಳಗಾಗಿರುವ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೇ ಕೋರ್ಟ್‌ನಿಂದ ಕ್ಲಿಯರೆನ್ಸ್ ದೊರೆತ ಮೇಲೆ ಯಾವಾಗ ವಿಧಾನಪರಿಷತ್ತಿನ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳ ಮಾನ್ಯ ಸದಸ್ಯರುಗಳು ಸಭೆ ನಡೆಸಲಾಗುತ್ತದೆ ಎನ್ನುವುದನ್ನು ತಿಳಿಸಿ.

**ಶ್ರೀ ಎನ್..ಮಹೇಶ್:–** ಸನ್ಮಾನ್ಯ ಸಭಾಪತಿಯವರೇ, ಇದು ಕಾನೂನು ಇಲಾಖೆಯಲ್ಲಿ ಪೆಂಡಿಂಗ್ ಇದೆ. ಕೋರ್ಟ್‌ನಿಂದ ಕ್ಲಿಯರೆನ್ಸ್ ದೊರೆತ ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀಮತಿ ತಾರಾಅನೂರಾಧ:–** ಸನ್ಮಾನ್ಯ ಸಭಾಪತಿಯವರೇ, ಈ ವಾರದೊಳಗೆ ವರ್ಗಾವಣೆ ಪ್ರಕ್ರಿಯೆಗೆ ಕ್ರಮ ಕೈಗೊಳ್ಳಲಾಗುತ್ತದೆಯೇ?

**ಶ್ರೀ ಎಂ.ಮಹೇಶ್:–** ಸನ್ಮಾನ್ಯ ಸಭಾಪತಿಯವರೇ, ಸುಮಾರು 07 ಪ್ರಕರಣಗಳು ಈ ದಿನ ರಾಜ್ಯದ ಹೈಕೋರ್ಟ್ ಮುಂದೆ ಬರುತ್ತಿದೆ. ಅಲ್ಲಿ ಕ್ಲಿಯರ್ ಆದ ಕೂಡಲೇ, ತಿದ್ದುಪಡಿಗಾಗಿ ಕಳುಹಿಸಿಕೊಟ್ಟಿರುವುದನ್ನು follow-up ಮಾಡುತ್ತಿದ್ದೇವೆ. ಅದು ಆದರೆ, ಮುಂದಿನ 15 ದಿನಗಳಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

**ಶ್ರೀ ಅರುಣ ಶಹಾಪೂರ:–** ಸನ್ಮಾನ್ಯ ಸಭಾಪತಿಯವರೇ, ತಾವು ನನ್ನ ಹೆಸರನ್ನು ಉಲ್ಲೇಖ ಮಾಡಿರುವುದರಿಂದ ಮತ್ತು ನಾನು ಶಿಕ್ಷಕರ ಕ್ಷೇತ್ರದಿಂದ ಚುನಾಯಿತನಾಗಿರುವುದರಿಂದ ದಯವಿಟ್ಟು ಮಾತನಾಡಲು ನನಗೊಂದು ಅವಕಾಶವನ್ನು ನೀಡಿ. ತಾವು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈ ಕಾನೂನನ್ನು ಜಾರಿಗೆ ತಂದಿದ್ದೀರಿ. ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್‌ಗೂ ಚುನಾವಣೆಗಳಿಗೂ ಏನು ಸಂಬಂಧವಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕೌನ್ಸಿಲಿಂಗ್ ಎನ್ನುವುದು ತನ್ನಿಂದ ತಾನೇ ನಡೆಯುವಂತಹ, ಯಾರದ್ದೇ ಹಸ್ತಕ್ಷೇಪವಿಲ್ಲದಂತೆ ನಡೆಯುವ ಪ್ರಕ್ರಿಯೆಯಾಗಿದೆ. ಆದರೆ, ಸರ್ಕಾರ ಚುನಾವಣೆಯ ನೆಪವೊಡ್ಡಿ ಅದನ್ನು ಮುಂದೂಡಿತು. ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲವೆನ್ನುವುದು ಇದರಿಂದ ಖಾತರಿಯಾಗುತ್ತದೆ.

ಎರಡನೆಯದಾಗಿ, ಕೋರ್ಟ್‌ನಲ್ಲಿ ದಾಖಲಾಗಿರುವ ಪ್ರಕರಣಗಳು ಕ್ಲಿಯರ್ ಆಗಿ, ನಂತರ ತಿದ್ದುಪಡಿಗಳಾಗಿ ಅನುಷ್ಠಾನಗೊಳ್ಳುವುದು ಎಷ್ಟು ದೊಡ್ಡ ಪ್ರಕ್ರಿಯೆ ಎನ್ನುವುದು ತಮಗೆ ಗೊತ್ತಿದೆ. ಈ ವರ್ಷವೂ ವರ್ಗಾವಣೆಗಳು ಇಲ್ಲದಿರುವಂತಹ ಪರಿಸ್ಥಿತಿ ನಿರ್ಮಾಣವಾಗಬಾರದು. ಯಾವುದೇ ರೀತಿಯ ತಿದ್ದುಪಡಿಗಳನ್ನು ತರುವುದಿದ್ದರೆ ಮುಂದಿನ ವರ್ಷ ತರಲಿ, ಈಗ ಇರುವಂತಹ ಸ್ಥಿತಿಯಲ್ಲಿ ವರ್ಗಾವಣೆ ಮಾಡಲಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ತಕ್ಷಣವೇ ವರ್ಗಾವಣೆಯಾಗಬೇಕೆನ್ನುವುದು ಶಾಸಕರೆಲ್ಲರ ಅಭಿಪ್ರಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್..ಮಹೇಶ್:-** ಸನ್ಮಾನ್ಯ ಸಭಾಪತಿಯವರೇ, ಕಡ್ಡಾಯ ವರ್ಗಾವಣೆಗಳಿಗೆ ಸಂಬಂಧಪಟ್ಟಂತೆ ಕೆಲವು ತಿದ್ದುಪಡಿಗಳ ಅಂಗೀಕಾರಕ್ಕಾಗಿ ಕಳುಹಿಸಿಕೊಡಲಾಗಿದೆ. ಉಳಿದ ವರ್ಗಾವಣೆಗಳನ್ನು ಇನ್ನೊಂದು ವಾರದಲ್ಲಿ ಮಾಡಲಾಗುತ್ತದೆ.

**ಶ್ರೀ ಅರುಣ ಶಹಾಪೂರ:-** ಸನ್ಮಾನ್ಯ ಸಭಾಪತಿಯವರೇ, ತಾವು ಮಾರ್ಗದರ್ಶನವನ್ನು ಮಾಡಬೇಕಾಗಿದೆ. ತಾವು ಅದರ ಕರ್ತೃ.

**ಸಭಾಪತಿಯವರು:-** ಮಾನ್ಯ ಸಚಿವರೇ, ಕೋರ್ಟ್ ಕ್ಲಿಯರೆನ್ಸ್ ಬಂದ ಕೂಡಲೇ ವರ್ಗಾವಣೆಗಳನ್ನು ಮಾಡಿಬಿಡಿ. ವಿಧಾನ ಪರಿಷತ್ತಿನ ಚುನಾವಣೆಗಳಿಗೆ ನೀತಿ ಸಂಹಿತೆ ಅನ್ವಯವಾಗುವುದಿಲ್ಲ. ಇದು ತಪ್ಪು. ಯಾರೋ ಹೇಳುವುದನ್ನು ತಾವು ಒಪ್ಪಿಕೊಳ್ಳುತ್ತೀರಿ. ವರ್ಗಾವಣೆಗಳನ್ನು ಆದಷ್ಟು ಬೇಗನೇ ಮಾಡಿ.

**ಶ್ರೀ ಎನ್..ಮಹೇಶ್:-** ಸನ್ಮಾನ್ಯ ಸಭಾಪತಿಯವರೇ, ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 304**
**(ಉತ್ತರವನ್ನು ಲಗತ್ತಿಸಲಾಗಿದೆ)**

***ಶ್ರೀ ಎಂ.ಎ.ಗೋಪಾಲ ಸ್ವಾಮಿ:-*** *ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಪ್ರಥಮ ದರ್ಜೆ ಕಾಲೇಜುಗಳಿವೆ. ಅಲ್ಲಿಯ ನುಗ್ಗೆಹಳ್ಳಿ ಮತ್ತು ಶ್ರವಣಬೆಳಗೊಳ ಹೋಬಳಿ ಈ ಎರಡು ಹೋಬಳಿಗಳ ಸಾವಿರಾರು ವಿದ್ಯಾರ್ಥಿಗಳು ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಿಂದ ಬರುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುತ್ತಿದೆ.*

*(ಮುಂದು)*

(253) 12.7.2018 10.40 ಪಿಕೆ:ಜಿಆರ್

**ಸಭಾಪತಿಯವರು:-** ಅಲ್ಲಿ ಕಾಲೇಜನ್ನು ತೆರೆಯುತ್ತಾರೋ ಇಲ್ಲವೋ ಕೇಳಿಬಿಡಿ.

**ಶ್ರೀ ಎಂ.ಎ. ಗೋಪಾಲಸ್ವಾಮಿ:-** ಮಾನ್ಯ ಸಚಿವರು, ಕೋರಿಕೆ ಬಂದರೆ ಕ್ರಮ ಜರುಗಿಸುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಅಲ್ಲಿ ಕಾಲೇಜು ತೆರೆಯಲು ಸ್ಥಳ ಮತ್ತು ಇನ್ನಿತರ ವ್ಯವಸ್ಥೆಗಳನ್ನು ಯಾವರೀತಿ ಮಾಡುತ್ತಾರೆ ಎನ್ನುವುದನ್ನು ತಿಳಿಸಿದರೆ ನಾವು ಕೋರಿಕೆ ಸಲ್ಲಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಇದುವರೆಗೂ ಸರ್ಕಾರದ ಗಮನಕ್ಕೆ ಯಾವುದೇ ಪ್ರಸ್ತಾವನೆ ಬಂದಿಲ್ಲ. ಪ್ರಸ್ತಾವನೆ ಬಂದರೆ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಅದರ ಮೇಲೆ ಒಂದು ನೋಟ್ ತಯಾರು ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ. ಅಲ್ಲಿ ಕಾಲೇಜು ತೆರೆಯಲು ಏನು ತೊಂದರೆ ಇದೆ ಎನ್ನುವುದನ್ನು ತಿಳಿದುಕೊಂಡು ಮುಂದಿನ ಕ್ರಮ ಕೈಗೊಳ್ಳಿ.

**ಶ್ರೀ ಜಿ.ಟಿ.ದೇವೇಗೌಡ:-** ಕ್ರಮ ಕೈಗೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ : 315**

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ವೈ.ಎ.ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ನಾನು, ರಾಜ್ಯದಲ್ಲಿರುವ ಖಾಸಗಿ ಅನುದಾನಿತ ಶಾಲೆಗಳಲ್ಲಿನ ಶಿಕ್ಷಕರಿಗೆ/ಉಪನ್ಯಾಸಕರಿಗೆ ಫಲಿತಾಂಶವನ್ನು ಮಾನದಂಡವನ್ನಾಗಿಸಿ ಸಂಬಳವನ್ನು ತಡೆಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ, ಬಂದಿದೆ ಎಂದು ಉತ್ತರ ಕೊಡುತ್ತಾರೆ. ನನ್ನ ಎರಡನೆಯ ಪ್ರಶ್ನೆಯಲ್ಲಿ, ಬಂದಿದ್ದಲ್ಲಿ ಇಂತಹ ನಿರ್ಧಾರದಿಂದ ಎಷ್ಟು ಶಾಲಾ ಕಾಲೇಜುಗಳ ಸಿಬ್ಬಂದಿಗೆ ತೊಂದರೆಯಾಗಿದೆ ಎಂದು ಕೇಳಿದರೆ, ಯಾವುದೇ ಶಾಲಾ/ಕಾಲೇಜುಗಳ ಸಿಬ್ಬಂದಿಗಳಿಗೆ ತೊಂದರೆಯಾಗಿರುವುದಿಲ್ಲ ಎಂದು ಉತ್ತರ ಕೊಡುತ್ತಾರೆ. ಇಲ್ಲಿ ಗೊಂದಲ ಇದೆ. ಮತ್ತೆ, ನನ್ನ ಮೂರನೆಯ ಪ್ರಶ್ನೆಗೆ, ಶಾಲಾ ಸಿಬ್ಬಂದಿಗಳ ವಿವರಣೆ ಪಡೆದು ಶಿಸ್ತಿನ ಕ್ರಮ ಜರುಗಿಸಲು ಸುತ್ತೋಲೆ ಹೊರಡಿಸಿದ್ದೇವೆ ಎಂದು ಹೇಳಿದ್ದಾರೆ. ಶಿಸ್ತು ಕ್ರಮ ಎಂದರೆ ಏನು? ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಗೊಂದಲ ಇದೆ. ಸಚಿವರಿಗೆ ಅಧಿಕಾರಿಗಳು ಸರಿಯಾದ ಮಾಹಿತಿ ಕೊಟ್ಟಿಲ್ಲ. ಸಂಬಳ ತಡೆಹಿಡಿದಿರುವುದು ಗಮನಕ್ಕೆ ಬಂದಿದೆ ಎನ್ನುವುದಾದರೆ, ಎಷ್ಟು ಜನ ಸಿಬ್ಬಂದಿಗೆ ತೊಂದರೆಯಾಗಿದೆ ಎನ್ನುವ ಮಾಹಿತಿ ನಿಮ್ಮ ಹತ್ತಿರ ಇರಬೇಕು. ಇದರ ಬಗ್ಗೆ clarification ಕೊಡಬೇಕು.

**ಶ್ರೀ ಎನ್.ಮಹೇಶ್:-**ಮಾನ್ಯ ಸಭಾಪತಿಯವರೇ, ಖಾಸಗಿ ಅನುದಾನಿತ ಪ್ರೌಢ ಶಾಲೆಗಳ ಎಸ್.ಎಸ್.ಎಲ್.ಸಿ. ಫಲಿತಾಂಶವು ಕಳೆದ 5 ವರ್ಷಗಳ ಜಿಲ್ಲಾ ಫಲಿತಾಂಶದ ಸರಾಸರಿಗಿಂತ ಕಡಿಮೆಯಿದ್ದಾಗ ಅಂತಹ ಕಡೆ ಸಂಬಳ ತಡೆಹಿಡಿಯುವಂತಹ ಕೆಲಸ ಆಗಿದೆ. ನಾವು ಶಿಕ್ಷಕರ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪದವೀಧರ ಕ್ಷೇತ್ರದ ಶಾಸಕರೊಂದಿಗೆ ಸಭೆ ಮಾಡಿದಾಗ, ಈ ಕುರಿತು ಅವರು ಪ್ರಶ್ನೆ ಮಾಡಿದರು; ಈ ನಿಯಮವನ್ನು ಸಡಿಲ ಮಾಡಬೇಕು; ಸಂಬಳ ತಡೆ ಹಿಡಿಯಬಾರದು; ಬೇರೆ ರೀತಿಯ ಶಿಸ್ತಿನ ಕ್ರಮ ಕೈಗೊಳ್ಳಿ ಎಂಬ ಸಲಹೆ ನೀಡಿದರು.

**ಸಭಾಪತಿಯವರು:-** ಈಗೇನು ಕ್ರಮ ಕೈಗೊಂಡಿದ್ದೀರೋ ಅದನ್ನು ಹೇಳಿ

**ಶ್ರೀ ಎನ್.ಮಹೇಶ್:-** ಮಾನ್ಯ ಸಭಾಪತಿಯವರೇ, ದಿನಾಂಕ 3.7.2018ರಲ್ಲಿ ಪತ್ರ ಬರೆದು ಸಂಬಳ ತಡೆಹಿಡಿದಿರುವುದನ್ನು ರದ್ದುಪಡಿಸಿ ಸಂಬಳ ಕೊಡಬೇಕೆಂದು ತಿಳಿಸಿದ್ದೇವೆ. ಸದ್ಯದಲ್ಲೇ ಇದು ಅನ್ವಯವಾಗುತ್ತದೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಈ ಕ್ರಮಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ನನ್ನ ಮೂರು ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಫಲಿತಾಂಶವನ್ನು ನೆಪವಾಗಿ ಇಟ್ಟುಕೊಂಡು, ಶಿಕ್ಷಕರನ್ನು ವಿದ್ಯಾರ್ಥಿಗಳ ಮುಂದೆ ನಿಲ್ಲಿಸಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಬೈಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಶಿಕ್ಷಣ ಹಕ್ಕು ಕಾಯಿದೆಯಲ್ಲಿ, ಮಕ್ಕಳನ್ನು ಯಾರೂ ದಂಡಿಸಬಾರದು, ಹೊಡೆಯಬಾರದು ಎನ್ನುವ ಕಾನೂನು ಇರಬೇಕಾದರೆ, ಮಕ್ಕಳನ್ನು ಬೈಯುವ ಹಕ್ಕು ಶಿಕ್ಷಕರಿಗೆ ಇಲ್ಲದೇ ಇರಬೇಕಾದರೆ, ಶಿಕ್ಷಕರನ್ನು ಬೈಯುವ ಹಕ್ಕು ಅಧಿಕಾರಿಗಳಿಗೆ ಕೊಟ್ಟವರು ಯಾರು? ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು. ಮಾನ್ಯ ಸಭಾಪತಿಯವರೇ, ನಮ್ಮ ಕ್ಷೇತ್ರದ ಶಿರಾದಲ್ಲಿರುವ ಉರ್ದು ಪ್ರೈಮರಿ ಶಾಲೆಯ ಸಿದ್ಧಪ್ಪ ಎನ್ನುವ ಶಿಕ್ಷಕರಿಗೆ ಬಿಇಓ ಅಧಿಕಾರಿಗಳು ನಿಲ್ಲಿಸಿ ಅವಾಚ್ಯವಾಗಿ ಬೈಯ್ದಿದ್ದರಿಂದ ಆತ ಒಂದು ವಾರ ಶಾಲೆಗೆ ಹೋಗಿಲ್ಲ. ಮಕ್ಕಳನ್ನು ದಂಡಿಸುವ ಹಕ್ಕು ಶಿಕ್ಷಕರಿಗೆ ಇಲ್ಲ ಎಂದಮೇಲೆ, ಶಿಕ್ಷಕರನ್ನು ಬೈಯುವ ಹಕ್ಕನ್ನು ಅಧಿಕಾರಿಗಳಿಗೆ ಕೊಟ್ಟವರು ಯಾರು?

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಯಾದಗಿರಿಯ ಸುರಪುರ ತಾಲ್ಲೂಕಿನಲ್ಲೂ ಇಂತಹ ಘಟನೆ ನಡೆದಿದೆ.

**ಸಭಾಪತಿಯವರು:-** ಎಲ್ಲೆಲ್ಲಿ ಇಂತಹ ಪ್ರಕರಣಗಳು ನಡೆದಿದೆಯೋ ಅವುಗಳ ವಿವರಗಳನ್ನು ಮಾನ್ಯ ಸಚಿವರಿಗೆ ಕೊಡಿ. ಅವರು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುತ್ತಾರೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಫಲಿತಾಂಶ ವ್ಯತಿರಿಕ್ತವಾಗಿ ಬರುವುದಕ್ಕೆ ಖಾಲಿ ಇರುವ ಶಿಕ್ಷಕ ಹುದ್ದೆಗಳು ಕಾರಣವಾಗಿದೆ. ಈ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಯಾವಾಗ ಅವಕಾಶ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಡುತ್ತೀರಿ? ಈ ಕುರಿತು ಚರ್ಚೆಯಾಗಿದೆ; ತಾವು ಆಶ್ವಾಸನೆ ಕೂಡ ಕೊಟ್ಟಿದ್ದೀರಿ. ಆದರೆ, ಯಾವ ಕಾಲಮಿತಿಯಲ್ಲಿ ಹುದ್ದೆಗಳನ್ನು ತುಂಬುತ್ತೀರಿ ಎಂಬ ಬಗ್ಗೆ ತಿಳಿಸಬೇಕು.

ಮಾನ್ಯ ಸಭಾಪತಿಯವರೇ, ಈಗ ನಾನು ಕೇಳುವ ವಿಷಯ ಶಿಕ್ಷಣ ಇಲಾಖೆಗೆ ಸಂಬಂಧ ಪಡುವುದಿಲ್ಲ. ಬೇರೆ ಬೇರೆ ಇಲಾಖೆಗಳಲ್ಲಿ ಗುರಿ ಮುಟ್ಟುವುದಕ್ಕೆ ವಿಫಲರಾಗಿರುವ, ಟಾರ್ಗೆಟ್ ರೀಚ್ ಆಗದೇ ಇರುವ, ಟಾರ್ಗೆಟ್ ರೀಚ್ ಮಾಡದೇ ಇರುವ ಎಷ್ಟು ಅಧಿಕಾರಿಗಳ ಸಂಬಳ ಕಡಿತ ಆಗಿದೆ? ಶಿಸ್ತು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರಿ ಸರಿ. ಆದರೆ ಶಿಕ್ಷಕರ ಸಂಬಳವನ್ನೇ ಏಕೆ ನಿಲ್ಲಿಸಿದ್ದೀರಿ? ಬೇರೆ ಇಲಾಖೆಯ ಅಧಿಕಾರಿಗಳಿಗೆ, ಸರಿಯಾಗಿ ಕೆಲಸ ಮಾಡದೇ ಇರುವವರಿಗೆ, ಟಾರ್ಗೆಟ್ ರೀಚ್ ಮಾಡಲು ವಿಫಲರಾದಂತಹ ಎಷ್ಟು ಜನರಿಗೆ ಸರ್ಕಾರ ಸಂಬಳ ನಿಲ್ಲಿಸಿದೆ ಎನ್ನುವುದನ್ನು ತಿಳಿಸಬೇಕು.

**ಶ್ರೀ ಎನ್.ಮಹೇಶ್:-**ಮಾನ್ಯ ಸಭಾಪತಿಯವರೇ, ಶಿರಾ ಮತ್ತು ಸುರಪುರ ತಾಲ್ಲೂಕಿನಲ್ಲಿ, ಶಿಕ್ಷಕರನ್ನು ಮಕ್ಕಳ ಮುಂದೆ ನಿಲ್ಲಿಸಿ ನಿಂದಿಸುವಂಥದ್ದು ಮಾಡಿದರೆ ಶಿಕ್ಷಕರ ಎದೆಗುಂದಿಸಿದಂತಾಗುತ್ತದೆ. ಇದನ್ನು ನಾನು ಒಪ್ಪುವುದಿಲ್ಲ.

**ಸಭಾಪತಿಯವರು:-** ಯಾರು ಅಂತಹ ಅಧಿಕಾರಿಗಳು ಇದ್ದಾರೋ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಎನ್.ಮಹೇಶ್:-** ಖಂಡಿತಾ ಕ್ರಮ ಕೈಗೊಳ್ಳುವ ಕೆಲಸ ಮಾಡುತ್ತೇವೆ. ಫಲಿತಾಂಶ ಹೆಚ್ಚಾಗಬೇಕಾದರೆ ಶಿಕ್ಷಕರ ನೇಮಕಾತಿ ಅವಶ್ಯಕವಾಗಿರುತ್ತದೆ. ಇದನ್ನು ನಾನು ಒಪ್ಪುತ್ತೇನೆ. ತಕ್ಷಣವೇ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ದೇಶದಲ್ಲೇ ಇಲ್ಲದಂತಹ ಕಾಯಿದೆಯನ್ನು ನೀವು ಮಾಡಿದ್ದೀರಿ. ಶಾಲೆಗಳಲ್ಲಿ ಶಿಕ್ಷಕರೇ ಇಲ್ಲದಿದ್ದರೆ ಉತ್ತಮ ಫಲಿತಾಂಶವನ್ನು ಹೇಗೆ ಕೊಡುವುದಕ್ಕೆ ಆಗುತ್ತದೆ? ಮೊದಲು ಈ ಕಾಯಿದೆಯನ್ನು ತೆಗೆದು ಹಾಕಿ. ಈ ಕಾಯಿದೆಯನ್ನು ಯಾರು ತಂದರೋ ಗೊತ್ತಿಲ್ಲ. ಇಂತಹ ಕಾಯಿದೆ ಇರಬಾರದು. ಶಿಕ್ಷಕರಿಗೆ ಒಳ್ಳೆಯ ಮಾರ್ಗದರ್ಶನ ನೀಡಿ ಫಲಿತಾಂಶ ಹೆಚ್ಚು ಮಾಡುವ ಕೆಲಸ ಮಾಡಿ.

**ಶ್ರೀ ಎನ್.ಮಹೇಶ್:-** ಖಂಡಿತಾ ಮಾಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ : 214**

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಐವನ್ ಡಿ'ಸೋಜಾ (ಶ್ರೀ ಆರ್.ಪ್ರಸನ್ನ ಕುಮಾರ್ ಪರವಾಗಿ):**-ಮಾನ್ಯ ಸಭಾಪತಿಯವರೇ, ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಏಕರೂಪ ಪಠ್ಯಕ್ರಮ ತರುವ ಉದ್ದೇಶವಿದೆಯೇ ಎಂದು ಪ್ರಶ್ನೆ ಕೇಳಿದ್ದೇವೆ. ಸ್ವಾಯತ್ತ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳು ಬಿಟ್ಟು ರಾಜ್ಯದಲ್ಲಿ 19 ವಿಶ್ವವಿದ್ಯಾಲಯಗಳಿವೆ. ಆ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಪಠ್ಯಕ್ರಮ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿದ್ದೇವೆ. ಅದಕ್ಕೆ ಮಾನ್ಯ ಸಚಿವರು, ಘನತೆವೆತ್ತ ರಾಜ್ಯಪಾಲರ ಅನುಮತಿ ಪಡೆದು ಆಯಾ ವಿಶ್ವವಿದ್ಯಾಲಯಗಳು ತಮಗೆ ಬೇಕಾದ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುತ್ತವೆ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ಒಬ್ಬ ವಿದ್ಯಾರ್ಥಿ ಒಂದು ವಿಶ್ವವಿದ್ಯಾಲಯದಿಂದ ಬಿ.ಬಿ.ಎ ಮಾಡಿಕೊಂಡು ಇನ್ನೊಂದು ವಿಶ್ವವಿದ್ಯಾಲಯಕ್ಕೆ ಹೋದಾಗ ಅವರ ಪಠ್ಯಕ್ರಮವೇ ಬೇರೆ ಇರುತ್ತದೆ. ಅಲ್ಲಿ ಕಲಿಸಿದ್ದನ್ನು ಇಲ್ಲಿ ಕಲಿಸುವುದೇ ಇಲ್ಲ. ಸಾಮಾನ್ಯ ಪಠ್ಯಕ್ರಮ ಇಲ್ಲದೇ ಇದ್ದರೆ ಉದ್ಯೋಗ ಹುಡುಕುವಾಗ ತೊಂದರೆಯಾಗುತ್ತದೆ; ಅದು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುತ್ತದೆ. Why can't you bring a Common syllabus for all the Universities and all the Colleges? Common syllabus ಏಕಿರಬಾರದು? ಬಿ.ಎ., ಬಿ.ಕಾಂ., ಬಿ.ಎಸ್ಸಿ., ಈ ಡಿಗ್ರಿಗಳನ್ನೇನೋ ಕೊಡುತ್ತಾರೆ ಆದರೆ ಪಠ್ಯಕ್ರಮ ಬೇರೆ ಇದ್ದರೆ ಉದ್ಯೋಗ ಪಡೆಯಲು ಸಂದರ್ಶನಕ್ಕೆ ಹೋದಾಗ ಒಬ್ಬನಲ್ಲಿ ಇರುವಂತಹ ಚಾಕಚಕ್ಯತೆ ಬೇರೆ ಇರುತ್ತದೆ; ಇನ್ನೊಬ್ಬನಲ್ಲಿ ಇರುವಂತಹ ವಿಚಾರಗಳು ಬೇರೆ ಇರುತ್ತವೆ ಮತ್ತು ಮತ್ತೊಬ್ಬನಲ್ಲಿ ಇನ್ನೊಂದು ರೀತಿಯ ಪ್ರತಿಭೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಸಮಸ್ಯೆಗಳಾಗುವುದಿಲ್ಲವೇ ಎಂಬುದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕಾಗುತ್ತದೆ. ಎರಡನೆಯದಾಗಿ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವಿವರ ಕೇಳಿದ್ದಾರೆ. More than fifty per cent staffs are vacant. ಅದರಲ್ಲಿ, 3934 ಮಂಜೂರಾದ ಬೋಧಕ ಹುದ್ದೆಗಳ ಪೈಕಿ 1799 ಹುದ್ದೆಗಳನ್ನು ಖಾಲಿ ಇಡಲಾಗಿದೆ. The Government has not appointed. ನಿನ್ನೆ ಈ ಕುರಿತು ಮಾತನಾಡಿದೆವು. ಬೋಧಕೇತರ ಹುದ್ದೆಗಳನ್ನು ನೋಡಿದರೆ, ಮಂಜೂರಾದ 7838 ಹುದ್ದೆಗಳಲ್ಲಿ 4202 ಹುದ್ದೆಗಳನ್ನು ಖಾಲಿ ಇಟ್ಟುಕೊಂಡಿದ್ದಾರೆ. ನಾನೊಂದು ಉದಾಹರಣೆ ಹೇಳುತ್ತೇನೆ. Convocation Certificate ಗೆಂದು ಅಪ್ಲೆ ಮಾಡಿದರೆ 30 ದಿನಗಳ ಒಳಗಾಗಿ ಕೊಡಬೇಕೆಂದು ನಿಯಮ ಇದೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ಮಂಗಳೂರು ವಿಶ್ವವಿದ್ಯಾಲಯ Convocation Certificate ಗೆಂದು ಅಪ್ಲೆ ಮಾಡಿದರೆ ಅವರು, 3 ತಿಂಗಳಾಗುತ್ತದೆ ಎಂದು ಹೇಳುತ್ತಾರೆ. ತತ್ಕಾಲ್‌ನಲ್ಲಿ ಅಪ್ಲೈ ಮಾಡಿದರೆ instead of five hundred rupees, if you give four thousand rupees, ತತ್ಕಾಲ್‌ನಲ್ಲಿ 2 ದಿವಸದ ಒಳಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಬಹುಶಃ ಇದಕ್ಕೆ ಬೋಧಕೇತರ ಸಿಬ್ಬಂದಿಗಳ ಕೊರತೆ ಕಾರಣ ಇರಬಹುದು. ಒಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ.

ಮಾನ್ಯ ಸಭಾಪತಿಯವರೇ, ಪಿ.ಹೆಚ್.ಡಿ., ಗೈಡ್ ಅಪಾಯಿಂಟ್ ಮಾಡುವುದಕ್ಕೆ ಏಕರೂಪದ ನೀತಿ ಇಲ್ಲ. ಹಾಗಾಗಿ, ಯಾರು ಪಿ.ಹೆಚ್.ಡಿ., ಮಾಡುವುದಕ್ಕೆ ಬಯಸುತ್ತಾರೋ ಅವರಿಗೆ ತೊಂದರೆ ಆಗುತ್ತಿದೆ, ಅವರಿಗೆ ಕಷ್ಟವಾಗುತ್ತಿದೆ. ಮಾನ್ಯ ಸಚಿವರು ಹೊಸಬರು. ಅವರ ಮೇಲೆ ಹೆಚ್ಚು ಭಾರ ಹಾಕುವುದಿಲ್ಲ. ಮುಂದಿನ ದಿನಗಳಲ್ಲಿ ಇದನ್ನು ಸರಿಪಡಿಸಬಹುದು ಎಂದು ಭಾವಿಸಿಕೊಂಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳೂ ಕೂಡ ಇದನ್ನು ಗಮನಿಸುವ ಕೆಲಸ ಮಾಡಬೇಕು.

(ಮುಂದು)

(254)12-7-2018 10.50 ಡಿಎಸ್-ಜಿಆರ್

ಶ್ರೀ ಐವನ್ ಡಿ'ಸೋಜಾ(ಮುಂದು):-

ಮುಂದಕ್ಕೆ ಕೊಡಬಹುದು ಎಂದು ನಾನು ಭಾವಿಸಿಕೊಂಡಿದ್ದೇನೆ. ಈಗ ಮಾನ್ಯ ಸಚಿವರು ಅಧ್ಯಯನ ಮಾಡುತ್ತಿರಬಹುದು ಎಂದು ನನಗನಿಸುತ್ತಿದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಜಿ.ಟಿ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಬೇರೆ ಬೇರೆ ಸಿಲಬಸ್‌ಗಳನ್ನು including skill development course ಬೇರೆ ಬೇರೆ ಕಾಲೇಜುಗಳಲ್ಲಿ ತರಬೇಕು ಎನ್ನುವಂಥದ್ದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಖಾಲಿ ಇರುವಂತಹ ಹುದ್ದೆಗಳ ಬಗ್ಗೆ ಅತಿಥಿ ಉಪನ್ಯಾಸಕರುಗಳನ್ನು ಈಗಾಗಲೇ ನೇಮಕಾತಿ ಮಾಡಿಕೊಳ್ಳುವುದಕ್ಕೆ ಕ್ರಮ ಕೈಗೊಂಡಿದ್ದೇವೆ. ಖಾಯಂ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಹಣಕಾಸು ಇಲಾಖೆಗೆ ಈಗಾಗಲೇ ನಾವು ಪ್ರಪೋಸಲ್ ಕಳುಹಿಸಿದ್ದೇವೆ. ಅದನ್ನು ಮಾಡುವುದಕ್ಕೆ ತುರ್ತು ಕ್ರಮ ಕೈಗೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಏನೇನು ವಿಚಾರಗಳನ್ನು ಹೇಳಿದ್ದಾರೆ ಅವುಗಳ ಬಗ್ಗೆ ನಮ್ಮ ಉನ್ನತ ಶಿಕ್ಷಣ ಪರಿಷತ್ತಿನ ಅಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯದ ಕುಲಪತಿಗಳನ್ನು ಕರೆದು ಪರಿಣಾಮಕಾರಿಯಾದಂತಹ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯಕ್ರಮಗಳನ್ನು ರೂಪಿಸಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ, ಸಿಲಬಸ್ ಮಾಡುತ್ತೇವೆ, skill development course ಅನ್ನು ಕೂಡ ಎಲ್ಲಾ ಕಾಲೇಜುಗಳು, ಎಲ್ಲಾ ವಿಶ್ವವಿದ್ಯಾಲಯಗಳನ್ನು ಕರೆದು ಚರ್ಚಿಸಿ ನಾವು ಮಾಡುತ್ತೇವೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಮಾಡಲಿ ಎಂದು ನಾನು ಮಾನ್ಯ ಸಚಿವರಿಗೆ ಶುಭ ಹಾರೈಕೆ ಮಾಡುತ್ತೇನೆ. ಮಾನ್ಯ ಸಚಿವರಿಗೆ ಮನಸ್ಸು ಇದೆ, ಮಾಡುವಂತಹ ಇಚ್ಛಾಶಕ್ತಿ ಇದೆ. ದಯವಿಟ್ಟು ಮಾಡಬೇಕು.

ಚುಕ್ಕೆ ಪ್ರಶ್ನೆ ಸಂಖ್ಯೆ:345
ಉತ್ತರ ಲಗತ್ತಿಸಲಾಗಿದೆ

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಜಲ ವಿದ್ಯುತ್ ಉತ್ಪಾದನೆಯ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಇವತ್ತು ವಿಶೇಷವಾಗಿ ಜಗತ್ತಿನಲ್ಲಿ ಜಾಗತಿಕ ತಾಪಮಾನ ಏರಿಕೆ ಕುರಿತು global warming ಬಗ್ಗೆ ಜಗತ್ತು ತುಂಬಾ ತಲೆಕೆಡಿಸಿಕೊಂಡಿದೆ. ಅಭಿವೃದ್ಧಿಶೀಲ ರಾಷ್ಟ್ರಗಳು, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕೂಡ ಇದರಲ್ಲಿ ಭಾಗವಹಿಸುತ್ತಿವೆ. ಭಾರತ 'fastest growing economy' ಆದ ಕಾರಣ ನಮ್ಮ ನೆರೆ ರಾಷ್ಟ್ರ ಚೈನಾದೊಡನೆ ನಾವು ಸ್ಪರ್ಧೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಮತ್ತು ಭಾರತದ ಪಶ್ಚಿಮ ಘಟ್ಟಗಳು, ಕರ್ನಾಟಕದಲ್ಲಿರುವಂತಹ ಪಶ್ಚಿಮ ಘಟ್ಟಗಳು World Heritage List ನಲ್ಲಿ ಬಂದಿರುವುದರಿಂದಾಗಿ ನಮಗೆ ಇವತ್ತು ಪರಿಸರ ರಕ್ಷಣೆಯ ಸಂದರ್ಭದಲ್ಲಿ ಬಹಳ ದೊಡ್ಡ ಪ್ರಶ್ನೆ ಕರ್ನಾಟಕಕ್ಕೆ ಸದಾ ಕಾಡುತ್ತಿರುತ್ತದೆ. ಇದರ ನಡುವೆ ರಾಜ್ಯದ ಅಭಿವೃದ್ಧಿ ಮತ್ತು ರಾಷ್ಟ್ರದ ಅಭಿವೃದ್ಧಿಯಿಂದಾಗಿ ನಾವು ವಿದ್ಯುತ್ ಯೋಜನೆಗಳನ್ನು ಕೈಗೊಳ್ಳುವಾಗ ಜಲ ವಿದ್ಯುತ್, ನಿಸರ್ಗ ನಮಗೆ ನೀಡಿರುವ ಅಪಾರ ಜಲವನ್ನು ಉಪಯೋಗಿಸಿ ವಿದ್ಯುತ್ ಉತ್ಪಾದನೆ ಮಾಡುವುದರ ಮೂಲಕ ಉತ್ಪಾದನಾ ವೆಚ್ಚ ತಗ್ಗುತ್ತದೆ, ಪರಿಸರದ ಹಾನಿ ತಪ್ಪುತ್ತದೆ, ಶುದ್ಧ ವಿದ್ಯುತ್‌ನ್ನು ತಯಾರು ಮಾಡುತ್ತೇವೆ ಎಂದು ಜಲ ವಿದ್ಯುತ್ ಯೋಜನೆಗಳಿಗೆ ನಾವು ಹೆಚ್ಚು ಮಹತ್ವವನ್ನು ಕೊಡುತ್ತಿದ್ದೇವೆ. ಈ ನಿಟ್ಟಿನಲ್ಲಿ ಎಷ್ಟು ಅರಣ್ಯ ಪ್ರದೇಶ ಜಲ ವಿದ್ಯುತ್ ಯೋಜನೆಗಳಿಗೆ ನಾವು ವಶಪಡಿಸಿಕೊಂಡಿದ್ದೇವೆ ಮತ್ತು ನಾಶವಾದ ಅರಣ್ಯವನ್ನು ಮತ್ತೆ ಪುನರ್ ಬಳಸುವುದಕ್ಕೆ ಏನು ಕ್ರಮ ಕೈಗೊಂಡಿದ್ದಾರೆಂದು ನಾನು ಪ್ರಶ್ನೆಯನ್ನು ಕೇಳಿದ್ದೆ. 'ಕಿರುಜಲ ವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದಂತೆ ಬಳಸಿಕೊಂಡ ಅರಣ್ಯ ಪ್ರದೇಶಗಳ ಮಾಹಿತಿಯನ್ನು ಯೋಜನಾ ಅಭಿವೃದ್ಧಿದಾರರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡೆಯಬೇಕಾಗಿದ್ದು, ಮಾಹಿತಿಯು ಅಗಾಧವಾಗಿರುವುದರಿಂದ ಸದ್ಯಕ್ಕೆ ಲಭ್ಯವಿರುವುದಿಲ್ಲ. ಕಿರುಜಲ ವಿದ್ಯುತ್ ಯೋಜನೆಗೆ ಅವಶ್ಯವಿರುವ ಜಮೀನನ್ನು ಖಾಸಗಿ ಅಭಿವೃದ್ಧಿದಾರರೆ ಖರೀದಿ/ಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳುತ್ತಾರೆ ಮತ್ತು ಪರಿಹಾರವನ್ನು ಸದರಿ ಅಭಿವೃದ್ಧಿದಾರರೆ ನೀಡಬೇಕಾಗಿರುತ್ತದೆ' ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಂದರೆ ಎಷ್ಟು ನಾಶವಾಗಿದೆ ಎನ್ನುವ ಮಾಹಿತಿ ಅಗಾಧವಾಗಿದೆ, ಅದರ ಮಾಹಿತಿಯೇ ಲಭ್ಯವಿಲ್ಲವೆಂದರೆ ಸರ್ಕಾರ ಯಾವ ರೀತಿ ಪರ್ಯಾಯ ಅರಣ್ಯವನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ? ಇದರಲ್ಲಿ ಸರ್ಕಾರದ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ.

**ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿದ್ಯುತ್ ತಮಗೆಲ್ಲಾ ಗೊತ್ತಿರುವ ಹಾಗೆ ಗೃಹ ಬಳಕೆ ಇರಬಹುದು, ಕೈಗಾರಿಕೆಗಳಿಗೆ ಇರಬಹುದು, ಪ್ರತಿಯೊಂದಕ್ಕೂ ಕೂಡ ಇವತ್ತು ವಿದ್ಯುತ್ ಇಲ್ಲದೆ ನಮ್ಮ ರಾಜ್ಯ ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಅರಣ್ಯ ಪ್ರದೇಶದಲ್ಲಿರುವಂತಹ ಜಮೀನನ್ನು ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿ ಜಲ ವಿದ್ಯುತ್ ಯೋಜನೆಗಳಿಗೆ ಬೇಕಾದ ಜಮೀನನ್ನು ನಾವು ಪಡೆದು ಕರ್ನಾಟಕ ಸರ್ಕಾರದಿಂದ ಅದಕ್ಕೆ ಎಷ್ಟು ಅನುದಾನ ಆಗುತ್ತದೆ ಅಷ್ಟು ಹಣವನ್ನು ಆ ಇಲಾಖೆಗೆ ತುಂಬುತ್ತೇವೆ. ಆ ಅರಣ್ಯ ಇಲಾಖೆಯವರು ಬದಲಿ ಅರಣ್ಯವನ್ನು ಬೆಳೆಸಬೇಕು. ಇಲ್ಲೇನು ಅರಣ್ಯ ನಷ್ಟವಾಗುತ್ತದೆ, ಅದಕ್ಕಿಂತ ಹೆಚ್ಚು ಅರಣ್ಯವನ್ನು ಬೆಳೆಸುವುದಕ್ಕೆ ಅರಣ್ಯ ಉಳಿಸುವಂಥದ್ದು, ಪರಿಸರ ಕಾಪಾಡುವಂಥದ್ದು, ಅಷ್ಟೇ ವಿದ್ಯುತ್‌ನ್ನು ಉತ್ಪಾದನೆ ಮಾಡುವಂತಹ ಜವಾಬ್ದಾರಿಯನ್ನು ಸರ್ಕಾರ ಮಾಡಿದೆ.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಸರ್ಕಾರ ಒದಗಿಸಿರುವ ಅನುಬಂಧ-3 ರಲ್ಲಿ, ಶರಾವತಿ ಕಣಿವೆ ಯೋಜನೆಗಳು, ಶಿವಮೊಗ್ಗದಲ್ಲಿ ವಶಪಡಿಸಿಕೊಂಡಿರುವಂತಹ ಭೂಮಿಯ ವಿಸ್ತೀರ್ಣ 60,494.38 ಎಕರೆ, ಪರಿಸರ ರಕ್ಷಣೆ ಹಾಗೂ ಸಂರಕ್ಷಣೆಗೆ ಕೈಗೊಂಡ ಕ್ರಮಗಳು ಎಷ್ಟೆಂದರೆ, 854 ಎಕರೆ 36 ಗುಂಟೆ ಜಾಗ. ಆ ದೊಡ್ಡ ಅಂತರವನ್ನು ನೋಡಿದಾಗ ನಾವು ಎಷ್ಟು ವಿಫಲರಾಗಿದ್ದೇವೆ ಎಂಬುದು ಕಂಡುಬರುತ್ತಿದೆ. ಕಾಳಿ ಯೋಜನೆ ಹಂತ-1 ರಲ್ಲಿ 13,309.25 ಹೆಕ್ಟೇರ್ಸ್ ವಶಪಡಿಸಿಕೊಂಡಿದ್ದೇವೆ. ಪರಿಸರ ರಕ್ಷಣೆ ಹಾಗೂ ಸಂರಕ್ಷಣೆಗೆ ಕೈಗೊಂಡ ಕ್ರಮಗಳು ಎನ್ನುವ ಕಾಲಂ ನಲ್ಲಿ ಚುಕ್ಕೆಯನ್ನು ಕೊಟ್ಟಿದ್ದಾರೆ. ಎಷ್ಟು ಅರಣ್ಯ ಬೆಳೆಸಿದ್ದೇವೆ ಎನ್ನುವುದು ಇಲ್ಲ. ಕಾಳಿ ಯೋಜನೆ ಹಂತ-2 ರಲ್ಲಿ 4,237.93 ಹೆಕ್ಟೇರ್ಸ್ ವಶಪಡಿಸಿಕೊಂಡಿದ್ದೇವೆ. ವರಾಹಿ ಯೋಜನೆಯಲ್ಲಿ 7,089 ಎಕರೆ, ಚಕ್ರಾ, ಸಾವೇಹಕ್ಲು ಯೋಜನೆಯಲ್ಲಿ 4,324 ಎಕರೆ ವಶಪಡಿಸಿಕೊಂಡಿದ್ದೇವೆ. 1997 ರಿಂದ ಪರಿಹಾರಾತ್ಮಕ ನೆಡುತೋಪುಗಳನ್ನು ಬೆಳೆಸುವುದು ಕಡ್ಡಾಯವಾಗಿರುತ್ತದೆ. ವರಾಹಿ ಕಾಳಿ ಯೋಜನೆ ಹಂತ-1, ವರಾಹಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಚಕ್ರಾ ಯೋಜನೆಗಳು 1997ಕ್ಕಿಂತ ಮುಂಚೆ ಅನುಷ್ಠಾನಗೊಂಡಿರುವುದರಿಂದ ಪರಿಹಾರಾತ್ಮಕ ನೆಡುತೋಪುಗಳನ್ನು ಬೆಳೆಸಿರುವುದಿಲ್ಲ ಎಂದು ಹೇಳಿದ್ದಾರೆ. ಒಂದು ಅರಣ್ಯವನ್ನು ಬೆಳೆಸಬೇಕಾದರೆ ನೂರಾರು ವರ್ಷಗಳು ಬೇಕಾಗುತ್ತವೆ. 20 ವರ್ಷಗಳ ಹಿಂದೆ ಅನುಷ್ಠಾನಗೊಂಡ ಯೋಜನೆಗಳಲ್ಲಿ ಅರಣ್ಯ ಬೆಳೆಸುವುದಕ್ಕೆ ಸರ್ಕಾರಕ್ಕೆ ಗೊತ್ತಾಗಲಿಲ್ಲವೆಂದರೆ ಇದೊಂದು ದೊಡ್ಡ ಲೋಪ ಎಂದು ನಾನು ಆರೋಪ ಮಾಡುತ್ತಿದ್ದೇನೆ. ಸಾಲು ಮರದ ತಿಮ್ಮಕ್ಕನಂತಹ ಒಬ್ಬ ಅನಕ್ಷರಸ್ಥ ಹೆಣ್ಣುಮಗಳಿಗೆ ಒಂದು ತೋಪನ್ನು ಬೆಳೆಸಬೇಕೆನ್ನುವುದು ಗೊತ್ತಾಗುತ್ತದೆ. ಸರ್ಕಾರವಾಗಿ ನಾವು ಈ ಯೋಜನೆಗಳಲ್ಲಿ ಏಕೆ ವಿಫಲರಾಗಿದ್ದೇವೆ, ನಾವು ಎಲ್ಲಿ ವಿಫಲರಾಗಿದ್ದೇವೆ ಎನ್ನುವುದಕ್ಕೆ ನಾನು ಉತ್ತರ ಬಯಸುತ್ತಿದ್ದೇನೆ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಶರಾವತಿ ಕಣಿವೆ ಯೋಜನೆಗಳಿಗೆ, 60,494.38 ಎಕರೆಯಲ್ಲಿ 854 ಎಕರೆ 36 ಗುಂಟೆ ಜಾಗದಲ್ಲಿ ನೆಡುತೋಪು ಬೆಳಸಲಾಗಿದೆ. ಕಾಳಿ ಯೋಜನೆ ಹಂತ–1 ರಲ್ಲಿ 13,309.25 ಹೆಕ್ಟೇರ್ಸ್‌ನಲ್ಲಿ ಮಾಡಲಾಗಿದೆ. ಕಾಳಿ ಯೋಜನೆ ಹಂತ–2 ರಲ್ಲಿ 4,237.93 ಹೆಕ್ಟೇರ್ಸ್‌ನಲ್ಲಿ ಬೆಳೆಸಬೇಕಿದ್ದು ಅಲ್ಲಿ 6,481.25 ಹೆಕ್ಟೇರ್ಸ್‌ನಲ್ಲಿ ಮಾಡಲಾಗಿದೆ. ಅಂದರೆ ಅಲ್ಲಿ ಇನ್ನೂ ಹೆಚ್ಚು ಅರಣ್ಯ ಪ್ರದೇಶದಲ್ಲಿ ಸರ್ಕಾರಿ ಜಾಗ ಇತ್ತು, ಪರಿಸರ ರಕ್ಷಣೆ ಮಾಡುವುದಕ್ಕೆ ಸಾಧ್ಯವಾಯಿತು. ಅಲ್ಲಿ ಇನ್ನು 2,000 ಹೆಕ್ಟೇರ್ಸ್ ಜಾಸ್ತಿ ಅರಣ್ಯ ಪ್ರದೇಶವನ್ನು ಮಾಡಿದ್ದೇವೆ. ಎಲ್ಲಿ ಜಮೀನಿನ ಕೊರತೆ ಇದೆ ಅಲ್ಲಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇವೆಲ್ಲವನ್ನು ಕೂಡ ಹಂತ ಹಂತವಾಗಿ ಮಾಡುವುದು ಅತೀ ಮುಖ್ಯ. ಸಾಲು ಮರದ ತಿಮ್ಮಕ್ಕನವರ ಹೆಸರನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ಮರಗಳನ್ನು ಜಮೀನುಗಳಲ್ಲಿ ಏನು ಬೆಳೆಸುತ್ತಿದ್ದರು ಅದನ್ನೆಲ್ಲಾ ರೈತರೇ ನಿಲ್ಲಿಸಿಬಿಟ್ಟಿದ್ದಾರೆ. ಎಲ್ಲಾ ರೈತರು ಅವರವರ ಜಮೀನುಗಳಲ್ಲಿ ಮರಗಿಡಗಳನ್ನು ಬೆಳೆಸಬೇಕು. ಸರ್ಕಾರಿ ತೋಪುಗಳು ಉಳಿದಿಲ್ಲ, ಅತಿಕ್ರಮವಾಗಿವೆ. ಅತಿಕ್ರಮವಾಗಿರುವುದನ್ನು ತೆರವುಗೊಳಿಸುವುದಕ್ಕೆ ಸ್ವಲ್ಪ ನಿಧಾನಗತಿಯಲ್ಲಿ ಆಗುತ್ತದೆ. ಖಂಡಿತವಾಗಿಯೂ ಅರಣ್ಯ ಪ್ರದೇಶವನ್ನು ಬೆಳೆಸತಕ್ಕಂಥ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ಹೆಚ್ಚು ಒತ್ತನ್ನು ಕೊಡುತ್ತದೆ.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಜಮೀನು ಕಳೆದುಕೊಂಡು ನಿರಾಶ್ರಿತರಾದವರಿಗೆ ಸರ್ಕಾರ ಪರಿಹಾರ ಕೊಡುವಲ್ಲಿ ತುಂಬಾ ವಿಫಲವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಶರಾವತಿ ಯೋಜನೆಯಲ್ಲಿ 2800 ಕುಟುಂಬಗಳು, ಕಾಳಿ ಯೋಜನೆಯಲ್ಲಿ 1626 ಕುಟುಂಬಗಳು, ಕಾಳಿ ಯೋಜನೆ ಹಂತ–2 ರಲ್ಲಿ 872 ಕುಟುಂಬಗಳಿಗೆ ಪರಿಹಾರವನ್ನು ನೀಡಬೇಕಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ನೀವು ಪ್ರಶ್ನೆ ಕೇಳಿ ಎಂದರೆ ಓದುತ್ತಿದ್ದೀರಿ, ಓದುವುದು ಬೇಡ. ಈಗಾಗಲೇ ಹೆಚ್ಚು ಸಮಯ ತೆಗೆದುಕೊಂಡಿದ್ದೀರಿ.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಜಿಲ್ಲಾ ಪಂಚಾಯಿತಿಗಳಿಗೆ ವಹಿಸುತ್ತಾರೆ. ಜಿಲ್ಲಾ ಪಂಚಾಯಿತಿಗಳಿಗೆ ಕೊಡತಕ್ಕಂಥ ಅನುದಾನ ಎಷ್ಟು ಕಡಿಮೆ ಇದೆ ಎಂಬುದು ತಮಗೆ ಗೊತ್ತಿದೆ. ಹಾಗಾಗಿ ನಾಡು, ನುಡಿಗೋಸ್ಕರ, ಲೋಕ ಕಲ್ಯಾಣಕೋಸ್ಕರ ಮನೆ, ಮಠ, ಕೃಷಿ ಭೂಮಿಯನ್ನು ಕಳೆದುಕೊಂಡಿರುವಂತಹ ಅರಣ್ಯದ ವನವಾಸಿ ಮಕ್ಕಳಾಗಿರುವಂತಹ ಆ ಮುಗ್ಧ ಕುಟುಂಬಗಳಿಗೆ ಪರಿಪೂರ್ಣವಾದ ವ್ಯವಸ್ಥಿತವಾದ ಜೀವನವನ್ನು ಕಟ್ಟಿಕೊಳ್ಳುವುದಕ್ಕೆ ಸಂತ್ರಸ್ತರಿಗೆ ಪರಿಹಾರವನ್ನು ಕೊಡಬೇಕು. (ಮುಂದು)

(255) 12.07.2018 BKP/MD 11.00

**ಡಾ॥ ತೇಜಸ್ವಿನಿ ಗೌಡ** (ಮುಂದು):-

ಇದರಲ್ಲಿ ಸರ್ಕಾರ ವಿಫಲವಾಗಿದೆ. ನಾನು ಸರ್ಕಾರವನ್ನು ಟೀಕೆ ಮಾಡುವುದಿಲ್ಲ. ದಯಮಾಡಿ ಇದನ್ನು ಮಾಡಿಕೊಡಬೇಕೆಂದು ಆಗ್ರಹ ಮಾಡುತ್ತೇನೆ. ಧನ್ಯವಾದಗಳು.

**ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಗಿರಿಜನರ ಬಗ್ಗೆ, ಆದಿವಾಸಿಗಳ ಬಗ್ಗೆ ಸರ್ಕಾರಕ್ಕೆ ಅತ್ಯಂತ ಕಾಳಜಿ ಇದೆ. ಶರಾವತಿ ಯೋಜನೆಯಲ್ಲಿ ಅವರೇ ಹೋಗಿ ನೇರವಾಗಿ ಶೇಕಡ 50ರಷ್ಟು ಮನೆಗಳನ್ನು ಅರಣ್ಯ ಪ್ರದೇಶದಲ್ಲಿ ಕಟ್ಟಿಕೊಂಡುಬಿಟ್ಟಿದ್ದಾರೆ. ಅದರಿಂದ ಅನುಮತಿ ಬರಬೇಕು. ಕಾಳಿ ಯೋಜನೆಯಲ್ಲಿ Township ನಿರ್ಮಾಣ ಮಾಡಿ ಅದರಲ್ಲಿ ರಸ್ತೆ, ಶಾಲೆ ಮುಂತಾದ ಕಟ್ಟಡಗಳನ್ನು ನಿರ್ಮಾಣ ಮಾಡಿದ ನಂತರ ಜಿಲ್ಲಾ ಪಂಚಾಯ್ತಿಯ ಜವಾಬ್ದಾರಿ ಬರುತ್ತದೆ. ನಂತರ ಅದನ್ನು ಜಿಲ್ಲಾ ಪಂಚಾಯತ್‌ಗೆ hand over ಮಾಡಲೇಬೇಕು, ಅದನ್ನು ಮಾಡಿದ್ದೇವೆ. ಶರಾವತಿ ಯೋಜನೆಯಲ್ಲಿ ಉಳಿದಿರುವವರೆಲ್ಲರಿಗೂ ಮನೆಗಳನ್ನು ಕಟ್ಟಿ ಕೊಡುವಂತಹ ಕ್ರಮವನ್ನು ಕೈಗೊಳ್ಳುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 342**

**ಚುಕ್ಕೆ ಪ್ರಶ್ನೆ ಸಂಖ್ಯೆ: 340, 340ಎ**

**ಸಭಾಪತಿಯವರು:-** ಮಾನ್ಯ ಚೌಡರೆಡ್ಡಿ ತೂಪಲ್ಲಿಯವರೆ ಹಾಗೂ ಮಾನ್ಯ ಶರವಣರವರೆ, ನಿಮ್ಮ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಯವರು ಸಮಯಾವಕಾಶವನ್ನು ಕೇಳಿದ್ದಾರೆ. ದಯಮಾಡಿ ಕ್ಷಮಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: 289**

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು 412, ಪ್ರಾಂಶುಪಾಲರ ಮಂಜೂರಾತಿ ಹುದ್ದೆಗಳು 372, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಕೇವಲ 6 ಮತ್ತು ಕೊರತೆ ಇರುವುದು 366 ಹುದ್ದೆಗಳು. ಈ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು ಎನ್ನುವ ಮಾತನ್ನು ಹೇಳಿದ್ದಾರೆ. ಮೊದಲನೆಯದಾಗಿ ಅದನ್ನು ಸರ್ಕಾರ ಯಾವ ಕಾಲಮಿತಿಯೊಳಗೆ ಭರ್ತಿ ಮಾಡುತ್ತದೆ ಎನುವ ಮಾತನ್ನು ಹೇಳಬೇಕಾಗುತ್ತದೆ. ಎರಡನೆಯದಾಗಿ ಬೋಧಕ ಮತ್ತು ಬೋಧಕೇತರ ಶಿಕ್ಷಕರ ಕೊರತೆಗಳ ಬಗ್ಗೆ ಕೇಳಿದ್ದೇನೆ. ಒಟ್ಟು 4583 ಹುದ್ದೆಗಳ ಕೊರತೆ ಇದೆ ಎಂದು ಹೇಳಿದ್ದಾರೆ. ಅದನ್ನು ಯಾವಾಗ ಭರ್ತಿ ಮಾಡಲಾಗುವುದು ಎಂದು ಸರ್ಕಾರವನ್ನು ಕೇಳಬಯಸುತ್ತೇನೆ. ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿಯನ್ನು ನೀಡುವಂತೆ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದ್ದು, ಆರ್ಥಿಕ ಇಲಾಖೆ ಸಹಮತಿಯನ್ನು ನೀಡಿದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಈ ಆರ್ಥಿಕ ಇಲಾಖೆ ಕರ್ನಾಟಕದಲ್ಲಿದೆಯೋ ಅಥವಾ ದೆಹಲಿಯಲ್ಲಿದೆಯೋ? ಏಕೆಂದರೆ ಆರ್ಥಿಕ ಇಲಾಖೆ ನಮ್ಮ ಕರ್ನಾಟಕ ಸರ್ಕಾರದ ಒಂದು ಇಲಾಖೆ. ಅಲ್ಲಿಗೆ ಕಡತ ಹೋಗಿದ್ದನ್ನು ಉತ್ತರದಲ್ಲಿ ತಿಳಿಸತಕ್ಕದ್ದಲ್ಲ. ಅದು ಸರ್ಕಾರದ ಬದ್ಧತೆ. ಅದು sanctioned and vacant post. ಆದ್ದರಿಂದ ಕಡತ ಆರ್ಥಿಕ ಇಲಾಖೆಗೆ ಹೋಗಿದೆ, ಅದಕ್ಕೋಸ್ಕರ ಕಾಯುತ್ತಿದ್ದೇವೆ ಎನ್ನುವ ಉತ್ತರ ಸಮಂಜಸವಾದುದಲ್ಲ ಎನ್ನುವುದು ನನ್ನ ಅನಿಸಿಕೆ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಹಿರಿಯ ಹಾಗೂ ಅನುಭವಿ ಸದಸ್ಯರು. ನಾವು ಯಾವುದೇ ಉತ್ತರವನ್ನು ಕೊಡುವಾಗ ಮಾನ್ಯ ಸದಸ್ಯರಿಗೆ ಸತ್ಯಾಂಶವನ್ನು ತಿಳಿಸಲೇಬೇಕಾಗುತ್ತದೆ. ನಮ್ಮ ಸದನದ ಸದಸ್ಯರಿಗೆ ನಮ್ಮ ಕುಟುಂಬದ ಸಮಸ್ಯೆಯನ್ನು ತಿಳಿಸಬೇಕಾಗುತ್ತದೆ. ಆ ರೀತಿ ಬಹಳಷ್ಟು ವರ್ಷಗಳಿಂದ ಬಹಳಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ. ವಿಧಾನ ಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ಬಹಳಷ್ಟು ಕಾಲದಿಂದ ಪ್ರಾಂಶುಪಾಲರು, ಅಧ್ಯಾಪಕರು ಹಾಗೂ ಬೋಧಕ ಮತ್ತು ಬೋಧಕೇತರ ಹುದ್ದೆ ಖಾಲಿ ಇರುವುದು ಗೊತ್ತಿದೆ. ಹಾಗಾಗಿ ನಾವು ಆರ್ಥಿಕ ಇಲಾಖೆಯಿಂದ ಹಣವನ್ನು ಕೊಡದೇ ಇದ್ದರೆ ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಆಗುವುದೇ ಇಲ್ಲ. ಆ ಕಾರಣಕ್ಕೋಸ್ಕರ ನಾವು ಹಣಕಾಸು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗೆ ಅದನ್ನು ಕಳುಹಿಸಿಕೊಟ್ಟಿದ್ದೇವೆ. ಹಣಕಾಸು ಇಲಾಖೆಯಿಂದ ಅನುಮತಿ ಬಂದ ಕೂಡಲೇ ಅದನ್ನು ಮಾಡಿಕೊಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದೇವೆ. ಅದಕ್ಕೆ ಹಚ್ಚಿನ ಒತ್ತನ್ನು ಕೊಟ್ಟು ಆದಷ್ಟು ಶೀಘ್ರವಾಗಿ ಭರ್ತಿ ಮಾಡುವ ಕ್ರಮ ಕೈಗೊಳ್ಳುತ್ತೇವೆ.

**ಸಭಾಪತಿಯವರು:–** ಹಾಗಾದರೆ ಹಣಕಾಸು ಇಲಾಖೆಯವರು ಅನುಮತಿಯನ್ನು ಕೊಡಲಿಲ್ಲವೆಂದರೆ ನೇಮಕಾತಿಯನ್ನು ಮಾಡುವ ಹಾಗೆಯೇ ಇಲ್ಲವೇ? ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡಿ. ವಿದ್ಯಾರ್ಥಿಗಳಿಗೆ ಶಿಕ್ಷಕರೇ ಇಲ್ಲವೆಂದರೆ ಹೇಗೆ ಕಲಿಸುತ್ತಾರೆ? ಆ ಕಾರಣಕ್ಕಾಗಿಯೇ ಮಾನ್ಯ ಮುಖ್ಯಮಂತ್ರಿಗಳೇ ಹಣಕಾಸು ಸಚಿವರಾಗಿರುವುದರಿಂದ ಅವರ ಜೊತೆಗೆ ಸಭೆಯನ್ನು ಮಾಡಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಹಾಗೂ ಕಟ್ಟಡಗಳ ನಿರ್ಮಾಣಕ್ಕೂ ಸಹ ಆದ್ಯತೆಯನ್ನು ಕೊಡುತ್ತೇವೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಹೊಸ ಹುದ್ದೆ ಆದರೆ ಅಡ್ಡಿ ಇಲ್ಲ. ಆದರೆ ಇದು ಮಂಜೂರಾತಿಯಾಗಿರುವಂಥ ಹುದ್ದೆಗಳು. ಒಬ್ಬ ನಿವೃತ್ತಿಯಾದ ನಂತರ ಅವರ ಬದಲು ಆ ಸ್ಥಳಕ್ಕೆ ಒಬ್ಬರನ್ನು ನೇಮಕ ಮಾಡುವುದಕ್ಕೆ ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಡಬೇಕೆಂದರೆ ಏನರ್ಥ? ಮಂಜೂರಾಗಿರುವಂಥ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಸರ್ಕಾರಕ್ಕೆ ಇರುವಂಥ ತೊಂದರೆ ಏನು? ಎಲ್ಲದಕ್ಕೂ ಸಹ ಆರ್ಥಿಕ ಇಲಾಖೆ, ಮತ್ತೊಂದು ಎನ್ನುವುದಕ್ಕಿಂತ ಇದು ಸರ್ಕಾರದ ನಿರ್ಧಾರ. ಇವರು ಮಂಜೂರಾತಿಯನ್ನು ತೆಗೆದುಕೊಂಡು ಅದನ್ನು ಅನುಷ್ಠಾನ ಮಾಡಬೇಕು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವೆಂದರೆ, 412 ಗ್ರೇಡ್–1 ಪ್ರಾಂಶುಪಾಲರಲ್ಲಿ ಕೆಲಸ ನಿರ್ವಹಿಸುತ್ತಿರುವವರು ಕೇವಲ 6 ಜನ ಮಾತ್ರ. ಅದನ್ನು ಯಾವ ಕಾಲಮಿತಿಯಲ್ಲಿ ಮಾಡುತ್ತಾರೆ ಎನ್ನುವುದು ಒಂದು ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಆರ್ಥಿಕ ಇಲಾಖೆಯ ಅನುಮೋದನೆ ಇವೆಲ್ಲಾ ಮುಂಚಿನಿಂದ ನಡೆದುಕೊಂಡು ಬಂದಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಅದನ್ನು ನಾವು ಕೇಳುತ್ತಲೇ ಇದ್ದೇವೆ. ಅದು ಸರಿ ಅಲ್ಲ. ಇದು ಅವರ ಜವಾಬ್ದಾರಿ, ಅವರ ಹೊಣೆ. ಬಹುಶಃ ಒಂದು ಇಲಾಖೆಯೊಂದಿಗೆ ಸರ್ಕಾರದ ಪರವಾಗಿ ಅವರು ಉತ್ತರವನ್ನು ಕೊಡುವವರು. ಆದ್ದರಿಂದ ಆ ಪದ ಬಳಕೆ ಇಲ್ಲಿ ಸರಿಯಲ್ಲ ಎನ್ನುವುದು ನನ್ನ ಒಂದು ಅನಿಸಿಕೆಯಾಗಿದೆ.

**ಶ್ರೀ ಎನ್.ರವಿ ಕುಮಾರ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಉನ್ನತ ಶಿಕ್ಷಣ ವಿಶ್ವವಿದ್ಯಾನಿಲಯಗಳಿರಬಹುದು ಅಥವಾ ಪದವಿ ಕಾಲೇಜುಗಳಿರಬಹುದು. ಉದಾಹರಣೆಗೆ ಎಂಎಲ್‌ಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುದ್ದೆಗಳು ಖಾಲಿ ಆದ ತಕ್ಷಣ ಸರ್ಕಾರ ಅಥವಾ ಆ ಪಾರ್ಟಿ ಅದನ್ನು ಭರ್ತಿ ಮಾಡಿಕೊಳ್ಳುವುದಕ್ಕೋಸ್ಕರ ಬಹಳ ಆಗ್ರಹಪಡಿಸುತ್ತೇವೆ. ಅದನ್ನು ಆದಷ್ಟು ಬೇಗ ತುಂಬಿಕೊಳ್ಳುತ್ತಾರೆ. ಆದರೆ ಗ್ರೇಡ್ 1 ಮತ್ತು 2 ಎರಡೂ ಸೇರಿದರೆ ಕಾಲೇಜುಗಳಲ್ಲಿ 396 ಪ್ರಾಂಶುಪಾಲರುಗಳಿಲ್ಲ. ಆ ಕಾಲೇಜುಗಳಲ್ಲಿ ಯಾವ ರೀತಿಯಿಂದ ಆಡಳಿತ ನಡೆಯುತ್ತದೆ? ಇದರಿಂದ ಶಿಕ್ಷಣದಲ್ಲಿ ಗುಣಮಟ್ಟ ಬರಲು ಹೇಗೆ ಸಾಧ್ಯವಾಗುತ್ತದೆ? ಹಾಗಾಗಿ ನನ್ನ ಪ್ರಕಾರ ಆ ಕಾಲೇಜುಗಳು ಬಹಳ ಕಷ್ಟದಲ್ಲಿ ನಡೆಯುತ್ತವೆ. ಆ ಕಾಲೇಜುಗಳನ್ನು ಯಾರು ನಡೆಸುತ್ತಾರೆ, ಹೇಗೆ ನಡೆಯುತ್ತವೆ ಮತ್ತು ಶಿಕ್ಷಣದ ಗುಣಮಟ್ಟ ಏನಾಗುತ್ತದೆ? ಅದೇ ರೀತಿ ಕೃಷಿ ವಿಶ್ವವಿದ್ಯಾನಿಲಯವು ಸೇರಿದಂತೆ ರಾಜ್ಯದಲ್ಲಿ 9 ವಿಶ್ವವಿದ್ಯಾನಿಲಯಗಳಿಗೆ ಸುಮಾರು ಒಂದೂವರೆ ವರ್ಷಗಳಿಂದ Vice Chancellor ಗಳು ಇಲ್ಲ. ಕರ್ನಾಟಕ ರಾಜ್ಯದ ಶಿಕ್ಷಣದ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೊದಲು ಶಿಕ್ಷಣ ಇಲಾಖೆಗೆ ಆರ್ಥಿಕ ಇಲಾಖೆಯ ಅನುಮತಿಯನ್ನು ಕೊಡಬೇಕು. ಶಿಕ್ಷಣ ಸತ್ತು ಹೋದರೆ ಎಲ್ಲಾ ಇಲಾಖೆಗಳು ಸತ್ತು ಹೋಗುತ್ತವೆ. ಶಿಕ್ಷಕರಿಲ್ಲದ ಕಾರಣ ಫಲಿತಾಂಶ ಕಡಿಮೆಯಾಗುತ್ತಿದೆ.

**ಶ್ರೀ ಜಿ.ಟಿ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಇದು ನಿನ್ನೆ ಅಥವಾ ಇವತ್ತು ಆಗಿರುವಂಥಾದ್ದಲ್ಲ. ಎಲ್ಲರೂ ಕೂಡ ಬಹಳಷ್ಟು ವರ್ಷಗಳಿಂದ ಖಾಲಿ ಬಿಟ್ಟಿದ್ದಾರೆ. ಎಲ್ಲಿಯೂ ಸಹ ಶಿಕ್ಷಣ ವ್ಯವಸ್ಥೆ ನಿಂತಿಲ್ಲ. ಅಲ್ಲಿಗೆ in-charge ವ್ಯವಸ್ಥೆಯನ್ನು ಮಾಡಲಾಗಿದೆ ಹಾಗೂ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡು ಕಾಲೇಜುಗಳು ನಡೆಯುತ್ತಿವೆ. ಮಾನ್ಯ ಸದಸ್ಯರು ತಿಳಿಸಿದಂತೆ ಖಾಲಿ ಹುದ್ದೆಗಳನ್ನು ತುಂಬತಕ್ಕಂಥ ಕೆಲಸವನ್ನು ಮಾಡಬೇಕಾಗಿದೆ. ಅವರು ಹೇಳುತ್ತಿರುವುದು ಸತ್ಯ ಇದೆ. ಅದೇ ರೀತಿ ಮಾನ್ಯ ಸದಸ್ಯರು ಉಪ ಕುಲಪತಿಗಳ ನೇಮಕಾತಿಯ ಬಗ್ಗೆ ಪ್ರಸ್ತಾಪ ಮಾಡಿದರು. ಸಂಬಂಧಪಟ್ಟ ಕಮಿಟಿಯವರನ್ನು ಕರೆದು ನಾನು ಈಗಾಗಲೇ ಮಾತನಾಡಿದ್ದೇನೆ. ಆ ಕಮಿಟಿ Eligibility List ತಯಾರು ಮಾಡಿ ನಮಗೆ ಸಲ್ಲಿಸುತ್ತದೆ. ಆ procedure ನ್ನು ಮಾಡತಕ್ಕಂಥ ಕ್ರಮವನ್ನು ನಾವು ಈಗಾಗಲೇ ಕೈಗೊಂಡಿದ್ದೇವೆ. ಖಂಡಿತವಾಗಿ ಅದನ್ನು ತುರ್ತಾಗಿ ಮಾಡುತ್ತೇವೆ.

**ಶ್ರೀ ಎನ್.ರವಿ ಕುಮಾರ್:-** ಮಾನ್ಯ ಸಭಾಪತಿಯವರೇ, In-charge Principal ರಿಗೆ ಯಾವುದೇ ಅಧಿಕಾರವಿರುವುದಿಲ್ಲ. ಅವರು ಕೇವಲ ಉತ್ಸವ ಮೂರ್ತಿಯಾಗಿ ಕುಳಿತುಕೊಂಡಿರುತ್ತಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: 283**

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ 29 ಕೋರ್ಸ್‌ಗಳನ್ನು 2011-12ರಲ್ಲಿ ವಿಲೀನ ಮಾಡಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಬಹಳ ಮುಖ್ಯವಾಗಿರುವಂಥಾದ್ದು, ವಿಲೀನಗೊಂಡಂಥ ಜೆಓಸಿ ಸಿಬ್ಬಂದಿಗಳಿಗೆ ಪಿಂಚಣಿ ವಿಲೀನ ಸೌಲಭ್ಯವನ್ನು ಪರಿಗಣಿಸದೇ ಇರುವುದು ಬಹಳ ವಿಷಾದಕರ ಸಂಗತಿಯಾಗಿದೆ. ಅವರುಗಳಿಗೆ ಸುಮಾರು 10 ರಿಂದ 15 ವರ್ಷಗಳ ಹಳೆಯ ಸೇವೆ ಇದೆ ಹಾಗೂ ಇನ್ನು ಕೆಲವರು ನಿವೃತ್ತಿಯನ್ನು ಸಹ ಹೊಂದಿರುತ್ತಾರೆ. ಅವರುಗಳಿಗೆ ಬಹಳ ಅನ್ಯಾಯವಾಗಿದೆ. ಈ ಬಗ್ಗೆ ಸರ್ಕಾರ ಉತ್ತರದಲ್ಲಿ ಏನನ್ನು ಸಹ ಹೇಳಿಲ್ಲ. ಇನ್ನು ಮನವಿಯನ್ನು ಕೊಟ್ಟಿರುವಂಥ ವಿಚಾರದಲ್ಲಿಯೂ ಸಹ ನಾನು ಹೆಚ್ಚಿನದಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಸರ್ವೋಚ್ಚ ನ್ಯಾಯಾಲಯದ ಆದೇಶವು ಸಹ ಇದೆ ಮತ್ತು ಉಚ್ಚ ನ್ಯಾಯಾಲಯದ ಆದೇಶವನ್ನು ಸಹ ಕೊಟ್ಟಿದ್ದೇವೆ. ಅದರಲ್ಲಿ ಏನು ಹೇಳುತ್ತಾರೆಂದರೆ,

> *"The development is significant as employees retiring after January 1, 2001, after regularisation of services on or after that shall now get pension after counting the entire daily wage service period."*

ಎಂದು ಹೇಳುತ್ತಾರೆ. ಅಂದರೆ ಇವರು 10 – 15 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಈ ದೇಶದ ಅತ್ಯುನ್ನತ Apex Court ನೀಡಿರುವ ತೀರ್ಪು ಇದ್ದರೂ ಕೂಡ ಅಧಿಕಾರಿಗಳು ಕಡೇಪಕ್ಷ ಅದರ ಬಗ್ಗೆ ಗಮನಿಸಿ, ನಾವು ಕೊಟ್ಟಂತಹ ಅರ್ಜಿಗೆ ಏನು ಕ್ರಮ ಮಾಡಲಾಗಿದೆ ಎಂದು ಹೇಳಬೇಕು. ಇಲ್ಲಿ ಕೊಟ್ಟಿರತಕ್ಕಂಥ ಉತ್ತರ ಎಷ್ಟರಮಟ್ಟಿಗೆ ಸರಿ ಎನ್ನುವುದನ್ನು ದಯಮಾಡಿ ಮಾನ್ಯ ಸಚಿವರು ಹೇಳಬೇಕು.

**ಮುಂದು**

**(256) 12.07.2018 11.10 ಎಸ್‌ವಿ-ಎಂಡಿ**

**ಶ್ರೀ ಎನ್.ಮಹೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಯನ್ನು ಗೌರವಿಸುತ್ತೇನೆ. ಎಸ್ ಎಸ್ ಎಲ್ ಸಿ ನಂತರ JOC (Job Oriented Course) ಮಾಡಿ ಸ್ವಯಂ ಉದ್ಯೋಗ ಮಾಡಬೇಕೆಂಬ ಕಾರಣದಿಂದ ಜೆಓಸಿ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಅದೆಷ್ಟು ಜನ ಸ್ವಯಂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉದ್ಯೋಗಿಗಳಾಗಿದ್ದಾರೆ, ಆ ವಿದ್ಯಾರ್ಥಿಗಳು ಏನಾಗಿದ್ದಾರೆ ಎಂಬುದು ಗೊತ್ತಿಲ್ಲ. ಆದರೆ ಈಗ ಶಿಕ್ಷಕರದ್ದು ಸಮಸ್ಯೆಯಾಗಿದೆ. ಅಲ್ಲಿ ಕೆಲಸ ಮಾಡುವಂತಹ ಬೋಧಕರು ಬೇರೆ ಬೇರೆ ಇಲಾಖೆಗಳಲ್ಲಿ 2656...

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು JOC ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಏನಾದರೋ ಗೊತ್ತಿಲ್ಲ ಎಂದು ಉತ್ತರ ಕೊಟ್ಟರೆ ಮನಸ್ಸಿಗೆ ನೋವಾಗುತ್ತದೆ. ಎಲ್ಲರಿಗೂ ಉದ್ಯೋಗ ದೊರಕಿ ಒಳ್ಳೆಯದೇ ಆಗಿದೆ. ಅದು ಮಾನ್ಯ ಸಚಿವರ ಸ್ಥಾನಕ್ಕೆ ಶೋಭೆ ತರುವ ಮಾತಲ್ಲ.

**ಶ್ರೀ ಎನ್.ಮಹೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ವ್ಹಿ.ಸಂಕನೂರ ಅವರು ಹೇಳಿದಂತೆ ಎಲ್ಲಾ ಕಡೆ JOC ಗಳನ್ನು ಮಾಡಿಕೊಂಡಂತಹ ವಿದ್ಯಾರ್ಥಿಗಳ ಸ್ವಯಂ ಉದ್ಯೋಗಿಗಳಾಗಿದ್ದಾರೆ. I am happy. ವಿವಿಧ ಇಲಾಖೆಗಳಲ್ಲಿ 2656 ಶಿಕ್ಷಕರನ್ನು ಖಾಯಂಗೊಳಿಸಲಾಗಿದೆ. 126 ಜನರನ್ನು ವಿಲೀನಗೊಳಿಸಬೇಕಾಗಿದೆ. ಈಗ ಇರುವ ಕಾನೂನಿನ ಪ್ರಕಾರ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 22 ಶಾಸನ 2011ರನ್ವಯ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನು ಕರ್ತವ್ಯಕ್ಕೆ ಹಾಜರಾದ ನಂತರ ಈ ಅಧಿನಿಯಮದಡಿಯಲ್ಲಿ ಆತನ ಪ್ರಾರಂಭಿಕ ಮೂಲ ವೇತನವನ್ನು ಆತನು ವಿಲೀನಗೊಂಡ ಹುದ್ದೆಯ ಪ್ರವರ್ಗದ ಕಾಲಿಕ ವೇತನ ಶ್ರೇಣಿಯ ಕನಿಷ್ಠಕ್ಕೆ ನಿಗದಿಗೊಳಿಸತಕ್ಕದ್ದು ಹಾಗೂ ತನ್ನ ವಿಲೀನಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ಜ್ಯೇಷ್ಠತೆ ಹಾಗೂ ರಜೆ ಅಥವಾ ಪಿಂಚಣಿಗೆ ಸಂಬಂಧಿಸಿದಂತೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದಲ್ಲ ಎಂದಿರುವುದರಿಂದ ಖಾಯಮಾತಿಗೂ ಹಿಂದಿನ ಸೇವೆಯನ್ನು ಪರಿಗಣಿಸಿ ಸೌಲಭ್ಯ ನೀಡಲು ಅವಕಾಶವಿರುವುದಿಲ್ಲ. ಇದರ ನಡುವೆ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್‌ನ ಆದೇಶಗಳು ಬಂದಿವೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಗಣನೆಗೆ ತೆಗೆದುಕೊಂಡು ನಿಯಮಾವಳಿಗಳಲ್ಲಿ ಬದಲಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಎಲ್ಲಾ ಸರ್ಕಾರಗಳದ್ದೂ ತಪ್ಪಿದೆ. 2006ರಲ್ಲಿ ಎನ್‌ಪಿಎಸ್ ಯೋಜನೆಯನ್ನು ಸಂಸತ್ತಿನಲ್ಲಿ ಪಾಸ್ ಮಾಡುವಾಗ ಏನು ಮಾಡುತ್ತಿದ್ದರು ಎನ್ನುವುದು ಬಹಳ ಮುಖ್ಯವಾಗಿ ಇರತಕ್ಕಂತಹ ಪ್ರಶ್ನೆ. ಇಲ್ಲಿರುವ ಶಾಸಕರಿಗೆ ಬೇಕು, ಲೋಕಸಭಾ ಸದಸ್ಯರಿಗೆ ಬೇಕು, ಅಧಿಕಾರಿಗಳಿಗೆ ಬೇಕು, ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ಜಡ್ಜ್‌ಗಳಿಗೆ ಬೇಕು. ಒಬ್ಬ ಸಾಮಾನ್ಯ ನೌಕರ ನಿವೃತ್ತಿ ಹೊಂದಿದ ನಂತರ ಜೀವನ ಮಾಡುವುದಕ್ಕೆ ಸಂವಿಧಾನಾತ್ಮಕವಾಗಿ constitutional right ಅನ್ನು ಕೊಡುವುದಕ್ಕೆ ಆಗುತ್ತಿಲ್ಲವೆಂದರೆ ಅದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಷ್ಟರಮಟ್ಟಿಗೆ ಸರಿ ಎಂಬುದು ಮೂಲಭೂತ ಪ್ರಶ್ನೆ. It is a constitutional right. ಅವರಿಗೆ ಅದನ್ನು ಕೊಡುವುದಕ್ಕೆ ನಾವು ವಿಫಲರಾಗಿದ್ದೇವೆ. ಹಾಗಾದರೆ ಶಾಸಕರಿಗೆ ವೇತನ ಪರಿಷ್ಕರಣೆ ಮಾಡುವಾಗ ಎಲ್ಲಿಯಾದರೂ ಚರ್ಚೆ ನಡೆದಿದೆಯೇ? Show me a single discussion on this, ಪಾರ್ಲಿಮೆಂಟ್‌ನಲ್ಲಿಯಾದರೂ ಏನಾದರೂ ಚರ್ಚೆ ಆಗಿದೆಯೇ? ಮಾನ್ಯ ಸಚಿವರು ಇದನ್ನು ಖಂಡಿತವಾಗಿಯೂ ಪರಿಗಣನೆ ಮಾಡುವುದಾಗಿ ಹೇಳಿದ್ದಾರೆ. Forthwith ದಯಮಾಡಿ ಕ್ರಮ ಜರುಗಿಸಬೇಕು. ಇಲಾಖೆಯ ಅಧಿಕಾರಿಗಳು ಕಾಲಕಾಲಕ್ಕೆ ಬರುವಂತಹ ಆದೇಶಗಳನ್ನು ಕಡತದಲ್ಲಿಟ್ಟುಕೊಂಡು ಅನ್ಯಾಯವಾದ ನೌಕರರು ಮನವಿಗಳನ್ನು ಕೊಟ್ಟಂತಹ ಸಂದರ್ಭದಲ್ಲಿ reply ಕೊಡುವಂತಹ ಕೆಲಸವನ್ನು ಮಾಡಬೇಕು. ದಯಮಾಡಿ ಅಧಿಕಾರಿಗಳು ಬೇಜವಾಬ್ದಾರಿ ಉತ್ತರಗಳನ್ನು ನೀಡಬಾರದೆಂದು ಸೂಚನೆ ನೀಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, 2011ರಲ್ಲಿ ಎಲ್ಲರನ್ನೂ ವಿಲೀನಗೊಳಿಸಲಾಯಿತು. ಇನ್ನು 126 ಜನರನ್ನು ಉಳಿಸಿಕೊಂಡಿದ್ದು, ಅವರು ಪ್ರತಿನಿತ್ಯ ಕಛೇರಿಗೆ ಅಲೆದಾಡುವುದಾಗಿದೆ. ಆದ್ದರಿಂದ ದಯಮಾಡಿ ಇದನ್ನು ಇತ್ಯರ್ಥಗೊಳಿಸಬೇಕು. ಸುಪ್ರೀಂಕೋರ್ಟ್ ಸೇವೆಗೆ ಸೇರಿದ ದಿನಾಂಕವನ್ನು ಹಿಂದೆಯೇ ಒಪ್ಪಿಕೊಂಡಿದೆ. Notional Increment ವರದಿಯನ್ನು ಮಾನ್ಯ ಸಭಾಪತಿಯವರೇ ಕೊಟ್ಟಿರುತ್ತಾರೆ. ಆ ನಿಯಮವನ್ನು ಇವರಿಗೂ ಅನ್ವಯ ಮಾಡಬೇಕು. 15-20 ವರ್ಷಗಳ ಕಾಲ ಕೊಟ್ಟ ಕಾಸಿಗೆ ದುಡಿದಿದ್ದಾರೆ. ಸರ್ಕಾರ ಜಾಹೀರಾತು ನೀಡಿ ತೆಗೆದುಕೊಂಡಿದೆ. ಈಗ ಅವರಿಗೆ redeployment ಮಾಡಿರುವುದನ್ನು ಒಪ್ಪುತ್ತೇವೆ. ಸೇವೆಗೆ ಬಂದ ದಿನಾಂಕದಿಂದ ಪಿಂಚಣಿ ಸವಲತ್ತನ್ನು ಕೊಡಬೇಕು.

**ಶ್ರೀ ಎನ್.ಮಹೇಶ್:-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ....

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡಿ. ಅವರು ಒಪ್ಪಬಹುದು.

**ಶ್ರೀ ಎನ್.ಮಹೇಶ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡಿ ನಿಯಮಗಳಲ್ಲಿ ಬದಲಾವಣೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:60(268)**

**ಸಭಾಪತಿಯವರು:-** ಮುಂದೆ ಮಾನ್ಯ ಸಂಕನೂರ ಅವರೇ, ನಿಮ್ಮ ಪ್ರಶ್ನೆಗೆ ಸಮಯಾವಕಾಶವನ್ನು ಕೇಳಿದ್ದಾರೆ. ಏನು ಮಾಡಲಿ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಿನ್ನೆ ಕೂಡ ಕೌಶಲ್ಯ ಕರ್ನಾಟಕದ ಬಗ್ಗೆ ಮಹತ್ತರವಾದ ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಕೂಡ ಸರ್ಕಾರದವರು ಕಾಲಾವಕಾಶ ಕೇಳಿದ್ದಾರೆ. ಈಗ ನಾನು ಸಮಯ ಕೇಳುವಂತಹ ಪ್ರಶ್ನೆಯನ್ನು ಕೇಳಿಯೇ ಇಲ್ಲ. ಸರ್ಕಾರಿ ನೌಕರರಿಗೆ ಜಾರಿ ಮಾಡಿರುವ ಎನ್.ಪಿ.ಎಸ್. ಯೋಜನೆಯನ್ನು ಅನುದಾನಿತ ಶಾಲಾ ಶಿಕ್ಷಕರಿಗೂ ಮಾಡಿ ಎಂದು ಕೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರವನ್ನು ಹೇಳುತ್ತೀರಾ?

**ಶ್ರೀ ಎನ್.ಮಹೇಶ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಸಮಗ್ರ ಮಾಹಿತಿ ಇಲ್ಲದ ಕಾರಣ ಮಾಹಿತಿಯನ್ನು ಸಂಗ್ರಹ ಮಾಡಿ ಸದನದಲ್ಲಿ ಮಂಡಿಸುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾವು ಪ್ರಶ್ನೆ ಕೇಳಿದ್ದು ಚುಕ್ಕೆ ಗುರುತಾಗುವುದೇ ಬಹಳ ಅಪರೂಪ. ಚುಕ್ಕೆ ಗುರುತಿನ ಪ್ರಶ್ನೆಗೆ ಸಮಯ ಕೇಳಿದರೆ ಅದರ ಬಗ್ಗೆ ಚರ್ಚೆಯೇ ನಡೆಯುವುದಿಲ್ಲ. ನಾನು ಬಹಳ ಜ್ವಲಂತವಾದ ಸಮಸ್ಯೆಯನ್ನು ಕೇಳಿದ್ದೇನೆ. ಇಲ್ಲಿ ಕಾಲಾವಕಾಶ ಕೇಳಿ ಉತ್ತರ ಮನೆಗೆ ಬಂದರೆ ಉಪಯೋಗವೇನು?

**ಸಭಾಪತಿಯವರು:-** ಮಾನ್ಯ ಸಂಕನೂರ ಅವರೇ, ಸಮಯ ಬಹಳ ಕಡಿಮೆ ಇದ್ದುದರಿಂದ ಈ ರೀತಿ ಆಗಿದೆ. ಮಾನ್ಯ ಸಚಿವರು ಅವರಿಗೆ ಇನ್ನೊಂದು ವಾರದೊಳಗೆ ಉತ್ತರ ಕೊಡಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಕೇವಲ ಉತ್ತರ ಪಡೆದುಕೊಂಡರೆ ಬಗೆಹರಿಯುವುದಿಲ್ಲ. ಚರ್ಚೆ ಆಗಬೇಕು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 268**

**ಶ್ರೀ ಅರುಣ ಶಹಾಪುರ:** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಅತ್ಯಂತ ಚರ್ಚೆ ಆಗಿರುವ ವಿಷಯದ ಕುರಿತು ಉತ್ತರ ಕೊಡಲು ಏನು ಸಮಸ್ಯೆ ಇದೆ?

**ಸಭಾಪತಿಯವರು:-** ಮಾನ್ಯ ಅರುಣ ಶಹಾಪುರ ಅವರೆ, ನನ್ನ ಮಾತನ್ನು ಒಂದು ನಿಮಿಷ ಕೇಳಿ. ಮಾನ್ಯ ಸಚಿವರು ಉತ್ತರ ಬಂದಿಲ್ಲವೆಂದು ನನಗೆ ಪತ್ರವನ್ನು ಕೊಟ್ಟಿರುತ್ತಾರೆ. ಮಾನ್ಯ ಸಚಿವರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಳವಾದ ಪ್ರಶ್ನೆಗಳಿಗೆ ಉತ್ತರಿಸಲು ಕಾಲಾವಕಾಶ ಏಕೆ ಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರ ಪರವಾಗಿ ತಮ್ಮ ಸ್ಪಷ್ಟನೆಯನ್ನು ನೀಡಿ. ಯಾವಾಗ ಉತ್ತರವನ್ನು ಕೊಡುತ್ತೀರಿ ಎಂದು ಹೇಳಿಬಿಡಿ.

**ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಂಕನೂರ ಹಾಗೂ ಮಾನ್ಯ ಅರುಣ ಶಹಾಪುರ ಅವರ ಪ್ರಶ್ನೆಗಳಿಗೆ 15 ದಿನಗಳೊಳಗಾಗಿ ಉತ್ತರವನ್ನು ಕೊಡುತ್ತೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾಧ್ಯಮಗಳು ಸಹ ಈ ವಿಷಯದ ಬೆನ್ನು ಹಿಂದೆ ಬಿದ್ದು, ಈ ಪ್ರಕರಣ ಏನಾಗುತ್ತಿದೆ ಎಂದು ಚರ್ಚೆ ಮಾಡುತ್ತಿರುವ ವಿಷಯ ಮಾನ್ಯ ಸಚಿವರಿಗೆ ತಿಳಿದಿದೆ. ಇದಕ್ಕೆ ಸದನದಲ್ಲಿ ಉತ್ತರ ಕೊಡದಿದ್ದರೆ, ಏನು ಸಂದೇಶ ಹೋಗುತ್ತದೆ? ಇಲಾಖೆಯಲ್ಲಿರುವ ಮಾಹಿತಿಯನ್ನೇ ನಾನು ಕೇಳಿದ್ದೇನೆ. ಅದನ್ನು ಜೆರಾಕ್ಸ್ ಮಾಡಿ ಉತ್ತರ ಕೊಡುವುದಕ್ಕೆ ಎಷ್ಟು ಸಮಯ ಬೇಕು? ಮಾನ್ಯ ಸಚಿವರು ಪ್ರಾಮಾಣಿಕವಾಗಿದ್ದಾರೆಂದು ನಾನು ಭಾವಿಸಿದ್ದೇನೆ. ದಯವಿಟ್ಟು ಅವರು ಇದನ್ನು ಗಂಭೀರವಾಗಿ ಪರಿಗಣಿಸಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧಪಕ್ಷದ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಮಗೆ ಮಂತ್ರಿಗಳು ಉತ್ತರ ಕೊಡುವುದಾದರೆ ಮಂತ್ರಿಗಳು ಕೊಡಲಿ. ಮಾನ್ಯ ಶ್ರೀಕಂಠೇಗೌಡರು ಉತ್ತರ ಕೊಡುವುದಾದರೆ ಉತ್ತರ ಕೊಡಲಿ. ಎಲ್ಲದಕ್ಕೂ ಒಂದು ಮಿತಿ ಬೇಕು. ಉತ್ತರ ಪಡೆಯುವುದು ಶಾಸಕರ ಹಕ್ಕು. ಉತ್ತರವನ್ನು ಕೊಡುವ ಜವಾಬ್ದಾರಿ ಇರುವುದು ಮಂತ್ರಿಗಳಿಗೆ. ಕಾಲಾವಕಾಶದ ಅಗತ್ಯತೆ ಏನು ಇದೆಯೆಂಬುದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸದೆ, ನಾಲ್ಕಾರು ವರ್ಷಗಳ ಹಿಂದಿನ ಪ್ರಕರಣಗಳನ್ನು ನಾವು ಕೇಳಿದ್ದರೆ ಅಂತಹ ಸಮಸ್ಯೆಗಳಿಗೆ ಕಾಲಾವಕಾಶ ಬೇಕೆಂದು ಕೇಳಿದರೆ ಅದನ್ನು ನಾವು ಒಪ್ಪುತ್ತೇವೆ. ನೂತನ ಪಿಂಚಣಿ ಯೋಜನೆಯ ಬಗ್ಗೆ ಸರ್ಕಾರದ ನಿಲುವನ್ನು ಹೇಳಬೇಕಾದರೆ ಕಾಲಾವಕಾಶದ ಅಗತ್ಯವೇನು? ಸರ್ಕಾರ ಸದನವನ್ನು ದಾರಿ ತಪ್ಪಿಸುತ್ತಿದೆಯೇ? ಅದು ಕೇಂದ್ರ ಸರ್ಕಾರದ್ದೋ, ರಾಜ್ಯ ಸರ್ಕಾರದ್ದೋ ನಂತರ ನೋಡೋಣ. ರಾಜ್ಯ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟ ಪಡಿಸಲಿ.

**ಸಭಾಪತಿಯವರು:–** ಮಾನ್ಯ ಅರುಣ ಶಹಾಪುರ ಅವರೇ, ಇದೊಂದು ಅಧಿವೇಶನದಲ್ಲಿ ಈ ರೀತಿಯಾಗಿದೆ. ಇನ್ನು ಮುಂದಿನ ಅಧಿವೇಶನದಲ್ಲಿ ಉತ್ತರಗಳು ಬಂದಿಲ್ಲವೆಂದು ಹೇಳುವಂತಹ ಪದ್ಧತಿಯನ್ನು ನಿಲ್ಲಿಸಬೇಕು ಎಂದು ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ ಅವರು ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಸದನದ ಬಾವಿಯೊಳಗೆ ಬಂದರು.)**

**ಸಭಾಪತಿಯವರು:–** ದಿನಾಂಕ 10.07.2018ರ ತಡೆ ಹಿಡಿಯಲಾದ ಪ್ರಶ್ನೆ ಶ್ರೀ ಎನ್.ಅಪ್ಪಾಜಿಗೌಡ.

**(ಗೊಂದಲ)**

**ಡಾ:ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಬಾವಿಯಲ್ಲಿ ನಿಂತು ಮಾತನಾಡುವ ಹಾಗೆ ಇಲ್ಲ.

**ಸಭಾಪತಿಯವರು:–** ಸದನದಲ್ಲಿ ಸಭಾಪತಿಯವರ ಕೆಲಸವೇನೆಂದರೆ ಉತ್ತರ ಬಂದಿಲ್ಲವೆಂದರೆ ಬೇಗನೆ ಉತ್ತರವನ್ನು ಒದಗಿಸಿ ಎಂದು ಹೇಳಬಹುದು. ನಾನು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ನಿನ್ನೆ ತಡೆ ಹಿಡಿಯಲಾಗಿದ್ದ ಪ್ರಶ್ನೆಗೆ ಉತ್ತರ ನೀಡಿರುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾನ್ಯ ಶಾಸಕರು ಪ್ರಶ್ನೆಯನ್ನು ಕೇಳಿದಾಗ ಸರ್ಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪರಿಸ್ಥಿತಿಗೆ ಬಂದರೆ ಯಾರು ನಮ್ಮ ರಕ್ಷಣೆಗೆ ಬರಬೇಕು? ಭೋಜನ ವಿರಾಮದ ನಂತರು ಉತ್ತರವನ್ನು ಕೊಡಿಸಿ.

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ಉತ್ತರ ಬಂದಿಲ್ಲವೆಂದು ಹೇಳಿದ್ದಾರೆ. ಬೇಗನೆ ಉತ್ತರ ಕೊಡಿ ಎಂದು ಹೇಳಿದ್ದೇನೆ. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕಾಗಿ ಕಾಲಾವಕಾಶ ಬೇಕು? ಇದು ಸರಿಯಲ್ಲ. ಇಂತಹ ಗಂಭೀರ ಪ್ರಶ್ನೆ ಬಂದಾಗ ನೀವು ನಮ್ಮ ರಕ್ಷಣೆಗೆ ಬರಬೇಕು. ಸರ್ಕಾರ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದರೆ, ಪಲಾಯನ ಸೂತ್ರ ಅನುಸರಿಸಿದರೆ ನಾವು ಸುಮ್ಮನೆ ಕುಳಿತುಕೊಳ್ಳಬೇಕೆ?

**(...ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(257) 12.07.2018 ಕೆಜಿ/ಎಕೆ 11.20**

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಮಾನ್ಯ ಸಂಕನೂರರವರೇ ದಯವಿಟ್ಟು ಒಂದು ನಿಮಿಷ ನಾನು ಹೇಳುವುದನ್ನು ಕೇಳಿ; ದಯವಿಟ್ಟು ಎಲ್ಲರೂ ಕೇಳಿ.

(ಗೊಂದಲ)

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. NPS (New Pension Scheme) ನ ಬಗ್ಗೆ ಇಡೀ ರಾಜ್ಯ ಸರ್ಕಾರಿ ನೌಕರರು ಹೋರಾಟ ಮಾಡಿರುವುದು ಎಲ್ಲಾ ಪತ್ರಿಕೆಗಳಲ್ಲಿಯೂ ವರದಿಯಾಗಿದೆ. ಅದರ ಬಗ್ಗೆ ಮಾನ್ಯ ಸಚಿವರು ಮಾಹಿತಿ ತೆಗೆದುಕೊಳ್ಳಲಿಲ್ಲವೆಂದರೆ ಹೇಗೆ? ಆ ಬಗ್ಗೆ ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಹಾಗಾಗಿ ನಾವು ಸಹ ಬಾವಿಗೆ ಇಳಿದು ಹೋರಾಟ ಮಾಡಬೇಕಾಗುತ್ತದೆ.

(ಗೊಂದಲ)

**(ಈ ಹಂತದಲ್ಲಿ ವಿರೋಧ ಪಕ್ಷದವರು ಬಾವಿಗೆ ಇಳಿದು ಧರಣಿ ನಿರತರಾದರು)**

(ಗೊಂದಲ)

**ಸಭಾಪತಿಯವರು:-** ಮಾನ್ಯ ಅರುಣ ಶಹಾಪುರರವರೇ, ತಾವು ಬಾವಿಯಲ್ಲಿ ನಿಂತುಕೊಂಡು ಮಾತನಾಡಬಾರದು.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರ ಸರ್ಕಾರ ಇದ್ದಾಗ ಅವರು ಸಮಯ ತೆಗೆದುಕೊಂಡಿಲ್ಲವೇ?

(ಗೊಂದಲ)

**ಶ್ರಿ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರೇನು ತಕ್ಷಣವೇ ಉತ್ತರ ಕೊಟ್ಟಿದ್ದಾರೆಯೇ?

(ಗೊಂದಲ)

**ಸಭಾಪತಿಯವರು:-** ಬಾವಿಯಲ್ಲಿ ನಿಂತುಕೊಂಡು ಯಾರೂ ಮಾತನಾಡಬಾರದು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಸದನದಲ್ಲಿ ಉತ್ತರ ಕೊಡುತ್ತಾರೆಂದು ಲಕ್ಷಾಂತರ ಜನ ನೌಕರರು ಕಾಯುತ್ತಿದ್ದಾರೆ. ಇದರಿಂದ ಅವರ ಹಕ್ಕಿಗೆ ಧಕ್ಕೆ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಒಂದು ನಿಮಿಷ ನನ್ನ ಮಾತು ಕೇಳಿ. ತಾವು ಸಹ ಈ ಸದನದ ಸಭಾಪತಿಗಳಾಗಿ ಕಾರ್ಯನಿರ್ವಹಿಸಿದ್ದೀರಿ. ನಾನು ಸರ್ಕಾರಕ್ಕೆ ಆದಷ್ಟು ಬೇಗನೆ ಉತ್ತರ ಕೊಡುವಂತೆ ವಿನಂತಿ ಮಾಡಿಕೊಂಡಿದ್ದೇನೆ. ಇದಕ್ಕಿಂತ ಹೆಚ್ಚಿಗೆ ಏನು ಮಾಡಬೇಕು ಹೇಳಿ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆದ್ದರಿಂದ, ಇಂದು ಮಧ್ಯಾಹ್ನದ ನಂತರವಾದರೂ ನಮಗೆ ಸರ್ಕಾರದಿಂದ ಉತ್ತರವನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಬೇಕೆಂಬುದು ನಮ್ಮ ಒತ್ತಾಯವಾಗಿದೆ.

(ಗೊಂದಲ)

**ಡಾ||ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ನಾವೂ ಕೂಡ ಕಾಲಾವಕಾಶ ಕೇಳಿದ್ದೇವೆ. ಆದ್ದರಿಂದ ತಾವು ನಮಗೆ ಕಾಲಾವಕಾಶ ಕೊಡಬೇಕು ಮತ್ತು ಧರಣಿ ನಿರತರಾಗಿರುವ ಮಾನ್ಯ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಬಾವಿಯಿಂದ ಅವರ ಸ್ಥಳಗಳಿಗೆ ತೆರಳುವಂತೆ ತಿಳಿಸಬೇಕೆಂದು ಸಹ ತಮ್ಮಲ್ಲಿ ವಿನಂತಿಸುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಕಾಲಾವಕಾಶ ಕೇಳುವುದಕ್ಕೆ ಸದನವನ್ನು ತಾವು ಮೂರು ದಿವಸಗಳ ಕಾಲ ಮುಂದೂಡುತ್ತೀರಾ? ಮಾನ್ಯ ಸಭಾನಾಯಕರನ್ನು ಕೇಳಿ, ಅವರಿಗೆ ತಾವು ಕಾಲಾವಕಾಶ ನೀಡುವುದಾದರೆ ಇದಕ್ಕೆ ಸರ್ಕಾರ ಉತ್ತರ ಕೊಡಲು ready ಇದೆಯೇ? ಇವತ್ತು ಸಂಜೆ ಸದನ ಮುಗಿಯುತ್ತಿದೆ. ಈಗ ಸರ್ಕಾರ ಕಾಲಾವಕಾಶ ಕೇಳಿದರೆ ಹೇಗೆ?

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ. ಆದರೂ ಸಭಾಪತಿಯವರು ಆದಷ್ಟು ಬೇಗ ಉತ್ತರ ಕೊಡಿ ಎಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಳಿಸಿದ್ದಾರೆ. ಸಭಾಪತಿಯವರು ಪೀಠದಲ್ಲಿ ಕುಳಿತುಕೊಂಡು ಇದಕ್ಕಿಂತ ಹೆಚ್ಚಿಗೆ ಏನು ಮಾಡುವುದಕ್ಕೆ ಆಗುತ್ತದೆ? ನನ್ನದು demand ಇದೆ, ಅವರು ಈ ರೀತಿ ಧರಣಿ ಮಾಡುವುದು ಒಳ್ಳೆಯದಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸರ್ಕಾರ ಪಲಾಯನ ಸೂತ್ರ ಅನುಸರಿಸುವುದು ಬೇಡ. ಮಧ್ಯಾಹ್ನ ಊಟವಾದ ನಂತರವಾದರೂ ನಮಗೆ ಸರ್ಕಾರದಿಂದ ಉತ್ತರ ಕೊಡಿಸಬೇಕೆಂಬುದು ನಮ್ಮ ಒತ್ತಾಯಪೂರ್ವಕವಾದ ವಿನಂತಿಯಾಗಿದೆ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ನಾನು ಹೇಳುವುದನ್ನು ಕೇಳಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ವಿರೋಧ ಪಕ್ಷದ ನಾಯಕರಿದ್ದೀರಿ, ನನ್ನ ಮಾತು ಕೇಳಿ. ದಯಮಾಡಿ ನೀವು ಧರಣಿ ನಡೆಸುತ್ತಿರುವವರೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳುವಂತೆ ತಿಳಿಸಿ. ಇದಕ್ಕೆಲ್ಲಾ ಒಂದು ವ್ಯವಸ್ಥೆ ಇದೆ. ಅವರು ಕಾಲಾವಕಾಶ ಕೇಳಿದ್ದಾರೆ. ಸರ್ಕಾರದವರಿಗೆ ನಾನು ಈಗಲೇ ಉತ್ತರ ಕೊಡುವಂತೆ ಹೇಳುವುದಕ್ಕೆ ಆಗುವುದಿಲ್ಲ. ಆದಷ್ಟು ಬೇಗನೆ ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಸಚಿವರೇ, ಇಂದು ಮಧ್ಯಾಹ್ನ ಉತ್ತರ ಕೊಡುವುದಕ್ಕೆ ತಾವು ready ಇದ್ದೀರಾ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರ ಕಾಲಾವಕಾಶ ಕೇಳಲಿ. ಮಾನ್ಯ ಸಚಿವರು ಈ ಸಂದರ್ಭದಲ್ಲಿ ನಮಗೆ ಒಂದು ಹೇಳಿಕೆಯನ್ನಾದರೂ ನೀಡಬಹುದಲ್ಲವೆ.

(ಗೊಂದಲ)

**ಡಾ||ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಕಾಲಾವಕಾಶ ಕೇಳಿದ್ದಾರೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಭಾಪತಿಯವರ ಪೀಠದ ಬಗ್ಗೆ ಅವರಿಗೆ ಗೌರವ ಇಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷಕ್ಕೆ ಉತ್ತರ ಕೊಡಿ ಎಂದು ಕೇಳುವ ಹಕ್ಕು ಇದೆ. ನಮಗೆ ತಾವು ನ್ಯಾಯ ದೊರಕಿಸಿ ಕೊಡಬೇಕು.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲಾ ಪ್ರಶ್ನೆಗಳಿಗೂ ಈ ಸದನದಲ್ಲಿ ಸಮರ್ಪಕವಾಗಿ ಉತ್ತರ ಬರುತ್ತಿದೆ; ಮುಂದೂಡಲ್ಪಟ್ಟ ಪ್ರಶ್ನೆಗಳಿಗೂ ಉತ್ತರ ಬರುತ್ತಿದೆ. ಬಹುಶಃ ಈ ಪ್ರಶ್ನೆಗೆ ಮಾತ್ರ ಉತ್ತರ ಕೊಡುವುದಕ್ಕೆ ಸಾಧ್ಯವಾಗಿಲ್ಲ. New Pension Scheme ಕೇಂದ್ರದಿಂದ ಬಂದಿರುವಂತಹದ್ದು. ಅದಕ್ಕಾಗಿಯೇ ಅದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಪಡೆದುಕೊಂಡ ನಂತರ ಉತ್ತರ ಕೊಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಈ ರೀತಿ ಸರ್ಕಾರ ಇದುವರೆಗೆ ಎಷ್ಟು ಪ್ರಶ್ನೆಗಳಿಗೆ ಉತ್ತರವನ್ನು ತಡೆಹಿಡಿದಿದ್ದಾರೆ?

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಈ ರೀತಿ ನಡೆದುಕೊಳ್ಳುವುದು ಸದನದ ಪದ್ಧತಿ ಅಲ್ಲ. ನೀವು ಈಗಲೇ ಆಗಬೇಕೆಂದು ಹೇಳುವುದು ಸಹ ಸರಿಯಲ್ಲ. ನನಗೆ ಕೊಟ್ಟಿರುವಂತಹ duty ಏನೆಂದರೆ, ಅವರು ಸಮಯ ಕೇಳಿದ್ದಾರೆ. ಅವರು ಸಮಯ ಕೇಳಿದ ಮೇಲೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಸಹ ಈಗಲೇ ಉತ್ತರ ಕೊಡಿ ಎಂದು ಸ್ಪಷ್ಟವಾಗಿ ಅವರಿಗೆ ಹೇಳುವುದಕ್ಕಾಗುವುದಿಲ್ಲ. ನೀವು ಬಾವಿಯಲ್ಲಿ ಕುಳಿತುಕೊಂಡು ನನಗೆ ಹೇಳುತ್ತೀರಿ. ನಾನು ನನ್ನ ಜೀವನದಲ್ಲಿ ಒಂದು ದಿವಸವು ಸಹ ನಾನು ಈ ರೀತಿ ಬಾವಿಯಲ್ಲಿ ಕುಳಿತುಕೊಂಡು ಮಾತನಾಡಿರುವುದಿಲ್ಲ. ಆದ್ದರಿಂದ ನೀವು ನನಗೆ ಆ ರೀತಿ ಹೇಳಬೇಡಿ. ಮಾನ್ಯ ಸಚಿವರೆ ಯಾವಾಗ ಉತ್ತರ ಕೊಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಿಬಿಡಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ಬಾವಿಯಲ್ಲಿ ನಿಂತುಕೊಂಡು ಮಾತನಾಡಬೇಡಿ. ದಯವಿಟ್ಟು ಎಲ್ಲರೂ ಒಂದು ನಿಮಿಷ ಸುಮ್ಮನಿರಿ. ಮಾನ್ಯ ಸಚಿವರೇ, ನಿಮಗೆ ಯಾವಾಗ ಉತ್ತರ ಕೊಡುವುದಕ್ಕೆ ಎಂಬುದನ್ನು ಆಗುತ್ತದೆ ಹೇಳಿ.

**ಶ್ರೀ ಎನ್.ಮಹೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ನನಗೆ ಈ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಲು 15 ದಿವಸಗಳ ಕಾಲಾವಕಾಶ ಬೇಕೆಂದು ಕೇಳಿದ್ದೆ. ನನಗೆ 10 ದಿವಸಗಳ ಕಾಲಾವಕಾಶವನ್ನು ಕೊಟ್ಟರೆ ಉತ್ತರ ಕೊಡುತ್ತೇನೆ.

(ಗೊಂದಲ)

**ಸಭಾಪತಿಯವರು:–** ಆಯಿತು. ದಯಮಾಡಿ ಎಲ್ಲರೂ ಬಾವಿಯಿಂದ ತಮ್ಮ ತಮ್ಮ ಸ್ಥಳಗಳಿಗೆ ತೆರಳಿ, ಸದನವನ್ನು ನಡೆಸುವುದಕ್ಕೆ ಬಿಡಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಆ ರೀತಿ ಆಗುವುದಿಲ್ಲ. ಮಾನ್ಯ ಸಚಿವರು ಈ ವಿಚಾರದಲ್ಲಿ ಏನು ಪ್ರಗತಿಯಾಗಿದೆ ಎಂಬ ಬಗ್ಗೆ ಮಧ್ಯಾಹ್ನ ಒಂದು statement ಮಾಡಲಿ.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಒಬ್ಬರಿಗಿಂತ ಹೆಚ್ಚಿಗೆ ಮಾತನಾಡಿದಂತಹ ಸಂದರ್ಭದಲ್ಲಿ ಅದು ಕಡತಕ್ಕೆ ಹೋಗಬಾರದೆಂದು ಸೂಚಿಸಿದರು)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, the House is not in order. ನಾನು ಪೀಠಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ; ದಯವಿಟ್ಟು 10 ನಿಮಿಷಗಳ ಕಾಲ ಸದನವನ್ನು adjourn ಮಾಡಿ, ಆಡಳಿತ ಮತ್ತು ವಿರೋಧ ಪಕ್ಷದ ನಾಯಕರನ್ನು ಕರೆದು ಈ ಗೊಂದಲವನ್ನು ಬಗೆಹರಿಸಬೇಕೆನ್ನುವುದು ನನ್ನ ಸಲಹೆಯಾಗಿದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಾನು ಎಷ್ಟು ಬಾರಿ ಹೇಳಬೇಕು? ನಾನು ಕೈ ಮುಗಿದು ಕೇಳಿಕೊಳ್ಳಬೇಕೆ? ಅದನ್ನು ನೀವೂ ಅರ್ಥ ಮಾಡಿಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. ಇದಕ್ಕೆ ನಮ್ಮೆಲ್ಲರ ಆಗ್ರಹ ಇದೆ. NPS ಅನ್ನು ತೆಗೆದು OPS (Old Pension Scheme) ತರಬೇಕೆಂದು ನಾವೆಲ್ಲರೂ ಸರ್ಕಾರಕ್ಕೆ ಆಗ್ರಹ ಮಾಡುತ್ತಿದ್ದೇವೆ, ಈಗಲೂ ಸಹ ಅದನ್ನೇ ಮಾಡುತ್ತಿದ್ದೇವೆ. ಆದರೆ, ಮಾನ್ಯ ಸಚಿವರು 10 ದಿವಸಗಳ ಕಾಲಾವಕಾಶ ಕೇಳಿರುತ್ತಾರೆ. ಅದರಂತೆ ಮಾನ್ಯ ಸಭಾಪತಿಯವರು ಸಹ ಆದಷ್ಟು ಬೇಗ ಉತ್ತರ ಕೊಡಿ ಎಂದು ಮಾನ್ಯ ಸಚಿವರಿಗೆ ಹೇಳಿದ್ದಾರೆ. ಹಾಗಾಗಿ, 10 ದಿವಸ ಕಾಲಾವಕಾಶ ಕೊಡುವುದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ. ಈ ಸದನ orderನಲ್ಲಿ ಇಲ್ಲದೇ ಇರುವುದರಿಂದ, ಈಗ ಪ್ರಶ್ನೋತ್ತರ ನಡೆಸುವುದು ಸರಿಯಲ್ಲ. ಆದರೆ, ಪೀಠದಿಂದ ಆದಷ್ಟು ಬೇಗ ಕೊಡಿ ಎಂದು ಆದೇಶವಾಗಿರುವುದರಿಂದ ತಾವು ಎಲ್ಲರೂ ಬಾವಿಯಿಂದ ಹೊರಗೆ ಬಂದು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಂಡು ಈ ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

**(ಮುಂದು..)**

(258):12.07.2018-11.30-ಎಂವಿ-ಎಕೆ

**ಸಭಾಪತಿಯವರು:-** ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಬಿಡುತ್ತಿಲ್ಲ. ಮಾನ್ಯ ಶ್ರೀಕಂಠೇಗೌಡರೇ, ಕುಳಿತುಕೊಳ್ಳಿ. ಮಾನ್ಯ ಸಚಿವರೇ ಒಂದು ಕೆಲಸ ಮಾಡಿ, ನೀವು ನಾಳೆ ಈ ವಿಚಾರವಾಗಿ ಒಂದು ಸಭೆಯನ್ನು ಕರೆದು, ಅದರ ಬಗ್ಗೆ ಚರ್ಚೆ ಮಾಡಿ, ಅಲ್ಲಿ ಏನು difficulties ಇದೆ. ಏನು ಮಾಡಬೇಕೆಂದು ಹೇಳಿ. ನಾನು ಈ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅವರು ಅದನ್ನು ಜಾರಿ ಮಾಡುವುದಕ್ಕೆ ಶೇಕಡ 90ರಷ್ಟು ಒಪ್ಪಿಕೊಂಡಿದ್ದಾರೆ. ಆ ಹಿನ್ನೆಲೆಯಲ್ಲಿ ನಾಳೆಯೇ ಸಭೆಯನ್ನು ಕರೆದು ಚರ್ಚೆ ಮಾಡಿ, ಒಂದು ತೀರ್ಮಾನ ಮಾಡಿ.

**ಶ್ರೀ ಎನ್.ಮಹೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಎನ್.ಪಿ.ಎಸ್.ಗೆ ಸಂಬಂಧಪಟ್ಟಂತೆ ನಾಳೆ ಸಭೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಂಕನೂರರವರೇ ಹಾಗೂ ಮಾನ್ಯ ಅರುಣ ಶಹಾಪುರರವರೇ ನಿಮ್ಮಿಬ್ಬರಿಗೂ ಹೇಳುತ್ತೇನೆ. ಬಹಳ ಮಂದಿ ನಿಂತುಕೊಂಡು ಸಿಕ್ಕಾಪಟ್ಟೆ ಮಾತನಾಡಿದರೆ ನಾನು ಅನುಮತಿ ಕೊಡುವುದಿಲ್ಲ. ನಿಮ್ಮದು ಇದೆ ಪ್ರವೃತಿ ಆಗಿಹೋಗಿದೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರಿಗೆ ಸ್ವಲ್ಪ ಕಾನೂನಿನ ಅರಿವಿನ ಬಗ್ಗೆ ಹೇಳಿ.

**ಚುಕ್ಕೆ ಪ್ರಶ್ನೆ: 163**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಅವರಿಗೆ ನನ್ನ ವಂದನೆಗಳು.

**ಸಭಾಪತಿಯವರು:-** ಈಗ ಅರುಣ ಶಹಾಪುರರವರ ಪ್ರಶ್ನೆ.

**ಚುಕ್ಕೆ ಪ್ರಶ್ನೆ: 131**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಅನ್ವರ್ ಮಾನಪ್ಪಾಡಿಯವರ ವರದಿಯನ್ನು ಸದನದಲ್ಲಿ ಮಂಡಿಸಬೇಕು ಎಂಬುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಈಗಾಗಲೇ ಹೈಕೋರ್ಟ್ ಕೂಡ ಸೂಚನೆಯನ್ನು ನೀಡಿದೆ. ಆ ವರದಿಯನ್ನು ಎರಡೂ ಸದನದಲ್ಲಿ ಮಂಡನೆ ಮಾಡಬೇಕೆಂದು ಹೇಳಿದೆ. ಆದರೆ, ಅವರು ಹೇಳಿದ್ದಾರೆ, ವರದಿ ಮಂಡನೆ ಮಾಡಬೇಕೆಂದು ಹೈಕೋರ್ಟ್ ಹೇಳಿದಾಗ, ಅವರು Cabinetನಲ್ಲಿ ಮಂಡಿಸಿಬಿಟ್ಟು Action Taken Report ಅನ್ನು ಮಂಡಿಸಿದ್ದೇವೆಂದು ಹೇಳಿದ್ದಾರೆ. ಆದರೆ, ವರದಿಯನ್ನೇ ಮಂಡಿಸಿ ಎಂದು ಹೈಕೋರ್ಟ್ ಹೇಳಿದೆ. ಆ ಹಿನ್ನೆಲೆಯಲ್ಲಿ ವರದಿಯನ್ನು ಯಾವಾಗ ಮಂಡಿಸುತ್ತಾರೆ. ಅದನ್ನು ತಕ್ಷಣ ಮಂಡಿಸಬೇಕು, ಹೈಕೋರ್ಟ್‌ನ ಆದೇಶದ ಉಲ್ಲಂಘನೆ ಆಗುವುದಿಲ್ಲವೇ ಎಂಬುದರ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಕೋರ್ಟ್ ಆದೇಶ ಆದಮೇಲೆ, ಈ ವಿಷಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಬಂದಿತ್ತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕ:05.03.2016ರಲ್ಲಿ ವಿಧಾನಸಭೆಗೆ ಬಂದಿತ್ತು, ಅದರ ಪ್ರತಿ ನನ್ನ ಬಳಿ ಇದೆ. ಆದರೆ, ವಿಧಾನ ಪರಿಷತ್ತಿಗೆ ಬಂದಿರುವ ಪ್ರತಿ ನನಗೆ ಸಿಕ್ಕಿಲ್ಲ. ನೀವುಗಳು ಚರ್ಚೆ ಮಾಡಿಲ್ಲ, ನೀವು ಅದರ ಬಗ್ಗೆ ಚರ್ಚೆ ಮಾಡಬೇಕಾಗಿತ್ತು. ಕೋರ್ಟ್ ಆದೇಶದ ಪ್ರಕಾರ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಎರಡೂ ಸದನಗಳಲ್ಲೂ ಚರ್ಚೆಗೆ ಬಂದಿತ್ತು.

**ಸಭಾಪತಿಯವರು:–** ಈಗ ಏನು ಮಾಡುತ್ತೀರಿ ಅದರ ಬಗ್ಗೆ ಹೇಳಿ.

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:–** ಮಾನ್ಯ ಸಭಾಪತಿಯವರೇ, ಇದು ಕೌನ್ಸಿಲ್‌ಗೆ ಬಂದಾಗ ಅದರ ಬಗ್ಗೆ ಚರ್ಚೆಯನ್ನೇ ಮಾಡಿಲ್ಲ. ಅದು ಆದಮೇಲೆ ಇದನ್ನು ಕ್ಯಾಬಿನೆಟ್‌ನಲ್ಲಿ ತಂದಾಗ ವರದಿಯ ವಿಚಾರಕ್ಕೆ ಅದು ಕ್ಯಾಬಿನೆಟ್‌ನಲ್ಲಿ reject ಆಯಿತು. ಅದು ಕ್ಯಾಬಿನೆಟ್‌ನಲ್ಲಿ ಚರ್ಚೆ ಆದಮೇಲೆ ಮತ್ತೆ ಕೋರ್ಟ್‌ಗೆ ಹೋದರು. ನಾವು ದಿನಾಂಕ:10.09.2015ರಲ್ಲಿ ಕೋರ್ಟ್‌ನಲ್ಲಿ Review Petition ಹಾಕಿಕೊಂಡಿದ್ದೇವೆ. ಆ Review Petition pending ಇದೆ. ಅದು ಕೋರ್ಟ್‌ನಲ್ಲಿ ನಡೆಯುತ್ತಿದೆ. ಮುಂದೆ ಕೋರ್ಟ್‌ನಲ್ಲಿ ತೀರ್ಮಾನ ಏನಾಗುತ್ತದೆ ಎಂದು ನೋಡಿಕೊಂಡು ಕ್ರಮ ಕೈಗೊಳ್ಳಬಹುದು. ಅದರ ಜೊತೆಗೆ ಮಾನ್ಯ ಅರುಣ ಶಹಾಪುರರವರೇ, ಈ ವರದಿಯ ಬಗ್ಗೆ ನಾನು note ಮಾಡಿಕೊಂಡಿದ್ದೇನೆ, ಅದಕ್ಕೆ ಸಂಬಂಧಿಸಿದಂತೆ ತಮಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನನಗೂ ಸಹ ಅದರ ಬಗ್ಗೆ ಕಾಳಜಿ ಇದೆ. ನಾನು ಯಾವಾಗ ಮಂತ್ರಿಯಾದೆ ಆಗ Press Meetನಲ್ಲೇ ಹೇಳಿದ್ದೇನೆ. ಅವರ ವರದಿಯನ್ನು ನೋಡುತ್ತೇನೆ, ಆ ವರದಿಯಲ್ಲಿ ಏನಾದರೂ ಸತ್ಯ ಇದ್ದರೆ, ನನ್ನ ತಂದೆಯಾದರೂ ಅವರನ್ನು ಕ್ಷಮಿಸುವುದಿಲ್ಲ ಎಂದು ಹೇಳಿದ್ದೇನೆ. ಅದು ಆದಮೇಲೆ detail ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಮಾಹಿತಿಯನ್ನು ತೆಗೆದುಕೊಂಡು ಆದಮೇಲೆ ಅನ್ವರ್ ಮಾನಪ್ಪಾಡಿಯವರು ಛೇರ್ಮನ್ ಆಗಿದ್ದರು. ಅವರು ಛೇರ್ಮನ್ ಆಗಿದ್ದ ಅವಧಿಯಲ್ಲಿ ಆ ವರದಿಯನ್ನು ಕೊಟ್ಟಿಲ್ಲ. ಅವರು ಸುಮಾರು ಒಂದೂವರೆ ವರ್ಷ ಛೇರ್ಮನ್ ಆಗಿದ್ದರು. ಅವರು ಅವರ periodನಲ್ಲಿ ಏಕೆ ವರದಿಯನ್ನು ಕೊಡಲಿಲ್ಲ? ಅವರ ಅವಧಿ ಮುಗಿದು ಒಂದು ತಿಂಗಳು ಆದಮೇಲೆ ದಿನಾಂಕ:26.03.2012ಕ್ಕೆ ವರದಿಯನ್ನು ಕೊಡುತ್ತಾರೆ. ಏಕೆ ಅವರು ಆ ವರದಿಯನ್ನು ಅವರ ಅವಧಿಯಲ್ಲಿ ಕೊಡಬಹುದಾಗಿತ್ತಲ್ಲ? ಆಯಿತು, ಆಗ ನಿಮ್ಮದೇ ಬಿಜೆಪಿ ಸರ್ಕಾರ ಇತ್ತು. ಮಾಜಿ ಮುಖ್ಯಮಂತ್ರಿಗಳಾದ
ಶ್ರೀ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದರು, ಆ ಸಮಯದಲ್ಲಿ ವರದಿಯನ್ನು ಕೊಟ್ಟರು. ಅದರಲ್ಲಿ ಸತ್ಯ ಇದ್ದಿದ್ದರೆ, ನೀವು ಆ ವರದಿಯನ್ನು ನೋಡಿ ಅದರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾಗಿತ್ತು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರು ಏತಕ್ಕೆ ಅದನ್ನು ಒಂದೂವರೆ ವರ್ಷ pending ಇಟ್ಟಿದ್ದರು. ಇವರ ಅವಧಿಯಲ್ಲೂ, ಇವರು ಇಳಿದ ಮೇಲೆ ವರದಿಯನ್ನು ಕೊಡುತ್ತಾರೆ. ಅದಕ್ಕೆ ಅವರು ಉತ್ತರ ಕೊಡಲಿ. ಹೈಕೋರ್ಟ್‌ನಲ್ಲಿ ಎರಡೂ ಸದನಗಳಲ್ಲೂ ಅದನ್ನು ಮಂಡಿಸಬೇಕೆಂದು ಆದೇಶ ಮಾಡಿದ್ದಾರೆ. ಅದರಂತೆ ಅದನ್ನು ಎರಡೂ ಸದನಗಳಲ್ಲೂ ಮಂಡಿಸಿದ್ದೇವೆ. ಆದರೆ, ಅದು ಕ್ಯಾಬಿನೆಟ್‌ನಲ್ಲಿ ಅದು reject ಆಯಿತು.

**ಸಭಾಪತಿಯವರು:–** ಮಾನ್ಯ ಸಚಿವರೇ, ಒಂದು ನಿಮಿಷ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ 2012ರಲ್ಲಿ ಅನ್ವರ್ ಮಾನಪ್ಪಾಡಿ ವರದಿಯನ್ನು ಸಲ್ಲಿಸಿದ್ದು. ನಾವು ಆಗ ಬೇರೆ ಬೇರೆ ಕಾರಣಗಳನ್ನು ಕೇಳಿದ್ದೇವು, ಅದರಲ್ಲಿ ಇರುವಂತಹ ಗಂಭೀರತೆ, ಲಕ್ಷಾಂತರ ಕೋಟಿ ರೂಪಾಯಿ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತಹ ಆಸ್ತಿಯನ್ನು ಯಾರ್ಯಾರೋ ಹೊಡೆದಿದ್ದಾರೆ. ಹಾಗಾಗಿ ಇದು ಬಹಳ ದೊಡ್ಡ ಪ್ರಕರಣವಾಗುತ್ತದೆ. ಗಣಿ ಹಗರಣಕ್ಕಿಂತಲ್ಲೂ ದೊಡ್ಡ ಹಗರಣವಾಗುತ್ತದೆ. ಹಾಗಾಗಿ ಇದರ ಸಮಗ್ರ ವರದಿಯನ್ನು ಸದನದಲ್ಲಿ ನಾವು ಮಂಡಿಸಬೇಕು ಎನ್ನುವಂತಹ ಆಗ್ರಹವನ್ನು ಮಾನ್ಯ ಗೋ.ಮಧುಸೂದನರವರು ಇದ್ದಾಗ ಅದನ್ನು ಪ್ರಾರಂಭ ಮಾಡಿದ್ದರು. ಆಗ ಸರ್ಕಾರ ಏನನ್ನು ಹೇಳಿತು ಎಂದರೆ, ಅದರ ವರದಿಯನ್ನು ಮಂಡಿಸುತ್ತೇವೆಂದು ಸರ್ಕಾರ ಒಪ್ಪಿಕೊಂಡಿತು. ಸರ್ಕಾರ ಆ ವರದಿಯನ್ನು ಸಚಿವ ಸಂಪುಟದ ಮುಂದೆ ತಂದಾಗ, ನಾವು ಬಹಳ ಹೋರಾಟ ಮಾಡಿದ ನಂತರ, ಸರ್ಕಾರ ಈ ಸದನಲ್ಲಿ ಏನನ್ನು ಹೇಳಿತು ಎಂದರೆ, ಈ ವರದಿಯಲ್ಲಿರುವಂತಹ ಸಾರಾಂಶವನ್ನು ಮಾತ್ರ ಸರ್ಕಾರ ಮಂಡಿಸಿತು. ಆಗ ನಾವು ಹೇಳಿದೆವು, ಅದರ ಸಮಗ್ರ ವರದಿಯನ್ನು ಮಂಡಿಸಬೇಕು. ಇದರಲ್ಲಿ ಬಹುದೊಡ್ಡ ರಾಜಕಾರಣಿಗಳು ಇದ್ದಾರೆ ಮತ್ತು ಬಹುದೊಡ್ಡ ಶಾಮಿಲಾತಿಯಾಗಿದೆ, ಅಲ್ಪಸಂಖ್ಯಾತರ ಆಸ್ತಿಯಲ್ಲಿ ಲಕ್ಷಗಟ್ಟಲೆ ಕೋಟಿ ಹಣ ಇದರಲ್ಲಿ ದುರುಪಯೋಗ ಆಗಿದೆ ಎನ್ನುವಂತಹ ಮಾತುಗಳನ್ನು ನಾವು ಹೇಳಿದೆವು. ಈಗಲೂ ಸಹ ನಾವು ಪ್ರಶ್ನೆಯನ್ನು ಕೇಳುವಂಥದ್ದು, ಶ್ರೀ ಎಸ್.ಕೆ.ಕಾಂತ ಎಂಬುವವರು ಮಾಜಿ ಕಾರ್ಮಿಕ ಸಚಿವರು ನ್ಯಾಯಾಲಯಕ್ಕೆ ಹೋದರು. ಅವರು ನ್ಯಾಯಾಲಯಕ್ಕೆ ಹೋದಾಗ, ನ್ಯಾಯಾಲಯ ಏನು ನಿರ್ದೇಶನ ಕೊಟ್ಟಿತು, ಅದಕ್ಕೆ ಅವರು ಪ್ರಸ್ತಾಪನೆಯನ್ನು ಕೊಟ್ಟಿದ್ದಾರೆ. ಆದರೆ, ಅದು ಬೇರೆ. ಈಗ ಅನ್ವರ್ ಮಾನಪ್ಪಾಡಿಯವರ ವರದಿ ಸರ್ಕಾರದ ವಶದಲ್ಲಿ ಇದೆ. ಈ ವರದಿಯನ್ನು ಸಮಗ್ರವಾಗಿ ಈ ಸದನದಲ್ಲಿ ಮಂಡಿಸಿ ಎನ್ನುವುದಷ್ಟೇ ನಮ್ಮ ಆಗ್ರಹ. ಇದನ್ನು ಮಂಡಿಸುವುದಕ್ಕೆ ಕೋರ್ಟ್, ಕಾನೂನೂ ಏನು ಅಡ್ಡಿ ಬರುವುದಿಲ್ಲ. ಸರ್ಕಾರ ಅದನ್ನು ಮಂಡಿಸುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನಸ್ಸು ಮಾಡಿ ಅದನ್ನು ಮಂಡನೆ ಮಾಡಿದರೆ, ಸರ್ಕಾರ ಪಾರದರ್ಶಕವಾಗಿದೆ ಎನ್ನುವಂತಹ ಸಂದೇಶ ರಾಜ್ಯದ ಜನರಿಗೆ ಹೋಗುತ್ತದೆ. ಅದು ಆಗದಿದ್ದರೆ ಸರ್ಕಾರ ಅದನ್ನು ಮುಚ್ಚಿ ಇಡುತ್ತದೆ ಎನ್ನುವಂತಹ ಆಪಾದನೆ ಸರ್ಕಾರಕ್ಕೆ ಬರುತ್ತದೆ. ನೀವು ಪಾರದರ್ಶಕವಾಗಿ ಇರುವುದಕ್ಕೆ ಯೋಚನೆ ಮಾಡುತ್ತೀರೋ? ಅದನ್ನು ಸರ್ಕಾರ ಮುಚ್ಚಿ ಹಾಕುತ್ತದೆ ಎನ್ನುವಂತಹ ಆಪಾದನೆಯನ್ನು ಹೊತ್ತಿಕೊಳ್ಳುವುದಕ್ಕೆ ತಯಾರು ಇದ್ದಾರೋ? ಇದರ ಬಗ್ಗೆ ಸರ್ಕಾರದ ನಿಲುವು ಏನು ಅದನ್ನು ಹೇಳಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ ಏನೆಂದು ಹೇಳಿ.

**ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಹೇಳುತ್ತೇನೆ. ಆಗ ಒಂದೂವರೆ ವರ್ಷ ಅವರ ಸರ್ಕಾರ ಇತ್ತು. ಆಗ ಅವರು ಏಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ? ಆ ಸಮಯದಲ್ಲಿ ಅವರು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಈಗ ಕೇಂದ್ರದಲ್ಲೂ ಅವರದೇ ಸರ್ಕಾರ ಇದೆ. ಆ ವರದಿಯಲ್ಲಿ ಎಲ್ಲೋ ಒಂದು ಕಡೆ ಸತ್ಯ ಇದ್ದಿದ್ದರೆ. ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವು. ನನಗೆ ಆ ವರದಿಯಲ್ಲಿ ಎಲ್ಲೋ ಸತ್ಯವಿಲ್ಲವೆಂದು ಅನಿಸುತ್ತಿದೆ. ಅದು ಸತ್ಯ ಇದ್ದಿದ್ದರೆ, ಒಂದೂವರೆ ವರ್ಷ ಕಾಲ ಅವರ ಸರ್ಕಾರ ಇತ್ತು. ಆ ಸಮಯದಲ್ಲಿ ಅದರ ವಿರುದ್ಧ ಕ್ರಮ ತೆಗೆದುಕೊಳ್ಳಲಿಲ್ಲ. ಈಗ ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದೆ. ಒಂದು ಸಿಬಿಐ ತನಿಖೆ ಮಾಡಬೇಕಾಗಿತ್ತು ನಾಲ್ಕು ವರ್ಷದಿಂದ.

(ಗೊಂದಲ)

ನೀವು refer ಮಾಡಬೇಕು. ನೀವು ಈಗ ಕೇಳಿ ಅದನ್ನು ನಾನು refer ಮಾಡುತ್ತೇನೆ. I am ready. I am ready for that. ...*(Interruptions)*... I am ready for that.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, CBIಗೆ refer ಮಾಡಿ ಸರ್.

**ಸಭಾಪತಿಯವರು:-** ಅವರು refer ಮಾಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಈಗ ಮುಗಿಯಿತು.

(ಗೊಂದಲ)

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಅದನ್ನು CBIಗೆ refer ಮಾಡಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅದು CBIಗೆ refer ಆಯಿತೆ? CBIಗೆ refer ಮಾಡಿರುವುದಕ್ಕೆ ಧನ್ಯವಾದಗಳು.

**ಸಭಾಪತಿಯವರು:-** ಮಾನ್ಯ ಸದಸ್ಯರುಗಳು ದಯಮಾಡಿ ಮಾತನಾಡುವುದು ಬೇಡ. ಸದನ ಹೇಗೆ ನಡೆಯಬೇಕು, ಹೀಗಾದರೆ ಹೇಗೆ? ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀಮತಿ ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:12ನೇ ಜುಲೈ 2018, ಸಮೂಹ-IVರ ಲಿಖಿತ ಮೂಲಕ ಉತ್ತರಿಸುವ ಒಟ್ಟು 89 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**2. ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

**ಡಾ.ಜಯಮಾಲ ರಾಮಚಂದ್ರ (ಸಭಾನಾಯಕರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, 4ನೇ ಹಣಕಾಸು ಆಯೋಗವು ರಾಜ್ಯದ ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮತ್ತು ಇತರೆ ಅಧಿಕಾರದ ಬಗ್ಗೆ ನೀಡಿರುವ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು. ಮಾನ್ಯ ವಿರೋಧಪಕ್ಷದ ನಾಯಕರೇ, ತಮ್ಮದು ಏನು ಗಲಾಟೆ?

**ಡಾ.ಜಯಮಾಲ ರಾಮಚಂದ್ರ (ಸಭಾನಾಯಕರು) (ಮಾನ್ಯ ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ಹೆಚ್.ಶಿವಶಂಕರ ರೆಡ್ಡಿ, ಕೃಷಿ ಸಚಿವರು, ಅವರ ಹೆಸರಿನ ಮುಂದಿರುವ ಕಾಗದಪತ್ರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ.ಜಯಮಾಲ ರಾಮಚಂದ್ರ (ಸಭಾನಾಯಕರು) (ಮಾನ್ಯ ಸಣ್ಣ ಕೈಗಾರಿಕಾ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಶ್ರೀನಿವಾಸ್, ಸಣ್ಣ ಕೈಗಾರಿಕೆ ಸಚಿವರು, ಅವರ ಹೆಸರಿನ ಮುಂದಿರುವ ಕಾಗದಪತ್ರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ಡಾ.ಜಯಮಾಲ ರಾಮಚಂದ್ರ (ಸಭಾನಾಯಕರು) (ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ವೆಂಕಟರಾವ್ ನಾಡಗೌಡ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು, ಅವರ ಹೆಸರಿನ ಮುಂದಿರುವ ಕಾಗದಪತ್ರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

3. **ನಿಯಮ 330(ಎ) ಮೇರೆಗೆ ಪ್ರಸ್ತಾಪಿಸಿರುವ ವಿಷಯಕ್ಕೆ ಸಚಿವರಿಂದ ಉತ್ತರ.**

**ವಿಷಯ:** ಪದವಿ ಪೂರ್ವ ಶಿಕ್ಷಣದ ಶಿಕ್ಷಕರ ನೇಮಕಾತಿ ಕಳೆದ ಮೂರು ವರ್ಷಗಳಿಂದ ನೇಮಕವಾಗದೇ ಗೊಂದಲದಲ್ಲಿರುವ ವಿಷಯದ ಬಗ್ಗೆ.

****

**ಶ್ರೀ ಎನ್.ಮಹೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ದಿನಾಂಕ 03.07.2018ರಂದು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ನಿಯಮ 330(ಎ)ರಡಿಯಲ್ಲಿ ಪ್ರಸ್ತಾಪಿಸಿದಂತಹ ಪದವಿ ಪೂರ್ವ ಶಿಕ್ಷಣದ ಶಿಕ್ಷಕರ ನೇಮಕಾತಿ ಕಳೆದ ಮೂರು ವರ್ಷಗಳಿಂದ ನೇಮಕವಾಗದೇ ಗೊಂದಲದಲ್ಲಿರುವ ವಿಷಯದ ಬಗ್ಗೆ ನೀಡಿರುವ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ.)**

4. **ವರದಿಯನ್ನು ಒಪ್ಪಿಸುವುದು.**

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಅಧ್ಯಕ್ಷರು, ಕರ್ನಾಟಕ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಹಾಗೂ ಖರೀದಿಸಲು ಅನುಸರಿಸಿರುವ ಮಾನದಂಡ ಹಾಗೂ ಖರೀದಿಗೆ ತಗುಲಿದ ವೆಚ್ಚ ಮತ್ತು ಈವರೆಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯಾರ್ಥಿಗಳಿಗೆ ವಿತರಿಸಲಾಗಿರುವ ಲ್ಯಾಪ್‌ಟಾಪ್‌ಗಳ ಬಗ್ಗೆ ಪರಿಶೀಲಿಸಲು ರಚಿಸಲಾಗಿದ್ದ ವಿಶೇಷ ಸದನ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 215ರ ರೀತ್ಯ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಮುಂದು...)**

(259) 12.07.2018 11.40 ವೈಎಲ್-ಆರ್‌ಎನ್

**5. ಚುನಾವಣಾ ಪ್ರಸ್ತಾವ**

**ಡಾ॥ ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 06.07.2018 ವಿಧಾನಮಂಡಲದ ವಿಧಾನಪರಿಷತ್ತಿನಲ್ಲಿ ವಿವಿಧ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಬಗ್ಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮ ಪಟ್ಟಿಯನ್ನು ದಿನಾಂಕ 09.07.2018 ರಂದು ಪ್ರಕಟಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿಧಾನ ಮಂಡಲದ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶಿಸಲು ಅಧಿಕಾರ ನೀಡುವ ಪ್ರಸ್ತಾವನೆಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)**

**(ಪ್ರಸ್ತಾವವು ಸರ್ವಾನುಮತದಿಂದ ಅಂಗೀಕರಿಸಲ್ಪಟಿತು)**

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಅಬ್ದುಲ್ ಜಬ್ಬಾರ್‌ರವರು ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಏನೆಂದು ಕೇಳೋಣ.

**ಶ್ರೀ ಕೆ.ಅಬ್ದುಲ್ ಜಬ್ಬಾರ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರಾದ ಜಮೀರ್ ಅಹ್ಮದ್ ಖಾನ್‌ರವರು ತಿಳಿಸಿರುವ ಹಾಗೆ ನ್ಯಾಯಾಲಯದಲ್ಲಿರತಕ್ಕಂಥ ವಿಚಾರವನ್ನು ಸಿ.ಬಿ.ಐ. ತನಿಖೆಗೆ ಕೊಡುವುದಕ್ಕಾಗುವುದಿಲ್ಲ.

**ಸಭಾಪತಿಯವರು:-** ಯಾರು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರೆ ಅದು ನ್ಯಾಯಾಲಯದಲ್ಲಿ ಇದೆ ಎಂದು ಹೇಳಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಅದೆಲ್ಲಾ ಬೇಡ.

(ಗೊಂದಲ)

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ನ್ಯಾಯಾಲಯಕ್ಕೆ ಹೋದಾಗ ಸಿ.ಬಿ.ಐ. ತನಿಖೆಗೆ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ವಿಶ್ವಾಸ ಇದೆ. ಯಾವುದೇ ಕಾರಣಕ್ಕೂ ಮಾನ್ಯ ಸಚಿವರು ಯೋಚನೆ ಮಾಡಬಾರದು.

(ಗೊಂದಲ)

**ಸಭಾಪತಿಯವರು:-** ಮಾನ್ಯ ಅಬ್ದುಲ್ ಜಬ್ಬಾರ್‌ರವರೇ, ಒಂದು ನಿಮಿಷ ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ, ನಾನು ಹೇಳುವುದನ್ನು ಕೇಳಿ. ಮಾನ್ಯ ರೇವಣ್ಣನವರೇ ಒಂದು ನಿಮಿಷ. ನಾನು ಹೇಳುವುದೇನೆಂದರೆ, ಒಬ್ಬೊಬ್ಬರೆ ಎದ್ದು ಮಾತನಾಡಿ. ಏಕೆಂದರೆ, ಈ ಮೊದಲು ನಾವು ನಿಮ್ಮ ಜಾಗಗಳಲ್ಲಿ ಕುಳಿತುಕೊಂಡಾಗ ಮಾತನಾಡಬೇಕೆನ್ನುವ ಭಾವನೆ ವ್ಯಕ್ತವಾಗುವುದರಿಂದ ಎಲ್ಲಾ ಸದಸ್ಯರಿಗೂ ಸಹ ಸಾಧ್ಯವಾದಷ್ಟು ಮಟ್ಟಿಗೆ ಮಾತನಾಡುವುದಕ್ಕೆ ಅನುಮತಿ ಕೊಡುವಂತಹ ಪ್ರಯತ್ನ ಮಾಡುತ್ತಿದ್ದೇನೆ. ಪ್ರಯತ್ನ ಮಾಡಿದರೂ ಸಹ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ? ಒಬ್ಬೊಬ್ಬರೆ ಎದ್ದು ಮಾತನಾಡಿ. ಎಷ್ಟೇ ಚರ್ಚೆಯಾದರೂ ಕೇಳೋಣ. ಮಾನ್ಯ ಅಬ್ದುಲ್ ಜಬ್ಬಾರ್‌ರವರ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳಬೇಕು.

**ಶ್ರೀ ಬಿ.ಝಡ್.ಜಮೀರ್ ಅಹ್ಮದ್ ಖಾನ್(ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು ಏನೆಂದರೆ, ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರವೇ ಅಧಿಕಾರದಲ್ಲಿದೆ. ಕೇಂದ್ರ ಸರ್ಕಾರವೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿ.ಬಿ.ಐ. ತನಿಖೆ ಮಾಡಬಹುದಲ್ಲ ಎಂದು ನಾನು ಕೇಳಿದ್ದಕ್ಕೆ, ನಂತರ ನನ್ನನ್ನು ನೀವೇ ಸಿ.ಬಿ.ಐ. ತನಿಖೆ ಮಾಡಿಸಬಹುದಲ್ಲ ಎಂದು ಕೇಳಿದ್ದಕ್ಕೆ ...

(ಗೊಂದಲ)

ಒಂದು ನಿಮಿಷ ದಯಮಾಡಿ ನಾನು ಹೇಳುವುದನ್ನು ಕೇಳಿ. ನನಗೆ ಸ್ಪಷ್ಟೀಕರಣವನ್ನು ನೀಡುವುದಕ್ಕೆ ಅವಕಾಶ ನೀಡಬೇಕು. ಕೇಂದ್ರದಲ್ಲಿ ಅವರ ಸರ್ಕಾರವೇ ಅಧಿಕಾರದಲ್ಲಿದ್ದು, ಅವರ ಸರ್ಕಾರದವರೇ ಪ್ರಧಾನ ಮಂತ್ರಿಗಳಾಗಿದ್ದರು. ಆಗ ಸಹ ಸಿ.ಬಿ.ಐ. ತನಿಖೆ ಮಾಡಲಿಲ್ಲ. ಸದನದಲ್ಲಿ ಚರ್ಚೆಯಾಗಲಿಲ್ಲ. ಸದನದಲ್ಲಿ ಚರ್ಚೆಯಾಗಿ ಸತ್ಯವಾಗಿದ್ದರೆ, ಆಗ ಅವರೇ ಸಿ.ಬಿ.ಐ. ತನಿಖೆ ಮಾಡಿಸಬಹುದಾಗಿತ್ತು. ಅವರ ಸರ್ಕಾರವೇ ಕೇಂದ್ರದಲ್ಲಿಯೂ ಇತ್ತು. ಈಗ ನಮ್ಮ ಸರ್ಕಾರದ ವತಿಯಿಂದ ಸಿ.ಬಿ.ಐ. ತನಿಖೆ ಮಾಡಿಸಿ ಎಂದು ಹೇಳಿದ್ದರು. ಅದಕ್ಕೆ ನಾನು ಸಹ ಆಯಿತು ನೋಡುತ್ತೇನೆ ಎಂದು ಹೇಳಿದ್ದೇನೆ ವಿನಃ ಸಿ.ಬಿ.ಐ. ತನಿಖೆ ಮಾಡಿಸುತ್ತೇನೆ ಎಂದು ಹೇಳಲಿಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ನೋಡುತ್ತೇನೆ ಎಂದು ಹೇಳಿಲ್ಲ.

**ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಹಾಗೂ ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೋಡುತ್ತೇನೆ ಎಂದು ಹೇಳಿದ್ದಾರೆ.

(ಗೊಂದಲ)

**ಸಭಾಪತಿಯವರು:–** ನೋಡಿ. ನಾನು ಹೇಳುವುದೇ ನಿಮಗೆ ಅರ್ಥವಾಗುವುದಿಲ್ಲ. ಒಂದು ನಿಮಿಷ ಕುಳಿತುಕೊಳ್ಳಿ. ಕಡತವನ್ನು ತರಿಸಿ ಪರಿಶೀಲನೆ ಮಾಡಿ ನಿಮಗೆ ತಿಳಿಸುತ್ತೇನೆ. ಈಗ ಶೂನ್ಯ ವೇಳೆ ಪ್ರಸ್ತಾಪಗಳು. ಮಾನ್ಯ ಎಸ್.ವ್ಹಿ.ಸಂಕನೂರು.

**ಶ್ರೀ ಎನ್.ರವಿಕುಮಾರ್(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಇಲ್ಲ. ರವಿಕುಮಾರ್‌ರವರೆ, ಆಗುವುದಿಲ್ಲ ಕುಳಿತುಕೊಳ್ಳಿ. ಶ್ರೀ ಸಂಕನೂರರವರೇ ತಾವು ಹೇಳುತ್ತೀರೋ, ಇಲ್ಲವೋ? ಕಡತವನ್ನು ಪರಿಶೀಲನೆ ಮಾಡಿ ನಿಮಗೆ ತಿಳಿಸುತ್ತೇನೆಂದು ಹೇಳಿದ್ದೇನೆ. ಮುಗಿಯಿತು. ಮತ್ತೆ ಏಕೆ ಮಾತನಾಡುತ್ತೀರಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, . . . .

**ಸಭಾಪತಿಯವರು:–** ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಎಷ್ಟು ಮಾತನಾಡುತ್ತೀರಿ? ನಾವು ಹೇಗೆ ಸಭೆಯನ್ನು ನಡೆಸಬೇಕು? ನೀವೇ ಬಂದು ಪೀಠದಲ್ಲಿ ಕುಳಿತುಕೊಂಡು ಸಭೆ ನಡೆಸಿ ಬನ್ನಿ. ಒಂದು ಸಲ ಹೇಳಿದ ಮೇಲೆ ತಿಳಿದುಕೊಳ್ಳಬೇಕು.

## 6. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ:– ಗದಗ ಜಿಲ್ಲೆ ರೋಣ ತಾಲ್ಲೂಕಿನ ರೈತರ ಬೆಳೆಗೆ ಹಾನಿಯಾಗುತ್ತಿರುವ ಬಗ್ಗೆ.

*****

**ಶ್ರೀ ಎಸ್.ವ್ಹಿ.ಸಂಕನೂರು(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, "ಅನ್ನದಾತರ ಬೆಳೆಗೆ ಜಿಂಕೆ ಕಾಟ", "ಜಿಂಕೆ ಹಾವಳಿ, ರೈತರಿಂದ ಹೆದ್ದಾರಿ ತಡೆ" ಎಂಬ ತಲೆಬರಹದಡಿಯಲ್ಲಿ ರೈತರ ಸಂಪೂರ್ಣ ಬೆಳೆ ನಾಶವಾಗಿರುವ ಕುರಿತು ದಿನಾಂಕ: 10–07–2018 ರಂದು ವಿವಿಧ ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ರೈತರು ಹೆಸರು ಕಾಳು ಬಿತ್ತನೆ ಮಾಡಿರುವರು. ಕಳೆದ 4 ವರ್ಷಗಳಿಂದ ಮಳೆ ಕೊರತೆ ಅನುಭವಿಸಿದ ರೈತರು, ಈ ಬಾರಿ ಉತ್ತಮ ಮಳೆಯಾಗಿದ್ದರಿಂದ ಹೆಸರು ಬಿತ್ತನೆ ಮಾಡಿದ್ದಾರೆ. ಆದರೆ ಬೆಳೆಗೆ ಜಿಂಕೆಗಳ ಹಾವಳಿ ವಿಪರೀತವಾಗಿರುವುದರಿಂದ ಒಂದೇ ಬಾರಿಗೆ ಹೊಲಗಳಲ್ಲಿ ಸುಮಾರು 30 ರಿಂದ 40 ಜಿಂಕೆಗಳು ದಾಳಿ ನಡೆಸಿ ಬೆಳೆಗಳನ್ನು ನಾಶಪಡಿಸುತ್ತಿವೆ. ಇದರಿಂದಾಗಿ ಆಕ್ರೋಶಗೊಂಡ ಸಾವಿರಾರು ರೈತರು ರೋಣ ಪಟ್ಟಣದಲ್ಲಿ ಮಾನವ ಸರಪಳಿ ನಿರ್ಮಿಸಿ ಮಿನಿ ವಿಧಾನಸೌಧ ಎದುರಿಗೆ ರಾಜ್ಯ ಹೆದ್ದಾರಿ ಸಂಚಾರ ತಡೆದು ಪ್ರತಿಭಟನೆ ಮಾಡಿರುತ್ತಾರೆ.

ಈ ಪ್ರತಿಭಟನೆಯ ವೇಳೆ ರೈತರು ಜಿಂಕೆ ಹಾವಳಿ ನಿಯಂತ್ರಿಸುವಲ್ಲಿ ಅರಣ್ಯ ಇಲಾಖೆ ಮುಂದಾಗಬೇಕು ಎಂದು ಪ್ರತಿಭಟನೆ ನಡೆಸಿರುವರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ರೋಣ ವಲಯದ ಅರಣ್ಯ ಅಧಿಕಾರಿ ಶ್ರೀ ಎಸ್.ಎಸ್.ರಂಗಣ್ಣನವರ ಜೊತೆಗೆ ಪ್ರತಿಭಟನಾಕಾರರು ತೀವ್ರ ವಾಗ್ವಾದ ನಡೆಸಿರುವರು. ಈ ವೇಳೆ ಕೂಡಲೇ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು ಬರಬೇಕು ಎಂದು ಪಟ್ಟು ಹಿಡಿದಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸಂದರ್ಭದಲ್ಲಿ ಸ್ಥಳಕ್ಕೆ ಆಗಮಿಸಿದ ಬಿಂಕದಕಟ್ಟಿ ಅರಣ್ಯ ಅಧಿಕಾರಿ ಶ್ರೀ ಕಿರಣ ಅಂಗಡಿರವರು ರೈತರಿಗೆ **"ಜಿಂಕೆಧಾಮ"** ಸ್ಥಾಪನೆಗೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಮತ್ತು ಹಾನಿ ಪ್ರಮಾಣ ಅನುಸಾರ ಪರಿಹಾರ ವಿತರಿಸಲಾಗುವುದು ಎಂದು ಹೇಳಿರುವರು.

ಆದ್ದರಿಂದ ರೋಣ ತಾಲ್ಲೂಕಿನಲ್ಲಿ ರೈತರ ಬೆಳೆಗಳಿಗೆ ನುಗ್ಗಿ ಹಾನಿ ಮಾಡುತ್ತಿರುವ ಜಿಂಕೆಗಳನ್ನು ನಿಯಂತ್ರಿಸುವಲ್ಲಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮತ್ತು ಈ ಭಾಗದಲ್ಲಿ ಒಂದು ಜಿಂಕೆಧಾಮವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ಅರಣ್ಯ ಸಚಿವರನ್ನು ಒತ್ತಾಯಿಸುವೆನು. ಅಲ್ಲದೆ ಬೆಳೆ ಹಾನಿ ಆದ ರೈತರಿಗೆ ವಿಳಂಬ ಮಾಡದೆ ತಕ್ಷಣ ಸೂಕ್ತ ಪರಿಹಾರ ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸುವೆನು.

**ಡಾ|| ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**ಸಭಾಪತಿಯವರು:-** ಇವತ್ತು ಸದನವು ನಡೆಯುವುದು ಕೊನೆಯ ದಿನವಾಗಿದೆ. ಉತ್ತರವನ್ನು ಯಾವಾಗ ತರಿಸಿಕೊಡುತ್ತೀರಿ?

**ಡಾ|| ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಸಂಜೆಯೊಳಗೆ ತರಿಸಿಕೊಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರು:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಕೂಡಾ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರುರವರೇ ಸ್ವಲ್ಪ ತಾಳ್ಮೆಯಿಂದ ಇರಿ. ಏಕೆ ಇಷ್ಟೊಂದು ಆತುರದಲ್ಲಿದ್ದೀರಿ.

**(ಆ) ವಿಷಯ:- ಕೃಷಿ ವಿಶ್ವವಿದ್ಯಾಲಯದ ಕೋರ್ಸುಗಳ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಹಂಚಿಕೆ ಮಾಡುವ ಕುರಿತು.**

*****

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಹೈದರಾಬಾದ್ ಕರ್ನಾಟಕದ ಭಾಗದ ಆರು ಜಿಲ್ಲೆಗಳಾದ ಕಲಬುರ್ಗಿ, ಬೀದರ್, ಯಾದಗಿರಿ, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಇವುಗಳು ಆರ್ಟಿಕಲ್ 371 ಜೆ ಗೆ ಒಳಪಟ್ಟಿದ್ದು, ಈ ಭಾಗದ ವಿದ್ಯಾರ್ಥಿಗಳಿಗೆ ಇಂಜನೀಯರಿಂಗ್, ಮೆಡಿಕಲ್, ಕೃಷಿ ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಸ್ಥಾನ ಪಡೆದಿಯಬೇಕಾಗಿದ್ದು, ಸುಮಾರು 2014 ರಿಂದ ಇದುವರೆಗೆ ಶಿಕ್ಷಣ ಇಲಾಖೆಯಲ್ಲಿ ಮತ್ತು ಕೃಷಿ ವಿಶ್ವವಿದ್ಯಾನಿಲಯದಲ್ಲಿಯು ಸಹ ಈ reservation policy ಯನ್ನು ಸುಮಾರು 4 ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಈ ವರ್ಷ ನಮಗೆ ತಿಳಿದಿರುವಂತೆ 2018 ರಲ್ಲಿ ಅದೇ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗಿದ್ದು, ಆದರೆ, ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಬೇರೆ faculty ಮಾಡಿದ್ದಾರೆ. ಆದರೆ, ಈ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾತ್ರ 1021 ಸೀಟುಗಳು ಆ ಭಾಗದ ವಿದ್ಯಾರ್ಥಿಗಳಿಗೆ ಕಾಯ್ದಿರಿಸಬೇಕಾಗಿತ್ತು. ಅದನ್ನು curtail ಮಾಡಿದ್ದಾರೆ. ಅದರ ಬಗ್ಗೆ ಮೀಸಲಾತಿಯೇ ಕೊಟ್ಟಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಸದನದ ಮೂಲಕ ಕೃಷಿ ಸಚಿವರು ಈ ನ್ಯೂನತೆಯನ್ನು ಸರಿಪಡಿಸಿ, ಆ ಭಾಗದ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಡಾ॥ ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಕೃಷಿ ಸಚಿವರು ಉತ್ತರವನ್ನು ನೀಡಬೇಕು.

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ ಸಚಿವರಿಗೆ ಇದು ಸಂಬಂಧಪಡುತ್ತದೆ.

**ಇ) ವಿಷಯ:- ಮಂಗಳೂರು ವಿಶ್ವವಿದ್ಯಾಲಯದ ಭ್ರಷ್ಟಾಚಾರದ ಬಗ್ಗೆ.**

*****

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪತ್ರಿಕಾ ಮಾಧ್ಯಮದಲ್ಲಿ ವರದಿಯಾದಂತೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಅಧಿಕಾರವನ್ನು ವಹಿಸಿಕೊಂಡ ಬಳಿಕ ಪ್ರೋ ಕೆ.ಭೈರಪ್ಪನವರ ಅಧಿಕಾರವಧಿಯಲ್ಲಿ ಅನೇಕ ಹಗರಣಗಳು ನಡೆದಿವೆ ಎಂಬ ಆರೋಪಗಳಿವೆ. ಪ್ರೋ ಕೆ.ಭೈರಪ್ಪ ಅವರು ಜೂನ್ 2014 ರಿಂದ ಇಲ್ಲಿಯವರೆಗೆ ಸುಮಾರು 100 ಕೋಟಿ ರೂಪಾಯಿಗಳ ಭ್ರಷ್ಟಾಚಾರವನ್ನು ನಡೆಸಿದ್ದು, ಈ ಕುರಿತು ಸಾಮಾಜಿಕ ಹೋರಾಟಗಾರರು ಹಾಗೂ ಸ್ಥಳೀಯ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಸಾಮಾಜಿಕ ಜಾಲತಾಣಗಳು ಬೆಳಕನ್ನು ಚೆಲ್ಲುವ ಪ್ರಯತ್ನ ನಡೆಸಿದೆ. ಪ್ರೊ ಕೆ.ಭೈರಪ್ಪನವರ ಅಧಿಕಾರ ಅವಧಿಯಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಪಟ್ಟಿ ಈ ಕೆಳಕಂಡಂತೆ ಇದೆ.

**1. ಎಸ್ಸಿ/ಎಸ್ಟಿ ಸ್ನಾತಕೋತ್ತರ ಮತ್ತು ಸಂಶೋಧನ ವಿದ್ಯಾರ್ಥಿಗಳ ಲ್ಯಾಪ್‌ಟಾಪ್ ಹಗರಣ:**

ಸರಕಾರದ ಆದೇಶದಂತೆ ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡಲು 2.5 ಕೋಟಿ ಮೊತ್ತದಲ್ಲಿ ಕಳಪೆ ಗುಣಮಟ್ಟದ ಲ್ಯಾಪ್‌ಟಾಪ್‌ಗಳನ್ನು ಖರೀದಿಸಿರುವುದು.

**2. ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿಗಳಿಗೆ ಖರೀದಿಸಲಾದ ಡೆಸ್ಕ್‌ಟಾಪ್ ಕಂಪ್ಯೂಟರ್ ಹಗರಣ:**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರಕಾರದ ಆದೇಶದಂತೆ ಕಛೇರಿಗಳಲ್ಲಿ ಇ–ಆಡಳಿತ ಅಳವಡಿಸಿಕೊಳ್ಳಲು 2.5 ಕೋಟಿ ಮೊತ್ತದಲ್ಲಿ ಖರೀದಿಸಿದ ಗಣಕ ಯಂತ್ರಗಳು ಅನುಪಯೋಗಿಯಾಗಿದ್ದು ಇದರ ಟೆಂಡರ್ ನಿಯಮಬಾಹಿರವಾಗಿ ನೀಡಿರುವುದಾಗಿದೆ.

**3. ಪರೀಕ್ಷಾ ಗಣಕೀಕರಣದ ವೈಫಲ್ಯದ ನಡುವೆಯು ಸಂಬಂಧಪಟ್ಟ ಸಂಸ್ಥೆಯ ಬಗ್ಗೆ ಮೃದುಧೋರಣೆ:**

ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಮತ್ತು ಸ್ನಾತಕೋತ್ತರ ಕೋರ್ಸುಗಳ ಪರೀಕ್ಷಾ ಗಣಕೀಕರಣವನ್ನು ಈ ಹಿಂದೆ ನಿರ್ವಹಿಸುತ್ತಿದ್ದ ಸಂಸ್ಥೆಯ ಕರಾರಿನ ಅವಧಿ ಮುಗಿದ ನಂತರ ಟೆಂಡರ್ ಪ್ರಕ್ರಿಯೆಯಲ್ಲಿ ಬೆಂಗಳೂರು ಮೂಲದ ಕುಲಪತಿಗಳ ಆಪ್ತ ವಲಯದ ಸಂಸ್ಥೆಗೆ ನವೆಂಬರ್ 2015ನೇ ಸಾಲಿನ ಪರೀಕ್ಷಾ ಗಣಕೀಕರಣದ ಗುತ್ತಿಗೆ ನೀಡಲಾಗಿದ್ದು, ಸದರಿ ಸಂಸ್ಥೆಯು ಹಲವು ಬಗೆಯ ತಾಂತ್ರಿಕ ಯಡವಟ್ಟಿನಿಂದಾಗಿ ಈಗಾಗಲೇ ಕಾಲೇಜು / ವಿದ್ಯಾರ್ಥಿಗಳು ಹೈರಾಣಾಗಿದ್ದು ನಿರಂತರವಾಗಿ ಪತ್ರಿಕೆಯಲ್ಲಿ ಈ ಬಗ್ಗೆ ದೂರುಗಳು ಪ್ರಕಟಗೊಳ್ಳುತ್ತಾ ಬಂದಿದೆ. ಆದರೆ ತನ್ನ ಆಪ್ತವಲಯದ ಸಂಸ್ಥೆಯಾದರಿಂದ ಈವರೆಗೂ ಈ ಸಂಸ್ಥೆಯ ಗುತ್ತಿಗೆಯನ್ನು ರದ್ದುಪಡಿಸುವ ನಿರ್ಧಾರಕ್ಕೆ ಕುಲಪತಿಗಳು ಮುಂದಾಗಿಲ್ಲ.

**4. ಸಿ.ಸಿ. ಟಿವಿ ಕ್ಯಾಮರಾ ಅಳವಡಿಕೆಯಲ್ಲಿ ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿ ಅಳವಡಿಕೆ:**

ಪ್ರೊ ಕೆ.ಭೈರಪ್ಪರವರು ತನ್ನ ಆಪ್ತವಲಯದ ಸಂಸ್ಥೆಗೆ ಸಿ.ಸಿ. ಕ್ಯಾಮರಾ ಅಳವಡಿಕೆಯ ಆದೇಶವನ್ನು ನೀಡಲಾಗಿದೆ.

**5. ಅನಧಿಕೃತ ಹುದ್ದೆಗಳ ನೇಮಕ ಮತ್ತು ಬೇಕಾಬಿಟ್ಟಿ ಸಂಬಾವನೆ:**

ಅನಧಿಕೃತ ತಾತ್ಕಾಲಿಕ ಹುದ್ದೆಗಳ ಸೃಷ್ಟಿ, ನಿಯಮಬಾಹಿರ ಸಂಭಾವನೆ ನಿಗದಿ ಮತ್ತು ಹೆಚ್ಚಿನ ಎಲ್ಲ ಹುದ್ದೆಗಳಲ್ಲಿ ವಿಶ್ವವಿದ್ಯಾನಿಲಯ ಶೈಕ್ಷಣಿಕ ವ್ಯಾಪ್ತಿಗೊಳಪಟ್ಟ ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿಯ ನಿರುದ್ಯೋಗಿಗಳನ್ನು ನಿರ್ಲಕ್ಷಿಸಿ ಮೈಸೂರು, ಮಂಡ್ಯ, ಹಾಸನ ಭಾಗದ ತನ್ನ ಸಂಬಂಧಿಕರನ್ನೇ ನೇಮಕಗೊಳಿಸಿ, ಅಕ್ರಮ ನೇಮಕಾತಿಯನ್ನು ಸಕ್ರಮಗೊಳಿಸಲು ಪ್ರಯತ್ನಿಸಿರುವುದು.

**6. ಸೋಲಾರ್ ಬೀದಿದೀಪ ಹಗರಣ :**

ಎಲ್–1 ಕನಿಷ್ಠ ದರ ನಮೂದಿಸಿದ ಸಂಸ್ಥೆಯನ್ನು ಕಡೆಗಣಿಸಿ ಎಲ್–2 ಎರಡನೇ ಕನಿಷ್ಠ ದರ ನಮೂದಿಸಿದ ಸಂಸ್ಥೆಗೆ ಬೀದಿ ದೀಪ ಅಳವಡಿಕೆಗೆ ಆದೇಶ ನೀಡಿರುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7. ಮುಕ್ತ ವಿಶ್ವವಿದ್ಯಾನಿಲಯವನ್ನು ಮೀರಿಸಿದ ದೂರ ಶಿಕ್ಷಣ ದಂಧೆ:**

ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣದ ಕಾರ್ಯಕ್ರಮದಲ್ಲಿ ಯುಜಿಸಿ ನಿಯಮಾವಳಿಯನ್ನು ಉಲ್ಲಂಘಿಸಿ ಕುಲಪತಿಗಳು ಚಾಮರಾಜಪೇಟೆಯಲ್ಲಿ ತನ್ನ ಕುಟುಂಬದ ಸದಸ್ಯರಿಂದ ನಿರ್ವಹಿಸಲ್ಪಡುವ ಎಸ್‌ಎಸ್‌ಬಿಇಟಿ (ಸ್ತ್ರೀ ಸಮಾಜ ಬೆಂಗಳೂರು ಎಜುಕೇಷನ್ ಟ್ರಸ್ಟ್) ಸಂಸ್ಥೆಗೆ ಅಧ್ಯಯನ ಕೇಂದ್ರದ ಮಾನ್ಯತೆ ನೀಡಿ; ಪರೀಕ್ಷಾ ಅವ್ಯವಹಾರಗಳಿಗೆ ಕುಮ್ಮಕ್ಕು ನೀಡಿ, ಮತ್ತೊಂದು ಮುಕ್ತವಿಶ್ವವಿದ್ಯಾನಿಲಯದ ಹಗರಣಕ್ಕೆ ವೇದಿಕೆಯನ್ನು ಕಲ್ಪಿಸಿ ವಿದ್ಯಾರ್ಥಿಗಳ ಬದುಕಿನಲ್ಲಿ ಚೆಲ್ಲಾಟ ಆಡುವ ಕೆಲಸವನ್ನು ನಡೆಸುತ್ತಿದ್ದಾರೆ.

**8. ಓಪನ್ ಹೌಸ್ ಹಗರಣ:**

ಶೈಕ್ಷಣಿಕ ವರ್ಷದ ಆರಂಭದಲ್ಲಿ ಪದವಿಯ ವಿದ್ಯಾರ್ಥಿಗಳನ್ನು ಸ್ನಾತಕೋತ್ತರ ವಿಭಾಗಗಳಿಗೆ ಸೆಳೆಯಲು ವಿಶ್ವವಿದ್ಯಾನಿಲಯವು ಎರಡು ದಿನಗಳ ಓಪನ್ ಹೌಸ್ (ತೆರೆದ ಮನೆ) ಕಾರ್ಯಕ್ರಮವನ್ನು ಸತತ ಮೂರು ವರ್ಷಗಳಿಂದ ಯೋಜಿಸಿಕೊಂಡು ಬರುತ್ತಿದೆ. ಈ ಕಾರ್ಯಕ್ರಮಕ್ಕೆ ಸುಮಾರು 1 ಕೋಟಿಯ ಬೃಹತ್ ಮೊತ್ತಗಳಿಗೆ ಅಕ್ರಮ ಬಿಲ್ಲುಗಳನ್ನು ತಯಾರಿಸಿ ವಿಶ್ವವಿದ್ಯಾನಿಲಯದ ಆರ್ಥಿಕ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಈ ಕಾರ್ಯಕ್ರಮದಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯನ್ನು ಮಾತ್ರ ಗುರುತಿಸಬಹುದೇ ವಿನಃ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಗಣನೀಯವಾದ ಹೆಚ್ಚಳ ಕಂಡು ಬಂದಿಲ್ಲ.

**9. ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ ಮತ್ತು ತಾತ್ಕಾಲಿಕ 'ಡಿ' ಗ್ರೂಪ್‌ಗಳ ಹೊರಗುತ್ತಿಗೆ ಹಗರಣ:**

ಕುಲಪತಿಗಳು ತನ್ನ ಬಾಂಧವರಾದ ಶ್ರೀ ಬಾಲಕೃಷ್ಣ ನಿಂಗೇಗೌಡ ಅವರ ಮಾಲಕತ್ವದ ಕ್ಯಾನಾನ್ ಸೆಕ್ಯೂರಿಟಿ ಸರ್ವಿಸಸ್ ಮೈಸೂರು ಇವರಿಗೆ 2015-16, 2016-17 ಮತ್ತು 2017-18ನೇ ಸಾಲಿಗೆ ಸತತ ಮೂರು ಬಾರಿ ಆದೇಶ ನೀಡಿ (ಟೆಂಡರ್ ಪ್ರಕ್ರಿಯೆ ಹಂತದಲ್ಲಿ ಸೋರಿಕೆ ನಡೆಸಿ) ಅಕ್ರಮ ಎಸಗಿದ್ದಾರೆ. ಸದರಿ ಸಂಸ್ಥೆಯವರು ಕಾರ್ಮಿಕ ಕಾಯ್ದೆಯ ಅನ್ವಯ ಸಿಬ್ಬಂದಿಗಳಿಗೆ ನೀಡಬೇಕಾದ ಭವಿಷ್ಯ ನಿಧಿ, ಮತ್ತಿತ್ತರ ಭತ್ಯೆಗಳನ್ನು ವಿಶ್ವವಿದ್ಯಾನಿಲಯದಿಂದ ಪಡೆದುಕೊಂಡು ಸಿಬ್ಬಂದಿಗಳಿಗೆ ನೀಡದೆ ಅನ್ಯಾಯ ಮಾಡಿದ್ದಾರೆ. ನ್ಯಾಯಕ್ಕಾಗಿ ಹೋರಾಟ ಮಾಡಿದ ಹಲವು ಬಡ ಕಾರ್ಮಿಕರನ್ನು ಸೇವೆಯಿಂದ ವಜಾ ಮಾಡಿರುವುದಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರೊ ಕೆ. ಭೈರಪ್ಪನವರು ಭ್ರಷ್ಟಾಚಾರಕ್ಕೆ ಕಾರಣಕರ್ತರಾಗಿದ್ದು ವಿಶ್ವವಿದ್ಯಾಲಯದ ವ್ಯವಸ್ಥೆ ಬಗ್ಗೆ ನಂಬಿಕೆ ಮೂಡುವಂತಾಗಲು ಸರಕಾರ ತನಿಖೆ ನಡೆಸಿ ತಪ್ಪಿತಸ್ತರ ಮೇಲೆ ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಶೂನ್ಯವೇಳೆಯಲ್ಲಿ ಸರಕಾರವನ್ನು ಒತ್ತಾಯಿಸುತ್ತೇನೆ.

(ಮುಂದು) . . .

(260)/12.07.2018/11.50/ಎಸ್‌ಕೆ–ಆರ್‌ಎನ್

**ಡಾ. ಜಯಮಾಲ ರಾಮಚಂದ್ರ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ ಇದಕ್ಕೆ ಸಂಬಂಧಪಟ್ಟ ಕಾಗದಗಳನ್ನು ಅವರಿಗೆ ಕೊಡಿ. ಈಗ ಮಾನ್ಯ ಪ್ರಾಣೇಶ್‌ರವರು.

**ಈ) ವಿಷಯ:–** ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಹರಿಹರಪುರ ಗ್ರಾಮತಾಣದಲ್ಲಿ ನಿರ್ಮಿಸಿರುವ ಕೆ.ಎಸ್.ಎಸ್.ಐ.ಡಿ.ಸಿ. ನೀಡಿರುವ ವಿಶ್ವ ಮಳಿಗೆ ಕುರಿತು.

------

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಹರಿಹರಪುರ ಗ್ರಾಮ ಠಾಣಾದಲ್ಲಿ 100X50 ಜಾಗವನ್ನು ಜನರಲ್ ಮ್ಯಾನೇಜರ್ ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು ಇವರಿಗೆ ನೀಡಲಾಗಿದ್ದು, ಸದರಿಯವರು ವಿಶ್ವ ಮಳಿಗೆ ನಿರ್ಮಿಸಲು ಕೆ.ಎಸ್.ಎಸ್.ಐ.ಡಿ.ಸಿ.ಗೆ ಹಸ್ತಾಂತರಿಸಲಾಗಿದೆ. ಸದರಿ ಹಂಚಿಕೆಯಾಗಿರುವ ಜಾಗದಲ್ಲಿ ವಿಶ್ವ ಮಳಿಗೆ ಕಟ್ಟಡವನ್ನು ನಿರ್ಮಿಸಿದ್ದು, ಕಟ್ಟಡವು ಕೆ.ಎಸ್.ಎಸ್.ಐ.ಡಿಸಿ.ಯ ಸ್ವತ್ತಾಗಿರುತ್ತದೆ. ಈ ವಿಶ್ವ ಮಳಿಗೆ ಕಟ್ಟಡವನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ದಿನಾಂಕ: 28.03.2007 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಿರ್ಣಯ ಹಾಗೂ ಚಿಕ್ಕಮಗಳೂರು ಜಿಲ್ಲಾ ಮಟ್ಟದ ವಿಶ್ವ ಕಾರ್ಯಗಾರ ಹಂಚಿಕೆ ಸಮಿತಿ ನಿರ್ಣಯದಂತೆ ಕಲ್ಲುಕೆತ್ತನೆ/ ಶಿಲ್ಪಕಲೆ ತಯಾರಿಕೆ ಚಟುವಟಿಕೆಗಾಗಿ ಬಾಡಿಗೆ ಆಧಾರದಲ್ಲಿ ದಿನಾಂಕ: 07.12.2007 ರಂದು ಶ್ರೀ ಹೆಚ್.ಎಸ್. ಮಹೇಶ್ ಶಿಲ್ಪಿ ಇವರು ಕಾನೂನು ಪ್ರಕಾರ ಮತ್ತು ನಿಗಮದ ನಿಯಾಮಾನುಸಾರ ಬಾಡಿಗೆ ಕರಾರು ಪತ್ರವನ್ನು ಪಡೆದು ಸ್ವಾಧೀನಕ್ಕೆ ಪಡೆದಿರುತ್ತಾರೆ ಹಾಗೂ ಹಂಚಿಕೆಯಾಗಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ದೇಶಕ್ಕಾಗಿ ಮಳಿಗೆಯನ್ನು ಉಪಯೋಗಿಸಿಕೊಂಡು ಬರುತ್ತಿದ್ದಾರೆ ಹಾಗೂ ಪ್ರಸ್ತುತ ಮಳಿಗೆ ಅವರ ಸ್ವಾಧೀನದಲ್ಲಿ ಇರುತ್ತದೆ.

ಸರ್ಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ/ಗುಡಿ ಕೈಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಿಶ್ವ ಮಳಿಗೆಯನ್ನು ಪ್ರೋತ್ಸಾಹಿಸಲಾಗಿರುತ್ತದೆ. ದಿನಾಂಕ: 26.06.2018 ರಂದು ತಹಶೀಲ್ದಾರ್, ಕೊಪ್ಪ ತಾಲ್ಲೂಕು ಇವರ ಅದೇಶದ ಅನುಸಾರವಾಗಿ ಹರಿಹರಪುರದಲ್ಲಿ ಇರುವ ವಿಶ್ವ ಮಳಿಗೆಯ ಕಟ್ಟಡದ ಬೀಗವನ್ನು ಹೊಡೆದು ನಾಡ ಕಛೇರಿ ಆಧಿಕಾರಿ/ನೌಕರರು ಒಳಗೆ ಪ್ರವೇಶಿಸಿ ಹಾಗೂ ಬಲವಂತವಾಗಿ ಹೆಚ್.ಎಸ್. ಮಹೇಶ್ ಶಿಲ್ಪಿ ಅವರನ್ನು ಹೊರಗೆ ಹಾಕಿ ಕಟ್ಟಡವನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಅದರೆ ವಿಶ್ವ ಮಳಿಗೆ ಕಟ್ಟಡವನ್ನು ನಿರ್ಮಿಸಲು ಗ್ರಾಮ ಪಂಚಾಯಿತಿಯಿಂದ ಪಡೆದು ಕಟ್ಟಡ ನಿರ್ಮಿಸಿರುವುದರಿಂದ ಕಟ್ಟಡವು ಕೆ.ಎಸ್.ಎಸ್.ಐ.ಡಿ.ಸಿ.ಯ ಸ್ವತ್ತಾಗಿರುತ್ತದೆ. ಹಾಗೂ ಸರ್ಕಾರ ನಿರ್ದೇಶನ/ನಿಯಾಮಾನುಸಾರ ಕ್ರಮ ಅನುಸರಿಸುವುದರಿಂದ ಹರಿಹರಪುರ ವಿಶ್ವ ಮಳಿಗೆ ಕಟ್ಟಡವನ್ನು ಕೂಡಲೆ ಹಂಚಿಕೆದಾರರಾದ ಶ್ರೀ.ಹೆಚ್.ಎಸ್. ಮಹೇಶ್ ಅವರಿಗೆ ಸರ್ಕಾರ ಅವರಿಗೆ ಮರು ಸ್ವಾಧೀನ ನೀಡಬೇಕು ಮತ್ತು ಸದರಿಯವರಿಗೆ ಪರಿಹಾರ ನೀಡಬೇಕೆಂಬ ವಿಚಾರವಾಗಿ ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಅದಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ಪೂರ್ಣವಾದ ಮಾಹಿತಿ ಇದೆ. ನಾನು ಅದನ್ನು ತಮಗೆ ನೀಡುತ್ತೇನೆ.

**ಡಾ. ಜಯಮಾಲ ರಾಮಚಂದ್ರ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಣ್ಣ ಕೈಗಾರಿಕೆ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**ಉ) ವಿಷಯ:-** ಇಂದಿರಾ ಕ್ಯಾಂಟೀನ್ ಬಗ್ಗೆ.

------

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದಿನ ಉದಯವಾಣಿ ದಿನಪತ್ರಿಕೆಯಲ್ಲಿ "ಅಂದು ಹೊಗಳಿಕೆ, ಇಂದು ತೆಗಳಿಕೆ!" ಎಂಬ ಶೀರ್ಷಿಕೆಯಡಿ ಇಂದಿರಾ ಕ್ಯಾಂಟೀನ್ ಬಗ್ಗೆ ಆಗ್ರಹ ಪ್ರಕಟವಾಗಿದ್ದು. ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರದ ರುಚಿ, ಗುಣಮಟ್ಟದ ತೀವ್ರ ಕುಸಿತ ಕಂಡು ಬಂದಿದೆ, ಬಡವರ ಊಟ ಕೊಡುವ ಇಂದಿರಾಕ್ಯಾಂಟೀನ್ ಬಗ್ಗೆ ತೀವ್ರವಾದ ಅಪಸ್ವರವಿದೆ. ಇಂದಿರಾ ಕ್ಯಾಂಟೀನ್ ಅನುಷ್ಠಾನ ಆಮೆಗತಿಯಲ್ಲಿ ಸಾಗಿದೆ, ಸರ್ಕಾರದ ಪ್ರಸ್ತುತ 250

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಸ ಕ್ಯಾಂಟೀನ್ ರಚನೆ ಮಾಡಲು ಸಿದ್ಧವಾಗುತ್ತಿರುವಾಗಲೇ ಚುನಾವಣೆಗೂ ಮುನ್ನ ಹಸಿವಿನ ಬಗ್ಗೆ ಇದ್ದ ಕಾಳಜಿ, ಸರ್ಕಾರಕ್ಕೆ ಈಗ ಆಸಕ್ತಿ ಕುಂದಿದೆ ಎಂಬ ಟೀಕೆ ವ್ಯಾಪಕವಾಗಿದೆ. ಒಟ್ಟಾರೆ ಪತ್ರಿಕೆ ನಡೆಸಿದ ಸಿಂಹಾವಲೋಕನದಲ್ಲಿ ಇಂದಿರಾ ಕ್ಯಾಂಟೀನ್ ಬಿಸಿ ಕಳೆದುಕೊಂಡಿದೆ.

ರಾಯಚೂರಿನ ಎ.ಪಿ.ಎಂ.ಸಿ ಕಟ್ಟಡದ ಕೆಲಸ ಮುಗಿದಿದ್ದರೂ ಕೇಳುವವರಿಲ್ಲ, ಗಂಗಾವತಿಯಲ್ಲಿ ಕ್ಯಾಂಟೀನ್ ಪೂರ್ಣಗೊಂಡರೂ ಕ್ಯಾಂಟೀನ್ ಅರಂಭಿಸಿಲ್ಲ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 9 ಕ್ಯಾಂಟೀನ್‌ಗಳು ಲೋಕಾರ್ಪಣೆಯಾಗಿಲ್ಲ. ಕೊಪ್ಪಳ ಜಿಲ್ಲೆ ಕುಷ್ಠಗಿ ಕ್ಷೇತ್ರದಲ್ಲಿ ಕ್ಯಾಂಟೀನ್ ಮಂಜೂರಾದರೂ ಸ್ಥಳ ಆಯ್ಕೆ ಮಾಡಿಲ್ಲ, ತುಮಕೂರಿನ ಚಿಕ್ಕನಾಯಕನಹಳ್ಳಿಯಲ್ಲಿ ಸ್ವಚ್ಛತೆ ಕೊರತೆಯಿಂದ ತಿಂಡಿ ತಿನ್ನಲು ಆಗುತ್ತಿಲ್ಲ, ಮಂಡ್ಯದಲ್ಲಿ 7 ಕ್ಯಾಂಟೀನ್ ಮಂಜೂರಾಗಿದ್ದರೂ 3 ಮಾತ್ರ ರಚನೆಯಾಗಿವೆ. ಬಾಗಲಕೋಟೆಯಲ್ಲಿ 8 ಕ್ಯಾಂಟೀನ್ ಮಂಜೂರಾದರೂ ಒಂದೇ ಒಂದು ಕ್ಯಾಂಟೀನ್ ಪ್ರಾರಂಭವಾಗಿಲ್ಲ, ವಿಜಯಪುರದಲ್ಲಿ ಸಹ ಇದೇ ಪರಿಸ್ಥಿತಿ, ಉತ್ತರಕನ್ನಡದ 12 ರಲ್ಲಿ 1 ಮಾತ್ರ ಪ್ರಾರಂಭ, ಕಾರಣ ಈ ಎಲ್ಲಾ ಆಂಶಗಳನ್ನು ಗಮನಿಸಿದರೆ ಇಂದಿರಾ ಕ್ಯಾಂಟೀನ್ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮೇಲ್ನೋಟಕ್ಕೆ ಕಂಡು ಬಂದಿದ್ದು, ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಕೂಡಲೇ ಸಮಗ್ರವಾಗಿ ತನಿಖೆ ಮಾಡಬೇಕಾಗಿ ಸರ್ಕಾರವನ್ನು ಅಗ್ರಹಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರು

**ಶ್ರೀ. ಯು.ಟಿ. ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು), ಶ್ರೀ ಬಿ.ಝಡ್. ಜಮೀರ್ ಅಹಮ್ಮದ್ ಖಾನ್ (ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ)ಪರವಾಗಿ:-**ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿರುವ ಜನರು ಯಾರೂ ಕೂಡ ಹಸಿದ ಹೊಟ್ಟೆಯಿಂದ ದುಡಿಯಬಾರದು ಮತ್ತು ಹಸಿದ ಹೊಟ್ಟೆಯಿಂದ ಇರಬಾರದೆಂಬ ಉದ್ದೇಶದಿಂದ ಅತ್ಯಂತ ಕಡಿಮೆ ಬೆಲೆಯಲ್ಲಿ ಇವತ್ತು ಬೆಳಗಿನ ಉಪಹಾರ ಮತ್ತು ಊಟದ ವ್ಯವಸ್ಥೆಯನ್ನು ಮಾಡಲು ಇಂದಿರಾ ಕ್ಯಾಂಟೀನ್ ಪ್ರಾರಂಭವಾಯಿತು. ಇಂದಿರಾ ಕ್ಯಾಂಟೀನ್ ನಮ್ಮ ರಾಜ್ಯದಲ್ಲಿಯೇ ಅಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಸಹ ಗಮನ ಸೆಳೆಯಿತು. ಬೆಂಗಳೂರು ಮಹಾನಗರ ಪಾಲಿಕೆಯ 190 ವಾರ್ಡ್‌ಗಳಲ್ಲಿ ಈ ಕ್ಯಾಂಟೀನ್‌ನ್ನು ಪ್ರಾರಂಭ ಮಾಡುವುದಕ್ಕೆ ಉದ್ದೇಶಿಸಿದ್ದೇವೆ, ಅದೆಲ್ಲಾ ಪ್ರಾರಂಭವಾದ ನಂತರ, ಇವತ್ತು ಬಹಳಷ್ಟು ಬೇಡಿಕೆ ಬಂತು. ಜಿಲ್ಲಾ ಮಟ್ಟದ Head Quarters ನಲ್ಲಿಯೂ ಸಹ ಬರಬೇಕು. ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ತೀರ್ಮಾನ ಮಾಡಿಕೊಂಡು, ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕು ಕೇಂದ್ರದ Head Quarters ಗಳಲ್ಲಿ ಕೂಡ ಪ್ರಾರಂಭವಾಗಿ, ಒಂದು ಹೋಬಳಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಟ್ಟದಲ್ಲಿ, ಉಲ್ಲಾಳ ಮಟ್ಟದಲ್ಲಿ ಕೂಡ ಪ್ರಾರಂಭವಾಗಿದೆ. ಈಗಾಗಲೇ ನಮ್ಮ ರಾಜ್ಯದ ಉದ್ದಗಲಕ್ಕೂ 146 ಇಂದಿರಾ ಕ್ಯಾಂಟೀನ್ ಪ್ರಾರಂಭವಾಗಿದ್ದು, ಇವತ್ತು ಈಗಾಗಲೇ 139 ಕ್ಯಾಂಟೀನ್ ಪ್ರಾರಂಭವಾಗಿದೆ. ಅದರ ಜೊತೆಯಲ್ಲಿ ಕೆಲವೊಂದು ಕಡೆ ಇವತ್ತು ರಾಯಚೂರಿನಲ್ಲಿ ಕೆಲಸ ಪೂರ್ಣಗೊಂಡಿದೆ. ಅಲ್ಲಿನ ಶಾಸಕರು ಉದ್ಘಾಟನೆ ಮಾಡಲು ಬರುತ್ತೇನೆಂದು ಹೇಳಿದ್ದು, ನಾಲ್ಕು ದಿನ ಕಾಲಾವಕಾಶವನ್ನು ಕೇಳಿರುತ್ತಾರೆ. ಅವರ ದಿನಾಂಕವನ್ನು ನಿಗದಿಪಡಿಸಿಕೊಂಡು ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು.

(ಮುಂದು...)

(261)12.07.2018 ಟಿಸಿಹೆಚ್/ವಿಕೆ 12.00

**ಶ್ರೀ ಯು.ಟಿ.ಖಾದರ್ (ಮುಂದು):-**

ಅದೇ ರೀತಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 9 ಕ್ಯಾಂಟೀನ್‌ಗಳು ಪೂರ್ಣಗೊಂಡಿದ್ದು, ಸುಮಾರು 15 ದಿವಸದೊಳಗೆ ಅದನ್ನು ಪ್ರಾರಂಭ ಮಾಡಲಾಗುವುದು. ಮಾನ್ಯ ಸದಸ್ಯರು ಚಿಕ್ಕನಾಯಕನಹಳ್ಳಿ, ಬೀದರ್, ಮಂಡ್ಯ ಈ ಪ್ರದೇಶಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳ ಅವ್ಯವಸ್ಥೆ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ, ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಲಾಗುವುದು. ನಮ್ಮ ರಾಜ್ಯದಲ್ಲಿ ಸುಮಾರು 246 ಇಂದಿರಾ ಕ್ಯಾಂಟೀನ್‌ಗಳಲ್ಲಿ 139 ಕ್ಯಾಂಟೀನ್‌ಗಳನ್ನು ಕೂಡ ಮುಂದಿನ ನಾಲ್ಕು ತಿಂಗಳಿನೊಳಗೆ ಪ್ರಾರಂಭ ಮಾಡಲಾಗುವುದು. ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳ ಮುಖಾಂತರ ಅಲ್ಲಿ ಕ್ಯಾಂಟೀನ್‌ಗಳ ಮೆನುವನ್ನು ಬದಲಾವಣೆ ಮಾಡುವುದಕ್ಕೆ ಸಂಪೂರ್ಣವಾದ ಅವಕಾಶವಿದೆ ಮತ್ತು ಅದನ್ನು ಇನ್ನಷ್ಟು ಉತ್ತಮಗೊಳಿಸಲು ಸ್ಥಳೀಯ ಜನರ ಸಹಕಾರ ಕೊಟ್ಟಲ್ಲಿ ಅದು ಯಶಸ್ವಿ ಆಗುತ್ತದೆ. ಎಲ್ಲರ ಬಗ್ಗೆ ತೆಗಳಿಕೆ ಏನೂ ಇಲ್ಲ. ಮಾನ್ಯ ಸದಸ್ಯರು ದಿನ ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ದಿನ ಪತ್ರಿಕೆಯಲ್ಲಿ 'ಮೆನು ಬದಲಾವಣೆಯಾದ ನಂತರ, ಜನ ಹೆಚ್ಚಳ' ಎಂದು ಹೇಳಿದ್ದಾರೆ. ಆ ವಿಚಾರನ್ನೂ ಕೂಡ ಸರ್ಕಾರ ಗಮನದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಆದ ಕಾರಣ, ಅತ್ಯಂತ ಯಶಸ್ವಿಯಾಗಿದೆ. ಮಾನ್ಯ ಸದಸ್ಯರುಗಳ ಸಹಕಾರವಿದ್ದಲ್ಲಿ ಇವುಗಳನ್ನು ಇನ್ನಷ್ಟು ಯಶಸ್ವಿಗೊಳಿಸುತ್ತೇವೆ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ದಯವಿಟ್ಟು ಸಹಕಾರ ಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಸಿಕ್ಕಿದ್ದು ಅದೊಂದು ಮಾತ್ರ. ದಿನ ಪತ್ರಿಕೆಯಲ್ಲಿ 'ಬಿಸಿ ಕಳೆದುಕೊಂಡಿತೇ ಇಂದಿರಾ ಕ್ಯಾಂಟೀನ್, ರಾಜ್ಯದಾದ್ಯಂತ ಅನುಷ್ಠಾನ ವಿಳಂಬ, ಬಡವರ ಕ್ಯಾಂಟೀನ್‌ಗೆ ಇಚ್ಛಾಶಕ್ತಿಯ ಕೊರತೆ, ಅಂದು ಹೊಗಳಿಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂದು ತೆಗಳಿಕೆ ಎಂದು ಹೇಳಲಾಗಿದೆ. ಇದರ ಜೊತೆ ಇನ್ನೂ ಒಂದು ಮಾತನ್ನು ಸೇರಿಸಿದ್ದಾರೆ. ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ಆಗಿರುವಂತಹ ಮಾಹಿತಿಗಳು. . .

(ಗೊಂದಲ)

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಆ ರೀತಿ ಆಗಿದ್ದಲ್ಲಿ ಮಾನ್ಯ ಸದಸ್ಯರು ಅದಕ್ಕೆ ಆಧಾರ ಕೊಡಲಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಕುಳಿತುಕೊಳ್ಳಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಈ ವಿಷಯವನ್ನು ಶೂನ್ಯ ವೇಳೆಯಲ್ಲಿ discussion ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಏನಾದರೂ ಇಚ್ಛಾಶಕ್ತಿ ಇದ್ದರೆ, ಇದರ ಬಗ್ಗೆ ತನಿಖೆ ನಡೆಸಬೇಕು.

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಪದೇ ಪದೇ ಹೇಳಿಸಿಕೊಳ್ಳಬೇಡಿ. ತಾವು ಮಧ್ಯೆ ಮಾತನಾಡುವುದು ಬೇಡ, ದಯವಿಟ್ಟು ಕುಳಿತುಕೊಳ್ಳಿ.

**8. ಮಾನ್ಯ ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳಿಗೆ ಲಿಖಿತ ಉತ್ತರಗಳ ಮಂಡನೆ**

**ಅ) ವಿಷಯ:-** ರಾಜ್ಯಾದ್ಯಂತ ಮರಾಠ ಸಮಾಜದ ಶೈಕ್ಷಣಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಅಧ್ಯಯನವನ್ನು ದಿನಾಂಕ:24.09.2012 ಮತ್ತು ದಿನಾಂಕ:25.09.2012ರಂದು ಮರಾಠ ಸಮಾಜದ ಸ್ಥಿತಿಗತಿಗಳನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಮಾನ್ಯ ಶಂಕರಪ್ಪರವರು ಖುದ್ದಾಗಿ ಪರಿಶೀಲಿಸಿ ದಿ:30.12.2012ರಂದು ರಾಜ್ಯ ಸರ್ಕಾರಕ್ಕೆ ವರದಿಯನ್ನು ನೀಡಿ ಪ್ರಸ್ತುತ ಪ್ರವರ್ಗ III-B ಯಿಂದ II-A ಗೆ ಶೀಫಾರಸ್ಸು ಮಾಡಿರುವ ಬಗ್ಗೆ.

----

**ಡಾ|| ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:09.07.2018ರಂದು ಮಾನ್ಯ ಸದಸ್ಯರಾದ ಶ್ರೀ ಶ್ರೀಕಾಂತ್ ಎಲ್.ಘೋಟ್ನೇಕರ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ ಲಿಖಿತ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಉತ್ತರದ ಪ್ರತಿ ಲಗತ್ತಿಸಿದೆ)**

**ಆ) ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಹಾಸನ ಜಿಲ್ಲೆಯ ಸರ್ಕಾರಿ/ಅನುದಾನಿತ ಪ್ರೌಢಶಾಲೆಗಳ ಶಿಕ್ಷಕರಿಗೆ ಜಿಲ್ಲಾಧಿಕಾರಿಗಳು, ಹಾಸನ ಇವರು ದಿನಾಂಕ:28.07.2018ರಂದು ಪರೀಕ್ಷೆ ನಡೆಸಲು ಉದ್ದೇಶಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುವ ಬಗ್ಗೆ.**

**ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:10.07.2018ರಂದು ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಪರವಾಗಿ ಲಿಖಿತ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಿದೆ)**

**ಇ) ಗದುಗಿನ ತೋಂಟದಾರ್ಯ ಮಠದ ಆವರಣಕ್ಕೆ ಹೊಂದಿಕೊಂಡ ಮದ್ಯದ ಅಂಗಡಿಗಳ ನವೀಕರಣಕ್ಕೆ ಪ್ರತಿಭಟನೆ ನಡೆಯುತ್ತಿರುವ ಬಗ್ಗೆ.**

----

**ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ:10.07.2018ರಂದು ಮಾನ್ಯ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಲಿಖಿತ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ:- ವಡ್ಡರ್ಸೆ ಗ್ರಾಮದ ನಿರುದ್ಯೋಗಿ ಅಂಗವಿಕಲ ದೇವೇಂದ್ರ ಸುವರ್ಣ ಯುವಕನೋರ್ವ ಕಳೆದ ಒಂದು ವಾರದಿಂದ ರಾಜ್ಯ ಸರ್ಕಾರ ತನಗೆ ನ್ಯಾಯ ನೀಡಬೇಕೆಂದು ಆಗ್ರಹಿಸಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸುತ್ತಿರುವ ಬಗ್ಗೆ.**

----

**ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರ್ರೇ, ದಿನಾಂಕ:11.07.2018ರಂದು ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿ ಗೌಡರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಲಿಖಿತ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಿದೆ)**

## 8. ಪ್ರಕಟಣೆ

**ಸಭಾಪತಿಯವರು:-**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರು**

| ಕ್ರ.ಸಂ | ಮಾನ್ಯ ಸಚಿವರ ಹೆಸರು | | ಖಾತೆ |
|---|---|---|---|
| 01 | ಶ್ರೀ ಹೆಚ್.ಡಿ.ರೇವಣ್ಣ | : | ಮಾನ್ಯ ಲೋಕೋಪಯೋಗಿ ಸಚಿವರು, |
| 02 | ಶ್ರೀ ಬಂಡೆಪ್ಪ ಖಾಶೆಂಪೂರ | : | ಮಾನ್ಯ ಸಹಕಾರ ಸಚಿವರು, |
| 03 | ಶ್ರೀ ಮನಗೂಳಿ ಮಲ್ಲಪ್ಪ ಚನ್ನವೀರಪ್ಪ | : | ಮಾನ್ಯ ತೋಟಗಾರಿಕೆ ಸಚಿವರು, |
| 04 | ಶ್ರೀ ಜಾರಕಿಹೊಳಿ ರಮೇಶ್ ಲಕ್ಷ್ಮಣರಾವ್ | : | ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಬಂದರು ಮತ್ತು ಒಳನಾಡು ಅಭಿವೃದ್ಧಿ ಸಚಿವರು, |
| 05 | ಶ್ರೀ ವೆಂಕಟರಾವ್ ನಾಡಗೌಡ | : | ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು, |
| 06 | ಶ್ರೀ ಯು.ಟಿ.ಖಾದರ್ | : | ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು, |
| 07 | ಶ್ರೀ ಬಿ.ಝಡ್.ಜಮೀರ್ ಅಹ್ಮದ್ ಖಾನ್ | : | ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು, |

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಅಧಿಕಾರಿಗಳು:**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧಾನ ಪರಿಷತ್ ಅಧಿವೇಶನ ಪ್ರಾರಂಭದಿಂದ ಮಧ್ಯಾಹ್ನದವರೆಗೆ ಉಪಸ್ಥಿತರಿರಬೇಕಾದ ಅಧಿಕಾರಿಗಳು**

01 ಶ್ರೀಮತಿ ಶಿಖಾ : ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ
02 ಶ್ರೀ ಅಜುಂ ಪರ್ವೇಜ್ : ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

**ವಿಧಾನ ಪರಿಷತ್ ಅಧಿವೇಶನ ಮಧ್ಯಾಹ್ನದಿಂದ ಮುಕ್ತಾಯವಾಗುವವರೆಗೆ ಉಪಸ್ಥಿತರಿರಬೇಕಾದ ಅಧಿಕಾರಿಗಳು**

01 ಶ್ರೀ ಜಿ.ಕುಮಾರ್ ನಾಯ್ಕ್ : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಕಂಪನಿ ಲಿಮಿಟೆಡ್
02 ಶ್ರೀ ಚಕ್ರವರ್ತಿ ಮೋಹನ್ : ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

**ವಿಧಾನ ಪರಿಷತ್ ಅಧಿವೇಶನ ಪ್ರಾರಂಭದಿಂದ ಮುಕ್ತಾಯವಾಗುವವರೆಗೆ ಉಪಸ್ಥಿತರಿರಬೇಕಾದ ಅಧಿಕಾರಿಗಳು**

01 ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸುಇ ಇಲಾಖೆ(ಸೇವಾ ನಿಯಮಗಳು)

02 ಸರ್ಕಾರದ ಉಪ ಕಾರ್ಯದರ್ಶಿ, ಇಂಧನ ಇಲಾಖೆ,

03 ಸರ್ಕಾರದ ಉಪ ಕಾರ್ಯದರ್ಶಿ, ಕನ್ನಸ ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಸದನದಲ್ಲಿ ಇವರೆಲ್ಲಾ ಕಡ್ಡಾಯವಾಗಿ ಹಾಜರಿರಬೇಕು. ನಾನು ಮಾನ್ಯ ಸಭಾ ನಾಯಕರಿಗೆ ಪದೇ ಪದೇ ಹೇಳುತ್ತಿದ್ದೇನೆ. ಮಾನ್ಯ ಸಚಿವರುಗಳಿಗೆ ವಿಧಾನಸಭೆಯಲ್ಲಿ ಏನಾದರೂ ಕಾರ್ಯಕಲಾಪಗಳು ಇದ್ದಲ್ಲಿ ದಯವಿಟ್ಟು ನಮಗೆ ತಿಳಿಸಬೇಕು. ಅದನ್ನು ತಿಳಿಸದಿದ್ದರೆ ಅವರು ಕೆಳಮನೆಯಲ್ಲಿ ಅಥವಾ ಮೇಲ್ಮನೆಯಲ್ಲಿ ಇಲ್ಲವೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ಇನ್ನೊಂದು ಬಾರಿ ತಮಗೆ remind ಮಾಡುತ್ತಿದ್ದೇನೆ. ನಾನು ಮಾನ್ಯ ಎಲ್ಲಾ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಆಯವ್ಯಯ ಭಾಷಣದ ಮೇಲೆ 19 ಜನ ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ. ಇನ್ನೂ ಗಮನ ಸೆಳೆಯುವ ಸೂಚನೆಗಳು ಇವೆ. ಆದ್ದರಿಂದ ದಯಮಾಡಿ ಸಮಯದ ಅರಿವನ್ನು ತಿಳಿದುಕೊಂಡು ಆದಷ್ಟು ಬೇಗ short ಆಗಿ ಮಾತನಾಡಬೇಕು.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಮ್ಮ ಕಾಂಗ್ರೆಸ್ ಪಕ್ಷದಲ್ಲಿ 6 ಜನ ಮಾನ್ಯ ಸದ್ಯರುಗಳು ಮಾತನಾಡಿದ್ದಾರೆ. ಇನ್ನೂ ಸುಮಾರು 20 ಜನ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರುಗಳು ಮಾತನಾಡುವವರಿದ್ದಾರೆ. ನಿಯಮ 330 ರಡಿ ಮಾತನಾಡುವುದೂ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಮಧ್ಯಾಹ್ನ ಈ ಸದನಕ್ಕೆ ಬರುತ್ತಾರೆ. ಆದ್ದರಿಂದ ನಮ್ಮ ಪಕ್ಷದ ಹಿರಿಯ ಸದಸ್ಯರು ಕೂಡ ಮಾತನಾಡಬೇಕಾಗಿದೆ. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ರವರು ಮತ್ತು ಮಾನ್ಯ ವಿ.ಎಸ್.ಉಗ್ರಪ್ಪನವರು ಇವರೆಲ್ಲಾ ಮಾತನಾಡುತ್ತಾರೆ. ಆದ್ದರಿಂದ ದಯವಿಟ್ಟು ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಆಯಿತು, ಅವಕಾಶ ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ತಾಂತ್ರಿಕವಾದ ವಿಚಾರವಿವೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸದನದಲ್ಲಿ ಒಂದು ಆಡಳಿತ ಪಕ್ಷ, ಮತ್ತೊಂದು ವಿರೋಧ ಪಕ್ಷವಿದೆ. ಒಂದು ಬಾರಿ ಆಡಳಿತ ಪಕ್ಷದ ಸದಸ್ಯರಿಗೆ ಮಾತನಾಡಲು ಅವಕಾಶಕೊಟ್ಟರೆ, ಮತ್ತೊಂದು ಬಾರಿ ಪ್ರತಿಪಕ್ಷದ ಸದಸ್ಯರುಗಳಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಅದರಲ್ಲಿ ಎಷ್ಟು ಪಕ್ಷಗಳಿವೆ ಎಂಬುದು ಬೇರೆ. ಒಂದು ಬಾರಿ ಕಾಂಗ್ರೆಸ್ ಪಕ್ಷಕ್ಕೆ ಮಾತನಾಡಲು ಅವಕಾಶ ಮಾಡಿಕೊಡುವುದು, ಮತ್ತೊಂದು ಬಾರಿ ಜೆಡಿ(ಎಸ್)ಪಕ್ಷಕ್ಕೆ, ಮಗದೊಂದು ಬಾರಿ ಬಿ.ಜೆ.ಪಿ ಪಕ್ಷಕ್ಕೆ ಮಾತನಾಡಲು ಅವಕಾಶ ಕೊಡುವಂಥದ್ದಲ್ಲ, ಇದು ನನ್ನ ಭಾವನೆ. ಹಾಗಾಗಿ, ಆಡಳಿತ ಪಕ್ಷಕ್ಕೆ ಒಂದು ಬಾರಿ ಮಾತನಾಡಲು ಅವಕಾಶ ಮಾಡಿಕೊಟ್ಟ ನಂತರ, ಮತ್ತೊಂದು ಬಾರಿ ವಿರೋಧಪಕ್ಷಕ್ಕೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ತಾವು ಇದರ ಕಡೆ ಗಮನ ಹರಿಸಬೇಕೆಂಬುದು ನನ್ನ ವಿನಂತಿ.

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನಾನು ಅದೇ ರೀತಿ ಮಾನ್ಯ ಸದಸ್ಯರುಗಳಿಗೆ ಅವಕಾಶ ಕೊಡುತ್ತಾ, ಬಂದಿದ್ದೇನೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ತಾವು ಪ್ರತಿಯೊಬ್ಬ ಸದಸ್ಯರಿಗೂ ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಅವರು ಸದುಪಯೋಗ ಮಾಡಿಕೊಂಡಿಲ್ಲ. ತಾವು ಅವರಿಗೆ ಸದನದಲ್ಲಿ ಮಾತನಾಡಲು ಕೇಳಿದ್ದಂತಹ ಸಂದರ್ಭದಲ್ಲಿ, ಅವರು ಮಾನ್ಯ ಸಭಾಪತಿಯವರೆ, ನಾನು ನಾಳೆ ಮಾತನಾಡುತ್ತೇನೆಂದು ಹೇಳಿದ್ದಾರೆ. ಈಗ ಅಂತಹ ಮಾನ್ಯ ಸದಸ್ಯರುಗಳಿಗೆ ಮತ್ತೆ ಏಕೆ ಮಾತನಾಡಲು ಅವಕಾಶ ಮಾಡಿಕೊಡುತ್ತೀರಿ.

(ಗೊಂದಲ)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಪಾಪ, ಬೇರೆ ಯಾರಾದರೂ ಮಾನ್ಯ ಸದಸ್ಯರು ಮಾತನಾಡುವುದು ಬೇಡವೇ? ಮಾತನಾಡುವವರಿಗೆ ಇವರು ಏಕೆ ತೊಂದರೆ ಕೊಡುತ್ತಾರೆ. ಆಡಳಿತ ಪಕ್ಷದ ಸದಸ್ಯರಾದರೂ ಕೂಡ ಸದನದಲ್ಲಿ ಮಾತನಾಡುವುದು ಮಾನ್ಯ ಸದಸ್ಯರ ಹಕ್ಕು. ಮಾನ್ಯ ವಿರೋಧಪಕ್ಷದರು ಮಾತನಾಡತಕ್ಕಂಥದ್ದು ಅವರ ಹಕ್ಕು. ಬರೀ ವಿರೋಧ ಮಾಡುವವರೇ ಮಾತನಾಡುವುದಲ್ಲ, ನಾವು ಕೂಡ ಸದನದಲ್ಲಿ ಮಾತನಾಡುವುದು ನಮ್ಮ ಹಕ್ಕು....

(ಗೊಂದಲ)

**9. ಗಮನ ಸೆಳೆಯುವ ಸೂಚನೆಗಳು**

**ವಿಷಯ:-** ಭಾಷಾ ಅಲ್ಪಸಂಖ್ಯಾತ ಹಿಂದೂ ಧರ್ಮದ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಿ ಆದೇಶ ಹೊರಡಿಸಲು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಧೋರಣೆ ಬಗ್ಗೆ.

---

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ. ಭಾಷಾ ಅಲ್ಪಸಂಖ್ಯಾತ ಹಿಂದೂ ಧರ್ಮದ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಿ ಆದೇಶ ಹೊರಡಿಸಲು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಧೋರಣೆ ಬಗ್ಗೆ ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಎನ್. ಮಹೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ.

**(ಲಿಖಿತ ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅವರು ಉತ್ತರ ಕೊಟ್ಟಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಕಂಡಿಷನ್ ಹಾಕಿದ್ದಾರೆ. ಭಾರತ ಸಂವಿಧಾನದ ಪರಿಚ್ಛೇದ 30(1)ರಲ್ಲಿ ಅದನ್ನು ಮೂಲಭೂತ ಹಕ್ಕನ್ನಾಗಿ ಅವಕಾಶ ಕಲ್ಪಿಸಲಾಗಿದೆ ಎಂದು ಮಾನ್ಯ ಸಚಿವರ ಉತ್ತರದಲ್ಲಿ ಒಂದು ವಿಷಯವನ್ನು ಸೇರಿಸಿದ್ದಾರೆ. ಅಲ್ಪಸಂಖ್ಯಾತ ಶಾಲೆ ಎಂದು ಘೋಷಿಸಲು ಆ ಶಾಲೆ ಆಯಾ ಶೈಕ್ಷಣಿಕ ವರ್ಷದಲ್ಲಿ ಕಡ್ಡಾಯವಾಗಿ ಕನಿಷ್ಠ ಶೇ.25 ರಷ್ಟು ಆಯಾ/ಭಾಷಾ ಮತೀಯ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳನ್ನು ಹೊಂದಿರಬೇಕು ಎಂದು ಹೇಳಲಾಗಿದೆ. ತಾವು ಹೇಳಿರುವುದು ಇದು ಯಾವ ಸಂವಿಧಾನದಲ್ಲಿ ಇದೆ ಹೇಳಿ? ಇದು ಈ ದೇಶದ ಸಂವಿಧಾನದಲ್ಲಿ ಇದೆಯೋ ಅಥವಾ ಹೊರ ದೇಶದ ಸಂವಿಧಾನದಲ್ಲಿ ಇದೆಯೋ? National

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Commission ರವರು ಒಂದು Guidelines ಅನ್ನು ಮಾಡಿದ್ದಾರೆ. ನೀವು ಹಾಕಿರುವಂತಹ condition ಈ Guidelinesನಲ್ಲಿ ಇದೆಯೇ? ಅವರು ನ್ನು ಭೋಗಸ್ ಮಾಡಿಸಿ ದುಡ್ಡು ಹೊಡೆಯುವುದಕ್ಕೆ ಈ ರೀತಿ ಈ condition ಹಾಕಿಕೊಂಡಿದ್ದಾರೆ.

**(ಮುಂದು...)**

**(262)12.7.2018/12.10/ಎಂ.ಎಂ–ವಿ.ಕೆ**

**ಶ್ರೀ ಪುಟ್ಟಣ್ಣ (ಮುಂದು):–**

ಕೆಲವು ಅಧಿಕಾರಿಗಳು bogus registration ಅಂದರೆ attendance ಹೆಸರಿನಲ್ಲಿ ಇದಕ್ಕೆ ಬೇರೆ ಒಂದಷ್ಟು ಜನರ ಹೆಸರುಗಳನ್ನು ಸೇರಿಸಿ ಹಣ ವಸೂಲಿಗೋಸ್ಕರ ಮಾಡಿಕೊಂಡಿರುವ condition ಆಗಿದೆ. ಈ condition ಇರಬಾರದು ಎಂದು NCMEI (National Commission for Minority Educational Institutions) ಅವರು ಹೇಳಿದ್ದಾರೆ. ಈ ರೀತಿಯ ವಿದ್ಯಾರ್ಥಿಗಳ ದಾಖಲಾತಿಯಲ್ಲಿ quota fix ಮಾಡಿದರೆ, it is a serious encroachment on the right enshrined in Article 30(1) ಎಂದು ಹೇಳಿದ್ದಾರೆ. ಶೇ.25 ರಷ್ಟು condition ಹಾಕಿದ್ದನ್ನು ಇವರು reject ಮಾಡಿದ್ದರಿಂದ ಅವರು National Commission ಗೆ ಹೋದರು. 2018ರಲ್ಲಿ condition ಹಾಕಬಾರದು ಎಂದು ಹೇಳಿ ಆ condition ಅನ್ನು ಕಿತ್ತು ಹಾಕಿ ಅವರಿಗೆ minority status ಅನ್ನು ಕೊಡಬೇಕೆಂದು ಆದೇಶ ಮಾಡಿದ್ದಾರೆ. ಈ ವರ್ಷದ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಎರಡು ಆದೇಶಗಳು ಬಂದಿವೆ. ಎರಡು ಆದೇಶಗಳಲ್ಲಿ NCMEI (National Commission for Minority Educational Institutions) ನಾವೇನು ಮಾಡಿದ್ದೆವು, ಅದನ್ನು ನೀವು ಮಾಡದೇ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿದ್ದೀರಿ ಎಂದು ದಿನಾಂಕ 05–02–2018 ಮತ್ತು 06–02–2018ರಲ್ಲಿ ಆದೇಶ ಮಾಡಿದ್ದಾರೆ. ಶೇ.25 ರಷ್ಟು condition ಹಾಕುವ ಅಧಿಕಾರ ನಿಮಗಿಲ್ಲ, ಯಾವುದೇ condition ಹಾಕಬಾರದು, ಇರುವುದು ಒಂದೇ condition. ಮಾನ್ಯ ಸಚಿವರು ಓದಿದ condition ಗಳಲ್ಲಿ 2/3 ರಷ್ಟು ಇರಬೇಕೆಂದು ಇದೆ. ಅದು ಇದ್ದರೆ ಮಾತ್ರ minority status ಅನ್ನು ಕೊಡಬೇಕೆಂದು ಹೇಳಿದ್ದಾರೆ. ಅಂದರೆ, ಶಾಲೆ ನೋಂದಣಿಯಾಗಿರಬೇಕು, ಶಾಲೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು ಆಯಾ ಭಾಷಾ ಮತೀಯ ಸದಸ್ಯರ ಸಂಖ್ಯೆ ಕನಿಷ್ಠ 2/3 ಇರಬೇಕು ಎಂದಷ್ಟೇ ಹೇಳಿದ್ದಾರೆ. ಅದು ಇದ್ದರೆ ಕೊಡಬೇಕು. ಉದಾಹರಣೆಗೆ ಜೈನ ಸಮುದಾಯದವರು ವಿಜಯನಗರದ ಆರ್.ಪಿ.ಸಿ ಬಡಾವಣೆಯಲ್ಲಿ ಒಂದು ಶಿಕ್ಷಣ ಸಂಸ್ಥೆಯನ್ನು ತೆರೆಯುತ್ತಾರೆ. ಜೈನ ಸಮುದಾಯದವರು ಶೇ.25 ರಷ್ಟು ವಿದ್ಯಾರ್ಥಿಗಳನ್ನು ಎಲ್ಲಿಂದ ಹೊಂದಿಸಬೇಕು? ಅವರು ಅಷ್ಟು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂದರೆ bogus ಮಾಡಬೇಕಾಗುತ್ತದೆ. ಅಥವಾ ಭಾಷಾ ಅಲ್ಪಸಂಖ್ಯಾತರ ಸಂಖ್ಯೆ; ಕಾಟನ್‌ಪೇಟೆಯಲ್ಲಿ ಮಾಡಿದರೆ ತಮಿಳರು ಅಥವಾ ತೆಲುಗರು ಇದ್ದರೆ ಅಲ್ಲಿಗೆ ಬರುತ್ತಾರೆ. ವಿಜಯನಗರದಲ್ಲಿ ಮಾಡಿದರೆ ಅವರು ಶೇಕಡ 25ರಷ್ಟು ವಿದ್ಯಾರ್ಥಿಗಳನ್ನು ಎಲ್ಲಿಂದ ಹೊಂದಿಸಬೇಕು? ಈ condition ಅನ್ನು ಹಾಕುವುದಕ್ಕೆ ನಿಮಗೆ ಅಧಿಕಾರ ಕೊಟ್ಟವರು ಯಾರು? ನೀವು ಸಂವಿಧಾನಕ್ಕಿಂತ ಮಿಗಿಲಾದವರೇ? ಸಂವಿಧಾನವನ್ನೇ bulldoze ಮಾಡುವಂತಹ ರೀತಿಯಲ್ಲಿ ಅಧಿಕಾರಿಗಳು ಈ condition ಗಳನ್ನು ಹಾಕಿದ್ದಾರೆ. ಇದಕ್ಕೆಲ್ಲಾ ಸುಪ್ರೀಂ ಕೋರ್ಟ್‌ನ Seven Benches Judgement ಬಂದಿದೆ. ಅವರೆಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಗೆ condition ಹಾಕುವುದಾದರೆ, serious encroachment ಮಾಡುತ್ತಿದ್ದೀರಿ ಎಂದು ಹೇಳಿದ್ದಾರೆ. Condition ಹಾಕಬಾರದು ಎಂದು ಇದೆ. ಆದರೂ condition ಹಾಕಿಸುತ್ತಾರೆ. ಏಕೆಂದರೆ, ಹಣವನ್ನು ಕೀಳುವ ಕಾರ್ಯಕ್ರಮ. ಅಲ್ಲಿ ಯಾರ್‍ಯಾರು ದೊಡ್ಡ ದೊಡ್ಡ ಸಂಸ್ಥೆಗಳಿಗೆ ಮಾತ್ರ ಕೊಡಬೇಕೆಂಬ ದೃಷ್ಟಿಯಿಂದ ಮಾಡಿಕೊಂಡ ಕಾರ್ಯಕ್ರಮವಾಗಿದೆ. ಮಾನ್ಯ ಸಚಿವರು ಹೊಸಬರಾಗಿದ್ದಾರೆ. ಕಾನೂನು ಇಲಾಖೆ ಕೂಡ ಯಾವುದೇ condition ಹಾಕಬಾರದು, ಕೊಡಬೇಕು ಎಂದು ಅಭಿಪ್ರಾಯ ಪಟ್ಟಿದೆ. ಇದನ್ನು election announce ಆಗುವ ಒಂದು ತಿಂಗಳಿಗೆ ಮುಂಚೆ ಒಂದು ಕರ್ನಾಟಕ ರಾಜ್ಯ ಪತ್ರವನ್ನು ಹೊರಡಿಸಿದರು. ಅದರಲ್ಲಿ ಇದು ತಪ್ಪಾಗಿದೆ, ಶೇ.25ರಷ್ಟು ಆಯಾ ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರ ಸಮುದಾಯದ ಮಕ್ಕಳಿರಬೇಕೆಂದು, ಇದನ್ನು ಬದಲಾವಣೆ ಮಾಡಿ ಎಲ್ಲರೂ ಸೇರಿ ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರ ಎಲ್ಲಾ ಮಕ್ಕಳು ಸೇರಿ ಶೇ.25ರಷ್ಟು ಇದ್ದರೆ ಸಾಕು ಎಂದು ಮಾಡಿದರು. ಆದರೆ ಚುನಾವಣೆ ದಿನಾಂಕ ಘೋಷಣೆಯಾದ ದಿನವೇ ಇದನ್ನು ಕೂಡ withdraw ಮಾಡಿದರು. ಇದನ್ನು ಏಕೆ ಮಾಡುತ್ತಾರೆ? ದಯವಿಟ್ಟು ಈ ದೇಶದ ಸಂವಿಧಾನದಲ್ಲಿ ಮಾನ್ಯ ಅಂಬೇಡ್ಕರ್‌ರವರು ಮೂಲಭೂತ ಹಕ್ಕಾಗಿ ಏನು ಅವಕಾಶ ಮಾಡಿಕೊಟ್ಟಿದ್ದಾರೆ ಅದನ್ನು implement ಮಾಡಿ, ಅದನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಿ. ಇದನ್ನೆಲ್ಲಾ bifurcation ಮಾಡಿ ಬೇರೆ ರೀತಿ ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ಬೇಡ.

ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಸಂವಿಧಾನದಲ್ಲಿ ಏನಿದೆ, NCMEI ಏನು ಹೇಳಿದೆ ಅದರಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣರವರು ತಂದಿರುವ ಗಮನಸೆಳೆಯುವ ಸೂಚನೆಯು ಅನೇಕ ಬಾರಿ ಸದನದಲ್ಲಿ ಚರ್ಚೆಯಾಗಿದೆ ಮತ್ತು ಹೊರಗಡೆ ಕೂಡ ಚರ್ಚೆಯಾಗಿದೆ. ಆದರೆ ಸರ್ಕಾರದಿಂದ ಕಾಲ ಕಾಲಕ್ಕೆ ಸುತ್ತೋಲೆಗಳನ್ನು ಬದಲಾವಣೆ ಮಾಡಿ ಶಿಕ್ಷಣ ಸಂಸ್ಥೆಗಳನ್ನು ಅವರು ಸರಿಯಾಗಿ ನಡೆಸಿಕೊಂಡು ಹೋಗಬಾರದು, ಸುಳ್ಳು ಹೇಳಬೇಕು ಅಥವಾ ಯಾರದೋ ಮುಲಾಜಿನಲ್ಲಿರಬೇಕು, ಕೋರ್ಟ್‌ಗಳಿಗೆ ಹೋಗಬೇಕು ಎಂಬ ಸುತ್ತೋಲೆಗಳು ಪದೇ ಪದೇ ಬರುತ್ತಾ ಇವೆ. ನಾನು ತಮ್ಮ ಗಮನ ಸೆಳೆಯಬಯಸುವುದೇನೆಂದರೆ, Article 30(1) and (2) of the Constitution of India says, ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವಿಕೆಗೆ ಇದು ಅಲ್ಪಸಂಖ್ಯಾತರ ಹಕ್ಕು ಎಂದು ಹೇಳುತ್ತದೆ. This is the right given under the Constitution of India. ಧರ್ಮದ ಅಥವಾ ಭಾಷೆಯ ಮೇಲೆ ಆಧಾರಿತವಾದ ಎಲ್ಲಾ ಅಲ್ಪಸಂಖ್ಯಾತ ವರ್ಗಗಳವರು ತಮ್ಮ ಇಚ್ಛಾನುಸಾರವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಆಡಳಿತ ನಡೆಸಲು ಅವರು ಹಕ್ಕುಳ್ಳವರಾಗಿದ್ದಾರೆ ಎಂದು ಹೇಳಿದೆ. It is the clear right of the Constitution. ಇದು ಸಂವಿಧಾನಾತ್ಮಕವಾದ ಹಕ್ಕು. ಇಲ್ಲಿ ಯಾವುದೇ ಕಂಡೀಷನ್ ಹಾಕಿಲ್ಲ. Condition ಏನು ಹೇಳುತ್ತದೆ ಎಂದರೆ ಆಡಳಿತ ಮಂಡಳಿಯಲ್ಲಿ 2/3 ಸದಸ್ಯರು, Management Committee ಯಲ್ಲಿ ಅಲ್ಪಸಂಖ್ಯಾತರು ಇರಬೇಕು ಎಂದು ಹೇಳುತ್ತದೆ. ಸಂವಿಧಾನ ಜಾರಿಗೆ ಬಂದ ದಿನದಿಂದ ಇವತ್ತಿನವರೆಗೂ ಅದೇ ಪದ್ಧತಿಯಲ್ಲಿ ಲಕ್ಷಾಂತರ ಸಂಸ್ಥೆಗಳು ಇವೆ. For example, I belong to the Christian Community. ನನ್ನ ಸಮುದಾಯದಲ್ಲಿ ಅನೇಕ ಚರ್ಚಿನ ಧರ್ಮಗುರುಗಳು; ಒಂದು ಚರ್ಚ್ ಇದೆ ಎಂದರೆ, ಅದರ ಬದಿಯಲ್ಲಿ ಒಂದು ಶಾಲೆ ಇದ್ದೇ ಇರುತ್ತದೆ. ಅವನ್ನು ಲಾಭಕ್ಕಾಗಿ ಮಾಡಿರುತ್ತಾರೆ. ಕನ್ನಡ ಮಾಧ್ಯಮ ಶಾಲೆಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ರಾಜ್ಯದಲ್ಲಿ ಅಲ್ಲದೇ ದೇಶದ ಉದ್ದಗಲಕ್ಕೂ ಇವೆ. ಆದರೆ ಇವತ್ತು ರಾಜ್ಯ ಸರ್ಕಾರ ಏನು ಮಾಡುವುದಕ್ಕೆ ಹೊರಟಿದೆ ಎಂದರೆ, ಈ ಶಾಲೆಗಳನ್ನು ನಡೆಸಬೇಕಾದರೆ, there should be minimum 75% students of that community ಇರಬೇಕು ಎಂದು ಹೇಳುವುದಕ್ಕೆ ಹೊರಟಿದೆ. ನಮ್ಮ ಸಮುದಾಯದವರು ರಾಜ್ಯದಲ್ಲಿ ಇರುವುದು ಶೇ.3ರಷ್ಟು ಮಾತ್ರ. ನನ್ನ ಸಂಸ್ಥೆಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶೇ.75ರಷ್ಟು ವಿದ್ಯಾರ್ಥಿಗಳು ಇರಬೇಕು ಎಂದು ಹೇಳಿದರೆ ಅದು ಯಾವ ಕಾನೂನು? ನಾನು ಎಲ್ಲಿಂದ ತರಬೇಕು? Once you have given permission to a particular Minority Institution, why is the Government asking for renewal every time. Once a minority is always a minority. ನಾನು ಇವತ್ತು ಕ್ರಿಶ್ಚಿಯನ್ ಆಗಿದ್ದವನು ನಾಳೆ ಹಿಂದು ಆಗುತ್ತೇನೆ, ನಾಳಿದ್ದು ಮುಸ್ಲಿಂ ಆಗುತ್ತೇನೆ, ಪಾರ್ಸಿ, ಸಿಖ್ ಆಗುತ್ತೇನೆ. The Management belongs to the minority community. Then again the Government tells, ಕಳೆದ ಬಾರಿ ಬಿ.ಜೆ.ಪಿ ಪಕ್ಷದ ಸರ್ಕಾರ ಇದ್ದಾಗ ಶೇ.75 ರಷ್ಟು ವಿದ್ಯಾರ್ಥಿಗಳು ಇರಬೇಕು ಎಂದು ಮಾಡಿದರು. ಮತ್ತೊಂದು ಸರ್ಕಾರ ಅಧಿಕಾರಕ್ಕೆ ಬಂದಾಗ ಶೇ.75 ರಷ್ಟು ಬೇಡ ಅದು ಜಾಸ್ತಿಯಾಯಿತು ಶೇ.25ರಷ್ಟು ಮಾಡಲಾಗುವುದು ಎಂದು ಹೇಳಿದರು. ನಿಮ್ಮ ಇಚ್ಛೆಗೆ ಅನುಸಾರವಾಗಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಮಾಡುವುದಕ್ಕೆ ಯಾವುದೇ ಹಕ್ಕು ಸರ್ಕಾರಕ್ಕೆ ಇಲ್ಲ. Hon'ble High Court of Karnataka has said this many times. ಏನಾದರೂ ಇಂತಹ ಆದೇಶ ಕಳುಹಿಸಿ ನಿಮ್ಮ ಸಂಸ್ಥೆ ಅಲ್ಪಸಂಖ್ಯಾತ ಸಂಸ್ಥೆ ಅಲ್ಲ ಎಂದು notice ಕೊಟ್ಟಾಗ ಅವರು ಅದರ ವಿರುದ್ಧ ಹೈಕೋರ್ಟ್‌ಗೆ ಹೋಗುತ್ತಾರೆ. ಹೈಕೋರ್ಟ್‌ನಲ್ಲಿ ಒಂದು repeated order ಅಂದರೆ, you have no right to say that, 25 per cent students of that community should be there and then that Institution is continued to be a Minority Institution. ವಕೀಲರಿಗೆ fee ಕೊಡುವುದಕ್ಕೋಸ್ಕರ ವಿದ್ಯಾರ್ಥಿಗಳಿಗೆ ತೊಂದರೆ ಕೊಡುವ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, whatever you are doing is violation of the provisions under Article 30 of the Constitution. ಹಾಗಾಗಿ ಇದನ್ನು ಮಾಡುವುದಕ್ಕೆ ಕೂಡದು, ಈ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇದು ಸಂವಿಧಾನಾತ್ಮಕವಾಗಿ ನಮಗೆ ಕೊಟ್ಟಿರುವ ಹಕ್ಕನ್ನು ಕಸಿದುಕೊಂಡಂತಾಗುತ್ತದೆ ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಅನೇಕ ವರ್ಷದಿಂದ ಪದೇ ಪದೇ ಬರುತ್ತಲೇ ಇದೆ. ಮಾನ್ಯ ಸಚಿವರು ಹೊಸದಾಗಿ ಬಂದಿದ್ದಾರೆ. ಈ ವಿಚಾರ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಮತ್ತಿತರ ಐ.ಎ.ಎಸ್. ಅಧಿಕಾರಿಗಳಿಗೆ ಗೊತ್ತಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Permanent ಆಗಿ ಕುಳಿತಿರುವ ಅಧೀನ ಕಾರ್ಯದರ್ಶಿ, ಉಪಕಾರ್ಯದರ್ಶಿ ಅಥವಾ Bench Clerk, ಇದು ಅವರು ಮಾಡುವ ಕೀಟಲೆಯಾಗಿದೆ. ನಾನು ಕೂಡ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದೇನೆ. ನಾನು ಅರ್ಜಿ ಕೊಟ್ಟಾಗ "ನೀವು ಮುಸಲ್ಮಾನರು ಎಂದು Certificate ತನ್ನಿ" ಎಂದು ಹೇಳಿದರು. ನಾನು ಮುಸಲ್ಮಾನ ಎನ್ನುವುದಕ್ಕೆ ಏನು guarantee ಅದಕ್ಕೆ Certificate ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಅದಕ್ಕೆ ನಾನು Certificate ನ್ನು ನಮ್ಮಪ್ಪ ಕೊಡಬೇಕೋ ಅಥವಾ ತಹಸೀಲ್ದಾರ್ ಕೊಡಬೇಕೋ? Practical ಆಗಿ ಮಾನ್ಯ ಮಂತ್ರಿಗಳು ಸಂಬಂಧಪಟ್ಟವರಿಗೆ ಒಂದು ಸಭೆಯನ್ನು ಕರೆದು ಇದಕ್ಕೆ ಶಾಶ್ವತವಾಗಿ ಒಂದು ಪರಿಹಾರ ಮಾಡಬೇಕು. ಈಗ ನಾನು ಒಂದು ಕಾಲೇಜನ್ನು ನಡೆಸುತ್ತಿದ್ದೇನೆ, ದುರ್ದೈವ, ಮಾಡಬಾರದಾಗಿತ್ತು ಮಾಡಿಬಿಟ್ಟೆ. ಈಗ ನನ್ನ ಶಿಕ್ಷಣ ಸಂಸ್ಥೆಗೆ ಲಿಂಗಾಯಿತರು, ಒಕ್ಕಲಿಗರು ಮತ್ತು ದಲಿತರು ಬರುತ್ತಾರೆ. ಅವರೆಲ್ಲಾ ಬಡ ವಿದ್ಯಾರ್ಥಿಗಳು, ಅದು donation ಇಲ್ಲದ ಕಾಲೇಜು. 20 ವರ್ಷಗಳಿಂದಲೂ ಶೇ.85ರಷ್ಟು ಫಲಿತಾಂಶ ಬರುತ್ತಿದೆ. ಅಲ್ಲಿ ಸುಮಾರು 200 ಬ್ರಾಹ್ಮಣ ವಿದ್ಯಾರ್ಥಿನಿಯರಿದ್ದಾರೆ. ಈಗ ಅವರನ್ನೆಲ್ಲಾ ತೆಗೆದುಕೊಂಡಿರುವುದು ತಪ್ಪು, ತೆಗೆದು ಬಿಡಿ ಎಂದರೆ, ಆ ಬಡ ವಿದ್ಯಾರ್ಥಿಗಳಿಗೆ ಎಲ್ಲಾದರೂ ಒಂದು ಕಡೆ ಶಿಕ್ಷಣ ಕೊಡಬೇಕಲ್ಲವೇ? ನಾವೆಲ್ಲಾ ದಾಸೋಹಕ್ಕೆ ಇದ್ದವರು. ಲಿಂಗಾಯಿತರ ಮಠದಲ್ಲಿ ಮುಸಲ್ಮಾನರಿಗೆ ಅವಕಾಶವಿಲ್ಲವೆಂದರೆ ನಾವೆಲ್ಲಾ ಹೆಬ್ಬೆಟ್ಟು ಹಾಕುತ್ತಿದ್ದೆವು. ಅಲ್ಲಿ ಆ ಅವಕಾಶ ಇದ್ದುದರಿಂದ ಅಲ್ಪಸಂಖ್ಯಾತರು, ಕ್ರಿಶ್ಚಿಯನ್ ಸಮುದಾಯದವರು ಮಾಡಿದ್ದಾರೆ; ಭಾರತ ದೇಶದಲ್ಲಿ ಕರ್ನಾಟಕದಲ್ಲಿ ಇವತ್ತು ಒಳ್ಳೆಯ ವಿದ್ಯಾಭ್ಯಾಸ ಮತ್ತು ಆರೋಗ್ಯ ಎರಡೂ ಕ್ಷೇತ್ರಗಳಲ್ಲಿ ಮಾಡಿದ್ದಾರೆ. ಅದೇ ರೀತಿ ಜೈನರು, ಸಿಖ್ಖರು ಇವರೆಲ್ಲಾ; ಜೈನರಿಗೆ ಕೊಟ್ಟರೆ ನೀನು ಶ್ವೇತಾಂಬರನೋ, ದಿಗಂಬರನೋ ಎಂದು ಕೇಳುವಂಥ ಪರಿಸ್ಥಿತಿ ಬರಬಹುದು, ಇದು ದುರ್ದೈವ.

(ಮುಂದು)

(263) 12-07-2018/12-20/ಕೆಹೆಚ್/ಬಿಎನ್ಎಸ್

**ಶ್ರೀ ಸಿ.ಎಂ. ಇಬ್ರಾಹಿಂ (ಮುಂದು):-**

ಇದಕ್ಕೆ ತಾವು ಅವಕಾಶ ಕೊಡದೇ ಮಾನ್ಯ ಸಚಿವರಾದ ಮಹೇಶ್‌ರವರೇ ಸಂಬಂಧಪಟ್ಟ ಶಾಸಕರಿಗೂ ಮತ್ತು ಅಧಿಕಾರಿಗಳಿಗೂ ಸಲಹೆಯನ್ನು ಕೊಟ್ಟು, ಹಾಗೆಯೇ Institutions ರವರನ್ನು ಇನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದೆ ಶಾಶ್ವತವಾಗಿ ಒಂದು ಪದ ಬರದಿರುವುದಕ್ಕೆ ತಾವು ಪ್ರಯತ್ನಪಡಬೇಕೆಂದು ಹೇಳಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಭಾರತ ಸಂವಿಧಾನದ ಅನುಚ್ಛೇದ 30(1), (2)ರನ್ವಯ ಮತೀಯ ಅಲ್ಪಸಂಖ್ಯಾತರು ಮತ್ತು ಭಾಷಾ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಯಾವುದೇ ತಾರತಮ್ಯ ಮಾಡದೇ ಸಮಾನಾಂತರವಾಗಿ ಅವಕಾಶ ಮತ್ತು ಸ್ಥಾನಮಾನ ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ ಇದರಲ್ಲಿ ತಮ್ಮ ಕ್ಷೇತ್ರವು ಕೂಡ ಬರುತ್ತದೆ. ಧಾರವಾಡ Commissionerate ವ್ಯಾಪ್ತಿಯಲ್ಲಿರುವ ಆ ಭಾಗದಲ್ಲಿ ಭಾಷಿಕ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಅನುದಾನಕ್ಕೆ ಒಳಪಡಿಸುವಂತಹ ಸಂದರ್ಭದಲ್ಲಿ ಭಾಷಿಕ ಅಲ್ಪಸಂಖ್ಯಾತರ ಶಾಲೆಗಳಲ್ಲಿ ನಿಮಗೆ roster ವಿನಾಯಿತಿಯನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ ಮತ್ತು ನೀವು ಭಾಷಿಕ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಕನಿಷ್ಟ ಮಕ್ಕಳ ಸಂಖ್ಯೆ ಎಷ್ಟಿರಬೇಕೆಂದು ಬಹಳ ಸ್ಪಷ್ಟವಾಗಿ ಶಿಕ್ಷಣ ಕಾಯ್ದೆಯಲ್ಲಿ ಉಲ್ಲೇಖವಾಗಿದೆ. ಆ ಎರಡು ವಿನಾಯಿತಿಗಳನ್ನು ಮತೀಯ ಅಲ್ಪಸಂಖ್ಯಾತರಿಗೆ ಮಾತ್ರ ಕೊಟ್ಟು ಭಾಷಾ ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಆ ಕಾರಣಕ್ಕಾಗಿ ಇಡೀ ಬೆಳಗಾಂ ವಿಭಾಗದಲ್ಲಿರುವಂತಹ ಎಲ್ಲಾ ಭಾಷಿಕ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಶಿಕ್ಷಕರು ಇಲ್ಲದೇ ಇರುವಂತಹ ಸ್ಥಿತಿ ನಿರ್ಮಾಣವಾಗಿದೆ. ಆ ಹಿನ್ನೆಲೆಯಲ್ಲಿ ತಮ್ಮ ಉತ್ತರವನ್ನು ನೋಡಿದಾಗ ತುಂಬಾ ಸಂತೋಷವಾಯಿತು. ಆದರೆ ಕರವನ್ನು ನೋಡಿದಾಗ ಮಾತ್ರ ತುಂಬಾ ಆತಂಕದ ಸ್ಥಿತಿ ನಿರ್ಮಾಣವಾಗಿದೆ. ತಾವು ಮಾಹಿತಿಯನ್ನು ತರಿಸಿಕೊಂಡು ಆ ತಾರತಮ್ಯವನ್ನು ನಿವಾರಿಸುತ್ತೀರೆಂದು ಹೇಳಿ ನನ್ನ ಎರಡು ಮಾತಗಳನ್ನು ಮುಗಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮತೀಯ ಮತ್ತು ಭಾಷಾ ಅಲ್ಪಸಂಖ್ಯಾತರ ಸಂಸ್ಥೆಗಳು ನಮ್ಮ ನಾಡಿನಲ್ಲಿ ಬಹಳ ಕಾಲದಿಂದ ಶಿಕ್ಷಣಕ್ಕೆ ಬಹು ದೊಡ್ಡ ಕೊಡುಗೆಯನ್ನು ಕೊಡುತ್ತಿವೆ. ಇವತ್ತಿನ ದಿವಸ ಅಂತಹ ಸಂಸ್ಥೆಗಳಲ್ಲಿ National Commission for Minorities ಆಗಲಿ ಮತ್ತು ಸರ್ವೋಚ್ಛ ನ್ಯಾಯಾಲಯವೇ ಆಗಲಿ, ಇಂತಹ ಸಂಸ್ಥೆಗಳಲ್ಲಿ ಶಿಕ್ಷಣವನ್ನು ಪಡೆಯುವಂತಹ ವಿದ್ಯಾರ್ಥಿಗಳಿಗೆ ಈ ಷರತ್ತುಗಳನ್ನು ವಿಧಿಸದಿರಲು ನಮ್ಮ ರಾಜ್ಯದಲ್ಲಿ ದಿನಾಂಕ:18-06-2014ರಂದು ಸರ್ಕಾರವು ಒಂದು ಆದೇಶವನ್ನು ಹೊರಡಿಸಿದೆ. ಅದರಲ್ಲಿರುವ 4 ಷರತ್ತುಗಳ ಪೈಕಿ 4ನೇ ಷರತ್ತಿನಲ್ಲಿ ಇದನ್ನು ತೆಗೆಯಬೇಕೆನ್ನುವಂತಹದ್ದು ಒಂದು ಸಾರ್ವತ್ರಿಕವಾದಂತಹ ಚರ್ಚೆಯಾಗಿದೆ. ಈ ಸದನದಲ್ಲಿ ಇದರ ಬಗ್ಗೆ ಚರ್ಚೆ ಮಾಡಲು ಸಮಯ ಇಲ್ಲವೆಂದು ತಾವು ಹೇಳುತ್ತೀರಿ. ದಯಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮೆಲ್ಲಾ ಪದವೀಧರ ಕ್ಷೇತ್ರದ ಹಾಗೂ ಶಿಕ್ಷಕರ ಕ್ಷೇತ್ರದ ಎಲ್ಲಾ ಶಾಸಕರನ್ನು ಕರೆದು, ಕೂಡಲೇ ಮಾನ್ಯ ಸಚಿವರು ಇದರ ಬಗ್ಗೆ ಸುದೀರ್ಘವಾದಂತಹ ಚರ್ಚೆ ಮಾಡಿ, ಆ ಸಭೆಯಲ್ಲಿ ಈ 4ನೇ ಷರತ್ತನ್ನು ತೆಗೆದು ಅಲ್ಪಸಂಖ್ಯಾತ ಸಂಸ್ಥೆಗಳು ಶಿಕ್ಷಣಕ್ಕೆ ಅಪಾರವಾದಂತಹ ಕೊಡುಗೆಯನ್ನು ಏನು ಕೊಡುತ್ತಿದ್ದಾರೆ, ಅದು ನಮ್ಮ ನಾಡಿನ ಮಕ್ಕಳಿಗೆ ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕು. ಅದಕ್ಕಾಗಿ ಕೂಡಲೇ ಈ ಒಂದು ಮಾರ್ಪಾಡು ಮತ್ತು ತಿದ್ದುಪಡಿಗೆ ಸಂಬಂಧಿಸಿದಂತೆ ಕೂಡಲೇ ಒಂದು ಸಭೆಯನ್ನು ಕರೆದು ಸವಿಸ್ತಾರವಾದಂತಹ ಚರ್ಚೆ ಮಾಡಿ, ಇದಕ್ಕೆ ಒಂದು ತಿಲಾಂಜಲಿಯನ್ನು ಇಡಬೇಕೆಂದು ಹೇಳಿ ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ದಯಮಾಡಿ ನಂತರ ಮಾತನಾಡಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, . .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇದಕ್ಕೆ ಮೊದಲು ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

**ಶ್ರೀ ಎನ್.ಮಹೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಎತ್ತಿರುವಂತಹ objection ಏನಿದೆ, ದಿನಾಂಕ:18–06–2014 ರಲ್ಲಿ ಸರ್ಕಾರ ಹೊರಡಿಸಿರುವ ಆದೇಶದಲ್ಲಿ 4ನೇ ಮಾನದಂಡದ ಪ್ರಕಾರ ಸಂವಿಧಾನದ ಆಶಯಗಳಿಗೆ National Commission for Minorities ನ ನಿಯಮಗಳಿಗೆ ಮತ್ತು ಸರ್ವೋಚ್ಛ ನ್ಯಾಯಾಲಯದಲ್ಲಿ ಆಗಿರುವಂತಹ ತೀರ್ಪುಗಳಿಗೆ ವಿರುದ್ಧವಾಗಿದೆ. ದಿನಾಂಕ:05–02–2018 ಮತ್ತು ದಿನಾಂಕ:06–02–2018ರ National Commission for Minorities ನ ಏನೇನು ಆದೇಶಗಳು ಬಂದಿದೆ. ಅದಕ್ಕೆ ವಿರುದ್ಧವಾಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ಅಭಿಪ್ರಾಯವನ್ನು ಗೌರವಿಸುತ್ತಾ, ಇದರ ಸಾಧಕ–ಬಾಧಕಗಳನ್ನು ಮಾನ್ಯ ಶಾಸಕರುಗಳ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ, ಸೂಕ್ತ ಬದಲಾವಣೆಯನ್ನು ತರುವುದಕ್ಕೆ ಪ್ರಯತ್ನ ಪಡುತ್ತೇನೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ವಿಷಯವೇನೆಂದರೆ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ನಂತರ ಮಾನ್ಯ ಉಗ್ರಪ್ಪನವರು ಒಂದು ನಿಮಿಷ ಮಾತನಾಡಲಿದ್ದಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಹಿಂದೂ, ಮುಸಲ್ಮಾನರು ಅಥವಾ ಕ್ರೈಸ್ತರು ಪ್ರಾರಂಭ ಮಾಡಿರುವಂತಹ, Linguistic Minorities and Religious Minorities Institution ಗಳಲ್ಲಿ 25% reservation ಅನ್ನು ಮಾಡಿರುವುದು ಹಾಗೂ ಆ ವಿದ್ಯಾರ್ಥಿಗಳಿಗೆ ಕನಿಷ್ಠಪಕ್ಷ ಅಷ್ಟು ಸೀಟ್‌ಗಳನ್ನು ಕೊಡಲೇಬೇಕೆನ್ನುವ ಕಾರಣಕ್ಕಾಗಿ ಶೇಕಡಾ 25ರಷ್ಟು ಮೀಸಲಾತಿಯನ್ನು ಮಾಡಲಾಗಿತ್ತು. ಮೊದಲು ಶೇಕಡಾ 75ರಷ್ಟು ಮೀಸಲಾತಿ ಇತ್ತು. ಈಗ ಶೇಕಡಾ 25 ರಷ್ಟು ಮೀಸಲಾತಿಯನ್ನು ಮಾಡಿದ್ದಾರೆ. ಇದು ಸರಿ. ಅಷ್ಟು ಜನ ವಿದ್ಯಾರ್ಥಿಗಳಿಗೆ ಅಂದರೆ, 100ಕ್ಕೆ 100ರಷ್ಟು, ಶೇಕಡಾ 95ರಷ್ಟು, ಶೇಕಡಾ 90 ರಷ್ಟು ಅಂಕಗಳನ್ನು ತೆಗೆದವರಿಗೆ ಪ್ರವೇಶಾತಿ ಕೊಡದೇ, minority students ಅನ್ನು ಬಿಟ್ಟು ದುಡ್ಡು ಕೊಡುವವರಿಗೆ ಪ್ರವೇಶಾತಿ ಕೊಡುವುದು, minorities ಗೆ ಒಂದು ಕಡೆಯಲ್ಲಿ ಅನ್ಯಾಯವಾಗುತ್ತದೆ ಎನ್ನುವ ವಿಷಯವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಒಮ್ಮೆಲೇ ತೀರ್ಮಾನ ನಿರ್ಧಾರ ಮಾಡದೇ ಇದರಲ್ಲಿ ಸಾಕಷ್ಟು ವಿಷಯಗಳಿವೆ. ಇದರಲ್ಲಿ commercialization of education ಇದೆ. ಎಲ್ಲಾ Minorities Institution ಗಳ ಸಾಕಷ್ಟು ಜನ. ಇದರಲ್ಲಿ ನಾನು ಎಲ್ಲರೂ ಎಂದು ಹೇಳುವುದಿಲ್ಲ. ಉದಾಹರಣೆಗೆ ಮಾನ್ಯ ಸದಸ್ಯರಾದ ಇಬ್ರಾಹಿಂರವರ Institution ನಲ್ಲಿ ವ್ಯಾಪಾರೀಕರಣ ಇರದೇ ಇರಬಹುದು. ಆದರೆ ರಾಜ್ಯದಲ್ಲಿ ಬಹಳಷ್ಟು Minorities Institutions ವ್ಯಾಪಾರೀಕರಣವನ್ನು ಮಾಡುತ್ತಿದ್ದಾರೆ. ಹಾಗಾಗಿ ಇದರ ಬಗ್ಗೆ ಕೂಡಲೇ ನಿರ್ಧಾರ ಮಾಡಬಾರದು. ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ನಡೆಯಬೇಕೆಂದು ಹೇಳಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಪ್ರಕಾರ . . . ಇಡೀ ದೇಶದಲ್ಲಿ commercialization . . . ಇವತ್ತಿನ ದಿವಸ ಸಂವಿಧಾನದ . . .

(ಗೊಂದಲ)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಪುಟ್ಟಣ್ಣರವರೇ ಮತ್ತು ಮಾನ್ಯ ರವಿಕುಮಾರ್‌ರವರೇ ಒಂದು ನಿಮಿಷ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇದರ ಬಗ್ಗೆ ನನ್ನನ್ನು ನೇರವಾಗಿ ಕೇಳಿ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 141ರ ಪ್ರಕಾರ, law declared by Supreme Court to be binding on all Courts and other Authorities. Secondly, 11 Judges' Bench of the Supreme Court in the case of T.M.A. Pai Foundation vs. State of Karnataka, ಮತ್ತು P.A. Inamdar & ors. Vs. State of Maharashtra & ors. reported in [(2005) 6 SCC 537], ಈ Minority Institutions ಬಗ್ಗೆ ಏನೆಲ್ಲಾ ಕ್ರಮಗಳನ್ನು ಜರುಗಿಸಬೇಕೆಂದು the Supreme Court has already laid down the law. ಆ law laid down ಮಾಡಿರುವಂತಹದ್ದು, ಭಾರತ ಸಂವಿಧಾನದ ಅನುಚ್ಛೇದ 30(1), (2) ಇನ್ನಿತರೆ ಏನಿದೆ, ಅದಕ್ಕೆ applicable ಆಗುತ್ತದೆ ಎನ್ನುವುದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದು ಇದರಲ್ಲಿ ಷರತ್ತುಗಳನ್ನೇನು ಹಾಕಿದ್ದಾರೆ; condition Nos.1, 2 and 3, ಆ 3 ಷರತ್ತುಗಳು in accordance with the law laid down by the Supreme Court, whereas in the case of condition No.4, it is contrary to the law laid down by the Supreme Court. ಇದು ಹೇಗೆ?"The general principles relating to establishment and administration of educational institution by minorities may be summarized thus:

(i) The right of minorities to establish and administer educational institutions of their choice guaranteed under Article 30(1) is subject to the regulatory power of the State ........ **The essential ingredients of the management, including admission of students, recruitment**

**of staff and the quantum of fee to be charged cannot be regulated**."

So, this is the law laid down by the Supreme Court. Whether the law laid down by the Supreme Court is applicable to Government of Karnataka or not is the question. According to me, as a Lawyer, I am making it very clear that as per provisions of Article 141 of the Constitution of India, it is binding on the Government. That is why the condition i.e., Condition No.4 in the reply of Government is against the provisions of Article 30 of the Constitution of India as well as the law laid down by the Supreme Court. ಹಾಗಾಗಿ, clause No.4 ಅನ್ನು ಬಿಡುವಂತಹದ್ದು ಇಲ್ಲವೆಂದರೆ, ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಸರ್ಕಾರದ ಮೇಲೆ Contempt of Court case ಹಾಕಿದರೆ ಯಾರು ಹೇಳಿಕೆ ಕೊಟ್ಟಿದ್ದಾರೆ, ಅವರು ಜೈಲಿಗೆ ಹೋಗುವಂತಹ ಸಂದರ್ಭಗಳು ಇರುತ್ತವೆ ಎನ್ನುವ ಎಚ್ಚರಿಕೆ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರೇ ಉತ್ತರವನ್ನು ಹೇಳಿ.

**ಶ್ರೀ ಎನ್.ಮಹೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಪ್ರಸ್ತಾಪ ಮಾಡಿರುವ ವಿಷಯವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ಕಾರದ ಆದೇಶದಲ್ಲಿ ಸಂವಿಧಾನ ಬಾಹಿರವಾಗಿ ಅಥವಾ National Commission for Minorities ನ ಆದೇಶಕ್ಕೆ ಬಾಹಿರವಾಗಿ ಏನಾದರೂ ಬದಲಾವಣೆಗಳಾಗಿದ್ದರೆ ಖಂಡಿತವಾಗಿಯೂ ಮಾನ್ಯ ಸದಸ್ಯರುಗಳನ್ನೆಲ್ಲಾ ಕೂರಿಸಿಕೊಂಡು ಅದನ್ನು ಬದಲಾಯಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(264)12/07/2018/ಎಸ್‌ಪಿಆರ್/ಬಿಎನ್‌ಎಸ್/12:30**

**ಸಭಾಪತಿಯವರು :-** ತಾವು ಮಾನ್ಯ ಉಗ್ರಪ್ಪನವರನ್ನು ಕರೆಯಿರಿ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಷರತ್ತು ಪೂರ್ಣಗೊಳ್ಳುವವರೆಗೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ತಾವು ಹೇಳಿ.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರು ಪ್ರಕ್ರಿಯೆ ಸಾಧಕ-ಬಾಧಕಗಳ ಬಗ್ಗೆ ಹೇಳಿದ್ದಾರೆ. ಹೀಗಾಗಿ ನಾಳೆಯ ದಿವಸವೇ ಮಾನ್ಯ ಮಂತ್ರಿಗಳು ಸಭೆಯನ್ನು ಕರೆಯುತ್ತಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಅಪರಾಹ್ನ ಸದನಕ್ಕೆ ಬರುವುದರಿಂದ ಮಾನ್ಯ ಸದಸ್ಯರುಗಳಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮರವರುಗಳು ಗಮನ ಸೆಳೆಯುವ ಸೂಚನೆಗಳಡಿ ನೀಡಿರುವ ಪ್ರಸ್ತಾವನೆಯನ್ನು ನಂತರದಲ್ಲಿ ತೆಗೆದುಕೊಳ್ಳೋಣ. ಈಗ 2018-2019 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆ. ಮಾನ್ಯ ಆಯನೂರು ಮಂಜುನಾಥ್‌ರವರೇ ಈ ವಿಷಯದ ಮೇಲೆ ಮಾತನಾಡುವವರು ತುಂಬಾ ಸದಸ್ಯರಿರುವ ಕಾರಣ ತಾವು ಬಹಳ ಸಂಕ್ಷಿಪ್ತವಾಗಿ ಮಾತನಾಡಿ.

***10. ವಿತ್ತೀಯ ಕಾರ್ಯಕಲಾಪ***

***2018-19 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ***

**(ಈ ಹಂತದಲ್ಲಿ ವೈಸ್ ಛೇರ್ಮನ್ ಆದ ಶ್ರೀ ಕೆ.ಬಿ.ಶಾಣಪ್ಪ ರವರು ಸಭಾಪತಿಯ ಪೀಠವನ್ನು ಅಲಂಕರಿಸಿದರು)**

**ಶ್ರೀಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಅಲ್ಪಾವಧಿಯ ರಾಜಕೀಯ ಜೀವನದಲ್ಲಿ ಒಂದು ವಿಶೇಷವಾದ ಸಂದರ್ಭವನ್ನು ನಾನು ನೋಡುತ್ತಿದ್ದೇನೆ. ಮಾನ್ಯ ದೇವೇಗೌಡ ಹಾಗೂ ಜೆ.ಹೆಚ್.ಪಟೇಲ್‌ರವರುಗಳು ಈ ರಾಜ್ಯದ ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಮಂಡಿಸಿದ್ದ ಆಯವ್ಯಯವನ್ನು ನಾನು ನೋಡಿದ್ದೇನೆ. ಡಾ॥ ಮನ್‌ಮೋಹನ್ ಸಿಂಗ್‌ರವರು ದೇಶದ ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಂಡಿಸಿದ ಆಯವ್ಯಯಗಳನ್ನು ನಾನು ಸಂಸತ್ತಿನಲ್ಲಿ ನೋಡಿದ್ದೇನೆ. ಅದೇ ರೀತಿಯಾಗಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಂಡಿಸಿದ ಆಯವ್ಯಯವನ್ನು

ನಾನು ಲೋಕಸಭೆಯ ಸದಸ್ಯನಾಗಿ ಸಂಸತ್ತಿನಲ್ಲಿ ನೋಡಿದ್ದೇನೆ. ಮಾನ್ಯ ನರೇಂದ್ರ ಮೋದಿರವರು ದೇಶದ ಪ್ರಧಾನ ಮಂತ್ರಿಯಾದ ಸಂದರ್ಭದಲ್ಲಿ ಮಂಡಿಸಿದ್ದ ಆಯವ್ಯಯವನ್ನು ನಾನು ಸಂಸದನಾಗಿ ಸಂಸತ್ತಿನಲ್ಲಿ ನೋಡಿದ್ದೇನೆ. ಮೂರು ಪ್ರಧಾನ ಮಂತ್ರಿಗಳು ಹಾಗೂ ಎರಡು ಮುಖ್ಯಮಂತ್ರಿಗಳ ಅಧಿಕಾರಾವಧಿಯ ಸಂದರ್ಭದಲ್ಲಿ ಮಂಡಿಸಿದ್ದ ಆಯವ್ಯಯಗಳನ್ನು ನಾನು ನೋಡಿದ್ದೇನೆ ಹಾಗೂ ಅದರಲ್ಲಿ ಪಾಲ್ಗೊಂಡಿದ್ದೇನೆ. ನಾನು ವಿಧಾನ ಪರಿಷತ್‌ನ ಸದಸ್ಯನಾದ ನಂತರ ಮೊದಲನೆ ಬಾರಿಗೆ ನಾಲ್ಕು ತಿಂಗಳ ಅವಧಿಯಲ್ಲಿ ಎರಡು ಆಯವ್ಯಯಗಳನ್ನು ನೋಡುವಂತಹ ಒಂದು ಅದ್ಭುತ ಅವಕಾಶವು ನನಗೆ ದೊರೆತಿದೆ. ಇದಕ್ಕೆ ಕಾರಣವೇನೆಂದರೆ ಇದು ಪೂರಕವಾದ ಆಯವ್ಯಯವಲ್ಲ. ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದ ಆಯವ್ಯಯದ ನಂತರ ಈಗ ಮಂಡಿಸಿರುವ ಆಯವ್ಯಯವು ಪೂರಕ ಆಯವ್ಯಯವಾಗಬೇಕಾಗಿತ್ತು. ರಾಜಕೀಯ ಪರಿಸ್ಥಿತಿಗಳ ಬದಲಾವಣೆಯಾಗಿದೆ. "ನಾನು ಪೂರ್ಣ ಆಯವ್ಯಯವನ್ನು ಮಂಡಿಸಿದ್ದೇನೆ ಹಾಗೂ ಅನುಮತಿಯನ್ನು ಪಡೆದಿದ್ದೇನೆ, ಎರಡೂ ಸದನಗಳು ನನಗೆ ಒಪ್ಪಿಗೆಯನ್ನು ನೀಡಿದೆ. ಹೀಗಾಗಿ ಮತ್ತೊಂದು ಹೊಸ ಆಯವ್ಯಯದ ಅವಶ್ಯಕತೆ ಇಲ್ಲ" ಎಂಬುದಾಗಿ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಪದೇ ಪದೇ ಹೇಳಿದ್ದಾರೆ. ಹೊಸ ಸರ್ಕಾರ ಅಗತ್ಯಬಿದ್ದರೆ ತನ್ನ ಹೊಸ ಯೋಜನೆಗಳಿಗಾಗಿ ಪೂರಕ ಆಯವ್ಯಯವನ್ನು ಮಂಡಿಸಲಿ. ಇವತ್ತಿನ ದಿವಸ ಮೈತ್ರಿ ಸರ್ಕಾರವು ಅಸ್ತಿತ್ವದಲ್ಲಿದೆ. ಹಳೆಯ ಹಾಗೂ ಹೊಸ ಸರ್ಕಾರಗಳ ಆಶಯಗಳು ಆಯವ್ಯಯದಲ್ಲಿವೆ ಎನ್ನುವ ಅಂಶದ ಹಿನ್ನೆಲೆಯಲ್ಲಿ ಮಾನ್ಯ ಸಿದ್ಧರಾಮಯ್ಯನವರು ಮಾತನಾಡಿದ್ದಾರೆ. ಆದರೆ ನೂತನ ಮುಖ್ಯಮಂತ್ರಿಗಳಾಗಿರುವ ಶ್ರೀ ಹೆಚ್.ಡಿ.ಕುಮಾರಸ್ವಾಮಿರವರು ಪೂರ್ತಿಯಾಗಿ ಹೊಸ ಆಯವ್ಯಯವನ್ನು ಮಂಡಿಸುವುದಾಗಿ ಹಠ ಹಿಡಿದು, ವರದಿಗಳ ಪ್ರಕಾರ ಒಂದು ರೀತಿಯಲ್ಲಿ ಹೈಕಮಾಂಡ್‌ರವರನ್ನು ಕಾಡಿ, ಬೇಡಿ ನೂತನ ಆಯವ್ಯಯವನ್ನು ಮಂಡಿಸಿದ್ದಾರೆ. ನನ್ನ ಮುಂದಿರುವ ಜಿಜ್ಞಾಸೆ ಏನೆಂದರೆ, ಮೊನ್ನೆಯ ದಿನ ಸದನದಲ್ಲಿ ಪ್ರಸ್ತಾಪ ಬಂದಾಗ, ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ.ಕುಮಾರಸ್ವಾಮಿ ರವರು ಮಂಡಿಸಿರುವ ಆಯವ್ಯಯದ ಮೇಲೆ ಚರ್ಚೆಯನ್ನು ಮಾಡುವಾಗ ಹಳೆಯ ಆಯವ್ಯದಲ್ಲಿರುವ ಅಂಶಗಳನ್ನೇ ಈಗಲೂ ಸಹ ಮುಂದುವರೆಸಿದ್ದಾರೆ, ಹೀಗಾಗಿ ಹಿಂದಿನದನ್ನು ಉಲ್ಲೇಖ ಮಾಡಿಕೊಂಡು ಈಗಿನದನ್ನು ಓದಬೇಕು ಎಂಬುದಾಗಿ ಮಾನ್ಯ ಸದಸ್ಯರುಗಳು ಸಲಹೆಗಳನ್ನು ನೀಡಿದ್ದಾರೆ. ಆಯವ್ಯಯದ ಮೇಲೆ ನಾವು ಚರ್ಚೆಯನ್ನು ಮಾಡುವಾಗ ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿರುವ ಹಳೆಯ ಆಯವ್ಯಯ ಹಾಗೂ ಮಾನ್ಯ ಕುಮಾರಸ್ವಾಮಿರವರು ಮಂಡಿಸಿರುವ ನೂತನ ಆಯವ್ಯಯಗಳ ಎರಡೂ ಪುಸ್ತಕಗಳನ್ನು ಓದುವಂತಹ ಮೊದಲನೆ ಅವಕಾಶ ನನಗೆ ನನ್ನ ಜೀವನದಲ್ಲಿ ದೊರೆತಿದೆ. ಇದು ಮೈತ್ರಿ ಸರ್ಕಾರವಾಗಿರುವುದರಿಂದ, ಎರಡೂ ಪಕ್ಷಗಳು ನೀಡಿರುವ ಚುನಾವಣಾ

ಪ್ರಣಾಳಿಕೆಯನ್ನು ಇದರ ಜೊತೆಗೆ ಓದಬೇಕು. ಎರಡೂ ಪಕ್ಷಗಳ ಚುನಾವಣಾ ಪ್ರಣಾಳಿಕೆ ಹಾಗೂ ಆಯವ್ಯಯಗಳನ್ನು ಇಟ್ಟುಕೊಂಡು ಮಾತನಾಡುವ ವಿಶೇಷ ಸಂದರ್ಭ ಇದಾಗಿದೆ. ಈ ವಿಚಾರದಲ್ಲಿ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಂಡನೆಯಾಗಿರುವ ಆಯವ್ಯಯಗಳು ಎಷ್ಟರ ಮಟ್ಟಿಗೆ ಸರಿ ಇದೆ ಎನ್ನುವುದು ಆಯಾ ಪಕ್ಷದ ಸದಸ್ಯರುಗಳು ವ್ಯಕ್ತಿಗತವಾಗಿ ಮಾತನಾಡುವಾಗ ಯಾವ ರೀತಿಯಾಗಿ ತಮ್ಮ ಅಭಿಪ್ರಾಯಗಳನ್ನು ನೀಡುತ್ತಾರೆ ಎಂಬುದು ನಮಗೆ ಗೊತ್ತಿರುವುದರಿಂದ ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಹೀಗಾಗಿ ನಾನು ಈ ವಿಚಾರವನ್ನು ಪ್ರಸ್ತಾಪಿಸುವುದಿಲ್ಲ. ಪ್ರಸ್ತುತ ಮಂಡಿಸಿರುವ ಆಯವ್ಯಯದಲ್ಲಿ ಹಳೆಯ ಆಯವ್ಯಯದಲ್ಲಿನ ಅಂಶಗಳನ್ನು ಮುಂದುವರೆಸಿರುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಳೆಯ ಅಂಶಗಳನ್ನೇ ಮುಂದುವರೆಸಿರುವುದರಿಂದ ಈಗ ಮಂಡಿಸಿರುವುದನ್ನು ಆಯವ್ಯಯ ಎಂದು ನಾವು ತಿಳಿದುಕೊಳ್ಳಬೇಕೋ. ಯಾವ ಯಾವ ಯೋಜನೆಗಳನ್ನು ಮುಂದುವರೆಸಲಾಗಿದೆ ಎಂಬುದರ ಬಗ್ಗೆ ಹೇಳಬೇಕು. ಹಿಂದಿನ ಸರ್ಕಾರದ ಎಲ್ಲಾ ಯೋಜನೆಗಳನ್ನು ಮುಂದುವರೆಸಲಾಗಿದೆ ಎಂಬುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಅವು ಯಾವ ಯಾವ ಯೋಜನೆಗಳು ಎಂಬುದರ ಬಗ್ಗೆ ಹೇಳಿಲ್ಲ. ಯಾವ ಯೋಜನೆಗಳಿಗೆ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ? ಮಾನ್ಯ ಸಿದ್ಧರಾಮಯ್ಯನವರು ಮೀಸಲಿಟ್ಟ ಹಣದ ಪ್ರಮಾಣದಷ್ಟೇ ಈಗಲೂ ಸಹ ಮೀಸಲಿಡಲಾಗಿದೆಯೇ? ಅಥವಾ ಯಾವುದೇ ರೀತಿಯ ಅನುದಾನವನ್ನು ಕಡಿತಗೊಳಿಸಲಾಗಿದೆಯೇ ಅಥವಾ ಜಾಸ್ತಿ ಮಾಡಲಾಗಿದೆಯೇ? ಇಂತಹ ಯಾವುದೇ ರೀತಿಯಾದ ಮಾಹಿತಿಗಳು ಪ್ರಸ್ತುತ ಆಯವ್ಯಯದಲ್ಲಿ ದೊರೆಯುವುದಿಲ್ಲ. ಇಲ್ಲಿ ಯಾವುದು ಆಯ, ಯಾವುದು ವ್ಯಯ ಎಂಬುದು ಗೊತ್ತಾಗುತ್ತಿಲ್ಲ. ಹೀಗಾಗಿ ಒಂದು ಖಂಡಿಕೆಯಲ್ಲಿ ನಾವು ಊಹೆಯನ್ನು ಮಾಡಕೊಳ್ಳಬೇಕು. ಏಕೆಂದರೆ, ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನಾವು ಶಾಸಕರುಗಳಾಗಿರಲಿಲ್ಲ. ಸದರಿ ಆಯವ್ಯಯದ ಮೇಲೆ ಚರ್ಚೆಯನ್ನು ಮಾಡಿದಾಗ, ನಾವು ಈ ಸದನದ ಸದಸ್ಯರಾಗಿರಲಿಲ್ಲ. ಅದರಲ್ಲಿನ ಅಂಶಗಳ ಬಗ್ಗೆ ನಮಗೆ ಗೊತ್ತಿಲ್ಲ. ಅಂತಹ ಅಂಶಗಳ ಬಗ್ಗೆ ನೂತನ ಆಯವ್ಯಯದಲ್ಲಿ ಉಲ್ಲೇಖ ಮಾಡಬೇಕಾಗಿತ್ತು. ಹಿಂದಿನ ಸರ್ಕಾರದ ಇಂತಿಂಥ ಯೋಜನೆಗಳನ್ನು ನಾವು ಮುಂದುವರೆಸಿದ್ದೇವೆ ಎನ್ನುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು. ಇದರ ಜೊತೆಗೆ ಯಾವ ಯೋಜನೆಗಳಿಗೆ ಎಷ್ಟು ಹಣವನ್ನು ವಿನಿಯೋಗಿಸಲಾಗುತ್ತಿದೆ ಎಂಬುದರ ವಿವರಣೆಯನ್ನು ನೀಡಬೇಕಾಗಿತ್ತು. ಆದರೆ ಈ ಬಗ್ಗೆ ಸ್ಪಷ್ಟವಾಗಿ ಹೇಳದೇ ಕೇವಲ ಅಸ್ಪಷ್ಟ ಉಲ್ಲೇಖವನ್ನು ಮಾಡಿದ್ದಾರೆ. ಹೀಗಾಗಿ ಈಗ ಪ್ರಶ್ನೆ ಉದ್ಭವವಾಗಿದೆ. ಹಳೆಯ ಯೋಜನೆಗಳನ್ನು ನೂತನ ಸರ್ಕಾರವು

ಮುಂದುವರೆಸಿದೆ ಎಂಬುದಾಗಿ ಹೇಳಲಾಗಿದೆ. ಆದರೆ ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದ ಆಯವ್ಯಯದಲ್ಲಿನ ಎಲ್ಲಾ ಯೋಜನೆಗಳನ್ನು ಮುಂದುವರೆಸುವಾಗ, ಅವರು ಮೀಸಲಿಟ್ಟ ಹಣವನ್ನೇ ಈಗಲೂ ಸಹ ಮುಂದುವರೆಸಲಾಗಿದೆಯೇ? ಇದಕ್ಕೆ ಉತ್ತರವನ್ನು ಯಾರು ನೀಡಬೇಕು? ಹಳೆಯ ಯೋಜನೆಗಳನ್ನು ಹಾಗೂ ಸದರಿ ಯೋಜನೆಗಳಿಗೆ ಮೀಸಲಿಟ್ಟ ಹಣವನ್ನೂ ಸಹ ಮುಂದುವರೆಸಲಾಗಿದೆ ಎಂಬುದಾಗಿ ನಾವು ಭಾವಿಸುತ್ತೇವೆ. ಆದರೆ ನಿನ್ನೆಯ ದಿವಸ ಮಾನ್ಯ ಸಾರಿಗೆ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರವನ್ನು ನೀಡುವ ಸಂದರ್ಭದಲ್ಲಿ ನನಗೆ ಆಶ್ಚರ್ಯವಾಯಿತು. ಏಕೆಂದರೆ, ಅವರು "ನನ್ನ ಬಳಿ ಹಣವಿಲ್ಲ, ಹೀಗಾಗಿ ನೀವು ಬಸ್ ಪಾಸ್‌ನ್ನು ಕೊಡಿಸುತ್ತೀರೋ" ಎಂಬುದಾಗಿ ಸದಸ್ಯರನ್ನು ಕೇಳಿದರು. ನಾವು ವಿರೋಧ ಪಕ್ಷದ ಸದಸ್ಯರು, ನಮ್ಮ ಬಳಿ ಮಾಹಿತಿ ಕಡಿಮೆ ಇರುತ್ತದೆ, ನಾವು ಅಲ್ಲಿ ಇಲ್ಲಿ ಕೇಳಿ ಹೇಳುತ್ತೇವೆ ಅಥವಾ ದಿನಪತ್ರಿಕೆಗಳನ್ನು ಓದಿರುತ್ತೇವೆ. ಆದರೆ ಒಬ್ಬ ಸಂಪುಟ ದರ್ಜೆಯ ಸಚಿವರು ಪಾಪ! ತಮ್ಮ ಹತ್ತಿರ ಹಣವಿಲ್ಲ ಎಂಬುದಾಗಿ ಹೇಳಿದರು. ಹಾಗಾದರೆ ಮಾನ್ಯ ಸಿದ್ಧರಾಮಯ್ಯನವರು ಸಾರಿಗೆ ಇಲಾಖೆಗಾಗಿ ಮೀಸಲಿಟ್ಟ ಹಣ ಇದೆಯೋ ಅಥವಾ ಇಲ್ಲವೋ? ಬಸ್ ಪಾಸ್‌ಗಳಿಗೆ ಮೀಸಲಿಟ್ಟ ಹಣವನ್ನು ಮುಂದುವರೆಸಲಾಗಿದೆಯೇ ಅಥವಾ ತೆಗೆಯಲಾಗಿದೆಯೇ? ವಿದ್ಯಾರ್ಥಿಗಳಿಗೆ ಬಸ್ ಪಾಸ್‌ಗಳನ್ನು ಕೊಡುವುದಕ್ಕೆ ಯಾವ ರೀತಿಯಾದ ಸಮಸ್ಯೆ ಇದೆ? ಮಾನ್ಯ ಸಿದ್ಧರಾಮಯ್ಯನವರು ವಿದ್ಯಾರ್ಥಿಗಳಿಗೆ ಬಸ್ ಪಾಸ್ ಕೊಡುತ್ತೇವೆ ಎಂದು ತಮ್ಮ ಆಯವ್ಯಯದಲ್ಲಿ ಹೇಳಿದ್ದಾರೆ. ಆಡಳಿತ ಪಕ್ಷದವರು ಹಳೆಯ ಆಯವ್ಯಯವನ್ನು ಓದಬೇಕು ಎಂದು ಹೇಳಿದ ಮೇಲೆ ನಾನು ಅದನ್ನು ಹುಡುಕಿಸಿ, ತರಿಸಿಕೊಂಡು ಓದಿದ್ದೇವೆ. ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್ ಪಾಸ್‌ನ್ನು ನೀಡುತ್ತೇವೆ ಯಾವುದೇ ರೀತಿಯಾದ ರಿಯಾಯಿತಿ ಬೇಡ ಎಂಬುದಾಗಿ ಹಳೆಯ ಆಯವ್ಯಯದಲ್ಲಿ ಹೇಳಲಾಗಿದೆ. ವಿದ್ಯಾರ್ಥಿಗಳಿಗೆ ಬಸ್‌ಪಾಸ್‌ನ್ನು ಉಚಿತವಾಗಿ ನೀಡುತ್ತೇವೆ ಎಂಬುದಾಗಿ ಈ ಹಿಂದಿನ ಸರ್ಕಾರ ಘೋಷಿಸಿದ್ದನ್ನು ನೂತನ ಸರ್ಕಾರ ಮುಂದುವರೆಸಿಕೊಂಡು ಬಂದಿದ್ದು ನಿಜವೇ ಆಗಿದ್ದಲ್ಲಿ, ಬಸ್ ಪಾಸ್‌ನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ಏಕೆ ಕೊಡಲು ಆಗುತ್ತಿಲ್ಲ? ಈ ವಿಚಾರದಲ್ಲಿ ಯಾವುದೇ ರೀತಿಯಾದ ಹಣದ ಕಡಿತವಾಗಿದೆಯೇ? ಮಾನ್ಯ ಸಿದ್ಧರಾಮಯ್ಯನವರು ಸಾರಿಗೆ ಇಲಾಖೆಗೆ ಮೀಸಲಿಟ್ಟ ಹಣ ಈಗ ಇಲ್ಲವೇ? ಅಥವಾ ಹಣ ಇಲ್ಲದೆಯೇ ಮಾನ್ಯ ಸಿದ್ಧರಾಮಯ್ಯನವರು ಆ ರೀತಿಯಾಗಿ ಘೋಷಣೆಯನ್ನು ಮಾಡಿದ್ದರೆ? ಈ ರೀತಿಯಾದ ಹಲವಾರು ಪ್ರಶ್ನೆಗಳು ಉದ್ಭವವಾಗುತ್ತವೆ. ಆಯವ್ಯಯದಲ್ಲಿ ನಮಗೆ ಇರುವ ಆಯ, ವ್ಯಯ ಹಾಗೂ ಬಾಕಿ ಮೊತ್ತಗಳ ವಿವರಗಳು ಗೊತ್ತಾಗದಿದ್ದರೆ ನಮಗಿರುವ ಸಾಲ ಎಷ್ಟು, ಬಡ್ಡಿ ಎಷ್ಟು ಇತ್ಯಾದಿ ಮಾಹಿತಿ ದೊರೆಯುವುದಿಲ್ಲ. ಪ್ರಾಯಶಃ ಇದು ವಿಶೇಷವಾದ ಆಯವ್ಯಯವಾಗಿರಬಹುದು. ಮಾನ್ಯ ಮುಖ್ಯಮಂತ್ರಿಗಳು ತಾವು ಮಂಡಿಸುವ

ಆಯವ್ಯಯದ ಬಗ್ಗೆ ಯಾರೂ ಕಲ್ಪನೆಯನ್ನು ಮಾಡಿಕೊಳ್ಳುತ್ತಿಲ್ಲ ಎಂಬುದಾಗಿ ಹೇಳಿದರು. ನಿಜವಾಗಿಯೂ ಸಹ ಹಾಲಿ ಮಂಡಿಸಿರುವ ಆಯವ್ಯಯವು ಕಲ್ಪನೆಯನ್ನೂ ಸಹ ಮಾಡಿಕೊಳ್ಳಲು ಆಗದ ಆಯವ್ಯಯವಾಗಿದೆ. ಎಲ್ಲಾ ಅಂಶಗಳನ್ನು ಊಹೆ ಮಾಡಿಕೊಳ್ಳುತ್ತಿರಬೇಕು. ಇದು ಕಲ್ಪನೆಗೂ ಸಹ ನಿಲುಕದ ಆಯವ್ಯಯವಾಗಿದೆ.

ಮಾನ್ಯ ಸಿದ್ಧರಾಮಯ್ಯನವರು ಘೋಷಿಸಿದ ಎಲ್ಲಾ ಯೋಜನೆಗಳನ್ನು ನೂತನ ಸರ್ಕಾರ ಮುಂದುವರೆಸಿದ್ದರೆ, ಎರಡು ಕೆ.ಜಿ. ಅಕ್ಕಿಯನ್ನು ಏಕೆ ಕಡಿಮೆ ಮಾಡಲಾಗಿದೆ? ಎರಡು ಕೆ.ಜಿ.ಗಳಷ್ಟು ಅಕ್ಕಿಯನ್ನು ಕಡಿತಗೊಳಿಸಿ, ಐದು ಕೆ.ಜಿ.ಯಷ್ಟು ಅಕ್ಕಿಯನ್ನು ಮುಂದುವರೆಸಲಾಗಿದೆ. ಅದರರ್ಥ ನೂತನ ಸರ್ಕಾರ ತನಗೆ ಹೇಗೆ ಬೇಕೋ ಹಾಗೆ ತನ್ನ ಆಕಾರಕ್ಕೆ ತಕ್ಕಂತೆ ಮಾನ್ಯ ಸಿದ್ಧರಾಮಯ್ಯನವರು ಘೋಷಿಸಿದ ಎಲ್ಲಾ ಇಲಾಖೆಗಳಲ್ಲಿನ ಯೋಜನೆಗಳ ತಲೆ, ಬಾಲವನ್ನು ಕಡಿತಗೊಳಿಸಲಾಗಿದೆ. ಅರ್ಥಾಥ್ ಕಾಂಗ್ರೆಸ್ ಪಕ್ಷದ ಸರ್ಕಾರ ಮಂಡಿಸಿದ ಆಯವ್ಯಯವನ್ನು ಮಾನ್ಯ ಕುಮಾರಸ್ವಾಮಿ ನೇತೃತ್ವದ ಸರ್ಕಾರ ಮುಂದುವರೆಸಿದೆ ಎನ್ನುವ ವಿಷಯದಲ್ಲಿ ನಾವು ಯಥಾವತ್ತಾಗಿ ಹಿಂದಿನ ಆಯವ್ಯಯವನ್ನು ಭಾವಿಸಬೇಕಾಗಿಲ್ಲ. ಎರಡು ಕೆ.ಜಿ. ಅಕ್ಕಿಯನ್ನು ಕಡಿತ ಮಾಡಿದ ಮೇಲೆ ನೂತನ ಸರ್ಕಾರ ಏನು ಕೊಟ್ಟಂತಾಯಿತು? ಈಗ ಸ್ವಲ್ಪ ಹೊತ್ತಿನ ಮುಂಚೆ ಅನ್ನಭಾಗ್ಯ ಯೋಜನೆಗೆ ಸಂಬಂಧಪಟ್ಟಂತೆ ಅಕ್ಕಿಯ ವಿಷಯವಾಗಿ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರಾದ ಜಮೀರ್ ಅಹ್ಮದ್ ಖಾನ್‌ರವರು ಪ್ರಶ್ನೆಯೊಂದಕ್ಕೆ ಉತ್ತರವನ್ನು ನೀಡಿದ್ದಾರೆ. ಅನ್ನ ಭಾಗ್ಯ ಯೋಜನೆಯಡಿ ರಾಜ್ಯ ಸರ್ಕಾರವು ಇತ್ತೀಚೆಗೆ ಪ್ರತಿ ಪಡಿತರ ಕುಟುಂಬಕ್ಕೆ ಏಳು ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡುತ್ತಿತ್ತು. ಅದರಲ್ಲಿ ಐದು ಕೆ.ಜಿ. ಅಕ್ಕಿಯನ್ನು ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿ ಕೇಂದ್ರ ಸರ್ಕಾರ ಹಾಗೂ ಎರಡು ಕೆ.ಜಿ. ಅಕ್ಕಿಯನ್ನು ರಾಜ್ಯ ಸರ್ಕಾರ ಕೊಡುತ್ತಿದೆ ಎಂಬುದಾಗಿ ಇದೇ ಸದನದಲ್ಲಿ ಮಾನ್ಯ ಮಂತ್ರಿಗಳು ಹೇಳಿದರು. ಮಾನ್ಯ ಸಿದ್ಧರಾಮಯ್ಯನವರು ನಿನ್ನೆಯ ದಿವಸ ಟಿ.ವಿ.ವಾಹಿನಿಯೊಂದರಲ್ಲಿ ಮಾತನಾಡುತ್ತಿದ್ದರು. ಅವರು ಪತ್ರ ಬರೆದಿರುವುದಾಗಿ ನಾನು ಓದಿದ್ದೇನೆ. ಆದರೆ ಅದನ್ನು ನಾನು ನೋಡಿಲ್ಲ.

**(ಮುಂದು)**

(265) 06–07–2018 12.40 ಬಿಎಸ್‌ಡಿ–ಜಿಆರ್

**ಶ್ರೀ ಆಯನೂರು ಮಂಜುನಾಥ್ (ಮುಂದು)**

ಮಾನ್ಯ ಸಿದ್ದರಾಮಯ್ಯನವರಂತೆ ' ಇದು ನನ್ನ ಕನಸಿನ ಕೂಸು, ಇಡೀ ರಾಜ್ಯದಲ್ಲಿ ಯಾರೂ ಉಪವಾಸ ಮಲಗಬಾರದು ಎನ್ನುವ ಕಲ್ಪನೆಯಲ್ಲಿ ಈ ಯೋಜನೆಯನ್ನು ತಂದಿದ್ದೇನೆ, 2 ಕೆ.ಜಿ. ಅಕ್ಕಿಯನ್ನು ಕಡಿತಗೊಳಿಸಬಾರದು' ಎಂದು ಹೇಳಿದ್ದಾರೆ. ಇದನ್ನು ಎಲ್ಲರೂ ಸ್ವಾಗತ ಮಾಡುವಂತಹದ್ದೇ ಆಗಿದೆ. ಈ ದೇಶದಲ್ಲಿ ಆಹಾರ ಭದ್ರತೆ ಕಾಯ್ದೆ ಜಾರಿಯಲ್ಲಿರುವಾಗ ಯಾರೂ ಉಪವಾಸದಲ್ಲಿ ಇರಬಾರದು. ಅಂದರೆ ಇವರ ಅನ್ನಭಾಗ್ಯ ಯೋಜನೆಯನ್ನು ತೆಗೆದುಹಾಕಿ ನರೇಂದ್ರ ಭಾಗ್ಯ ಎಂದು ಬರೆಯಬೇಕಲ್ಲವೇ? ರಾಜ್ಯ ಸರ್ಕಾರ ಏನೂ ಕೊಡಲಿಲ್ಲ.

**ಶ್ರೀ ಯು.ಟಿ. ಅಬ್ದುಲ್ ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ, ...

**ಶ್ರೀ ಆಯನೂರು ಮಂಜುನಾಥ್ :–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಶ್ರೀ ಯು.ಟಿ. ಅಬ್ದುಲ್ ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮಾತಿಗೆ ಪೂರಕವಾಗಿ ಹಾಗೂ ಅವರ ಮಾಹಿತಿಗಾಗಿ ಹೇಳಲಿಚ್ಛಿಸುತ್ತೇನೆ.

**ವೈಸ್ ಛೇರ್ಮನ್:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು yield ಆಗುತ್ತಿಲ್ಲ. Why do you force him? ಸರ್ಕಾರದ ವತಿಯಿಂದ ಉತ್ತರವನ್ನು ನೀಡುವ ಸಮಯದಲ್ಲಿ ಅವೆಲ್ಲವನ್ನೂ ಹೇಳಿ. ಅವರು yield ಆದರೆ I don't have any objection.

**ಶ್ರೀ ಆಯನೂರು ಮಂಜುನಾಥ್ :–** ಮಾನ್ಯ ಸಭಾಪತಿಯವರೇ, ಇಂತಹ intervention ನಿಂದ ನನ್ನ thoughts break ಆಗಿಬಿಡುತ್ತದೆ. ನಾನು ಯಾವುದನ್ನೂ ಊಹೆ ಅಥವಾ ಕಲ್ಪನೆ ಮೇಲೆ ಮಾತನಾಡುವುದಿಲ್ಲ. ಕೇಂದ್ರ ಸರ್ಕಾರವು 5 ಕೆ.ಜಿ ಅಕ್ಕಿಯನ್ನು ರೂ.29 ರಂತೆ ಸಬ್ಸಿಡಿ ಕೊಡುತ್ತದೆ ಎಂದು ಹೇಳಿದ್ದಾರೆ ರಾಜ್ಯ ಸರ್ಕಾರದ ಮಂತ್ರಿಗಳು ಹೇಳಿದ್ದಾರೆ. ನಾನು Food Corporation of India ಅಧ್ಯಕ್ಷನಾಗಿದ್ದೆನು. ಈ ರಾಜ್ಯಕ್ಕೆ 2.15 ಲಕ್ಷ ಟನ್ ಅಕ್ಕಿಯನ್ನು ಪ್ರತಿ ತಿಂಗಳು ಕೊಡುತ್ತಿದ್ದೆನು. ಈ ಮಾಹಿತಿ ಅವರಿಗೆ ಇಲ್ಲ. ಆದರೆ ಕೇಂದ್ರ ಸರ್ಕಾರ ಕೊಟ್ಟ ಅಕ್ಕಿ ಯೋಜನೆಯಾಗಿದ್ದು, ಈಗ ರಾಜ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದಿಂದ 2 ಕೆ.ಜಿ. ಅಕ್ಕಿಯನ್ನು ಕಟ್ ಮಾಡಿದ ಮೇಲೆ ಈ ಅಕ್ಕಿ ಭಾಗ್ಯ ಯಾರದ್ದು? ಇದು ಕೇಂದ್ರ ಸರ್ಕಾರದ ನರೇಂದ್ರ ಮೋದಿಯವರ ಭಾಗ್ಯವೋ ಅಥವಾ ರಾಜ್ಯದ ಸಿದ್ದರಾಮಯ್ಯನವರ ಅನ್ನಭಾಗ್ಯವೋ? ಇದನ್ನು ಏನೆಂದು ಕರೆಯಬೇಕು. ಕೇಂದ್ರ ಸರ್ಕಾರದಿಂದ ಅನುದಾನ ಬಂದ ನಂತರ ಸೌಜನ್ಯಕ್ಕಾದರೂ ಹೇಳಬೇಕಲ್ಲವೇ? ಈ ಫೆಡರಲ್ ವ್ಯವಸ್ಥೆಯನ್ನು ಒಪ್ಪಿಕೊಂಡ ಮೇಲೆ ಎಲ್ಲಾದರೂ ಕೇಂದ್ರ ಸರ್ಕಾರವು ರೂ.29ರಷ್ಟು ಧನ ಸಹಾಯ ಕೊಡುತ್ತದೆ ಎಂದು ಹೇಳಿದ್ದಾರೆಯೇ? ಈ ಸೌಜನ್ಯವನ್ನು ತೋರಿಸಿದ್ದಾರೆಯೇ?

**ಶ್ರೀ ಯು.ಟಿ. ಅಬ್ದುಲ್ ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಅನ್ನಭಾಗ್ಯ ಯೋಜನೆಯು ಕೇಂದ್ರದಲ್ಲಿ ಆಹಾರ ಭದ್ರತೆ ಕಾಯ್ದೆ ಬರುವುದಕ್ಕೆ ಮುಂಚೆಯೇ ಘೋಷಣೆಯಾಗಿದೆ. ಆಗ ಒಂದು ವರ್ಷ ಕರ್ನಾಟಕ ರಾಜ್ಯದಲ್ಲಿ ನಾವೇ ಅಕ್ಕಿಯನ್ನು ಖರೀದಿ ಮಾಡಿ ಜನರಿಗೆ ಪೂರೈಕೆ ಮಾಡಿ, ಯಾರೂ ಹಸಿವಿನಿಂದ ಸಾಯಬಾರದು, ಹಸಿವು ಮುಕ್ತ ಕರ್ನಾಟಕವನ್ನು ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಜಾರಿಗೆ ತಂದಿದೆ. ತದನಂತರ ಯು.ಪಿ.ಎ., ಸರ್ಕಾರ ಆಹಾರ ಭದ್ರತೆ ಕಾಯ್ದೆ ಬಂದ ಸಂದರ್ಭದಲ್ಲಿ ಇಡೀ ದೇಶದಲ್ಲಿ ಪ್ರಧಾನ ಮಂತ್ರಿಗಳು ಯಾರೇ ಇದ್ದರೂ ಕಾಯ್ದೆಗನುಗುಣವಾಗಿ ರೂ.29ಗಳ ಸಬ್ಸಿಡಿಯನ್ನು ಕೊಡಲೇಬೇಕು. ಅನ್ನಭಾಗ್ಯ ಯೋಜನೆಯು ಕರ್ನಾಟಕದ ಕನಸಿನ ಕೂಸಾಗಿದ್ದು, ಇಡೀ ದೇಶದಲ್ಲಿ ಎಲ್ಲಿಯಾದರೂ ಉಚಿತವಾಗಿ ಅಕ್ಕಿ ಕೊಡುವ ಯೋಜನೆ ಇದ್ದರೆ ಅದು ಕರ್ನಾಟಕದಲ್ಲಿ ಮಾತ್ರ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಕೇಂದ್ರ ಸಬ್ಸಿಡಿ ಕೊಡುವುದಾದರೆ ಬೇರೆ ರಾಜ್ಯಗಳಲ್ಲಿ ಏಕೆ ಕೊಡುವುದಿಲ್ಲ? ಛತ್ತೀಸ್‌ಘಡದಲ್ಲಿ ಏಕೆ ಕೊಡುವುದಿಲ್ಲ?

**ಶ್ರೀ ಆಯನೂರು ಮಂಜುನಾಥ್ :-** ಮಾನ್ಯ ಸಭಾಪತಿಯವರೇ, ನನಗೂ ಸಂತೋಷ ಇದೆ. ಅವರು ಸಚಿವರಾಗಿರುವುದರಿಂದ ಅವರಷ್ಟು ಮಾಹಿತಿ ನನ್ನ ಬಳಿ ಇರುವುದಿಲ್ಲ. ಆದರೆ ಅವರೇ ಜಾರಿಗೆ ತಂದಿದ್ದು ಎಂದಿಟ್ಟುಕೊಂಡರೂ, ಅವರ ಕನಸಿನ ಕೂಸಿಗೆ ಕೇಂದ್ರ ಸರ್ಕಾರ ಆಹಾರ ಕೊಟ್ಟು ಸಾಕುತ್ತಿರುವ ಬಗ್ಗೆ ಹೇಳುವುದಕ್ಕೆ ಸಂಕೋಚ ಏಕೆ? ಅದು ಯು.ಪಿ.ಎ., ಸರ್ಕಾರ ಇರಲಿ, ಇನ್ನೊಂದು ಸರ್ಕಾರ ಇರಲಿ. ಇಲ್ಲಿ ರಾಜ್ಯದಲ್ಲಿ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಮಾಡಿದೆ ಎಂದು ಹೇಳುತ್ತೇವೆ. ಅದೇರೀತಿ ಈಗ ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ಮಾಡಿದೆ ಎಂದು ಹೇಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, 20 ನಿಮಿಷಗಳನ್ನು ತಮ್ಮ ಪಕ್ಷಕ್ಕೆ ಕೊಟ್ಟಿದ್ದು, ತಮಗೆ 20 ನಿಮಿಷಗಳಾದರೆ ಬೇರೆ ಬೇರೆಯವರೂ ಮಾತನಾಡುವವರಿದ್ದಾರೆ. ದಯಮಾಡಿ ಇದನ್ನು ನೋಡಿಕೊಂಡು how best you want to conclude is left to you.

**ಶ್ರೀ ಆಯನೂರು ಮಂಜುನಾಥ್ :-** ಈ ಮಧ್ಯೆ ತಮ್ಮ ಮಾತು ಮತ್ತು ಮಾನ್ಯ ಸಚಿವರ ಮಾತುಗಳನ್ನು ಸೇರಿಸಿದರೆ ಎರಡು ನಿಮಿಷಗಳಾಗುತ್ತದೆ.

**ವೈಸ್ ಛೇರ್ಮನ್:-** ಅದನ್ನು ಕಳೆಯುತ್ತೇನೆ.

**ಶ್ರೀ ಆಯನೂರು ಮಂಜುನಾಥ್ :-** ಆಯಿತು, ಮಾನ್ಯ ಸಭಾಪತಿಯವರೇ, ಬೇರೆ ವಿಷಯಕ್ಕೆ ಹೋಗುತ್ತೇನೆ. ಅನ್ನಭಾಗ್ಯದಲ್ಲಿ 2 ಕೆ.ಜಿ ಅಕ್ಕಿಯನ್ನು ಕಟ್ ಮಾಡಿರುವಾಗ ಮಾನ್ಯ ಸಿದ್ದರಾಮಯ್ಯನವರ ಅನ್ನಭಾಗ್ಯ ಯೋಜನೆಯನ್ನು ಎಲ್ಲಿ ಮುಂದುವರೆಸಿದ್ದಾರೆ? ಮಾನ್ಯ ಸಿದ್ದರಾಮಯ್ಯನವರ ಯಾವ ಯೋಜನೆ ಮುಂದುವರೆದಿದೆ? ಬಸ್ ಪಾಸ್ ಸೌಲಭ್ಯವನ್ನು ಕಟ್ ಮಾಡಿದ್ದಾರೆ, ಅಕ್ಕಿ ಕಟ್ ಮಾಡಿದ್ದಾರೆ. ಯಾವುದರಲ್ಲಿ ಏನನ್ನು ಕಟ್ ಮಾಡಿದ್ದಾರೆ ಎಂದು ಹುಡುಕಬೇಕು. ಏಕೆಂದರೆ ಕತ್ತರಿ ಕೈಯಲ್ಲಿ ಇದೆ ಎಂದು ಗೊತ್ತಾಗಿದೆ. ಮಾನ್ಯ ಸಿದ್ದರಾಮಯ್ಯನವರು ಶಿಕ್ಷಣಕ್ಕೆ ರೂ.26,804 ಕೋಟಿ ಇಟ್ಟಿದ್ದು, ಮಾನ್ಯ ಕುಮಾರಸ್ವಾಮಿಯವರು ರೂ.280 ಕೋಟಿಗಳನ್ನು ಕಟ್ ಮಾಡಿದ್ದಾರೆ. ಇದನ್ನೂ ಪರಿಗಣಿಸಬೇಕಲ್ಲವೇ? ಅದನ್ನು ಕಟ್ ಮಾಡಿ ರೂ.26,524 ಕೋಟಿ ಇಟ್ಟು, ಮಾನ್ಯ ಸಿದ್ದರಾಮಯ್ಯನವರ ಬಾಲ ಒಂದು ಕಡೆ ಕಟ್ ಮಾಡಿದ್ದಾರೆ. ಜಲ ಸಂಪನ್ಮೂಲ ಇಲಾಖೆಗೆ ರೂ.30 ಕೋಟಿಗಳನ್ನು ಹಾಗೂ ನಗರಾಭಿವೃದ್ಧಿ ಇಲಾಖೆಗೆ ರೂ.531 ಕೋಟಿಗಳನ್ನು ಕಟ್ ಮಾಡಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರೂ.181 ಕೋಟಿ ಕಟ್ ಮಾಡಿದ್ದು, ಇಂಧನ ಇಲಾಖೆಗೆ ರೂ.13 ಕೋಟಿಗಳನ್ನು ಕಟ್ ಮಾಡಿದ್ದಾರೆ. ಆದರೆ, ಲೋಕೋಪಯೋಗಿ ಇಲಾಖೆಯೊಂದಕ್ಕೆ ಮಾತ್ರ ಉದಾರತೆ ಹೆಚ್ಚು ಕಂಡಿದೆ. ತಪ್ಪು ತಿಳಿದುಕೊಳ್ಳಬಾರದು. ಬೇರೆಯವರಿಗೂ ಕೊಟ್ಟರೆ ಒಳ್ಳೆಯದು, ಅವರಿಗೆ ಕೊಟ್ಟರೆ ನಮಗೆ ಕೊಟ್ಟಂತೆ ಆಗುತ್ತದೆಯೇ? ಒಳನಾಡು ಸಾರಿಗೆ ಇಲಾಖೆಗೆ ರೂ.862 ಕೋಟಿಗಳನ್ನು ಕಟ್ ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆಗೆ ಮಾತ್ರ ಮಾನ್ಯ ಸಿದ್ದರಾಮಯ್ಯನವರು ರೂ.9,271 ಕೋಟಿಗಳನ್ನು ಇಟ್ಟಿದ್ದು, ಹೊಸ ಸರ್ಕಾರ ರೂ.10,200 ಕೋಟಿಗಳನ್ನು ಕೊಟ್ಟಿದೆ. ಅಂದರೆ ರೂ.929 ಕೋಟಿಗಳನ್ನು ಜಾಸ್ತಿ ಕೊಟ್ಟಿದ್ದಾರೆ.

**ಶ್ರೀಮತಿ ವೀಣಾ ಅಚ್ಚಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

**ವೈಸ್ ಛೇರ್ಮನ್:-** ಮಾನ್ಯ ಮಂಜುನಾಥ್ ರವರೇ, ಸ್ವಲ್ಪ ಯೀಲ್ಡ್ ಆಗುತ್ತೀರಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್ :-** ನನ್ನ ಸಮಯವನ್ನು ಕಟ್ ಮಾಡಬಾರದು, ಇದು ಪ್ರಜಾಪ್ರಭುತ್ವವಾಗಿದ್ದು, ನಾನು ಬೇಕಾದರೆ ಕುಳಿತುಕೊಳ್ಳುತ್ತೇನೆ.

**ಶ್ರೀಮತಿ ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಾ, ಮಾನ್ಯ ಸಿದ್ದರಾಮಯ್ಯನವರ ಬಾಲ ಕಟ್ ಮಾಡಿದ್ದಾರೆ ಎಂದು ಹೇಳಿದ ವಾಕ್ಯವನ್ನು ವಾಪಸ್ಸು ತೆಗೆದುಕೊಳ್ಳಬೇಕು.

**ಶ್ರೀ ಆಯನೂರು ಮಂಜುನಾಥ್ :-** ಆಯಿತು, ಮಾನ್ಯ ಸಭಾಪತಿಯವರೇ, ಅದು ಬಾಲ ಅಲ್ಲ, ಅದನ್ನು ವಾಪಸ್ಸು ತೆಗೆದುಕೊಂಡಿದ್ದೇನೆ. ಅವರ ರೆಕ್ಕೆ-ಪುಕ್ಕಗಳನ್ನು ಕಟ್ ಮಾಡಿದ್ದಾರೆ. ಸರಿಯೇ? ಅವರಿಗೆ ಬಾಲ ಎಂದರೆ ಏಕೋ ಬೇಜಾರು ಮಾಡಿಕೊಳ್ಳುತ್ತಾರೆ.

**ಶ್ರೀಮತಿ ವೀಣಾ ಅಚ್ಚಯ್ಯ:-** ಅದು ಮಾನ್ಯ ಸದಸ್ಯರ ಊಹೆ ಅಷ್ಟೇ. ಯಾರೂ ರೆಕ್ಕೆ ಪುಕ್ಕ ಅಥವಾ ಬಾಲವನ್ನು ಕಟ್ ಮಾಡುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್ :-** ಎಲ್ಲೆಲ್ಲಿ ಯಾರ್ಯಾರಿಗೆ ಕಟ್ ಮಾಡಿದ್ದಾರೆ ಎಂಬುದನ್ನು ಮುಟ್ಟಿ ನೋಡಿಕೊಳ್ಳಲಿ. ಮಾನ್ಯ ಸಾರಿಗೆ ಸಚಿವರು ಹೇಳಿದ್ದಾಗಲೇ ರೆಕ್ಕೆ ಎಲ್ಲಿ ಕಟ್ ಆಗಿದೆ ಪುಕ್ಕ ಎಲ್ಲಿ ಕಟ್ ಆಗಿದೆ ಎಂದು ಗೊತ್ತಾಯಿತು. ಹಾಗಾಗಿ ಎಲ್ಲಿ ಕಟ್ ಆಗಿದೆ ಎಂದು ಅವರು ನೋಡಿಕೊಳ್ಳಬೇಕು, ನಾನಲ್ಲ.

**ಶ್ರೀಮತಿ ಜಯಮ್ಮ :-** ರೆಕ್ಕೆ ಪುಕ್ಕವನ್ನು ಕಟ್ ಮಾಡಿಲ್ಲ, ಅವರು ಹಾರಾಡುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗಂತೂ ದೊಡ್ಡ ಹಾರವೇ ಬೇಕಾಗುತ್ತದೆ. ನಾನು ಹೇಳುವುದೇನೆಂದರೆ, ಮಾನ್ಯ ಸದಸ್ಯರನ್ನು ಹಾಗೂ ರಾಜ್ಯವನ್ನು ದಾರಿ ತಪ್ಪಿಸುತ್ತಿದ್ದಾರೆಯೇ? ಮಾನ್ಯ ಸಿದ್ದರಾಮಯ್ಯನವರ ಹಳೆಯ ಯೋಜನೆಗಳನ್ನು ಮುಂದುವರೆಸಿದ್ದರೆ ಯಾವ ಯೋಜನೆಗಳನ್ನು ಮುಂದುವರೆಸಿದ್ದಾರೆ ಎಂದು ಸ್ಪಷ್ಟವಾಗಿ ಹೇಳಬೇಕಲ್ಲವೇ? ಅವರು ಯಾವುದನ್ನೂ ಮುಂದುವರೆಸಿಲ್ಲ ಎಂದು ದಿನವೂ ಹೋರಾಟಗಳಾಗುತ್ತಿವೆ. ಸಾಲ ಮನ್ನಾದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾನು ವಿರೋಧ ಮಾಡುವುದನ್ನು ಬಿಡಲಿ. ಅದನ್ನು ಬೇರೆ ಯಾರು ಒಪ್ಪಿಕೊಂಡಿದ್ದಾರೆ? ಈ ರಾಜ್ಯದಲ್ಲಿ ಒಪ್ಪಿಕೊಂಡಿರುವವರು ಯಾರು? ರೈತರು ಹೋರಾಟ ಮಾಡುತ್ತಿದ್ದರು. ಈ ಬಜೆಟ್‌ನಲ್ಲಿ ಇರುವ ಅಂಶಗಳ ಬಗ್ಗೆ ಆಡಳಿತ ಪಕ್ಷದಲ್ಲಿದ್ದ ಹಿರಿಯ ಸಚಿವರು ವಿರೋಧ ಮಾಡಿದ್ದಾರೆ. ಅವರ ಹೆಸರುಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಪತ್ರಿಕಾಗೋಷ್ಠಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿದ್ದಾರೆ. ಮಾನ್ಯ ಜಮೀರ್ ಅಹಮದ್ ರವರು ಇರಬಹುದು, ಮಾನ್ಯ ರೋಷನ್ ಬೇಗ್ ರವರು ಇರಬಹುದು, ಮಾನ್ಯ ಹೆಚ್.ಕೆ. ಪಾಟೀಲರು ಇರಬಹುದು, ಇವರ ವಿವರಗಳಿಗೆ ಹೋಗುವುದಿಲ್ಲ. ಈ ಬಜೆಟ್ ಅನ್ನು ಯಾರು ಒಪ್ಪಿಕೊಂಡಿದ್ದಾರೆ? ಆದರೆ ನಾವು ಈ ಬಜೆಟ್ ಅನ್ನು ಒಪ್ಪಿಕೊಳ್ಳಬೇಕೆ? ನಾವು ವಿರೋಧ ಪಕ್ಷವಾಗಿ ಅವರ ದೋಷಗಳನ್ನು ಕಂಡು ಹಿಡಿಯುವುದಕ್ಕೆ ಕುಳಿತಿದ್ದೇವೆ. ಪತ್ರಿಕೆಗಳ ವರದಿಗಳನ್ನು ಆಧರಿಸಿ ಕೆಲವೊಮ್ಮೆ ಮಾತನಾಡುತ್ತೇವೆ. ಆದರೆ ಆ ರೀತಿ ಯಾವುದನ್ನೂ ಉಲ್ಲೇಖ ಮಾಡುವುದಿಲ್ಲ. ಮತ್ತೆ ಅದನ್ನು ಮಾಡಬೇಕೋ, ಬೇಡವೋ ಎಂಬ ಪ್ರಶ್ನೆ ಬರುತ್ತದೆ. ಮಾಧ್ಯಮಗಳ ಪ್ರಕಾರ ಆಡಳಿತ ಪಕ್ಷದ ಸಭೆಯಲ್ಲಿಯೂ ಅಸಮಾಧಾನ ಎದ್ದಿದೆ. ಇದು ಯಾರ ಬಜೆಟ್? ಮಾನ್ಯ ಸಿದ್ದರಾಮಯ್ಯನವರ ಬಜೆಟ್ ಅಥವಾ ಮಾನ್ಯ ಕುಮಾರಸ್ವಾಮಿಯವರ ಬಜೆಟ್ ಆಗಿದೆಯೋ? ಚುನಾವಣೆ ಸಂದರ್ಭದಲ್ಲಿ ರೂ.53,000 ಕೋಟಿ ಸಾಲ ಮನ್ನಾ ಮಾಡುವ ಬಗ್ಗೆ ಹೇಳಿ ಮಾಡಲಿಲ್ಲ. ನಂತರ ನನಗೆ ಜನರು ಪೂರ್ಣ ಬಹುಮತ ಕೊಡಲಿಲ್ಲ ಮತ್ತು ಅಧಿಕಾರ ಕೊಡಲಿಲ್ಲ, ನಾನು ಸಾಂದರ್ಭಿಕ ಶಿಶು, ಪುಣ್ಯಾತ್ಮ ಶ್ರೀ ರಾಹುಲ್ ಗಾಂಧಿಯವರ ಕೃಪೆ ಮತ್ತು ಆಶ್ರಯದಿಂದ ಇದ್ದೇನೆ ಎಂದು ಹೇಳಿದ್ದಾರೆ. ಇದು ಅವರ ಅನಿಸಿಕೆ, ಅದರ ಬಗ್ಗೆ ಏನಿಲ್ಲ. ಆದರೆ ಬಹುಮತ ಕೊಟ್ಟಿಲ್ಲ ಎಂದು ರೈತರ ಸಾಲಮನ್ನಾ ಮಾಡಬೇಕೆಂದರೆ ಮಾತ್ರ ಅರ್ಥವಾಯಿತೇ? ಆದರೆ ಅಧಿಕಾರ ಗ್ರಹಿಸಬೇಕಾದರೆ ನೈತಿಕತೆ ಕಾಡಲಿಲ್ಲವೇ? ನನಗೆ ಈ ರಾಜ್ಯದ ಜನ ಬಹುಮತ ಕೊಟ್ಟಿಲ್ಲವಾದ್ದರಿಂದ ಹೇಗೆ ಮುಖ್ಯಮಂತ್ರಿಯಾಗಲಿ ಎಂದು ಒಂದು ಕ್ಷಣ ಅವರ ಆಂತರಿಕ ಪ್ರಜ್ಞೆ ಕಾಡಲಿಲ್ಲವೇ? ಆ ದೇವಸ್ಥಾನಗಳಿಗೆ ಹೋಗಿದ್ದಾಗ ಆ ದೇವರು ಇಂತಹ ಯೋಚನೆ ಮಾಡುವ ಬುದ್ಧಿಯನ್ನು ಕೊಡಲಿಲ್ಲವೇ? ಅವರು ಹೇಳಿದ್ದನ್ನು ಈಡೇರಿಸಬೇಕಾದರೆ ಅವರಿಗೆ ಬಹುಮತ ಇಲ್ಲ. ಆದರೆ ಬಾಕಿ ಎಲ್ಲವನ್ನು ಮಾಡಬೇಕಾದರೆ ಬಹುಮತ ಇದೆ ಎಂದು ಭಾವಿಸುತ್ತಾರೆ. ಒಮ್ಮೊಮ್ಮೆ ಬಜೆಟ್ ಮಾಡುತ್ತೇನೋ, ಇಲ್ಲವೋ ಅನುಮಾನ ಎಂದು ಹೇಳುತ್ತಾರೆ. ಇನ್ನೊಬ್ಬರು ಮಾತನಾಡಿದಂತೆ ಒಂದು ವರ್ಷ ಇರುತ್ತಾರೋ ಇಲ್ಲವೋ ನೋಡೋಣ ಎಂಬ ದೃಶ್ಯಗಳು ಬರುತ್ತದೆ. ಈ ರೀತಿ ಸಂದಿಗ್ಧತೆಯ ಮಧ್ಯೆ ಏನು ಮಾಡಬೇಕು ಎಂದು ಗೊತ್ತಾಗದೇ ಕುರ್ಚಿಯಲ್ಲಿ ಕುಳಿತಿರಬೇಕು, ಹಿಂದೆ ಮುಂದೆ ಸೈರನ್‌ಗಳು ಓಡಾಡುತ್ತಿರಬೇಕು. ಸುತ್ತಮುತ್ತಲೂ ಗನ್‌ಮನ್‌ಗಳು ಹಾಗೂ ಪೊಲೀಸ್ ವ್ಯಾನ್‌ಗಳು ಇರಬೇಕು, ಮುಂದೆ ಸೀಟಿ ಹೊಡೆದುಕೊಂಡು ಹೋಗಬೇಕು, ಜನರನ್ನು ಸರಿಸಬೇಕು, ಈ ರೀತಿಯ ವೈಭೋಗವನ್ನು ಅನುಭವಿಸಲು ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾದಂತೆ ಕಾಣಿಸುತ್ತದೆ. ಆದರೆ ಜನಪರವಾದ ಯಾವುದೇ ಕಾಳಜಿಯನ್ನು ಅವರು ಇಟ್ಟುಕೊಂಡಿಲ್ಲ.

ಇನ್ನು ಸುಸ್ತಿ ಬಡ್ಡಿ ಸಾಲ ಮನ್ನಾದ ಬಗ್ಗೆ ಗಲಾಟೆಗಳಾಗುತ್ತಿವೆ. ಬಹಳ ಜನರ ಅದರ ಬಗ್ಗೆ ಮಾತನಾಡಿದ್ದಾರೆ. ಅವರು ಸಾಲಮನ್ನಾ ಮಾಡುವ ಬಗ್ಗೆ ಹೇಳಿದ್ದಾರೆ. ಸಹಕಾರಿ ಕ್ಷೇತ್ರದೊಳಗೆ ಈಗ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.3 ಲಕ್ಷದೊಳಗೆ ಶೂನ್ಯ ಬಡ್ಡಿ ದರ ಜಾರಿಯಲ್ಲಿದೆ. ನಾನು ಒಬ್ಬ ಕೃಷಿಕನಾಗಿ ಸಾಲ ತೆಗೆದುಕೊಂಡಿದ್ದೇನೆ. ಅವಧಿಗಿಂತ ಮುಂಚೆ ಹಣ ಕಟ್ಟದಿದ್ದರೆ ನನಗೆ ಬಡ್ಡಿ ದರ ಜಾಸ್ತಿ ಬೀಳುತ್ತದೆ. ಆಗ ಶೂನ್ಯ ಬಡ್ಡಿ ದರ ಲಾಭದ ರೀತಿ ಸಿಗುವುದಿಲ್ಲ. ಶೂನ್ಯ ಬಡ್ಡಿಯ ಲಾಭ ಪಡೆಯುವುದಕ್ಕಾಗಿ ಸಾಮಾನ್ಯವಾಗಿ ಎಲ್ಲಾ ರೈತರು ಸಾಲ update ಮಾಡಿಕೊಂಡಿದ್ದಾರೆ.

(ಮುಂದು)

266/12.07.2018/12.50/ಹೆಚ್‌ವಿಃಜಿಆರ್

**ಶ್ರೀ ಆಯನೂರು ಮಂಜುನಾಥ್ (ಮುಂದು...):-**

ಸನ್ಮಾನ್ಯ ಸಭಾಪತಿಯವರೇ, ಏಕೆಂದರೆ, ಶೇಕಡಾ 12 ಅಥವಾ 13ರಷ್ಟು ಬಡ್ಡಿ ಕಟ್ಟಬೇಕಾಗುತ್ತದೆ ಎನ್ನುವ ಭಯದಿಂದ ಎಲ್ಲ ರೈತರು ಸಾಲವನ್ನು ಕಟ್ಟಿದ್ದಾರೆ. ಯಾರು ಸುಸ್ತಿದಾರರಾಗಿದ್ದಾರೆ? ಸುಸ್ತಿ ಸಾಲ ಎಷ್ಟಿದೆ? ಸಹಕಾರಿ ಸಂಘದಲ್ಲಿರುವ ಸಾಲ ಎಲ್ಲವೂ update ಇದೆ. ಶೂನ್ಯ ಬಡ್ಡಿಯ ಲಾಭವನ್ನು ಪಡೆಯಬೇಕು ಎನ್ನುವುದಕ್ಕೋಸ್ಕರ ಎಲ್ಲ ರೈತರು ತಮ್ಮ ಸಾಲವನ್ನು update ಮಾಡಿಕೊಂಡಿದ್ದಾರೆ. ಈಗ ಯಾರ ಸಾಲವನ್ನು ಮನ್ನಾ ಮಾಡುವುದು? ಎಷ್ಟು ಸಾಲವನ್ನು ಮನ್ನಾ ಮಾಡುವುದು? ಸಾಲ ಮನ್ನಾದ ಗಾತ್ರ ಎಷ್ಟು ಎನ್ನುವುದು ಅವರಿಗೆ ಗೊತ್ತಿದೆಯೇ? ಒಟ್ಟು ಒಂದು ಸುಳ್ಳಿನ ಸರಮಾಲೆಯನ್ನು ಈ ಆಯವ್ಯಯ ಹೆಣೆದುಕೊಂಡು ಹೋಗಿದೆ. ನನಗಿರುವ ಮಾಹಿತಿಯ ಪ್ರಕಾರ ಇಡೀ ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಬರುವಂತಹ ಸಾಲ 600 ಕೋಟಿ ರೂಪಾಯಿಗಳಾಗಿರಬಹುದು. ನಿಖರವಾಗಿ ಗೊತ್ತಿಲ್ಲ. ಚಾಲ್ತಿ ಸಾಲ ಮನ್ನಾ ಮಾಡಲೇ ಇಲ್ಲ. ಅದು ಹಾಗೆಯೇ ಮುಂದುವರೆಯುತ್ತಿದೆ. ಮಾನ್ಯ ಸಿದ್ದರಾಮಯ್ಯನವರು ಸುಮಾರು 50 ಸಾವಿರ ರೂಪಾಯಿಗಳ ಸಾಲ ಮನ್ನಾ ಘೋಷಣೆ ಮಾಡಿದ್ದರು. ಈಗ 2 ಲಕ್ಷ ರೂಪಾಯಿಗಳವರೆಗೆ ಸಾಲ ಮನ್ನಾ ಘೋಷಣೆ ಮಾಡಿದ್ದಾರೆ. ಕಳೆದ ಬಾರಿ ಮಾನ್ಯ ಸಿದ್ದರಾಮಯ್ಯನವರ ಕಾಲಾವಧಿಯಲ್ಲಿ 50 ಸಾವಿರ ರೂಪಾಯಿಗಳ ಸಾಲ ಮನ್ನಾವನ್ನು ಪಡೆದುಕೊಂಡಿರುವ ರೈತರು ಈ ಬಾರಿಯೂ 2 ಲಕ್ಷ ರೂಪಾಯಿಗಳ ಸಾಲ ಮನ್ನಾ ವ್ಯಾಪ್ತಿಗೆ ಬರುತ್ತಾರೆಯೇ? ಈಗ ಇವರು ಈ ಆಯವ್ಯಯದಲ್ಲಿ ತಂದಿರುವ ನಿಯಮಾವಳಿಗಳ ಪ್ರಕಾರ ಅವರಿಗೆ ಒಂದು ರೂಪಾಯಿ ಕೂಡ ಮನ್ನಾ ಆಗುವುದಿಲ್ಲ. ಮಾನ್ಯ ಸಿದ್ದರಾಮಯ್ಯನವರು 50 ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಿದ್ದಾರೆಂದು ರೈತರು ತಿಳಿದುಕೊಳ್ಳಬೇಕೇ ಅಥವಾ ಮಾನ್ಯ ಕುಮಾರಸ್ವಾಮಿಯವರು ಸಾಲ ಮನ್ನಾ ಮಾಡಿದ್ದಾರೆಂದು ಭಾವಿಸಬೇಕೇ? ಆಗ 50 ಸಾವಿರ ರೂಪಾಯಿಗಳ ಸಾಲ ಮನ್ನಾ ತೆಗೆದುಕೊಂಡಿರುವ ತಪ್ಪಿಗೆ ಇವತ್ತು ಅವರು 2 ಲಕ್ಷ ರೂಪಾಯಿಗಳ ನಷ್ಟವನ್ನು ಅನುಭವಿಸಬೇಕಾಗಿದೆ. ಯಾರು ಸಾಲ ಕಟ್ಟದೇ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಪ್ರಾಮಾಣಿಕರಾಗಿದ್ದರೋ ಅವರ ಸಾಲ 2 ಲಕ್ಷ ರೂಪಾಯಿಗಳವರೆಗೆ ಮನ್ನಾವಾಗಿದೆ. ಯಾರು ಪ್ರಾಮಾಣಿಕವಾಗಿ ಸಾಲ ಕಟ್ಟಿದ್ದಾರೆ ಅವರಿಗೆ ಕೇವಲ 25 ಸಾವಿರ ರೂಪಾಯಿಗಳು ಮಾತ್ರ ದೊರಕಿದೆ. ಪ್ರಾಮಾಣಿಕರ ಮೇಲೆ 1.75 ಲಕ್ಷ ರೂಪಾಯಿಗಳ ದಂಡ ವಿಧಿಸಿದಂತಾಗಿದೆ. ಅಂದರೆ, ಮುಂದಿನ ದಿನಗಳಲ್ಲಿ ರೈತರು ಪ್ರಾಮಾಣಿಕವಾಗಿ ಸಾಲವನ್ನು ಪಾವತಿ ಮಾಡಬೇಡಿ, ನಾವು ಅಧಿಕಾರಕ್ಕೆ ಬಂದ ಮೇಲೆ ಏನು ಹೇಳುತ್ತೇವೆ ಎನ್ನುವುದನ್ನು ನೋಡಿಕೊಂಡು ಸಾಲ ಕಟ್ಟಿ' ಎಂದು ಹೇಳುವ ಮೂಲಕ ಅಪ್ರಾಮಾಣಿಕತೆಯನ್ನು ಪೋಷಣೆ ಮಾಡುವ ಪ್ರಯತ್ನ ಈ ರಾಜ್ಯದ ಆಯವ್ಯಯದಲ್ಲಿ ಕಾಣಿಸುತ್ತಿದೆ, ನಮ್ಮ ದೇಶದ ಬೇರೆಲ್ಲಿಯೂ ಈ ರೀತಿ ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಸಾಲಗಳ ಬಗ್ಗೆ ನಮಗೆ ಗೊತ್ತಿಲ್ಲ. ನಾವುಗಳು ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡರೆ, 'One Time Settlement' ಮಾಡಿ, ನಿಮ್ಮ ಸಾಲ ಮನ್ನಾ ಮಾಡುತ್ತೇವೆಂದು ಹೇಳುತ್ತಾರೆ. ನಾಲ್ಕೈದು ಕಂತುಗಳಿಗೆ ಕೊಡುತ್ತಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಸಾಲ ಮನ್ನಾವನ್ನು ಪಂಚವಾರ್ಷಿಕ ಸಾಲ ಮನ್ನಾ ಎಂದು ಕರೆಯಬಹುದಾಗಿದೆ. 34 ಸಾವಿರ ರೂಪಾಯಿಗಳೆಂದು ಇವರು ನಿಗದಿ ಮಾಡಿ, 6500 ರೂಪಾಯಿಗಳನ್ನು ಕಟ್ಟಬೇಕೆಂದು ಮಾಡಿದ್ದಾರೆ, 34 ಸಾವಿರ ರೂಪಾಯಿಗಳನ್ನು ಮುಟ್ಟುವುದಕ್ಕೆ ಎಷ್ಟು ವರ್ಷಗಳು ಬೇಕಾಗಬಹುದು ಎನ್ನುವುದನ್ನು ಲೆಕ್ಕ ಹಾಕಿದರೆ 5 ವರ್ಷಗಳ ಕಾಲಾವಧಿ ಬೇಕಾಗುತ್ತದೆ. ಈ ವರ್ಷ 6500 ರೂಪಾಯಿಗಳೆಂದು ನಿಗದಿ ಮಾಡಿದ್ದಾರೆ. ಬಾಕಿ ಉಳಿದಿರುವುದನ್ನು ಕಂತಿನ ರೂಪದಲ್ಲಿ ಕಟ್ಟಿಕೊಂಡು ಹೋಗಬೇಕಾಗಿದೆ. ರೈತರಿಗೆ ತಕ್ಷಣಕ್ಕೆ ಸಾಲಬೇಕಾದರೆ ಸಾಲ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಬೀಜ ಅಥವಾ ಗೊಬ್ಬರ ತೆಗೆದುಕೊಳ್ಳುವುದಕ್ಕೆ ಸಾಲ ಸಿಗುವುದಿಲ್ಲ. Clearance Certificate ಸಿಗುವುದಿಲ್ಲ. ಇದರಲ್ಲಿ ಪ್ರಚಾರದ ಅಬ್ಬರ ಬಿಟ್ಟರೆ ಬೇರೇನೂ ಕಾಣುತ್ತಿಲ್ಲ.

**ವೈಸ್ ಛೇರ್ಮನ್:-** ದಯಮಾಡಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ. You are coming towards the conclusion only.

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, ಮಾತುಗಳನ್ನು ಮುಕ್ತಾಯಗೊಳಿಸುವ ಹಂತದಲ್ಲಿದ್ದೇನೆ. ಜೆ.ಡಿ.(ಎಸ್) ಪಕ್ಷದ ಪ್ರಣಾಳಿಕೆಯಲ್ಲಿ ಮತ್ತು ಕುಮಾರಪರ್ವ ಯಾತ್ರೆಯಲ್ಲಿ ನೇಕಾರರ ಸಾಲ ಮನ್ನಾ, ಸ್ತ್ರೀ ಶಕ್ತಿಗಳ ಸಾಲ ಮನ್ನಾ, ಮೀನುಗಾರರ ಸಾಲ ಮನ್ನಾ ಮಾಡಲಾಗುತ್ತದೆಂದು ಹೇಳಲಾಗಿತ್ತು. ಯಾರ ಸಾಲ ಮನ್ನಾವೂ ಆಗಿಲ್ಲ. ಅದರ ಬಗ್ಗೆ ಪ್ರಸ್ತಾಪ ಆಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಸಚಿವರಾದ ಮಾನ್ಯ ಜಮೀರ್ ಅಹಮದ್‌ರವರು ಸಿಕ್ಕಿದ್ದರು. ಆಗ ಅವರನ್ನು ಸ್ನೇಹಪೂರ್ವಕವಾಗಿ ಹಾಸ್ಯ ಮಾಡುತ್ತಾ, 'ಮಾನ್ಯ ಜಮೀರ್ ಅಹಮದ್‌ರವರೇ, ತಾವು ಜೆ.ಡಿ.(ಎಸ್) ಬಿಟ್ಟು, ಕಾಂಗ್ರೆಸ್ ಪಕ್ಷಕ್ಕೆ ಹೋಗಿದ್ದೀರಿ, ಇದರಿಂದ ಅಲ್ಪಸಂಖ್ಯಾತರಿಗೆ ಅನ್ಯಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಕಡೆ ಜೆಡಿ(ಎಸ್) ಪಕ್ಷಕ್ಕೆ ಅಲ್ಪಸಂಖ್ಯಾತರ ಓಟೇ ಬಂದಿಲ್ಲವೆಂದು ಅನಿಸಿಬಿಟ್ಟಿದೆ. ಆದ್ದರಿಂದ ಈ ಆಯವ್ಯಯದಲ್ಲಿ ಅಲ್ಪಸಂಖ್ಯಾತರಿಗೆ ಯಾವುದೇ ಸೌಲಭ್ಯಗಳನ್ನು ಕೊಟ್ಟಿಲ್ಲ. ಮಾನ್ಯ ಸಿದ್ದರಾಮಯ್ಯನವರು ಏನು ಕೊಟ್ಟಿದ್ದರು ಅಷ್ಟೇ, ಹೆಚ್ಚಿಗೆ ಏನು ಕೊಟ್ಟಿಲ್ಲ. ನಿಮ್ಮ ಮೇಲೆ ಕೋಪವಿದ್ದ ಕಾರಣ, ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ 2 ಕೆ.ಜಿ. ಅಕ್ಕಿಯನ್ನು ಕಡಿತಗೊಳಿಸಿದ್ದಾರೆ’ ಎನ್ನುವ ಮಾತುಗಳನ್ನು ಹೇಳಿದೆ. ಮಾನ್ಯ ಕುಮಾರಸ್ವಾಮಿಯವರು ಮಾನ್ಯ ಜಮೀರ್ ಅಹಮದ್‌ರವರ ಮೇಲಿದ್ದ ಕೋಪವನ್ನು ಅವರ ಇಲಾಖೆಯ ಮೇಲೆ ಆ ಮೂಲಕ ಅವರ ಸಮುದಾಯದ ಮೇಲೆ ತೀರಿಸಿಕೊಳ್ಳುತ್ತಿದ್ದಾರೆ. ಈ ಆಯವ್ಯಯದಲ್ಲಿ ಅಲ್ಪ ಸಂಖ್ಯಾತರ ಬಗ್ಗೆಯೂ ಉಲ್ಲೇಖ ಮಾಡಿಲ್ಲ.

**ವೈಸ್ ಛೇರ್ಮನ್‌ಃ–** ಮಾನ್ಯ ಮಂಜುನಾಥ್‌ರವರೇ, ತಮ್ಮ ಮಾತುಗಳನ್ನು ಬೇಗ ಮುಗಿಸಿ.

**ಶ್ರೀ ಆಯನೂರು ಮಂಜುನಾಥ್‌ಃ–** ಸನ್ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು 20 ನಿಮಿಷಗಳ ಕಾಲಾವಕಾಶವನ್ನು ನೀಡಿದ್ದೀರಿ ಇನ್ನೂ 20 ನಿಮಿಷಗಳಾಗಿಲ್ಲ. ಗರ್ಭಿಣಿ ಸ್ತ್ರೀಯರಿಗೆ ಮಾಸಿಕ 6 ಸಾವಿರ ರೂಪಾಯಿಗಳ ಭತ್ಯೆಯನ್ನು ನೀಡುವ ಬಗ್ಗೆ ಘೋಷಣೆ ಮಾಡಲಾಗಿತ್ತು. ಆದರೆ, ಈಗ ಹೆರಿಗೆ ಪೂರ್ವ 3 ತಿಂಗಳ ಕಾಲ ಮಾಸಿಕ 1000 ರೂಪಾಯಿಗಳು ಮತ್ತು ಹೆರಿಗೆ ನಂತರ 3 ತಿಂಗಳ ಕಾಲ ಮಾಸಿಕ 1000 ರೂಪಾಯಿಗಳು ಅಂದರೆ ಒಟ್ಟು 6 ಸಾವಿರ ರೂಪಾಯಿಗಳನ್ನು ನೀಡುವ ಬಗ್ಗೆ ಘೋಷಣೆ ಮಾಡಲಾಗಿದೆ. ಇವರನ್ನು ನಂಬಿಕೊಂಡು ಯಾರಾದರು ಗರ್ಭಿಣಿಯರಾಗಿ ಬಿಟ್ಟಿದ್ದರೆ ಅವರ ಕಥೆಯೇನು? ಪುಣ್ಯ ಆ ರೀತಿ ಆಗಿಲ್ಲ. ಇವರನ್ನು ನಂಬಿ ಯಾರೂ ಗರ್ಭಿಣಿಯರಾಗಲಿಲ್ಲ. ತಿಂಗಳಿಗೆ 6 ಸಾವಿರ ರೂಪಾಯಿಗಳನ್ನು ಕೊಡುತ್ತಾರೆಂದು ಇವರನ್ನು ನಂಬಿ ಗರ್ಭಿಣಿಯರಾಗಿದ್ದರೆ, ಬೀದಿ ಪಾಲಾಗಬೇಕಾಗಿತ್ತು. ಗರ್ಭಿಣಿಯರಿಗೂ ಈ ಸರ್ಕಾರ ಕೈಕೊಟ್ಟಿದೆ. ಗ್ರಾಮೀಣ ಯುವಕರಿಗೆ ...

**ಡಾ॥ಜಯಮಾಲ ರಾಮಚಂದ್ರ(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಹಣ ಕೊಡುತ್ತದೆಂದು ನಂಬಿಕೊಂಡು ಗರ್ಭಧರಿಸುವುದಕ್ಕೆ ಸಾಧ್ಯವಿದೆಯೇ?

**ಶ್ರೀ ಆಯನೂರು ಮಂಜುನಾಥ್‌ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಜಾಣರಿದ್ದಾರೆ. ನನ್ನ ಮಾತುಗಳನ್ನು ಯಾವ ರೀತಿ ತೆಗೆದುಕೊಳ್ಳಬಹುದು ಆ ರೀತಿ ತೆಗೆದುಕೊಳ್ಳಲಿ.

**ಶ್ರೀ ವಿ.ಎಸ್.ಉಗ್ರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡುತ್ತಿರುವುದನ್ನು ನೋಡಿದರೆ, ಅವರನ್ನು ನಂಬಿ ಗರ್ಭಿಣಿಯರಾಗಬೇಕು ಎನ್ನುವ ರೀತಿಯಲ್ಲಿದೆ.

(ಸದನದಲ್ಲಿ ನಗೆಯ ಅಲೆ)

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ನನ್ನನ್ನು ನಂಬಿ ಅಲ್ಲ, ಎಲ್ಲರಿಗೂ ಅನುಭವವಿದೆ. ಎಲ್ಲ ಮುಖ್ಯಮಂತ್ರಿಗಳ ಜೊತೆಗೆ ಒಳ್ಳೆಯ ಒಡನಾಟ ಇಟ್ಟುಕೊಂಡಿರುವ ಎಲ್ಲರಿಗೂ ಸಮೀಪವಾಗಿರುವ ಮಾನ್ಯ ಉಗ್ರಪ್ಪನವರನ್ನು ನಂಬಿ ಗರ್ಭಿಣಿಯರಾಗಬಹುದೇ ಹೊರತು ನನ್ನನ್ನು ನಂಬಿ ಅಲ್ಲ.

**ವೈಸ್ ಛೇರ್ಮನ್:–** ಮಾನ್ಯ ಮಂಜುನಾಥ್‌ರವರೇ, ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ, ತಮ್ಮ ಮಾತುಗಳನ್ನು ಆದಷ್ಟು ಬೇಗ ಮುಗಿಸಿ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಇಷ್ಟೊಂದು ಹಗುರವಾಗಿ ಹೆಣ್ಣುಮಕ್ಕಳ ಬಗ್ಗೆ ಮಾತನಾಡುವುದು ಅವರಿಗೆ ಶೋಭೆ ತರುವುದಿಲ್ಲ. ಅವರ ಮನೆಯಲ್ಲಿಯೂ ಹೆಣ್ಣುಮಕ್ಕಳಿದ್ದಾರೆ, ಬೇರೆಯವರ ಮನೆಗಳಲ್ಲಿಯೂ ಹೆಣ್ಣುಮಕ್ಕಳಿದ್ದಾರೆ, ಮನು ಧರ್ಮದ ಪ್ರವೃತ್ತಿಯನ್ನು ಅವರು ತೋರಿಸಬಾರದು.

**(ಗೊಂದಲ)**

**ಶ್ರೀಮತಿ ಜಯಮ್ಮ:–** ಸನ್ಮಾನ್ಯ ಸಭಾಪತಿಯವರೇ, ಯಾರನ್ನೂ ನಂಬಿ, ಯಾರೂ ಗರ್ಭಿಣಿಯರಾಗುವುದಿಲ್ಲ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದವರಿಗೆ ಹೆಣ್ಣುಮಕ್ಕಳ ಮೇಲೆ ಯಾವ ರೀತಿಯ ಅಭಿಮಾನವಿದೆ ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಅವರಿಗೆ ಏನಾದರೂ ಹೆಣ್ಣು ಮಕ್ಕಳ ಮೇಲೆ ಸ್ವಲ್ಪ ಕಾಳಜಿ ಇದ್ದರೆ ಆ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಲಿ.

**(ಗೊಂದಲ)**

VICE CHAIRMAN:- Kindly leave it.

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಇಲ್ಲಿಗೆ ಮುಗಿಸಿ, ಮುಂದೆ ಹೋಗೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ತೇಜಸ್ವಿನಿ ಗೌಡ॥–** ಸನ್ಮಾನ್ಯ ಸಭಾಪತಿಯವರೇ, ತಪ್ಪು ಸಂದೇಶ ಕಡತಕ್ಕೆ ಹೋಗುತ್ತಿದೆ. ನಮ್ಮ ನಾಯಕರಾಗಿರುವ ಮಾನ್ಯ ಆಯನೂರು ಮಂಜುನಾಥ್‌ರವರು ಹೇಳುತ್ತಿರುವುದು, 'ಮುಖ್ಯಮಂತ್ರಿಗಳಾಗಿ ಮಾನ್ಯ ಕುಮಾರಸ್ವಾಮಿಯವರ ಮಾತನ್ನು ನಂಬಿ, ಆ ಯೋಜನೆಯನ್ನು ನಂಬಿದ್ದರೆ' ಎನ್ನುವ ಸದಾಭಿಪ್ರಾಯ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಅವರು ಹೇಳುತ್ತಿರುವುದು ಸರಿಯಾಗಿದೆ.

**(ಗೊಂದಲ)**

VICE CHAIRMAN:- Dear Sri Manjunath, I am asking you to kindly finish your speech.

**ಶ್ರೀ ಆಯನೂರು ಮಂಜುನಾಥ್॥–** ಸನ್ಮಾನ್ಯ ಸಭಾಪತಿಯವರೇ, ಅನಾವಶ್ಯಕವಾಗಿ ಈ ಸದನದ ಸಮಯ ಬೇಕಾದಷ್ಟು ವ್ಯರ್ಥವಾಗಿದೆ. ನಾನು ಮಾತನಾಡುವುದಕ್ಕೆ ತಾವು ಸಮಯ ಕೊಡುವುದಿಲ್ಲವೆಂದರೆ ಹೇಗೆ?

**ಶ್ರೀ ಎಂ.ನಾರಾಯಣಸ್ವಾಮಿ॥–** ಸನ್ಮಾನ್ಯ ಸಭಾಪತಿಯವರೇ, ಅವರು ಸಹ ಅನಾವಶ್ಯಕವಾಗಿ ಮಾತನಾಡುತ್ತಿದ್ದಾರೆ.

**(ಗೊಂದಲ)**

VICE CHAIRMAN:- Dear Sri Manjunath, on your request only, I have given you ten minutes more in addition to twenty minutes time allotted to you.

**ಶ್ರೀಮತಿ ಜಯಮ್ಮ॥–** ಸನ್ಮಾನ್ಯ ಸಭಾಪತಿಯವರೇ, ತಾಯ್ತನದ ಬಗ್ಗೆ ಮಾತನಾಡಿದ್ದಾರೆ ಅವರು. ಇವರ ತಾಯಿ ಸರ್ಕಾರ ಏನಾದರೂ ಕೊಡುತ್ತದೆಂದು ಗರ್ಭಿಣಿ ಆಗಿದ್ದರೆ?

**(ಗೊಂದಲ)**

**ವೈಸ್ ಛೇರ್ಮನ್॥–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. Dear Sri Manjunath, kindly finish it.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, ದಾಖಲೆಗೆ ಸರಿಯಾದ ಮಾಹಿತಿ ಹೋಗಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ, ಇಲ್ಲಿ ಗರ್ಭಿಣಿಯರ ಯೋಜನೆಯ ಬಗ್ಗೆ ಮಾತನಾಡುತ್ತಿದ್ದೇನೆಯೇ ಹೊರತು ಯಾವುದೇ ಮಹಿಳೆಯ ಬಗ್ಗೆ ಮಾತನಾಡುತ್ತಿಲ್ಲ. ಆಯವ್ಯಯದಲ್ಲಿ ಅಚ್ಚಾಗಿರುವ ಯೋಜನೆಯ ಬಗ್ಗೆ ಮಾತನಾಡುತ್ತಿದ್ದೇನೆ. ಅದನ್ನು ಸುಮ್ಮನೆ ಯಾರ್ಯಾರೋ ಮೈಮೇಲೆ ಏಳೆದುಕೊಳ್ಳುವುದು ಬೇಡ. ಲ್ಯಾಪ್‌ಟಾಪ್ ಕೊಡುತ್ತೇವೆಂದು ಹೇಳಿದ್ದರು. ಇಲ್ಲಿ ಲ್ಯಾಪೂ ಇಲ್ಲ, ಟಾಪೂ ಇಲ್ಲ. ನಮ್ಮ ಕಾಂಗ್ರೆಸ್‌ನ ಸದಸ್ಯರು ಹೇಗೆ ಒಂದು ಶಬ್ದದ ವಿಶ್ಲೇಷಣೆಗೆ ಬಂದರೋ ಅದೇ ರೀತಿಯಲ್ಲಿ ಈ ಆಯವ್ಯಯದ ವಿಶ್ಲೇಷಣೆಗೆ ಬರಬೇಕಾಗಿದೆ. ಬೆಂಗಳೂರು ನಗರಾಭಿವೃದ್ಧಿಗಾಗಿ 15,825 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ತೇಜಸ್ವಿನಿ ಗೌಡರೇ, ತಾವು ಮಾತನಾಡಿ. ಮಾನ್ಯ ಮಂಜುನಾಥ್‌ರವರೇ ತಾವು ತಮ್ಮ ಮಾತುಗಳನ್ನು ಮುಗಿಸಿ ಕುಳಿತುಕೊಳ್ಳುವುದಕ್ಕೆ ತಯಾರಿರಲಿಲ್ಲ. I am sorry, I am helpless. How to conduct this House?

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, ತಾವು ಕುಳಿತುಕೊಳ್ಳಲು ನನಗೆ ಹೇಳುತ್ತಿದ್ದೀರಾ?

**ವೈಸ್ ಛೇರ್ಮನ್:-** ತಮಗೆ ಕುಳಿತುಕೊಳ್ಳಲು ಹೇಳುತ್ತಿರುವೆ. ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, Ok, sir, thank you. ಆಯವ್ಯಯದ ಮೇಲೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ನೀಡುವುದಿಲ್ಲ. ಅನಾವಶ್ಯಕವಾಗಿ ಚರ್ಚೆಗಳು ನಡೆಯುತ್ತವೆ.

**ವೈಸ್ ಛೇರ್ಮನ್:-** ತಮಗೆ ಮಾತನಾಡಲು 20 ನಿಮಿಷಗಳ ಕಾಲಾವಕಾಶವಿತ್ತು. ಆದರೆ, 30 ನಿಮಿಷಗಳನ್ನು ತಮಗೆ ನೀಡಲಾಗಿದೆ.

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, ತಾವು ಯಾವ ರೀತಿಯಲ್ಲಿ ಟೈಂ ಅಲಾಟ್ ಮಾಡುತ್ತೀರಿ ಎನ್ನುವುದು ನನಗೆ ಗೊತ್ತಿಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಮುಂದು)

(267) 12.7.2017 1.00 ಪಿಕೆ:ಎಂಡಿ

(ಗೊಂದಲ)

**ಶ್ರೀ ಆಯನೂರು ಮಂಜುನಾಥ್ :-** ಮಾನ್ಯ ಸಭಾಪತಿಯವರೇ, ನಾನು ನನ್ನ ಅಭಿಪ್ರಾಯ ಹೇಳುತ್ತೇನೆ. ತಾವು ಮಾತನಾಡುವುದಕ್ಕೆ ಸಮಯವನ್ನು ಹೇಗೆ ನಿಗದಿ ಮಾಡಿದ್ದೀರೋ ನನಗೆ ಗೊತ್ತಿಲ್ಲ.

**ವೈಸ್ ಛೇರ್ಮನ್:-** ಎರಡೂ ಪಕ್ಷದ ಮುಖ್ಯ ಸಚೇತಕರು ಮತ್ತು ಸಭಾಪತಿಗಳು ಕುಳಿತು ಯಾರಿಗೆ ಎಷ್ಟು ಸಮಯ ಕೊಡಬೇಕು ಎಂಬ ಬಗ್ಗೆ ತೀರ್ಮಾನ ಮಾಡುತ್ತಾರೆ. ಈಗ ದಯವಿಟ್ಟು ತಾವು conclude ಮಾಡಿ.

**ಶ್ರೀ ಆಯನೂರು ಮಂಜುನಾಥ್ :-** ತಾವು, ಇಂತಹ ವಿಷಯಕ್ಕೆ ಇಂತಿಷ್ಟು ಸಮಯ ನಿಗದಿ ಮಾಡಿದ್ದರೆ ಅದರ ಮಾಹಿತಿ ನನಗಿಲ್ಲ. Per head ಇಷ್ಟು ಸಮಯ ಎಂದು ವೈಜ್ಞಾನಿಕವಾಗಿ ಮಾಡಿದ್ದರೆ, ಒಂದು ವೇಳೆ ನಿರ್ದಿಷ್ಟ ಸಮಯವನ್ನು partywise ಸದಸ್ಯರಿಗೆ devide ಮಾಡಿದರೆ ಅವರವರ ಸಮಯ ಅವರವರಿಗೆ ಸಿಗುತ್ತದೆ. ಆದರೆ ಇಲ್ಲಿ ಯಾವುದೇ ಸಮಯವನ್ನು ನಿಗದಿಪಡಿಸಿಲ್ಲ.

**VICE CHAIRMAN:-** You cannot question Chairman's discretionary power. Conclude ಮಾಡಿ ಎಂದು ಹೇಳುತ್ತಿದ್ದೇನೆ. Still you are not prepared. ದಯವಿಟ್ಟು conclude ಮಾಡಿ.

**ಶ್ರೀ ಆಯನೂರು ಮಂಜುನಾಥ್:-** ಸದನದಲ್ಲಿ ಯಾವುದೇ ಬೇರೆ ವಿಷಯದ ಬಗ್ಗೆ ಮಾತನಾಡಬೇಕಾದರೆ ಸಮಯ ಇದೆ; ಆದರೆ, ಬಜೆಟ್‌ನ ವಿಶ್ಲೇಷಣೆ ಮಾಡುವುದಕ್ಕೆ ಸಮಯ ಕೊಡುತ್ತಿಲ್ಲ. ಇದೊಂದು ವ್ಯರ್ಥ ಬಜೆಟ್ ಎಂದು ಹೇಳಬಯಸುತ್ತಿದ್ದೇನೆ. ನಾನು ಸಭಾಪತಿಗಳ ನಿರ್ದೇಶನವನ್ನು ಉಲ್ಲಂಘನೆ ಮಾಡುವುದಿಲ್ಲ.

**VICE CHAIRMAN:-** Thank you.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೆ, XXX **ವೈಸ್ ಛೇರ್ಮನ್:-** ಪ್ರಶ್ನೆ ಮಾಡುವುದಿಲ್ಲ ಎಂದು ಹೇಳಿ ಮತ್ತೆ ಪೀಠವನ್ನೇ ಪ್ರಶ್ನೆ ಮಾಡುತ್ತಿದ್ದೀರಿ.

---

**XXX**, ಸಭಾಪತಿಯವರ ಅಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್ :–** ಪೀಠವನ್ನು ಯಾವ ರೀತಿ ಚೆನ್ನಾಗಿ ಇಟ್ಟುಕೊಂಡರೆ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ ಎಂದು ಹೇಳಿ.

**ವೈಸ್ ಛೇರ್ಮನ್:–** ನಿಮ್ಮ ನಾಯಕರನ್ನು ಮತ್ತು ಮುಖ್ಯ ಸಚೇತಕರನ್ನು ಕೇಳಿಕೊಂಡು ಸಮಯ ನಿಗದಿ ಮಾಡಲಾಗುವುದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, **XXX** ಎನ್ನುವ ಪದವನ್ನು ದಯವಿಟ್ಟು ಕಡತದಿಂದ ತೆಗೆಸಬೇಕು. ಅದು ಅಷ್ಟು ಸಮಂಜಸ ಅಲ್ಲ.

**ವೈಸ್ ಛೇರ್ಮನ್:–** ನಾನು ಕಡತವನ್ನು ತರಿಸಿಕೊಂಡು ನೋಡಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್ :–** ಮಾನ್ಯ ಸಭಾಪತಿಯವರೇ, ನಾನು ಹೇಳಿದ ಪದವನ್ನು ನನ್ನ ಅನುಮತಿ ಇಲ್ಲದೇ ತೆಗೆಯಬಾರದು.

**ವೈಸ್ ಛೇರ್ಮನ್:–** ಅದಕ್ಕೋಸ್ಕರ ನಾನು, ಕಡತವನ್ನು ತರಿಸಿಕೊಂಡು, ಅದು ಅಸಂಸದೀಯ ಪದವೋ ಅಲ್ಲವೋ ಎಂಬುದನ್ನು ನೋಡುತ್ತೇನೆ ಎಂದು ಹೇಳಿದೆ.

(ಗೊಂದಲ)

**ಶ್ರೀ ಹೆಚ್.ಎಂ. ರೇವಣ್ಣ:–** ಪದಗಳನ್ನು ಕಡತದಿಂದ ತೆಗೆಯುವುದು ಅಥವಾ ಬಿಡುವುದು ಮಾನ್ಯ ಸಭಾಪತಿಯವರ ವಿವೇಚನೆಗೆ ಬಿಟ್ಟದ್ದು.

(ಗೊಂದಲ)

**ವೈಸ್ ಛೇರ್ಮನ್:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು, if it is derogatory, whatever is correct we will talk and get it done ಎಂದು ಹೇಳಿದೆ. ನೀವು ಕೇಳದೇ ಹೋದರೆ ನಾವೇನು ಮಾಡುವುದಕ್ಕೆ ಆಗುತ್ತದೆ?

**ಶ್ರೀ ಆಯನೂರು ಮಂಜುನಾಥ್ :–** ಯಾರಿಗೋ ನನ್ನ ಪದಗಳು ಸರಿಯೆನಿಸುವುದಿಲ್ಲ ಎಂದೋ ಅಥವಾ

---

**XXX**, ಸಭಾಪತಿಯವರ ಅಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರದೋ *whims and fancies* ಗೋಸ್ಕರ ನನ್ನ ಪದಗಳು ಕಡತಕ್ಕೆ ಹೋಗಬೇಕಾಗಿಲ್ಲ.

(ಗೊಂದಲ)

**ಶ್ರೀ ಹೆಚ್.ಎಂ. ರೇವಣ್ಣ:-** ಪದಗಳನ್ನು ಕಡತದಿಂದ ತೆಗೆಯಬೇಕಾದರೆ ಅದಕ್ಕೆ ತನ್ನದೇ ಆದ ನಿಯಮಗಳು ಇವೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡೇ ಪದಗಳನ್ನು ಕಡತದಿಂದ ತೆಗೆಯಬೇಕು ಎಂದು ಎಲ್ಲೂ ಇಲ್ಲ. ಮಾನ್ಯ ಸಭಾಪತಿಯವರೇ, ಆ ಅಧಿಕಾರ ತಮಗಿದೆ.

(ಗೊಂದಲ)

**ವೈಸ್ ಛೇರ್ಮನ್:-** ನಾನು, ಆ ಪದಗಳು ಅಸಂಸದೀಯವಾಗಿದ್ದರೆ ತೆಗೆದು ಹಾಕುತ್ತೇನೆ ಎಂದು ಹೇಳಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ತೇಜಸ್ವಿನಿಗೌಡರವರೇ ತಾವು ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ವಿರೋಧ ಪಕ್ಷದ ನಾಯಕರಿಗೆ ಸಮಯದ ಮಿತಿ ಹಾಕಬೇಡಿ ಎಂದು ನಾವು ಹೇಳಿದ್ದೇವೆ. ಏಕೆಂದರೆ ಅದು ಈ ಸದನದ ಘನತೆ-ಗೌರವದ ವಿಚಾರ.

**ಶ್ರೀ ಆಯನೂರು ಮಂಜುನಾಥ್ :-** ಮಾನ್ಯ ಸಭಾಪತಿಯವರೆ, ನಾನು ಸದನದ ನಿಯಮಗಳನ್ನು ಉಲ್ಲಂಘಿಸಿಲ್ಲ.

**ವೈಸ್ ಛೇರ್ಮನ್:-** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಆಯನೂರು ಮಂಜುನಾಥ್ :-** ಮಾನ್ಯ ಸಭಾಪತಿಯವರೆ, ಆ ಕಡೆಯೂ ಕೂರಿಸಬೇಕಲ್ಲಾ. ನನ್ನ ವಿಷಯದ ಮೇಲೆ ಚರ್ಚೆ ಪ್ರಾರಂಭವಾಗಿದೆ. ಅದಕ್ಕೆ ಉತ್ತರ ಕೊಡುವಂಥ ಸರ್ವಾಧಿಕಾರ ನನಗಿದೆ.

**ವೈಸ್ ಛೇರ್ಮನ್:-** ಆ ವಿಷಯ ಮುಗಿಯಿತು.

**ಡಾ|| ತೇಜಸ್ವಿನಿ ಗೌಡ :-** ನನಗೆ ಮಾತನಾಡಲು ಎಷ್ಟು ಸಮಯ ನಿಗದಿ ಮಾಡಿದ್ದೀರಿ?

**ವೈಸ್ ಛೇರ್ಮನ್:-** 20 ನಿಮಿಷ ನಿಗದಿ ಮಾಡಿದ್ದೇನೆ.

**ಡಾ|| ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದವರು) :-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ವತಿಯಿಂದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಅದನ್ನು ನಾನು ಪುನರಾವರ್ತನೆ ಮಾಡಿ ಈ ಸದನದ ಸಮಯವನ್ನು ವ್ಯರ್ಥ ಮಾಡುವುದಿಲ್ಲ. ನನಗೂ ಇವತ್ತು, ಇರುವಂತಹ ಎರಡು ಬಜೆಟನ್ನು ಒಂದೇ ಎಂದು ಪರಿಗಣಿಸಬೇಕೇ ಅಥವಾ ಬಿಡಿಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆಗೆ ತೆಗೆದುಕೊಳ್ಳಬೇಕೇ ಎನ್ನುವುದರ ಬಗ್ಗೆ ಗೊಂದಲ ಇದೆ. ನಾನೊಬ್ಬ ರಾಜಕೀಯ ವಿದ್ಯಾರ್ಥಿನಿಯಾಗಿ, ಒಬ್ಬ ಪತ್ರಕರ್ತೆಯಾಗಿ, ರಾಜಕಾರಣಿಯಾಗಿ ಅನೇಕ ಮಜಲುಗಳನ್ನು ನೋಡಿದ್ದೇನೆ. ಜನ ಪ್ರತಿನಿಧಿಯಾಗುವುದು ಕಷ್ಟ; ಜನ ಪ್ರತಿನಿಧಿಯಾದ ಮೇಲೆ ಮಂತ್ರಿಯಾಗುವುದೂ, ಮುಖ್ಯಮಂತ್ರಿ ಆಗುವುದು, ವಿರೋಧ ಪಕ್ಷದ ನಾಯಕರಾಗುವುದು, ಅದರಲ್ಲೂ ಈ ರಾಜ್ಯದ ಭವಿಷ್ಯವನ್ನು ನಿರ್ಮಾಣ ಮಾಡುವಂತಹ ಹಣಕಾಸು ಸಚಿವರಾಗುವಂಥದ್ದು ಬಹಳ ಕಷ್ಟ. 13 ಬಜೆಟ್‌ಗಳನ್ನು ಮಂಡಿಸಿದ ಖ್ಯಾತಿಗೆ ಪಾತ್ರರಾದ ಮಾನ್ಯ ಸಿದ್ದರಾಮಯ್ಯನವರು ಮನೋಜ್ಞವಾದ ಬಜೆಟ್ ಮಂಡಿಸಿದ್ದರು. ಹಿಂದುಳಿದ ವರ್ಗಗಳಿಂದ ಬಂದಂತಹ, ಅದರಲ್ಲೂ ಒಂದು ಮುಗ್ಧ ಸಮಾಜದಿಂದ, ಕುರುಬ ಸಮಾಜದಿಂದ ಬಂದಂಥ ಸಿದ್ದರಾಮಯ್ಯನವರು ತಾವು ಅನುಭವಿಸಿದ ಸಾಮಾಜಿಕ ತಾರತಮ್ಯದ, ಶೋಷಣೆಯ ಹಿನ್ನೆಲೆಯನ್ನಿಟ್ಟುಕೊಂಡು ನೋವಿನಿಂದ, ಕುರಿ ಕಾಯುವವನು, ಲೆಕ್ಕ ಬರದೇ ಇರುವವನು ಈ ರಾಜ್ಯದ ಮುಖ್ಯಮಂತ್ರಿಯಾದೆ ಎಂದು ಹೇಳುತ್ತಾರೆ. ಮಾನ್ಯ ಸಿದ್ದರಾಮಯ್ಯನವರು

"ಒಲ್ಲೆನೆಂಬುದು ವೈರಾಗ್ಯ,
ಒಲಿವೆನೆಂಬುದು ಕಾಯಗುಣ.
ಆವ ಪದಾರ್ಥವಾದಡೇನು ತನ್ನಿದ್ದೆಡೆಗೆ ಬಂದುದ
ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಆಚಾರ.
ಕೂಡಲಸಂಗಮದೇವರನೊಲಿಸ ಬಂದ ಪ್ರಸಾದಕಾಯವ ಕೆಡಿಸಲಾಗದು"
ಎನ್ನುವ ಬಸವಣ್ಣನವರ ವಚನವನ್ನು ಕೋಟ್ ಮಾಡುತ್ತಾರೆ. 'ಒಲ್ಲೆನೆಂಬುದು ವೈರಾಗ್ಯ' ,

ಅಂದರೆ ನನ್ನ ಕಡೆ ಬಂದಿರುವುದನ್ನು ತೆಗೆದುಕೊಳ್ಳದೇ ಇರುವುದು ವೈರಾಗ್ಯ. 'ಒಲಿವೆನೆಂಬುದು ಕಾಯಗುಣ', ಅಂದರೆ ಇದು ಸ್ವೀಕಾರ ಮಾಡುವಂಥದ್ದು; ಒಪ್ಪಿಕೊಳ್ಳುತ್ತೇನೆ ಎನ್ನುವುದನ್ನು ಸೂಚಿಸುತ್ತದೆ. ಅದ್ಯಾವುದಾದರೇನು, ಬಂದಿರುವುದನ್ನು ಸ್ವೀಕಾರ ಮಾಡಬೇಕು ಎನ್ನುವುದು ಇದರ ಅರ್ಥ. ಮಾನ್ಯ ಸಭಾಪತಿಯವರೇ, ಅವತ್ತು ಮುಖ್ಯಮಂತ್ರಿ ಸ್ಥಾನದಲ್ಲಿ ಮಾನ್ಯ ಸಿದ್ದರಾಮಯ್ಯನವರಿದ್ದರು. ನನಗೆ ಸಿಕ್ಕಿರುವ ಅವಕಾಶವನ್ನು ಬಳಸಿಕೊಂಡು ಈ ರಾಜ್ಯವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ನಿಟ್ಟಿನಲ್ಲಿ ಅವರು ಶ್ರಮವಹಿಸಿದರು. ನಾವೇ ಇನ್ನೊಮ್ಮೆ ಅಧಿಕಾರಕ್ಕೆ ಬರುತ್ತೇವೆ ಎಂಬ ಮಾತನ್ನು ಹೇಳಿದ್ದರು. ಅವರ ಪಕ್ಷದ ಹೈಕಮಾಂಡ್ ಮಾನ್ಯ ಸಿದ್ದರಾಮಯ್ಯನವರನ್ನು ಎರಡನೆಯ ಸಲ ಮುಖ್ಯಮಂತ್ರಿ ಮಾಡುತ್ತೇವೆ ಎಂದು ಘೋಷಣೆ ಮಾಡಿತು. ಕೆಲವು ಜನರಿಗೆ ಮಾತ್ರ ಅಂತಹ ಶಕ್ತಿ ಇರುತ್ತದೆ. ನಾವು ಈ ಭಾಗದಲ್ಲಿ ಕುಳಿತಿದ್ದೇವೆ ಎಂದು ಕ್ಷುಲ್ಲಕವಾಗಿ ಮಾತನಾಡುವುದಿಲ್ಲ. ರಾಜ್ಯದ ಹಿರಿಯ ರಾಜಕಾರಣಿಯಾದ ಮಾನ್ಯ ದೇವೇಗೌಡರಿಗೆ ಒಂದು ವರ್ಗವನ್ನು, ಒಂದು ಸಮಾಜವನ್ನು ರಾಜಕೀಯ ಶಕ್ತಿಯನ್ನಾಗಿ ಮಾಡುವ, Vote Bank ನ್ನು transfer ಮಾಡತಕ್ಕಂಥ, ಒಗ್ಗೂಡಿಸುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಕ್ತಿ ಇದೆ. ವಯಸ್ಸಿನಲ್ಲಿ ಕೂಡ ಅವರು ಹಿರಿಯರು. ಮಾನ್ಯ ಯಡಿಯೂರಪ್ಪನವರು ಮೇಲ್ವರ್ಗದಲ್ಲಿ, ವೀರಶೈವ ಲಿಂಗಾಯತ ಸಮಾಜದಲ್ಲಿ ಆಕಸ್ಮಿಕವಾಗಿ ಹುಟ್ಟಿದ್ದರೂ ಕೂಡ ಆ ಸಮಾಜವನ್ನು ಒಗ್ಗೂಡಿಸುವುದರ ಜೊತೆಗೆ ಇತರ ಸಮಾಜಗಳನ್ನು, ಹಿಂದುಳಿದ ವರ್ಗದವರನ್ನು, ದಲಿತ ವರ್ಗದವರನ್ನು ಒಗ್ಗೂಡಿಸಿ ರಾಜಕೀಯ ಶಕ್ತಿಯನ್ನಾಗಿ ಪರಿವರ್ತನೆ ಮಾಡುವ ಅಗಾಧ ಶಕ್ತಿ ಹೊಂದಿದ್ದಾರೆ. 130ಕ್ಕೂ ಹೆಚ್ಚು ವರ್ಷಗಳ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷದಲ್ಲಿ, ಮಾನ್ಯ ವೀರೇಂದ್ರ ಪಾಟೀಲರು, ಮಾನ್ಯ ನಿಜಲಿಂಗಪ್ಪನವರಂಥವರಿದ್ದರು. ಜನತಾ ಪಕ್ಷದಲ್ಲಿ, ಮಾನ್ಯ ಜೆ.ಹೆಚ್.ಪಟೇಲ್‌ನಂಥವರಿದ್ದರು. Class and Mass Politician ಗೆ ಹೋಲಿಸಿದರೆ, ಮಾನ್ಯ ಯಡಿಯೂರಪ್ಪನವರು ಜನಸಂಘದಿಂದ ಬಂದವರಾಗಿದ್ದರು. ಕಾಂಗ್ರೆಸ್ ಪಕ್ಷಕ್ಕೆ ವ್ಯತಿರಿಕ್ತವಾದ ಸಿದ್ಧಾಂತದ ಹಿನ್ನೆಲೆಯಲ್ಲಿ ಬಂದವರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾಂಗ್ರೆಸ್‌ನ ವಿರುದ್ಧ ಹೋರಾಟ ನಡೆಯುವಾಗ ಮಾನ್ಯ ಜಯಪ್ರಕಾಶ್ ನಾರಾಯಣ, ಮಾನ್ಯ ಲೋಹಿಯಾ ಮತ್ತು ಮಾನ್ಯ ಮಧುಲಿಮೆ ಅವರಂಥವರನ್ನು ಮಾದರಿಯನ್ನಾಗಿ ಇಟ್ಟುಕೊಂಡವರು, ಜನತಾ ಪಕ್ಷ, ಜನತಾದಳ(ಎಸ್), ಜನತಾದಳ(ಯು) ಮತ್ತು ನಮ್ಮ ಭಾಗದಲ್ಲೂ . . . .

**ವೈಸ್ ಛೇರ್ಮನ್**:- ದಯವಿಟ್ಟು ಬಜೆಟ್ ಬಗ್ಗೆ ಮಾತನಾಡಿ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ** :- ಮಾನ್ಯ ಸಭಾಪತಿಯವರೇ, ನಾನು ಬಜೆಟ್ ಬಗ್ಗೆಯೇ ಮಾತನಾಡುತ್ತಿದ್ದೇನೆ. 7 ಕೆ.ಜಿ.ಯಷ್ಟು ಕೊಡುತ್ತಿದ್ದ ಅಕ್ಕಿ 5 ಕೆ.ಜಿ.ಗೆ ಏಕೆ ಇಳಿಯಿತು ಎಂಬುದನ್ನೂ ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು ಈ ಬಜೆಟನ್ನು 'ಅಣ್ಣತಮ್ಮ ಬಜೆಟ್' ಎಂದು ಕರೆದರು. ಹಾಗೆ ಹೇಳಿದ್ದರಿಂದ ಮಾನ್ಯ ಶರವಣರವರಿಗೆ ಬೇಜಾರಾಯಿತು. ಅವರು ಮಾತನಾಡಿದರು; ಮಾತನಾಡುವ ಹಕ್ಕು ಅವರಿಗೆ ಇದೆ. ಅಣ್ಣತಮ್ಮ ಬಜೆಟ್ ಎಂದು ಹೇಳಿದ್ದನ್ನು ಮಾನ್ಯ ಯಡಿಯೂರಪ್ಪನವರನ್ನೂ ಅಣ್ಣ ಎಂದು ಮಾನ್ಯ ಕುಮಾರಸ್ವಾಮಿಯವರನ್ನು ಸ್ವೀಕಾರ ಮಾಡಬೇಕು. ಮಾನ್ಯ ಕುಮಾರಸ್ವಾಮಿಯವರು ತಮ್ಮ ರಾಜಕೀಯ ಜೀವನದಲ್ಲಿ ಮುಖ್ಯಮಂತ್ರಿಯಂತಹ ಅತ್ಯುನ್ನತ ಪದವಿಯನ್ನು ತಲುಪಿದ್ದು ಬಿಜೆಪಿಯ ಸಹಾಯದಿಂದ, ಮಾನ್ಯ ಯಡಿಯೂರಪ್ಪ ಅವರಂತಹ . . .

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮುಂದು . . .)

(268)12-7-2018 1.10 ಡಿಎಸ್-ಎಂಡಿ

(ಗೊಂದಲ)

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ. ಸದನದಲ್ಲಿ ಮಾತನಾಡುವುದು ನನ್ನ ಹಕ್ಕು. ನಾನು ಹೇಳುವುದನ್ನು ಅವರು ಕೇಳಿಸಿಕೊಳ್ಳಬೇಕು.

(ಗೊಂದಲ)

ಮಾನ್ಯ ಸಭಾಪತಿಯವರೇ, ತಾವು ನನಗೆ ರಕ್ಷಣೆ ಕೊಡಬೇಕು.

(ಗೊಂದಲ)

**ವೈಸ್ ಛೇರ್ಮನ್:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. I cannot help it out. ನಾನೇನು ಮಾಡುವುದಕ್ಕಾಗುವುದಿಲ್ಲ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬೋಸ್‌ರಾಜ್‌ರವರು ನಾನು ಏನು ಹೇಳುತ್ತಿದ್ದೇನೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು, ಅವರೇ ಕಲ್ಪನೆ ಮಾಡಿಕೊಂಡರೆ ಹೇಗೆ?

(ಗೊಂದಲ)

**ವೈಸ್ ಛೇರ್ಮನ್:-** ಆಡಳಿತ ಪಕ್ಷದವರೇ ಈ ರೀತಿ ಮಾಡಿದರೆ ನಾವು ಸದನವನ್ನು ಹೇಗೆ ನಡೆಸಬೇಕು ಹೇಳಿ. ನೀವೇ ಈ ಬಗ್ಗೆ ಯೋಚನೆಯನ್ನು ಮಾಡಿ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಮಂಡ್ಯ ಜಿಲ್ಲೆಗೆ ಬಜೆಟ್‌ನಲ್ಲಿ ಏನು ಕೊಟ್ಟಿದ್ದಾರೆ? ಮಂಡ್ಯ ಒಕ್ಕಲಿಗರ ಅಸ್ಮಿತೆಯನ್ನು ಗುತ್ತಿಗೆ ತೆಗೆದುಕೊಂಡ ಹಾಗೆ ಮಾತನಾಡುತ್ತಿದ್ದೀರಲ್ಲಾ? ಬಿ.ಎಸ್.ಯಡಿಯೂರಪ್ಪ ಎಂದರೆ ಬೂಕನಕೆರೆ ಸಿದ್ದಲಿಂಗಪ್ಪನವರ ಮಗ ಯಡಿಯೂರಪ್ಪನವರು, ಜನ್ಮ ಭೂಮಿ ಮಂಡ್ಯ. 130 ಕೋಟಿ ರೂಪಾಯಿಗಳನ್ನು ಮೈಷುಗರ್ ಸಕ್ಕರೆ ಕಾರ್ಖಾನೆಯ ಪುನಶ್ಚೇತನಕ್ಕೆ ಕೊಟ್ಟಿದ್ದರು. ಮಂಡ್ಯ ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಕೇವಲ 50 ಕೋಟಿ ರೂಪಾಯಿಗಳ ವಿಶೇಷ ಪ್ಯಾಕೇಜ್ ಒದಗಿಸಲಾಗುವುದು ಎಂದು ಬಜೆಟ್‌ನಲ್ಲಿ ಹೇಳಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ,.......

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನನಗೆ disturb ಮಾಡುವುದು ಅವರ ಹಕ್ಕಲ್ಲ. ಮಾತನಾಡುವುದು ನನ್ನ ಹಕ್ಕು, ನಾನು ಮಾತನಾಡುತ್ತಿದ್ದೇನೆ.

(ಗೊಂದಲ)

**ವೈಸ್ ಛೇರ್ಮನ್:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ತೇಜಸ್ವಿನಿಯವರೆ, ನೀವು ಪೀಠವನ್ನುದ್ದೇಶಿಸಿ ಮಾತನಾಡಿ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಂಡ್ಯಕ್ಕೆ 14 ಟಿ.ಎಂ.ಸಿ. ಕುಡಿಯುವ ನೀರು ಸೇರಿದಂತೆ Cauvery Tribunal Verdict ನಲ್ಲಿ ಸಿಕ್ಕಿದೆ. ನೀರಾವರಿಯಲ್ಲಿ ತುಂಬಾ ಬಲ್ಯಾಢ್ಯರು, ಪ್ರಬಲ ಬಲಗಳು ಒಳ್ಳೆಯದ್ದಕ್ಕೆ ಒಟ್ಟಿಗೆ ಸೇರಬೇಕು. ವಿನಾಶಕ್ಕೆ ಒಟ್ಟಿಗೆ ಸೇರಿದರೆ ರಾಜ್ಯಕ್ಕೆ ತೊಂದರೆಯಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಇವತ್ತು ಜಲಸಂಪನ್ಮೂಲ ಖಾತೆಯನ್ನು ಮಾನ್ಯ ಡಿ.ಕೆ.ಶಿವಕುಮಾರ್‌ರವರಿಗೆ ಕೊಟ್ಟಿದ್ದಾರೆ. ನನಗೆ ಸಂತೋಷ ಇದೆ. ಆ ಭಾಗದಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಾಗಬೇಕಾಗಿದೆ. ನಾವು ಇರಲಿ, ಅವರು ಇರಲಿ, ಪ್ರತಿಯೊಬ್ಬರು ಮಾಡಬೇಕಾಗಿರುವ ಕೆಲಸ. ಸರ್ಕಾರ vacuum ನಲ್ಲಿ ಇರುವುದಕ್ಕಾಗುವುದಿಲ್ಲ. 104 ಸೀಟ್‌ಗಳನ್ನು ಜನರು ನಮಗೆ ಕೊಟ್ಟಿದ್ದಾರೆ. ಜನರ ಮನಸ್ಸಿನಲ್ಲಿ ನಾವೇ Champion-1, Champion-2 ಕಾಂಗ್ರೆಸ್ ಸಿದ್ದರಾಮಯ್ಯನವರು, Champion-3 ಜೆಡಿ(ಎಸ್)ನವರು. ಅವರೇ ಮಾಡಿಕೊಂಡಿದ್ದಾರೆ ನಾವೇನು ಆಕ್ಷೇಪ ಮಾಡುತ್ತಿಲ್ಲ. ಮಂಡ್ಯಕ್ಕೆ ಕೊಟ್ಟಿರುವಂಥದ್ದು ಮಂಡ್ಯದಲ್ಲಿ ಜನ್ಮ ತಾಳಿ ಶಿವಮೊಗ್ಗದಲ್ಲಿ ಕರ್ಮಭೂಮಿಯನ್ನಾಗಿಸಿಕೊಂಡಂತಹ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ತೋರಿದ ಬದ್ಧತೆಯನ್ನು ಎಲ್ಲಿ ತೋರಿಸಿದ್ದಾರೆ? ಆ ನೀರಾವರಿ ಯೋಜನೆಗಳನ್ನು ಎಲ್ಲಿ ಉಲ್ಲೇಖ ಮಾಡಿದ್ದಾರೆ? ಇವತ್ತು ನಾನು ಯಾರನ್ನು ಕೇಳಬೇಕು? ಅದಕೋಸ್ಕರ ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವಂತಹ ಬಜೆಟ್ ಮೊರೆ ಏಕೆ ಹೋದರು ಎಂದು ನನಗೆ ಗೊಂದಲವಾಗುತ್ತಿದೆ. ಅದಕ್ಕೆ ಉತ್ತರ ಕೊಡಬೇಕಲ್ಲವೆ? ಹೆಚ್ಚಿಗೆ ಮಾಡಿದ್ದಾರೆ, ಎಷ್ಟು ಹೆಚ್ಚಿಗೆ ಮಾಡಿದ್ದಾರೆ? ಇವತ್ತು ಆಯಾಕಟ್ಟಿನ ಪ್ರದೇಶಗಳಲ್ಲಿ ಅತೀ ಹೆಚ್ಚು ರೈತನ ಆತ್ಮಹತ್ಯೆ ಮಂಡ್ಯ ಜಿಲ್ಲೆಯಲ್ಲಾಗಿದೆ. ರಾಮನಗರ, ಮಾನ್ಯ ಡಾ:ಹೆಚ್.ಎಲ್.ನಾಗೇಗೌಡರು ಜಾನಪದ ತಜ್ಞರು. ಅಲ್ಲಿ ಅಂತರಾಷ್ಟ್ರೀಯ ಮಟ್ಟದ ಜಾನಪದ ಲೋಕ ಇದೆ. ನಾನು ಸಂಸದೆಯಾಗಿದ್ದಾಗ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ರಾಮನಗರದ ಅನೇಕ ಕಾಯಕಗಳಿಗೆ ನನ್ನ ಸಂಸದೀಯರ ನಿಧಿಯನ್ನು ಕೊಟ್ಟಿದ್ದೇನೆ. ಬಜೆಟ್‌ನಲ್ಲಿ ನಿರ್ದಿಷ್ಟವಾದ ಹಣವನ್ನು ಎಲ್ಲಿ ಕೊಟ್ಟಿದ್ದಾರೆ? ಅದೇ ರೀತಿ ಕರಾವಳಿಯ ಮುಂಬೈ ಇಡೀ ಭಾರತ ದೇಶದ Financial Capital ಆದರೆ ಮಂಗಳೂರು ಕರಾವಳಿ ಮುಂಬೈ ಮತ್ತು ಕರಾವಳಿ ನಡುವೆ ಇರತಕ್ಕಂಥ ವಾಣಿಜ್ಯದ ವೈವಿಧ್ಯತೆಗಳಲ್ಲಿ ಎಷ್ಟು contribute ಮಾಡುತ್ತಿದೆ, ಎಷ್ಟು ಮೇಲ್ಸೇತುವೆಗಳಿವೆ? ಮಂಗಳೂರು ನಗರ ಅಭಿವೃದ್ಧಿಯಾಗುವ ಮಟ್ಟದಲ್ಲಿ ಆಗಿದೆಯೇ ಎನ್ನುವುದರ ಬಗ್ಗೆ ಎಲ್ಲಾದರೂ ಇದೆಯೇ? ಮಾನ್ಯ ಮುಖ್ಯಮಂತ್ರಿಗಳು ಶೃಂಗೇರಿಗೆ ಹೋದಾಗ ಅಲ್ಲಿರುವವರು ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಅವರ ಅತೃಪ್ತಿಯನ್ನು ವ್ಯಕ್ತಪಡಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಪ್ಪಿಲ್ಲ. ಆ ಅತೃಪ್ತಿ ಬಜೆಟ್ ಹಂಚಿಕೆಯಲ್ಲಿ ಅನ್ಯಾಯವಾಗಬಾರದಲ್ಲವೆ? ಇವತ್ತು ಅಲ್ಪಸಂಖ್ಯಾತರ ಬಗ್ಗೆ ನಾವು ಮಾತನಾಡದಿದ್ದರೆ ಯಾರು ಮಾತನಾಡುತ್ತಾರೆ? Vote Bank ಮಾಡುವುದಕೋಸ್ಕರ, ಮತ್ತೊಂದು ಮಾಡುವುದಕೋಸ್ಕರ ಅವರು ಎಷ್ಟೇ ಮಾಡಿದರೂ ಕೂಡ, ಮಾನ್ಯ ಬೋಸ್‌ರಾಜ್‌ರವರು ರಾಮನ ಬಗ್ಗೆ ಕೇಳುತ್ತಿದ್ದರು. ವಚನ ಏಕೆ ಕೋಟ್ ಮಾಡಿದೆ ಎಂದರೆ, ಅವರು ಪಾಲಿಸಬೇಕೆನ್ನುವ ಲಿಖಿತ ಕಾನೂನು ಇಲ್ಲ. ರಾಮನಿಗೆ ಪಟ್ಟಾಭಿಷೇಕ ಮಾಡಿಸಿಕೊಳ್ಳುವ ಬಗ್ಗೆ ಅರ್ಹತೆ ಇತ್ತು. ರಾಮನೇ ಆಗಬೇಕೆಂದು ಜನ ಬಯಸಿದ್ದರು. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಬೇಕೆಂದು ಅವರು ಬಯಸಿದ ಹಾಗೆ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಬೇಕೆಂದು ನಾವು ಬಯಸಿದ ಹಾಗೆ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಬೇಕೆಂದು ಜೆಡಿ(ಎಸ್)ನವರು ಬಯಸಿದ ಹಾಗೆ.

**ಸಭಾಪತಿಯವರು:–** ಬಜೆಟ್‌ನಲ್ಲಿ ರಾಮ ಇಲ್ಲ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದರು. ನಮಗೆ ಏನಾಗಿಬಿಟ್ಟಿದೆ ಎಂದರೆ ರಾಮ ಒಬ್ಬ ಬಿಟ್ಟಿ ಸಿಕ್ಕಿಬಿಟ್ಟಿದ್ದಾರೆ. ಒಳ್ಳೆಯದಕ್ಕೆ ರಾಮನನ್ನು ತೆಗೆದುಕೊಳ್ಳುವುದಿಲ್ಲ.

**ಶ್ರೀ ಎನ್.ಎಸ್.ಬೋಸ್‌ರಾಜ್:–** ಮಾನ್ಯ ಸಭಾಪತಿಯವರೇ, ತೇಜಸ್ವಿನಿಯವರು ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಬಗ್ಗೆ ವೈಭವೀಕರಣ ಮಾಡಿ ಮಾತನಾಡುತ್ತಿದ್ದಾರೆ. ಅವರ ಬಗ್ಗೆ ವಿರೋಧವಾಗಿಯೂ ಮಾತನಾಡಿದ್ದಾರೆ. ರಾಮನ ಬಗ್ಗೆ ನಾನು ಮಾತನಾಡಲಿಲ್ಲ. ಆ ವಿಷಯವನ್ನೇ ನಾನು ಪ್ರಸ್ತಾಪ ಮಾಡಲಿಲ್ಲ. ಬೇಕಾದರೆ ಕಡತವನ್ನು ತೆಗೆಸಿ ನೋಡಿ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಡಾ:ತೇಜಸ್ವಿನಿಯವರು ಆಗ ಕಾಂಗ್ರೆಸ್ ಪಕ್ಷದಲ್ಲಿದ್ದರು.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಾನೊಬ್ಬ ವಿದ್ಯಾವಂತ ಹೆಣ್ಣುಮಗಳು. ಕಾಂಗ್ರೆಸ್‌ನಲ್ಲಿದ್ದರೂ, ಬಿಜೆಪಿಯಲ್ಲಿದ್ದರೂ, ಜೆಡಿಎಸ್‌ನಲ್ಲಿದ್ದರೂ ರಾಮ ರಾಮನಾಗಿಯೇ ಇರುತ್ತಾರೆ. ಶ್ರೀಮತಿ ಇಂದಿರಾ ಗಾಂಧಿಯವರು, ಇಂದಿರಾ ಗಾಂಧಿಯಾಗಿರುತ್ತಾರೆ. ಒಳ್ಳೆಯದ್ದನ್ನು ಸ್ಮರಿಸಬೇಕು, ಲೋಪದೋಷಗಳನ್ನು ಸಹ ಹೇಳಬೇಕು.

**ಸಭಾಪತಿಯವರು:–** ತೇಜಸ್ವಿನಿಯವರು ಎಲ್ಲಿದ್ದರೂ ತೇಜಸ್ವಿಯಾಗಿರುತ್ತಾರೆ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಾನು ತಮ್ಮಂಥವರಿಂದ ಕಲಿತಿರುವಂಥದ್ದು. ಪ್ರಜಾಪ್ರಭುತ್ವದಲ್ಲಿ, ಚುನಾವಣೆ ಅವಧಿಯಲ್ಲಿ ಅದು ನಮ್ಮ ಹಕ್ಕು. ರಾಜಕೀಯ ಪಕ್ಷಗಳು ಆರೋಪವನ್ನು ಮಾಡುತ್ತಾರೆ, ಟೀಕೆಯನ್ನು ಮಾಡುತ್ತಾರೆ, ಸದನದ ಹೊರಗೆ ಮಾಡಿದಂತಹ ವರ್ತನೆಯನ್ನು ಸದನದ ಒಳಗೆ ನಾವು ಏಕೆ ಮಾಡಬಾರದು ಎಂದರೆ ಅದು ಕಡತಕ್ಕೆ ಹೋಗುತ್ತದೆ. ಮುಂದಿನ ಪೀಳಿಗೆಯವರು ದಾಖಲೆ ನೊಡುವುದರಿಂದ ನಾವು ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕು ಎಂದು ಹೇಳಿದ್ದೇನೆಯೇ ಹೊರತು ತೀಕ್ಷಣತೆ ಕಡಿಮೆ ಮಾಡಬೇಕು ಎಂದೂ ಅಷ್ಟೇ ಹೇಳಿರುವುದು. ರಾಮ ಪಿತೃ ವಾಕ್ಯ ಪರಿಪಾಲಕರಾಗಿ ಕಾಡಿಗೆ ಹೋದರು. ಕಾಡಿಗೆ ಹೋಗುವ ಅವಶ್ಯಕತೆ ಇರಲಿಲ್ಲ. ನಮ್ಮ ಕುಮಾರಣ್ಣನವರ ರೀತಿ ಅವಕಾಶ ಬಂದಿದೆ, ಅನುಭವಿಸೋಣ ಎನ್ನುವುದಾಗಿದ್ದರೆ ರಾಮ ಪೀಠ ತ್ಯಾಗ ಮಾಡಬೇಕಾಗಿರಲಿಲ್ಲ, ಮಾಡಬಹುದಾಗಿತ್ತು. ಅವರು ರಾಮ ಆಗಿ ಏಕೆ ಉಳಿದಕೊಂಡರು ಎಂದರೆ, ಆ ರೀತಿ ಮಾಡಿರುವುದರಿಂದ. ಸನ್ಮಾನ್ಯ ದೇವೇಗೌಡರ ಮಾತನ್ನು ನಾನು ನಂಬುತ್ತೇನೆ. ಅವರು ಯಾರ ಸ್ವತ್ತು ಅಲ್ಲ, ಜೆಡಿ(ಎಸ್)ನವರ ಸ್ವತ್ತು ಅಲ್ಲ, ಅವರು ನಾಡಿನ ಸ್ವತ್ತು. ಹೇಳಿದರೆ ಜಾಸ್ತಿ ನೊಂದುಕೊಂಡು ಬಿಡುತ್ತಾರೆ. ಮೂರು ಘಟನೆಗಳಿಂದ ನನ್ನ ಮನಸ್ಸಿಗೂ ನೋವು ಇದೆ. ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾದಾಗ ಖುಷಿಯಾಯಿತು. ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಯಾಗಿ ಕೆಳಗೆ ಇಳಿದಾಗ, ಇಳಿಸಿದವರ ಬಗ್ಗೆ, ಇಳಿದಿದ್ದರ ಬಗ್ಗೆ ನಾನು ಗ್ರಾಮೀಣ ಮಹಿಳೆಯಾಗಿ, ಕರ್ನಾಟಕದವರಾಗಿ ನನಗೂ ನೋವಾಯಿತು. ಇದಕ್ಕೆ ಕಾರಣ ಏನೆಂದು ಹೇಳಬೇಕಾಗುತ್ತದೆ. ಆ ಆತಂಕ ಇವತ್ತು ಕಾಣುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಒಂದು ಮನಃಸ್ಥಿತಿಯನ್ನು ನೋಡಿದರೆ ಈ ಬಜೆಟ್ ಮಂಡಿಸುವುದಕ್ಕೆ ಮತ್ತೊಂದು ವರ್ಷಕ್ಕೆ ನಮ್ಮನ್ನು ಇರಿಸುತ್ತಾರೆಯೋ ಇಲ್ಲವೋ, ಅವಕಾಶ ಸಿಗುತ್ತದೆಯೋ, ಇಲ್ಲವೋ ಎನ್ನುವ ಆತಂಕವಿದೆ. ನಾನು ಒಳ್ಳೆಯ ಸದುದ್ದೇಶದಿಂದ ಇದನ್ನು ಹೇಳುತ್ತಿದ್ದೇನೆ. 9,000 ಕೋಟಿ ರೂಪಾಯಿಗಳ

“ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವ್ಯತ್ಯಾಸದಲ್ಲಿ ಮತ್ತೊಂದು ಬಜೆಟ್‌ನ್ನು ಕೊಟ್ಟಿದ್ದವರು ಮಾನ್ಯ ಸಿದ್ದರಾಮಯ್ಯನವರು. ಅವರಿಗೆ ಬೆಂಬಲ ಕೊಟ್ಟಿರುವಂಥವರು. 80 ಸೀಟ್ ಬೆಂಬಲ ಕೊಟ್ಟಿರುವಂತಹ ಪಕ್ಷದ ಬಗ್ಗೆ ವಿಶ್ವಾಸ, ನಂಬಿಕೆ ಇದ್ದಿದ್ದರೆ ಇಂತಹ ಆತುರದ ಕ್ರಮ ಬೇಕಾಗಿರಲಿಲ್ಲ. ನಾನು ಅದನ್ನು ದುರುಪಯೋಗ ಮಾಡಿಕೊಳ್ಳುವುದಿಲ್ಲ. ಅವರೇನೋ ಮಾತನಾಡಿದ್ದಾರೆ, ಅದನ್ನು ನಾನು ದುರುಪಯೋಗ ಮಾಡಿಕೊಳ್ಳುತ್ತಿಲ್ಲ. ಆದರೆ ಅವರಿಗೂ ಕೂಡ ಎಲ್ಲೋ ಒಂದು ಕಡೆ ಸಿದ್ದರಾಮಯ್ಯನವರ ಪರಿಸ್ಥಿತಿ ಮಹಾಭಾರತದಲ್ಲಿ ಕರ್ಣನ ಪರಿಸ್ಥಿತಿ, ಪಾಂಡವರಿಗೆ ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ. ಶ್ರೀಕೃಷ್ಣ ಹೇಳಿದ ಹಾಗೆ ನ್ಯಾಯಯು ಬದ್ಧವಾಗಿ ಕೊಡಬೇಕಾಗಿದ್ದ ಆ ಗ್ರಾಮಗಳನ್ನು ಕೊಟ್ಟುಬಿಟ್ಟಿದ್ದರೆ ಕುರುಕ್ಷೇತ್ರವೇ ನಡೆಯುತ್ತಿರಲಿಲ್ಲ. ಹಾಗೆಯೇ ಇವತ್ತು ಕೂಡ ನಮ್ಮಿಂದ ಅಧಿಕಾರವನ್ನು ಹೊಡೆದುಕೊಂಡು ಹೋಗಿದ್ದಾರೆ, ಪಡೆದುಕೊಂಡಿರುವುದಲ್ಲ. ಇದು ಹೊಡೆದುಕೊಂಡು ಹೋಗಿರುವಂಥದ್ದು. ತೊಂದರೆ ಇಲ್ಲ, ಇದಕ್ಕೆ ಪ್ರಜಾಪ್ರಭುತ್ವದಲ್ಲಿ, ಸಂವಿಧಾನದಲ್ಲಿ ಅವಕಾಶ ಇದೆ.

(ಗೊಂದಲ)

(ಮುಂದು)

(269)12-07-2018/ಬಿಕೆಪಿ-ಎಕೆ/1-20

(ಗೊಂದಲ)

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗುವುದಿಲ್ಲ. ಇದು standing instruction. ಸಭಾನಾಯಕರು ಮಾತನಾಡಬೇಕು.

**ಡಾ|| ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಎರಡು ಬಜೆಟ್‌ಗಳನ್ನೂ ಸಹ ತಮ್ಮ ಕೈಯಲ್ಲಿಟ್ಟುಕೊಂಡು ಅಧ್ಯಯನ ಮಾಡಿ ಮಾತನಾಡುವಾಗ ಒಂದು ವಿಚಾರವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಂಡಿಸಿದಂತಹ ಬಜೆಟ್ ಪುಸ್ತಕದ ಪುಟ ಸಂಖ್ಯೆ 25, 26 ಮತ್ತು 27ನ್ನು ಮಾನ್ಯ ಸದಸ್ಯರು ಗಮನಿಸಬೇಕು. 5 ವರ್ಷಗಳ ಅವಧಿಯಲ್ಲಿ ಕರಾವಳಿ ಭಾಗಕ್ಕೆ ಎಷ್ಟು ಹಣವನ್ನು ನಿಗದಿಪಡಿಸಲಾಗಿತ್ತು ಎಂಬುದನ್ನು ಅವರು ನೋಡಬೇಕು. ಅಲ್ಪಸಂಖ್ಯಾತರ ಬಗ್ಗೆ ಸಹ ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರು ಮಾತನಾಡಿದ್ದಾರೆ. ಇದು ಮುಂದುವರಿದ ಬಜೆಟ್ ಎನ್ನುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸಹ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಗಮನಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ಬಜೆಟ್ ವಿಷಯದ ಬಗ್ಗೆ ಈಗಾಗಲೇ ಚರ್ಚೆಯಾಗಿದ್ದು, ಅದನ್ನು ಒಪ್ಪಿಕೊಳ್ಳಲಾಗಿದೆ. ಆದರೆ, ಇವತ್ತು ಈ ಬಜೆಟ್‌ಗೋಸ್ಕರ ಈ ಸದನದಲ್ಲಿ ಏತಕ್ಕೆ ನಾವು ಚರ್ಚೆ ಮಾಡುತ್ತಿದ್ದೇವೆ?

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ . .

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ತಾವು ಪೀಠದಿಂದ ಈ ಬಗ್ಗೆ ರೂಲಿಂಗ್ ಕೊಡಬೇಕು.

(ಗೊಂದಲ)

**Sri RAGHUNATH RAO MALKAPURE:** There is some confusion. I want to know on which budget they are discussing.

(ಗೊಂದಲ)

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರಿಗೆ ಉತ್ತರ ಕೊಡಲಿಕ್ಕೆ ಎಲ್ಲಾ ಅಧಿಕಾರ ಇರುತ್ತದೆ. ಆ ಸಮಯದಲ್ಲಿ ಇದರ ಬಗ್ಗೆ ಉತ್ತರ ಕೊಡಿ. ಈಗ ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿಗೌಡರವರು ಮಾತನಾಡಬಯಸುತ್ತಿದ್ದಾರೆ. ಅವರು ಏನು ಹೇಳುತ್ತಾರೆಯೋ ನೋಡೋಣ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಹಿರಿಯ ಸದಸ್ಯರಾದ ಶ್ರೀಮಾನ್ ಹೆಚ್.ಎಂ.ರೇವಣ್ಣನವರು ಮಾತನಾಡುತ್ತಾ, ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ ಬಜೆಟ್‌ನಲ್ಲಿ ಹಣ ಹಂಚಿಕೆ ಮಾಡಿರುವುದು ಸಾಲದಾಗಿದೆ, ಅದರಲ್ಲಿ ಕಡಿತವಾಗಿದೆ ಎಂದು ಹೇಳಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತೆ ಅನೇಕ ಖಾತೆಗಳಿಗೆ ಹಣ ಕಡಿತವಾಗಿದೆ. ಅದರಲ್ಲೂ ಶಿಕ್ಷಣ ಇಲಾಖೆ ಬಹಳ ಅಮೂಲ್ಯವಾಗಿದ್ದು, ಅದಕ್ಕೆ ಬಹಳಷ್ಟು ಹಣ ಸಹ ಕಡಿತವಾಗಿದೆ. ಈ ವಿಚಾರವಾಗಿ ನಾನು ಮಾನ್ಯ ಸಭಾನಾಯಕರಿಗೆ ಹೇಳಲಿಕ್ಕೆ ಬಯಸುತ್ತೇನೆ. ಈ ವಿಚಾರ ತಾಂತ್ರಿಕ ವಿಷಯವಾಗಿದ್ದರಿಂದ ಈ ವಿಚಾರವಾಗಿ ಸರ್ಕಾರಕ್ಕೆ ಏನಾದರೂ ಹೇಳಬೇಕೆಂದರೆ, ಈ ಆಯವ್ಯಯವನ್ನು quote ಮಾಡಬೇಕಾಗುತ್ತದೆ. ಅದನ್ನು quote ಮಾಡಲಿಕ್ಕೆ ತಾವು ನನಗೆ ಅವಕಾಶ ಕೊಡಬೇಕು. ಈ ವಿಚಾರವಾಗಿ ನಾನು ಪೀಠದಿಂದ ರೂಲಿಂಗ್ ಬಯಸುತ್ತೇನೆ. ಇಲ್ಲದಿದ್ದರೆ, ನನ್ನ ಹಕ್ಕುಚ್ಯುತಿಯಾಗುತ್ತದೆ. ನಾನು ಹೇಳುವುದೇನೆಂದರೆ ಕೆಲವು ಇಲಾಖೆಗಳಿಗೆ ಹಂಚಿಕೆಗಳಲ್ಲಿ ಅದು ಕಡಿತವಾಗದಿದ್ದರೆ ಒಂದು ವೇಳೆ ನಾವು ಈ ಬಜೆಟ್ ಒಪ್ಪಿಕೊಳ್ಳುತ್ತಿದ್ದೆವು. ಈಗ ಹಣ ಹಂಚಿಕೆಯಲ್ಲಿ ಕಡಿತವಾಗಿದೆ. ಮತ್ತೆ ಕೆಲವು ಇಲಾಖೆಗಳಿಗೆ ಹೆಚ್ಚಾಗಿದೆ.

ಹೀಗಾಗಿ, ಇಲ್ಲಿ ಅಭಿವೃದ್ಧಿ ದೃಷ್ಟಿಯಿಂದ ಕರಾವಳಿ ಭಾಗಕ್ಕೆ ಬಂದಾಗ ಅಡಿಕೆ ಬೆಳೆಗಾರರು, ಕಾಫಿ ಬೆಳೆಗಾರರು, ಮೆಣಸು ಬೆಳೆಗಾರರ ಸಮಸ್ಯೆಯ ಬಗ್ಗೆ ನನಗಿಂತ ಹೆಚ್ಚಿನ ರೀತಿಯಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಪ್ರಾಣೇಶ್ ರವರು, ಶ್ರೀ ಸುನಿಲ್ ಸುಬ್ರಮಣಿ ರವರು ಈ ರೀತಿಯಲ್ಲಿ ಮಲೆನಾಡಿನ ಎಲ್ಲಾ ಸಹೋದರರು, ಅದರಲ್ಲೂ ಶ್ರೀಯುತ ಭೋಜೇಗೌಡರವರು, ಶ್ರೀಯುತ ಧರ್ಮೇಗೌಡರವರು ಸಹ ಕಣ್ಣಾರೆ ನೋಡುತ್ತಿದ್ದಾರೆ. ಅಲ್ಲಿ ಅತಿವೃಷ್ಟಿಯಿಂದಾಗಿ ಬೆಳೆ ನಾಶವಾಗುತ್ತಿದೆ, ಆನೆಯ ಹಾವಳಿಯಿಂದ ಸಣ್ಣ ಹಿಡುವಳಿದಾರರು ಸಂಕಷ್ಟಕ್ಕೆ ಈಡಾಗಿದ್ದಾರೆ. ಹೀಗಿರುವಾಗ ಇಷ್ಟೊಂದು ಅತೃಪ್ತಿಯನ್ನು ನಿಮ್ಮ ಬಜೆಟ್‌ನಲ್ಲಿ ತೋರಿಸಿದರೆ ಅಲ್ಲಿನ ಅಸಹಾಯಕ ರೈತಾಪಿ ಜನರು ಎಲ್ಲಿ ಹೋಗಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಏಕೆಂದರೆ, ಅವರೇ ಈ ನಾಡಿನ ದೊರೆ ನೀವೇ ಅಲ್ಲವೇ, ಮುಖ್ಯಮಂತ್ರಿಗಳಲ್ಲವೇ?

(ಗೊಂದಲ)

ಆದ್ದರಿಂದ, ಅವರ ಹಿತ ಕಾಪಾಡುವಲ್ಲಿ ಮಾನ್ಯ ಕುಮಾರಸ್ವಾಮಿಯವರು ಎಲ್ಲೋ ಒಂದು ಕಡೆ ಸಣ್ಣ ಮನಸ್ಸನ್ನು ಮಾಡಿದ್ದಾರೆ. ಇದು ಒಳ್ಳೆಯದಲ್ಲ. ಬ್ರಿಟೀಷ್‌ರು ನಮ್ಮ ದೇಶಕ್ಕೆ ಬಂದದ್ದು spices ಗಾಗಿ. ರುಚಿ ಹತ್ತಿದ ಮೇಲೆ ಅವರು ಇಲ್ಲಿಂದ ಹೋಗಲೇ ಇಲ್ಲ. ಸುಮಾರು 200 ವರ್ಷಗಳ ಕಾಲ ನಾವು ಕಷ್ಟಪಟ್ಟಿದ್ದೇವೆ. ಹೀಗಾಗಿ, ಇವತ್ತು ಕರಾವಳಿ ಭಾಗದ ರೈತರನ್ನು ನೀವು ಕೈ ಹಿಡಿಯಬೇಕು. ಆ ಮೂಲಕ ಭಾರತಕ್ಕೆ ಒಂದು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾಫಿ ಬೆಳೆಗಾರರನ್ನು ಉಳಿಸಬೇಕಾದರೆ, ಈ ಕಾಫಿ ಬೆಳೆಗಾರರನ್ನು ಈ ಸಾಲ ಮನ್ನಾ ambit ಗೆ ತರಬೇಕು. ಇದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಸುಸ್ತಿ ಸಾಲ ಮನ್ನಾ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಒಂದು ನಿಮಿಷ ತಾವು yield ಆದರೆ ಶ್ರೀಯುತ ಬೋಜೇಗೌಡರವರು ಏನೋ ಮಾತನಾಡುತ್ತಾರಂತೆ. ಅವರು ಮಾತನಾಡಲಿ. ಆದರೆ ಅವರು ಈ ಬಗ್ಗೆ ಸೂಕ್ಷ್ಮವಾಗಿ ಮಾತನಾಡಬೇಕು.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದರೆ ನಮ್ಮ thought process ಹೋಗಿಬಿಡುತ್ತದೆ.

**ಸಭಾಪತಿಯವರು:-** ಹಾಗಾದರೆ ಬೇಡ ಬಿಡಿ. ತಮ್ಮ ಭಾಷಣವನ್ನು ಮುಂದುವರಿಸಿ.

**ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ. . .

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆಮೇಲೆ ಮಾತನಾಡಲಿ. ಅವರಿಗೆ ನಂತರ ಸಮಯ ಇದೆ.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಈ ಬಗ್ಗೆ ಸ್ವಲ್ಪ ಕಾಳಜಿ ವಹಿಸಿ. . .

(ಗೊಂದಲ)

**ಸಭಾಪತಿಯವರು:-** ಆಯಿತು, ತಾವು ಬೇಗ ತಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರೈತರ ಬಗ್ಗೆ ವಿಶೇವಾಗಿ ಕಾಳಜಿವಹಿಸಿ, ವಿಶೇಷವಾಗಿ, ಅಡಕೆ, ಮೆಣಸು ಮತ್ತು ಕಾಫಿ ಬಗ್ಗೆ ಮಾತನಾಡಿದ್ದಾರೆ. ಕರಾವಳಿ ಮತ್ತು ಮಲೆನಾಡಿನ ಪ್ರದೇಶದ ನಾವುಗಳು ಮಳೆಯನ್ನು ಕೊಟ್ಟು, ಇಡೀ ನಾಡಿನಲ್ಲಿ ಶಾಂತಿ ನೆಲೆಸುವಂತಹ ಕೆಲಸವನ್ನು ಮಾಡುವಂತಹವರು. ಬಹಳ ಮುಖ್ಯವಾಗಿ ನಮ್ಮ ತೇಜಸ್ವಿನಿ ಗೌಡರವರು ಅಡಕೆ ಮತ್ತು ಮೆಣಸಿನ ಬಗ್ಗೆ ಬಹಳವಾಗಿ ಹೇಳಿದರು. ಅಡಕೆ ಮತ್ತು ಮೆಣಸಿನ ಬಗ್ಗೆ ಇವತ್ತು ಕೇಂದ್ರ ಸರ್ಕಾರ ಬಹಳವಾಗಿ ತಾತ್ಸಾರ ಮಾಡಿದೆ. ಹೀಗಾಗಿ, ಈ ವಿಚಾರದಲ್ಲಿ ಕೇಂದ್ರದ ಜವಾಬ್ದಾರಿ ಜಾಸ್ತಿ ಇದೆ.

(ಗೊಂದಲ)

ಮೆಣಸಿನ ಬೆಲೆ 600 ರೂಪಾಯಿಗಳಿಂದ 250 ರೂಪಾಯಿಗಳಿಗೆ ಇಳಿದಿದೆ. ಹೀಗಾಗಿ ಕೇಂದ್ರ ಸರ್ಕಾರದವರು ಇದಕ್ಕೆ ಹಣವನ್ನು ಕೊಡಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮತ್ತೆ, ಈ ಬಜೆಟ್‌ನಲ್ಲಿ ಬೇಲೂರಿನ ಸ್ಥಳ ಚರಿತ್ರೆಯನನ್ನು ಪ್ರವಾಸಿಗರಿಗೆ ಬಣ್ಣಿಸುವ ಗೈಡ್‌ಗಳಿಗೆ 60 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅದರ ಜೊತೆಯಲ್ಲಿ ಬೇಲೂರು ಮಾತ್ರವಲ್ಲ, ಇಡೀ ಕರ್ನಾಟಕ ರಾಜ್ಯದಲ್ಲಿ ಇರುವಂತಹ ಎಲ್ಲಾ ಸ್ಮಾರಕಗಳು, ಪುರಾತತ್ವ ಇಲಾಖೆ, ನಮ್ಮ ನಾಡಿನ ಇತಿಹಾಸ, ನಾಡಿನ ವೈಭವವನ್ನು ಹೇಳುವುದಕ್ಕೆ, ವಿಶೇಷವಾಗಿ ಗ್ರಾಮೀಣ ಮಕ್ಕಳಿಗೆ ಅದಕ್ಕೆ ಒಂದು education ನ ambit ನಲ್ಲಿ ತರುವುದರ ಬಗ್ಗೆ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಇದರ ಬಗ್ಗೆ ಕ್ರಮಬದ್ಧವಾದ ಇತಿಹಾಸ ತಜ್ಞರಿಂದ ಪಾಠಗಳನ್ನು ಹೇಳಿಕೊಟ್ಟು, ಗೈಡ್‌ಗಳನ್ನು ನೇಮಕ ಮಾಡಿದರೆ ನಮ್ಮ ನಾಡಿನ ಬಗ್ಗೆ ಬಹಳ ಒಳ್ಳೆಯ ರೀತಿಯಲ್ಲಿ ಮಾಹಿತಿ ಹೊರಗಡೆ ಹೋಗುತ್ತದೆ. ಇವತ್ತು ನಮ್ಮ ಕಡೆ ವಿದೇಶಿ ಪ್ರವಾಸಿಗರು ಎಷ್ಟು ಜನ ಬರುತ್ತಾರೆ, ಅವರ ಪೈಕಿ ಹೆಚ್ಚು ಜನರು ತಮಿಳುನಾಡಿಗೆ ಹೋಗುತ್ತಾರೆ. ಆದರೆ, ಇದಕ್ಕೆ ಕರ್ನಾಟಕದಲ್ಲಿ ಅಲ್ಲಿಗಿಂತ ಜಾಸ್ತಿ ಅವಕಾಶಗಳಿವೆ. ಆದರೆ, ಅದನ್ನು ಸೆಳೆಯುವಲ್ಲಿ ನಾವು ವಿಫಲರಾಗಿದ್ದೇವೆ. ಹೀಗಾಗಿ, ಆರ್ಥಿಕವಾಗಿಯೂ ಸಹ ನಮಗೆ ನಷ್ಟವಾಗುತ್ತಿದೆ. ಪ್ರವಾಸೋದ್ಯಮ ಇಲಾಖೆಯಿಂದ ನಮ್ಮ ನಾಡಿನ ವೈಭವವನ್ನು showcase ಮಾಡುವಲ್ಲಿ ನಾವುಗಳು ಹಿಂದೆ ಬಿದ್ದಿದ್ದೇವೆ. UNESCO ಸಂಸ್ಥೆ ಭಾರತದಲ್ಲಿ 37 ಸ್ಮಾರಕಗಳನ್ನು ಗುರುತಿಸಿದೆ. ಆದರೆ ನಮ್ಮ ಕರ್ನಾಟಕದ ಶ್ರವಣಬೆಳಗೊಳ UNESCO ದ ವಿಶ್ವ ಪಾರಂಪರಿಕ ಕಟ್ಟಡದ ಪಟ್ಟಿಯಲ್ಲಿ ಸೇರಿಲ್ಲವೆಂದು ಹೇಳಲಾಗುತ್ತಿದೆ. ಇಂತಹ ಲೋಪದೋಷಗಳು ಬಹಳಷ್ಟು ಇವೆ. ಪ್ರವಾಸೋದ್ಯಮ ಇಲಾಖೆ, ಪುರಾತತ್ವ ಇಲಾಖೆ, ವಿಶೇಷವಾಗಿ ಶಿಕ್ಷಣ ಇಲಾಖೆಯನ್ನು ನೋಡಬೇಕಾಗಿದೆ. ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಸಚಿವರಾದ ಶ್ರೀ ಮಹೇಶ್‌ರವರು ಈಗ ಈ ಸದನದಲ್ಲಿಯೇ ಕುಳಿತ್ತುಕೊಂಡಿದ್ದಾರೆ. ಮಾನ್ಯ ಸಚಿವರು ಬೆಳಿಗ್ಗೆ ಪ್ರಾಥಮಿಕ ಶಿಕ್ಷಣದ ವಿಷಯವಾಗಿ ಒಂದು ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿದ್ದಾರೆ. ಸರ್ಕಾರಿ ಶಾಲೆಗಳ ಕಟ್ಟಡಗಳಿಗೆ ಸರ್ಕಾರದಿಂದ ಎಷ್ಟು ಅನುದಾನ ನೀಡಲಾಗಿದೆ ಎಂದರೆ; ನಾವು ಇವತ್ತು ಬರುವಂತಹ ಟೀಕೆಗಳನ್ನು ಸ್ವೀಕಾರ ಮಾಡಬೇಕಾಗಿದೆ. ಇಲ್ಲಿಗೆ 70 ವರ್ಷಗಳು ಕಳೆದಿದೆ. ಒಂದು ಕಟ್ಟಡ ಎನ್ನುವುದು ಒಂದು basic need. ಅದರಲ್ಲೂ ಕೂಡ ಗ್ರಾಮಾಂತರ ಭಾಗದಲ್ಲಿ ಇಷ್ಟೇಕೆ ತಾರತಮ್ಯ ಇದೆ? ನಗರ ಮತ್ತು ಗ್ರಾಮೀಣ ಪ್ರದೇಶಗಳ ವಿಚಾರದಲ್ಲಿ ತಾರತಮ್ಯ ಇರಲು ಕಾರಣವೇನು? ಡಾ॥ ನಂಜುಂಡಪ್ಪ ವರದಿ ಏತಕ್ಕೆ ಬಂದಿದೆ, ನಾವು ಯಾವಾಗ address ಮಾಡುತ್ತೇವೆ, ಇದೆಲ್ಲವನ್ನು ತ್ವರಿತಗತಿಯಲ್ಲಿ ಮಾಡಬೇಕಾಗಿದೆ. ಇದನ್ನು time bound programme ನಲ್ಲಿ ಮಾಡಬೇಕು. ನನ್ನ ಪ್ರಕಾರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ 5000 ಕೋಟಿ ರೂಪಾಯಿಗಳು ಬೇಕಷ್ಟೆ. ನಾನು ಈ ವಿಚಾರದಲ್ಲಿ ತಜ್ಞಳಿಲ್ಲ. ನಿಜವಾಗಿಯೂ ಸಹ ಸುಸಜ್ಜಿತ ಕಟ್ಟಡಗಳನ್ನು ಒದಗಿಸಬೇಕಾದರೆ 5000 ಕೋಟಿ ರೂಪಾಯಿಗಳು ಬೇಕಾಗಬಹುದು. ನಿಮಗೆ ನಿಧಿ ಕೊರತೆ ಇರಬಹುದು. ಆದರೆ ಲಭ್ಯವಿರುವ ಅನುದಾನವನ್ನು ನೀವು ಆಧ್ಯತೆಯ ಆಧಾರದ ಮೇಲೆ ಕೊಡಬೇಕಲ್ಲವೇ; ಶಿಕ್ಷಣಕ್ಕೆ ನೀವು ಆದ್ಯತೆಯನ್ನು ಕೊಡಬೇಕಲ್ಲವೇ? ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ನೀವು ತಪ್ಪು ಮಾಡಿದ್ದೀರಿ, ನಾವು ಅದನ್ನು ಹೇಗೆ ಸ್ವೀಕಾರ ಮಾಡಬೇಕು. ರಸ್ತೆಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ. . ಈ ವಿಚಾರವಾಗಿ ಸಣ್ಣ ಸಣ್ಣ ವಿವರಗಳನ್ನು ನೋಡಿದರೆ ಗೊತ್ತಾಗುತ್ತದೆ. ಈ ವಿಚಾರದಲ್ಲಿ ಅತ್ಯಂತ ತುರ್ತು ಏನಿರಲಿಲ್ಲ. ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗಿದೆ. ಮಹಿಳೆಯರ ವಿಚಾರವಾಗಿ ಹೇಳುವುದಾದರೆ, ಸ್ವಸಹಾಯ ಸಂಘಗಳಿಗೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದರು. ಮಾತಿಗೆ ತಪ್ಪಿದವರು ಎಂದರೆ ಆ ಮಾತನ್ನು ಸ್ವೀಕಾರ ಮಾಡುತ್ತಾರೆ. ಆದರೆ ವಚನಭ್ರಷ್ಟರು ಎಂದರೆ ಇವರಿಗೆ ಕೋಪ ಬರುತ್ತದೆ. ತೊಂದರೆಯಿಲ್ಲ. ವಚನಭ್ರಷ್ಟತೆ ಎನ್ನುವುದು ಇದೆ. ನಮ್ಮ ಸಂವಿಧಾನದಲ್ಲಿ ಆ ರೀತಿ ಮಾತನಾಡುವುದಕ್ಕೆ ಅವಕಾಶ ಇದೆ. ಮಾನ್ಯ ಕುಮಾರಸ್ವಾಮಿಯವರಿಗೆ ಎಲ್ಲವೂ ಗೊತ್ತಿದೆ. ಇವರೇನೂ ಅನನುಭವಿಗಳಲ್ಲ. ಒಬ್ಬ ಪ್ರಧಾನಿಗಳ ಕುಟುಂಬದಲ್ಲಿ ಹುಟ್ಟಿದಂತಹವರಿಗೆ, ಈ ಹಿರಿಯ ಮುಖ್ಯಮಂತ್ರಿಯಾಗಿದ್ದಂತಹವರಿಗೆ ನಮ್ಮ ಜನತೆಗೆ ಏನನ್ನು ಕೊಡಲಿಕ್ಕೆ ಆಗುತ್ತದೆ, ಏನನ್ನು ಕೊಡಲಿಕ್ಕೆ ಆಗುವುದಿಲ್ಲವೆನ್ನುವುದು ಗೊತ್ತಿದೆ. ಇಲ್ಲಿ 600 ರೂಪಾಯಿಗಳು ಇದ್ದುದನ್ನು 1000 ರೂಪಾಯಿಗಳನ್ನು ಮಾಡಿದಂತಹವರು 6000 ರೂಪಾಯಿಗಳ ಮಾಸಾಶನವನ್ನು ಕೊಡುತ್ತೇನೆಂದರೆ ತೆಗೆದುಕೊಳ್ಳುವವರು ನಂಬುವುದಿಲ್ಲ, ಕೊಡುತ್ತೇನೆಂದರೂ ನಂಬುವುದಿಲ್ಲ. ಇವತ್ತು ಮುಗ್ಧ ಜನರನ್ನು ದಾರಿ ತಪ್ಪಿಸಿದ್ದೀರಿ. 37 ಸ್ಥಾನಗಳಷ್ಟೇ ಸಿಕ್ಕಿವೆ ಎನ್ನುವ ಕೋಪಕ್ಕೆ ಅನೇಕರಿಗೆ ಶಿಕ್ಷೆಯನ್ನು ಕೊಟ್ಟಿರುವುದು ಸರಿಯಲ್ಲ.

ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಪರಿಸರದ ಸೂಕ್ಷ್ಮಗಳಿಗೆ ನಾವು ಸ್ಪಂದಿಸಬೇಕು. ಇವತ್ತು ಕೇಂದ್ರ ಸರ್ಕಾರ ವಿಶ್ವಮಟ್ಟದ ಸಂಸ್ಥೆಗಳಿಗೂ ಕೂಡ . . .

**ಸಭಾಪತಿಯವರು:–** ಆಯಿತು, ಇನ್ನು 5 ನಿಮಿಷಗಳ ಕಾಲ ಮಾತ್ರ ಮಾತನಾಡಿ. ಏಕೆಂದರೆ, ಈಗಾಗಲೇ ತಾವು ಮಾತನಾಡಲು ಪ್ರಾರಂಭಿಸಿ 35 ನಿಮಿಷಗಳಾಯಿತು.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇನ್ನು 5 ನಿಮಿಷಗಳ ಅವಕಾಶವನ್ನು ಕೊಡಿ. ನಮಗೆ ಮಾತನಾಡಲಿಕ್ಕೆ ಹೆಚ್ಚಿನ ಕಾಲಾವಕಾಶವನ್ನು ಕೊಟ್ಟಿರುವುದಿಲ್ಲ. ವಿರೋಧ ಪಕ್ಷದ ಕಡೆಯಿಂದ ನಾವುಗಳು ಏನೂ ಮಾತನಾಡಲಿಕ್ಕೆ ಆಗಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಆಗುವುದಿಲ್ಲ. ಬೇಗ ಮುಗಿಸಿ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಉಳಿದ ಸದಸ್ಯರುಗಳು ಗಲಾಟೆ ಮಾಡಿ, ನಾನು ಮಾತನಾಡಲಿಕ್ಕೆ ಸರಿಯಾಗಿ ಅವಕಾಶವನ್ನು ಕೊಡುತ್ತಿಲ್ಲ. ನನ್ನ ಸಮಯವನ್ನು ಅವರುಗಳು ಹಾಳು ಮಾಡುತ್ತಿದ್ದಾರೆ. ಇವತ್ತು ಪರಿಸರಕ್ಕೆ ಮಾರಕವಾಗದ ರೀತಿಯಲ್ಲಿ ಕೆಲಸ ಮಾಡಬೇಕು. ಇತ್ತೀಚೆಗೆ ನಮ್ಮ ಬಿ.ವಿ.ದೋಶಿ ಎನ್ನುವಂತಹವರು ನೋಬಲ್ ಪ್ರೈಸ್‌ಗೆ ಸಮಾನವಾದಂತಹ Pulitzer ಪ್ರಶಸ್ತಿಯನ್ನು ಪಡೆದಿದ್ದಾರೆ. ಶ್ರೀಲಂಕಾದ ಜೆಫ್ರೀ ಬಾವಾ ಎನ್ನುವಂತಹವರು ಮತ್ತು ನಮ್ಮವರೇ ಆದಂತಹ ಕೃಷ್ಣರಾವ್ ಜಯಸಿಂಹ ಎನ್ನುವಂತಹವರು, ನಮ್ಮವರೇ ಆದ ಚಿತ್ರವಿಶ್ವನಾಥ್ ಎನ್ನುವಂತಹ Architect ಇದ್ದಾರೆ. ಇವರುಗಳನ್ನೆಲ್ಲಾ ಸದುಪಯೋಗ ಪಡಿಸಿಕೊಂಡು ಪರಿಸರಕ್ಕೆ ಮಾರಕವಾಗದ ರೀತಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಇಲಾಖೆ ಆದ್ಯತೆಯನ್ನು ಕೊಡಬೇಕು.

ಇನ್ನು ಮುಜರಾಯಿ ಇಲಾಖೆಯ ವಿಷಯವಾಗಿ ಹೇಳುವುದಾದರೆ ಶ್ರೀ ಆದಿ ಶಂಕರಾಚಾರ್ಯರ ಬಗ್ಗೆ ಜಯಂತಿ ಮಾಡುತ್ತಿದ್ದೀರಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಬ್ರಾಹ್ಮಣರ ಸಮಾಜಕ್ಕೆ ಅನುದಾನ ನೀಡುವ ವಿಚಾರದಲ್ಲಿ ಮೂಗಿನ ಮೇಲೆ ಜೇನುತುಪ್ಪವನ್ನು ಇಟ್ಟಂತೆ ಮಾಡಬೇಡಿ. ಜೇನು ತುಪ್ಪವನ್ನು ಇಟ್ಟರೆ ಇರುವೆಗಳು ಬಂದು ಕಡಿಯುತ್ತವೆ. ಆಗ ನಾಲಿಗೆಗೂ ಜೇನುತುಪ್ಪ ಸಿಗುವುದಿಲ್ಲ, ಜೊತೆಗೆ ಅಪಾಯವಾಗುತ್ತದೆ. ಮೊದಲು ಅರ್ಚಕರಿಗೆ ತಿಂಗಳಿಗೆ 250 ರೂಪಾಯಿಗಳ ಸಂಬಳವನ್ನು ನೀಡಲಾಗುತ್ತಿತ್ತು. ಒಂದು ರೀತಿಯಲ್ಲಿ ಇದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಯಾವ ಅರ್ಚಕರು ನಮ್ಮ ಪರಂಪರೆಯನ್ನು ವೇದ, ಉಪನಿಷತ್ತುಗಳನ್ನು ಹೇಳುವುದರ ಮೂಲಕ ಉಳಿಸಿ ಬೆಳೆಸುತ್ತಿದ್ದಾರೆ; ಇಡೀ ಪ್ರಪಂಚದಲ್ಲಿ ಹಿಂದೂ ಸಮಾಜ ಎನ್ನುವುದು ಒಂದು ವೈವಿಧ್ಯಮಯವಾದ ಸಂಸ್ಕೃತಿ. 'Hinduism is a way of living' ಎಂದು ನಾವು ಏನು ಪರಿಗಣಿಸುತ್ತೇವೆ, ಅವರಿಗೆ ಸಿ–ಕ್ಯಾಟಗರಿಯಲ್ಲಿ ಬರತಕ್ಕಂತಹದ್ದರಲ್ಲಿ ಶೂದ್ರರೂ ಅರ್ಚಕರಿದ್ದಾರೆ, ಕೇವಲ ಬ್ರಾಹ್ಮಣರಿಲ್ಲ. ಪೂರ್ವಾಗ್ರಹದಿಂದ ಹೊರಗಡೆ ಬಂದ ಆ ಸಮಾಜಕ್ಕೆ ಸಿಗಬೇಕಾದಂತಹ ಸೌಲಭ್ಯಗಳನ್ನು ಕೊಡಬೇಕು.

ಕೊನೆಯದಾಗಿ, ನಿನ್ನೆಯ ದಿವಸ ಸಾರಿಗೆ ಸಚಿವರು allocation ಬಗ್ಗೆ ಹೇಳಿದರು. ಇದರಲ್ಲಿ 600 ಕೋಟಿ ರೂಪಾಯಿಗಳ ನಷ್ಟವೆಂದು ತೋರಿಸುತ್ತಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರ ಬೆಳಕನ್ನು ಚೆಲ್ಲಬೇಕು. 2008 ರಿಂದ 2013 ರವರೆಗೆ ಇದ್ದಂತಹ ಬಿಜೆಪಿ ಸರ್ಕಾರದ ಅವಧಿಯ ವಿಚಾರವಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬೇಕಾಗುತ್ತದೆ. ಬೆಂಗಳೂರಿನಲ್ಲಿ 9% ಟ್ಯಾಕ್ಸ್ ಕಟ್ಟುತ್ತಿದ್ದೇವೆ. ಇಲ್ಲಿ 17% ಜನಸಂಖ್ಯೆ ಇದೆ. ಅಂದರೆ 1.1 ಕೋಟಿ ಜನಸಂಖ್ಯೆ ಬರುತ್ತದೆ.

**ಮುಂದು. . .**

(270)12.07.2018 ಎಸ್‌ವಿ/ಎಕೆ 1.30

**ಡಾ:ತೇಜಸ್ವಿನಿ ಗೌಡ (ಮುಂದು):-**

ಕಸದ ಸಮಸ್ಯೆ ಬಗ್ಗೆ ಈಗಾಗಲೇ ಹೇಳಿದ್ದಾರೆ. ನಾನು ಅದನ್ನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಬೆಂಗಳೂರಿನ traffic congestion ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿ ನಗರದ ಮಾನ ಹೋಗುತ್ತಿದೆ. ನಮ್ಮ ಕಾಲದಲ್ಲಿ ಅಂದರೆ ಶ್ರೀ ಆರ್.ಅಶೋಕ್‌ರವರು ಸಾರಿಗೆ ಸಚಿವರಾಗಿದ್ದಾಗ ಟಾಟಾ ಮಾರ್ಕೊಪೋಲೊ ಬಸ್‌ಗಳನ್ನು ಖರೀದಿ ಮಾಡಲಾಯಿತು. 98 ಬಸ್‌ಗಳು ಬಿ.ಎಂ.ಟಿ.ಸಿ.ಗೆ ಹಾಗೂ 41 ಬಸ್‌ಗಳು ಮೈಸೂರು ನಗರ ಸಾರಿಗೆಗೆಂದು ನೀಡಲಾಯಿತು. ಅದರ ಬೆಲೆ ರೂ.23 ಲಕ್ಷ. ವಿಮೆ ಎಲ್ಲಾ ಸೇರಿ ರೂ.25 ಲಕ್ಷ. ಅದರ maintenance ಸಹ ಸುಲಭ. ಮೆಕ್ಯಾನಿಕ್‌ಗಳು ಕ್ರಮಬದ್ಧವಾಗಿ air pressure ಹಾಗೂ water wash ಮೂಲಕ ನಿರ್ವಹಣೆ ಮಾಡಬೇಕು. Scrapping policy ಏನು ಹೇಳುತ್ತದೆ ಎಂದರೆ 8 ವರ್ಷಗಳಾಗಿರಬೇಕು ಅಥವಾ 6.5 ಲಕ್ಷ ಕಿಲೋಮೀಟರ್ ಕ್ರಮಿಸಿರಬೇಕು. ಅಂತಹ ಬಸ್‌ಗಳನ್ನು scrap ಮಾಡಬಹುದು. ಮುಂದೆ ಬಂದಂತಹ ಸರ್ಕಾರದಲ್ಲಿ ಮಾನ್ಯ ರಾಮಲಿಂಗಾರೆಡ್ಡಿಯವರು ಸಾರಿಗೆ ಸಚಿವರಾಗಿದ್ದರು. ಈ ಮಾರ್ಕೊಪೋಲೊ ಬಸ್‌ಗಳು ಮೂರು ಲಕ್ಷ ಕಿಲೋಮೀಟರ್ ಅಷ್ಟು ಕ್ರಮಿಸಿದ್ದವು. ಕೇವಲ ಮಾನ್ಯ ಯಡಿಯೂರಪ್ಪನವರನ್ನು ಮಾತ್ರವಲ್ಲದೆ ಮಾನ್ಯ ಆರ್.ಅಶೋಕ್‌ರವರ ಮೇಲೆ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು 'ಅಶೋಕ ಚಕ್ರವರ್ತಿ' ಎನ್ನುವ ವ್ಯಂಗ್ಯದ ಮಾತುಗಳನ್ನಾಡಿದ್ದಾರೆ. ಏನೋ ದೊಡ್ಡ ಹಗರಣ ನಡೆದಿದೆ ಎಂದು ಬಿಜೆಪಿಯವರು ಮಾಡುವುದನ್ನು ತನಿಖೆ ಮಾಡುತ್ತೇವೆಂದು ಹೇಳಿ ನಮ್ಮ ಪಕ್ಷಕ್ಕೆ ಹಾಗೂ ನಮ್ಮ ಸರ್ಕಾರಕ್ಕೆ ಮುಜುಗರ ಉಂಟು ಮಾಡಿದ್ದಾರೆ. ನಂತರ ಬಂದ ಸರ್ಕಾರದವರು ವೋಲ್ವೋ ಬಸ್ ಖರೀದಿ ಮಾಡುತ್ತಾರೆ. ವೋಲ್ವೋ ಬಸ್‌ನ ದರ ರೂ.1 ಕೋಟಿಗೂ ಅಧಿಕ. ಒಂದು ಬಸ್ಸಿಗೆ ರೂ.75 ಲಕ್ಷಕ್ಕೂ ಮಿಕ್ಕ ಹಣ. ಆದರೆ ವಿದ್ಯಾರ್ಥಿಗಳು ಉಚಿತ ಬಸ್ ಪಾಸ್ ಅನ್ನು ಕೇಳಿದರೆ ಸರ್ಕಾರ ಲಾಠಿಭಾಗ್ಯ ನೀಡುತ್ತದೆ. ಅವರ ಮೇಲೆ ಕಾನೂನು ಪ್ರಯೋಗ ಮಾಡಲಾಗುತ್ತದೆ. ಸರ್ಕಾರದಲ್ಲಿ ದುಡ್ಡಿಲ್ಲ ಎಂದುಕೊಂಡೇ ಒಂದು ಬಸ್ಸಿನ ದರದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ ರೂ.75 ಲಕ್ಷ ಹೆಚ್ಚುವರಿ ಹಣ ಎಂದು ನಾನು ಈ ಸದನದ ಮೂಲಕ ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಕೇವಲ ರೂ.2 maintenance ಗಾಗಿ ಬೀಳುತ್ತಿತ್ತು. ಸರ್ಕಾರಕ್ಕೆ ಖರೀದಿ ಮಾಡಲು ಅಧಿಕಾರವಿದೆ. ಮಾರ್ಕೊಪೋಲೊ ಬಸ್‌ಗಳಿಂದ 50–60 ಕೋಟಿ ನಷ್ಟ, ಶಬ್ದ ಮಾಲಿನ್ಯ ಎಂದು ಏನೇನೋ ಹೇಳಿದರು. ಇವತ್ತು 'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ.' ದುಡ್ಡಿದ್ದರೆ ಅಂತರರಾಷ್ಟ್ರೀಯ ಮಾದರಿಯ ಬಸ್‌ಗಳನ್ನು ತರಲಿ. ನಮ್ಮದೇನೂ ಅಭ್ಯಂತರವಿಲ್ಲ. ಅದರಿಂದ ಎಷ್ಟು ನಷ್ಟವಾಗಿದೆ? ಆ ಬಸ್‌ಗಳ ಸ್ಥಿತಿ ಏನು? ಇಂದು 1400ಕ್ಕೂ ಹೆಚ್ಚು ಬಸ್‌ಗಳನ್ನು ಖರೀದಿ ಮಾಡಲು ಹೊರಟಿದ್ದಾರೆ. ಇದಕ್ಕೆ ಉತ್ತರವನ್ನು ಸರ್ಕಾರ ಕೊಡಬೇಕು.

**ಸಭಾಪತಿಯವರು:–** ಮಾನ್ಯ ರೇವಣ್ಣ ಅವರು ಒಂದು ಮಾಹಿತಿಯನ್ನು ಹೇಳಲಿದ್ದಾರೆ. ಆ ಸಮಯವನ್ನು ನಿಮಗೆ ಪುನಃ ಕೊಡುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಯವರು ಹೇಳುತ್ತಿರುವ ಬಸ್ ಖರೀದಿಯಲ್ಲಿ ಆಗಿರುವ ತೊಂದರೆಯ ಬಗ್ಗೆ ಸದನ ಸಮಿತಿಯಲ್ಲಿ ಚರ್ಚೆ ಆಗಿದೆ. ನಂತರ ಅಲ್ಲಿ ಲೋಪವಾಗಿದೆ ಎಂಬ ಮಾಹಿತಿ ಬಂದ ಮೇಲೆ ಕ್ರಮವನ್ನು ಕೈಗೊಳ್ಳಲಾಗಿದೆ. ಏಕಾಏಕಿ ಕ್ರಮಕ್ಕೆ ಮಾನ್ಯ ರಾಮಲಿಂಗಾರೆಡ್ಡಿಯವರಾಗಲೀ ಅಥವಾ ನಾನಾಗಲೀ ಕ್ರಮ ಕೈಗೊಂಡಿರುವುದಿಲ್ಲ. ಅವರು ವೋಲ್ವೋ ಬಸ್ಸಿನ ಬಗ್ಗೆ ಹೇಳಿದರು. ಇವತ್ತು ಇಡೀ ರಾಷ್ಟ್ರದಲ್ಲಿ ಒಳ್ಳೆಯ ಬಸ್ಸುಗಳನ್ನು ಓಡಿಸುವುದರಲ್ಲಿ ಬೆಂಗಳೂರು ಪ್ರಥಮ ಸ್ಥಾನದಲ್ಲಿದೆ. ಪ್ರಪಂಚದಲ್ಲಿ ಎರಡನೆಯ ಸ್ಥಾನದಲ್ಲಿದೆ. ಬಸ್ ಖರೀದಿಯಲ್ಲಿ ಪಾರದರ್ಶಕತೆ ಇದ್ದು, ಅವ್ಯವಹಾರವಾಗಿರುವುದಿಲ್ಲ; ಆ ಬಸ್‌ನ ಸರಬರಾಜು ಆಗುವಲ್ಲಿ ಆಗಿರುವ ನ್ಯೂನತೆಯ ಬಗ್ಗೆ ಕೊಟ್ಟಿರುತ್ತೇವೆ. ವೋಲ್ವೋ ಬಸ್‌ಗಳು ಕೂಡ ಎಲ್ಲಾ ಸುಸ್ಥಿತಿಯಲ್ಲಿದ್ದು, ಯಾವುದೂ ಕೆಟ್ಟಿರುವುದಿಲ್ಲ ಎಂಬುದನ್ನು ಮಾನ್ಯ ತೇಜಸ್ವಿನಿ ಅವರಿಗೆ ಹೇಳಬಯಸುತ್ತೇನೆ.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಬಳಿ ಇರುವ ಮಾಹಿತಿ ಪ್ರಕಾರ 750 ಬಸ್‌ಗಳಲ್ಲಿ 250 ಬಸ್‌ಗಳು ಆಫ್‌ರೋಡ್ ಇರುತ್ತವೆ. ನಾನು ಸದನದಲ್ಲಿ ಈ ವಿಷಯವನ್ನು ಇಲ್ಲಿಗೆ ಬಿಡದೆ ಮತ್ತೂ ಮುಂದುವರೆಯುತ್ತೇನೆ. ಹಣಕಾಸಿನ ಕೊರತೆ ಇರುವುದರಿಂದ ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಂಡಿದ್ದೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರಿಂದ ಸ್ಫೂರ್ತಿಗೊಂಡು ನಾನು ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ಅನ್ಯಥಾ ನನಗೆ ಏನಿಲ್ಲ. ವೋಲ್ವೋ ಬಸ್‌ಗಳು Swedish technology ಯಿಂದ ತಯಾರಾಗಿವೆ. Spare parts ದುಬಾರಿಯಾದುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಂದೆ 50-60 ಕೋಟಿ ನಷ್ಟವಾಯಿತು ಎಂದು ಹೇಳಿದ್ದರು. ಈಗ 600 ಕೋಟಿ ನಷ್ಟವಾಗುತ್ತದೆ. ಇನ್ನೂ ನನಗೆ ಮಾನ್ಯ ಸಾರಿಗೆ ಸಚಿವರಿಂದ ಅಂಕಿ ಸಂಖ್ಯೆಗಳು ಲಭ್ಯವಾದ ಮೇಲೆ ಇದರ ಬಗ್ಗೆ ನಾನು ಚರ್ಚೆ ಮಾಡುವವಳಿದ್ದೇನೆ. Indigenous ಟಾಟಾ ಮಾರ್ಕೊಪೋಲೊ ಬಸ್‌ಗಳು ಬಿಳಿಯಾನೆ ಆಗುವುದಾದರೆ ವೋಲ್ವೊ ಬಸ್‌ಗಳ ಕಥೆ ಏನು? ನಾನು ನಿರಂತರವಾಗಿ ಬಸ್‌ನಲ್ಲಿ ಪ್ರಯಾಣ ಮಾಡುವವಳಾಗಿದ್ದೇನೆ. ನನಗೆ ಕಂಡಕ್ಟರ್ ಹಾಗೂ ಡ್ರೈವರ್‌ಗಳ ಕಷ್ಟದ ಅರಿವು ಇದೆ. ದಯಮಾಡಿ ಇಂತಹ ಪ್ರಕರಣಗಳ ಬಗ್ಗೆ ಹೇಳುವಾಗ ಸರ್ಕಾರ ಸ್ವಲ್ಪ ಸೂಕ್ಷ್ಮವಾಗಿರಬೇಕು.

ಮತ್ತೊಂದು ಮಾತನ್ನು ಸದನದಲ್ಲಿ ಹೇಳಬಯಸುತ್ತೇನೆ. ಸರ್ಕಾರ ಈ ಆಯವ್ಯಯ ಸಿಂಧುವಾದುದು ಎಂದು ಮಾನ್ಯ ಸಭಾನಾಯಕರ ಮುಖಾಂತರ ಹೇಳಿರುತ್ತದೆ. ಇದಕ್ಕೆ ಸರ್ಕಾರವೇ ಹೊಣೆಯನ್ನು ಹೊರಬೇಕು. ಮಾನ್ಯ ಸಿದ್ದರಾಮಯ್ಯನವರು ದಿವಂಗತ ದೇವರಾಜ ಅರಸುರವರ ನಂತರ ಅಷ್ಟು ಎತ್ತರಕ್ಕೆ ಬೆಳೆದಂತಹ ಹಿಂದುಳಿದ ವರ್ಗಗಳ ನಾಯಕರಾಗಿದ್ದಾರೆ. ಐದು ವರ್ಷಗಳ ಕಾಲ ಸತತವಾಗಿ ಅವರನ್ನು ಮುಖ್ಯಮಂತ್ರಿ ಮಾಡಿದ್ದಕ್ಕೆ ಕಾಂಗ್ರೆಸ್‌ನವರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಮೇಜು ಕುಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು.)**

ಖಂಡಿತವಾಗಿ ಅವರು ತಮ್ಮ ದುಃಖವನ್ನು ತೋಡಿಕೊಂಡಿದ್ದಾರೆ. ಅವರು ಕೌರವರೊಂದಿಗಿರುವ ಕರ್ಣನಂತೆ. ಈ ಬಜೆಟ್ ಮಂಡನೆಗೆ ಅವರ ಆತ್ಮಸಾಕ್ಷಿ ಒಪ್ಪಿರುವುದಿಲ್ಲವೇನೋ? ನಾನು ನನ್ನ ವಿದ್ಯಾರ್ಥಿ ದೆಸೆಯಿಂದಲೂ ಮಾನ್ಯ ಸಿದ್ದರಾಮಯ್ಯನವರ ಸಾರ್ವಜನಿಕ ಜೀವನವನ್ನು ನೋಡಿದ್ದೇನೆ. ಮಾಜಿ ಪ್ರಧಾನಿಗಳಾದ ಮಾನ್ಯ ಶ್ರೀ ಹೆಚ್.ಡಿ.ದೇವೇಗೌಡರನ್ನು ಸಹ ಚೆನ್ನಾಗಿ ಬಲ್ಲೆ. ಮಾನ್ಯ ಸಿದ್ದರಾಮಯ್ಯನವರು ಅವರ ಆತ್ಮಸಾಕ್ಷಿಯ ಕರೆಗೆ ಓಗೊಟ್ಟಿದ್ದರೆ ಇಂದು ಅವರು ಪ್ರತಿಪಕ್ಷದಲ್ಲಿ ಕುಳಿತುಕೊಳ್ಳುತ್ತಿದ್ದರು.

ಒಟ್ಟಾರೆ ಆಯವ್ಯಯದಲ್ಲಿ ಘೋಷಣೆ ಮಾಡಿರುವ ಯಾವುದೇ ಒಂದು ಅಂಶಕ್ಕೆ ಚ್ಯುತಿ ಬಂದರೆ ಬಿಜೆಪಿ ಅದನ್ನು ಬಿಡುವುದಿಲ್ಲ. ಸರ್ಕಾರ ಅದನ್ನು ಸಿಂಧು ಎಂದು ಹೇಳಿರುವ ಕಾರಣ, ಸರ್ಕಾರದ ಮಾತನ್ನು ನಂಬಿ ಆಯವ್ಯಯದ ಮೇಲಿನ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಎಲ್ಲರೂ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ನಾನು ನನ್ನ ಕ್ಷೇತ್ರವಾದ ಕ್ರೀಡಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಕ್ರೀಡೆಯಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಎರಡು ಮಾತಿಲ್ಲ. ನಾನು ಸುಮಾರು 15-20 ವರ್ಷಗಳಿಂದ ಎಲ್ಲಾ ಮುಖ್ಯಮಂತ್ರಿಗಳ ಬಳಿಯಲ್ಲಿಯೂ ಕ್ರೀಡೆಯನ್ನು ಕಡ್ಡಾಯ ವಿಷಯ ಮಾಡಬೇಕೆಂದು ಕೇಳಿದ್ದೆನು. ಹಿಂದಿನ ಸರ್ಕಾರದಲ್ಲಿ ಕ್ರೀಡಾ ಸಚಿವರಾಗಿದ್ದಂತಹ ಶ್ರೀ ಪ್ರಮೋದ್ ಮಧ್ವರಾಜ್ ಅವರು ಒಂದು ಕ್ರೀಡಾನೀತಿಯನ್ನು ಜಾರಿಗೆ ತಂದಿದ್ದಾರೆ. ಅದಕ್ಕಾಗಿ ನಾನು ಅವರನ್ನು ಈ ಮೂಲಕ ಅಭಿನಂದಿಸುತ್ತೇನೆ. ಸುಮಾರು 15 ವರ್ಷಗಳಿಂದ ಸತತ ಹೋರಾಟ ಮಾಡಿ ಹಾಗೂ ಸಂಘ ಸಂಸ್ಥೆಗಳಿಂದ ಸಲಹೆಗಳನ್ನು ಪಡೆದು ಈ ಕ್ರೀಡಾ ನೀತಿಯನ್ನು ತರಲಾಗಿದೆ. ಇದರಿಂದ ಕ್ರೀಡೆಗೆ ಒಂದು ಪ್ರೋತ್ಸಾಹ ಮತ್ತು ಶಕ್ತಿಯನ್ನು ತುಂಬಿದಂತಾಗಿದೆ. ಈ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು Body Building ಮತ್ತು Sports University ಮಾಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಇದನ್ನು ಹಿಂದಿನ ಬಜೆಟ್‌ನಲ್ಲಿಯೇ ಮಾನ್ಯ ಸಿದ್ದರಾಮಯ್ಯನವರು ಘೋಷಣೆ ಮಾಡಿದ್ದರು. ಅದರ ಪ್ರಕಾರ 62 ಎಕರೆ ಜಮೀನಿರುವ ವಿದ್ಯಾನಗರದಲ್ಲಿ ಈಗಾಗಲೇ ಕ್ರೀಡಾ ವಿಶ್ವವಿದ್ಯಾಲಯವನ್ನು ಮಾಡುವುದಕ್ಕೆ ಸಾಕಷ್ಟು ಪೂರಕ ಸಭೆಗಳನ್ನು ಮಾಡಿ ಒಂದು ರೋಡ್ ಮ್ಯಾಪ್ ಅನ್ನು ತಯಾರಿಸಲಾಗಿದೆ. ಆಯವ್ಯಯದಲ್ಲಿ ಇದನ್ನು ತುಮಕೂರಿನಲ್ಲಿ ಮಾಡಲು ಪ್ರಸ್ತಾಪಿಸಲಾಗಿದೆ. ತುಮಕೂರಿನಲ್ಲಿ ಜಾಗವನ್ನು acquire ಮಾಡಿರುವುದಿಲ್ಲ. ಸ್ಥಳನೂ ಇರುವುದಿಲ್ಲ. ಈಗಾಗಲೇ ಇಲ್ಲಿ ಕ್ರೀಡಾ ಇಲಾಖೆಗೆ ಸಂಬಂಧಪಟ್ಟಿರುವ ಜಾಗವೇ ಇದ್ದು, ಇಲ್ಲಿ ಮಾಡುವುದರಿಂದ ಎಲ್ಲಾ ತರಹದ connectivity ಇರುತ್ತದೆ. ಇದಕ್ಕೆ ಹಾಸ್ಟೆಲ್ ಮುಂತಾದ ಸೌಲಭ್ಯಗಳಿರುವುದರಿಂದ ಪಿಪಿಪಿ ಮಾದರಿಯಂತೆ ಕ್ರೀಡಾ ವಿಶ್ವವಿದ್ಯಾಲಯ ಮಾಡಲು ಸರ್ಕಾರಕ್ಕೆ ಯಾವುದೇ ಹೊರೆಯಾಗುವುದಿಲ್ಲ. ಇಲ್ಲಿ ಮಾಡುವುದು ಉತ್ತಮ ಎಂಬ ಸಲಹೆಯನ್ನು ನೀಡಬಯಸುತ್ತೇನೆ. ಕ್ರೀಡಾ ಸಾಮಗ್ರಿಗಳ ತಯಾರಿಕೆಗೆ ತುಮಕೂರಿನಲ್ಲಿ ಅಂದರೆ ಬಾಡಿ ಬಿಲ್ಡಿಂಗ್ ಎಂದು ಪ್ರಸ್ತಾಪ ಮಾಡಿದ್ದಾರೆ. ಬಾಡಿ ಬಿಲ್ಡಿಂಗ್ ಅಂದರೆ ಲಾರಿ ಚಾರ್ಸಿನೋ ಅಥವಾ ಬಸ್ ಚಾರ್ಸಿನೋ ಅಥವಾ ಮನುಷ್ಯರ ಬಾಡಿ ಬಿಲ್ಡಿಂಗ್ ಎನ್ನುವ ಬಗ್ಗೆ ನನಗೆ ಅನುಮಾನವಿದೆ. ಇದಕ್ಕೆ ಸರ್ಕಾರ ಸ್ಪಷ್ಟನೆಯನ್ನು ಕೊಡಬೇಕು. ನಾನು ಈಗಾಗಲೇ ಪತ್ರವನ್ನು ಕಳುಹಿಸಿದ್ದೇನೆ. ಬಾಡಿ ಬಿಲ್ಡಿಂಗ್ ಎನ್ನುವುದು ಒಂದು ಕ್ರೀಡೆಯಾಗಿರುತ್ತದೆ. ಇದು ಮಾನ್ಯತೆ ಪಡೆಯದಂತಹ ಕ್ರೀಡೆ. ಬಹಳಷ್ಟು ಜನಕ್ಕೆ ಇದರ ಬಗ್ಗೆ ಮಾಹಿತಿ ಇಲ್ಲ. ಇದು ಒಲಂಪಿಕ್ಸ್‌ನಲ್ಲಿ ಆಗಲೀ, ಏಷ್ಯನ್ ಗೇಮ್ಸ್‌ನಲ್ಲಿ ಆಗಲೀ ಅಥವಾ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಆಗಲೀ ಇಲ್ಲ. ಆದರೆ ಇದು ಒಂದು ಸಂಘ-ಸಂಸ್ಥೆಗಳಿಂದ ನಡೆಯುವಂತಹ ಕ್ರೀಡೆ. ಇದಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಇದರ ಜೊತೆಗೆ 23 ಕ್ರೀಡೆಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಾದಂತಹ manufacturing units ಅನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ manufacturing units ಲೂಧಿಯಾನದಲ್ಲಿ, ದೆಹಲಿಯಲ್ಲಿ ಹೀಗೆ ದೇಶದ ಬೇರೆ ಬೇರೆ ಕಡೆ ಇದೆ.

**(...ಮುಂದು)**

(271 ) 12.07.2018 1.40 ಕೆಜಿ.ಆರ್‌ಎನ್

**ಶ್ರೀ ಕೆ.ಗೋವಿಂದರಾಜ್ (ಮುಂದು.,):–** ಆದರೆ, ಇವುಗಳ ಗುಣಮಟ್ಟವನ್ನು ಕಾಪಾಡುವುದಕ್ಕೆ ಎಲ್ಲಿಯೂ standard ಇಲ್ಲ. ಇದಕ್ಕೆ Olympic Charter ಪ್ರಕಾರ, ಯಾವುದೇ ಒಂದು ಕ್ರೀಡಾ ಸಾಮಾಗ್ರಿಯನ್ನು ತಯಾರು ಮಾಡಬೇಕಾದರೆ, ಅದಕ್ಕೆ ಒಂದು specification ಇರುತ್ತದೆ. ಈಗ ಕ್ರಿಕೆಟ್ ಬ್ಯಾಟ್‌ಗೆ ಕ್ರಿಕೆಟ್‌ದೆ ಆದಂತಹ ಇಷ್ಟೇ inch ಇರಬೇಕು, ಇಷ್ಟೇ ಉದ್ದ ಇರಬೇಕೆಂಬ specification ಇರುತ್ತದೆ. ಹಾಗೆಯೇ ಪ್ರತಿಯೊಂದಕ್ಕೂ ಒಂದೊಂದು specification ಇರುತ್ತದೆ. ಫುಟಬಾಲ್ ತಯಾರು ಮಾಡಬೇಕಾದರೆ, ಅದರದ್ದೆ FIFA ಇಂದ specification ಇರುತ್ತದೆ. ಆ ರೀತಿ standards ಮಾಡುವುದಕ್ಕೆ ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ ಈ ಕ್ರೀಡಾ ಸಾಮಾಗ್ರಿಗಳನ್ನು ತಯಾರು ಮಾಡಬೇಕು. ಇದರಲ್ಲಿ ಟೋಪಿಯನ್ನು ಸಹ ಹಾಕುತ್ತಾರೆ. ಏಕೆಂದರೆ, ಕಳಪೆ ಕ್ರೀಡಾ ಮಟ್ಟದ ಸಾಮಾಗ್ರಿಗಳನ್ನು ತಯಾರು ಮಾಡಿ ಶಾಲಾ ಕಾಲೇಜುಗಳಿಗೆ ಮತ್ತು ಸರ್ಕಾರಕ್ಕೂ ಸಹ ಬಹಳ ಸಲ ಸರಬರಾಜು ಮಾಡಿರುತ್ತಾರೆ. ನಾನು ಇದರ ಬಗ್ಗೆ ಸುಮಾರು ಬಾರಿ ಅಧಿಕಾರಿಗಳ ಗಮನಕ್ಕೆ ತಂದು 2 ರಿಂದ 3 ಕಂಪನಿಗಳನ್ನು blacklist ಸಹ ಮಾಡಿಸಿದ್ದೇನೆ ಆ ರೀತಿ ಆಗದಂತೆ ಅದಕ್ಕೆ ಒಂದು ತಜ್ಞರ ಸಮಿತಿಯನ್ನು ಮಾಡಬೇಕೆಂಬ ಸಲಹೆಯನ್ನು ನೀಡಲು ಬಯಸುತ್ತೇನೆ. ಇದಕ್ಕೆ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳ investment ಎಂದು ಹೇಳುತ್ತಾರೆ. ಇದು ಸಣ್ಣ ಮೊತ್ತವಲ್ಲ. ಇದಕ್ಕೆ ತಕ್ಕಂತೆ ಒಂದು committee ಅನ್ನು form ಮಾಡಿ ಸರ್ಕಾರ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ನೀಡುತ್ತೇನೆ.

ಮಾನ್ಯ ಸಭಾಪತಿಯವರೇ, ನನಗೆ ನಮ್ಮ ರಾಜ್ಯ ಬಗ್ಗೆ ಒಂದು ನೋವು ಏನಿದೆ ಎಂದರೆ, ನಮ್ಮ ರಾಜ್ಯದಲ್ಲಿ International Standard ಮಟ್ಟದ ಒಂದು swimming Pool ಇಲ್ಲ. ನಮ್ಮ ರಾಜ್ಯದ swimmers ರಾಷ್ಟ್ರದಲ್ಲಿ ಮೊದಲನೇ ಸ್ಥಾನದಲ್ಲಿ ಇದ್ದಾರೆ. ಅವರಿಗೆ ಬಸವನಗುಡಿಯಲ್ಲಿರುವ

swimming pool ಬಿಟ್ಟರೆ, ಅಂತಹ ಒಂದು international ರೀತಿಯ ಒಂದು temperature control ಇರುವಂತಹ swimming pool ನಮ್ಮ ರಾಜ್ಯದಲ್ಲಿ ಎಲ್ಲೂ ಇಲ್ಲ. ಅದುದರಿಂದ ನಾನು ಆ ರೀತಿಯ ಒಂದು swimming pool ಮಾಡಬೇಕೆಂದು ಸಲಹೆ ನೀಡುತ್ತೇನೆ. Temperature control ಎಂದರೆ, it is an indoor. ನಮ್ಮ ರಾಜ್ಯದಲ್ಲಿ ಇಷ್ಟೊಂದು ಈಜು ಕ್ರೀಡಾ ಪಟುಗಳನ್ನು ತಯಾರು ಮಾಡುವಾಗ ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ನಮ್ಮ ಬೆಂಗಳೂರಿನಲ್ಲಿ ಸಾಕಷ್ಟು ಜಾಗ ಇದೆ. ಜಾಗಕ್ಕೆ ತೊಂದರೆ ಇಲ್ಲ. ದೇವನಹಳ್ಳಿಯ International Airport ಬಳಿ KIADB ನಲ್ಲಿ ಸಾವಿರಾರು ಎಕರೆ ಜಮೀನು ಇದೆ. 100 ಎಕರೆ ಜಮೀನನ್ನು ಇದಕ್ಕಾಗಿ earmark ಮಾಡಿ ಇಂತಹ ಒಂದು ಕ್ರೀಡಾ infrastructure, sport city ಮಾಡಿದರೆ ಬಹಳಷ್ಟು ಕ್ರೀಡಾ ಪಟುಗಳನ್ನು ತಯಾರು ಮಾಡುವುದಕ್ಕೆ ನಮ್ಮ ರಾಜ್ಯದಿಂದ Olympics ಗೆ ಹೋಗುವುದಕ್ಕೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವುದಕ್ಕೆ ಬಹಳ ಅನುಕೂಲವಾಗುತ್ತದೆಂದು ಸಲಹೆ ಮಾಡುತ್ತೇನೆ. ಈ ಹಿಂದೆ ನಮ್ಮ Kanteerava Stadium ನಲ್ಲಿ Cycling Velodrom ಎಂದು ಇತ್ತು. ಅದು ಮಾನ್ಯ ಸಭಾಪತಿಯವರಿಗೂ ಸಹ ಅದರ ಬಗ್ಗೆ ಗೊತ್ತಿದೆ. ಅವರು ಸಹ ಅಲ್ಲಿ ಸಾಕಷ್ಟು ಸೈಕಲ್ ತುಳಿದಿದ್ದಾರೆ. ಹಾಗಾಗಿ, ಅವರಿಗೂ ಇದರ ಬಗ್ಗೆ ಕಾಳಜಿ ಇದೆ ಎಂದು ನಾನು ಭಾವಿಸಿದ್ದೇನೆ. ಇದನ್ನು ಬಿಜಾಪುರದಲ್ಲಿ ಮಾಡುವುದಕ್ಕೆ ಸತತವಾಗಿ ಐದು ವರ್ಷಗಳ ಪ್ರಯತ್ನದಿಂದ ಆಗುತ್ತಿದೆ. ಅದಕ್ಕೆ ಏಳು ಕೋಟಿ ರೂಪಾಯಿಗಳನ್ನು ಹಿಂದಿನ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಅದು ಈಗ ಮುಕ್ತಾಯದ ಹಂತದಲ್ಲಿ ಇದೆ. ಅದು ಬಿಜಾಪುರ, ಬಾಗಲಕೋಟೆಗೆ ಮತ್ತು ಉತ್ತರ ಕರ್ನಾಟದ ಭಾಗಕ್ಕೆ ಅನುಕೂಲವಾಗುತ್ತದೆಂದು ಅವರು ಅಲ್ಲಿ ಮಾಡಿಸಿದ್ದಾರೆ. Cyclists ಇರುವುದೇ ಆ ಭಾಗದಲ್ಲಿ. ಅವರು ಅಲ್ಲಿ ರಸ್ತೆಯಲ್ಲಿ ಹಾಲು ಮಾರಾಟ ಮಾಡಿಕೊಂಡು cycling ಅನ್ನು ಮಾಡಿಕೊಂಡು ಅವರು ರಾಷ್ಟ್ರ ಮಟ್ಟದಲ್ಲಿ ಪದಕಗಳನ್ನು ತೆಗೆದುಕೊಂಡು ಬರುತ್ತಿದ್ದಾರೆ. ಆ ಸಲುವಾಗಿ ಆ ಕಡೆಗೆ ಒಂದು Cycling Velodrom ಮಾಡಬೇಕೆಂದು ಒತ್ತಾಯ ಮಾಡಿದ ಮೇಲೆ ಹಿಂದಿನ ಸರ್ಕಾರ ಮಾಡಿದೆ. ಆದರೆ, ಅದು ಇನ್ನೂ ಪೂರ್ಣಗೊಂಡಿಲ್ಲ. ಅದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಆದರೆ, ಅದೇ ಭಾಗಕ್ಕೆ ತಕ್ಕಂತೆ South Karnataka ದಲ್ಲಿ ಎಲ್ಲೂ ಒಂದು Cycling Velodrom ಇಲ್ಲ. ಇಲ್ಲಿಯೂ ಬಹಳಷ್ಟು ಜನ cyclist ಇದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ಈ ಹಿಂದೆ ಒಂದು ಬಾರಿ ಸರ್ಕಾರಕ್ಕೆ ಸಲಹೆ ಮಾಡಿದ್ದೆ. ಹೊಸಕೋಟೆ, ರಾಮನಗರ, ಮೈಸೂರು, ತುಮಕೂರು ಇದರಲ್ಲಿ ಯಾವುದಾದರೊಂದು ಭಾಗದಲ್ಲಿ Cycling Velodrom ಮಾಡಿದರೆ ಈ ಭಾಗದಲ್ಲಿರುವಂತಹ cyclists ಗಳಿಗೆ ಬಹಳ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಮಾನ್ಯ ಮುಖ್ಯಮಂತ್ರಿಯವರಿಗೆ ಕ್ರೀಡೆಯ ಬಗ್ಗೆ ಆಸ್ತಕಿ ಇದೆ. ಆದರೆ, ಅವರು ಇದರ ಬಗ್ಗೆ ಗಮನಹರಿಸಬೇಕು. ಇದಕ್ಕೆ ಬಹಳಷ್ಟು ಹಣ ಖರ್ಚಾಗುವುದಿಲ್ಲ. **ಕ್ರೀಡೆ ಎನ್ನುವುದು XXX ಇದ್ದಂತೆ ಇದೆ. ಇದರ ಬಗ್ಗೆ ಯಾರು ಸಹ ತಲೆ ಕೆಡಿಸಿಕೊಳ್ಳುವುದಿಲ್ಲ.** Foot Ball World Cup ಬಂದರೆ, Foot Ball ಅಂತಾರೆ. ಆಮೇಲೆ ಹಾಕಿ ಬಂದರೆ, ಹಾಕಿ ಎಂದು ಹೇಳುತ್ತಾರೆ. ಅದು ಬಿಟ್ಟರೆ ಮತ್ತೆ ಎಲ್ಲರೂ ಮರೆತು ಹೋಗುತ್ತಾರೆ. ನಂತರ Olympics ಬಂದರೆ, Olympics ಎಂದು ಹೇಳುತ್ತಾರೆ. ಕ್ರೀಡೆಯನ್ನು ಆ ಮಟ್ಟಕ್ಕೆ ತೆಗೆದುಕೊಂಡಿದ್ದಾರೆ ಎಂದು ನಾನು ಹೇಳಿದ್ದೇನೆ ಅಷ್ಟೇ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸದಸ್ಯರು ಮಾತನಾಡುತ್ತಾ, ಮಾತನಾಡುತ್ತಾ ಹಿಂದುಳಿದ ವರ್ಗಕ್ಕೆ ಹೋಲಿಸಿ ಬಿಟ್ಟರು.,

(ಗೊಂದಲ)

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ನಾನು ಆ ದೃಷ್ಟಿಯಲ್ಲಿ ಹೇಳಿಲ್ಲ. ನಾನು ಕ್ರೀಡೆಯನ್ನು ಆ ಮಟ್ಟಕ್ಕೆ ತೆಗೆದುಕೊಂಡಿದ್ದಾರೆಂದು ಹೇಳಿದೆ ಅಷ್ಟೇ.

(ಗೊಂದಲ)

**ಸಭಾಪತಿಯವರು:-** ಈ ಹಂತದಲ್ಲಿ ಮಾನ್ಯ ಕೆ.ಗೋವಿಂದರಾಜ್‌ರವರು ಮಾತನಾಡಿದಂತಹ ಅಸಂಸದೀಯ ಪದಗಳಾದ **XXX** ಇದ್ದಂತೆ ಇದೆ.

(ಗೊಂದಲ) **ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಅದಕ್ಕೂ ಮತ್ತು ಇದಕ್ಕೂ ಸಂಬಂಧವಿಲ್ಲ. ನಾನು ಕ್ರೀಡೆಯ ಬಗ್ಗೆ ಹೇಳಿದ್ದೇನೆ.

---

**XXX ಸಭಾಪತಿಯವರ ಅಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಅದರಲ್ಲೂ upper class, lower class ಎಂದು ಇದೆ.,

(ಗೊಂದಲ)

**ಸಭಾಪತಿಯವರು:-** ಮಾನ್ಯ ಹೆಚ್.ಎಂ.ರೇವಣ್ಣರವರೇ, ಅದನ್ನು ಕಡತದಿಂದ ತೆಗೆದಿದ್ದೇನೆ. ಈಗ ಚರ್ಚೆ ಬೇಡ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಆಯಿತು. ಅದನ್ನು ಕಡತದಿಂದ ತೆಗೆದುಬಿಡಿ.

(ಗೊಂದಲ)

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಕ್ರೀಡೆಯನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎನ್ನುವ ರೀತಿಯಲ್ಲಿ ಹೇಳಿದ್ದೇನೆ. ಅದನ್ನು ಅಪಾರ್ಥ ಮಾಡಿಕೊಳ್ಳುವಂತಿಲ್ಲ. Neglect ಮಾಡುತ್ತಾರೆಂದು ನಾನು ಹೇಳುತ್ತಿದ್ದೇನೆ. ಆ ರೀತಿ ಆಗಬಾರದೆಂದು ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಗೋವಿಂದರಾಜ್‌ರವರೇ, ಚರ್ಚೆ ಬೇಡ. ಒಂದೊಂದು ಸಾರಿ ಬರುತ್ತದೆ ಬಿಡಿ. ತಪ್ಪಾಗಿದೆ. ಅದಕ್ಕೆ ಏನು ಮಾಡುವುದಕ್ಕೆ ಆಗುವುದಿಲ್ಲ. ತಾವು ಮಾತನಾಡಿ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಾವು Cycling Velodrom ಬಹಳ ಅವಶ್ಯಕತೆ ಇದೆ. ಆದ್ದರಿಂದ ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈಗ Sports Hostels ಗಳನ್ನು ಮಾಡಿದ್ದಾರೆ. ಅವುಗಳ ಗುಣಮಟ್ಟವನ್ನು ಕಾಪಾಡಬೇಕು. Sports Hostel ಗಳನ್ನು ಸುಮಾರು 20 ರಿಂದ 22 ಜಿಲ್ಲೆಗಳಲ್ಲಿ ಮಾಡಿದ್ದಾರೆ. ನಾನು Sports Hostel ಗಳನ್ನು ಜಿಲ್ಲೆಗಳಲ್ಲೂ ಮಾಡಬೇಕೆಂದು ಹಾಗೂ ಅದಕ್ಕೆ ಇನ್ನು ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಜೊತೆಗೆ ಏನು diet ಕೊಡುತ್ತಿದ್ದಾರೆ ಅದನ್ನು ಇನ್ನು ಜಾಸ್ತಿ ಮಾಡಬೇಕು. ಆಗ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಕ್ರೀಡಾಪಟುಗಳನ್ನು ತಯಾರು ಮಾಡಲು ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ವಿಧಾನಸೌಧದ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ವಿಧಾನಸೌಧವನ್ನು ಶ್ರೀ ಕೆಂಗಲ್‌ಹನುಮಂತಯ್ಯನವರು 1956 ರಲ್ಲಿ ಕಟ್ಟಿಸಿದರು.

**ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬೆಳಗಾಂನಲ್ಲಿ ಒಂದು Sports Hostel ಇದೆ. ಅದೇರೀತಿ ಮಂಗಳೂರಿನಲ್ಲಿದೆ. ಬಹುಶಃ ನಮ್ಮ ರಾಜ್ಯದಲ್ಲಿ ಕೆಟ್ಟ ಸ್ಥಿತಿಯಲ್ಲಿರುವಂತಹ ಯಾವುದಾದರೂ ಕೆಲವು Sports Hostel ಗಳು ಇದ್ದರೆ. ಅದಕ್ಕೆ ಈ ಎರಡು Sports Hostel ಗಳು ಉದಾಹರಣೆ ಆಗಿವೆ. ಒಂದೇ ಕಟ್ಟಡದಲ್ಲಿ ಗಂಡು ಮಕ್ಕಳಿಗೆ ಮತ್ತು ಹೆಣ್ಣು ಮಕ್ಕಳಿಗೆ ವ್ಯವಸ್ಥೆ ಮಾಡಿದ್ದಾರೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಅದನ್ನು standard improve ಮಾಡಬೇಕೆಂದು ಅದರ ಬಗ್ಗೆ ನಾನು ಪ್ರಸ್ತಾಪ ಹೇಳಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ನಮ್ಮ ರಾಜ್ಯದ ಮಕ್ಕಳಿಗೆ facilities ಅನ್ನು ಸರಿಯಾಗಿ ಕೊಟ್ಟಿಲ್ಲ. ಅವರು ಎಷ್ಟು anemic ಇರುತ್ತಾರೆ ಅಂದರೆ ಮಕ್ಕಳನ್ನು ನಾವು ನೋಡಬೇಕು. ನಿಜಕ್ಕೂ neglected area ಯಾವುದಾದರೂ ಇದ್ದರೆ ಅದು sports . ಬಹುಶಃ ಈ ರಾಜ್ಯದಲ್ಲಿ ಮಕ್ಕಳ ಸಮಸ್ಯೆ ಬಗ್ಗೆ ಬಂದಾಗ ನಾನು ಮಾತನಾಡುತ್ತೇನೆ. ಮಕ್ಕಳ ಸ್ಥಿತಿ ಹೇಗಿದೆ ಎಂದರೆ, ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

**ಸಭಾಪತಿಯವರು:-** ಸಭಾನಾಯಕರೇ, ಮಾನ್ಯ ಉಗ್ರಪ್ಪನವರು ಹೇಳಿದಂತೆ, ನನ್ನ ಗಮನಕ್ಕೂ ಅದು ಬಂದಿದೆ. Immediately, ಇದನ್ನು ಸಂಬಂಧಪಟ್ಟ ಕ್ರೀಡಾ ಸಚಿವರಿಗೆ ಸಾಧ್ಯವಾದಷ್ಟು ಮಟ್ಟಿಗೆ ಸರಿಪಡಿಸುವುದಕ್ಕೆ ಹೇಳಿ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ತಮ್ಮ ಅಧ್ಯಕ್ಷತೆಯಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಒಂದು ಸಭೆಯನ್ನು ಕರೆಯಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇದರ ಜೊತೆಗೆ ಈಗ Pro Kabaddi ಪ್ರಾರಂಭ ಮಾಡಿದ್ದಾರೆ. International League ನಲ್ಲಿ ಈಗ ಭಾರತ ದೇಶದಲ್ಲಿ ನಡೆಯುತ್ತಿದೆ. ಅದರ ಅಧ್ಯಕ್ಷನು ಸಹ ನಾನೇ ಆಗಿದ್ದೇನೆ. ಈ ಹಿಂದಿನ ಸರ್ಕಾರ 10 ಕೋಟಿ ರೂಪಾಯಿಗಳನ್ನು ಕಂಠೀರವ ಕ್ರೀಡಾಂಗಣವನ್ನು ಉನ್ನತೀಕರಣಗೊಳಿಸಿ ಅದನ್ನು ಉನ್ನತ ಮಟ್ಟಕ್ಕೆ ತಂದಿದ್ದಾರೆ. ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಧಾನಸೌದ ಬಹಳ ಮುಖ್ಯವಾಗಿದೆ. ಶ್ರೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಂಗಲ್‌ಹನುಮಂತಯ್ಯನವರು 1956 ರಲ್ಲಿ ವಿಧಾನಸೌಧವನ್ನು ಕಟ್ಟಿಸುವ ವೇಳೆ ಯಾರು architect ಇದ್ದರು, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ಇವತ್ತು ಹೊಸ ಹೊಸ ಸಚಿವರು ಬರುತ್ತಾರೆ. ಈ ಕಟ್ಟಡದ ಗೋಡೆಗಳನ್ನು ಹೊಡೆಯುವುದು, double ಮಾಡುವುದು, single ಮಾಡುವುದು ಮಾಡುತ್ತಿದ್ದಾರೆ. ಅದಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಇದನ್ನು heritage building ಎಂದು ಸರ್ಕಾರ ತೀರ್ಮಾನ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಯಾರು ಇದನ್ನು ಒಡೆಯಬಾರದು ಯಾವ ರೀತಿ ಇದೆ ಅದೇ ರೀತಿಯಲ್ಲಿ ಇರಬೇಕೆಂದು ನನ್ನ ಕಳಕಳಿ ಇದೆ. ಮೊದಲು ಇಲ್ಲಿ toilet ಇತ್ತು. ಅದನ್ನು ಹೊಡೆದು canteen ಮಾಡಿದ್ದಾರೆ. ಅಧಿವೇಶನದಲ್ಲಿ ಉಪಯೋಗವಾಗುತ್ತದೆ. ಆದರೆ ಉಳಿದ ವೇಳೆಯಲ್ಲಿ toilet facility ಇರುವುದಿಲ್ಲ. ಎಲ್ಲಾ ಕಡೆ ವಾಸನೆ ಬರುತ್ತಿರುತ್ತದೆ. ಇದರ ಬಗ್ಗೆ ಡಿಪಿಎಆರ್ ನವರಿಗೆ ಹೇಳಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಶಾಸಕರು ಮತ್ತು ಸಾರ್ವಜನಿಕರು ಒಂದೇ line ಹೋಗುವಂತಹ ಸ್ಥಿತಿ ನಿರ್ಮಾಣವಾಗಿ ಬಿಟ್ಟು ಅಲ್ಲಿ ಮಧ್ಯಾಹ್ನದ ವೇಳೆ ಎಷ್ಟು que ಇರುತ್ತದೆ ಎಂಬುದನ್ನು ನೋಡಬೇಕು. ಏನಾದರೂ alternatives ಮಾಡಬೇಕು ಅಲ್ಲವೇ? ಶಾಸಕರ ಭವನದಲ್ಲಿರುವಂತಹ ಆಯುರ್ವೇದಿಕ್ ಸೆಂಟರ್‌ನಲ್ಲಿ ಯಾವ ತರಹ ಸ್ಥಿತಿ ಇದೆ ಎಂದರೆ, ಅಲ್ಲಿ ಯಾವ facilities ಇಲ್ಲ. ಅಲ್ಲಿ ಮಸಾಜ್ ಮಾಡಿಸಿಕೊಂಡ ಮೇಲೆ ಆ ಪೇಪರ್ ಹಾಕುತ್ತರಲ್ಲವಾ ಆ ಪೇಪರ್ ಅವರ ಮೈಗೆ ಸುತ್ತಿಕೊಳ್ಳುವಂತಹ ಪರಿಸ್ಥಿತಿ ಇದೆ

(272):12.07.2018-01.50-ಎಂವಿ-ಆರ್‌ಎನ್

**ಸಭಾಪತಿಯವರು:-** ನಾನು ಅವರನ್ನು ಕರೆಯಿಸಿ ಮಾತನಾಡಿದ್ದೇನೆ. ವಿಧಾನ ಸಭಾಧ್ಯಕ್ಷರ ಜೊತೆ ಮಾತನಾಡಿ, ಇಬ್ಬರು ಸೇರಿ ಮಾಡೋಣವೆಂದು ಅದನ್ನು ಬಿಟ್ಟಿದ್ದೇನೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಪುಟ್ಟಣ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಕೇಳಿ. ಲೋಕೋಪಯೋಗಿ ಇಲಾಖೆಯವರು ಏನು ಹೊಸ ಬಿಲ್ಡಿಂಗ್ ಅನ್ನು ಕಟ್ಟಿದ್ದಾರೆ, ಅದರಲ್ಲಿ ಪ್ರತಿ ಮಹಡಿಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾರ್ವಜನಿಕರಿಗೆ ಶೌಚಾಲಯವನ್ನು ಕಟ್ಟಿ ಎಂದು ಹೇಳಿದ್ದೇವೆ. ಆದರೆ, ಅಲ್ಲಿನ ಒಂದು ಮಹಡಿಗೂ ಶೌಚಾಲಯವಿಲ್ಲ. ಹೊರಗಡೆಯ ಜಿಲ್ಲೆಯಿಂದ ಬರುವಂತಹ ಹೆಣ್ಣು ಮಕ್ಕಳು ಎಲ್ಲಿಗೆ ಹೋಗಬೇಕು? ಅಲ್ಲಿ ಹೇಗಿದೆ ಎಂದು ನೋಡಿ, ತಾವು ದಯವಿಟ್ಟು ಅಲ್ಲಿಗೆ ಭೇಟಿ ನೀಡಿ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ.

**ಸಭಾಪತಿಯವರು:-** ದಯಮಾಡಿ, ಸ್ವಲ್ಪ ನಿಮ್ಮ ಪಾಯಿಂಟ್ಸ್ ಅನ್ನು ಬರೆದು ನನಗೆ ನೀಡಿ. ನಾನು ಆಗಲೇ ಹೇಳಿದ್ದೇನೆ. ಅಲ್ಲಿ ತೊಂದರೆಗಳು ಇವೆ ಎಂದು ಬಹಳ ಮಂದಿ ಹೇಳಿದ್ದಾರೆ. ಸದನ ಮುಗಿದ ಕೂಡಲೇ ಆ ಕೆಲಸವನ್ನು ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಶಾಸಕರ ಭವನದಲ್ಲಿ ಇರುವಂತಹ ಹೆಲ್ತ್‌ಕ್ಲಬ್ ಏನಿದೆ. ನಾವು ಪ್ರತಿದಿನ ಅಲ್ಲಿಗೆ ಹೋಗುತ್ತೇವೆ. ಅಲ್ಲಿ ಯಾವುದೇ ಸೌಲಭ್ಯಗಳು ಇಲ್ಲ. ಅಲ್ಲಿ ಯಾರು ಕೋಚ್ ನೀಡುತ್ತಾರೆ ಅವರಿಗೆ Physiology ಬಗ್ಗೆ ಗೊತ್ತೇ ಇಲ್ಲ.

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಆಗಲೇ ನಾನು Youth Services Department Secretary ಯವರನ್ನು ಕರೆಯಿಸಿ, ಅದರ ಸರ್ವೆ ಮಾಡಿಸಿಕೊಂಡು ಬಂದಿದ್ದೇನೆ. ಇನ್ನು ಮುಂದೆ ಏನು ಮಾಡಬೇಕು ಎಂಬುದಕ್ಕೆ ವಿಧಾನಸಭೆಯ ಸಭಾಧ್ಯಕ್ಷರು ಮತ್ತು ನಾನು ಕುಳಿತು ಚರ್ಚೆ ಮಾಡಿ, ನೀವು ಹೇಳಿರುವ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಶಾಸಕರ ಭವನದಲ್ಲಿ ನಾವು 300 ಜನ ಶಾಸಕರಿದ್ದೇವೆ, ಒಂದು ಶೆಟಲ್ ಬ್ಯಾಡ್ಮಿಂಟನ್ ಕೋರ್ಟ್ ಅನ್ನು ಮಾಡಿಸಿಲ್ಲ.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ತಾವು Youth Services Department Secretary ಹತ್ತಿರ ಮಾತನಾಡಿದ್ದೇನೆ ಎಂದು ಹೇಳಿದ್ದೀರಿ.

(ಗೊಂದಲ)

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಮಾನ್ಯ ಸಭಾಧ್ಯಕ್ಷರಾಗಿದ್ದ ಕೋಳಿವಾಡ ಅವರ ಅಧ್ಯಕ್ಷತೆಯಲ್ಲಿ Constitution Club ಮಾಡಿದ್ದರು. ಅದರ ಬಗ್ಗೆ ತಾವು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಮನಹರಿಸಬೇಕೆಂದು ಹೇಳುತ್ತಿದ್ದೇನೆ. ಕಬ್ಬನ್ ಪಾರ್ಕ್‌ಗೆ ಸಂಬಂಧಪಟ್ಟಂತೆ ಈ ಹಿಂದೆ ಕೂಡ ವಿಷಯವನ್ನು ಪ್ರಸ್ತಾಪ ಮಾಡಿದ್ದೆ.

**ಸಭಾಪತಿಯವರು:-** ಈಗ ವಿಧಾನಸೌಧದ ಬಗ್ಗೆ ಏನು ಹೇಳುತ್ತಿದ್ದೀರಲ್ಲ, ದಯಮಾಡಿ ನಾನು ಸಹಿತ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾವೆಲ್ಲರೂ ಕೂಡಿ ಇದರ ಘನತೆ ಗೌರವವನ್ನು ಎತ್ತಿ ಹಿಡಿಯಬೇಕು ಮತ್ತು ಇದನ್ನು Heritage Building ಆಗಿ ಮಾಡಬೇಕು ಎನ್ನುವಂತಹ ಒಂದು ತೀರ್ಮಾನಕ್ಕೆ ತಾವೆಲ್ಲರೂ ಬೆಂಬಲ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸದನದಲ್ಲಿ ತಾವೆಲ್ಲರೂ ಒಪ್ಪಿದರೆ ಅದನ್ನು ಮಾಡಿಸುವಂತೆ ಹೇಳುತ್ತೇನೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, Heritage Building ಎಂದು ತಾವು ಸರ್ಕಾರಕ್ಕೆ ನಿರ್ದೇಶನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ನಿಮ್ಮೆಲ್ಲರ ಒಪ್ಪಿಗೆಯ ಮುಖಾಂತರ ಬರೆದು ಕಳುಹಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಕಬ್ಬನ್‌ಪಾರ್ಕ್‌ನಲ್ಲಿ ಶೌಚಾಲಯ ಇಲ್ಲ. ಪ್ರತಿದಿವಸ ಸಾಕಷ್ಟು ಪ್ರವಾಸಿಗರು ಬರುತ್ತಾರೆ. ಈ ಹಿಂದೆಯೂ ಕೂಡ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ, ತೋಟಗಾರಿಕಾ ಸಚಿವರ ಗಮನಕ್ಕೆ ತಂದಿದ್ದೆ. ನಮ್ಮ ಫಂಡ್‌ನಲ್ಲಿ ನಾನೇ ಶೌಚಾಲಯಗಳನ್ನು ಕಟ್ಟಿಸಿಕೊಡುತ್ತೇನೆಂದು ತೋಟಗಾರಿಕಾ ಇಲಾಖೆಯವರಿಗೆ ಪತ್ರ ಸಹ ಬರೆದಿದ್ದೇನೆ. ಆದರೆ, ಅವತ್ತಿನಿಂದ ಇವತ್ತಿನವರೆವಿಗೂ reply ಬಂದಿಲ್ಲ. ಆದುದರಿಂದ ತೋಟಗಾರಿಕಾ ಇಲಾಖೆಯವರಿಗೆ ತಾವು ಒಂದು ನಿರ್ದೇಶನ ಕೊಡಬೇಕೆಂದು ಹೇಳುತ್ತಿದ್ದೇನೆ. ಅದು ಆದಮೇಲೆ ಸಣ್ಣಪುಟ್ಟ ವಿಚಾರಗಳು; ಕೈಗಾರಿಕೆ ಇಲಾಖೆಗೆ ಒಂದು ಸಲಹೆ. Single Window Agency ಎಂದು ಮಾಡುತ್ತಾರೆ. Single Window Agencyನಲ್ಲಿ 50 ಎಕರೆ ಮತ್ತು 100 ಎಕರೆ ಎಂದು ಜಾಗವನ್ನು allot ಮಾಡುತ್ತಾರೆ. ಅವರಿಗೆ ಜಾಗ ಕೊಟ್ಟ ಮೇಲೆ ಅವರು Electricity, Fire, Water ಇವೆಲ್ಲವನ್ನು ತೆಗೆದುಕೊಳ್ಳಬೇಕಾದರೆ ಅವರ ಹಣ ಬಿದ್ದು ಹೋಗುತ್ತದೆ ಅದಕ್ಕೆ ಸುಮಾರು ಎರಡು ವರ್ಷ ಬೇಕಾಗುತ್ತದೆ. ಆಗ ಅವನು ಕೈಗಾರಿಕೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ, ವಾಪಸ್ಸು ಹೋಗುತ್ತಾನೆ. ಇಲ್ಲವೆಂದರೆ ಬೇರೆಯವರಿಗೆ ಮಾರಾಟ ಮಾಡಿ, ಬೇರೆ ಕೆಲಸಕ್ಕೆ ಹೋಗುತ್ತಾನೆ. ಇದಕ್ಕೆ Single Window Agencyಯಿಂದ ಜಾಗವನ್ನು ಏನು allot ಮಾಡುತ್ತೀರಿ, ಆ ದಿನವೇ at

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

one stage ಎಲ್ಲಾ clearances ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರಿಂದ ಬಹಳಷ್ಟು ಕೈಗಾರಿಕೆಯವರಿಗೆ ಅನುಕೂಲವಾಗುತ್ತದೆ. ಇನ್ನೊಂದು ಬಿಎಂಆರ್‌ಸಿಎಲ್‌ಗೆ ಸಂಬಂಧಪಟ್ಟಿರುವುದು ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ತಾವು ಅದನ್ನು ಬಿಎಂಆರ್‌ಸಿಎಲ್‌ಗೆ ಕಳುಹಿಸಿಕೊಡಿ. ಈ ಮೆಟ್ರೋ ಕೆಳಗಡೆ ಏನೇನು ಅನಾಹುತಗಳು ಇದೆ ಎಂದು ತಾವು ಅವರ ಗಮನಕ್ಕೆ ತರಬೇಕೆಂದು ಹೇಳುತ್ತೇನೆ.

**ಸಭಾಪತಿಯವರು:–** ಆಯಿತು. ಎಲ್ಲಾ ನಿಮ್ಮ ಕಡೆ ಇದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಶಾಸಕರ ಭವನದಲ್ಲಿ ಒಂದು ಯೋಗ ಕೇಂದ್ರ ಬರಲಿ.

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಕ್ರೀಡಾಪಟುಗಳಿಗೆ sports reservation ಅನ್ನು ಸರ್ಕಾರದಿಂದ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಸಭಾಪತಿಯವರಿಗೆ ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಎಲ್ಲರಿಗೂ ಊಟಕ್ಕೆ ಕರೆದಿದ್ದಾರೆ. ದಯಮಾಡಿ ಎಲ್ಲರೂ ಊಟಕ್ಕೆ ಹೋಗಬೇಕು. ಸದನವನ್ನು 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(273) 12.07.2018 ಟಿಸಿಹೆಚ್/ಬಿಎನ್‌ಎಸ್ 3.20**

**(ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 54 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು)**

(ಸಭಾಪತಿಯವರಾದ ಶಿವಲಿಂಗಪ್ಪ ಬಸವರಾಜ ಹೊರಟ್ಟಿಯವರು ಪೀಠವನ್ನು ಅಲಂಕರಿಸಿದರು)

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಪಾಯಿಂಟ್ ಆಫ್ ಆರ್ಡರ್ ಮೇಲೆ ಒಂದು ಆದೇಶವನ್ನು ಮಾಡತ್ತೇನೆಂದು ಹೇಳಿದ್ದಿರಿ. ತಾವು ಆ ಆದೇಶವನ್ನು ದಯಪಾಲಿಸುತ್ತೀರಿ ಎಂದು ನಾವು ಕಾಯುತ್ತಿದ್ದೇವೆ.

**ಸಭಾಪತಿಯವರು:–** ಅದನ್ನು ತರಿಸಿಕೊಂಡಿದ್ದೇವೆ. ನಾನು ಹೇಳುತ್ತೇನೆ, ಸದನದಲ್ಲಿ ಚರ್ಚೆ ಮಾಡುವುದಕ್ಕಿಂತ ಮುಂಚೆ ಮಾನ್ಯ ವಿರೋಧಪಕ್ಷದವರು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇವೆಂದು ಹೇಳಿದ್ದೀರಿ ಅಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಶ್ರೀಮತಿ ತಾರಾಅನೂರಾಧ ರವರು ಇನ್ನೂ ಸದನಕ್ಕೆ ಬಂದಿಲ್ಲ. ಅವರು ಬಂದ ನಂತರ ಆ ವಿಷಯವನ್ನು ಪ್ರಸ್ತಾಪ ಮಾಡಲಾಗುವುದು.

**ಸಭಾಪತಿಯವರು:–** ಈಗ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿರವರು ಮಾತನಾಡಬೇಕು. ಆಯಿತು, ಅವರು ಇನ್ನೂ ಬಂದಿಲ್ಲ. ನಂತರ ಶ್ರೀ ಐವಾನ್ ಡಿ'ಸೋಜಾರವರೇ, ತಾವು ಪ್ರಾರಂಭ ಮಾಡಿ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, actually ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿರವರು ಮಾತನಾಡುತ್ತಾರೆ.

**ಸಭಾಪತಿಯವರು:–** ಎಸ್.ರವಿಯವರೇ, ತಾವು ಮಾತನಾಡುತ್ತೀರಾ?

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊದಲು ನಾನು ಮಾತನಾಡುತ್ತೇನೆ. ನಂತರ ಅವರು ಮಾತನಾಡಲಿ.

**ಸಭಾಪತಿಯವರು:–** ಆಯಿತು. ಎಸ್.ರವಿಯವರೇ, ತಾವು ಮಾತನಾಡಿ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವೇ ನನಗೆ ಸ್ವಯಂಪ್ರೇರಿತವಾಗಿ ಬಜೆಟ್ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗಾಗಲೇ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಈ ಎರಡೂ ಕಡೆಗಳಿಂದ ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಬಹಳಷ್ಟು ವಿಚಾರಗಳನ್ನು ಬಜೆಟ್ ಮೇಲೆ ಸವಿವರವಾಗಿ ಚರ್ಚೆ ಮಾಡಿ, ಬಹಳಷ್ಟು ಬೆಳಕು ಚೆಲ್ಲಿದ್ದಾರೆ ಮತ್ತು ವ್ಯಾಖ್ಯಾನ ನೀಡಿದ್ದಾರೆ.

**(ಮುಂದು...)**

<u>**(274)12.7.2018/3.30/ಎಂ.ಎಂ–ಬಿ.ಎನ್.ಎಸ್**</u>

**ಶ್ರೀ ಎಸ್. ರವಿ (ಮುಂದು):–**

ವ್ಯಾಖ್ಯಾನ ಕೂಡ ಅವರವರ ರೀತಿಯಲ್ಲಿ ಪರ ವಿರೋಧವಾಗಿ ಮಾತನಾಡಿದ್ದಾರೆ. ಮಾತನಾಡಿದ ಕೆಲವು ಸದಸ್ಯರು ಇದು ಬಜೆಟ್ ಅಲ್ಲ ಎನ್ನುವ ಮಾತನ್ನು ಕೂಡ ಹೇಳಿದರು. ಫೆಬ್ರವರಿಯಲ್ಲಿ ಅಂದಿನ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಮತ್ತು ಇಂದು ಶ್ರೀ ಕುಮಾರಸ್ವಾಮಿಯವರು ಮಂಡಿಸಿದ ಮುಂದುವರೆದ ಬಜೆಟ್ ಎಂದು ಎರಡು ಬಜೆಟ್‌ಗಳ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಿದ್ದಾರೆ. ಈ ರೀತಿ ಹತ್ತು ಹಲವಾರು ರೀತಿ ವ್ಯಾಖ್ಯಾನ ಮಾಡಿರುವುದನ್ನು ಗಮನಿಸಿದ್ದೇವೆ. ನಾನು ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಲು ಹೋಗುವುದಿಲ್ಲ, ಏಕೆಂದರೆ, ಸಮಯದ ಅಭಾವ ಇರುವುದರಿಂದ, ನನಗೆ ಸೀಮಿತವಾಗಿ ನಾನು ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ವಿಶೇಷವಾಗಿ ರಾಮನಗರ ಜಿಲ್ಲೆಯ ಸಮಸ್ಯೆಗಳಿಗೆ ಅದರಲ್ಲೂ 2-3 ಸಮಸ್ಯೆಗಳಿಗೆ ಸೀಮಿತವಾಗಿ ನನಗೆ ಸಿಕ್ಕಿರುವ ಅವಕಾಶವನ್ನು ಬಳಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ನಾನು ಒಬ್ಬ ಸಹಕಾರಿ ಮತ್ತು ರೈತನಾಗಿ ಸಮ್ಮಿಶ್ರ ಸರ್ಕಾರದ ನೇತೃತ್ವವನ್ನು ವಹಿಸಿರುವ ನೆಚ್ಚಿನ ಮುಖ್ಯಮಂತ್ರಿಯವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿರವರು ರೈತ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ರೈತರ ಸಂಕಷ್ಟಕ್ಕೆ ನೆರವಾಗಬೇಕು, ರೈತನ ಜೊತೆ ನಾವು ಇದ್ದೇವೆ ಎಂಬ ಸ್ಪಷ್ಟ ಸಂದೇಶವನ್ನು ರೈತರಿಗೆ ನೀಡಬೇಕೆಂಬ ದೆಸೆಯಲ್ಲಿ ತೆಗೆದುಕೊಂಡ ನಿರ್ಧಾರ 35,000 ಕೋಟಿಯಂತಹ ಬೃಹತ್ ಮೊತ್ತವನ್ನು ಸಾಲ ಮನ್ನಾದ ಅಡಿಯಲ್ಲಿ ಘೋಷಣೆ ಮಾಡಿರುವುದಕ್ಕೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗ ಸದನದಲ್ಲಿ ಆ ವಿಚಾರವಾಗಿ ಯಾವ್ಯಾವ ಮಂತ್ರಿಗಳಿದ್ದಾರೆಂಬುದೇ ಗೊತ್ತಾಗುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ರವಿಯವರೇ, ಸಭಾನಾಯಕರು ಇದ್ದಾರೆ, ಅವರು ಬರೆದುಕೊಳ್ಳುತ್ತಾರೆ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಸಭಾನಾಯಕರು ಒಬ್ಬರೇ ಇದ್ದಾರೆ. ನಾನು ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾದ ಸಂದರ್ಭದಲ್ಲಿ ಸದನದಲ್ಲಿ ಇರಬೇಕಾದ ಮಾನ್ಯ ಸಚಿವರುಗಳು ಇರಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಒಂದು ನಿಮಿಷ ಹೇಳುತ್ತೇನೆ ಕೇಳಿ. ಕೆಳಮನೆಯಲ್ಲಿ ಬಜೆಟ್ ಮೇಲೆ ಬಿಲ್ ಪಾಸ್ ಆಗುವುದಿದೆ. ಆದ್ದರಿಂದ ಎಲ್ಲರೂ ಅಲ್ಲಿದ್ದಾರೆ. ಆ ಹಿನ್ನೆಲೆಯಲ್ಲಿ ಇನ್ನೂ ಬಂದಿಲ್ಲ, ಅದನ್ನು ಮುಗಿಸಿಕೊಂಡು ಇಲ್ಲಿಗೆ ಬರುತ್ತಾರೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಏನೇ ಆದರೂ ಈ ಸದನಕ್ಕೆ ಇಂದು ಯಾರು ಅಲಾಟ್ ಆಗಿದ್ದಾರೆ ಅವರ ಕರ್ತವ್ಯ ಇಲ್ಲಿರುವುದು. ಅವರು ಏನು ರಿಪ್ಲೈ ಕೊಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ಒಂದು ನಿಮಿಷ ಕೇಳಿ. ವೋಟಿಂಗ್ ಬಂದರೆ;

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ವೋಟಿಂಗ್ ಬಂದಾಗ ಹೋಗಲಿ. ಹಾಗಾದರೆ ಅವರು ಬರುವವರೆಗೂ ಸದನವನ್ನು adjourn ಮಾಡಿ.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ನೀವು ವಿಚಾರ ಮಾಡಿ. . .

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ದಯಮಾಡಿ, ಯಾವತ್ತೂ ಕೂಡ ಈ ಸದನದ ಇತಿಹಾಸದಲ್ಲಿ ಈ ಕಾರಣದಿಂದ ಮಂತ್ರಿಗಳು ಆ ಕಡೆ ಇದ್ದಾರೆ ಎಂದು ಹೇಳಿಲ್ಲ.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ಸಚಿವರುಗಳು ಬರಬೇಕೆಂದು ಹೇಳಿಕಳುಹಿಸಿದ್ದೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳೂ ಕೂಡ ಒಬ್ಬರೇ ಇದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೂ ಈ ಸದನದ ಪರಂಪರೆಯಲ್ಲಿ ಕನಿಷ್ಠ ಮೂರು ಜನ ಮಂತ್ರಿಗಳು ಇಲ್ಲದಿದ್ದರೆ ಸದನ ನಡೆಸುವುದಕ್ಕೆ ಸಾಧ್ಯವಿಲ್ಲ ಎಂಬ ಪರಿಪಾಠಗಳು ನಮ್ಮಲ್ಲಿದ್ದವು. ಅನೇಕ ಬಾರಿ ಈ ಕಡೆ ಇದ್ದವರು ನಾವು ಆ ಕಡೆ ಇದ್ದಾಗ ಮೂರು ಜನ ಮಂತ್ರಿಗಳು ಇಲ್ಲ ಎನ್ನುವ ಕಾರಣಕ್ಕೆ ಸಭಾತ್ಯಾಗ ಮಾಡಿದ್ದನ್ನು ನೋಡಿದ್ದೇವೆ. ಇಷ್ಟಾಗಿಯೂ ಕೂಡ ಪೀಠವು, ಇಲ್ಲಿ ಒಬ್ಬರೇ ಮಂತ್ರಿ ಇದ್ದು ಇದನ್ನು ಮಾಡಬಹುದು ಎಂಬುದು ನಿಮ್ಮ ವಿವೇಚನೆಗೆ ಬಿಟ್ಟದ್ದರೆ ನನ್ನ ಆಕ್ಷೇಪ ಇಲ್ಲ. ಆದರೆ ನನ್ನ ದೃಷ್ಟಿಯಲ್ಲಿ ಇದು ಆಕ್ಷೇಪಾರ್ಹ, ಇದು ಸರಿಯಲ್ಲ.

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನೀವು ತಿಳಿದುಕೊಳ್ಳಬೇಕು. ಕೆಳಮನೆಯಲ್ಲಿ Money Bill pass ಆಗುವುದು ಇದೆ. ಇಲ್ಲಿ ಮಂತ್ರಿಯಾದವರು ಅಲ್ಲಿ ಎಂ.ಎಲ್.ಎ.ಗಳಾಗಿರುತ್ತಾರೆ. ಅಕಸ್ಮಾತ್ ಅಲ್ಲಿ ವೋಟಿಂಗ್‌ಗೆ ಬಂದರೆ ಇರಬೇಕಾಗುತ್ತದೆ ಎಂದು ಸಭಾಧ್ಯಕ್ಷರು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ ನಾನು ಹೇಳಿ ಕಳುಹಿಸಿದ್ದೇನೆ, ಒಬ್ಬಿಬ್ಬರು ಸಚಿವರು ಬಂದರೆ ಕರೆಸುತ್ತೇನೆ, ಅಲ್ಲಿಯವರೆಗೆ ಸಭಾನಾಯಕರು ಎಲ್ಲವನ್ನೂ ಬರೆದುಕೊಳ್ಳುತ್ತಾರೆ. ಅಧಿಕಾರಿಗಳು ಕೂಡ ಇದ್ದಾರೆ ಆದ್ದರಿಂದ ಸದನವನ್ನು ನಡೆಸಲಾಗುವುದು.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ತಾವು ಒಳ್ಳೆಯ ವಿಚಾರವನ್ನು ಹೇಳಿದಿರಿ. ಇದಕ್ಕೋಸ್ಕರವೇ ಇದಕ್ಕಿಂತ ಹೆಚ್ಚು ವಿಚಾರವಂತರು, ಬದ್ಧತೆ ಇರುವವರು, ಅನುಭವ ಇರುವವರು ಮೇಲ್ಮನೆಯಲ್ಲಿ ಇರುತ್ತಾರೆ ಎಂದು ಕೇಂದ್ರ ಸರ್ಕಾರದಲ್ಲಿ 76 ಜನ ಮಂತ್ರಿಗಳಲ್ಲಿ 26 ಜನರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲ್ಮನೆಯವರಿದ್ದಾರೆ ಅಂದರೆ ರಾಜ್ಯಸಭಾದವರು. ಬಿಹಾರದಲ್ಲಿ ಏಳು ಜನ M.L.C.s Ministers ಆಗಿದ್ದಾರೆ. ಮಹಾರಾಷ್ಟ್ರದಲ್ಲಿ 9 ಜನ, ತೆಲಂಗಾಣದಲ್ಲಿ ಇಬ್ಬರು Deputy Chief Ministers ಮತ್ತು ಸಚಿವರು M.L.C.s, ಆಂಧ್ರಪ್ರದೇಶದಲ್ಲಿ ಮೂರು ಜನ ಮಂತ್ರಿಗಳು M.L.C.s ಹಾಗೆಯೇ ಉತ್ತರಪ್ರದೇಶದಲ್ಲೂ ಮೇಲ್ಮನೆಯಿಂದ ಮಂತ್ರಿಗಳು ಆಗಿದ್ದಾರೆ. ಇದು 100 ವರ್ಷಗಳಿಗೂ ಹೆಚ್ಚು ಇತಿಹಾಸ ಇರುವ ಸದನವಾಗಿದ್ದು, ಈ ಸದನದ ಘನತೆ, ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಸದನದಲ್ಲಿರುವವರನ್ನು ಬಹುಶಃ ತಮಗಿರುವಂತಹ ಪ್ರಭಾವವನ್ನು ಬಳಸುವುದು ಸೂಕ್ತವೆಂದು ನನಗೆ ಅನಿಸುತ್ತದೆ.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ಈಗ ತಮ್ಮದೇ ಪ್ರಭಾವ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಹೇಳಿ ಐದು ಜನ ಮಂತ್ರಿಗಳನ್ನು ಮಾಡಿದರೆ ಸಮಸ್ಯೆ ಪರಿಹಾರವಾಗುತ್ತದೆ.

**ಸಭಾಪತಿಯವರು:–** ನಮ್ಮವರಿಗೆ ಹೇಳುತ್ತೇನೆ, ಮಾನ್ಯ ಉಗ್ರಪ್ಪನವರು ಇದರ ಜವಾಬ್ದಾರಿ ತೆಗೆದುಕೊಳ್ಳಲಿ. ಈಗ ಸಭಾನಾಯಕರು ಬರೆದುಕೊಳ್ಳಲಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಸಾಲ ಮನ್ನಾ ಮಾಡಿರುವುದನ್ನು ನಾನು ಸ್ವಾಗತಿಸುತ್ತಾ, ಕಳೆದ ಬಾರಿ ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಮಾಡಿದಂತಹ ಸಾಲ ಮನ್ನಾದಲ್ಲಿ ದಿನಾಂಕ 20.06.2017ಕ್ಕೆ cut-off date ಇತ್ತು, ಮಾನ್ಯ ಧರ್ಮೇಗೌಡರೂ ಇಲ್ಲಿಯೇ ಇದ್ದಾರೆ. ಆ ಸಂದರ್ಭಕ್ಕೆ 21, 22, 23 ಈ ರೀತಿ ಒಂದು ವಾರ E.C. ಯಲ್ಲಿ sanction ಮಾಡಿ sanction order ಆಗಿದ್ದು ಒಂದೆರಡು ದಿನ ಲೇಟ್ ಆಗಿದ್ದರಿಂದ ಒಂದಷ್ಟು ಜನಕ್ಕೆ ಸಹಕಾರ ಸಂಸ್ಥೆಗಳಲ್ಲಿ ಸಾಲ ಕೊಡಲಾಗಿತ್ತು. ಅವರು ಕೂಡ ಸಾಲ ಮನ್ನಾ ಸೌಲಭ್ಯಕ್ಕೆ ಒಳಪಡಲಿಲ್ಲ. ಸಾಲ ಮರುಪಾವತಿ ಮಾಡಿ ಈಗಾಗಲೇ ಒಂದು ವರ್ಷವಾಗಿದೆ. ಅವರಿಗೆ ಆ ಸಾಲ ಮನ್ನಾ ಸೌಲಭ್ಯ ದೊರೆಯುವುದೇ ಇಲ್ಲ. ಕಳೆದ ಬಾರಿ 20ನೇ ತಾರೀಖು ಯಾರಿಗೆ cut-off ಆಗಿತ್ತೋ, ಆ cut-off date ಆದಮೇಲೆ ಕನಿಷ್ಠ 28ನೇ ತಾರೀಖಿನವರೆಗೂ ಯಾರಿಗೆಲ್ಲಾ sanction order ಆಗಿ ಸಾಲ ಮಂಜೂರಾಗಿತ್ತೋ ಅವರಿಗೂ ಕೂಡ ಸಾಲಮನ್ನಾ ಸೌಲಭ್ಯ ದೊರೆಯಬೇಕೆಂಬುದು ನಮ್ಮ ಆಶಯ. ರೈತರು ಸಾಲವನ್ನು ಸಕಾಲದಲ್ಲಿ ಪಾವತಿ ಮಾಡಿದ್ದಾರೆ. ಕೇವಲ ಸುಸ್ತಿದಾರರಿಗೆ ಮಾತ್ರ ಈ ಸಾಲ ಸೌಲಭ್ಯ ದೊರೆಯುತ್ತದೆ ಎನ್ನುವುದು ಒಂದು ಸಂದೇಶ ಮತ್ತು ಒಬ್ಬ ಸಹಕಾರಿಯಾಗಿ ನನಗಿರುವ ಒಂದು ಗೊಂದಲವೇನೆಂದರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

nationalised and commercial banks ಬಗ್ಗೆ ಪ್ರಸ್ತಾಪ ಮಾಡದೇ ಕೇವಲ ಸಹಕಾರ ಸಂಘಗಳಿಗೆ ಸೀಮಿತವಾಗಿ ಮಾತನಾಡುವ ಸಂದರ್ಭ ಬಂದಾಗ ಯಾರು ಸುಸ್ತಿದಾರರಿದ್ದಾರೆ ಅವರ ಎರಡು ಲಕ್ಷದವರೆಗಿನ ಸಾಲ ಮನ್ನಾ ಆಗುತ್ತದೆ. ಆದರೆ ಯಾರು ಬಹಳ ಪ್ರಾಮಾಣಿಕವಾಗಿ ಪಾವತಿ ಮಾಡಿದ್ದಾರೆ ಅವರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 25 ಸಾವಿರ ರೂಪಾಯಿಗಳಷ್ಟು ಅವರಿಗೆ ನೀಡಲಾಗುವುದು ಎಂದು ಹೇಳಿದ್ದಾರೆ. ಆದರೆ ನನಗೆ ಗೊಂದಲವಾಗುತ್ತಿರುವುದು ಎಲ್ಲಿ ಎಂದ್ರರೆ, ಯಾವುದನ್ನು clarification ಕೇಳುತ್ತೇವೆ ಎಂದರೆ ಕಳೆದ ಬಾರಿ ಯಾರು ಸಾಲ ಸೌಲಭ್ಯವನ್ನು ಪಡೆದಿದ್ದರೋ ಅವರಿಗೆ ಈ ಸಲ renewal ಆಗಿದೆ, ಅವರಿಗೆ ಈ ಸೌಲಭ್ಯ ದೊರೆಯುವುದೋ ಇಲ್ಲವೋ ಎಂಬುದಕ್ಕೆ ನಮಗೆ ಸ್ಪಷ್ಟೀಕರಣ ಬೇಕಾಗುತ್ತದೆ. ಮುಖ್ಯವಾಗಿ 20ನೇ ತಾರೀಖಿನ ನಂತರ ಯಾರಿಗೆ sanction order ಆಗಿತ್ತೋ, ಅವರಿಗೂ ಕೂಡ ಈ ಸೌಲಭ್ಯ ವಿಸ್ತರಣೆ ಆಗಬೇಕು ಎಂಬುದು ನಮ್ಮ ಬಯಕೆಯಾಗಿದೆ.

ವಿಶೇಷವಾಗಿ ಕೃಷಿ ಮತ್ತು ನೀರಾವರಿ, ಶೈಕ್ಷಣಿಕ, ಆರೋಗ್ಯ ಈ ರೀತಿಯ ಹತ್ತು ಹಲವಾರು ವಿಚಾರಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡುವ ಜೊತೆಗೆ ಫೆಬ್ರವರಿಯಲ್ಲಿ ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್‌ನ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಯಾವುದೇ ಕಡಿತ ಮಾಡದೇ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುತ್ತೇವೆ ಎನ್ನುವಂತಹ ಸಂದರ್ಭ ಬಂದಾಗ ಪ್ರಾದೇಶಿಕ ತಾರತಮ್ಯ ಮಾಡುವ ದೃಷ್ಟಿಯೇ ಇಲ್ಲ. ಎಲ್ಲವನ್ನೂ ಒಳಗೊಂಡಿರುವಂತಹ ಸಂದರ್ಭದಲ್ಲಿ ಆ ಭಾಗಕ್ಕೆ ಅನುಕೂಲವಾಗಲಿಲ್ಲ, ಈ ಭಾಗಕ್ಕೆ ಅನಾನುಕೂಲವಾಯಿತು ಎನ್ನುವಂತಹ ಪ್ರಶ್ನೆಯೇ ಬರದಿರುವಂತಹ ಸಂದರ್ಭ. ನಾನು ಅವುಗಳನ್ನು ಹೊರತುಪಡಿಸಿ, ಪ್ರಾರಂಭದಲ್ಲಿ ಹೇಳಿದ ಹಾಗೆ ನಮ್ಮ ಜಿಲ್ಲೆಗೆ, ವಿಶೇಷವಾಗಿ ನಾನು ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ಅಥವಾ ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಮೂರು ಅತ್ಯಂತ ಜ್ವಲಂತ ಸಮಸ್ಯೆಗಳಿವೆ. ಕೃಷಿಕರ ಬದುಕಿಗೆ ಆಸರೆಯಾಗಿರುವ, ಬೆನ್ನೆಲುಬಾಗಿರುವ ಅದರಲ್ಲೂ ರೇಷ್ಮೆ, ಹಾಲು ಮತ್ತು ಮಾವು ನಮಗೆ ಇದು ಕೃಷಿ ಪ್ರಧಾನವಾಗಿದೆ. ಅದರಲ್ಲೂ ಹಳೇ ಮೈಸೂರು ಭಾಗದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ ಆ ರೀತಿಯಾಗಿ ರೇಷ್ಮೆ ರಾಮನಗರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ನಮ್ಮ ರೈತರ ಬದುಕು ನಿಂತಿರುವುದೇ ರೇಷ್ಮೆ ಕೃಷಿಯ ಮೇಲೆ. ರೇಷ್ಮೆ ಕೃಷಿ ವಿಶೇಷವಾಗಿ ಇಡೀ ರಾಷ್ಟ್ರದ ಒಟ್ಟು ಉತ್ಪಾದನೆ ಇರುವುದೇ 22,000 ಮೆಟ್ರಿಕ್ ಟನ್‌ನಷ್ಟು ರೇಷ್ಮೆ ಉತ್ಪಾದನೆಯಲ್ಲಿ ಹಿಪ್ಪುನೇರಳೆಯಿಂದ ಉತ್ಪಾದನೆಯಾಗುವುದು ಸುಮಾರು 22,000 ಮೆಟ್ರಿಕ್ ಟನ್. ಎರಿ, ಮೂಗ ಇವು ಕಾಶ್ಮೀರ, ಪಶ್ಚಿಮ ಬಂಗಾಳದ ಕಡೆ ಗಿಡದ ಮೇಲೆ ಬೆಳೆಯುವ ಹುಳುಗಳಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 6-7 ಸಾವಿರ ಮೆಟ್ರಿಕ್ ಟನ್‌ನಷ್ಟು cottage industry ಗೆ ಪ್ರಮುಖವಾಗಿ ಉಪಯೋಗವಾಗುತ್ತದೆ. ಅವರು ಸುಮಾರು 6-7 ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಮಾಡುತ್ತಾರೆ. ಮಲಬರಿಯಿಂದ ಸುಮಾರು 22 ಸಾವಿರ ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತದೆ. ಅದರಲ್ಲಿ ಸುಮಾರು 10,000 ಮೆಟ್ರಿಕ್ ಟನ್ ಕರ್ನಾಟಕ ರಾಜ್ಯ ಉತ್ಪಾದನೆ ಮಾಡುತ್ತದೆ. ನಾನು ಆಗಲೇ ಹೇಳಿದ ಈ ಭಾಗಗಳಲ್ಲಿ ಮತ್ತು ಇತ್ತೀಚೆಗೆ ಗದಗ, ಹಾವೇರಿ, ಬೆಳಗಾವಿ ಜಿಲ್ಲೆಗಳಲ್ಲಿ ಬಯೋಟಿನ್ ಅನ್ನು ಬೆಳೆಯುವ ವಾತಾವರಣ ಕಾಣಿಸುತ್ತಿದೆ.

(ಮುಂದು)

(275) 12-07-2018/3-40/ಕೆಹೆಚ್/ಜಿಆರ್

**ಶ್ರೀ ಎಸ್.ರವಿ (ಮುಂದು):-** ಆ ಭಾಗದ ರೈತರು ದಿನೇ ದಿನೇ ರೇಷ್ಮೆ ಕೃಷಿಯ ಕಡೆಗೆ ಹೋಗುತ್ತಾ ಇರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಹಿಪ್ಪನೇರಳೆ ಬೆಳೆಯ ಒಟ್ಟಾರೆ ವಿಸ್ತೀರ್ಣ 98134 ಹೆಕ್ಟೇರ್‌ನಷ್ಟಿದ್ದು, ಪ್ರದೇಶವು ಅಷ್ಟು ರೈತರು ರೇಷ್ಮೆ ಕೃಷಿಯ ಮೇಲೆ ಅವಲಂಬಿತವಾಗಿದ್ದಾರೆ. ಅದರಲ್ಲೂ ರಾಜ್ಯದ 10 ಸಾವಿರಕ್ಕೂ ಅಧಿಕ ಹಳ್ಳಿಗಳು ರೇಷ್ಮೆ ಉದ್ಯಮದ ಮೇಲೆ ಮತ್ತು ರೇಷ್ಮೆ ಕೃಷಿಯ ಮೇಲೆ ಅವಲಂಬಿತವಾಗಿದೆ. ರೇಷ್ಮೆ ಬೆಳೆಯು 11 ಸಾವಿರದಷ್ಟು ಹಳ್ಳಿಗಳ ರೈತ ಕುಟುಂಬಕ್ಕೆ ಆರ್ಥಿಕ ಶಕ್ತಿಯನ್ನು ನೀಡುತ್ತಿದೆ. ಒಟ್ಟಾರೆಯಾಗಿ ರಾಜ್ಯದಲ್ಲಿ 1.30 ಲಕ್ಷ ಜನ ರೈತರು ರೇಷ್ಮೆ ಬೆಳೆಯ ಮೇಲೆ ಅವಲಂಬಿತರಾಗಿದ್ದಾರೆ. ನಮ್ಮ ಭಾಗದಲ್ಲಿ ರೈತರಿಗೆ ನಿಶ್ಚಿತವಾದಂತಹ ಯಾವುದೇ ವರಮಾನ ಇಲ್ಲ. ನಮ್ಮಲ್ಲೂ ಕೂಡ 800 ರಿಂದ 1000 ಅಡಿಗಳ ಆಳದಿಂದ ನೀರನ್ನು ತರುವಂತಹ ಪರಿಸ್ಥಿತಿ ಇದೆ. ಹೊಸಕೋಟೆ, ದೇವನಹಳ್ಳಿ, ನೆಲಮಂಗಲ ತಾಲ್ಲೂಕುಗಳಿಗೆ ಹೋದರೂ 1000 ಅಡಿಗಳ ಆಳದಿಂದ ನೀರನ್ನು ಮೇಲತ್ತಬೇಕು. ಅದೇ ರೀತಿ ಕನಕಪುರ, ಮಾಗಡಿ ಮುಂತಾದ ಕಡೆಗಳಲ್ಲಿ 1000 ಅಡಿಗಳ ಆಳದಿಂದ ನೀರನ್ನು ಮೇಲತ್ತಬೇಕು. ಚಿಕ್ಕಬಳ್ಳಾಪುರ, ಕೋಲಾರ ಮುಂತಾದ ಕಡೆಗಳಲ್ಲಿ 1000 ರಿಂದ 1200 ಅಡಿಗಳ ಆಳದಿಂದ ನೀರನ್ನು ತರುವಂತಹ ಪರಿಸ್ಥಿತಿ ಇದೆ. ರೇಷ್ಮೆ ಬೇಸಾಯ ಮಾಡಬೇಕಾದರೆ ಅವತ್ತಿನ ದಿವಸ ಮಳೆ ಬಂದು, ಮಳೆ ಆಧಾರಿತ ಬೇಸಾಯದ ರೀತಿಯಲ್ಲಿ ರಾಗಿಯನ್ನು ಬಿತ್ತನೆ ಮಾಡಿ ಕಳೆ ಕಿತ್ತ ಹಾಗೆ ರೇಷ್ಮೆ ಬೇಸಾಯವನ್ನು ಮಾಡುವಂತಹದ್ದಲ್ಲ. ರೇಷ್ಮೆ ಬೇಸಾಯವೆಂದರೆ ಆ ರೈತ ಮೊದಲು ಬಂಡವಾಳವನ್ನು ಹೂಡಬೇಕು. ಮೊದಲನೆಯದಾಗಿ ಹಿಪ್ಪನೇರಳೆ ಕಡ್ಡಿಯನ್ನು ಆತನ ಜಮೀನಿನಲ್ಲಿ ಬೆಳೆಯಬೇಕಾದರೆ, ಅದಕ್ಕೆ ಸಾಕಷ್ಟು ನೀರು ಬೇಕಾಗಿರುವುದರಿಂದ, ರೈತನು ಬೋರ್‌ವೆಲ್‌ಗೆ ಬಂಡವಾಳವನ್ನು ಹೂಡಿ, ಆಳದಿಂದ ಬೋರ್‌ವೆಲ್‌ಗೆ ಪಂಪ್‌ಸೆಟ್ ಅಳವಡಿಸಿ ವಿದ್ಯುತ್ ಸಂಪರ್ಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಲ್ಪಿಸಲು ಸುಮಾರು ಮೂರ್ನಾಲ್ಕು ಲಕ್ಷ ರೂಪಾಯಿಯಷ್ಟು ಬಂಡವಾಳವನ್ನು ವಿನಿಯೋಗಿಸಬೇಕಾಗುತ್ತದೆ. Drip Irrigation ಮಾಡಬೇಕಾದರೆ, pipe ಇತ್ಯಾದಿಗಳೆಲ್ಲಾ ಸೇರಿ ಒಟ್ಟಾರೆಯಾಗಿ 4 ರಿಂದ 5 ಲಕ್ಷ ರೂಪಾಯಿಗಳಷ್ಟು ಬಂಡವಾಳವನ್ನು ಹೂಡಲೇಬೇಕು. Silkworm rearing house ಹುಳುವನ್ನು ಸಾಕುವುದಕ್ಕೆ ಒಂದು ಮನೆಯನ್ನು ಕಟ್ಟಲೇಬೇಕಾಗುತ್ತದೆ. ಒಂದು ಎಕರೆ ಅಥವಾ ಎರಡು ಎಕರೆ ಜಮೀನುಗಳಿರಲಿ, ರೇಷ್ಮೆ ಬೇಸಾಯವನ್ನು ಮಾಡುವಂತಹ ವಿಚಾರದಲ್ಲಿ 7 ರಿಂದ 8 ಲಕ್ಷ ರೂಪಾಯಿಗಳಿಲ್ಲದೇ ರೇಷ್ಮೆ ಬೇಸಾಯವನ್ನು ಮಾಡುವುದಕ್ಕೆ ರೈತನಿಗೆ ಸಾಧ್ಯವೇ ಇಲ್ಲದಿರುವಂತಹ ಪರಿಸ್ಥಿತಿ ಉದ್ಭವವಾಗಿದೆ. ಒಬ್ಬ ರೈತನು 2 ರಿಂದ 3 ಎಕರೆಯಲ್ಲಿ ರೇಷ್ಮೆ ಬೇಸಾಯ ಮಾಡುತ್ತೇನೆಂದರೆ ಕನಿಷ್ಟ 8 ರಿಂದ 10 ಲಕ್ಷ ರೂಪಾಯಿಗಳಷ್ಟು ಬಂಡಾವಳವನ್ನು ಹಾಕಲೇಬೇಕಾಗುತ್ತದೆ. ಅಂತರ್ಜಲ ಕುಸಿತದಿಂದ ಬೋರ್‌ವೆಲ್‌ಗಳು ವಿಫಲವಾದರೆ ಒಟ್ಟಾರೆ ಅವನ ರೇಷ್ಮೆ ಬೆಳೆಯೇ ಹಾಳಾಗುತ್ತದೆ. ಇತ್ತೀಚಿನ ಎರಡು ವರ್ಷಗಳಲ್ಲಿ ರೇಷ್ಮೆ ಬೆಳೆಯು ರೈತರಿಗೆ ಆಶಾದಾಯಕವಾದಂತಹ ಸಂದರ್ಭವನ್ನು ನಿರ್ಮಾಣ ಮಾಡಿತು. ಇವತ್ತಿನ ದಿವಸ ಅಧಿಕಾರದಲ್ಲಿರುವ ಕೇಂದ್ರ ಸರ್ಕಾರ ರೇಷ್ಮೆ ಬೆಳೆಯ ಮೇಲೆ ಇದ್ದಂತಹ ಶೇಕಡಾ 35 ರಷ್ಟಿದ್ದ Excise Duty ನ್ನು ಕೇವಲ ಶೇಕಡಾ 10ರಷ್ಟು ಇಳಿಸಿದರೂ ಕೂಡ ರೇಷ್ಮೆ ಗೂಡಿನ ಬೆಲೆ ಕಡಿಮೆಯಾಗಿರಲಿಲ್ಲ. ಉತ್ತಮವಾದ Bivoltine ರೇಷ್ಮೆ ಗೂಡಿನ ಬೆಲೆ 1000 ದಿಂದ 1500 ಮೀಟರ್‌ನ ರೇಷ್ಮೆ ಎಳೆ ಬರುತ್ತದೆ. ಕಳೆದ ಬಾರಿಯ ಜುಲೈ ತಿಂಗಳ ಸಂದರ್ಭದಲ್ಲಿ ರೇಷ್ಮೆ ಎಳೆಯ ದರ ಪ್ರತಿ ಕೆ.ಜಿ.ಗೆ 550 ರಿಂದ 600 ರೂಪಾಯಿಗಳಿತ್ತು. ಕೆ.ಜಿ., ರೇಷ್ಮೆ ಗೂಡಿಗೆ Cross Breed (CB) 400 ರೂಪಾಯಿಗಳಿತ್ತು. ಆದರೆ ಇವತ್ತಿನ ದಿವಸ ಪ್ರತಿ ಕೆ.ಜಿ.ಗೆ 200 ರಿಂದ 220 ರೂಪಾಯಿಗಳ ದರ ಇದೆ. Bivoltine ರೇಷ್ಮೆ ಗೂಡಿನ ಬೆಲೆ ಪ್ರತಿ ಕೆ.ಜಿ.ಗೆ 300 ರಿಂದ 325 ರೂಪಾಯಿಗಳಿವೆ. ಅಂದರೆ ರೇಷ್ಮೆ ಗೂಡಿನ ಬೆಲೆ ಶೇಕಡಾ 100 ರೂಪಾಯಿಗಳು ಇದ್ದಂತಹದ್ದು, ಶೇಕಡಾ 50 ರಷ್ಟು ಬೆಲೆ ಕುಸಿತ ಕಂಡಿದೆ. ರೇಷ್ಮೆ ಉತ್ಪಾದನೆ ಜಾಸ್ತಿಯಾಗಿದೆ. ರೇಷ್ಮೆ ಉತ್ಪಾದನೆ ಏಕೆ ಜಾಸ್ತಿಯಾಗಿದೆ ಎಂದರೆ, ಕಳೆದ ಬಾರಿ ರಾಜ್ಯಾದ್ಯಂತ ಉತ್ತಮವಾದಂತಹ ಮಳೆಯಾಯಿತು. ಇದರಿಂದ ಅಂತರ್ಜಲ ಹೆಚ್ಚಿತು. ಕಳೆದ ಎರಡು-ಮೂರು ವರ್ಷಗಳ ಹಿಂದೆ ರೇಷ್ಮೆ ಬೆಳೆಗೆ ಬಹಳ ಉತ್ತಮವಾದಂತಹ ಬೆಲೆ ಸಿಕ್ಕಿತ್ತು. ಇದರಿಂದಾಗಿ ರೈತನು ಬೆಂಗಳೂರಿಗೆ ವಲಸೆ ಬರುವಂತಹದ್ದು ಕಡಿಮೆಯಾಗಿತ್ತು.

ಬೆಂಗಳೂರಿನ ಸುತ್ತಮುತ್ತ ಇರುವಂತಹ ಈ ಪ್ರದೇಶಗಳಲ್ಲಿ ನಿಶ್ಚಿತವಾದಂತಹ ವರಮಾನ ಇಲ್ಲದೆ ಇರುವಂತಹ ಯಾವುದೇ ಬೃಹತ್ ನೀರಾವರಿ ಯೋಜನೆಗಳು ನಮ್ಮಲ್ಲಿಲ್ಲ. ಕೋಲಾರ, ರಾಮನಗರ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲೂ ಕೂಡ ಬೃಹತ್ ನೀರಾವರಿ ಯೋಜನೆಗಳು ಇಲ್ಲದೆ ಇರುವಂತಹ ಹಿನ್ನೆಲೆಯಲ್ಲಿ ರೈತನ ಬದುಕನ್ನು ಕಟ್ಟಿಕೊಡುವಂತಹ ಉದ್ದಿಮೆ ಯಾವುದಾದರೂ ಇದೆಯೆಂದರೆ, ಅದು ರೇಷ್ಮೆ ಉದ್ದಿಮೆ ಎನ್ನಬಹುದು. ಇದನ್ನೇ ರೈತ ನಂಬುವಂತಹದ್ದು ಮತ್ತು ಆತನಿಗೆ ಆಸರೆ ಆಗುವಂತಹದ್ದು. ರೇಷ್ಮೆ ಉದ್ದಿಮೆಯನ್ನು ರೈತರು ನಂಬಿಕೊಂಡಿದ್ದು, ಅದರ ಮೇಲೆ 8 ರಿಂದ 10 ಲಕ್ಷ ರೂಪಾಯಿಗಳ ಬಂಡವಾಳವನ್ನು ಸಹ ಹಾಕಿದರು. ಎರಡು ವರ್ಷಗಳ ಕಾಲ ರೈತನಿಗೆ ಒಳ್ಳೆಯ ದರ ಕೂಡ ಸಿಕ್ಕಿತು. ರೈತನಿಗೆ ಒಳ್ಳೆಯ ದರಗಳು ಸಿಕ್ಕಿದಾಗಲೆಲ್ಲಾ ನಮ್ಮ ಅಧಿಕಾರಿಗಳು ಹೆಚ್ಚೆಚ್ಚು ರೇಷ್ಮೆಯನ್ನು ಬೆಳೆಯಿರಿ ಎಂದು ಹೇಳಿದರು. ಹಾಗೆಯೇ ರೈತರು ರೇಷ್ಮೆಯನ್ನು ಬೆಳೆದರು. ಆ ಅಧಿಕಾರಿಗಳು ಹೇಳಿದ್ದು ತಪ್ಪಲ್ಲ. ಏಕೆಂದರೆ ಬೇರೆ ಉತ್ಪನ್ನಗಳನ್ನು ಅತಿ ಹೆಚ್ಚು ಬೆಳೆದಾಗ ಬೇಡಿಕೆಗೆ ಹೆಚ್ಚು ಉತ್ಪನ್ನ ಬಂದಂತಹ ಸಂದರ್ಭದಲ್ಲಿ ಬೆಳೆ ಕುಸಿತವಾಗುವಂತಹದ್ದು ಸರ್ವೆಸಾಮಾನ್ಯವಾಗಿದೆ. ಆದರೆ ಒಂದು ವಿಚಾರವೇನೆಂದರೆ ದೇಶೀಯ ಮಾರುಕಟ್ಟೆಗಳಲ್ಲಿ 30 ರಿಂದ 32 ಸಾವಿರ ಟನ್ ರೇಷ್ಮೆ ನೂಲಿನ ಬೇಡಿಕೆ ಇದೆ. ಮೆಟ್ರಿಕ್ ಟನ್‌ನಷ್ಟು ರೇಷ್ಮೆ ನೂಲು ನಮಗೆ  ಬೇಕಾಗುತ್ತದೆ. ಬನಾರಸ್ ಇರಬಹುದು, ಸೇಲಂ ಇರಬಹುದು, ರೇಷ್ಮೆಯ ಎಳೆಯನ್ನು ನಂಬಿಕೊಂಡು ಇವತ್ತಿನ ದಿವಸ ಸೀರೆಗಳು ಮತ್ತು ಇನ್ನಿತರ ಯಾವುದೇ ರೀತಿಯ ವಸ್ತ್ರಗಳನ್ನು ತಯಾರು ಮಾಡುತ್ತಾರೆ.

ಪ್ರಪಂಚದಲ್ಲಿನ ರೇಷ್ಮೆಯ export ಬಗ್ಗೆ ನಾನು ಮಾತನಾಡುತ್ತಿಲ್ಲ. ನಾನು ಹೇಳುತ್ತಿರುವುದು, ಒಟ್ಟಾರೆಯಾಗಿ ನಮಗೆ 30 ರಿಂದ 32 ಸಾವಿರ ಟನ್‌ನಷ್ಟು ಅಂತರಿಕ ಬೇಡಿಕೆ ಇದೆ. ನಾವು ಉತ್ಪಾದನೆ ಮಾಡುವಂತಹದ್ದು ಮತ್ತು import ಮಾಡಿಕೊಂಡಿರುವಂತಹ ಪ್ರಮಾಣವನ್ನು ಗಮನಿಸಿದಾಗ 2017-18ನೇ ಸಾಲಿನಲ್ಲಿ 3530 ಮೆಟ್ರಿಕ್ ಟನ್‌ನಷ್ಟು import ಮಾಡಿಕೊಂಡಿದ್ದೇವೆ. 2016-17ನೇ ಸಾಲಿನಲ್ಲಿ 3435 ಮೆಟ್ರಿಕ್ ಟನ್‌ನಷ್ಟು ರೇಷ್ಮೆ ನೂಲನ್ನು ನಾವು ಉತ್ಪಾದನೆ ಮಾಡಿಕೊಂಡಿದ್ದೇವೆ. ಆದರೆ ಆಂತರಿಕ ಬೇಡಿಕೆ ಇರುವಂತಹದ್ದು; ನಾವು ರೇಷ್ಮೆ ನೂಲನ್ನು ಉತ್ಪಾದನೆ ಮಾಡುವಂತಹದ್ದು 22000 ಮೆಟ್ರಿಕ್ ಟನ್‌ಗಳಷ್ಟು. ಹೀಗಾಗಿ ಇನ್ನು 8 ರಿಂದ 10 ಸಾವಿರ ಮೆಟ್ರಿಕ್ ಟನ್‌ಗಳಷ್ಟು ರೇಷ್ಮೆ ಬೇಕಾಗುತ್ತದೆ. ಆದರೆ ಒಂದು ಕೆ.ಜಿ., ಚೈನಾ ರೇಷ್ಮೆಗೆ ನಾಲ್ಕರಿಂದ ನಾಲ್ಕೂವರೆ ಸಾವಿರ ಬೆಲೆ ಇದೆ. Cottage industry Filature ನಲ್ಲಿ ಉತ್ಪಾದನೆ ಮಾಡುವ ರೇಷ್ಮೆಗೆ ಇರುವಂತಹ ಪ್ರಸ್ತುತ ಬೆಲೆ 2600 ರಿಂದ 2700 ರೂಪಾಯಿಗಳಿವೆ.

ಗುಣಮಟ್ಟದ ರೇಷ್ಮೆಯನ್ನು ನಮ್ಮಲ್ಲಿ ಉತ್ಪಾದನೆ ಮಾಡುತ್ತಿಲ್ಲ. ಗುಣಮಟ್ಟದ ರೇಷ್ಮೆಯನ್ನು ಉತ್ಪಾದನೆ ಮಾಡಬೇಕಾದರೆ ತಂತ್ರಜ್ಞಾನವನ್ನು ಅಭಿವೃದ್ಧಿ ಮಾಡಿಕೊಳ್ಳಬೇಕು. ತಂತ್ರಜ್ಞಾನವನ್ನು ಅಭಿವೃದ್ಧಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳಬೇಕಾದರೆ ಈಗ ಇರುವಂತಹ Cottage industries ನಲ್ಲಿ Filatures, Multi-end Units ಗಳಿಂದ ನಾವು ರೇಷ್ಮೆ ನೂಲನ್ನು ತೆಗೆಯುತ್ತಿದ್ದೇವೆ. ಇವತ್ತಿನ ದಿವಸ ನಾವು ತೆಗೆಯುವಂತಹ Cross Breed (CB) ನಿಂದ ಅತಿ ಹೆಚ್ಚು ಉತ್ಪಾದನೆ ಮಾಡುತ್ತಿರುವಂತಹದ್ದು ಸಿ.ಬಿ., ಗೂಡಿನಿಂದ 600 ರಿಂದ 800 ಮೀಟರ್‌ಗಳಷ್ಟೆ ನಮಗೆ ರೇಷ್ಮೆ ಎಳೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನ ದಿವಸ ಕೋಲಾರ, ಶಿಡ್ಲಘಟ್ಟ, ರಾಮನಗರ, ಚನ್ನಪಟ್ಟಣದಲ್ಲೂ Automatic Reeling Machine (A.R.M.,) ಗಳನ್ನು ಅಳವಡಿಸಿ ರೇಷ್ಮೆಯನ್ನು ಉತ್ಪಾದನೆ ಮಾಡಲಾಗುತ್ತದೆ. ಆದರೆ ರೇಷ್ಮೆ ನೂಲಿಗೆ ಬೇಕಾಗಿರುವಂತಹದ್ದು, ಈ ಸಿ.ಬಿ., ತಡೆಯವುದಿಲ್ಲ. ಸಿ.ಬಿ., ಯಲ್ಲಿ ರೇಷ್ಮೆ ನೂಲನ್ನು ಮಾಡುವುದಕ್ಕೆ ಸಾಧ್ಯವಿಲ್ಲ. Bivoltine ಅನ್ನು ಹಾಕಬೇಕಾಗುತ್ತದೆ. Bivoltine ಗೂಡು strength ಇದ್ದು, ಅದರಲ್ಲಿ ಎಳೆ ಜಾಸ್ತಿ ಇರುತ್ತದೆ. A.R.M.,ಗಳಿಂದ ಉತ್ಪಾದನೆಯಾಗುವಂತಹ ರೇಷ್ಮೆ ನೂಲಿನ ಬೆಲೆ ಕೆ.ಜಿ.ಗೆ 4000 ರೂಪಾಯಿಗಳಿವೆ. ಚೈನಾ ರೇಷ್ಮೆ ಕೆ.ಜಿ.ಗೆ 4500 ರೂಪಾಯಿಗಳಿದ್ದರೆ, ನಮ್ಮಲ್ಲಿ ಉತ್ಪಾದನೆಯಾಗುವಂತಹ A.R.M.,ಗಳ ಬೆಲೆ ಚೈನಾ ರೇಷ್ಮೆಯ ಗುಣಮಟ್ಟಕ್ಕೆ ಸಮವಾಗಿದ್ದು, ಯಾವುದೇ ರೀತಿಯಲ್ಲೂ ಕಡಿಮೆ ಇಲ್ಲದೆ, ಅವರ ಜೊತೆಯಲ್ಲಿ ಪೈಪೋಟಿ ಮಾಡುವಂತಹ ರೀತಿಯಲ್ಲಿ 4000 ರೂಪಾಯಿ ಬೆಲೆಯನ್ನು ಗಿಟ್ಟಿಸುತ್ತಿವೆ. ನಮ್ಮಲ್ಲಿ ಹಳೆಯ ಸಂಪ್ರದಾಯಿಕವಾಗಿ Filature ಗಳಿಂದ 2700 ಮೆಟ್ರಿಕ್ ಟನ್‌ಗಳಷ್ಟು ರೇಷ್ಮೆ ಉತ್ಪಾದನೆ ಮಾಡುವಂತಹದ್ದು. ರೇಷ್ಮೆಯಲ್ಲಿ ಗುಣಮಟ್ಟವನ್ನು ನೀಡಿದರೆ automatic ಆಗಿ ಉತ್ಪನ್ನಕ್ಕೆ ಬೆಲೆ ಸಿಗುತ್ತದೆ. ನಾವು ಚೈನಾ ದೇಶದವರ ಜೊತೆ ಪೈಪೋಟಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. A.R.M.,ಗಳನ್ನು ಅಳವಡಿಸಿಕೊಳ್ಳುವುದಕ್ಕೆ ಶೇಕಡ 90 ರಷ್ಟು ಸಹಾಯಧನವನ್ನು ನೀಡಬೇಕಾಗುತ್ತದೆ. ಏಕೆಂದರೆ 'A.R.M., 800 End' ಎಂದು ಬಂದಿದೆ. 'A.R.M., 800 End' ಬದಲು, ಇವತ್ತಿನ ದಿವಸ ತಂತ್ರಜ್ಞಾನವನ್ನು ಸರಳೀಕರಿಸಿ 100 ರಿಂದ 200 End ಗೆ ಅಳವಡಿಸಿದ್ದೇ ಆದರೆ ಸಾಮಾನ್ಯ ಒಬ್ಬ Reeler ಕೂಡ ಅದನ್ನು ತನ್ನ ಉದ್ದಿಮೆಯಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ರೇಷ್ಮೆ ಬೆಳೆಯಲ್ಲಿ 3 ವಿಧಾನಗಳಿದ್ದು ಅವುಗಳೆಂದರೆ, Farmers, Reelers and weavers. ಇವತ್ತಿನ ದಿವಸ ರೈತರು ಜಾಸ್ತಿಯಾಗುತ್ತಿದ್ದಾರೆ. ಏಕೆಂದರೆ ರೇಷ್ಮೆಗೆ ಒಂದು ಉತ್ತಮವಾದಂತಹ ಬೆಲೆ ಸಿಗುತ್ತದೆ ಎಂಬ ಭರವಸೆಯಡಿಯಲ್ಲಿ ರೈತ ರೇಷ್ಮೆ ಬೆಳೆಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಕರ್ಷಿತನಾಗುತ್ತಿದ್ದಾನೆ. ಆದರೆ Reelers ಹೆಚ್ಚುತ್ತಿಲ್ಲ. Reelers ದಿನೇ ದಿನೇ ಬಹಳ ಸಂಕಷ್ಟದಲ್ಲಿದ್ದಾರೆ. Reelers ರೇಷ್ಮೆ ಎಳೆಯನ್ನು ತೆಗೆಯುವಂತಹ ಕಸಬಿಗೆ ಯಾರು ಹೊಸದಾಗಿ ಸೇರ್ಪಡೆಯಾಗುತ್ತಿಲ್ಲ. ಅವರಿಗೆ ಸೂಕ್ತವಾದಂತಹ ತರಬೇತಿ ಮತ್ತು ತಂತ್ರಜ್ಞಾನ ಇಲ್ಲ ಹಾಗೂ ಬಂಡವಾಳ ಇಲ್ಲ. ಅವರು Cottage Industry Filature ಮೇಲೆ ಅವಲಂಬಿತರಾಗಿದ್ದಾರೆ. Multi-end ಕೂಡ success ಆಗುತ್ತಿಲ್ಲ. A.R.M., ಗಳನ್ನು ಅಳವಡಿಸಿಕೊಂಡು, Bivoltine ಉತ್ಪಾದನೆ ಮಾಡಿದರೆ ಮಾತ್ರ ರೇಷ್ಮೆ ಉದ್ದಿಮೆ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಒಂದು ಲಕ್ಷದ ಮೂವತ್ತು ಸಾವಿರಕ್ಕೂ ಹೆಚ್ಚು ಕುಟುಂಬಗಳು ರೇಷ್ಮೆ ಉದ್ದಿಮೆಯ ಮೇಲೆ ಅವಲಂಬಿತರಾಗಿರುವಂತಹ ಸಂದರ್ಭದಲ್ಲಿ ಯಾವಾಗ ರೇಷ್ಮೆ ಬೆಲೆ 200 ರೂಪಾಯಿಗಳಿಗೆ ಬಂದಿದೆಯೋ, ಇವತ್ತಿನ ದಿವಸ ರಾಮನಗರ ಜಿಲ್ಲೆಯಲ್ಲಿ ಅನೇಕ ಚಳುವಳಿಗಳು ಈಗಾಗಲೇ ಪ್ರಾರಂಭವಾಗಿದೆ. ರೈತ ತಾನು ಬೆಳೆದಂತಹ ರೇಷ್ಮೆ ಗೂಡನ್ನು ತಂದು ರಸ್ತೆಗೆ ಸುರಿಯುವಂತಹ ಕೆಲಸವಾಗುತ್ತಿದೆ. ಈ ಆಷಾಢ ಮಾಸದ ಮಳೆಯ ವಾತಾವರಣದಿಂದ ಇನ್ನು ಮುಂದಿನ ದಿನಗಳಲ್ಲಿ ಇದರ ಬಗ್ಗೆ ತುಂಬಾ ಗಂಭೀರವಾದಂತಹ ಪರಿಸ್ಥಿತಿ ಉಂಟಾಗುತ್ತದೆ. 2015ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ರಚಿಸಿರುವಂತಹ ಬಸವರಾಜು ಅವರ ನೇತೃತ್ವದ ಸಮಿತಿಯು 2013ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, 2015ನೇ ಸಾಲಿನಲ್ಲಿ ಆ ಸಮಿತಿಯು ಇದರ ಬಗ್ಗೆ ಬಹಳ ವಿವರವಾಗಿ ವರದಿಯನ್ನು ನೀಡಿರುತ್ತದೆ. ಬಸವರಾಜು ಸಮಿತಿಯ ವರದಿಯು ಇಂದಿಗೂ ಕೂಡ ಅನುಷ್ಠಾನವಾಗಿಲ್ಲ. ರೇಷ್ಮೆ ಉದ್ದಿಮೆ ಮತ್ತು ರೇಷ್ಮೆಯನ್ನು ತಂಬಿಕೊಂಡಿರುವಂತಹ ರೈತ ಉಳಿಯಬೇಕೆಂದರೆ ಬಸವರಾಜು ಸಮಿತಿಯ ವರದಿಯನ್ನು ತುರ್ತಾಗಿ ಅಳವಡಿಸಬೇಕಾಗುತ್ತದೆ. ಈ ಸಮಿತಿಯ ವರದಿಯನ್ನು ಅಳವಡಿಸಲಿಲ್ಲವೆಂದರೆ ರೇಷ್ಮೆ ಬೆಳೆಯನ್ನು ನಂಬಿರುವಂತಹ ಲಕ್ಷಾಂತರ ರೈತ ಕುಟುಂಬಗಳು ವಿಶೇಷವಾಗಿ Weavers, Reerlers and Farmers ಈ ಎಲ್ಲಾ ವರ್ಗಗಳು ಕೂಡ ಬಹಳ ಸಂಕಷ್ಟಕ್ಕೆ ಒಳಗಾಗುತ್ತವೆ.

(ಮುಂದು)

**(276)12/07/2018/ಎಸ್‌ಪಿಆರ್/ಜಿಆರ್/3:50**

**ಶ್ರೀ ಎಸ್.ರವಿ(ಮುಂದು):-**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರಿಂದಾಗಿ ಎಲ್ಲಿಯೋ ಒಂದು ಕಡೆ ರಾಜ್ಯದ 8-10 ಜಿಲ್ಲೆಗಳಲ್ಲಿ ಆರ್ಥಿಕ ಅಸಮತೋಲನ ಕಾಡುತ್ತದೆ. ಸದರಿ ಜಿಲ್ಲೆಗಳಲ್ಲಿ ಆರ್ಥಿಕ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಡುತ್ತದೆ. ರಾಜ್ಯದ ಕೆಲವು ಜಿಲ್ಲೆಗಳು ಸಂಪೂರ್ಣವಾಗಿ ರೇಷ್ಮೇ ಉದ್ಯಮವನ್ನು ಅವಲಂಬಿಸಿವೆ. ರೇಷ್ಮೆ ದಿಢೀರನೆ ಈ ಮಟ್ಟಕ್ಕೆ ಕುಸಿದು ಬಿದ್ದ ಸಂದರ್ಭದಲ್ಲಿ ಬಹಳಷ್ಟು ಸಂಕಷ್ಟವುಂಟಾಗುತ್ತದೆ. ಅದರಲ್ಲೂ ವಿಶೇಷವಾಗಿ ರಾಮನಗರ ಜಿಲ್ಲೆಗೆ ನಷ್ಟವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿರವರು ರಾಮನಗರ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದಾರೆ. ಏಷಿಯಾ ಖಂಡದಲ್ಲಿಯೇ ಅತೀ ದೊಡ್ಡ ರೇಷ್ಮೆ ಗೂಡಿನ ಮಾರುಕಟ್ಟೆ ರಾಮನಗರ ಜಿಲ್ಲೆಯಲ್ಲಿದೆ. ದೇಶದಲ್ಲಿಯೇ ಅತೀ ಹೆಚ್ಚು ರೇಷ್ಮೆ ಗೂಡನ್ನು ಕನಕಪುರ ತಾಲ್ಲೂಕು ಅಥವಾ ಹಳೆಯ ಮೈಸೂರು ಭಾಗದಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಗದಗ, ಹಾವೇರಿ ಭಾಗಗಳಲ್ಲಿಯೂ ಸಹ ಹೊಸದಾಗಿ ರೇಷ್ಮೆ ಗೂಡನ್ನು ಉತ್ಪಾದನೆ ಮಾಡಲಾಗುತ್ತಿದೆ. ಹೀಗಾಗಿ ಈ ಭಾಗದಲ್ಲಿ A.R.M.ಗಳನ್ನು ಸ್ಥಾಪಿಸಬೇಕಾಗುತ್ತದೆ. ಇವತ್ತಿನ ದಿವಸ ಗದಗ, ಹಾವೇರಿ, ದಾವಣಗೆರೆ ಈ ಭಾಗಗಳಿಂದ ರಾಮನಗರಕ್ಕೆ Bivoltine ಗೂಡುಗಳನ್ನು ತರಲಾಗುತ್ತಿದೆ. ಅದರ ಬದಲು ಆ ಭಾಗಗಳಲ್ಲಿಯೇ ಎ.ಆರ್.ಎಂ.ಗಳನ್ನು ಸ್ಥಾಪಿಸಿದಾಗ, ಅಲ್ಲಿನ ರೈತರು ಬೆಳೆಯುವ ಬೆಳೆಗಳಿಗೆ ಸಾಗಣಿಕೆಯ ವೆಚ್ಚ ಉಳಿಯುತ್ತದೆ. Reelersಗೆ ಲಾಭ ಸಿಗುತ್ತದೆ. ಅಲ್ಲಿನ Reelersಗೆ ಉತ್ತೇಜನ ಹಾಗೂ ಪ್ರೋತ್ಸಾಹಗಳನ್ನು ನೀಡಬೇಕಾಗುತ್ತದೆ. ಇವತ್ತಿನ ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ. ಇದು ಬಹಳ ಗಂಭೀರವಾದ ಸಂದರ್ಭವಾಗಿದ್ದು, ಇಂತಹ ಸಮಯದಲ್ಲಿ ರೇಷ್ಮೆ ಬೆಳೆಗಾರರ ನೆರವಿಗೆ ಸರ್ಕಾರ ತೀರ ತುರ್ತಾಗಿ ಧಾವಿಸಬೇಕಾದ ಅವಶ್ಯಕತೆ ಇದೆ. ಬಸವರಾಜ ಸಮಿತಿಯು ದಿನಾಂಕ 02/10/2015 ರಂದು ನೀಡಿದ ವರದಿಯಲ್ಲಿ, ಒಂದು ಕ್ರಾಸ್-ಬ್ರೀಡ್‌ಗೆ 280 ರೂಪಾಯಿಗಳ ಹಾಗೂ Bivoltineಗೆ 325 ರೂಪಾಯಿಗಳ ಪ್ರೋತ್ಸಾಹ ಧನವನ್ನು ನಾಲ್ಕು ವರ್ಷಗಳ ಹಿಂದೆ ನಿಗದಿಪಡಿಸಲಾಗಿದೆ. ಈ ಧನವನ್ನು ತುರ್ತಾಗಿ ಹೆಚ್ಚಿಗೆ ಮಾಡಿ, ಕನಿಷ್ಠ ಪ್ರತಿ ಕ್ರಾಸ್-ಬ್ರೀಡ್‌ಗೆ 300 ರೂಪಾಯಿ ಹಾಗೂ Bivoltineಗೆ 375 ರೂಪಾಯಿಗಳಿಗೆ ನೀಡಿ. ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ 30-50 ರೂಪಾಯಿಗಳ ರಕ್ಷಣಾತ್ಮಕ ಧನವನ್ನು ಕೊಟ್ಟಿತ್ತು. ರಕ್ಷಣಾತ್ಮಕ ಧನ ಅಥವಾ ಕನಿಷ್ಠ ಬೆಂಬಲ ಬೆಲೆ ಎಂಬುದಾಗಿ ಘೋಷಣೆಯನ್ನು ಮಾಡಿ ತುರ್ತಾಗಿ ರೈತರ ರಕ್ಷಣೆಗೆ ಸರ್ಕಾರ ಬರಲಿಲ್ಲವೆಂದರೆ ರೈತರಿಗೆ ತುಂಬಾ ಅಘಾತವುಂಟಾಗುತ್ತದೆ. ಮುಂದಿನ ದಿನಗಳಲ್ಲಿ ಚಳುವಳಿಯ ತೀವ್ರತೆ ಹೆಚ್ಚುತ್ತದೆ. ಏಕೆಂದರೆ ನಮ್ಮ ಊರಿನವರೇ ರಾಜ್ಯದ ಮುಖ್ಯಮಂತ್ರಿಯಾಗಿರುವುದರಿಂದ, ಈಗಿನ ಆಯವ್ಯಯದಲ್ಲಿ ಏನಾದರೂ ಘೋಷಣೆಯಾಗಿ, ಅದರಿಂದ ತಮಗೆ ಏನಾದರೂ ಉಪಯೋಗವಾಗುತ್ತದೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ಸಂಕಷ್ಟ ಅರ್ಥವಾಗುತ್ತದೆ, ಅವರು ಖಚಿತವಾಗಿ ನಮ್ಮ ನೆರವಿಗೆ ಬರುತ್ತಾರೆ ಎಂದು ಜನ ನಂಬಿಕೊಂಡಿದ್ದಾರೆ

ಹಾಗೂ ಭರವಸೆಯನ್ನಿಟ್ಟುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಜನರು ಈಗಿನ ಆಯವ್ಯಯದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ನೀಡುವ ಉತ್ತರವನ್ನೇ ಕಾಯುತ್ತಿದ್ದಾರೆ. ಇದು ಸತ್ಯಾಂಶವಾಗಿದೆ. ಈಗಾಗಲೇ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ನೀಡಲಾಗಿದೆ ಹಾಗೂ ಜನರು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ತುರ್ತಾಗಿ ರೇಷ್ಮೆ ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟಕ್ಕೆ ಸ್ಪಂದಿಸಿ, ಪ್ರತಿಯೊಂದು ಕ್ರಾಸ್-ಬ್ರೀಡ್‌ಗೆ 300 ರೂಪಾಯಿಗಳು ಹಾಗೂ Bivoltineಗಳಿಗೆ 375 ರೂಪಾಯಿಗಳಷ್ಟು ಕನಿಷ್ಠ ಬೆಂಬಲ ಬೆಲೆ ಅಥವಾ ರಕ್ಷಣಾತ್ಮಕ ಬೆಲೆಯನ್ನು ಘೋಷಣೆಯನ್ನು ಮಾಡಬೇಕು. ಇದರ ಜೊತೆಗೆ ಬಸವರಾಜು ಸಮಿತಿಯ ವರದಿಯನ್ನು ಯಥಾವತ್ತಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಜರೂರು ಕ್ರಮವನ್ನು ಕೈಗೊಂಡು ರೇಷ್ಮೆ ಉದ್ಯಮವನ್ನು ರಕ್ಷಣೆ ಮಾಡುವ ದಿಸೆಯಲ್ಲಿ ಸರ್ಕಾರ ತನ್ನ ಜವಾಬ್ದಾರಿಯನ್ನು ಎತ್ತಿಹಿಡಿಯಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಹಳೆಯ ಮೈಸೂರು ಭಾಗದಲ್ಲಿ ಅತೀ ಹೆಚ್ಚು ಹಾಲನ್ನು ಉತ್ಪಾದನೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಕೆ.ಎಂ.ಎಫ್. ಅಡಿ ಒಟ್ಟು 14 ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಿಂದ ದಿನನಿತ್ಯ ಸುಮಾರು 85 ಲಕ್ಷ ಲೀಟರ್‌ಗಳಷ್ಟು ಹಾಲನ್ನು ಸಂಗ್ರಹಿಸಲಾಗುತ್ತಿದೆ. ರಾಜ್ಯದಲ್ಲಿ ಒಂದು ದಿನಕ್ಕೆ 85 ಲಕ್ಷ ಲೀಟರ್ ಹಾಲು ಸಂಗ್ರಹಣೆ ಆಗುತ್ತಿದ್ದರೆ, ಆ ಪೈಕಿ ಬಮೂಲ್‌ನಿಂದ ಸುಮಾರು 17 ಲಕ್ಷ ಲೀಟರ್‌ಗಳಷ್ಟು ಹಾಲು ಸಂಗ್ರಹಣೆ ಮಾಡಲಾಗುತ್ತಿದೆ. ಅದರಲ್ಲಿಯೂ ದಿನಾಂಕ 14/06/2018 ರಂದು ಒಂದೇ ದಿನದಲ್ಲಿ ಗರಿಷ್ಠ 18,21,136 ಲೀಟರ್‌ಗಳಷ್ಟು ಹಾಲನ್ನು ಸಂಗ್ರಹಿಸಲಾಗಿದೆ. ಇದು ಇತಿಹಾಸದ ದಾಖಲೆಯಾಗಿದೆ. ನಮ್ಮಲ್ಲಿ 800-1000 ಅಡಿಗಳಷ್ಟು ಅಂತರ್ಜಲ ಇದೆ. ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಕನಕಪುರ, ರಾಮನಗರ ಈ ಭಾಗಗಳಲ್ಲಿ ಅಂತರ್ಜಲ ಇದೆ. ರೈತರು ಅದರಲ್ಲೂ ವಿಶೇಷವಾಗಿ ಮಹಿಳೆಯರು ಹೈನುಗಾರಿಕೆಯ ಮೇಲೆ ಅವಲಂಬಿತರಾಗಿದ್ದಾರೆ. ನಾನು ಮಾನ್ಯ ಯಡಿಯೂರಪ್ಪನವರನ್ನು ಅಭಿನಂದಿಸುತ್ತೇನೆ. ಈ ಹಿಂದೆ ಅಧಿಕಾರದಲ್ಲಿದ್ದ ಬಿ.ಜೆ.ಪಿ., ಸರ್ಕಾರ ಎರಡು ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡುವುದನ್ನು ಪ್ರಾರಂಭ ಮಾಡಿದರು. ನಾವುಗಳು ಗ್ರಾಮೀಣ ಪ್ರದೇಶಗಳಿಗೆ ಹಾಲಿನ ಡೈರಿಗಳ ಉದ್ಘಾಟನೆಗಾಗಿ ಭೇಟಿ ನೀಡಿದಾಗ, ಯಡಿಯೂರಪ್ಪನವರು ಘೋಷಿಸಿದ ಪ್ರೋತ್ಸಾಹ ಧನ ಇನ್ನೂ ಬಂದಿಲ್ಲ ಎಂಬುದಾಗಿ ಗ್ರಾಮಸ್ಥರು ನಮ್ಮನ್ನು ಕೇಳುತ್ತಿದ್ದರು. ಒಳ್ಳೆಯ ಗುಣಕ್ಕೆ ಮತ್ಸರ ಇರಬಾರದು. ಒಳ್ಳೆಯ ಕೆಲಸವನ್ನು ಯಾರೂ ಮಾಡಿದರೂ ಸಹ ಅದನ್ನು ನಾವು ಹೇಳಬೇಕಾಗುತ್ತದೆ. ಗ್ರಾಮಸ್ಥರು ನಮಗೆ ದೂರವಾಣಿ ಕರೆಗಳನ್ನು ಮಾಡಿ ಯಡಿಯೂರಪ್ಪನವರು ಘೋಷಿಸಿದ ಪ್ರೋತ್ಸಾಹ ಧನ ಇನ್ನೂ ಬಂದಿಲ್ಲ ಎಂಬುದಾಗಿ ಹೇಳುತ್ತಿದ್ದರು. ಈ ವಿಚಾರದಲ್ಲಿ ನಾವೆಲ್ಲರೂ ಒತ್ತಡವನ್ನು ತಂದ ಹಿನ್ನೆಲೆಯಲ್ಲಿ ಮಾನ್ಯ

ಸಿದ್ಧರಾಮಯ್ಯನವರು ಪ್ರೋತ್ಸಾಹ ಧನವನ್ನು ಎರಡು ರೂಪಾಯಿಗಳಿಂದ ಐದು ರೂಪಾಯಿಗಳಿಗೆ ಏರಿಕೆ ಮಾಡುವ ಮೂಲಕ ರೈತರ ಪರವಾಗಿ ದೃಢವಾದ ನಿರ್ಧಾರವನ್ನು ತೆಗೆದುಕೊಂಡರು. ಹೈನುಗಾರಿಕೆಯನ್ನು ಹಲವಾರು ಕುಟುಂಬಗಳು ಅವಲಂಬಿಸಿವೆ. ಹೀಗಾಗಿ ಇದಕ್ಕೆ ಉತ್ತೇಜನವನ್ನು ನೀಡಿದ್ದರ ಹಿನ್ನೆಲೆಯಲ್ಲಿ ಹಾಲು ಉತ್ಪಾದನೆ ಜಾಸ್ತಿಯಾಯಿತು. ಹೀಗಾಗಿ ಇವುಗಳಿಗೆ ಮಾರುಕಟ್ಟೆಯನ್ನು ಒದಗಿಸಲಾಗದೇ, ಒಕ್ಕೂಟಗಳು ವಾರದಲ್ಲಿ ಎರಡು ದಿನಗಳು ರಜೆಯನ್ನು ಘೋಷಿಸುವ ಸಂದರ್ಭ ಬಂದೊದಗಿತು. ಆಗ ರಾಜ್ಯದಲ್ಲಿ 60 ಲಕ್ಷ ಲೀಟರ್ ಹಾಲಿಗೆ ಮಾರುಕಟ್ಟೆ ಇತ್ತು. ಸಂಗ್ರಹಣೆ ಮಾಡಿದ ಇನ್ನುಳಿದ ಹಾಲನ್ನು ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ವಾರಕ್ಕೆ ಎರಡು ದಿನಗಳ ರಜೆಯನ್ನು ಘೋಷಿಸಿದರೆ, ಮಾಹೆಯಾನ 8-10 ದಿನಗಳಾಯಿತು.

**ಸಭಾಪತಿಯವರು:-** ನಿಮ್ಮ ಭಾಷಣವನ್ನು ಯಾವಾಗ ಪೂರ್ಣಗೊಳಿಸುತ್ತೀರಿ?

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನು 5-10 ನಿಮಿಷಗಳಲ್ಲಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ನೀವೇ ನನ್ನ ಹೆಸರನ್ನು ಕರೆದು ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದೀರಿ. ಹೀಗಾಗಿ ನಾನು ತಮ್ಮ ಮಾತನ್ನು ಮನ್ನಿಸುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರದಲ್ಲಿನ ಒಟ್ಟು ಹಾಲು ಉತ್ಪಾದನೆಯ ಪ್ರಮಾಣವೆಷ್ಟು?

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ದಿನವೊಂದಕ್ಕೆ ಬಮೂಲ್‌ನ (Bengaluru Milk Union Limited) ಸಂಗ್ರಹಣಾ ಸಾಮರ್ಥ್ಯ ಸುಮಾರು 17 ಲಕ್ಷ ಲೀಟರ್. ಇಡೀ ರಾಜ್ಯದಲ್ಲಿ ಕೆ.ಎಂ.ಎಫ್.,ನ 14 ಒಕ್ಕೂಟಗಳ ವತಿಯಿಂದ ದಿನವೊಂದಕ್ಕೆ 84 ಲಕ್ಷ ಲೀಟರ್‌ನಷ್ಟು ಹಾಲನ್ನು ಸಂಗ್ರಹಣೆ ಮಾಡಲಾಗುತ್ತಿದೆ. ದಿನಾಂಕ 14/06/2018 ರಂದು 18,21,000 ಲೀಟರ್‌ನಷ್ಟು ಹಾಲನ್ನು ಒಂದೇ ದಿನ ಸಂಗ್ರಹಣೆ ಮಾಡಲಾಗಿದೆ. ಇದು ದಾಖಲೆಯಾಗಿದೆ. ರೈತರಿಗೆ ಐದು ರೂಪಾಯಿಗಳಷ್ಟು ಪ್ರೋತ್ಸಾಹ ಧನವನ್ನು ನೀಡಿದ್ದರಿಂದ ಹಾಲು ಉತ್ಪಾದನೆಯ ಸಾಮರ್ಥ್ಯ ಜಾಸ್ತಿಯಾಯಿತು. ಆಗ ಮಾನ್ಯ ಸಿದ್ಧರಾಮಯ್ಯನವರು ರೈತರ ನೆರವಿಗೆ ಧಾವಿಸಿ, ಕ್ಷೀರಧಾರೆ ಎನ್ನುವ ಯೋಜನೆಯನ್ನು ಜಾರಿಗೆ ತಂದರು. ಹೆಚ್ಚು ಉತ್ಪಾದನೆಗೊಂಡ ಹಾಲನ್ನು ಶಾಲಾ ಮಕ್ಕಳಿಗೆ ವಾರದ ಐದು ದಿನಗಳಲ್ಲಿ ಹಾಲು ಕೊಡುವ ಯೋಜನೆಯನ್ನು ಪ್ರಾರಂಭ ಮಾಡಿದರು. ಇದರಿಂದಾಗಿ ರೈತರಿಗೆ ನೆಮ್ಮದಿ ಸಿಕ್ಕಿತು. ಹಾಲು

ಒಕ್ಕೂಟದಲ್ಲಿ ಲೀಟರ್‌ವೊಂದಕ್ಕೆ 25 ರೂಪಾಯಿಗಳನ್ನು ನೀಡುತ್ತಿದ್ದರು. ಐದು ರೂಪಾಯಿಗಳ ಪ್ರೋತ್ಸಾಹ ಧನ ಸಿಗುತ್ತಿತ್ತು. ಇದರ ಜೊತೆಗೆ ಹಾಲಿನ fat ಮೇಲೆ ಹೆಚ್ಚಿನ ದುಡ್ಡನ್ನು ನೀಡುವಂತಹ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದಾಗಿ ಒಟ್ಟಾರೆಯಾಗಿ ಲೀಟರ್ ಹಾಲು ಒಂದಕ್ಕೆ 33–34 ರೂಪಾಯಿಗಳು ರೈತರಿಗೆ ದೊರೆಯುವಂತಾಯಿತು. ಇದರಿಂದಾಗಿ ನಮ್ಮ ಊರುಗಳಲ್ಲಿ ಹಸು ಕಟ್ಟದೇ ಇರುವವರೂ ಸಹ ಹೈನುಗಾರಿಕೆಯನ್ನು ಪ್ರಾರಂಭಿಸಿದರು. ನಮ್ಮ ಒಂದೇ ತಾಲ್ಲೂಕಿನಲ್ಲಿ ನರೇಗಾ ವತಿಯಿಂದ ಹತ್ತು ಸಾವಿರ ದನದ ಕೊಟ್ಟಿಗೆಗಳನ್ನು ನಿರ್ಮಾಣ ಮಾಡಿದರು. ಇದರಿಂದಾಗಿ ಜಾನುವಾರುಗಳಿಗೆ ಶುದ್ಧವಾದ ಪರಿಸರ ಹೊರೆಯಿತು ಹಾಗೂ ಅವುಗಳಿಗೆ ತಗಲುತ್ತಿದ್ದ ಕಾಲು ಬಾಯಿ, ಕೆಚ್ಚಲು ಬಾವು ಇತ್ಯಾದಿ ರೋಗಗಳು ಇಲ್ಲದಂತಾದವು. ಹೀಗಾಗಿ ಒಟ್ಟಾರೆಯಾಗಿ ಹಾಲು ಉತ್ಪಾದನೆ ಜಾಸ್ತಿಯಾಯಿತು. ಇದರಿಂದಾಗಿ ನಮ್ಮ ಗ್ರಾಮೀಣ ಭಾಗದ ಆರ್ಥಿಕ ಶಕ್ತಿ ಹೆಚ್ಚಾಯಿತು ಹಾಗೂ ಹೆಣ್ಣುಮಕ್ಕಳಿಗೆ ಶಕ್ತಿ ನೀಡಿದಂತಾಯಿತು. ಹೀಗಾಗಿ ರೈತಾಪಿ ವರ್ಗದ ಜನರು ತಮ್ಮ ಮಕ್ಕಳನ್ನು ಉನ್ನತ ವ್ಯಾಸಂಗಕ್ಕಾಗಿ ಶಾಲಾ–ಕಾಲೇಜುಗಳಿಗೆ ಕಳುಹಿಸುವಂತಾಯಿತು. ರೈತರು ತಮ್ಮ ಮನೆಗಳಲ್ಲಿ ಯುಗಾದಿ, ವರಮಹಾಲಕ್ಷ್ಮೀ ಇತ್ಯಾದಿ ಹಬ್ಬಗಳನ್ನು ಆಚರಿಸಲು ಸಾಲವನ್ನು ಮಾಡದಿರುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ರೈತ ಮಹಿಳೆಯರು ತಮ್ಮ ಕಾಲ ಮೇಲೆ ತಾವು ನಿಂತುಕೊಂಡು ದಿಟ್ಟತನದಿಂದ ತಮ್ಮ ಜೀವನವನ್ನು ನಡೆಸಲು ಪ್ರಾರಂಭಿಸಿದರು. ಇದು ದಿನೇ ದಿನೇ ಹೆಚ್ಚಾಯಿತು. ಆದರೆ ಇವತ್ತಿನ ದಿವಸ ದಿಢೀರನೆ ಅಂದರೆ ನಮ್ಮ ನೂತನ ಸಮ್ಮಿಶ್ರ ಸರ್ಕಾರ ರಚನೆಯಾಗುವುದಕ್ಕೂ, ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ಜನರು ಮಣ್ಣಿನ ಮಗ, ರೈತರ ಮಗ ಎನ್ನುವುದಕ್ಕೂ ಪ್ರೋತ್ಸಾಹ ಧನ ಮೂರು ರೂಪಾಯಿಗಳಿಗೆ ಇಳಿಕೆಯಾಯಿತು. ಪಶುಸಂಗೋಪನೆ ಸಚಿವರು ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ಈ ಮೊದಲು ಲೀಟರ್‌ವೊಂದಕ್ಕೆ ಒಕ್ಕೂಟದಿಂದ 25 ರೂಪಾಯಿಗಳನ್ನು ಕೊಡಲಾಗುತ್ತಿತ್ತು. ಆದರೆ ಈಗ 22 ರೂಪಾಯಿಗಳನ್ನು ಕೊಡಲಾಗುತ್ತಿದೆ. ಆದರೆ ಮಾನ್ಯ ಸಚಿವರು ಪ್ರೋತ್ಸಾಹ ಧನವನ್ನು ಮುಂದಿನ ದಿನಗಳಲ್ಲಿ ಕಡಿಮೆ ಮಾಡುವುದಾಗಿ ಹೇಳುತ್ತಿದ್ದಾರೆ. ಹಾಲಿನ ಉತ್ಪಾದನೆ ಜಾಸ್ತಿಯಾಗಿದೆ ಎಂದರೆ ಅದರ ಮಾರುಕಟ್ಟೆಯನ್ನು ಜಾಸ್ತಿ ಮಾಡಬೇಕು. ಹೀಗೆ ಮಾಡದಿದ್ದರೆ ಯಾರು ಜವಾಬ್ದಾರರು? ರೈತರಿಗೆ ಹೆಚ್ಚು ಹಾಲನ್ನು ಉತ್ಪಾದನೆ ಮಾಡಬಾರದು ಎಂದು ಹೇಳುವುದಕ್ಕಗುತ್ತದೆಯೇ? ಪರಿಸ್ಥಿತಿ ಹೀಗೆ ಆದರೆ ರೈತಾಪಿ ವರ್ಗದವರು ತಮ್ಮ ಬದುಕನ್ನು ಕಟ್ಟಿಕೊಳ್ಳುವುದು ಹೇಗೆ? ರೇಷ್ಮೆ ಗೂಡನ್ನು ಬೆಳೆಯಿರಿ ಎಂದು ರೈತರಿಗೆ ಹೇಳುತ್ತೀರಿ. ಸದರಿ ಗೂಡುಗಳಿಗೆ ಸರಿಯಾದ ಮಾರುಕಟ್ಟೆಯ ವ್ಯವಸ್ಥೆಯನ್ನು ಮಾಡುವ ಸಾಮರ್ಥ್ಯ ನಿಮಗೆ ಇಲ್ಲ. ಅವರುಗಳಿಗೆ A.R.M.ಗಳನ್ನು ಕೊಡಬೇಕು. ಅವರುಗಳು ಉತ್ತಮ ಹಾಗೂ ಗುಣಮಟ್ಟದ ನೂಲನ್ನು ಹೇಗೆ ತಯಾರು ಮಾಡಬೇಕು, ಯಂತ್ರೋಪಕರಣಗಳನ್ನು ಹೇಗೆ ಬಳಸಬೇಕು

ಎಂಬುದರ ಬಗ್ಗೆ ಅವರಿಗೆ ನೆರವು ಹಾಗೂ ಅರಿವನ್ನು ನೀಡಬೇಕು. ಹೆಚ್ಚುವರಿಯಾಗಿ ಉತ್ಪಾದನೆಗೊಂಡ ಹಾಲನ್ನು ಬಳಸಿಕೊಂಡು ಸಿಹಿ ತಿಂಡಿಗಳು, ಐಸ್ ಕ್ರೀಮ್, ಚೀಸ್‌ಗಳಂತಹ ಉಪ ಪದಾರ್ಥಗಳನ್ನು ಮಾಡಲಿ. ಅಮೂಲ್ (Anand Milk Union Limited) ಸಂಸ್ಥೆಯೊಂದಿಗೆ ಸ್ಪರ್ಧೆಯನ್ನು ಮಾಡುವಂತಾಗಲಿ ಹಾಗೂ ಅಂತರಾಷ್ಟ್ರೀಯ ಮಟ್ಟದ ಮಾರುಕಟ್ಟೆಗೆ ಹೋಗುವಂತಾಗಲಿ.

**(ಮುಂದು)**

(277) 12–07–2018 (04–00) ಬಿಎಸ್‌ಡಿ–ಎಂಡಿ

ಶ್ರೀ ಎಸ್. ರವಿ (ಮುಂದು)

ಇವತ್ತು ಕರ್ನಾಟಕ ಹಾಲು ಮಹಾಮಂಡಲದಲ್ಲಿ 11.50 ಲಕ್ಷ ಲೀಟರ್ ಹಾಲನ್ನು ಪರಿವರ್ತನೆ ಮಾಡುವ ಸಾಮರ್ಥ್ಯವಿದೆ. ದಿನಕ್ಕೆ 25 ಲಕ್ಷ ಕೆ.ಜಿ ಹಾಲು ಉಳಿಯುತ್ತಿದೆ. 11.50 ಲಕ್ಷ ಲೀಟರ್ ಹಾಲಿನಿಂದ ಬೆಣ್ಣೆ ಮಾಡುತ್ತಿದ್ದಾರೆ. ಉಳಿದ ಹಾಲನ್ನು ಕೆನೆರಹಿತ ಪುಡಿಯನ್ನಾಗಿ ಮಾಡುತ್ತಿದ್ದಾರೆ. ಉಳಿದ 11ರಿಂದ 13 ಲಕ್ಷ ಕೆ.ಜಿ ಹಾಲನ್ನು conversion ಮಾಡಲು ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಿಗೆ ಕಳುಹಿಸುತ್ತಾರೆ. ಒಂದು ಲೀಟರ್ ಹಾಲಿನ transportation ಗೆ ರೂ.7 ತಗುಲುತ್ತದೆ. ಇದನ್ನು ಪೌಡರ್ ಮಾಡುತ್ತಾರೆ. ಇವತ್ತು ಮಾನ್ಯ ಕುಮಾರಸ್ವಾಮಿಯವರನ್ನು ಅಭಿನಂದಿಸುತ್ತೇನೆ. ಹಾಸನಕ್ಕೆ ರೂ. 50 ಕೋಟಿಗಳನ್ನು Mega Dairy ಸ್ಥಾಪನೆ ಮಾಡಲು ಕೊಟ್ಟಿದ್ದಾರೆ. ಇದೇ ರೀತಿ 14 ಹಾಲು ಒಕ್ಕೂಟಗಳಿಗೆ ಮಾಡಿ, by-product ಗಳನ್ನು ತಯಾರು ಮಾಡಿ, ರೈತರ ಸಂಕಷ್ಟಕ್ಕೆ ನೆರವಿಗೆ ಬರಬೇಕು. ವಿಶ್ವ ದರ್ಜೆಯ ಉತ್ಪನ್ನಗಳನ್ನು ತಯಾರು ಮಾಡಲಿ.

**ಶ್ರೀ ಎನ್. ರವಿಕುಮಾರ್ :–** ಮಾನ್ಯ ಸಭಾಪತಿಯವರೇ, ಹಾಸನ ಒಕ್ಕೂಟ ಎಂದರೆ ಅದರಲ್ಲಿ ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ವ್ಯಾಪ್ತಿಗೆ ಬರುತ್ತದೆ.

**ಶ್ರೀ ಎಸ್. ರವಿ:–** ಸಂತೋಷ, ಹಾಸನಕ್ಕೆ ರೂ.50 ಕೋಟಿಯಲ್ಲದೇ ರೂ.500 ಕೋಟಿಗಳನ್ನು ಕೊಡಲಿ. ಅಲ್ಲಿನವರು ನಮ್ಮ ರೈತರೇ ಆಗಿದ್ದಾರೆ.

**ಸಭಾಪತಿಯವರು :–** ಮಾನ್ಯ ಧರ್ಮೇಗೌಡರೇ, ರೈತರು ಹೆಚ್ಚು ಹಸುಗಳನ್ನು ಸಾಕಿ ಹಾಲನ್ನು ಕರೆದು ಪೂರೈಕೆ ಮಾಡಿದಾಗ ಹಾಲಿನ ದರವನ್ನು ಕಡಿಮೆ ಮಾಡಿದರೆ ರೈತರಿಗೆ ಅನ್ಯಾಯವಾಗುವುದಿಲ್ಲವೇ? ಇದು ಸರಿಯಲ್ಲ, ಮಾನ್ಯ ಸದಸ್ಯರು ಹೇಳುವುದು ಸರಿಯಿದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಬಂಡೆಪ್ಪಾ ಖಾಶೆಂಪೂರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. It is a fact. ಏಕೆಂದರೆ ಹಿಂದೆ ರೈತರಿಗೆ ಸಾಕಷ್ಟು ಪ್ರೋತ್ಸಾಹ ಧನವನ್ನು ಕೊಟ್ಟ ಮೇಲೆ 55 ಲಕ್ಷ ಲೀಟರ್‌ಗಳಿಂದ 84 ಲಕ್ಷ ಲೀಟರ್‌ಗಳ ಹಾಲು per day ಬಂದಿದೆ. ಆದರೆ 34 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದೆ. ಉಳಿದಿದ್ದನ್ನು ಪೌಡರ್ ಅಥವಾ ಇನ್ನೊಂದನ್ನಾಗಿ convert ಮಾಡಿಕೊಳ್ಳಬೇಕು. ಈಗಾಗಲೇ ಕೆಲವು ಹಂತದಲ್ಲಿ ಸಭೆ ಮಾಡಿ, by-product ಗಳನ್ನು ಇನ್ನೂ ಹೆಚ್ಚು ಮಾಡಬೇಕೆಂಬ ನಿಟ್ಟಿನಲ್ಲಿ ಸ್ವಲ್ಪ ಗಮನಹರಿಸುತ್ತಿದ್ದೇವೆ. ಪ್ರಮುಖವಾಗಿ ಬೆಂಗಳೂರಿಗೆ 10 ಲೀಟರ್ ಹೊರಗಿನ ಹಾಲು ಬರುತ್ತಿದೆ. ಆ ಹಾಲು standard ಆಗಿ ಎಲ್ಲಾ ರೀತಿಯಿಂದ ಸರಿಯಿದೆ ಎಂದು ಮಾರಾಟ ಮಾಡಿಕೊಳ್ಳಲಿ. ಆದರೆ ನಮ್ಮ ಹಾಲಿಗಿಂತ sub-standard ಇದ್ದರೆ ಹೇಗೆ? ಅದಕ್ಕೆ ಒಂದು ಸೂಚನೆಯನ್ನು ಕೊಟ್ಟಿದ್ದೇವೆ.

**ಸಭಾಪತಿಯವರು :-** ಮಹಾರಾಷ್ಟ್ರದಿಂದ ಬರುವ ಹಾಲನ್ನು ಕಟ್ ಮಾಡಬೇಕು.

**ಶ್ರೀ ಬಂಡೆಪ್ಪಾ ಖಾಶೆಂಪೂರ್:-** ನಮ್ಮ ಕಡೆ ಮಹಾರಾಷ್ಟ್ರದಿಂದ ಬರುತ್ತದೆ. ನಿನ್ನೆ ರಾತ್ರಿ 7 ಗಂಟೆಗೆ ಮಾನ್ಯ ಮಂತ್ರಿಯವರು ಹಾಲು ಒಕ್ಕೂಟಗಳ ಎಲ್ಲಾ ಅಧ್ಯಕ್ಷರನ್ನು ಕರೆಸಿ ಸಭೆ ಮಾಡಿದ್ದಾರೆ. ತಾವು ಆ ಸಭೆಯಲ್ಲಿ ಇರಬಹುದೇನೋ ಗೊತ್ತಿಲ್ಲ. ನಾನು ಆ ಸಭೆಯಲ್ಲಿ ಭಾಗವಹಿಸಿದ್ದೆನು. ರೈತರ ಹಾಲಿನ ದರ ಕಡಿಮೆಯಾಗುತ್ತಿದೆ ಮತ್ತು ಒಕ್ಕೂಟಗಳ ಅವುಗಳ ರೂ.2-3 ಗಳ ಲಾಭ ನೋಡಿಕೊಂಡು ದರ ಕಡಿಮೆ ಮಾಡಿಕೊಂಡು ಬರುತ್ತಿವೆ. ನಿನ್ನೆ ಮಾನ್ಯ ಮುಖ್ಯಮಂತ್ರಿಯವರಿಗೆ ಮೂರ್‍ನಾಲ್ಕು proposals ಗಳನ್ನು ಕೊಟ್ಟಿದ್ದು, ಏಳೆಂಟು ದಿವಸಗಳಲ್ಲಿ ಇದನ್ನು ಇತ್ಯರ್ಥ ಮಾಡಿ, ರೈತರ ಪರವಾಗಿ ಬರಬೇಕೆಂದು ಅಧ್ಯಕ್ಷರುಗಳು ಆಗ್ರಹ ಮಾಡಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮಾನ್ಯ ರವಿ ರವರು ಹೇಳಿದಂತೆ ರೈತರ ಪರವಾಗಿ ಬಹಳಷ್ಟು ನಿರ್ಧಾರ ತೆಗೆದುಕೊಳ್ಳುತ್ತಾರೆ. ನಾನು ಮಾನ್ಯ ಸಭಾಪತಿಯವರ ಡೈರಿಯನ್ನು ನೋಡಿದ್ದು, ಏನಾದರೂ ಕಲಿಯಬೇಕಾದರೆ ಆ ಡೈರಿಯನ್ನು ನೋಡಿ ಕಲಿಯಬೇಕು. ಆ ರೀತಿ ವ್ಯವಸ್ಥಿತವಾಗಿ ಮಾಡಿದ್ದಾರೆ. Feedback ಬೇಕಾದ ಸಂದರ್ಭದಲ್ಲಿ ನಮ್ಮ ಮಾನ್ಯ ಸಭಾಪತಿಯವರ ಡೈರಿ ನೋಡಿಕೊಂಡು ಬನ್ನಿ ಎಂದು ಮಾನ್ಯ ಪಶುಸಂಗೋಪನಾ ಮಂತ್ರಿಯವರಿಗೆ ಹೇಳುತ್ತಿರುತ್ತೇನೆ. ನಂತರ ಅವರು ಸುಗಮವಾಗಿ ಪರಿಹಾರ ಮಾಡಬಹುದು ಎಂಬ ನಿಟ್ಟಿನಲ್ಲಿ ಹೇಳುತ್ತಿರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು ತೋರಿಸಿರುವ ಕಾಳಜಿಗೆ ನಿಜಕ್ಕೂ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಅವರು ಈಗಾಗಲೇ ಸಾಕಷ್ಟು ಅಧ್ಯಯನ ಮಾಡಿ ಸಾಕಷ್ಟು ಕಾರ್ಯೋನ್ಮುಖರಾಗಿರುವ ಸಂದರ್ಭವಾಗಿದೆ. ಇದನ್ನು ಮಾಡದೇ ಜನರು ಒಂದು ಸಾರಿ diversion ಆದರೆ ಪುನ: ಕಷ್ಟ. ಏಕೆಂದರೆ ಅವರು ಹಸುಗಳನ್ನು ನಂಬಿಕೊಂಡಿದ್ದಾರೆ. ಅವರು ಹಸುಗಳನ್ನು ಮಾಡಿಕೊಂಡು ಅದರಿಂದ ವಿಮುಖರಾದರೆ ಅವರಿಗೆ ಉದ್ಯೋಗವನ್ನು ಹೇಗೆ ಸೃಷ್ಟಿ ಮಾಡುವುದಕ್ಕೆ ಆಗುತ್ತದೆ.? ಎಂಟತ್ತು ಲಕ್ಷ ರೂಪಾಯಿಗಳ ಬಂಡವಾಳ ಹಾಕಿ ರೇಷ್ಮೆ ಬೆಳೆದುಕೊಂಡು ಹೇಗೋ ಕಷ್ಟಪಟ್ಟು ಜೀವನ ಮಾಡಿಕೊಂಡು ಹೋಗುತ್ತಿದ್ದಾರೆ. ರೇಷ್ಮೆ ಗೂಡಿನ ಬೆಲೆ ಕುಸಿದರೆ ಒಂದು ಸಾರಿ ರೇಷ್ಮೆ ಕಡ್ಡಿಯನ್ನು ಕಿತ್ತು ಹಾಕಿದರೆ ಪುನ: ರೇಷ್ಮೆ ಕಡ್ಡಿಯನ್ನು setup ಮಾಡಲು ಒಂದು ವರ್ಷ ಬೇಕು. ಅದೇ ರೀತಿ ಹೈನು ಉದ್ಯಮದಿಂದ ವಿಮೋಚನೆಗೊಂಡು ಬೇರೆ ಕಡೆ ಮುಖ ತಿರುಗಿಸಿದರೆ ಹೊಸ ಉದ್ಯೋಗಗಳನ್ನು ಸೃಷ್ಟಿ ಮಾಡಲು ನಮ್ಮಗೆ ಅವಕಾಶಗಳು ಎಲ್ಲಿವೆ? ಇರುವ ಅವಕಾಶಗಳಲ್ಲಿಯೇ ಮಾಡಬೇಕಾಗುತ್ತದೆ. ಕನಕಪುರದ ಬಳಿ ರೂ.500 ಕೋಟಿ ವೆಚ್ಚದಲ್ಲಿ ಮೆಗಾಡೈರಿ ಪ್ರಾರಂಭವಾಗಿದೆ. ಅದರ ಜೊತೆಗೆ ಕೇಂದ್ರದವರೂ ಮಾಡಿದ್ದಾರೆ. ಸಾಲಮನ್ನಾ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಪ್ರಶಂಸೆ ಮಾಡುತ್ತೇನೆ. ಇದರ ಜೊತೆಗೆ ರೇಷ್ಮೆ ಮತ್ತು ಹಾಲು ಉದ್ಯಮಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ದಿಸೆಯಲ್ಲಿ ಗಮನಹರಿಸಬೇಕು.

ಇನ್ನು ಮಾವಿನ ಬಗ್ಗೆ ಹೇಳಬೇಕೆಂದರೆ ನಮ್ಮ ರಾಮನಗರ, ಮಾಗಡಿ, ಚನ್ನಪಟ್ಟಣ, ಚಿಕ್ಕಬಳ್ಳಾಪುರ ಹಾಗೂ ಶಿಡ್ಲಘಟ್ಟದ ಭಾಗಗಳಲ್ಲಿ ಮಾವನ್ನು ಕೊಯ್ಲು ಮಾಡದೇ ಹಾಗೆಯೆ ಉದುರಿ ಹೋಯಿತು. ಆ ಸಮಯದಲ್ಲಿ ಮಾವಿನ ತೋಟಕ್ಕೆ ಹೋಗಿದ್ದರೆ ಒಂದೊಂದು ಗಿಡದ ಕೆಳಗೆ ಸಾವಿರಾರು ಕಾಯಿಗಳು ಉದುರಿದ್ದವು. ಎಲ್ಲವೂ ಹಣ್ಣಾಗಿ, ಹೂಜಿ ಬಂದು ಕೆಳಗೆ ಬಿದ್ದಿದ್ದವು. ನೀವು ತೋಟದೊಳಗೆ ಕಾಲಿಡಲು ಆಗುವುದಿಲ್ಲ. ತೋಟದ ತುಂಬಾ ವಾಸನೆ, ಏಕೆಂದರೆ ವಾರ–ಹದಿನೈದು ದಿನಗಳಿಂದ ಅಲ್ಲಿಯೇ ಬಿದ್ದಿದ್ದು, ಜೊತೆಗೆ ಒಂದಷ್ಟು ಮಳೆ ಬಿದ್ದು ಹಣ್ಣುಗಳೆಲ್ಲವೂ ಕೊಳೆತು ಹೋಗಿ ವಾಸನೆ ಬರುತ್ತದೆ. ನಮ್ಮ ಕಡೆ ಮುಸ್ಲೀಮರು ಹೊರಗಡೆಯಿಂದ ಬಂದು ಮೊದಲೇ ಹಣ್ಣುಗಳಿಗೆ ಇಷ್ಟು ದರವೆಂದು ಮಾತನಾಡಿ advance ಮಾಡಿ ಹೋದವರು ನಂತರ ಪತ್ತೆ ಇಲ್ಲದೇ ಹೊರಟು ಹೋದರು. ರೈತರು ಕೇವಲ ಒಂದೈದು ಸಾವಿರ ಅಡ್ವಾನ್ಸ್ ತೆಗೆದುಕೊಂಡಿದ್ದರು. ಈ ಕಡೆ ರೈತರಿಗೂ ಇಲ್ಲ, ಆತನಿಗೂ ಇಲ್ಲ. ಅದರಲ್ಲಿ ಔಷಧಿ ಹೊಡೆದ ಖರ್ಚು ಹುಟ್ಟಲಿಲ್ಲ. ನಾನು ಮೊನ್ನೆ ಸೋಮವಾರ ನೋಡಿದಂತೆ ಒಂದು ಟನ್‌ಗೆ ಎರಡೂವರೆ ಸಾವಿರ ಘೋಷಣೆ ಮಾಡಿರುವುದಾಗಿ ತಿಳಿಯಿತು. ಎರಡೂವರೆ ಸಾವಿರ ರೂಪಾಯಿಗಳನ್ನು ರೈತನು ಅಪ್ಲೈ ಮಾಡಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಮಾಡಿದರೂ ಒಂದೇ, ಮಾಡದಿದ್ದರೂ ಒಂದೇ ಆಗಿದೆ. ಆ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಯ್ಲಿಗಾಗಿ ನೀಡಿದ್ದಾರೆಯೇ? ರೈತರಿಗೆ ಕೊಯ್ಯಲು ಮತ್ತು ಸಾಗಾಣಿಕೆ ಮಾಡಲು ಏಳೆಂಟು ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಅದ್ಯಾವ ಅಧಿಕಾರಿ ಮಾನ್ಯ ಮುಖ್ಯಮಂತ್ರಿಯವರಿಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಮಾಡಿ ಎಂದು ಐಡಿಯಾ ಕೊಟ್ಟನೋ, ಆತನ ಫೋಟೋ ಕೊಟ್ಟರೆ ನಮ್ಮ ಕಡೆ ಜನ ನೋಡಿಕೊಂಡು ಬಿಡುತ್ತಾರೆ. ಹೀಗಾದರೆ ಘೋಷಣೆ ಏಕೆ ಮಾಡಬೇಕಾಗಿತ್ತು? ಮಾಡದೇ ಸುಮ್ಮನೆ ಇದ್ದಿದ್ದರೆ ಮರ್ಯಾದೆಯಾದರೂ ಉಳಿಯುತ್ತಿತ್ತು. ಒಂದು ಟನ್‌ಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಸಹಾಯಧನವಾಗಿ ಕೊಟ್ಟರೆ ಹೇಗೆ? ಅದು ಕೊಯ್ಯುವ ಕಾಸು ಆಗುವುದಿಲ್ಲ, ಮಾವಿನಹಣ್ಣು ತೆಗೆದುಕೊಳ್ಳುವವರೇ ಇಲ್ಲದೇ ತೋಟದಲ್ಲಿಯೇ ಸುರಿದುಹೋಗುತ್ತಿದೆ.

**ಶ್ರೀ ಬಂಡೆಪ್ಪಾ ಖಾಶೆಂಪೂರ್:-** ಮಾನ್ಯ ಸಭಾಪತಿಯವರೇ, ಮೊನ್ನೆ ಬಹಳಷ್ಟು ರೈತರು ರಸ್ತೆ ಮೇಲೆ ಸುರಿದಾಗ ಪ್ರೋತ್ಸಾಹ ಧನವಾಗಿ ನೀಡಿದ್ದೇವೆ. ಅದನ್ನು ಬೇರೆ ರೀತಿ ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಎಪಿಎಂಸಿ ಯಿಂದ ರೂ.20 ಕೋಟಿ allocation ಮಾಡುವಂತೆ ಹೇಳಿದ್ದಾರೆ. ಅದನ್ನು ಬೇರೆ ರೀತಿ ಹೋಲಿಸುವುದಕ್ಕೆ ಆಗುವುದಿಲ್ಲ. ಕರ್ನಾಟಕದ ಇತಿಹಾಸದಲ್ಲಿ ಮೊದಲನೆಯ ಬಾರಿಗೆ ಮಾವಿಗೆ ಪ್ರೋತ್ಸಾಹ ಧನ ಕೊಟ್ಟು immediate ಆಗಿ ಸಹಾಯಕ್ಕೆ ಬಂದಿದ್ದಾರೆ ಎನ್ನುವಂತಾಗುತ್ತದೆ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರ ಕಾಳಜಿಗೆ ಮತ್ತೊಮ್ಮೆ ಅವರನ್ನು ಅಭಿನಂದಿಸಿ, ಆ ಹಣವನ್ನು ಹೆಚ್ಚಿಸಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಬಂಡೆಪ್ಪಾ ಖಾಶೆಂಪೂರ್:-** ಮಾನ್ಯ ಸಭಾಧ್ಯಕ್ಷರ ಕಾಳಜಿಯಿಂದ ಈ ಕೆಲಸ ಆಗಿದೆ.

**ಶ್ರೀ ಎಸ್. ರವಿ:-** ಮಾನ್ಯ ಸಭಾಧ್ಯಕ್ಷರ ಕ್ಷೇತ್ರ ಶ್ರೀನಿವಾಸಪುರ ಆಗಿದೆ. ಅಲ್ಲಿಯೂ ಹೆಚ್ಚು ಮಾವು ಬೆಳೆಯುತ್ತಾರೆ.

**ಶ್ರೀ ವಿವೇಕ್‌ರಾವ್ ನಾಡಗೌಡ:-** ಮಾನ್ಯ ಸಭಾಪತಿಯವರೇ, ಕೆಳಗಿನ ಮನೆಯಲ್ಲಿ ಹೇಳಿಕೆ ಮಾಡಿದ್ದು, ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಿಗೆ ಕಳುಹಿಸಲು ಪ್ರಯತ್ನ ಮಾಡಿದ್ದಾರೆ. ನಮ್ಮ ಹತ್ತಿರ ಜಾಸ್ತಿ Crushing Units ಇಲ್ಲ ಎಂದು ಬೇರೆ ಕಡೆ ಪ್ರಯತ್ನ ಮಾಡಿದ್ದರೂ, ಎಲ್ಲಾ ಕಡೆ excess ಇರುವುದರಿಂದ ಏನೂ ಮಾಡುವುದಕ್ಕೆ ಆಗುವುದಿಲ್ಲ, ಎಲ್ಲಿಯೂ ಮಾರುಕಟ್ಟೆ ಸಿಗುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದರಲ್ಲಿಯೂ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಗೆ ಸೇರಿರುವ ರೈತರ ಆರ್ಥಿಕ ಶಕ್ತಿಯಾಗಿರುವ ರೇಷ್ಮೆ ಬೆಳೆಗಾರರು ಅನುಭವಿಸುತ್ತಿರುವ ಸಂಕಷ್ಟಕ್ಕೆ ಹಾಗೂ ಹೈನು ಉದ್ಯಮವನ್ನು ನಂಬಿರುವ ಕೃಷಿಕರಿಗೆ ಮತ್ತು ಮಾವನ್ನು ನಂಬಿರುವ ರೈತರನ್ನು ರಕ್ಷಿಸುವ ನಿಟ್ಟಿನಲ್ಲಿ ನನ್ನ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ಆ ಮುಖೇನ ನಮ್ಮ ಭಾಗದ ರೈತರ ನೆರವಿಗೆ ಧಾವಿಸುತ್ತದೆ ಎನ್ನುವ ಖಚಿತ ಭರವಸೆ ಇಟ್ಟುಕೊಂಡು, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು) :-** ಮಾನ್ಯ ಸಭಾಪತಿಯವರೇ, ಮಾನ್ಯ ಬಂಡೆಪ್ಪಾ ಖಾಶೆಂಪೂರ್‌ರವರು ಮಂತ್ರಿಗಳಾಗಿ ಉತ್ತರ ನೀಡಿದ್ದಾರೆ. ಮಾನ್ಯ ಸದಸ್ಯರಾದ ರವಿ ರವರು ಹೇಳಿದ ವಿಚಾರಗಳನ್ನು ರಾಜಕಾರಣದ ಹೊರತಾಗಿ ನೋಡಿದಾಗ ಸಾಮಾನ್ಯವಾಗಿ ರೈತರಿಗೆ ಪ್ರೋತ್ಸಾಹ ಧನವನ್ನು ಒಂದು ಸಾರಿ ಕೊಟ್ಟು ಮತ್ತೆ ಕಡಿತ ಮಾಡುವುದು ಇತಿಹಾಸದಲ್ಲಿಯೇ ಇಲ್ಲ. ದಯವಿಟ್ಟು ಕಡಿತ ಮಾಡಿರುವ ಪ್ರೋತ್ಸಾಹ ಧನವನ್ನು ರೈತರಿಗೆ ಕೊಡಬೇಕೆಂದು ವಿನಂತಿಸುತ್ತೇನೆ.

(ಮುಂದು)

278/12.07.2018/4.10/ಹೆಚ್‌ವಿಃಎಂಡಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು...):-**

ಸನ್ಮಾನ್ಯ ಸಭಾಪತಿಯವರೇ, ಕಡಿತಗೊಳಿಸಿರುವ ಪ್ರೋತ್ಸಾಹಧನವನ್ನು ಮತ್ತೊಮ್ಮೆ ರೈತರಿಗೆ ನೀಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ನಮ್ಮ ಭಾಗದಲ್ಲಿ ಹಾಲಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನ 7 ತಿಂಗಳಾದರೂ ಸಹ ರೈತರ ಅಕೌಂಟಿಗೆ ಸಂದಾಯವಾಗಿಲ್ಲ. ಸರ್ಕಾರ ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ.

**ಶ್ರೀ ವೆಂಕಟರಾವ್ ನಾಡಗೌಡ(ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಯಾವುದೇ ಪ್ರೋತ್ಸಾಹಧನವನ್ನು ಕಡಿತಗೊಳಿಸಿಲ್ಲ. ಯಾವ ಹಾಲಿನ ಸೊಸೈಟಿಗೆ ಪ್ರೋತ್ಸಾಹಧನ ಸಂದಾಯವಾಗಿಲ್ಲ ಎನ್ನುವುದರ ಮಾಹಿತಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದರೆ, ನಾನು ನಾಳೆಯೇ ಈ ಬಗ್ಗೆ ಪರಿಶೀಲಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಆಯವ್ಯಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಿರುವ ಈ ಸಂದರ್ಭದಲ್ಲಿ ಜುಲೈ 5, 2018ರಂದು ಈಗಿನ ಮುಖ್ಯ ಮಂತ್ರಿಗಳಾಗಿರುವ ಮಾನ್ಯ ಕುಮಾರಸ್ವಾಮಿಯವರು ಮಂಡಿಸಿರುವ ಆಯವ್ಯಯವನ್ನು ನಾನು ಸ್ವಾಗತಿಸುತ್ತಿದ್ದೇನೆ ಮತ್ತು ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು, "ಈ ಹಿಂದೆ 16ನೇ ಫೆಬ್ರವರಿ 2018ರಲ್ಲಿ ಸದನದಲ್ಲಿ ಮಂಡಿಸಿದ್ದ ಆಯವ್ಯಯದಲ್ಲಿ ಘೋಷಿಸಿರುವ ಎಲ್ಲಾ ಕಾರ್ಯಕ್ರಮಗಳನ್ನು ಮುಂದುವರೆಸುತ್ತೇನೆ" ಎನ್ನುವ ಘೋಷಣೆಯನ್ನು ಮಾಡಿರುವುದರಿಂದ ಈ ಎರಡೂ ಆಯವ್ಯಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಈಗ ಈ ರಾಜ್ಯದ ಮುಖ್ಯಮಂತ್ರಿಗಳು ಸುಮಾರು 2,13,734 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡನೆ ಮಾಡಿದ್ದರೆ, ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯನವರು ಸುಮಾರು 2,02,297 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡನೆ ಮಾಡಿದ್ದರು. ಈ ಆಯವ್ಯಯ ಮಂಡನೆಯಾಗುವ ಸಂದರ್ಭದಲ್ಲಿ ಸುಮಾರು 11,450 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಆಯವ್ಯಯ ಮಂಡನೆಯಾಗಿತ್ತು. ಅದರಲ್ಲಿ ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಲಾಗಿತ್ತು. 5ನೇ ಜುಲೈ 2018ರಂದು ಮಂಡಿಸಿದಂತಹ ಆಯವ್ಯಯವನ್ನು ರೈತ ಪರವಾಗಿರುವ ಆಯವ್ಯಯವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ರೈತರಿಗೆ ಸುಮಾರು 34 ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾದ ಜೊತೆಗೆ ರೈತ ಪರವಾದ ಹೊಸ 10 ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಈ ಆಯವ್ಯಯದಲ್ಲಿ, 'ಇಸ್ರೆಲ್ ಮಾದರಿಯ ಕೃಷಿಯನ್ನು ರಾಜ್ಯಕ್ಕೆ ಪರಿಚಯಿಸುತ್ತೇನೆ' ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಆದ್ದರಿಂದ ಈ ಆಯವ್ಯಯ ರೈತ ಪರವಾಗಿರುವ ಆಯವ್ಯಯ, ಈ ಆಯವ್ಯಯದಿಂದ ಈ ದೇಶದ ಮತ್ತು ಈ ರಾಜ್ಯದ ಬೆನ್ನೆಲುಬಾಗಿರುವ ರೈತರಿಗೆ, 'ಇದು ನಮ್ಮ ಸರ್ಕಾರ, ರೈತರು ಪರವಾಗಿರುವ ಸರ್ಕಾರ' ಎಂದೆನಿಸಿದೆ. ರೈತರ ಪರವಾಗಿ ನಾವು ದೊಡ್ಡದೊಡ್ಡ ಘೋಷಣೆಗಳನ್ನು ಮಾಡುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾಗಿರುವ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹಸಿರು ಶಾಲು ಹೊದ್ದುಕೊಂಡು ಅಧಿಕಾರ ಸ್ವೀಕಾರ ಮಾಡಿದ್ದರು. 'ನಾವು ರೈತರ ಪರವಾಗಿ ಕೆಲಸ ಮಾಡುತ್ತೇವೆ ಮತ್ತು ರೈತರ ರಕ್ಷಣೆ ಮಾಡುತ್ತೇವೆ' ಎನ್ನುವಂತಹ ಮಾತುಗಳನ್ನು ಹೇಳಿದ್ದರು. ಈಗಲೂ ಸಹ ಮಾನ್ಯ ಯಡಿಯೂರಪ್ಪನವರು ಸದನದೊಳಗೂ ಸಹ ಹಸಿರು ಶಾಲು ಹೊದ್ದು 'ನಾನು ರೈತರ ಪರವಾಗಿದ್ದೇನೆ' ಎಂದು ಹೇಳುವುದನ್ನು ನಾವು ನೋಡಿದ್ದೇವೆ. ರೈತರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರವಾಗಿರುವ ಯೋಜನೆಗಳು ರೈತರಿಗೆ ಮುಟ್ಟಿಸುವಂತಹ ಕೆಲಸವನ್ನು ಮತ್ತು ರೈತರ ಸಂಕಷ್ಟಕ್ಕೆ ಮಿಡಿಯುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ. ಇದರಿಂದ ನಮ್ಮ ಜವಾಬ್ದಾರಿ ಹೆಚ್ಚಾಗಿದೆ. ರೈತರ ಪರವಾದ ಕಾರ್ಯಕ್ರಮಗಳನ್ನು ಕೈಗೊಂಡಿರುವುದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಆಯವ್ಯಯ ಮಂಡನೆಯಾಗುವ ಸಂದರ್ಭದಲ್ಲಿ ಸ್ವಲ್ಪ ಗೊಂದಲವುಂಟಾಗಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರಿಂದ ಈ ಗೊಂದಲವುಂಟಾಯಿತು. ಮಾನ್ಯ ವಿರೋಧ ಪಕ್ಷದ ನಾಯಕರು, '2,13,734 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡನೆ ಮಾಡಿದ್ದೀರಿ, ಕೆಲವು ಜಿಲ್ಲೆಗಳಿಗೆ ಬಿಟ್ಟರೆ ಬೇರೆ ಜಿಲ್ಲೆಗಳಿಗೆ ಏನೂ ಕೊಟ್ಟಿಲ್ಲ. ಅದರಲ್ಲೂ ಕರಾವಳಿ ಭಾಗಕ್ಕೆ ಯಾವುದೇ ಯೋಜನೆಗಳನ್ನು ಕೊಟ್ಟಿಲ್ಲ' ಎನ್ನುವ ಮಾತನ್ನು ಹೇಳಿದ್ದರು. ನಾನು ಮಂಗಳೂರಿಗೆ ಹೋದಾಗ, ಅಲ್ಲಿನ ಜನರು, 'ತಾವು ಮಾನ್ಯ ಮುಖ್ಯಮಂತ್ರಿಗಳ ಮತ್ತು ಸಚಿವರ ಜೊತೆಗೆ ಇರುತ್ತೀರಿ ಮತ್ತು ಸರ್ಕಾರದಲ್ಲಿಯೂ ಇದ್ದೀರಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಕರಾವಳಿ ಭಾಗಕ್ಕೆ ಏನೂ ಕೊಟ್ಟಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ' ಎಂದು ಕೇಳಿದ್ದರು. ಆಗ ನಾನು ' ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು 16ನೇ ಫೆಬ್ರವರಿ 2018ಕ್ಕೆ ಮಂಡನೆಯಾಗಿರುವ ಆಯವ್ಯಯವನ್ನು ನೋಡಿಲ್ಲವೆಂದು ಕಾಣಿಸುತ್ತದೆ. 5ನೇ ಜುಲೈ 2018ಕ್ಕೆ ಮಂಡನೆಯಾಗಿರುವ ಆಯವ್ಯಯವನ್ನು ಮಾತ್ರ ನೋಡಿ ಕರಾವಳಿ ಭಾಗಕ್ಕೆ ಏನೂ ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.' ಎಂದು ನಾನು ಹೇಳಿದ್ದೆ. ನಾನು ಈ ರೀತಿ ಹೇಳುವುದಕ್ಕೆ ಕಾರಣವೇನೆಂದರೆ, 16ನೇ ಫೆಬ್ರವರಿ 2018ರಲ್ಲಿ ಮಂಡಿಸಲಾಗಿರುವ ಆಯವ್ಯಯದಲ್ಲಿ ಕರಾವಳಿ ಭಾಗಕ್ಕೆ ಸಾಕಷ್ಟು ಯೋಜನೆಗಳನ್ನು ಅಂದಿನ ಮುಖ್ಯಮಂತ್ರಿಗಳು ನೀಡಿದ್ದರು. ಅದು ಅವರಿಗೂ ಗೊತ್ತಿದೆ, ನನಗೂ ಗೊತ್ತಿದೆ. ಉದಾಹರಣೆಗೆ ಹೇಳಬೇಕಾದರೆ, ಪಶ್ಚಿಮವಾಹಿನಿ ಯೋಜನೆಗೆ 200 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿ ಪಶ್ಚಿಮಾಭಿಮುಖವಾಗಿ ಹರಿಯುವ ಎಲ್ಲ ನದಿಗಳಿಗೆ ಚೆಕ್‌ಡ್ಯಾಂಗಳನ್ನು ಕಟ್ಟಿ ನೀರಿನ ಮಟ್ಟವನ್ನು ಎತ್ತರಿಸುವುದಕ್ಕೆ ಒಂದು ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಜೊತೆಗೆ ಸುಮಾರು 2000 ಕೋಟಿ ರೂಪಾಯಿಗಳನ್ನು ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿ, ಕರಾವಳಿ ಪ್ರದೇಶದ ಮೂರು ಜಿಲ್ಲೆಗಳ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲಾಯಿತು. 85 ಕೋಟಿ ರೂಪಾಯಿಗಳ ಅನುದಾನವನ್ನು ಕಾರಾಗೃಹವನ್ನು ಸ್ಥಳಾಂತರಿಸಿ, ಸುಸಜ್ಜಿತವಾಗಿರುವ ಕಾರಾಗೃಹವನ್ನಾಗಿ ಮಾಡಲು ನೀಡಲಾಯಿತು. ಸುಮಾರು 38 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿ ಸೈನ್ಸ್

ಸೆಂಟರ್‌ನ್ನು ಪಿಲಿಕುಳದಲ್ಲಿ ಸ್ಥಾಪಿಸಲಾಯಿತು. ಅನೇಕ ರಸ್ತೆಗಳ ನಿರ್ಮಾಣ ಮತ್ತು ಬೇರೆಬೇರೆ ಯೋಜನೆಗಳಿಗೆ ಅನುದಾನವನ್ನು ನೀಡಲಾಗಿತ್ತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ರಸ್ತೆಗಳ ಅಭಿವೃದ್ಧಿ ವಿಚಾರದಲ್ಲಿ ಹೇಳಬೇಕಾದರೆ, 911 ಕೋಟಿ ರೂಪಾಯಿಗಳಲ್ಲಿ 224 ಕೋಟಿ ರೂಪಾಯಿಗಳ ಕಾಮಗಾರಿ ಪೂರ್ಣಗೊಂಡಿದೆ. ಎರಡನೆಯ ಹಂತದಲ್ಲಿ 650 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಉತ್ತರ ಕನ್ನಡ ಜಿಲ್ಲೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡಂತೆ 8 ಸ್ಥಳಗಳಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎನ್ನುವ ಅಂಶ ಮಾನ್ಯ ಸಿದ್ದರಾಮಯ್ಯನವರ ಆಯವ್ಯಯದಲ್ಲಿ ಪ್ರಸ್ತಾಪವಾಗಿದೆ.

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಒಂದು ದಿನ ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಗಾಂಧಿ ಪ್ರತಿಮೆಯ ಮುಂದೆ ಧಿಕ್ಕಾರ ಕೂಗುತ್ತಾ ನಿಂತಿದ್ದರು. ಇನ್ನೂ ಹೆಚ್ಚಿನ ಯೋಜನೆಗಳನ್ನು ನೀಡಬೇಕೆನ್ನುವುದಕ್ಕೆ ನನ್ನ ಬೆಂಬಲವೂ ಇದೆ. ಆಯವ್ಯಯದಲ್ಲಿ ಕರಾವಳಿ ಭಾಗಕ್ಕೆ ಏನೂ ಕೊಟ್ಟಿಲ್ಲ ಎನ್ನುವ ತಪ್ಪು ಸಂದೇಶ ಹೋಗಬಾರದು. ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಪಕ್ಷದ ಸರ್ಕಾರವಿರಬಹುದು ಅಥವಾ ಈಗಿನ ಸರ್ಕಾರವಿರಬಹುದು ಬದ್ಧವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವ ಆಯವ್ಯಯವೇ ಅನುಷ್ಠಾನಗೊಳ್ಳುತ್ತದೆ ಎನ್ನುವ ಮಾತನ್ನು ಅವರು ಹೇಳುವುದಾದರೆ, ಮತ್ತೊಂದು ಆಯವ್ಯಯವನ್ನು ಮಂಡನೆ ಮಾಡಬೇಕಾದ ಅವಶ್ಯಕತೆ ಮತ್ತು ಅನಿವಾರ್ಯತೆ ಏನಿತ್ತು ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಹಿಂದಿನ ಆಯವ್ಯಯವನ್ನೇ ಯಥಾವತ್ತಾಗಿ ಮುಂದುವರೆಸುತ್ತೇವೆಂದು ಹೇಳಿದ್ದರೆ ಅದಕ್ಕೊಂದು ಅರ್ಥ ಬರಬಹುದು. ಇಲ್ಲಿ ಏನಾಗಿದೆಯೆಂದರೆ, ರೇಷ್ಮೆ ಇಲಾಖೆಯ ಬಗ್ಗೆ ಮಾನ್ಯ ಸಿದ್ದರಾಮಯ್ಯನವರ ಆಯವ್ಯಯದಲ್ಲಿ 450 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆಂದು ಹೇಳಿದ್ದಾರೆ. ಈ ಆಯವ್ಯಯದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಪೂರ್ಣ ವಿವರಗಳು ಇಲ್ಲ. ಇಂತಹ ವ್ಯವಸ್ಥೆಗಳನ್ನು ಅವರು ಸ್ಪಷ್ಟಪಡಿಸಬೇಕಾಗಿರುವ ಅವಶ್ಯಕತೆಗಳಿವೆ. ಅವರು ಉಲ್ಲೇಖ ಮಾಡಿರುವಂತೆ ಪಶ್ಚಿಮವಾಹಿನಿ ಯೋಜನೆಗೆ 200 ಕೋಟಿ ರೂಪಾಯಿಗಳನ್ನು ಕಳೆದ ಬಾರಿಯ ಆಯವ್ಯಯದಲ್ಲಿ ಮೀಸಲಿಟ್ಟಿರಲಿಲ್ಲ. ಅದಕ್ಕೂ ಹಿಂದಿನ ವರ್ಷದ ಆಯವ್ಯಯದಲ್ಲಿ ಉಲ್ಲೇಖ ಮಾಡಲಾಗಿತ್ತು. ಅದನ್ನು ಇಲ್ಲಿಯವರೆಗೆ ಅನುಷ್ಠಾನಗೊಳಿಸಿಲ್ಲ. ಫೆಬ್ರವರಿ ತಿಂಗಳಿನ ಆಯವ್ಯಯದಲ್ಲಿ ಘೋಷಣೆ ಮಾಡಿದ್ದರೆ ಈಗಾಗಲೇ 4–5 ತಿಂಗಳುಗಳಾಗಿವೆ. ಇಲ್ಲಿಯವರೆಗೂ ಒಂದು ಹೆಜ್ಜೆ ಮುಂದೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿಲ್ಲ. ಅವರು ಹೇಳಿದಂತೆ ಹಿಂದಿನ ಆಯವ್ಯಯವೂ ಸೇರಿದಂತೆ ಇಂದಿನ ಆಯವ್ಯಯವನ್ನು ಗಮನದಲ್ಲಿಟ್ಟುಕೊಂಡರೆ, ಕರಾವಳಿಯ ಭಾಗದಲ್ಲಿರುವಂತಹ ಮೀನುಗಾರಿಕೆಯ ಬಗ್ಗೆ ಹೇಳಬೇಕಾದರೆ, ಕಾರವಾರದಿಂದ ಪ್ರಾರಂಭವಾಗಿ ಉಳ್ಳಾಲದವರೆಗೆ ಸುಮಾರು 300 ಕಿಲೋಮೀಟರ್ ಕಡಲತಡಿಯಲ್ಲಿರುವ ಮೀನುಗಾರರಿಗೆ ಈ ಆಯವ್ಯಯದಲ್ಲಿ ಏನು ಕೊಟ್ಟಿದ್ದಾರೆ ಎಂದು ನಾವು ಕೇಳುತ್ತಿದ್ದೇವೆ. ಈ ಆಯವ್ಯಯದಲ್ಲಿ ಆ ವಿಚಾರವನ್ನು ಘೋಷಣೆ ಮಾಡಿ ತೋರಿಸಲಿ. ಮೀನುಗಾರರ ಡೀಸೆಲ್ ಮತ್ತು ದೋಣಿಗಳಿಗೆ ಸಂಬಂಧಪಟ್ಟಂತೆ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ. ನಾನು ಮೀನುಗಾರಿಕೆ ಇಲಾಖೆಯನ್ನು ರದ್ದುಗೊಳಿಸಿ ಎಂದು ಹೇಳುತ್ತಿದ್ದೇನೆ. ವಾಸ್ತವವಾಗಿ ನಾನು ಬೆಸ್ತನಲ್ಲ ಆದರೂ ಸಹ ಮೀನುಗಾರಿಕೆಯಿಂದ ಬದುಕುತ್ತಿರುವ ಜನರು ಈ ಸರ್ಕಾರಕ್ಕೆ ಹಿಡಿ ಶಾಪ ಹಾಕುವುದಕ್ಕೂ ಮೊದಲು ಮೀನುಗಾರಿಕಾ ಇಲಾಖೆಯನ್ನು ರದ್ದುಗೊಳಿಸಿಬಿಡಲಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಯಾಯಾ ಪ್ರದೇಶಗಳಿಗೆ ಒಂದು ರೀತಿಯ ಅವಕಾಶಗಳು ನಿರಾಕರಣೆಯಾದಾಗ, ರೋಸಿ ಹೋಗುತ್ತಾರೆ. ಇದರಿಂದಾಗುವ ದುಷ್ಪರಿಣಾಮಗಳನ್ನು ಸರ್ಕಾರ ಎದುರಿಸಬೇಕಾಗುತ್ತದೆ ಎನ್ನುವ ಮಾತುಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಂದ ಈ ಮಾತನ್ನು ನಿರೀಕ್ಷೆ ಮಾಡುತ್ತಿದ್ದೆ. ಏಕೆಂದರೆ, ಕರಾವಳಿ ಉದ್ದಕ್ಕೂ ಇರುವಂತಹ ಮೀನುಗಾರರ ಬಗ್ಗೆ ಬಹಳ ಕಳಕಳಿಯನ್ನು ಇಟ್ಟುಕೊಂಡು ಈ ಸರ್ಕಾರ ಅವರಿಗೆ ಏನೂ ಮಾಡಿಲ್ಲ ಎಂದು ಹೇಳುತ್ತಿದ್ದರು. 2018–19ರ ಆಯವ್ಯಯದ ಪುಸ್ತಕವನ್ನು ನನ್ನ ಮುಂದಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಅದರಲ್ಲಿ 'ಮೀನುಗಾರಿಕೆಯಲ್ಲಿ ಹೊಸ ಯೋಜನೆಗಳು, ಮೀನುಗಾರಿಕಾ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50 ಸಾವಿರದವರೆಗೆ ಶೇಕಡಾ 2ರ ಬಡ್ಡಿ ದರದಲ್ಲಿ ವಾಣಿಜ್ಯ ಮತ್ತು ಗ್ರಾಮೀಣ ಪ್ರಾದೇಶಿಕ ಬ್ಯಾಂಕುಗಳಿಂದ ನೀಡುತ್ತಿರುವ ಸಾಲವನ್ನು 2018–19ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲು ಘೋಷಣೆ ಮಾಡಿದ್ದೇವೆ' ಎಂದು ಇದೆ.

(ಮುಂದು)

(279) 12.7.2018 4.20 ಪಿಕೆ:ಎಕೆ

**ಶ್ರೀ ಐವನ್ ಡಿ'ಸೋಜಾ (ಮುಂದುವರೆದಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನೂ ಬೇರೆ ಬೇರೆ ಯೋಜನೆಗಳಿವೆ. ಇದಲ್ಲದೇ 2018-19ನೇ ಸಾಲಿನಲ್ಲಿ ಮೀನುಗಾರಿಕಾ ಇಲಾಖೆಗೆ ಒಟ್ಟಾರೆಯಾಗಿ ರೂ.252 ಕೋಟಿಗಳನ್ನು ಒದಗಿಸಲಾಗಿದೆ. ಈ ಹಣವನ್ನು ಕರಾವಳಿಯ 3 ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆಯೇ ಕೊಡಲಾಗಿದೆ. ಈ ಹಣವನ್ನು ಬೇರೆ ಜಿಲ್ಲೆಯವರು ಕೇಳುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವ ವಿಚಾರವಾಗಿ ಹೇಳುವುದಾದರೆ . . .

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಪ್ರತಿಯೊಂದಕ್ಕೂ ಎದ್ದು ನಿಲ್ಲಬಹುದು ಎಂಬ ಕಾನೂನು ಇಲ್ಲ. ಅವರು ಯೀಲ್ಡ್ ಆದರೆ ನೀವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರು ಯೀಲ್ಡ್ ಆದರೆ ಮಾತ್ರ ಮಾತನಾಡುತ್ತೇನೆ. ಇಲ್ಲದಿದ್ದರೆ ಕುಳಿತುಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರೇ, ಬಜೆಟ್‌ನ 25ನೇ ಪುಟದ 43ನೇ ಉಲ್ಲೇಖದಲ್ಲಿ "ರಾಜ್ಯದ 20000 ಹೆಕ್ಟೇರ್ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಲು ಉದ್ದೇಶಿಸಲಾಗಿದೆ. ಈ ಯೋಜನೆ ಅಡಿ ರೂ. 4 ಕೋಟಿ ವೆಚ್ಚದಲ್ಲಿ 4 ಕೋಟಿ ಮೀನು ಮರಿಗಳನ್ನು ಬಿತ್ತನೆ ಮಾಡಲಾಗುವುದು" ಎಂದು ಹೇಳಿದ್ದಾರೆ. ಇಲ್ಲಿ ಕರಾವಳಿಯ ಯಾವುದೇ ಉಲ್ಲೇಖವನ್ನು ಮಾಡಿಲ್ಲ. ಒಂದು ವೇಳೆ ನೀವು ಇದರಲ್ಲಿ, ಕರಾವಳಿಯ 300 ಕಿಲೋ ಮೀಟರ್ ಕಡಲ ತಡಿಗೆ ಬೇಕಾದಂತಹ ವಿಸ್ತೀರ್ಣದಲ್ಲಿ ತಡೆಗೋಡೆ ನಿರ್ಮಾಣ ಮಾಡುವುದಕ್ಕೆ ಹಣವನ್ನು ಮಂಜೂರು ಮಾಡಿದ್ದೇವೆ ಎಂದು ಹೇಳುವುದಾಗಲಿ ಅಥವಾ ಕರಾವಳಿ ಪ್ರದೇಶದಲ್ಲಿರುವಂತಹ ಮೀನುಗಾರರ ಬದುಕಿಗೋಸ್ಕರ ನೂರಾರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎನ್ನುವಂತಹ ದಾಖಲೆಗಳನ್ನು ತೋರಿಸಿದರೆ ನಮ್ಮ ಆಕ್ಷೇಪ ಇಲ್ಲ.

**ಶ್ರೀ ವೆಂಕಟರಾವ್ ನಾಡಗೌಡ (ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರ ನನ್ನ ಇಲಾಖೆಗೆ ಸಂಬಂಧಪಡುತ್ತದೆ. ರೂ. 4 ಕೋಟಿಯನ್ನು ಕರಾವಳಿ ಭಾಗಕ್ಕೆಂದೇ ಕೊಡಲಾಗಿದೆ. ಒಳನಾಡು ಮೀನು ಕೃಷಿಗೆ ಬೇರೆ ಮೊತ್ತವನ್ನು ಕೊಟ್ಟಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :-** ಒಳನಾಡು ಮೀನು ಕೃಷಿಗೆಂದು ರೂ. 4 ಕೋಟಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇನ್ನೂ ಜಾಸ್ತಿ ಕೊಡಿ ಸಂತೋಷ. ಆದರೆ ಕಡಲ ತಡಿಯ ಬಗ್ಗೆ ಉಲ್ಲೇಖ ಮಾಡಿಲ್ಲ. ಆದ್ದರಿಂದ ನಾನು ಹೇಳಬೇಕಾಯಿತು. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಇದನ್ನೂ ಸೇರಿಸುತ್ತೀರಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನೀಡುತ್ತಿರುವ ಸಲಹೆಗಳನ್ನು ಬರೆದುಕೊಂಡು ಮುಖ್ಯಮಂತ್ರಿಗಳ ಗಮನಕ್ಕೆ ತನ್ನಿ. ಅವರು ಉತ್ತರ ಕೊಡುತ್ತಾರೆ.

**ಶ್ರೀ ಐವನ್ ಡಿ'ಸೋಜಾ :–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮೀನುಗಾರಿಕೆಗೆ ಹಣ ಕೊಟ್ಟಿಲ್ಲ, ಒಳನಾಡು ಅಭಿವೃದ್ಧಿಗೆ ಹಣ ಕೊಡಲಿಲ್ಲ, ಒಟ್ಟಿನಲ್ಲಿ ಈ ಬಜೆಟ್‌ನಲ್ಲಿ ಏನೂ ಕಾಣುವುದಿಲ್ಲ ಎಂದು ಹೇಳಿದರು. ನಾನು, ಎರಡೂ ಬಜೆಟ್‌ಗಳು ಒಂದೇ ಎಂದು ಹೇಳಬಯಸುತ್ತೇನೆ. ತಾವು ಇದನ್ನು ಅರ್ಥ ಮಾಡಿಕೊಳ್ಳದೇ ಹೇಳಿದರೆ ನಾನೇನು ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ಮಾನ್ಯ ಸಭಾಪತಿಯವರೇ, ನನ್ನದೊಂದು ಪ್ರಶ್ನೆ ಇದೆ.

**ಸಭಾಪತಿಯವರು:–** ಮಾನ್ಯ ಡಿಸೋಜಾರವರೇ, ನೀವು ಯೀಲ್ಡ್ ಆದರೆ ನಾನು ನಿಮಗೆ ಮತ್ತೆ ಸಮಯ ಕೊಡುವುದಿಲ್ಲ. ಅದು ನಿಮ್ಮ ಜವಾಬ್ದಾರಿ.

**ಶ್ರೀ ಐವನ್ ಡಿ'ಸೋಜಾ :–** ವಿರೋಧ ಪಕ್ಷದ ನಾಯಕರು ಎದ್ದು ನಿಂತರು ಎಂದು ನಾನು ಕುಳಿತುಕೊಂಡೆ ಅಷ್ಟೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ಎರಡೂ ಬಜೆಟ್ ಒಂದೇ ಎನ್ನುವುದಾದರೆ ಮತ್ತೊಂದು ಬಜೆಟನ್ನು ಏಕೆ ಮಂಡಿಸಿದರು?

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವೇಕೆ ಪದೇ ಪದೇ ಎದ್ದು ಮಾತನಾಡುತಿದ್ದೀರಿ?

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ಮಾತನ್ನು ಹೇಳಿಬಿಡುತ್ತೇನೆ. ಸನ್ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಅವರ ಸರ್ಕಾರ 13 ದಿನಗಳಲ್ಲಿ ಉರುಳಿತು. ಅದಾದ ನಂತರ ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾದರು. Vote of confidence ತೆಗೆದುಕೊಂಡ ಮೇಲೂ ಮತ್ತೊಮ್ಮೆ ಬಜೆಟ್ ಮಂಡನೆ ಮಾಡಿದ್ದರು ಎಂಬುದನ್ನು ನೆನಪಿಸಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ :-** ಮಾನ್ಯ ಸಭಾಪತಿಯವರೇ, ಬಡವರಿಗೆ 7 ಕೆ.ಜಿ ಅಕ್ಕಿಯನ್ನು ಕೊಡಲಾಗುತ್ತಿತ್ತು. ಈಗ 'ಅನ್ನಭಾಗ್ಯ' ಕಾರ್ಯಕ್ರಮದಲ್ಲಿ ಈ ಪ್ರಮಾಣವನ್ನು 7 ಕೆ.ಜಿ.ಯಿಂದ 5 ಕೆ.ಜಿ.ಗೆ ಇಳಿಸಿರುವುದು ಮನಸ್ಸಿಗೆ ಬೇಜಾರು ತಂದಿದೆ. ಈ ವಿಷಯವನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಪುನಃ 7 ಕೆ.ಜಿ. ಕೊಡುತ್ತೇವೆ ಎಂದು ಘೋಷಣೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ವೆಚ್ಚ ಸುಮಾರು ರೂ.1 ಸಾವಿರ ಕೋಟಿಗಿಂತ ಕಡಿಮೆ ಬರಬಹುದು. ಒಂದು ವೇಳೆ ಸಾಧ್ಯವಾದರೆ, ಈ ಪ್ರಮಾಣವನ್ನು 7 ಕೆ.ಜಿ.ಯಿಂದ 10 ಕೆ.ಜಿ.ಗೆ ಏರಿಸಲಿ. ಇಡೀ ದೇಶದ ಉದ್ದಗಲಕ್ಕೂ ಬಡವರಿಗೆ ಮುಟ್ಟುವಂತಹ ಯೋಜನೆ ಇದಾಗಿದೆ. ಹಾಗಾಗಿ, ಕೊಡುವ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡುವುದು ಸರಿಯಲ್ಲ ಎಂದು ನಾನು ಭಾವಿಸುತ್ತೇನೆ. ಮತ್ತೆ, ವಿದ್ಯುತ್ ದರ ಜಾಸ್ತಿಯಾಗಿರುವುದರ ಬಗ್ಗೆ ಹೇಳುವುದಾದರೆ, ರೈತರಿಗೋಸ್ಕರ ರೂ. 34 ಸಾವಿರ ಕೋಟಿ ಸಾಲ ಮನ್ನಾ ಮಾಡುತ್ತಿರುವ ಹಿನ್ನೆಲೆಯಲ್ಲಿ, ವಿದ್ಯುತ್ ದರವನ್ನು ಸ್ವಲ್ಪ ಏರಿಸಿ ಆದಾಯ ಪಡೆಯಬಹುದು ಎನ್ನುವ ಉದ್ದೇಶದಿಂದ ಹೀಗೆ ಮಾಡಿದ್ದಾರೆ ಎಂದು ಭಾವಿಸುತ್ತೇನೆ. ಆದರೆ, ಈ ಕುರಿತು ಕೂಡ ಪುನಃ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಒಟ್ಟಾರೆಯಾಗಿ ಹೇಳುವುದಾದರೆ, ಈ ಬಜೆಟ್ ಪ್ರಮುಖವಾಗಿರುವಂತಹ, ರೈತಪರವಾಗಿರುವಂತಹ, ಜನಸಾಮಾನ್ಯರ ಪರವಾಗಿರುವಂತಹ ಬಜೆಟ್ ಆಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ನನ್ನ ಜಿಲ್ಲೆಗೆ ಸಂಬಂಧಪಟ್ಟ ಎರಡು ವಿಚಾರಗಳನ್ನು ಹೇಳಬಯಸುತ್ತೇನೆ. ಇವತ್ತು ಈ ಸದನದಲ್ಲಿ ರೈತರ ಬಗ್ಗೆ ಅಥವಾ ಕ್ರೀಡೆಯ ಬಗ್ಗೆ ಮತ್ತು ವಿವಿಧ ವಿಚಾರಗಳ ಬಗ್ಗೆ ಚರ್ಚೆಯಾಯಿತು. ನಮ್ಮ ಜಿಲ್ಲೆಯಲ್ಲಿ ಕಂಬಳ ಎನ್ನುವಂತಹ ಕ್ರೀಡೆ ಇದೆ. ಇದೊಂದು ಜಾನಪದ ಕ್ರೀಡೆ ಎಂದು ಭಾವಿಸಿಕೊಂಡಿದ್ದೇವೆ. ಈ ಕ್ರೀಡೆ ನೋಡಲು ಲಕ್ಷಾಂತರ ಜನ ಬರುತ್ತಾರೆ. ಕೆಲವು ಜನ,ಈ ಕ್ರೀಡೆಯನ್ನು ನಿಲ್ಲಿಸಬೇಕು, ಇದರಿಂದ ಪ್ರಾಣಿ ಹಿಂಸೆ ಮಾಡಿದ ಹಾಗೆ ಆಗುತ್ತದೆ ಎಂದು ಸುಪ್ರೀಮ್ ಕೋರ್ಟ್‌ಗೆ ಹೋದರು. ಆದರೆ ಅಲ್ಲಿ, ಈ ಕ್ರೀಡೆಯನ್ನು ನಡೆಸಬಹುದು ಎನ್ನುವ ತೀರ್ಮಾನ ಬಂತು. ನಮ್ಮ ಜಿಲ್ಲೆಯಲ್ಲಿ ಸುಮಾರು 19 ಕಂಬಳಗಳು ನಡೆಯುತ್ತವೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಈ ಪ್ರದೇಶದಲ್ಲಿ ನಡೆಯುತ್ತವೆ. ಒಂದೊಂದು ಕಂಬಳದಲ್ಲಿ ಸುಮಾರು 4-5 ಲಕ್ಷ ಜನ ಭಾಗವಹಿಸುತ್ತಾರೆ. ಇದು 24 ಗಂಟೆಗಳ ಕಾಲ ನಡೆಯುತ್ತದೆ. ಇದಕ್ಕೆ ಸುಮಾರು 200-250 ಜೋಡಿ ಕೋಣಗಳು ಬರುತ್ತವೆ. ಈ ಕೋಣಗಳನ್ನು ಸಾಕುವವರು ರೈತರು. ರೈತರು ಕೋಣಗಳನ್ನು ಸಾಕಿ ಉಳುಮೆ ಮಾಡುವುದಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಇವರು ಈ ಒಂದು ಸಂದರ್ಭಗಳಲ್ಲಿ ಕೋಣಗಳನ್ನು ತಂದು ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಮೂರು ಜಿಲ್ಲೆಗಳಲ್ಲಿ ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತ್ಯಂತ ಜನಪ್ರಿಯವಾಗಿರುವಂತಹ ಕ್ರೀಡೆಯಾಗಿದೆ. ಎಷ್ಟೋ ಜನ ವಿದೇಶದಿಂದ ಬಂದು ವಿಡಿಯೋ ರೆಕಾರ್ಡ್ ಮಾಡಿ ಈ ಕ್ರೀಡೆಯನ್ನು ನೋಡಿ ಆನಂದಪಡುವಂತಹ ಪ್ರಸಂಗಗಳೂ ಇವೆ. ಹಿಂದೆ, ಈ ಕ್ರೀಡೆಯ ಅಭಿವೃದ್ಧಿಗೆಂದು ಮಾನ್ಯ ವೀರಪ್ಪ ಮೊಯಿಲಿಯವರು ರೂ.75 ಲಕ್ಷಗಳನ್ನು ಇಟ್ಟಿದ್ದರು, ಮಾನ್ಯ ಯಡಿಯೂರಪ್ಪನವರು ರೂ. 1 ಕೋಟಿ ರೂಪಾಯಿಗಳನ್ನು ಈ ಕ್ರೀಡೆಗೆ ಮೀಸಲಿಟ್ಟರು, ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗಲೂ ರೂ. 1 ಕೋಟಿ ಕೊಟ್ಟರು. ಪ್ರತಿ ಕಂಬಳಕ್ಕೆ ಸರ್ಕಾರ ರೂ. 3 ಕೋಟಿ ದುಡ್ಡನ್ನು ಕೊಡುತ್ತಿತ್ತು. ಈಗ 2 ವರ್ಷಗಳಿಂದ ಹಣ ಕೊಡುವುದನ್ನು ನಿಲ್ಲಿಸಿದ್ದಾರೆ. ಈ ಕ್ರೀಡೆಯ ಬಗ್ಗೆ ತಕರಾರು ಬಂದು ಕೋರ್ಟ್‌ನಲ್ಲಿ ಪ್ರಕರಣ ಹೋಗಿದ್ದರಿಂದ ಹಣ ಕೊಡುವುದನ್ನು ನಿಲ್ಲಿಸಿದ್ದರು. ನಾನು ಮಾನ್ಯ ಸಭಾಪತಿಯವರ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಕಂಬಳ ನಡೆಯಬೇಕಾದರೆ ಸುಮಾರು ರೂ. 35 ಲಕ್ಷ ಖರ್ಚಾಗುತ್ತದೆ. ಅದಕ್ಕೆ ಸರ್ಕಾರ ಅನುದಾನ ಒದಗಿಸಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದು ಅತ್ಯಂತ ಪ್ರಮುಖವಾದ ಕ್ರೀಡೆಯಾಗಿದೆ. ಈ ಕ್ರೀಡೆಯಲ್ಲಿ ಭಾಗವಹಿಸುವ ಕೋಣದ ಮಾಲೀಕರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು, ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಈ ಕ್ರೀಡೆಯನ್ನು ಉಳಿಸಿಕೊಳ್ಳಬೇಕು. ಈ ಸದನದಲ್ಲಿ ಈ ಕ್ರೀಡೆಯ ಬಗ್ಗೆ ಒಂದು ವಿಧೇಯಕವನ್ನು ತಂದಾಗ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರ ನೇತೃತ್ವದಲ್ಲಿ ಎಲ್ಲರೂ ಎದ್ದುನಿಂತು, ಈ ಕ್ರೀಡೆಗೆ ಬೆಂಬಲ ಕೊಡಬೇಕು ಎಂದು ತೀರ್ಮಾನ ಮಾಡಿದರು. ಕರಾವಳಿ ಭಾಗದ ಜನರಿಗೋಸ್ಕರ ಈ ಕ್ರೀಡೆಯನ್ನು ಉಳಿಸಬೇಕಾಗುತ್ತದೆ. ಇದಕ್ಕೋಸ್ಕರ ಸರ್ಕಾರದಿಂದ ಪ್ರೋತ್ಸಾಹ ಸಿಗಬೇಕು. ಮಾನ್ಯ ಸಭಾಪತಿಯವರೇ, ಮಾನ್ಯ ರಮಾನಾಥ್‌ರೈ, ಮಾನ್ಯ ಸುನೀಲ್ ಕುಮಾರ್, ಮಾನ್ಯ ಹರೀಶ್ ಕುಮಾರ್, ಮಾನ್ಯ ಅಭಯಚಂದ್ರ ಜೈನ್ ಈ ಎಲ್ಲಾ ರಾಜಕೀಯ ನಾಯಕರ ನೇತೃತ್ವದಲ್ಲಿ ಕ್ರೀಡೆ ನಡೆಯುತ್ತದೆ. ಹಾಗಾಗಿ ಇದಕ್ಕೆ ಹೆಚ್ಚು ಅನುದಾನ ಕೊಡಬೇಕು. ಪಿಲಿಕುಳದಲ್ಲಿ ಸರ್ಕಾರದ ವತಿಯಿಂದಲೇ ಈ ಕ್ರೀಡೆಯನ್ನು ನಡೆಸಲಾಗುತ್ತದೆ. ಹಾಗಾಗಿ ಈ ಕ್ರೀಡೆಗೆ ಬೆಂಬಲ ಕೊಡುವುದಕ್ಕೆ ರಾಜ್ಯ ಸರ್ಕಾರ ಕೂಡಲೇ ರೂ. 5 ಕೋಟಿಗಳನ್ನು ಪೂರಕ ಬಜೆಟ್‌ನಲ್ಲಿ ಮೀಸಲಿಟ್ಟು ಕಂಬಳ ಕ್ರೀಡೆಗೆ ಸಹಾಯ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆ ಅತ್ಯಂತ ಸೂಕ್ಷ್ಮ ಜಿಲ್ಲೆ ಎಂದು ಪರಿಗಣನೆಗೆ ಬರುತ್ತಿದೆ. ನಮ್ಮ ಜಿಲ್ಲೆಗೆ ಒಳ್ಳೆಯ ಹೆಸರು ಇದೆ; ನಮ್ಮ ಜಿಲ್ಲೆ ಬುದ್ಧಿವಂತರ ಜಿಲ್ಲೆಯಾಗಿದೆ. ಶೇಕಡ 100ರಷ್ಟು ಸಾಕ್ಷರತಾ ಜಿಲ್ಲೆಯಾಗಿದೆ. ನಮ್ಮ ಜಿಲ್ಲೆಯಲ್ಲಿ 10 ಕಿ.ಮೀ.ವ್ಯಾಪ್ತಿ ಪ್ರದೇಶದಲ್ಲಿ 6 ಮೆಡಿಕಲ್ ಕಾಲೇಜುಗಳಿವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(280)12-7-2018 4.30 ಡಿಎಸ್-ಎಕೆ

ಶ್ರೀ ಐವನ್ ಡಿ'ಸೋಜಾ(ಮುಂದು):-

ನನ್ನ ಜಿಲ್ಲೆಯಲ್ಲಿ ಸುಮಾರು 32 ಇಂಜಿನಿಯರಿಂಗ್ ಕಾಲೇಜುಗಳಿವೆ. It is an educational hub. ಅನೇಕ ಪುರಾತನ 150-200 ವರ್ಷಗಳ ಕಾಲೇಜುಗಳಿವೆ. Around 38,000 students come to our district every year to join for one or the other course. ಆ ಜಿಲ್ಲೆಗಳಿಗೆ ಎಲ್ಲಿಯೋ ಒಂದು ಕಡೆ ಸ್ವಲ್ಪ ಹೆಸರು ಕೆಟ್ಟಿದೆ. ಶಾಂತಿ ಸೌಹಾರ್ದತೆಗೆ ಎಲ್ಲಿಯೋ ಒಂದು ಕಡೆ ತೊಂದರೆಯಾಗುವಂತಹ ಪ್ರಕರಣಗಳು ನಡೆದಿವೆ. ಹಾಗಾಗಿ ಇದನ್ನೆಲ್ಲಾ ಸರಿ ಮಾಡಬೇಕಾದರೆ ನಮ್ಮ ಜಿಲ್ಲೆಯ ಪೊಲೀಸ್ ವ್ಯವಸ್ಥೆ ಏನಿದೆ ಅದನ್ನು ಬಲಪಡಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದಕ್ಕೆ ಬಯಸುತ್ತಿದ್ದೇನೆ. ನಾನು ಹಿಂದೆ ಕೂಡ ಈ ಪ್ರಶ್ನೆಯನ್ನು ಕೇಳಿದ್ದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 2012ರ ಜನಗಣತಿ ಪ್ರಕಾರ ಸುಮಾರು 15 ಲಕ್ಷ ಜನಸಂಖ್ಯೆ ಇದೆ. ಇಷ್ಟು ಜನಸಂಖ್ಯೆಗೆ ಇಷ್ಟೇ ಪೊಲೀಸ್ ಇರಬೇಕೆನ್ನುವ ಅನುಪಾತ ಕೂಡ ನಮ್ಮ ಗೃಹ ಇಲಾಖೆಯಲ್ಲಿದೆ. ಹಾಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಅನುಪಾತ ಒಬ್ಬ ಪೊಲೀಸ್‌ಗೆ ಸುಮಾರು ಎರಡೂವರೆ ಸಾವಿರ ಜನಸಂಖ್ಯೆಯ ಅನುಪಾತ ಇದೆ.

**ಸಭಾಪತಿಯವರು :-** ಇನ್ನು 5 ನಿಮಿಷಗಳಲ್ಲಿ ತಾವು ಮುಕ್ತಾಯ ಮಾಡಿ.

**ಶ್ರೀ ಐವನ್ ಡಿ'ಸೋಜಾ :-** ಮಾನ್ಯ ಸಭಾಪತಿಯವರೇ, ದಯಮಾಡಿ 10 ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು :-** ತಾವು 5 ನಿಮಿಷಗಳಲ್ಲಿ ಮುಕ್ತಾಯ ಮಾಡಿ.

**Sri IVAN D'SOUZA:** O.K., I will finish as early as possible. ಮಾನ್ಯ ಸಭಾಪತಿಯವರೇ, ಹಾಗಾಗಿ ಬೇರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ ನಮ್ಮ ಜಿಲ್ಲೆಯಲ್ಲಿ ಹೆಚ್ಚು ಅನುಪಾತ ಇದೆ. ನಮ್ಮ ಜಿಲ್ಲೆ ಅತ್ಯಂತ ಸೂಕ್ಷ್ಮ ಜಿಲ್ಲೆಯಾಗಿದ್ದು, 2000 ಮಂದಿಗೆ ಒಬ್ಬ ಪೊಲೀಸ್ ಇದ್ದರೆ, ಬೇರೆ ಜಿಲ್ಲೆಗಳಲ್ಲಿ 500 ಮಂದಿಗೆ ಒಬ್ಬ ಪೊಲೀಸ್ ಇದ್ದಾರೆ. ಹಾಗಾಗಿ ನಮ್ಮ ಜಿಲ್ಲೆಯಲ್ಲಿ ಕೋಮು ಗಲಭೆ ನಿಲ್ಲಿಸಬೇಕು, ಪ್ರಚೋದನಕಾರಿ ಭಾಷಣ ಮಾಡಿ, ಜನರನ್ನು ಉದ್ರೇಕಗೊಳಿಸುವುದನ್ನು ನಿಲ್ಲಿಸಬೇಕು, ಇಡೀ ರಾಜ್ಯದಲ್ಲಿ ಪ್ರಚೋದನಾಕಾರಿ ಭಾಷಣ ಮಾಡಿ, ಅತ್ಯಂತ ಹೆಚ್ಚು ಕೇಸ್ ದಕ್ಷಿಣ ಕನ್ನಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯಲ್ಲಿ ದಾಖಲಾಗಿದೆ. ಹಾಗಾಗಿ ಈ ಜಿಲ್ಲೆಯಲ್ಲಿ ಕೋಮು ಗಲಭೆಯನ್ನು ನಿಲ್ಲಿಸಲು ಪೋಲೀಸ್ ಬಲವನ್ನು ಹೆಚ್ಚು ಮಾಡಬೇಕು. ಇದರ ಜೊತೆ ಮಂಗಳೂರಿನಲ್ಲಿ 2011ರಲ್ಲೇ Commissionerate ಆಗಿದ್ದರೂ ಕೂಡ rural area ಗಳಿಗೆ ಎಸ್.ಪಿ ಕಛೇರಿಯು ಇನ್ನೂ ಜಿಲ್ಲಾ ಕೇಂದ್ರದಲ್ಲಿಯೇ ಇದೆ. ಸುಳ್ಯ ಅಥವಾ ಪುತ್ತೂರಿನಲ್ಲಿ ಗಲಾಟೆ ಆದಾಗ ಎಲ್ಲಾ ಪೋಲೀಸ್ ಅಧಿಕಾರಿಗಳು ಮಂಗಳೂರಿನಿಂದಲೇ ಹೋಗಬೇಕು. ಮಂಗಳೂರು ನಗರದಿಂದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಸಂಪಾಜೆ, ಸುಬ್ರಮಣ್ಯ, ಬೆಳ್ತಂಗಡಿ, ಪುತ್ತೂರು ಪ್ರದೇಶಗಳಿಗೆ ಕ್ರಮವಾಗಿ 87 ಕಿ.ಮೀ, 107 ಕಿ.ಮೀ, 105 ಕಿ.ಮೀ, 60 ಕಿ.ಮೀ ಮತ್ತು 51 ಕಿ.ಮೀ ಕ್ರಮಿಸಿ ಹೋಗಬೇಕಾಗುತ್ತದೆ. ಸುಳ್ಯದಲ್ಲಿ ಗಲಾಟೆ ಆದಾಗ ಮಂಗಳೂರು ನಗರದಿಂದ ಎಸ್.ಪಿ. ಯವರು ಹೋಗಬೇಕಾದಾಗ it will take a minimum of 3-4 hours. ಹಾಗಾಗಿ ಈ ಎಸ್.ಪಿ. ಕಛೇರಿಯು ಯಾರ ಲಾಬಿಯಿಂದಲೋ ಇದುವರೆಗೂ Commissionerate ಒಳಗೆ ಇಟ್ಟುಕೊಂಡಿದ್ದಾರೆ. ಏಕೆಂದರೆ ಐ.ಪಿ.ಎಸ್ ಅಧಿಕಾರಿಗಳಿಗೆ ನಗರ ಬಿಟ್ಟು ಹೊರಗೆ ಇರುವುದಕ್ಕೆ ಆಗುವುದಿಲ್ಲ. ಅದೇರೀತಿ ಐ.ಜಿ.ಪಿ ಕಛೇರಿಯು ಹೊರಗೆ ಹೋಗುವುದಕ್ಕೆ ಆಗುವುದಿಲ್ಲ. ಅವರು Commissionerate ನಲ್ಲಿಯೇ ಇರಬೇಕು. They want to enjoy all the facilities within the city. ಆದ್ದರಿಂದ ತಕ್ಷಣವೇ ಹೊರಗಡೆ ಶಿಫ್ಟ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ಕೋಮು ಗಲಭೆ ಅಥವಾ ಯಾವುದೇ ಗಲಾಟೆಯಾದರೂ ಕಾನೂನು ಸುವ್ಯವಸ್ಥೆ ಕಾಪಾಡಲು ಸಾಧ್ಯವಾಗುವುದಿಲ್ಲ, ಆದ್ದರಿಂದ ತಕ್ಷಣ ಶಿಫ್ಟ್ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ನಾನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುವುದಿದ್ದರೂ, ಮಾನ್ಯ ಸಭಾಪತಿಯವರು ನನ್ನ ಮೇಲೆ ಕರುಣೆ ತೋರಿಸುತ್ತಿಲ್ಲ. ಬೇಗ ಮುಕ್ತಾಯ ಮಾಡಲು ಹೇಳುತ್ತಿದ್ದಾರೆ. ಇನ್ನೂ ಹೆಚ್ಚಿಗೆ ಮಾತನಾಡಲು ಹೋದರೆ ಮಾರ್ಷಲ್ ಕರೆಯುವ ಸಾಧ್ಯತೆಯೂ ಇದೆ. ನಾನು 107 ಕೆ.ಜಿ ಇರುವುದರಿಂದ ಅವರಿಗೂ ನನ್ನನ್ನು ಎತ್ತಿಕೊಂಡು ಹೋಗಲು ಕಷ್ಟ ಇದೆ. ಆದರೂ ಮಾನ್ಯ ಸಭಾಪತಿಯವರ ಮಾತಿಗೆ ಗೌರವ ಕೊಟ್ಟು, ನನಗೆ ಬಜೆಟ್ ಮೇಲೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ಈ ಬಜೆಟ್‌ಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇದು ಸುಮಾರು 2,25,000 ಕೋಟಿ ರೂಪಾಯಿಗಳ ಆಯವ್ಯಯ. ನಾನು 1983ನೇ ಇಸವಿಯಿಂದಲೂ ನೋಡುತ್ತಿದ್ದೇನೆ. ಆಯವ್ಯಯದ ಗಾತ್ರ ಏರುತ್ತಲೇ ಇದೆ, ಆದರೆ ಅಭಿವೃದ್ಧಿ ಮಾತ್ರ ಕುಂಠಿತವಾಗಿದೆ. ನಾನು ಎಂ.ಎಲ್.ಎ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಾಗ 1983ನೇ ಇಸವಿಯಲ್ಲಿ ಒಂದು ಲಕ್ಷ ರೂಪಾಯಿಯನ್ನು ಕ್ಷೇತ್ರಾಭಿವೃದ್ಧಿಗಾಗಿ ಕೊಡುತ್ತಿದ್ದರು. ಈಗ 4 ರಿಂದ 10 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. I want to know where this money goes? ವರ್ಷ ವರ್ಷ ರಸ್ತೆಗಳಾಗಬೇಕು, ಶಾಲಾ ಕಟ್ಟಡಗಳ ನಿರ್ಮಾಣ ಆಗಬೇಕು. ಬೆಳಿಗ್ಗೆ ಮಾನ್ಯ ಸಚಿವರಾದ ಮಾನ್ಯ ಮಹೇಶ್‌ರವರು ಹೇಳುತ್ತಿದ್ದರು. ಹತ್ತು ಸಾವಿರ ಕೊಠಡಿಗಳನ್ನು ಕಟ್ಟುವುದಕ್ಕೆ 1,45,000 ಕೋಟಿ ರೂಪಾಯಿಗಳು ಬೇಕು. ವಸತಿ ನಿಲಯವನ್ನು ಕಟ್ಟುವುದಕ್ಕೆ ಹಣ ಬೇಕು. ಈ ಆಯವ್ಯವನ್ನು ಮಂಡನೆ ಮಾಡುವಾಗ I am not criticising it. It is a practice that every government has to present a budget. ಆದರೆ ಈ ಸಲ ಮೊಟ್ಟ ಮೊದಲನೆಯದಾಗಿ ನಾನು ಎರಡು ಆಯವ್ಯಯ ಮಂಡನೆ ಮಾಡಿರುವುದನ್ನು ನೋಡಿದ್ದೇನೆ. ಯಾವ ಆಯವ್ಯಯದ ಬಗ್ಗೆ ಮಾತನಾಡಬೇಕೆಂದು ನಾನು ಗೊಂದಲದಲ್ಲಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವ ಆಯವ್ಯದ ಬಗ್ಗೆ ಮಾತನಾಡಬೇಕೋ ಅಥವಾ ಮಾನ್ಯ ಎಚ್.ಡಿ.ಕುಮಾರಸ್ವಾಮಿಯವರು ಮಂಡಿಸಿರುವ ಆಯವ್ಯದ ಬಗ್ಗೆ ಮಾತನಾಡಬೇಕೋ? ತಾವು ಯಾವುದರ ಮೇಲೆ ಮಾತನಾಡಿ ಎಂದು ಹೇಳುತ್ತೀರೋ ಅದರ ಮೇಲೆ ಮಾತನಾಡುತ್ತೇನೆ.

**ಸಭಾಪತಿಯವರು:-** ನಾನೇನು ಹೇಳುವುದಿಲ್ಲ, ತಾವೇ ಮಾತನಾಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಎಲ್ಲರೂ ಶಾಣೆಯಾಗಿದ್ದಾರೆ. ಆದರೆ, ನಾನು ಹೆಸರಿಗೆ ಮಾತ್ರ ಶಾಣೆಯಾಗಿದ್ದೇನೆ. ಹೈದರಾಬಾದ್-ಕರ್ನಾಟಕದಲ್ಲಿ 6 ಜಿಲ್ಲೆಗಳಿವೆ. The population of the Hyderabad-Karnataka region is 1/6$^{th}$ of the total population of the state. ಆ ಜನಸಂಖ್ಯೆಯ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಿರುವುದನ್ನು ಆಯವ್ಯದಲ್ಲಿ ತೋರಿಸಿದ್ದಾರೆಯೇ? ಅದನ್ನು ಅನುಚ್ಛೇದ 371 ಪ್ರಕಾರ ಮಾಡಿದರು, ಅದಕ್ಕೆ ಪ್ರತ್ಯೇಕವಾದ ಬಜೆಟ್ ಬೇಕು. ಡಾ:ನಂಜುಂಡಪ್ಪ ವರದಿಯ ಪ್ರಕಾರ ಆಯವ್ಯಯ ಇಲ್ಲ. ಅವರು ಸುಮಾರು 2800 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಆಗ ಹೇಳಿದ್ದರು. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಅದನ್ನು ಮಾಡಿರುವಂಥದ್ದು. ಈಗ ಮಂಡಿಸಿರುವ ಆಯವ್ಯಯದಲ್ಲೂ ಅದರ ಬಗ್ಗೆ ತೋರಿಸಿಲ್ಲ. ಕಳೆದ ಐದು ವರ್ಷಗಳಲ್ಲಿ ಹೈದರಾಬಾದ್-ಕರ್ನಾಟಕಕ್ಕೆ ಮೀಸಲಿಟ್ಟ ಸುಮಾರು 2300 ಕೋಟಿ ರೂಪಾಯಿಗಳಲ್ಲಿ 600 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ನಾವು ಹೈದರಾಬಾದ್-ಕರ್ನಾಟಕಕ್ಕೆ special status ಕೊಟ್ಟಿದ್ದೇವೆ. We all belong to that region only. ಮಾನ್ಯ ಭೋಜೇಗೌಡರೇ, ಇದರಲ್ಲಿ ರಾಜಕಾರಣ ಮಾಡುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವಶ್ಯಕತೆ ಇಲ್ಲ. Our own concern is to see how best we can develop our region irrespective of party politics. ಆ ಗುರಿಯನ್ನು ನಾವು ಮುಟ್ಟಿದ್ದೇವೆಯೇ? ನಮ್ಮ ಭಾಗದಲ್ಲಿ ರಸ್ತೆಗಳಾಗಿವೆಯೇ? 1972 ರಲ್ಲಿ ಪ್ರಾರಂಭವಾಗಿರುವಂತಹ ಬೆಣ್ಣೆತೊರಾ ಯೋಜನೆ. ಗಂಡೂರಿ ನಾಲಾ, ಕಾರಂಜಾ, ನಾರಂಜಾ, ಮುಲ್ಲಮಾರಿ, ಅಮರ್ಜ, UKP Stage-III, 1966ನೇ ಇಸವಿಯಲ್ಲಿ ಶ್ರೀಮಾನ್ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಡಿಗಲ್ಲು ಹಾಕಿದ್ದರು. ಇನ್ನೂ ಆ ಯೋಜನೆ ಪೂರ್ತಿಯಾಗಿಲ್ಲ. ಮಾನ್ಯ ವೀರೇಂದ್ರ ಪಾಟೀಲ್‌ರವರು ಎರಡು ಸಲ ಮುಖ್ಯಮಂತ್ರಿಗಳಾಗಿದ್ದಾರೆ, ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು, ಘಟಾನುಘಟಿಗಳು ಮುಖ್ಯಮಂತ್ರಿಗಳಾಗಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸೋಲಿಲ್ಲದ ಸರದಾರರಾಗಿದ್ದಾರೆ. I am very proud that he has not been defeated by anybody else. Even I contested elections against him in the year 1994 but I could not defeat him. What happened to that area? ಇನ್ನು ಏನು ಪ್ರಗತಿಯಾಗಿಲ್ಲ. ಅನುಚ್ಛೇದ 371(ಜೆ) ಅನ್ನು ಜಾರಿಗೆ ತರುವುದರಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ contribution ಇದೆ. ನನ್ನ ಪಾತ್ರವೂ ಇದೆ. ಮಾನ್ಯ ಧರ್ಮಸಿಂಗ್‌ರವರ contribution ಇದೆ. ಅವರು ಈಗ ನಮ್ಮ ಮಧ್ಯೆ ಇಲ್ಲ. Mr. Dharam Singh was also there. But with all these things I am sorry to tell ಈ ಐದು ವರ್ಷಗಳ ರಾಜಕೀಯದಲ್ಲಿ ಪುನಃ ಅವರಿಬ್ಬರು ಸೇರಿ ಸರ್ಕಾರ ರಚನೆ ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಕೆ.ಬಿ.ಶಾಣಪ್ಪನವರೇ, ಇಲ್ಲಿಯವರೆವಿಗೂ ಪ್ರಗತಿಯಾಗದಿರುವುದಕ್ಕೆ ಕಾರಣವೇನು ಎಂದು ತಾವು ಹೇಳಲಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಅದನ್ನು ಹೇಳಿದರೆ ಎಲ್ಲರಿಗೂ ಬೇಜಾರು ಆಗುತ್ತದೆ.

**ಸಭಾಪತಿಯವರು:–** ಕಾರಣವನ್ನು ತಾವು ಹೇಳಬೇಕು.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ನನ್ನದು hidden agenda ಇದೆ.

**ಸಭಾಪತಿಯವರು:–** ಇದರ ಬಗ್ಗೆ ಮಾನ್ಯ ಶರಣಪ್ಪ ಮಟ್ಟೂರುರವರಿಗೆ ಬಹಳ ಚೆನ್ನಾಗಿ ಗೊತ್ತಿದೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ತಾವು ಚೆನ್ನಾಗಿ ಹೇಳುತ್ತೀರಿ, ಅದನ್ನು ನಾನು ಬಿಡಿಸಿ ಹೇಳುವುದಕ್ಕೆ ಬರುವುದಿಲ್ಲ. ಕಳೆದ ಸಲ ನಮ್ಮವರೇ ಒಬ್ಬರು ಸಚಿವರಾಗಿದ್ದರು. ಅವರು ಬೆಳಗಾವಿ ಅಧಿವೇಶನದಲ್ಲಿ ಮೇ 15 ರೊಳಗೆ ಎಲ್ಲಾ ಪ್ರಾಜೆಕ್ಟ್‌ನ್ನು ಮುಗಿಸುತ್ತೇನೆಂದು ಹೇಳಿದರು. ನೀನು ಸುಳ್ಳು ಹೇಳಬೇಡ, ನಾನು ಇನ್ನು ಇಲ್ಲೇ ಆರು ವರ್ಷ ಇರುತ್ತೇನೆ, ಇನ್ನೂ ಒಂದೂ ಪ್ರಾಜೆಕ್ಟ್ ಮುಗಿಯಲಿಲ್ಲ, ಆಮೇಲೆ ಅವರು ಮಂತ್ರಿಯೂ ಆಗಲಿಲ್ಲ. ಅವರು ಏಕೆ ಮಂತ್ರಿಯಾಗಿಲ್ಲ ಎಂಬುದು ನನಗೆ ಗೊತ್ತಿಲ್ಲ. ಅದಕ್ಕಾಗಿ ಯಾವುದೇ ಕಮಿಟ್‌ಮೆಂಟ್ ಇತ್ತು ಎಂದರೆ you must have a limit. ಎಷ್ಟು ನೀನು ಕಾಲು ಚಾಚುವುದಕ್ಕೆ ಆಗುತ್ತದೆಯೋ ಅಷ್ಟೆ ಕಾಲನ್ನು ಚಾಚಬೇಕು. ನಾವು ವಿಧಾನಸಭೆಗೆ ಬಂದಾಗ ಕೆಲವು ವಿಷಯಗಳ ಬಗ್ಗೆ ಬಹಳಷ್ಟು ಯೋಚನೆ ಮಾಡಿದ್ದೇವೆ. Wonders ಮಾಡುತ್ತೇವೆ ಎಂದು ಹೇಳಿದೆವು. ಈಗ ಬಹಳ ಜನರು ಹೊಸದಾಗಿ ಬಂದಿದ್ದಾರೆ. ಅವರು ಇಲ್ಲಿ ಏನಾದರೂ ಮಾಡಬಹುದು ಎಂದು ತಿಳಿದುಕೊಂಡಿದ್ದಾರೆ. ಇಲ್ಲಿ ರೂಲ್ಸ್, ವ್ಯವಸ್ಥೆ, ಇತ್ಯಾದಿಗಳಿಂದಾಗಿ ಏನೂ ಮಾಡುವುದಕ್ಕಾಗುವುದಿಲ್ಲ. ನಾನೇ ಇಲ್ಲಿ 30 ವರ್ಷಗಳಿಂದ ಇದ್ದೇನೆ, ಸಂಸತ್ತಿನಲ್ಲಿದ್ದೇನೆ, ನನಗೆ ನೀವು ಏಕೆ ಎದ್ದೀರಿ ಎಂದು ಬೆದರಿಸುತ್ತೀರಿ.

(ಮುಂದು)

(281):12.07.2018-04.40-ಬಿಕೆಪಿ-ಆರ್‌ಎನ್

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಣಪ್ಪನವರು ಮಾತನಾಡುವುದಕ್ಕೆ ಬಿಡುವುದಿಲ್ಲ, ನಾವು ಏನು ಮಾಡುವುದು?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಂತಹ ವಿಷಯವನ್ನು ಮಾತನಾಡಿದರೆ, ಅದಕ್ಕೆ ಬಿಡುತ್ತೇವೆ; ಮಾತನಾಡಬಾರದಂತಹ ವಿಷಯಗಳನ್ನು ಮಾತನಾಡಿದರೆ ನಾವು ಹೇಗೆ ಅವರಿಗೆ ಮಾತನಾಡಲಿಕ್ಕೆ ಬಿಡುವುದು?

ಸಭಾಪತಿಯವರು:-ಮಾನ್ಯ ಶಾಣಪ್ಪನವರೇ, ತಾವು ಸರಿಯಾಗಿಯೇ ಹೇಳಿದಿರಿ.

ಶ್ರೀ ಕೆ.ಬಿ.ಶಾಣಪ್ಪ:- ಮಾನ್ಯ ಭೋಜೇಗೌಡರ ತಂದೆ ನನ್ನ ಜೊತೆ ಇದ್ದರು, ಹಾಗಾಗಿ ಮಾನ್ಯ ಭೋಜೇಗೌಡರನ್ನು ನೋಡಿದರೆ ನನಗೆ ಅವರ ತಂದೆಯನ್ನು ನೋಡಿದ ಹಾಗೆ ಆಗುತ್ತದೆ.

**ಸಭಾಪತಿಯವರು:-** ಅವರು ಇವರ ರೀತಿ ಇದ್ದರೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಲ್ಲಿ 1983–85ರ ಅವಧಿಯಲ್ಲಿ ಮಾನ್ಯ ಲಕ್ಷ್ಮಯ್ಯ ಗೌಡರು ನನ್ನ ಜೊತೆ ಇದ್ದರು. He was a terror. ಅವರು ಇವರ ರೀತಿಯಲ್ಲೇ ಮಾತನಾಡುತ್ತಿದ್ದರು. ಹೆಗಡೆಯವರು ಮತ್ತು ನಾನು ಅಲ್ಲಿಯೇ ಇದ್ದೆವು. ಅವರು ಮಾತನಾಡುತ್ತಿದ್ದಾಗ ಯಾರು ಏನೇ ಹೇಳಿದರು ಸಹ ಕೇಳುತ್ತಿರಲಿಲ್ಲ. ಇವರು ಸಹ ಹಾಗೆಯೇ ಇದ್ದಾರೆ. The Hon'ble Member is replica of his father. ಅನೇಕ ವಿಷಯಗಳ ಬಗ್ಗೆ ಅವರು ಇನ್ನೂ ತಿಳಿದುಕೊಳ್ಳಬೇಕಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಣಪ್ಪನವರು ಬಂದೇ ಒಂದು ನಿಮಿಷ ನಾನು ಹೇಳುವುದನ್ನು ಗಮನಿಸಬೇಕು. ಮಾನ್ಯ ಲಕ್ಷ್ಮಯ್ಯನವರು ಪ್ರೈಮರಿ ಸ್ಕೂಲ್ ಟೀಚರ್ ಆಗಿದ್ದರು. ಯಾವುದೋ ಕಾರಣಕ್ಕೆ ಇಲಾಖಾ ಅಧಿಕಾರಿಗಳ ಜೊತೆ ಜಗಳವಾಗಿ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟು, ಚಾಲೆಂಜ್ ಆಗಿ ತೆಗೆದುಕೊಂಡು ಎಂ.ಎಲ್.ಎ. ಆದರು. ಆ ಎಂ.ಎಲ್.ಎ. ಪ್ರತಿನಿಧಿಯಾಗಿ ಮಾನ್ಯ ಧರ್ಮೇಗೌಡರು ಬಂದರು. ಈಗ ವಿಧಾನ ಸಭೆ ಶಾಸಕರ ಕಡೆಯಿಂದ ಆಯ್ಕೆಯಾಗಿ ವಿಧಾನ ಪರಿಷತ್ತಿಗೆ ಬಂದಿದ್ದಾರೆ. ಮಾನ್ಯ ಭೋಜೇಗೌಡರು ಶಿಕ್ಷಕರಾಗಿದ್ದರು, ಆ ಕಾರಣದಿಂದ ಶಿಕ್ಷಕರ ಪ್ರತಿನಿಧಿಯಾಗಿ ವಿಧಾನ ಪರಿಷತ್ತಿಗೆ ಬಂದಿದ್ದಾರೆ. ಈಗ ಮಾನ್ಯ ಶಾಣಪ್ಪನವರು ತಮ್ಮ ಮಾತನ್ನು ಮುಂದುವರೆಸಬಹುದು.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, 1960ರಲ್ಲಿ ನಾನು ಮೆಟ್ರಿಕ್ ಪಾಸ್ ಆದ ಮೇಲೆ, ಮಾಸ್ಟರ್ ಆಗಿದ್ದೆ. Any how, I am retiring shortly and I have to tell something to this House.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆಗ ನಾನು ಹುಟ್ಟಿರಲಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಅವರು ಯಾವಾಗ ಹುಟ್ಟಿದ್ದಾರೆಂದು ನನಗೆ ಹೇಗೆ ಗೊತ್ತು? ನನಗೆ ನಾನು ಹುಟ್ಟಿದ ದಿನಾಂಕವೇ ಗೊತ್ತಿಲ್ಲ. ಎ.ಸಿ.ಸಿ. ಸ್ಕೂಲ್‌ನಲ್ಲಿ 1955ರಲ್ಲಿ ಐದನೇ ತರಗತಿ ಪಾಸ್ ಆಗಿದ್ದೆ. ನಾನು, ಶ್ರೀ ದುರ್ಗಪ್ಪ ಮತ್ತು ಶ್ರೀ ಹುಲುಗಪ್ಪ ಎನ್ನುವವರು ನನ್ನ ದೋಸ್ತಿಗಳು. ಆಗ ನಮಗೆ 10 ರಿಂದ 12 ವರ್ಷವಾಗಿತ್ತು, ನಾವು ಸ್ವಲ್ಪ ದೊಡ್ಡವರಾಗಿದ್ದೆವು, ಆಗ K.G. (Kinder Garden) ಗಳೆಲ್ಲಾ ಇರಲಿಲ್ಲ. ಕೊನೆಗೆ ಆ ಶಾಲೆಯ Head Master ರವರು ನನ್ನನ್ನು ಕರೆದು 'ನಿನ್ನ ಅಪ್ಪ–ಅಮ್ಮ ನಿನ್ನ ಹುಟ್ಟಿದ ದಿನಾಂಕವನ್ನು ಕೊಟ್ಟಿಲ್ಲ' ಎಂದು ಹೇಳಿದರು. ಅದಕ್ಕೆ ನಾನು ಮನೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿ ನಮ್ಮ ಅವ್ವನನ್ನು 'ನಾನು ಹುಟ್ಟಿದ ತಾರೀಖು ಯಾವುದು' ಎಂದು ಕೇಳಿದೆ. ಅದಕ್ಕೆ ಅವರು 'ಎಲ್ಲರೂ ಹುಟ್ಟಿದ ಹಾಗೆಯೇ ನೀನೂ ಹುಟ್ಟಿರುವೆ, ಅದಕ್ಕೆ ನಾನು ಏನು ಹೇಳಲಿ' ಎಂದರಲ್ಲದೆ ಸ್ವಲ್ಪ ಹೊತ್ತು ಯೋಚಿಸಿ 'ನೀನು ಶರಣಬಸಪ್ಪ ಜಾತ್ರೆಯ ದಿನದಂದು ಹುಟ್ಟಿದೆ' ಎಂದರು. 'ಆ ತರಹದಲ್ಲಿ ಸುಮಾರು ಜಾತ್ರೆಯಾಗಿವೆ' ಎಂದು ನಾನು ನನ್ನ ಅವ್ವನಿಗೆ ಹೇಳಿದೆ. ಕಡೆಗೆ ಮನೆಯಿಂದ ವಾಪಸ್ ಬಂದ ನಾನು 'ಈ ಮುದುಕಿ ಈ ರೀತಿಯಲ್ಲಿ ಹೇಳಿದ್ದಾರೆ, ಆದರೆ ಮುಖ್ಯೋಪಾಧ್ಯಾಯರಿಗೆ ಏನು ಹೇಳುವುದು ಎಂದು ಯೋಚಿಸಿ ಕಡೆಗೆ ನಾನು, ಶ್ರೀ ದುರ್ಗಪ್ಪ ಮತ್ತು ಶ್ರೀ ಹುಲುಗಪ್ಪ 16th May 1938 ಎಂದು ಮೂವರೂ ಒಂದೇ Date of Birth ಬರೆದೆವು. ಆ Date of Birth ಪ್ರಕಾರ ನನಗೆ ಈಗ 81 ವರ್ಷಗಳು. ಏನು ವ್ಯತ್ಯಾಸವಿಲ್ಲ, ಒಂದರೆಡು-ಮೂರು ವರ್ಷಗಳು ವ್ಯಾತ್ಯಾಸವಿರಬಹುದು. ಅಂತಹ ಪರಿಸ್ಥಿತಿಯಲ್ಲಿ ನಾವುಗಳು ಮುಂದೆ ಬಂದು, ಮೆಟ್ರಿಕ್ ಪಾಸ್ ಮಾಡಿ, ಮಾಸ್ಟರ್ ಆಗಿ ಕೆಲಸ ನಿರ್ವಹಿಸಿದೆನು, ಕ್ಲರ್ಕ್ ಆಗಿದ್ದ ಸಮಯದಲ್ಲಿಯೇ ಅಲ್ಲಿ ಕಮ್ಯುನಿಸ್ಟ್ ಪಾರ್ಟಿ ವಾತಾವರಣವಿತ್ತು. Man is the product of environment ಎಂಬದು ಅಕ್ಷರಶಃ ನಿಜ. I also became Communist Party Member. Movement ಆಯಿತು, Dismiss ಆಯಿತು. Dismiss ಆದಮೇಲೆ ಹಣೆಬರಹ ಏನೆಂದು ತಮಗೆಲ್ಲಾ ಗೊತ್ತಿದೆ. ಮತ್ತೆ, ಊರೂರು ತಿರುಗಿಕೊಂಡು ಕಮ್ಯುನಿಸ್ಟ್ ಪಾರ್ಟಿಯನ್ನು ಕಟ್ಟುವುದು, ಕಡೆಗೆ ಅದಕ್ಕೆ turning point ಎನ್ನುತ್ತಾರೆ; ಆ turning point ಏನು ಎಂದರೆ, 1983ರಲ್ಲಿ ಜನರು ನನ್ನನ್ನು ಎಂ.ಎಲ್.ಎ. ಮಾಡಿದರು. This is the beauty of the turning point. ಇಲ್ಲವಾದರೆ ನನಗೆ ಏನು ಗೊತ್ತಿತ್ತು, ಈ ಮನೆಗೆ ಬರುತ್ತೇನೆಂದು ನನಗೆ ಗೊತ್ತಿರಲಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಎಡಪಂಥೀಯರು ಮತ್ತು ಬಲಪಂಥೀಯರ ಬಗ್ಗೆ ಹೇಳಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಆ ವಿಷಯಕ್ಕೆ ಬರುತ್ತೇನೆ. ಈಗ Man is the product of environment. ಆ environment ನಲ್ಲಿ Communist Party ವಾತಾವರಣ ಅದಕ್ಕೆ ನಾನು ಸಹ ಕಮ್ಯುನಿಸ್ಟ್ ಆದೆ. ನಾನು ಓದಿದ ಶಾಲೆಯಲ್ಲೇ ಟೀಚರ್ ಆಗಿದ್ದೆ, ನಂತರ ಒಂದು ಕಂಪನಿಯಲ್ಲಿ ಕಾರಕೂನನಾದೆ, ಸಂಘಟನೆ ಮಾಡಿದೆ, ಹೋರಾಟ ಮಾಡಿದೆ, dismiss ಆಯಿತು, as a President 74 ದಿನ strike ಮಾಡಿದೆ, ನನ್ನನ್ನು ಹೊರಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿದರು. ಊರೂರು ತಿರುಗಾಡಿದ್ದಾಯಿತು; Case ಆಯಿತು, ನನ್ನನ್ನು ಒಳಗೆ ಹಾಕಿದರು. ಮತ್ತೆ ಕಂಪನಿಯವರು ನನ್ನನ್ನು ನೌಕರಿಗೆ ತೆಗೆದುಕೊಂಡರು. ಏಕೆಂದರೆ ನನಗೆ ಬಡತನವನ್ನು ತಡೆಯುವುದಕ್ಕೆ ಆಗಲಿಲ್ಲ. ಆ ನಂತರ 1978ರಲ್ಲಿ ಚುನಾವಣೆ ಬಂತು ನನ್ನನ್ನು ಚುನಾವಣೆಗೆ ನಿಲ್ಲು ಎಂದರು, ನಾನು ಬೇಡವೆಂದು ಹೇಳಿದೆ. ಮತ್ತೆ 1983ರಲ್ಲಿ ಚುನಾವಣೆ ಬಂತು, ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಗುಂಡುರಾವ್ ರವರು ನಮ್ಮ ಚಿತ್ತಾಪುರ ತಾಲ್ಲೂಕಿನಲ್ಲಿ ಬಂದು ಚುನಾವಣೆಗೆ ನಿಂತರು. ಮಾನ್ಯ ಗುಂಡುರಾವ್ ರವರು ಮುಖ್ಯಮಂತ್ರಿಯಾಗಿದ್ದವರು. ಆ ಸಂದರ್ಭದಲ್ಲಿ ಚಿತ್ತಾಪುರ ತಾಲ್ಲೂಕು ಶಹಾಬಾದ್ constituency ಗೆ ಸೇರಿತ್ತು. ಮುಖ್ಯಮಂತ್ರಿಯಾಗಿದ್ದವರು ಅಲ್ಲಿಗೆ ಬಂದು ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ ಎಂದರೆ, ನಾನು ಖಂಡಿತವಾಗಿಯೂ ಸೋಲುತ್ತೇನೆಂದು, ನಾನು ಆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವೆಂದು ಹೇಳಿದೆ. ಕಡೆಗೆ ಹಳೇ labour ಗಳನ್ನು ಬಿಟ್ಟು ಕಡೆಗೆ ಗುಂಡುರಾವ್‌ರವರನ್ನು ಮಾಡಿದರು. ಆಗ ಆ nomination ಅನ್ನು ವಾಪಸ್ಸು ತೆಗೆದುಕೊಂಡು, ಕಡೆಗೆ ವಾಪಸ್ಸು ಬರಲಾಯಿತು. ಜನತಾದಳದ ಜೊತೆ alliance ಆಯಿತು. ನಾವು ಆರಿಸಿ ಬಂದೆವು. That is the turning point in my life.

ನಮ್ಮ ದುರ್ದೈವದಿಂದ ಏನಾಯಿತು ಎಂದರೆ, ಎರಡೇ ವರ್ಷಗಳಲ್ಲಿ 1984ರ ಅಕ್ಟೋಬರ್ ತಿಂಗಳಿನಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಮರ್ಡರ್ ಆಯಿತು, ನಾನು ಮನೆಗೆ ಬಂದೆ. ಆಗ ಏನು ಮಾಡುವುದು? ನಮಗೆ ನಾಯಕರಾಗಿದ್ದಂತಹ ಶ್ರೀ ಗುಡಿಯವರು ಸಹ ತೀರಿಕೊಂಡಿದ್ದರು. ಆಗ ನಾನು, ಶ್ರೀ ಕಾಂತ ಮತ್ತು ಶ್ರೀ ಅಮರಪ್ಪ ನಾಯಕ್ ಮತ್ತು ಶ್ರೀ ಗುಡಿಯವರು ಅಷ್ಟೂ ಮಂದಿ ಚಾಪೆ ತೆಗೆದುಕೊಂಡು, ಕೊಠಡಿಯನ್ನು ಖಾಲಿ ಮಾಡಿ ಹೋದೆವು. ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಿದೆವು, ಮೊದಲನೆ ಚುನಾವಣೆಯಲ್ಲಿ 277 ಮತಗಳಿಂದ ಆರಿಸಿ ಬಂದಿದ್ದು. ಎರಡನೇ ಚುನಾವಣೆಯಲ್ಲಿ ಸುಮಾರು 20 ತಿಂಗಳು ತಿರುಗಾಡಿದೆವು. ಮತ್ತೆ ಜನ ನನ್ನನ್ನು 77 ಮತಗಳಿಂದ ಆರಿಸಿ ಕಳುಹಿಸಿದರು. ನಮ್ಮ ಹಣೆಬರಹಕ್ಕೆ ಅ ವಿಚಾರದಲ್ಲಿ ಬಡತನ ತಪ್ಪಲಿಲ್ಲ. ಯಾವಾಗ ಎಲ್ಲಿ ಹೋದರೂ ನನ್ನ ಬೆನ್ನ ಹಿಂದೆ ಬಡತನವೇ; ನನ್ನ ಮತಗಳಿಗೂ ಸಹ ಬಡತನವೆ. We thought that these things have moved. ಅದಕ್ಕೆ 'ಕಾಲಾಯಾ ತಸ್ಮೈ ನಮಃ' ಎನ್ನುತ್ತಾರಲ್ಲ, 1991ರವರೆಗೆ ಅಂತರರಾಷ್ಟ್ರೀಯ communist movement ನಲ್ಲಿ ಬಹಳ ದೊಡ್ಡ... ನೀವು ಕೇಳಿದ್ದಿರಲ್ಲ. ಅಂತರರಾಷ್ಟ್ರೀಯ communist movement ನಲ್ಲಿ 1991ರಲ್ಲಿ ಇಡೀ war set up had been collapsed. Soviet Russia had collapsed ಅಂತರರಾಷ್ಟ್ರೀಯ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

communist party ಯವರು ಎಲ್ಲರೂ ಬಹಳ ಗದ್ದಲದಲ್ಲಿ ಬಿದ್ದರು. I visited Germany in 1983. ಅಂತಹ ಸಮಾಜದೊಳಗೆ ನಮ್ಮಂತಹ ಬಡವರು ಏನು ಮಾಡಬೇಕು? ಅಲ್ಲಿಯವರೆಗೆ ಏನಾಗಿತ್ತು ಎಂದರೆ, ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ಶ್ರೀ ಜೆ.ಹೆಚ್.ಪಟೇಲ್‌ರವರ ಜೊತೆ ನನ್ನ ಸಂಬಂಧ ಬೆಳೆದಿತ್ತು. ಶ್ರೀ ಜೆ.ಹೆಚ್.ಪಟೇಲ್ ಸಾಹೇಬರಿಗೂ ನನಗೂ ಎಂತಹ ಒಂದು ಒಳ್ಳೆಯ ಬಹಳ ಸಂಬಂದವಿತ್ತು ಎಂದರೆ, ಅದು ಹೇಗೆ ಮತ್ತು ಏಕೆ ಎಂಬುದನ್ನೆಲ್ಲಾ ಇಲ್ಲಿ ಹೇಳಬಾರದು. ನಾವು ಜೊತೆಯಲ್ಲೇ ಕುಳಿತುಕೊಳ್ಳುತ್ತಿದ್ದೆವು!

**ಸಭಾಪತಿಯವರು:-** ಅವರ ಪ್ರೀತಿಗೆ ತಕ್ಕಂಥದ್ದನ್ನೇ ಕೊಟ್ಟಿದ್ದಾರೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹೇಳಬೇಕೆಂದರೆ, ಒಂದು ಬಾರಿ ಶ್ರೀ ಬಿ.ಜಿ.ಬಣಕಾರ್‌ರವರು ನನ್ನನ್ನು ಕೇಳಿದರು. 1985-86ರ ಅವಧಿಯಲ್ಲಿ ಶ್ರೀ ಬಿ.ಜಿ.ಬಣಕಾರ್‌ರವರು ಸ್ಪೀಕರ್ ಆಗಿದ್ದರು. ಆ ಕಡೆ ನಾನು, ಕೃಷ್ಣರವರು, ಪಂಪಾಪತಿ ಮತ್ತು ಭೂಪತಿಯವರು ಕಮ್ಯುನಿಸ್ಟ್ ಪಾರ್ಟಿಯ ಎಂ.ಎಲ್.ಎ.ಗಳಾಗಿದ್ದೆವು. ಮಾನ್ಯ ಶ್ರೀ ವೇದಾಂತ ಹೆಮ್ಮಿಗೆಯವರು Private Member's Bill ತಂದರು. ಸುರಪಾನ ಮಾಡುವುದು ದೇವ-ಅಸುರರ ಕಾಲದಲ್ಲಿತ್ತು, ಈಗಲೂ ಇದನ್ನು continue ಮಾಡಬೇಕು ಎಂದು ಅದರ ಬಗ್ಗೆ ವ್ಯಾಖ್ಯಾನ ನಡೆಯಿತು. ಅವರು ಚೆನ್ನಾಗಿ ಸುರಪಾನ ಮಾಡುತ್ತಿದ್ದರು, ನಾನೂ ಮಾಡುತ್ತಿದ್ದೆ. ಕಡೆಗೆ ಶ್ರೀ ಬಿ.ಜಿ. ಬಣಕಾರ್ ರವರು 'ಇದರ ಬಗ್ಗೆ ಸುಮಾರು ತಿಂಗಳಿನಿಂದ ಚರ್ಚೆ ನಡೆದಿದೆ, ಇಲ್ಲಿ ಎಷ್ಟು ಮಂದಿ ಸಾರಾಯಿ ಕುಡಿಯುವವರು ಇದ್ದೀರಿ, ಕೈ ಎತ್ತಿ' ಎಂದರು. ಆಗ ಆಡಳಿತ ಪಕ್ಷದ ಕಡೆಗೆ ನಾನು ಇದ್ದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಣಪ್ಪನವರಿಗೆ ಒಂದು ನಿಮಿಷ ಇರುವುದಕ್ಕೆ ಹೇಳಿ. ಅವರು ಬಹಳ ಒಂದು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

**ಸಭಾಪತಿಯವರು:-** ಯಾವುದು?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಆಗಿರುವಂತಹ ಅನುಭವವನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಬಹಳ ಸ್ವಾರಸ್ಯಕರವಾಗಿ ಮಾತನಾಡುತ್ತಿದ್ದಾರೆ. ಈ 'ಸುರಪಾನ' ಎಂಬುದು ನಿಜ. ಅದು ಏಕೋ ನನಗೆ ಒಗ್ಗಿಲ್ಲ, ಅದು ಬೇರೆ

ವಿಚಾರ. ಆದರೆ, ನೀವು ಹೇಳಿದ ಹಾಗೆ ಸೀತೆ ಮತ್ತು ರಾಮ ಕಾಡಿಗೆ ಹೋಗುತ್ತಾರೆ. ಆ ಕಾಡಿಗೆ ಹೋದಾಗ ಗಂಗಾ ನದಿಯನ್ನು ದಾಟಬೇಕಾದರೆ, ಗಂಗಾಮಾತೆಗೆ ಸೀತೆ ಪೂಜೆ ಮಾಡುತ್ತಾಳೆ. ಮಹರ್ಷಿ ವಾಲ್ಮೀಕಿಯ ಮೂಲ ರಾಮಾಯಣದಲ್ಲಿ ಈ ವಿಚಾರ ಉಲ್ಲೇಖವಾಗಿದೆ. ಆಕೆ ಪೂಜೆ ಮಾಡಿ ಗಂಗಾಮಾತೆಯ ಬಳಿ ಏನನ್ನು ಬೇಡಿಕೊಳ್ಳುತ್ತಾಳೆ ಎಂದರೆ, ಹದಿನಾಲ್ಕು ವರ್ಷಗಳ ಕಾಲ ನಾನು, ನನ್ನ ಗಂಡ ಮತ್ತು ಮೈದುನ ಕಾಡಿಗೆ ಹೊರಟ್ಟಿದ್ದೇವೆ. ಈ ಹದಿನಾಲ್ಕು ವರ್ಷ ನೀನು ನಮ್ಮನ್ನು ರಕ್ಷಣೆ ಮಾಡು ತಾಯಿ, ಹದಿನಾಲ್ಕು ವರ್ಷದ ನಂತರ ನಾವು ವಾಪಸ್ಸು ಬಂದ ಮೇಲೆ, ನಿನಗೆ ತೃಪ್ತಿಯಾಗುವಷ್ಟು ಸುರಪಾನದ ಮೂಲಕ ಪೂಜೆ ಮಾಡಿಸುತ್ತೇನೆ ಮತ್ತು ಮಾಂಸದ ನೈವೇದ್ಯವನ್ನು ಅರ್ಪಿಸುತ್ತೇನೆಂದು ಸೀತೆ ಗಂಗಾಮಾತೆಗೆ ಪೂಜೆ ಮಾಡುತ್ತಾಳೆ. ಇದನ್ನು ಏತಕ್ಕೆ ಹೇಳಿದೆ ಎಂದರೆ, ತ್ರೇತಾಯುಗದಲ್ಲೇ ಈ ಸುರಪಾನದ ಪ್ರಭಾವ ದೇವತೆಗಳ ಮೇಲೆ ಬಹಳ ಇತ್ತು ಎಂದಿರುವಾಗ, ಈಗ ಕಲಿಯುಗದಲ್ಲಿ ಮನುಷ್ಯರ ಮೇಲೆ ಪ್ರಭಾವ ಬೀರುವುದರಲ್ಲಿ ತಪ್ಪೇನೂ ಇಲ್ಲ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಉಗ್ರಪ್ಪನವರ ಮಾತನ್ನು ಒಪ್ಪುತ್ತೇನೆ. ಆಗ ಬಣಕಾರ್‌ರವರು ಆ ರೀತಿ ಕೇಳಿದ ಕೂಡಲೆ ಎಲ್ಲರಿಗೂ ಮುಜುಗರವಾಯಿತು. ಇಲ್ಲಿ ಎಷ್ಟು ಮಂದಿ ಇದ್ದಾರೆ, ಅಲ್ಲಿ ಬಹಳ ಮಂದಿ ಕುಳಿತುಕೊಂಡಿದ್ದವರು ಇದ್ದರು. ನಾನು ಸಹ ಕೈ ಎತ್ತಿದೆ, ಅಲ್ಲಿ ಮಾನ್ಯ ಜೆ.ಹೆಚ್.ಪಟೇಲರು ಕೈ ಎತ್ತಿದರು. ಆಗ ಮಾನ್ಯ ಜೆ.ಹೆಚ್.ಪಟೇಲರು ಇಂಧನ ಮತ್ತು ಅಬಕಾರಿ ಸಚಿವರಾಗಿದ್ದರು. ಅವತ್ತು ಮಾನ್ಯ ವೇದಾಂತ ಹೆಮ್ಮಿಗೆಯವರು ಬಂದಿರಲಿಲ್ಲ. ಆಯಿತು, ನಮ್ಮ ಪಟೇಲ್ ಸಾಹೇಬರು ಸುಮ್ಮನೆ ಕುಳಿತುಕೊಳ್ಳಬೇಕಾಗಿತ್ತು. ಕುಳಿತುಕೊಳ್ಳಲಿಲ್ಲ. ಮಾನ್ಯ ಎಸ್.ಆರ್.ಬೊಮ್ಮಾಯಿಯವರು ಹಾಗೂ ಮಾನ್ಯ ರಾಮಕೃಷ್ಣ ಹೆಗಡೆಯವರ ಕಡೆಗೆ ನೋಡಿ, ಏನ್ರೀ... ನೀವು ನಿನ್ನೆಯ ದಿವಸ ನಮ್ಮ ಜೊತೆ ಕುಡಿದು, ಈಗ ನೀವು ಏತಕ್ಕೆ ಕೈ ಎತ್ತುವುದಿಲ್ಲ ಎಂದರು. ಈ ವಿಚಾರವನ್ನು ಶ್ರೀ ಜೆ.ಹೆಚ್.ಪಟೇಲ್‌ರವರು ಹೇಳಿದರು. ಇಂತಹ ಪರಿಸ್ಥಿತಿಯೊಳಗೆ ನನ್ನದು ಮತ್ತು ಅವರ ಸಂಬಂಧವನ್ನು ಕೇಳಿದಿರಲ್ಲ, ಇಂತಹ ಸಂಬಂಧದೊಳಗೆ ನಾನು ಅವರೊಂದಿಗೆ ಜನತಾದಳಕ್ಕೆ ಬಂದೆ, ಆಗ ನಾನು ಮಂತ್ರಿಯಾದೆ, ಆಗಲೂ ಸಹ ಅವರು ನನ್ನನ್ನು ಸಾರಾಯಿ(ಅಬಕಾರಿ) ಮಂತ್ರಿಯಾಗಿಯೇ ಮಾಡಿದರು.

**ಸಭಾಪತಿಯವರು:–** ಅದರ ಸಲುವಾಗಿಯೇ ನಿಮ್ಮನ್ನು ಮಂತ್ರಿ ಮಾಡಿದರು.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಆಗ ನಾನು ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಆಗಿರಲಿಲ್ಲ, ಆದರೂ ಅವರಿಗೆ ನನ್ನ ಮೇಲೆ ಎಷ್ಟು ಪ್ರೀತಿ ನೋಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಮುಂದು...**

**(282) 12.07.2018 04.50 ಎಸ್‌ವಿ-ಆರ್‌ಎನ್**

**ಶ್ರೀ ಕೆ.ಬಿ.ಶಾಣಪ್ಪ (ಮುಂದು):-** ಕಮ್ಯುನಿಸ್ಟ್ ಪಾರ್ಟಿಯನ್ನು ಬಿಟ್ಟು ಬಂದಂತಹ ನನ್ನನ್ನು ಮಂತ್ರಿ ಮಾಡಿದರು. They never thought about my antecedents with respect to party and politics which I belong to. Sri H.D. Deve Gowda, Ramakrishna Hegde, J.H. Patel and S.R. Bommai having affection, ಹೊಸದಾಗಿ ಪಕ್ಷಕ್ಕೆ ಬಂದ ನನ್ನನ್ನು Parliamentary Board Chairman ಮಾಡಿದರು.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಯಾರಿಗೆ ಆ statesmanship ಇರುತ್ತದೆಯೋ, ಅಂತಹವರು ಈ ರೀತಿಯ ವಿಚಾರವಂತರನ್ನು ಗುರುತಿಸುತ್ತಾರೆ. ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು, ದಿವಂಗತ ಶ್ರೀ ಪಿ.ವಿ.ನರಸಿಂಹರಾವ್ ಅವರು ಡಾ: ಮನಮೋಹನಸಿಂಗ್ ಅವರನ್ನು ಗುರುತಿಸದೆ ಇದ್ದರೆ ದೇಶಕ್ಕೆ ಒಬ್ಬ ಅತ್ಯುತ್ತಮವಾದಂತಹ ಪ್ರಧಾನಿ ಸಿಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವರು ಒಬ್ಬ World famous Economist. ರಾಜಕಾರಣದಲ್ಲಿ ಆ ರೀತಿಯ statesmanship ಇರುವಂತಹವರು ಬದ್ಧತೆ ಇರತಕ್ಕಂತಹ ಪ್ರಾಮಾಣಿಕರನ್ನು ಗುರುತಿಸಿ, ಮಾನ್ಯ ಶಾಣಪ್ಪನವರನ್ನು ಹೇಗೆ ಸದಸ್ಯರಲ್ಲದಿದ್ದರೂ ಮಂತ್ರಿಗಳನ್ನಾಗಿ ಮಾಡಿದರೋ, ಆ ರೀತಿ ಮಾಡಿದಾಗ ಮಾತ್ರ ರಾಜ್ಯ ಹಾಗೂ ರಾಷ್ಟ್ರಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯ ಎಂಬುದನ್ನು ಇತಿಹಾಸದ ಪುಟದಲ್ಲಿ ನಾವು ನೋಡಬಹುದು.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಹೇಳಿದಂತೆ ಅಂದು I was very greatful to everybody. ಆಗ ನನಗಿಂತ ಮೂರು ವರ್ಷ ಮೊದಲೇ ಮಾನ್ಯ ಸಭಾಪತಿಯವರು ಇಲ್ಲಿಗೆ ಆರಿಸಿ ಬಂದಿದ್ದರು. ನಾನು ಕೆಳಗಿನ ಮನೆಯಲ್ಲಿದ್ದೆನು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ);-** ಮಾನ್ಯ ಸಭಾಪತಿಯವರೇ, ಉಳಿದ ವಿಷಯಗಳನ್ನು ಸಂಜೆ ಮಾತನಾಡೋಣವೆಂದು ಮಾನ್ಯ ಶಾಣಪ್ಪನವರಿಗೆ ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಶಾಣಪ್ಪನವರೇ, ಮಾನ್ಯ ಶ್ರೀಕಂಠೇಗೌಡರೂ ಸಹ ನಿಮ್ಮ ಪರಿವಾರದವರೇ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ನಾನು ರಾಜ್ಯಸಭಾ ಸದಸ್ಯನಾಗಿದ್ದಾಗ ಅವರು ನನ್ನ ಜೊತೆ ಬಂದಿದ್ದರು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರೊಂದಿಗೆ ನಾವೂ ಸೇರಿಕೊಳ್ಳುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣ, ಮಾನ್ಯ ಲಿಂಗಪ್ಪ ಇವರೆಲ್ಲಾ ನಮ್ಮ ಹಳೆಯ ಟೀಮ್. ಅವರ ಆತಿಥ್ಯದಲ್ಲಿ ನಾವು ಚೆನ್ನಾಗಿ ಈಗಲೂ ಬೆಳೆಯುತ್ತಲೇ ಇದ್ದೇವೆ. ಈ ಸದನದ ಗಾಂಭೀರ್ಯಕ್ಕೆ ನಾನು ಚ್ಯುತಿ ಮಾಡುತ್ತಿಲ್ಲ. ಜೀವನದಲ್ಲಿ ನಡೆದಂತಹ ಘಟನೆಗಳನ್ನು ಹೇಳಿದ್ದೇನೆ. ನಾವು ಇಲ್ಲಿಗೆ ಬರುತ್ತೇವೆ ಎಂದು ಯಾರಿಗೆ ಅನುಭವವಿತ್ತು? ಒಮ್ಮೆ ನಾನು, ದಿವಂಗತ ಜೆ.ಹೆಚ್.ಪಟೇಲರು ಎಲ್ಲರೂ ಕುಳಿತಿದ್ದೆವು. ಆಗ ಸ್ನೇಹಿತರು "ಕೆ.ಬಿ.ಶಾಣಪ್ಪನಿಗೆ ಶಾಣಪ್ಪ ಎಂದು ಹೆಸರಿಟ್ಟದ್ದು ಬರೋಬ್ಬರಿ ಸಾರ್ಥಕ ಆಯಿತು" ಎಂದರು. ಆಗ ಮಾನ್ಯ ಪಟೇಲರು "ಇವನಿಗೆ ಶಾಣ್ಯಾತನ ಅದ, ಅವರ ತಾಯಿತಂದೆ ಕೂಸಿದ್ದಾಗಲೇ ಶಾಣ್ಯಾ ಆಗ್ತಾನ ಅಂತ ಹೆಸರಿಟ್ಟಾರ. ಅವರೆಷ್ಟು ಶಾಣ್ಯಾರಿರಬೇಕು" ಎಂದು ಹೇಳಿದರು. ಇಂತಹ ಅನೇಕ ಘಟನೆಗಳು ಜೀವನದಲ್ಲಿ ನಡೆದಿವೆ. ಮೇಲ್ಮನೆಯಾಯಿತು, ಕೆಳಮನೆಯಾಯಿತು, ರಾಜ್ಯಸಭೆಯಾಯಿತು. ಬಿಟ್ಟೆನೆಂದರೂ ಬಿಡದೀ ಮಾಯೆ ಎಂಬಂತೆ ಮಾನ್ಯ ಆಯನೂರು ಮಂಜುನಾಥ್ ಅವರು ನನ್ನೊಡನೆ ಕೆಳಮನೆ, ಮೇಲ್ಮನೆ ಹಾಗೂ ರಾಜ್ಯಸಭೆ ಎಲ್ಲಾ ಕಡೆಗಳಲ್ಲಿಯೂ ಬಂದಿದ್ದಾರೆ. ಅವರೆಲ್ಲಿಯವರೋ, ನಾವೆಲ್ಲಿಯವರೋ, ನೀವೆಲ್ಲಿಯವರೋ? ಅದಕ್ಕಾಗಿ I salute this Democratic System. ನಮ್ಮಂತಹವರು ಎಲ್ಲಿರುತ್ತಿದ್ದೆವೋ ಗೊತ್ತಿಲ್ಲ. Aristocracy ಇತ್ತು, ರಾಜಮನೆತನಗಳಿತ್ತು. ಈ Democratic System ಅನ್ನು ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ದೇಶಕ್ಕೆ ಕೊಟ್ಟಿರಲಿಲ್ಲ ಎಂದರೆ ನಮ್ಮಂತಹ ಸ್ಲಮ್‌ಗಳಲ್ಲಿ ಹುಟ್ಟಿದವರು ಪಾರ್ಲಿಮೆಂಟ್‌ಗೆ ಹೋಗುವುದು, ಅಸೆಂಬ್ಲಿಗೆ ಹೋಗುವುದು, ಇಲ್ಲಿ ನಿಮ್ಮಂತಹವರ ಮಧ್ಯೆ ಬಂದು ಕೂತು ಚರ್ಚೆ ಮಾಡುವಂತಹ ಅವಕಾಶ ಸಿಗುತ್ತಿರಲಿಲ್ಲ. Therefore we have to salute those who had forethought and done this Constituent Assembly. ಮಾನ್ಯ ಎಂ.ಪಿ.ಪ್ರಕಾಶ್ ಅವರು Adult Franchise ಕೊಡುವುದು ದೇಶಕ್ಕೆ ಎಷ್ಟು ಅಗತ್ಯವಿದೆ ಎನ್ನುವ ಬಗ್ಗೆ ಒಂದು ಮಾತನ್ನು ಹೇಳಿದ್ದರು. ದಿವಂಗತ ಶ್ರೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟಿ.ಟಿ.ಕೃಷ್ಣಮಾಚಾರಿ ಮತ್ತು ದಿವಂಗತ ಶ್ರೀ ನೆಹರು ಅವರಿಗೆ ಒಮ್ಮೆ ವಾದ ನಡೆಯಿತಂತೆ. ಎಲ್ಲರಿಗೂ ಮತದಾನ ಮಾಡುವ ಅಧಿಕಾರ ಕೊಡುವುದರಿಂದ ಏನು ಉಪಯೋಗವಿದೆ? ಅದರಲ್ಲಿಯೂ ಅನಕ್ಷರಸ್ಥರು ಮತದಾನ ಮಾಡಲು ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ ಏನು ಅರಿವಿರುತ್ತದೆ? ಅಂತಹವರನ್ನು ಕರೆದು ವೋಟ್ ಹಾಕಿ ಎಂದರೆ ಅದು ಹೇಗೆ ಆಗುತ್ತದೆ? ಎಂದು ಚರ್ಚೆ ನಡೆಯಿತು. ಅದಕ್ಕೆ ನೆಹರು ಅವರು ಹೇಳಿದರಂತೆ. ಒಂದು ವೇಳೆ ಈ ಅಧಿಕಾರವನ್ನು ಅವರಿಗೆ ಕೊಡಲಿಲ್ಲವೆಂದರೆ 1917ರಲ್ಲಿ ಸೋವಿಯತ್ ರಷ್ಯಾದಲ್ಲಿ Bolshevik Revolution ಆದಂತೆ ಇಲ್ಲಿಯೂ ಆಗುವ ಸಂಭವವಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ we have to accept it. ಅಂತಹ ವ್ಯವಸ್ಥೆಯಲ್ಲಿ ಸುಮಾರು 70 ವರ್ಷಗಳನ್ನು ಕಳೆದು ಇಲ್ಲಿಯವರೆಗೆ ಬಂದಿದ್ದೇವೆ. Right or wrong, many governments have come and many have gone, what he does and what he does not do it is immaterial. But the people of this country have accepted permanently that we have to accept the Democracy and not more than this. We have seen it during Emergency period. ಪ್ರಜಾತಂತ್ರ ವ್ಯವಸ್ಥೆಗೆ ಭದ್ರ ಬುನಾದಿಯನ್ನು ಹಾಕಿ ಹೋಗಿದ್ದಾರೆ. ಅದು ಕಾಂಗ್ರೆಸ್‌ನವರಾಗಿರಬಹುದು ಅಥವಾ ಕಾಂಗ್ರೆಸ್ ನಂತರ ಬಂದವರು ಯಾರೇ ಆಗಿರಬಹುದು. ಆ ಬುನಾದಿಯಡಿಯಲ್ಲಿ ನಮ್ಮಂತಹವರು ಬೆಳೆಯುತ್ತಿದ್ದೇವೆ.

ಬಹಳಷ್ಟು ಸೇವೆಯನ್ನು ಮಾಡಿದ್ದೇವೆ. ನನ್ನ ಮೂವತ್ತು ವರ್ಷಗಳ ಈ ಪಯಣದಲ್ಲಿ ಮತ್ತೊಬ್ಬರು ನಮ್ಮೆಡೆಗೆ ಬೆರಳು ಮಾಡಿ ತೋರಿಸುವಂತಹ ಕೆಲಸವನ್ನು ನಾನು ಮಾಡಲಿಲ್ಲ. ಶ್ರೀಮತಿ ಶರ್ಮಾ ಅವರು ಸನ್ಮಾನ್ಯ ಶ್ರೀ ವಾಜಪೇಯಿ ಅವರ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದಾರೆ. ಅವರ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಹೇಗೆ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ ಎಂಬುದರ ಬಗ್ಗೆ ಬರೆಯುವಾಗ ಅವರು ಈ ರೀತಿ ಹೇಳಿದ್ದಾರೆ:

ರಾಮ ಒಂದು ಕಡೆ ಹೇಳುತ್ತಾನೆ.

**ನಭೀತೋ ಮರಣದಸ್ಮಿ ಕೇವಲಂ ದೂಷಿತಂ ಯಶಃ**

ಜೀವ ಹೋಗುವುದೆಂದರೂ ನಾನು ಅಂಜುವುದಿಲ್ಲ. ಆದರೆ ಯಾರಾದರೂ ನನ್ನ ಕಡೆಗೆ ಬೆರಳು ಮಾಡಿ ತೋರಿಸಿ ಇವನು ಬದ್ಮಾಶ್ ಇದ್ದಾನೆ, ಇವನು ಬದ್ನಾಮ್ ಇದ್ದಾನೆ ಎಂದರೆ ಅಂದು ನಾನು ಬದುಕಿದ್ದೂ ಸತ್ತ ಹಾಗೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕಾಗಿ ರಾಜಕೀಯ ಜೀವನದಲ್ಲಿದ್ದಂತಹವರು, I am not going to tell everybody. That is left them what they do it. But everyone should enquire their own soul. Conscious is not property of somebody, it is their own soul. Conscious is our own soul. When we sleep in the night, it says what we have done in the days. ಅದನ್ನು ಯಾರೂ ತೆಗೆದುಕೊಳ್ಳಲಾಗುವುದಿಲ್ಲ. ನಾವು ಮಾಡಿದಂತಹ ಪಾಪ, ಕಳ್ಳತನ, ಎಷ್ಟು ಹಣ ತೆಗೆದುಕೊಂಡಿದ್ದೇವೆ ಎಂಬುದು ಜನರಿಗೆ ತಿಳಿದಿರುವುದಿಲ್ಲ. ಆದರೆ ನಮ್ಮ ಮನಃಸಾಕ್ಷಿ ನಾವು ಎಲ್ಲಿಯೋ ತಪ್ಪು ಮಾಡಿದ್ದೇವೆ ಎಂದು ಹೇಳುತ್ತದೆ. ಅಂತಹ ಜೀವನವನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಈ ಸದನದಲ್ಲಿ ಕಳೆದ 30 ವರ್ಷಗಳಿಂದ ದಿವಂಗತ ಶ್ರೀ ಬಿ.ರಾಚಯ್ಯ, ಶ್ರೀ ವೀರೇಂದ್ರ ಪಾಟೀಲ್, ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಂ.ಎಸ್.ಕೃಷ್ಣನ್, ಶ್ರೀ ಸೂರ್ಯನಾರಾಯಣ್, ಶ್ರೀ ಕೆ.ಹೆಚ್.ಪಾಟೀಲರಂತಹ ಬಹಳಷ್ಟು ಜನರನ್ನು ನೋಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಶಾಣಪ್ಪನವರೇ, ತಾವು ದಿವಂಗತ ಶ್ರೀ ನಜೀರ್ ಸಾಬ್ ಅವರನ್ನು ಮರೆತಿರಿ.

**ಶ್ರೀ ಕೆ.ಬಿ.ಶಾಣಪ್ಪ:–** ಹೌದು ಮಾನ್ಯ ಸಭಾಪತಿಯವರೇ, ಎಲ್ಲರೂ ಅವರನ್ನು ನೀರ್ ಸಾಬ್ ಎಂದು ಕರೆಯುತ್ತಿದ್ದರು. I am proud to be along with them. ಈಗ 1983ರ ನಮ್ಮ ಗ್ರೂಪ್‌ನಲ್ಲಿ ನಾನು, ಮಾನ್ಯ ದೇಶಪಾಂಡೆ, ಮಾನ್ಯ ಸಿದ್ದರಾಮಯ್ಯ, ಈಗಿನ ಸಭಾಪತಿಗಳಾದ ಮಾನ್ಯ ಬಸವರಾಜ ಹೊರಟ್ಟಿಯವರು, ಮಾನ್ಯ ಯಂ.ಸಿ.ನಾಣಯ್ಯ, ಈಗಿನ ಸಭಾಧ್ಯಕ್ಷರಾದ ಮಾನ್ಯ ರಮೇಶ್ ಕುಮಾರ್ ಇದ್ದೇವೆ. ಮಾನ್ಯ ಯಂ.ಸಿ.ನಾಣಯ್ಯನವರಂತಹ ಹಿರಿಯ ಮುತ್ಸದ್ದಿಗಳನ್ನು ಇಲ್ಲಿ ನಾನು ಹೊಗಳಲೇಬೇಕು. ಸಭಾಪತಿಯವರು 1980ರಲ್ಲಿಯೇ ಇದ್ದರು. ಅವರು ನನಗಿಂತ ಬಹಳ ಸೀನಿಯರ್ ಇದ್ದಾರೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಶಾಣಪ್ಪನವರ ಹಾಗೆ ಇಲ್ಲವಲ್ಲ?

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ತಾವು ನನ್ನ ಹಾಗೆ ಇರುವುದಕ್ಕೆ ನನ್ನ ಗುಣಗಳು ತಮ್ಮಲ್ಲಿ ಇಲ್ಲ ಎಂದು ಮಾನ್ಯ ಮಟ್ಟೂರ ಅವರಿಗೆ ಹೇಳಬಯಸುತ್ತೇನೆ. ಮಾನ್ಯ ಸಭಾಪತಿಯವರೇ, ನನ್ನ ಗುಣಗಳು ತಮ್ಮಲ್ಲಿದ್ದಿದ್ದರೆ, ತಾವು ನನಗಿಂತ ಬಹಳ ಪವರ್‌ಫುಲ್ ಆಗಿರುತ್ತಿದ್ದಿರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**( ಸದನದಲ್ಲಿ ನಗುವಿನ ಅಲೆ )**

ಮಾನ್ಯ ಸಭಾಪತಿಯವರೊಂದಿಗೆ ನನ್ನದು ಬಹಳ ವರ್ಷಗಳ ಸಂಬಂಧ. ಅವರಿಗೆ ನನ್ನೊಂದಿಗೆ attachment ಇದ್ದರೂ ಸಹ ಅವರು ನನ್ನ ಗುಣಗಳನ್ನು ಕಲಿಯುವುದಕ್ಕಾಗಲಿಲ್ಲ. That is his bad luck. ಆಗಸ್ಟ್ 9ನೇ ತಾರೀಖಿನಂದು ನಾನು ನಿವೃತ್ತನಾಗುತ್ತೇನೆ. I am not upset about it. I am proud to say this. ಈ ಮೂವತ್ತು ವರ್ಷಗಳಲ್ಲಿ ಮುಂಜಾನೆಯೇ ಎದ್ದು 6.30ಗೆ ಹೊರಗೆ ಕುಳಿತು ಜನ ಹೋಗುವ ತನಕ ಸ್ನಾನವನ್ನೂ ಕೂಡ ಮಾಡುವುದಿಲ್ಲ. ಜನರಿಂದ ಚೀಟಿ ತೆಗೆದುಕೊಂಡು ಜಿಲ್ಲಾಧಿಕಾರಿಗೆ, ಉಪವಿಭಾಗಾಧಿಕಾರಿಗೆ ದೂರವಾಣಿ ಮಾಡಿ ಅವರ ಕೆಲಸಗಳನ್ನು ಮಾಡಿಕೊಡಬೇಕು. ಏಕೆಂದರೆ ಜನ ನಮ್ಮ ಬಳಿ ಬರುತ್ತಾರೆ. We have been elected by the people. They have got every right to ask. ನಮಗೆ ಕೆಂಪುಗೂಟದ ಕಾರು ದೊರೆಯುವುದು ಜನರ ಪುಣ್ಯದಿಂದ. ನಮಗೆ ವೇತನ ದೊರೆಯುವುದು ಜನರ ಪುಣ್ಯದಿಂದ. ನಮಗೆ ಸೆಲ್ಯೂಟ್ ಸಿಗುವುದು ಆ ಜನರ ಪುಣ್ಯದಿಂದ. ಎಲ್ಲಿಯೇ ಹೋದರೂ ಜನ ಪಕ್ಕಕ್ಕೆ ಸರಿಯುತ್ತಾರೆ. ಏಕೆಂದರೆ, we are all elected by the people. ಅದಕ್ಕಾಗಿ ಅವರು ನಮ್ಮ ಬಳಿ ಬರುತ್ತಾರೆ. ನನಗೆ ಈ ಚಾನ್ಸ್ ಹೋಗಬಹುದು. ಆದರೆ ನಾವು ನಡೆದಿರುವ ದಾರಿಯನ್ನು ನೋಡಿ ಇನ್ನೂ ನಮ್ಮ ಬಳಿ ಜನರು ಬರುವಂತಹ ಅವಕಾಶವಿದೆ. ಆ ಒಂದು ಕೆಲಸವನ್ನು ನಾನು ಇಡೀ ಜೀವನದಲ್ಲಿ ಮಾಡಿಕೊಂಡು ಬಂದಿದ್ದೇವೆ.

**(...ಮುಂದು)**

(283 ) 12.07.2018 5.00 ಕೆಜಿ.ವಿಕೆ

**ಶ್ರೀ ಕೆ.ಬಿ.ಶಾಣಪ್ಪ (ಮುಂದು...,):-** ನನ್ನನ್ನು ಜನ ಎಂದೂ ಸಹ ದೂಷಿಸಿಲ್ಲ. ನನ್ನನ್ನು ಜನರು ಬಹಳ ಪ್ರೀತಿಯಿಂದ ನೋಡಿದ್ದಾರೆ. ಮಾನ್ಯ ವೆಂಕಟಗೌಡರಾಗಲೀ, ಮಾನ್ಯ ಉಗ್ರಪ್ಪನವರಾಗಲೀ, ಮಾನ್ಯ ಐವನ್ ಡಿ'ಸೋಜಾರವರಾಗಲೀ, ನಾನು ಮತ್ತು ಡಿ'ಸೋಜಾರವರು ಈ ಹಿಂದೆ ಒಂದೇ ಸಾಲಿನಲ್ಲಿದ್ದೇವು. ನಾವು ಬಹಳ ಮಂದಿ ಸದಸ್ಯರು ಒಂದೇ ಪಕ್ಷದಲ್ಲಿ ಇದ್ದೇವು. ನಂತರ ಎಲ್ಲಲ್ಲೋ ಹೋದರು. ನಾನು ಬಿಜೆಪಿಗೆ ಬಂದಿದ್ದೇನೆ. ನನ್ನನ್ನು ಬಹಳ ಮಂದಿ ಏಕೆ ನೀವು ಆ ಕಡೆಗೆ ಇದ್ದೀರಿ ಎಂದು ಕೇಳಿದ್ದಾರೆ. ಅದಕ್ಕೆ ನಾನು ನೀವು ಹೋಗಿ ಆ ಕಡೆ ಹೇಗೆ ಇದ್ದೀರಿ, ಅದೇ ರೀತಿ ನಾನು ಈ ಕಡೆಗೆ ಬಂದಿದ್ದೇನೆಂದು ಹೇಳಿದ್ದೇನೆ. ಆದರೆ, ನಾನು ಬಿಜೆಪಿಗೆ ದ್ರೋಹ ಬಗೆದಿಲ್ಲ. 'When you are in Rome be a

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Roman.' Now, I am in BJP and I am very loyal to the BJP. ಈಗ ನನಗೆ 80 ವರ್ಷ ವಯಸ್ಸು ಆಗಿದೆ. ಈ ವಯಸ್ಸಿನಲ್ಲಿ ಇನ್ನೆಲ್ಲಿಗೆ ಹೋಗಲಿ? ಶ್ರೀ ಡಿ.ವಿ.ಗುಂಡಪ್ಪರವರು ನಮ್ಮ ರಾಜ್ಯ ಅಲ್ಲ, ನಮ್ಮ ರಾಷ್ಟ್ರ ಕಂಡಂತಹ ಒಬ್ಬ ಮೇಧಾವಿ. ಶ್ರೀ ಡಿ.ವಿ.ಗುಂಡಪ್ಪರವರಿಗೆ ಏಕೆ ಜ್ಞಾನಪೀಠ ಪ್ರಶಸ್ತಿ ಕೊಡಲಿಲ್ಲವೆಂದು ನನಗೆ ಗೊತ್ತಿಲ್ಲ. ಮಕ್ಕುತಿಮ್ಮನ ಕಗ್ಗವನ್ನು ಎಲ್ಲರೂ ಓದಬೇಕು. ನಾನು ನನ್ನ ಜೀವನದಲ್ಲಿ ವೇದಗಳನ್ನು ಓದಿದ್ದೇನೆ. ಪುರಾಣಗಳನ್ನು ಓದಿದ್ದೇನೆ. ಮಾರ್ಕ್ಸ್‌ವಾದ ಓದಿದ್ದೇನೆ. ಚರಿತ್ರೆಗಳನ್ನು ಓದಿದ್ದೇನೆ. ಸಂವಿಧಾನ ಓದಿದ್ದೇನೆ. ಆದರೆ, ಅವುಗಳನ್ನು ಓದಿದ್ದೇನೆಂದು ನನಗೆ ಜಂಬ ಬಂದಿಲ್ಲ. ಅವುಗಳನ್ನು ಚರ್ಚೆ ಬಂದಾಗ ಮಾತನಾಡುವುದಕ್ಕೆ ಬಳಸುತ್ತೇನೆ. Food for me to give to somebody else. ಆದರೆ, ಶ್ರೀ ಡಿ.ವಿ.ಗುಂಡಪ್ಪನವರ ಬರೆದಿರುವಂತಹ ಶ್ರೇಷ್ಠ ಸಾಹಿತ್ಯವನ್ನು ಓದಿದರೆ ಸಾಕು ಇಡೀ ಪ್ರಪಂಚವನ್ನೇ ಅರ್ಥೈಸಿಕೊಳ್ಳಬಹುದು. ಅವರ ಸಾಹಿತ್ಯದಲ್ಲಿ ಇಡೀ ಪ್ರಪಂಚದ ಸಿದ್ಧಾಂತ, ಪೃಥ್ವಿಯ ಸಿದ್ಧಾಂತ, ಮನುಷ್ಯನ ಜೀವ, ಜಗತ್ತು, ಬ್ರಹ್ಮ ಇವೆಲ್ಲವನ್ನು ತೋರಿಸಿದ್ದಾರೆ. ಗೀತಾಂಜಲಿಗೆ ನೋಬಲ್ ಪ್ರಶಸ್ತಿಯನ್ನು ಕೊಟ್ಟರು. ಆದರೆ, ಇವರಿಗೆ ಏಕೆ ಕೊಡಲಿಲ್ಲವೆಂದು ನನಗೆ ಚಿಂತೆ ಆಗಿದೆ. ಅವರು ತ್ರಿಪದಿಯಲ್ಲಿ ಬಹಳ ಸಾರಸ್ಯವಾಗಿ ಬರೆದಿದ್ದಾರೆ. ನಾನು ಕೊನೆಗೆ ಅಲ್ಲಿಗೆ ಬರುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಎಂ.ಪಿ ಆಗಿದ್ದಂತಹ ವೇಳೆಯಲ್ಲಿ ಶಿವಮೊಗ್ಗದಿಂದ ಒಬ್ಬ ವ್ಯಕ್ತಿ ಕರೆ ಮಾಡಿದ್ದ. ಮಾನ್ಯ ಅನಂತಕುಮಾರ್‌ರವರು ಮತ್ತು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ನನ್ನನ್ನು ಎಂ.ಪಿ.,ಮಾಡಿದ್ದರು. ಆ ದಿವಸ ಪ್ರೆಸ್ ಮೀಟಿಂಗ್ ನಡೆದಿತ್ತು. ಟಿ.ವಿ.ಯವರು ಕುಳಿತ್ತಿದ್ದರು. ನನಗೆ ಸಾರ್ವಜನಿಕರು ಕರೆ ಮಾಡಿದ್ದರೆ, ಅವರ ಜೊತೆಗೆ ಮಾತನಾಡಿ ಎಂದು ನನಗೆ ಕೆಲಸ ಹಚ್ಚಿದ್ದರು. ನಾನು Communist Party ಬಿಟ್ಟು ಜನತಾದಳ, ಆನಂತರ ಲೋಕಾಶಕ್ತಿಗೆ ಕೊನೆಗೆ ಬಿಜೆಪಿಗೆ ಬಂದೆ. ನನಗೆ ಕರೆ ಮಾಡಿದ್ದಂತಹ ವ್ಯಕ್ತಿ ನನಗೆ ನೀವು ಹೋದ ಕಡೆಯಲ್ಲೆಲ್ಲ. ಮಂತ್ರಿಯಾಗುತ್ತೀರಿ, ಎಂ.ಎಲ್.ಸಿ., ಆಗುತ್ತೀರಿ, ಇನ್ನೂ ನಿಮಗೆ ಯಾವ ಪಕ್ಷ ಉಳಿದಿದೆ ಮತ್ತೆ ಯಾವ ಪಕ್ಷಕ್ಕೆ ಹೋಗುತ್ತೀರಿ ಎಂದು ಕೇಳಿದ. ಅದಕ್ಕೆ ನಾನು ಇನ್ನೊಂದು ಪಕ್ಷಕ್ಕೆ ಹೋಗಬೇಕೆಂದು ಇದ್ದೇನೆಂದು ಹೇಳಿದೆ. ಅದಕ್ಕೆ ಆತ ಯಾವಾಗ ಹೋಗುತ್ತೀರಿ ಎಂದು ಕೇಳಿದ. ಅದಕ್ಕೆ ನಾನು ಮೇಲೆ ಹೋಗುತ್ತೇನೆ. ನೀನು ಬರುತ್ತೀಯಾ ಎಂದು ಕೇಳಿದೆ. ಆತನು ತಕ್ಷಣವೆ ಪೋನ್‌ನನ್ನು ದಬಕ್ಕೆಂದು ಇಟ್ಟುಬಿಟ್ಟ. ಶ್ರೀ ಡಿ.ವಿ.ಗುಂಡಪ್ಪನವರು ಮನುಷ್ಯನ ಜೀವನದ ಬಗ್ಗೆ ಈ ರೀತಿ ಹೇಳಿದ್ದಾರೆ.

"ತಿರುತಿರಗುತ್ತಾ ಬುಗುರಿ, ತಾನೇ ಸೋತು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆಗೊಂದು ದಿನ ಧರೆಗುರುಳುತ್ತದೆ"
ನರಮನುಷ್ಯ ಸುತ್ತಿ ಸುತ್ತಿ ಕೊನೆಗೊಂದು ದಿನ
ಧರೆಗುರುಳುವನು ಮಂಕುತಿಮ್ಮನ ಕಗ್ಗ"

ಮನುಷ್ಯ ಎಷ್ಟು ಕಡೆ ತಿರುಗುತ್ತಾನೆ. ಅಧಿಕಾರಕ್ಕಾಗಿ ಕುರ್ಚಿ ಹಿಡಿಯುತ್ತಾನೆ. ಹಣ ಗಳಿಸುತ್ತಾನೆ. ರಾಜಕಾರಣ ಮಾಡುತ್ತಾನೆ. ಅವರಿಗೆ ಬೈಯುತ್ತಾನೆ. ಇವರಿಗೆ ಬೈಯುತ್ತಾನೆ. ಇಷ್ಟೆಲ್ಲವನ್ನು ಮಾಡಿ ಕೊನೆಗೆ ಒಂದು ದಿವಸ ಧರಗೆ ಉರುಳುವನು. ಬುಗುರಿ ತಿರುಗಿ ತಿರುಗಿ ತನ್ನ ಬಲವನ್ನು ಕಳೆದುಕೊಂಡು ಅದರ ವೇಗ ಕಡಿಮೆ ಆಗುತ್ತದೆ. A man in the same way, even he has to go. This is the system of the nature. Universal truth of the nature is that, somebody has to go and somebody has to come. ನಾವು ಈ ಮನೆಗೆ ಬಂದಿದ್ದೇವೆ. ಆದರೆ, ಇದು ಯಾರಿಗೂ ಖಾಯಂ ಅಲ್ಲ. ನಾವು ಒಂದು ವಸ್ತುವನ್ನು ಹಿಡಿದುಕೊಂಡರೆ, ಅದನ್ನು ನಂತರ ಬಿಡಲೇಬೇಕು ಎಂದು ವಿಜ್ಞಾನದಲ್ಲಿ ಹೇಳುತ್ತದೆ. That is the system in the scientific approach. Whatever you consume, you have to pass it out and you cannot keep it. ಈ ಮನೆಗೆ ಬಂದವರೂ ಒಂದಾನೊಂದು ದಿವಸ ಹೋಗಲೇ ಬೇಕು. ನಮ್ಮಂತಹ ನೂರಾರು ಜನ ಬಂದು ಹೋಗಿದ್ದಾರೆ. ಮಾನ್ಯ ಎಂ.ಸಿ.ನಾಣಯ್ಯರಂತವರೇ ಈ ಮನೆಯಿಂದ ಹೋಗಿದ್ದಾರೆ. ಅವರು ಇಲ್ಲಿಂದ ಹೋಗುವಂತಹ ದಿವಸ ನನಗೆ, how are you feeling ಎಂದು ಕೇಳಿದರು. I said, I am very happy to go ಎಂದು ಹೇಳಿದೆ. ಅದಕ್ಕೆ ರಹೀಮ್ ದಾಸ್‌ರ ದೋಹೆ ಇದೆ ಅದನ್ನು ಹೇಳುತ್ತೇನೆ.

"ಮಾಲಿ ಆವತ್ ದೇಖ್ ಕೆ, ಕಲಿಯನ್ ಕರೆ ಪುಕಾರಿ।
ಫೂಲೆ ಫೂಲೆ ಚುನಿ ಲಿಯೆ, ಕಾಲಿ ಹಮಾರಿ ಬಾರಿ॥"

ಬಿಸಿಲು ಬಿತ್ತು ಹೂವಿನ ಮೊಗ್ಗುಗಳು ಅರಳಿದವು. ಒಬ್ಬ ಮುದುಕಿ ಬಂದು ಆ ಹೂಗಳನ್ನು ಕಿತ್ತುಕೊಂಡು ಹೋದಳು. ಆಗ ಆ ಗಿಡದಲ್ಲಿ ಮೊಗ್ಗುಗಳು ನೀನು ನಡೆದೆಲ್ಲ ಎಂದು ನಕ್ಕಿದವು. ಅದಕ್ಕೆ ಆ ಹೂವು ನಾನು ಇವತ್ತು ಹೋಗುತ್ತೀನಿ. ನಾಳೆ ಬಿಸಿಲು ಬಿಳುತ್ತೆ ನೀನು ಮೊಗ್ಗಿನಿಂದ ಹೂವಾಗಿ ನಾಳೆ ನಮ್ಮ ಜೊತೆಗೆ ಬರುತ್ತಿಯಾ, ನನ್ನನ್ನು ನೋಡಿ ನಗಬೇಡ ಎಂದು ಹೇಳಿತ್ತು. With this word, I am very grateful to this Chair and this great August House who have respected me and they have given great honour to me, to

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

speak few words. With this I would like to conclude. Thank you Sir,

**(ಈ ಹಂತದಲ್ಲಿ ಬಿಜೆಪಿಯ ಸದಸ್ಯರು ಮೇಜು ತಟ್ಟಿ ಮಾನ್ಯ ಸದಸ್ಯರಿಗೆ ಹರ್ಷವನ್ನು ವ್ಯಕ್ತಪಡಿಸಿದರು)**

**ಸಭಾಪತಿಯವರು:–** ಈಗ ಮಾನ್ಯ ವಿ.ಎಸ್.ಉಗ್ರಪ್ಪನವರು ಮಾತನಾಡಬೇಕಾಗಿತ್ತು. ಆದರೆ, ಮಾನ್ಯ ಕೆ.ಬಿ.ಶಾಣಪ್ಪ ಮತ್ತು ಶ್ರೀಮತಿ ತಾರಾಅನೂರಾಧರವರು 9ನೇ ಆಗಸ್ಟ್, 2018 ರಂದು ನಿವೃತ್ತಿ ಹೊಂದಾಲಿದ್ದಾರೆ. ಅದಕ್ಕಾಗಿ ಅವರ ಬಗ್ಗೆ ಒಂದರೆಡು ನಿಮಿಷಗಳಲ್ಲಿ ಯಾರಾದರೂ ಮಾತನಾಡಿದರೆ ಒಳ್ಳೆಯದೆಂದು ನಾನು ಸಭೆಯನ್ನು ವಿನಂತಿ ಮಾಡುತ್ತಿದ್ದೇನೆ. ಶ್ರೀಮತಿ ತಾರಾಅನೂರಾಧರವರೇ, ತಾವೀಗ ಮಾತನಾಡಿ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದಂತಹ ಕೆ.ಬಿ.ಶಾಣಪ್ಪನವರು ಬಹಳ ಚೆನ್ನಾಗಿ ಮಾತನಾಡಿದರು. ನನಗೆ ಅವರಷ್ಟು ಚೆನ್ನಾಗಿ ಮಾತನಾಡುವುದಕ್ಕೆ ಬರುವುದಿಲ್ಲ ಮತ್ತು ಅವರಷ್ಟು ಅನುಭವ ಸಹ ಇಲ್ಲ. ನಾನು 2008 ರಲ್ಲಿ ಶಾಸ್ತ್ರೀಯವಾಗಿ ರಾಜಕೀಯಕ್ಕೆ ಬಿ.ಜೆ.ಪಿ ಯಿಂದ ಪಾದರ್ಪಣೆ ಮಾಡಿದ್ದೇನೆ. ಅದಕ್ಕೂ ಮೊದಲು ರಾಜಕೀಯ ಭಾಷಣವನ್ನು ಮಾಡಿದ್ದೇನೆ. ನಮ್ಮ ಕಲವಿದರು ಬೇರೆ ಬೇರೆ ಪಕ್ಷಗಳಿಂದ ಚುನಾವಣೆಗೆ ನಿಂತಾಗ ಅವರ ಪರವಾಗಿ ಪ್ರಚಾರಕ್ಕೆ ಹೋಗಿದ್ದೆ. ಆದರೆ, 2012 ರಲ್ಲಿ ಶಾಸ್ತ್ರೀಯವಾಗಿ ರಾಜಕೀಯಕ್ಕೆ ಪಾದರ್ಪಣೆ ಮಾಡಿದ್ದೇನೆ. ನಂತರ ನಮ್ಮ ಪಕ್ಷದ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯ ಮಂತ್ರಿಯಾದಾಗ ಅವರು ನನಗೆ ಎಂ.ಎಲ್.ಸಿ ಆಗುವಂತಹ ಅವಕಾಶವನ್ನು ಕೊಟ್ಟರು. ಇದಕ್ಕೂ ಮುಂಚೆಯೇ ಬಹಳಷ್ಟು ಸಿನಿಮಾ ರಂಗಕ್ಕೆ ಸಂಬಂಧಪಟ್ಟರು ಈ ಮನೆಯ ಸದಸ್ಯರು ಆಗಿದ್ದನ್ನು ಕೇಳಿದ್ದೆ. ಅದನ್ನು ಪತ್ರಿಕೆಗಳಲ್ಲಿ ಓದಿದ್ದೆ. ನಾನು ಮೊದಲು ಈ ಮನೆಗೆ ಬಂದಾಗ ನಾನು ದೇವರ ಮನೆಗೆ ಬಂದೆ ಎಂದು ಅನಿಸಿತ್ತು, ನಾನು ಮೊದಲು ಬರುವಾಗ ಈ ಮನೆಯ ಬಾಗಿಲಿಗೆ ನಮಸ್ಕಾರ ಮಾಡಿ ಒಳಗೆ ಬಂದೆ. ನಾನು ಎಂ.ಎಲ್.ಸಿ ಯಾದ ನಂತರ ಮೊಟ್ಟಮೊದಲ ಅಧಿವೇಶನದಲ್ಲಿ ಭಾಗವಹಿಸಿದ್ದು ಬೆಳಗಾವಿಯ ಸುವರ್ಣಸೌಧದಲ್ಲಿ. ಆಗ ನಾನು 5 ತಿಂಗಳ ಗರ್ಭಿಣಿಯಾಗಿದ್ದೆ. ಆಗ ನನಗೆ ವೈದ್ಯರು ಪ್ರಯಾಣ ಮಾಡಬಾರದೆಂದು ಹೇಳಿದ್ದರು. ಆಗ ನನಗೆ ವಿಮಾನದಲ್ಲಿ ಹೋಗುವುದಕ್ಕೆ ಟಿಕೇಟ್ ಕೊಡಲಿಲ್ಲ. ಆದರೂ ಸಹ, ನಾನು ನಮ್ಮ ವೈದ್ಯರ ಅನುಮತಿ ತೆಗೆದುಕೊಂಡು ನನ್ನ ತಾಯಿ, ನನ್ನ ಅತ್ತೆ, ನಾನು, ನಮ್ಮ ವೈದ್ಯರ ಕೋ ವೈದ್ಯರಾದ ಡಾ॥ಸುಧಾರವರು ಕಾರಿನಲ್ಲಿ ಬೆಂಗಳೂರಿನಿಂದ ಬೆಳಗಾಂಗೆ ಹೋದೆವು. ಅಲ್ಲಿ ಮಾನ್ಯ ಜಗದೀಶ್ ಶೆಟ್ಟರವರು ಬೆಳಗಾಂನಲ್ಲಿ ವಿ.ಟಿ.ಯು ಗೆಸ್ಟ್‌ಹೌಸ್‌ನಲ್ಲಿ ಕೊಠಡಿ ಮಾಡಿದ್ದರು. ಅವರ ಶ್ರೀಮತಿ ಶಿಲ್ಪಾಶೆಟ್ಟರ್‌ರವರ ಪಕ್ಕದ ಕೊಠಡಿಯಲ್ಲೇ ನನಗೆ ಕೊಠಡಿ ನೀಡಿದರು. ಆಗ ಸೌವರ್ಣಸೌಧ ಹೊಸದಾಗಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭವಾಗುತ್ತಿತ್ತು ಆಗ ರಾಷ್ಟ್ರಪತಿಯವರು ಜಗತ್ತಿಗೆ ಅದನ್ನು ಅರ್ಪಿಸಿದರು ಆ ಸಮಯದಲ್ಲಿ ನಾನು ಅಲ್ಲಿಗೆ enter ಆದೆ. ಇವತ್ತಿಗೂ ಸಹ ನಾನು ಅದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಆ ವೇಳೆಯಲ್ಲಿ ಸನ್ಮಾನ್ಯ ರಾಷ್ಟ್ರಪತಿಯವರು ಎರಡು ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಅದಾದ ಮೇಲೆ ಮಾರನೆಯ ದಿನ ನಾನು ನಮ್ಮ Upper House ಗೆ ಬಂದೆ.

(284):12.07.2018-5.10-ಎಂವಿ-ವಿಕೆ

**ಶ್ರೀಮತಿ ತಾರಾ ಅನೂರಾಧ (ಮುಂದು...):-**

ನನಗೆ ಅನಿರೀಕ್ಷಿತವಾಗಿ ಮೊಟ್ಟ ಮೊದಲನೆಯ ದಿವಸ ಮಾತನಾಡುವುದಕ್ಕೆ ಅವಕಾಶ ದೊರೆಯಿತು. ಅವಕಾಶ ಸಿಕ್ಕಿದ ದಿನ ಅಂದುಕೊಂಡೆ ನಾನು ಹೇಗೆ ಮಾತನಾಡುತ್ತೇನೆ ಮತ್ತು ಏನು ಮಾಡುತ್ತೇನೆಂದು. ಆಗ ನನ್ನ ಪಕ್ಕದಲ್ಲಿ ಕುಳಿತುಕೊಂಡಿದ್ದವರು ಮಾನ್ಯ ರಘುನಾಥ ರಾವ್ ಮಲ್ಕಾಪೂರೆ ಅಣ್ಣ. ಅವರ ಜೊತೆಯಲ್ಲಿ ಕುಳಿತುಕೊಂಡಾಗ ಅವರು ಹೇಳುತ್ತಿದ್ದರು, ನೀನು ಮಾತನಾಡಬಹುದೆಂದು. ನನಗೆ ಈಗ ಅನಿಸುತ್ತಿದೆ ಮೊದಲನೆಯ ದಿವಸ ಬಂದ ಹಾಗೆ ಮಾತನಾಡುತ್ತಿದ್ದೇನೆ ಎನ್ನುವಷ್ಟು ಭಯದಲ್ಲೇ ಮಾತನಾಡುತ್ತಿದ್ದೇನೆ. ಬಹುಶಃ ಏನೇನೂ ಅನುಭವ ಇಲ್ಲದೇ ಬಂದಿರುವುದು ನಾನೇ ಅನಿಸುತ್ತದೆ. ಏಕೆಂದರೆ, ನಾನು ಹುಟ್ಟಿದಾಗಿನಿಂದ ಇಷ್ಟೊಂದು ಮಾತನಾಡಿರಲಿಲ್ಲ. ಅಂದರೆ, ಪಾತ್ರಗಳನ್ನು ಮಾಡುವಾಗ, ನಮ್ಮ ನಿರ್ದೇಶಕರುಗಳು, ಚಿತ್ರಸಾಹಿತಿಗಳು ಹಾಗೂ ಬರಹಗಾರರು ಹೇಳಿಕೊಟ್ಟ ಹಾಗೆ ಅವರ ಮಾತುಗಳನ್ನು ಅಷ್ಟೆ ಅಂದರೆ ಆ ಪಾತ್ರಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಮಾತನಾಡುತ್ತಿದ್ದೆ. ಆದರೆ, ನಿಜ ಜೀವನದಲ್ಲಿ ಜಾಸ್ತಿ ಮಾತನಾಡಿರಲಿಲ್ಲ. ಇನ್ನು ನನ್ನ ಯಜಮಾನರು ಜಾಸ್ತಿ ಮಾತನಾಡುವುದಿಲ್ಲ. ಹೀಗಾಗಿ, ಇಲ್ಲಿಗೆ ಬಂದ ಮೇಲೆ ಮಾತನಾಡಲೇಬೇಕೆಂದು, ನಾನು ಇಲ್ಲಿಗೆ ಬಂದ ಮೇಲೆ ಎಷ್ಟೊಂದು ನಾಯಕರ ಮಾತುಗಳನ್ನು ಕೇಳುತ್ತಿದೆ. ಆಗ ಮಾನ್ಯ ಸದಾನಂದ ಗೌಡರು ವಿರೋಧಪಕ್ಷದ ನಾಯಕರಾಗಿದ್ದರು. ಅವರು ನಮಗೆ ಕ್ಲಾಸ್‌ಗಳನ್ನು ತೆಗೆದುಕೊಳ್ಳುವ ರೀತಿ ಹೇಳುತ್ತಿದ್ದರು. ಹಲವಾರು ಜನ ನಮ್ಮ ಎಸ್.ಆರ್.ಪಾಟೀಲ್ ಅಣ್ಣನವರು ಸಭಾನಾಯಕರಾಗಿದ್ದರು. ಮಾನ್ಯ ವಿ.ಎಸ್.ಉಗ್ರಪ್ಪನವರು, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಧ್ವನಿ ನಮ್ಮ ದೊಡ್ಡಪ್ಪನ ಧ್ವನಿ ಇದ್ದಹಾಗೆ. ನಮ್ಮ ದೊಡ್ಡಪ್ಪ ನನ್ನನ್ನು 'ಅನುರಾಧ' ಎಂದು ಕರೆಯುತ್ತಿದ್ದ ಹಾಗೆ ಮಾನ್ಯ ಸಿದ್ದರಾಮಯ್ಯನವರು ಬಂದ ತಕ್ಷಣ 'ತಾರಾ' ಎಂದು ಕರೆದರೆ, ನಮ್ಮ ದೊಡ್ಡಪ್ಪ ಕರೆದ ಹಾಗೆ ಒಂದು ರೀತಿಯಾದ attachment ಆ ಧ್ವನಿಯಲ್ಲಿ ಇತ್ತು. ಆ ಧ್ವನಿ ನಮ್ಮ ದೊಡ್ಡಪ್ಪನವರ ಧ್ವನಿ ಎನಿಸುತಿತ್ತು. ನಮ್ಮ ಪಕ್ಷದ ಎಲ್ಲಾ ನಾಯಕರು, ಇಲ್ಲಿ ಎಲ್ಲರೂ ನನಗೆ support ಮಾಡುತ್ತಿದ್ದರು, ನೋಟ್ಸ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಿದ್ದರು, ಹೇಗೆ ಮಾತನಾಡಬೇಕೆಂದು ಹೇಳಿ ಕೊಡುತ್ತಿದ್ದರು. ಮೂರು ವರ್ಷ ಮಾನ್ಯ ರಘುನಾಥ ರಾವ್ ಮಲ್ಕಾಪೂರೆ ಅಣ್ಣನವರು ನನ್ನ ಜೊತೆ ಇದ್ದರು. ಇಲ್ಲಿ ಎಲ್ಲರೂ ಕೂಡ ನನ್ನನ್ನು ಬೇರೆಯಾಗಿ ಅಥವಾ ಕಲಾವಿದೆಯಾಗಿ ನೋಡದೆ, ಸಹಕಾರ ನೀಡಿದ್ದಾರೆ. ಏಕೆಂದರೆ ಶಿಕ್ಷಕರು ಮಾತನಾಡುವುದು ಆಶ್ಚರ್ಯವಿಲ್ಲ. ರಾಜಕಾರಣಿಗಳು ಮಾತನಾಡುವುದು ಆಶ್ಚರ್ಯವಿಲ್ಲ. ಲಾಯರ್ ಓದಿರುವವರು ಮಾತನಾಡುವುದು ಆಶ್ಚರ್ಯವಿಲ್ಲ ಮತ್ತು ಬೇರೆ ಬೇರೆ ಚುನಾವಣೆಯನ್ನು ಎದುರಿಸಿ ಬಂದಿರುವವರು ಮಾತನಾಡುವುದು ಆಶ್ಚರ್ಯವಿಲ್ಲ. ಆದರೆ, ಒಬ್ಬ ಕಲಾವಿದೆಯಾಗಿ ಮಾತನಾಡುವುದು ಎಷ್ಟರಮಟ್ಟಿಗೆ ಸರಿ ಇರುತ್ತದೆ ಎನ್ನುವುದು. ಎಲ್ಲರೂ ಜೋರಾಗಿ ಮಾತನಾಡುವಾಗ ಸತ್ಯವಾಗಿ ಹೇಳುತ್ತೇನೆ ನನಗೆ ಒಂದು ಬಾರಿ ಜ್ವರ ಬಂದಿತ್ತು. ನನಗೆ ಮಗ ಹುಟ್ಟಿದ ಮೇಲೆ, ನಾನು ಇಲ್ಲಿಗೆ ಆಗಸ್ಟ್ 2012ರಲ್ಲಿ ಬಂದೆ, 13ನೇ ಜುಲೈ ಅಂದರೆ ನನ್ನ ಮಗುವಿಗೆ ನಾಲ್ಕು ತಿಂಗಳು ಇದ್ದಾಗ ನಾನು ಇಲ್ಲಿಗೆ ಬರುವಂಥದ್ದು ಆಯಿತು. ನನ್ನ ಈ ಆರು ವರ್ಷದಲ್ಲಿ ನಾನು ಒಂದು ದಿನವೂ ಸಹ ಸದನದಲ್ಲಿ ರಜೆಯನ್ನು ಹಾಕಿಲ್ಲ. ಇದುವರೆವಿಗೂ ಒಂದು ದಿನವೂ ರಜೆಯನ್ನು ಹಾಕದೆ ಪ್ರತಿದಿನವೂ ಸಹ ಸದನಕ್ಕೆ ಬಂದಿದ್ದೇನೆ. ಆಕಸ್ಮಾತ್ ಒಂದೋ ಅಥವಾ ಎರಡೋ ಗಂಟೆಗಳು ತಡವಾಗಿ ಬಂದಿರಬಹುದು. ಕೊನೆಯಲ್ಲಿ ಅರ್ಧ ಗಂಟೆ ಅಥವಾ ಎರಡು ಗಂಟೆ ಮುಂಚೆಯೇ ಹೋಗಿರಬಹುದು. ಆಗ ಸಭಾಪತಿಗಳಾಗಿದ್ದಂತಹ ಮಾನ್ಯ ಡಿ.ಹೆಚ್.ಶಂಕರಮೂರ್ತಿ ಅಂಕಲ್, ನಾನು ಮಗುವನ್ನು ಎತ್ತಿಕೊಂಡು, ಇಡೀ ಕುಟುಂಬ ಸಮೇತ ಬ್ಯಾಗು ಮತ್ತು ನನ್ನ ಮಗನ ಬಟ್ಟೆ ಎತ್ತಿಕೊಂಡು ಬರುವಾಗ ಮಹಿಳಾ ಕೊಠಡಿಯಲ್ಲಿ ಬಟ್ಟೆಯನ್ನು ಬದಲಾಯಿಸುವುದಕ್ಕೆ ಆಗದೆ ಇದ್ದಾಗ, ನನಗೆ ಮಾನ್ಯ ಸಭಾಪತಿಗಳ ಕೊಠಡಿಯಲ್ಲಿ Antechamber, ಅದು ನನ್ನ ತಾಯಿ ಮನೆಯಾಗಿ ಪರಿವರ್ತನೆಯಾಯಿತು. ನಾನು ನನ್ನ ತಾಯಿ ಮತ್ತು ಮಗುವನ್ನು ಅಲ್ಲಿ ಬಿಟ್ಟು, ಸದನಕ್ಕೆ ಬಂದು ಮಾತನಾಡಿ ಮತ್ತೆ ಮಗುವನ್ನು ನೋಡುವುದಕ್ಕೆ ಸಭಾಪತಿಯವರ Antechamberಗೆ ಹೋಗುತ್ತಿದ್ದೆ. ಸಭಾಪತಿಯವರಾಗಿದ್ದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಒಂದು ತರಹ ತಂದೆ-ತಾಯಿಯಾಗಿ ನನಗೆ ತುಂಬಾ ಒಂದು ತರಹ ಸಹಾಯ ಮಾಡಿದ್ದಾರೆ. He had left that chamber for myself. ನಾನು ಅಲ್ಲಿ ಇದ್ದಾಗ, ಆ ಕೊಠಡಿಗೆ ಅವರು ಬರುತ್ತಲೇ ಇರಲಿಲ್ಲ. ನಾನು ಮತ್ತು ನನ್ನ ತಾಯಿ ಆ ಕೊಠಡಿಯನ್ನು ಪೂರ್ಣ ಆವರಿಸಿಕೊಂಡಿದ್ದೆವು. ಈಗಲೂ ಮಾನ್ಯ ಸಭಾಪತಿಯವರೇ, ಅದೇ ರೀತಿ ನನ್ನ ತಾಯಿ ಮನೆಗೆ ಹೋಗುವ ತರಹ ಅನಿಸುತ್ತದೆ. ಹೊರಟ್ಟಿ ಅಂಕಲ್, sorry, ಅಂಕಲ್ ಅನ್ನಬಾರದು. ಅವರನ್ನು ಅಂಕಲ್ ಎಂದು ಕರೆಯುತ್ತೇನೆ, ಅವರು ಮಾತನಾಡುತ್ತಿದ್ದುದು. ಇವುಗಳೆಲ್ಲವೂ ಕೂಡ ನನಗೆ ಪಾಠಗಳ ತರಹ ಅನಿಸುತಿತ್ತು. ಬಹುಶಃ ನಾನು ಸ್ಕೂಲ್‌ನಲ್ಲಿ ಹೋಮ್‌ವರ್ಕ್ ಮಾಡಿದ್ದು ಬಿಟ್ಟರೆ ಅಥವಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಷ್ಟೊಂದು ಓದುವುದು ಮತ್ತು ಬರೆಯುವುದನ್ನು ಸ್ಕೂಲ್‌ನಲ್ಲಿ ಸ್ಟೂಡೆಂಟ್ ಆಗಿದ್ದಾಗ ಬಿಟ್ಟರೆ, ನಾನು ಇಲ್ಲಿ ಸದಸ್ಯೆ ಆದಮೇಲೆ ಇಷ್ಟೊಂದು ಹೋಮ್‌ವರ್ಕ್‌ಗಳನ್ನು ಮತ್ತು ಇಷ್ಟೊಂದು ಓದಿರುವುದು, ಅದಕ್ಕೋಸ್ಕರ ತಯಾರಾಗಿ ಬಂದಿರುವುದು. ಈಗ ತಮಾಷೆಯಾಗಿ ನನ್ನ ಯಜಮಾನರು ಮತ್ತು ಸಹೋದರ ನೀನು ಇಷ್ಟೆಲ್ಲಾ ಚೆನ್ನಾಗಿ ಓದಿದ್ದರೆ, ಇನ್ನೂ ತುಂಬಾ ಓದಬಹುದಾಗಿತ್ತು, ನೀನು ಇಷ್ಟೊಂದು ಓದುತ್ತೀಯಾ ಎಂದು ಗೊತ್ತಿರಲಿಲ್ಲವೆಂದು ಹೇಳುತ್ತಾರೆ. ನಾನು ಬಹಳ ಸಣ್ಣ ವಯಸ್ಸಿನಲ್ಲಿ ಸಿನಿಮಾಗೆ ಬಂದಿದ್ದೇನೆ. ಇಲ್ಲಿ ಇದ್ದಂತಹ ಶ್ರೀಮತಿ ಉಮಾಶ್ರೀ ಅಮ್ಮ ನನ್ನ ಸಿನಿಮಾಗಳಲ್ಲಿ ತಾಯಿ ಮತ್ತು ಅತ್ತೆಯ ಪಾತ್ರಗಳನ್ನು ಮಾಡಿದ್ದರು. ಅವರ ಜೊತೆಗೆ ಇದ್ದದ್ದು. ಶ್ರೀಮತಿ ಜಯಮಾಲಾ ಅಮ್ಮ, ಅವರನ್ನು ಫಿಲಂ ಚೇಂಬರ್ ಅಧ್ಯಕ್ಷರಾಗಿ ನೋಡಿದ್ದೇನೆ, ಅವರು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದರು. ಅವರನ್ನು ಇಲ್ಲಿ ನೋಡಿರುವುದು ಮತ್ತು ಶ್ರೀಮತಿ ಮೋಟಮ್ಮನವರು ಇದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಶ್ರೀಮತಿ ವಿಮಲ ಅಕ್ಕನವರು, ನಿಜವಾಗಿ ಅವರನ್ನು miss ಮಾಡಿಕೊಳ್ಳುತ್ತಿದ್ದೇನೆ. ಶ್ರೀಮತಿ ವಿಮಲ ಅಕ್ಕನವರು ಶ್ರೀಮತಿ ತೇಜಸ್ವಿನಿ ಅಕ್ಕನವರು ಕುಳಿತುಕೊಳ್ಳುತ್ತಿದ್ದ ಜಾಗದಲ್ಲಿ ಕುಳಿತುಕೊಳ್ಳುತ್ತಿದ್ದರು. ವಿಮಲ ಅಕ್ಕ ನನಗೆ, ನಾನು ಹೇಗೆ ಡ್ರೆಸ್ ಮಾಡಿಕೊಳ್ಳಬೇಕು, ಸದನಕ್ಕೆ ಹೇಗೆ ಬರಬೇಕು, ಸದನದಲ್ಲಿ ಹೇಗೆ ಕುಳಿತುಕೊಳ್ಳಬೇಕು, ಈ ತರಹ ಮಗಳಿಗಿಂತ ಹೆಚ್ಚಾಗಿ ಪ್ರೀತಿಯಿಂದ ಮನೆಗೆ ಕರೆದು, ಸದನಕ್ಕಿಂತ ಮುಂಚೆ ಅಥವಾ ಸದನ ಆದಮೇಲೆ, ಸದನದಲ್ಲಿ ಏನೆಲ್ಲಾ ಆಯಿತು, ಬೇರೆಯವರು ಹೇಗೆ ಮಾತನಾಡಿದರು, ಆ ರೀತಿ ನೀನು ಬದಲಾಯಿಸಿಕೊಳ್ಳಬೇಕು. ಈ ರೀತಿ ಮಾತನಾಡಬೇಕು, ಹೀಗೆ ಇರಬೇಕು ಎಂದು ಒಬ್ಬ ತಾಯಿಯಾಗಿ ಸಲಹಿದ್ದು, ಅದನ್ನೆಲ್ಲಾ ನಾನು ಮರೆಯುವುದಕ್ಕೆ ಆಗುವುದಿಲ್ಲ. ಇವತ್ತು ಅವರು ಇಲ್ಲ, ಆ ಕುರ್ಚಿಗೆ ಶ್ರೀಮತಿ ತೇಜಸ್ವಿನಿ ಅಕ್ಕ ಬಂದಿದ್ದಾರೆ. ಅವರಲ್ಲಿ ನಾನು ವಿಮಲ ಅಕ್ಕನನ್ನು ನೋಡಿದ ಹಾಗೆ ಆಗುತ್ತದೆ. ಅವರನ್ನು ನೋಡಿದಾಗಲೆಲ್ಲಾ ಇನ್ನೊಬ್ಬ ಹೆಣ್ಣು ಮಗಳು ಇಲ್ಲಿ ಇದ್ದಾರೆ ಎನ್ನುವಷ್ಟು ಸಂತೋಷವಾಗುತ್ತದೆ. ನನಗೆ ಎಲ್ಲಾ ದಿನವೂ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದ್ದು ನಿಜವಾಗಿಯೂ ನಾನು ಮಾಡಿದ ಪುಣ್ಯವೆಂದು ಭಾವಿಸುತ್ತೇನೆ. ಚುಕ್ಕೆಗುರುತಿನ ಪ್ರಶ್ನೆಗಳನ್ನು ಹಾಕುವಾಗ ಮೊದಲು ಪ್ರತಿದಿನ ಪ್ರಶ್ನೆ ಬಂದಾಗ, ನನಗೆ ಪ್ರತಿದಿನ ನನಗೆ ಅವಕಾಶ ಕೊಡುತ್ತಿದ್ದಾರೆ ಎಂದು ಭಾವಿಸಿದ್ದೆ. ನನಗೆ ಗೊತ್ತಿರಲಿಲ್ಲ ನನ್ನ ಹೆಸರು lucky dip ನಲ್ಲಿ ಬರುತ್ತದೆ ಎಂದು. ಅವರು ಅವಕಾಶ ಸುಮ್ಮನೆ ಕೊಡುವುದು ಅಲ್ಲ. ವಿಧಾನ ಪರಿಷತ್ತಿನ ಹಿಂದಿನ ಕಾರ್ಯದರ್ಶಿಯಾಗಿದ್ದ ಶ್ರೀಶ್‌ರವರು ಇದ್ದರು. ಅವರು ಹೇಳಿದರು ಕೊಠಡಿಯಲ್ಲಿ ಬಂದು ಒಂದು ಬಾರಿ lucky dip ನೋಡಿ ಎಂದರು. ನಾನು ಅದನ್ನು ನೋಡಿದೆ. ಅದು ಆದಮೇಲೆ ಶ್ರೀನಿವಾಸರವರು ಬಂದರು, ಅದು ಆದಮೇಲೆ ಮಹಾಲಕ್ಷ್ಮಿ ಹೆಣ್ಣುಮಗಳು ಮೊಟ್ಟಮೊದಲ ಬಾರಿಗೆ ಮಹಿಳಾ ಕಾರ್ಯದರ್ಶಿಯವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದರು. ಈ ಎಲ್ಲಾ ಅಧಿಕಾರಿ ವರ್ಗದವರ ಸಹಕಾರ, ಮಾರ್ಷಲ್‌ಗಳು ಇವರೆಲ್ಲರೂ, ಅದಕ್ಕಿಂತ ಮುಖ್ಯವಾಗಿ ಪತ್ರಕರ್ತ ಸ್ನೇಹಿತರು ಮೊದಲಿನಿಂದಲೂ ನನ್ನ ಜೊತೆ ಇದ್ದಾರೆ. ಅವರು ಯಾವಾಗಲೂ ಅಂದರೆ, ನಾನು ಸಿನಿಮಾ ಕಲಾವಿದೆಯಾದಾಗಲೂ ಮತ್ತು ಪರಿಷತ್ತಿನ ಸದಸ್ಯೆ ಆದಾಗಲೂ ಸಹ. ಅವರುಗಳು ಸಹ ಎಷ್ಟೊಂದು ಸಲಹೆಯನ್ನು ಕೊಡುತ್ತಾರೆ. ಮತ್ತೆ ಕ್ಯಾಮರಾಮ್ಯಾನ್‌ಗಳು of course ನೀವು ಎಲ್ಲರೂ ನಮ್ಮ ಯಜಮಾನರ ಸಂಬಂಧಿಕರು ಏಕೆಂದರೆ, ಪತ್ರಕರ್ತರು ಏಕೆ ಹತ್ತಿರ ಆಗುತ್ತಾರೆ ಎಂದರೆ, ನಮ್ಮ ಯಜಮಾನರಾದ ಶ್ರೀ ವೇಣುರವರು ಪ್ರಜಾವಾಣಿ ಪತ್ರಿಕೆಯಲ್ಲಿ Press Photographer ಆಗಿ ಕೆಲಸ ಮಾಡುತ್ತಿದ್ದರು ಮತ್ತು ಅವರು ಸಂಜೆವಾಣಿಯಲ್ಲಿ Artist ಆಗಿದ್ದರು. ಅವರು Baroda School of Arts ನಿಂದ Master of Arts ಮಾಡಿಕೊಂಡಿದ್ದರು. ಎಷ್ಟು ಬೇಗ ಆರು ವರ್ಷ ಅಗಿ ಹೋಯಿತು, ಈಗ ನನ್ನ ಮಗನಿಗೆ ಐದು ವರ್ಷ, ಕನಿಷ್ಠ ಮೂರು ವರ್ಷಗಳ ಕಾಲ ನನ್ನ ಮಗನನ್ನು ಇಲ್ಲಿಗೆ ಕರೆದುಕೊಂಡು ಬರುತ್ತಿದ್ದೆ. ಈಗ ನನ್ನ ಮಗ ವಿಧಾನಸೌಧಕ್ಕೆ ಬರುತ್ತೀಯಾ ಅಂದರೆ ಬರುವುದಿಲ್ಲ ಎನ್ನುವಷ್ಟರ ಮಟ್ಟಿಗೆ ಬೆಳೆದಿದ್ದಾನೆ. ನನ್ನ ಪಕ್ಕದ ಇನ್ನೊಬ್ಬ ತಮ್ಮ ಮಾನ್ಯ ಅರುಣ ಶಹಾಪುರ ರವರನ್ನು ಮರೆಯುವುದಿಲ್ಲ. ಮಾನ್ಯ ಸಭಾಪತಿಯವರು quote ಮಾಡುತ್ತಿದ್ದರು, ನಿನ್ನನ್ನು ಅರುಣ ಶಹಾಪುರನ ಪಕ್ಕದಲ್ಲಿ ಕುಳ್ಳಿರಿಸಿದ್ದೆ ತಪ್ಪಾಯಿತು ಎಂದು. ಅರುಣ ಶಹಾಪುರ ನನಗೆ ತಮ್ಮ ಜೊತೆಗೆ ಮೇಸ್ಟ್ರು ಕೂಡ. ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಾಗ ಹೇಗೆ ಮಾತನಾಡಬೇಕೆಂದು, ಎಷ್ಟೊಂದು ವಿಷಯಗಳನ್ನು ಹೇಳಿಕೊಟ್ಟಿದ್ದಾರೆ. ನನಗೆ ತುಂಬಾ ಹೆಮ್ಮೆ ಮತ್ತು ಗರ್ವ ಎನಿಸುತ್ತದೆ. ಹಲವಾರು ವಿಚಾರಗಳನ್ನು ಮಂಡಿಸುವುದಕ್ಕೆ ಪ್ರಯತ್ನಪಟ್ಟಿದ್ದೇನೆ. ಅದರಿಂದ ಭಗವಂತ ನನಗೆ ಒಳ್ಳೆಯ ಫಲಿತಾಂಶವನ್ನು ಕೊಟ್ಟಿದ್ದಾನೆ. ಮಂಗಳಮುಖಿಯರ ಖಾಸಗಿ ವಿಧೇಯಕದ ಬಗ್ಗೆ ಮಾತನಾಡಿದಾಗ ತುಂಬಾ ಜನರು ಅದನ್ನು appreciate ಮಾಡಿ ಪತ್ರಿಕೆಗಳಲ್ಲಿ ಬರೆದು, ಆಗಿನ ಸರ್ಕಾರ ದಮನಿತ ಮಹಿಳೆಯರ ಸಮಿತಿಯನ್ನು ಮಾಡಿ, ಶ್ರೀಮತಿ ಜಯಮಾಲ ಅವರು ಅಧ್ಯಕ್ಷಣಿಯಾದರು. ಅದು ಆದಮೇಲೆ ಮಹಿಳೆಯರ ಅತ್ಯಾಚಾರ ಪ್ರಕರಣಗಳು ಹೆಚ್ಚು ಹೆಚ್ಚು ಆಗುತ್ತಿದ್ದಾಗ, ಸದನದಲ್ಲಿ ಎಲ್ಲರೂ ಮಾತನಾಡಿ, ನನ್ನ ಪ್ರಶ್ನೆಗೆ ಎಲ್ಲರೂ ಜೊತೆಗೂಡಿ, ಎಲ್ಲರೂ ದೊಡ್ಡ discussion ಮಾಡಿ. ಎಲ್ಲಾ ಆದಮೇಲೆ ಶ್ರೀ ಎಂ.ಸಿ.ನಾಣಯ್ಯನವರ ಅಧ್ಯಕ್ಷತೆಯಲ್ಲಿ ದೌರ್ಜನ್ಯತಡೆ ಸಮಿತಿಯನ್ನು ಮಾಡಿದರು. ಆಮೇಲೆ ಶ್ರೀ ವಿ.ಎಸ್.ಉಗ್ರಪ್ಪಣ್ಣನವರು ಅಧ್ಯಕ್ಷರಾದರು. ನಂತರ ನನಗೆ ಹಮಾಲಿಗಳ ಕುರಿತು ಚರ್ಚೆ ಮಾಡುವುದಕ್ಕೆ ಅವಕಾಶ ದೊರೆಯಿತು. ಶ್ರೀ ಡಿ.ಕೆ.ಶಿವಕುಮಾರ್‌ರವರು ಇಂಧನ ಸಚಿವರಾಗಿದ್ದಾಗ ಮಹಿಳೆಯರನ್ನು Lineman ಅಗಿ ಏಕೆ ಕೆಲಸಕ್ಕೆ ಸೇರಿಸಿಕೊಳ್ಳಬಾರದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಪ್ರಶ್ನೆ ಹಾಕಿದ್ದಕ್ಕೆ, ಅವರು ಮಹಿಳೆಯರು ಹೇಗೆ ಕಂಬ ಹತ್ತುವುದಕ್ಕೆ ಆಗುತ್ತದೆ ಎಂದು ಮಾತನಾಡಿದ್ದವರೇ, ಆ ಪ್ರಶ್ನೆಯನ್ನು ಕೇಳಿ ಆದಮೇಲೆ ಮಹಿಳೆಯರನ್ನು ಕೂಡ Lineman ಆಗಿ ಕೆಲಸಕ್ಕೆ ತೆಗೆದುಕೊಳ್ಳುವಂತೆ ಮಾಡಿದರು. ಇನ್ನು ಭಿಕ್ಷುಕರ ಪುನರ್ವಸತಿಯ ಬಗ್ಗೆ ಹೆಚ್ಚು ಮಾತನಾಡಿದ್ದೆ. ಅದಕ್ಕೆ ಸರ್ಕಾರ ಬಹಳ ಸ್ಪಂದನೆ ಮಾಡಿತು. ಮಹಿಳಾ ಪೊಲೀಸ್‌ನವರ ಬಗ್ಗೆ ಮತ್ತು ಮಹಿಳಾ ಶಿಕ್ಷಕಿಯರ ಬಗ್ಗೆ, ಸಿನಿಮಾ ಕಾರ್ಮಿಕರ ಬಗ್ಗೆ ಮತ್ತು ಸಿನಿಮಾ ಬೆಳವಣಿಗೆಗಳ ಬಗ್ಗೆ, ಈ ತರಹದ್ದ ಹಲವಾರು ವಿಚಾರಗಳನ್ನು ಮಂಡನೆ ಮಾಡಿದ್ದೇನೆ. ಮಾನ್ಯ ಸಭಾಪತಿಯವರೇ, ನಾನು ನಿಜ ಹೇಳುತ್ತಿದ್ದೇನೆ ನಾನು ಇಲ್ಲಿ ಕಲಿತಿರುವುದೇ ಹೆಚ್ಚು. ಪ್ರತಿಯೊಬ್ಬರಿಂದ ಇಲ್ಲಿ ಯಾರೇ ಆಗಿರಲಿ, ಪ್ರತಿಯೊಬ್ಬರಿಂದ ಅವರ ಮಾತುಗಳು, ಅವರು ನಡೆಯುವ ಶೈಲಿ ಮತ್ತು ಅವರ ಬುದ್ಧಿಮತ್ತೆಯಿಂದ ನಾನು ಇಲ್ಲಿ ಹೆಚ್ಚು ಬೆಳೆಯುವುದಕ್ಕೆ ಆಯಿತು. ಏಕೆಂದರೆ, ಸಿನಿಮಾದಲ್ಲಿ ಪಾತ್ರಗಳ ಮೂಲಕ ಬೆಳೆದರೆ, ಇಲ್ಲಿ ನಾನಾಗಿ ಬೆಳೆಯುವುದಕ್ಕೆ ಹೆಚ್ಚು ಅವಕಾಶ ಸಿಕ್ಕಿತು. ಎಲ್ಲರೂ ಸಹ ನನಗೆ ಸಹಾಯ ಮಾಡಿದ್ದಾರೆ. ಅದರಲ್ಲೂ ಸಭಾಪತಿಯವರು ತಮ್ಮ 'ಅವ್ವ' ಎನ್ನುವ ಪುಸ್ತಕದಲ್ಲಿ ಬರೆಯಬೇಕಾದರೆ ಮತ್ತು ಪತ್ರಿಕೆಯಲ್ಲಿ ಬರೆಯಬೇಕಾದರೆ ಕೂಡ, ನನ್ನನ್ನು quote ಮಾಡಿ ಬರೆದಿದ್ದೀರಿ, ಈ ತರಹ ತಾರಾಅನೂರಾಧರವರು ಮಾತನಾಡಿದರು ಎಂದು. ನಿಮಗೂ ಸಹ ಮತ್ತು ಎಲ್ಲಾ ನನ್ನ ಸಹೋದರರಿಗೆ ನಿಮ್ಮ ಸಹೋದರಿ ತಾರಾಅನೂರಾಧ ಮಾಡುವ ತುಂಬು ಹೃದಯದ ಹಾರ್ದಿಕವಾದ ವಂದನೆಗಳು.

**(ಮುಂದು...)**

(285) 12.07.2018 5.20 ವೈಎಲ್–ಬಿಎನ್‌ಎಸ್

ಶ್ರೀ ತಾರಾ ಅನೂರಾಧ(ಮುಂದು):–

ನನಗೆ ಮಾನ್ಯ ಸದಸ್ಯರಾದ ವಿ.ಎಸ್.ಉಗ್ರಪ್ಪನವರು ಒಂದು ಸಲ ಏನಮ್ಮ! ಎಲ್ಲರನ್ನು ಅಣ್ಣಾ ಅಣ್ಣಾ ಎಂದು ಕರೆಯುತ್ತೀಯಾ ಎಂದು ಕೇಳಿದ್ದರು. ನಾನು ಆಗ ಅವರಿಗೆ 'ನನಗೆ ಹೆತ್ತ ಅಪ್ಪನಿಗೆ ಅಪ್ಪ ಎನ್ನುವುದು ಬಿಟ್ಟು, ನನ್ನ ಗಂಡನಿಗೆ ಗಂಡ' ಎಂದು ಹೇಳುವುದು ಬಿಟ್ಟು, ಉಳಿದಿರತಕ್ಕಂಥ ಎಲ್ಲಾ ಪುರುಷರು ಸಹ ನನಗೆ ಅಣ್ಣನ ಸಮಾನ ಎಂದು ಹೇಳಿದ್ದೆ. ಆದ್ದರಿಂದ ನನ್ನ ಎಲ್ಲಾ ಅಣ್ಣಂದಿರಿಗೂ ಹೇಳುವುದೇನೆಂದರೆ, ನನಗೆ ಮತ್ತೆ ಈ ಮನೆಯ ಮಗಳಾಗಿ ಬರುವ ಅವಕಾಶವನ್ನು ಭಗವಂತ ಮತ್ತು ಪಕ್ಷ ಕಲ್ಪಿಸಿಕೊಟ್ಟರೆ, ಮತ್ತೆ ಸದನಕ್ಕೆ ಬರುತ್ತೇನೆ ಎನ್ನುವ ಮಾತನ್ನು ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿದಂತಹ ಮಾನ್ಯ ಸಭಾಪತಿಗಳಿಗೆ ಹಾಗೂ ಸದನದಲ್ಲಿ ಉಪಸ್ಥಿತರಿರುವ ಎಲ್ಲರಿಗೂ ನಾನು ಚಿರಋಣಿಯಾಗಿರುತ್ತೇನೆ. ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇಬ್ಬರು ಗೌರವಾನ್ವಿತ ಸದಸ್ಯರ ಅಧಿಕಾರವಧಿಯು ಪೂರ್ಣಗೊಳ್ಳುತ್ತಿದೆ. ನಾನೂ ಸಹ ಕಳೆದ ನಾಲ್ಕೂವರೆ ವರ್ಷಗಳಿಂದ, ಈ ಸದನದೊಳಗೆ ಬಂದಾಗಿನಿಂದಲೂ ಅತ್ಯಂತ ಆಪ್ತತೆಯಿಂದ ಎರಡು ನಗುವನ್ನು ಇಲ್ಲಿ ಕಾಣುತ್ತಿದ್ದೇನೆ. ಹಿರಿಯರಾದಂತಹ ಮಾನ್ಯ ಕೆ.ಬಿ.ಶಾಣಪ್ಪನವರ ಬಗ್ಗೆ ಹೇಳುವಂತಹದ್ದಾಗಲಿ, ಮಾತನಾಡುವುದಾಗಲಿ, ಅವರ ಮಾತನ್ನು ಕೇಳಿದ ಮೇಲೆ ಅವರ ವ್ಯಕ್ತಿತ್ವ ಏನೆಂಬುದು ನನಗೆ ಅರ್ಥವಾಗುತ್ತದೆ. ನನಗೆ ಅವರ ಜೊತೆಯಲ್ಲಿ ಒಂದೆರಡು ದಿನಗಳ ಕಾಲ ಹೆಚ್ಚು ಕೆಲಸ ಮಾಡುವಂತಹ ಒಂದು ಸಮಯ ದೊರಕಿಸಿಕೊಟ್ಟಿದ್ದು ಯಾವಾಗ ಎಂದರೆ, ದೌರ್ಜನ್ಯ ತಡೆ ಸಮಿತಿ ಕಾಯ್ದೆ ಅಧ್ಯಕ್ಷರಾಗಿ ಅತ್ಯಂತ ಒಳ್ಳೆಯ ಕೆಲಸ ಮಾಡಿರತಕ್ಕಂಥ ಮಾನ್ಯ ವಿ.ಎಸ್.ಉಗ್ರಪ್ಪನವರು ಒಂದು ಸಬ್–ಕಮಿಟಿಯನ್ನು ರಚನೆ ಮಾಡಿದ್ದರು. ಆ ಸಬ್–ಕಮಿಟಿಗೆ ಮಾನ್ಯ ಕೆ.ಬಿ.ಶಾಣಪ್ಪನವರು ಅಧ್ಯಕ್ಷರಾಗಿದ್ದರು. ಆಗ ನಾವು ಮಾನ್ಯ ಸದಸ್ಯರ ಜೊತೆಯಲ್ಲಿ ಹಲವಾರು ಊರುಗಳಿಗೆ ಹೋಗುವಂತಹ ಅವಕಾಶ ಸಿಕ್ಕಿತ್ತು. ನಮ್ಮ ಇಡೀ ಸಮಿತಿಯನ್ನು ಎಷ್ಟು ಚೆನ್ನಾಗಿ ಕರೆದುಕೊಂಡು ಹೋದರೆಂದರೆ, ಅಲ್ಲಿರತಕ್ಕಂಥ ಹೆಣ್ಣು ಮಕ್ಕಳನ್ನು ಮತ್ತು ಅಲ್ಲಿರತಕ್ಕಂಥ ಪ್ರತಿಯೊಂದು ಜಾಗಗಳನ್ನು ತೋರಿಸಿದ್ದರು. ಹಾಗೆಯೇ ಗುಲ್ಬರ್ಗದಲ್ಲಿರತಕ್ಕಂಥ ಹಟ್ಟಿಗಳಿಗೆ ಮತ್ತು ಅವರ ಮನೆಗೆ ಕರೆದುಕೊಂಡು ಹೋಗಿದ್ದರು. ಅದೆಷ್ಟು ಪ್ರೀತಿಯಿಂದ ಮಕ್ಕಳಿಗೆ ಊಟ ಬಡಿಸುವ ಹಾಗೆ ಎಲ್ಲಾ ಸಮಿತಿ ಸದಸ್ಯರಿಗೆ ತನ್ನ ಮನೆಯಲ್ಲಿ ತೋರಿಸಿದಂತಹ ಪ್ರೀತಿ, ವಿಶ್ವಾಸವನ್ನು ಮರೆಯುವುದಕ್ಕೆ ಸಾಧ್ಯವಿಲ್ಲ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಜಕೀಯದಲ್ಲಿ ಪಾವಿತ್ರ್ಯತೆಯನ್ನು ಉಳಿಸಿಕೊಂಡು ಹೋದಂಥವರು, ಮೌಲ್ಯವನ್ನು ಬಿತ್ತಿರತಕ್ಕಂಥವರು. ನಾನು ಡಾ॥ ರಾಜ್‌ಕುಮಾರ್‌ರವರನ್ನು ಹತ್ತಿರದಿಂದ ನೋಡಿದ್ದೇನೆ, ಅವರ ಜೊತೆ ಅಭಿನಯಿಸಿದ್ದೇನೆ. ಆದರೆ, ನನಗೆ ಯಾವತ್ತು ಸಹ ಡಾ॥ ರಾಜ್‌ಕುಮಾರ್‌ರವರು ಈ ರೀತಿಯೇ ಇರಿ ಎಂದು ಹೇಳಲಿಲ್ಲ. ಆದರೆ, ಡಾ॥ ರಾಜ್‌ಕುಮಾರ್‌ರವರ ನಡೆ–ನುಡಿ, ಬದುಕಿ ಬಂದ ಹಾದಿ ಮತ್ತು ಅವರು ಹೇಗಿರುತ್ತಾರೆ ಎನ್ನುವುದನ್ನು ನೋಡಿಕೊಂಡು ಬೆಳೆದಂಥವರು, ಆ ಮೌಲ್ಯವನ್ನು ಉಳಿಸಿಕೊಂಡು, ಬಿತ್ತುಕೊಂಡು ಬಂದಿದ್ದೇವೆ. ಹಾಗೆಯೇ ಮಾನ್ಯ ಸದಸ್ಯರು ಸಹ ಯಾರಿಗೂ ಹೇಳಬೇಕಾಗಿಲ್ಲ. ಇವತ್ತಿನವರೆಗೂ ನಾನು ತಮ್ಮಲ್ಲಿ ಕಂಡಿರತಕ್ಕಂಥದ್ದು ಅನ್ಯಾಯದ ವಿರುದ್ಧ ಧ್ವನಿ ಎತ್ತುವಂತಹ ದಾಟಿ ಏನಿದೆ ಹಾಗೂ ಮನೆಯ ಹಿರಿಯ ಸದಸ್ಯನಾಗಿ 4 ಕಂಬಗಳಲ್ಲಿ ಒಂದು ಕಂಬ ಸಡಿಲವಾಗುತ್ತಿದೆ ಎಂದು ಭಾವಿಸಿದಾಗ ಮೌಲ್ಯವನ್ನು ಎತ್ತಿ ಹಿಡಿಯುವಂತಹ ರೀತಿ ಏನಿದೆ, ಅದನ್ನು ನಿಜವಾಗಿಯೂ ಯಾವತ್ತು ಸಹ ಮರೆಯಲಾರದ ವ್ಯಕ್ತಿಯಾಗಿ ಈ ಸದನ ಅವರನ್ನು ನೆನಪಿಸಿಕೊಳ್ಳುತ್ತದೆ. ನನಗೆ ಇದು ಹಿರಿಯರ ಸದನ ಎಂದು ಹೇಳುತ್ತಾರೆ. ಹಿರಿತನವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೆರೆದ ಸದನವಾಗಬೇಕಾದರೆ, ಮಾನ್ಯ ಸದಸ್ಯರಂತಹ ಮೌಲ್ಯಾಧಾರಿತ ವ್ಯಕ್ತಿಗಳು ಯಾವುದೇ ಕಾರಣಕ್ಕೂ, ಯಾವುದೇ ಸಂದರ್ಭ ಬಂದಾಗಲೂ ಸಹ ಆತ್ಮಾವಲೋಕನವನ್ನು ಮಾಡಿಕೊಂಡು, ಯಾವತ್ತು ಆತ್ಮದ್ರೋಹ ಮಾಡದೇ, ಎಂತಹ ವಿಷಯ ಬಂದಾಗಲೂ ಎಲ್ಲೋ ಒಂದು ಕಡೆ ಅನ್ಯಾಯದ ಕಡೆ ಬಾಗದೇ, ಸತ್ಯದ ಕಡೆ ಬಾಗಿ ನ್ಯಾಯವನ್ನು ಉಳಿಸಿಕೊಟ್ಟಿರುವುದನ್ನು ಹಲವಾರು ಬಾರಿ ನೋಡಿದ್ದೇನೆ. ಈ ಎಲ್ಲಾ ಅಧಿಕಾರ, ಅವಕಾಶವನ್ನು ಪರಮಾತ್ಮ ನೀಡಿದ್ದಾನೆ. ನಾವು ಮಾಡಿರತಕ್ಕಂಥ ಯಾವುದೋ ಒಂದು ಒಳ್ಳೆಯ ಕೆಲಸದಿಂದ ಇಲ್ಲಿ ಬರುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ನಾವು ಮಾಡಿರತಕ್ಕಂಥ ಕೆಲಸಗಳು ಮಾತ್ರ ಶಾಶ್ವತವಾಗಿ ಎಲ್ಲರ ಸ್ಮೃತಿಯಲ್ಲಿ ಮತ್ತು ಹೃದಯದಲ್ಲಿ ಉಳಿಯುತ್ತದೆ. ನಮ್ಮೆಲ್ಲರಿಗೂ ಮಾನ್ಯ ಸದಸ್ಯರು ಇಟ್ಟಿರತಕ್ಕಂಥ ಹೆಜ್ಜೆಯು ಗುರುತಾಗಿದೆ. ಯಾವತ್ತೂ ಮನೆಯಲ್ಲಿಟ್ಟ ಹೆಜ್ಜೆಗಳು ಗುರುತಾಗುವುದಿಲ್ಲ. ಆದರೆ, ಮಾನ್ಯ ಸದಸ್ಯರು ಸಮಾಜದಲ್ಲಿಟ್ಟಿರತಕ್ಕಂಥ ಹೆಜ್ಜೆಗಳೆಲ್ಲವೂ ಗುರುತಾಗಿ ಉಳಿದುಕೊಂಡಿದೆ. ಅದಕ್ಕಾಗಿ ಅವರಿಗೆ ಅಭಾರಿಯಾಗಿದ್ದೇನೆ.

ಇನ್ನೊಂದು ಅತ್ಯಂತ ಆಪ್ತವಾಗಿರತಕ್ಕಂಥದ್ದು ಎಂದರೆ, ಸ್ವಯಂ ಕೃಷಿ ಎಂದು ಹೇಳುತ್ತೇನೆ. 1992ರಲ್ಲಿ ನಾನು 'ಮಹೇಂದ್ರ ವರ್ಮ' ಎನ್ನುವಂತಹ ಚಿತ್ರವನ್ನು ನಿರ್ಮಾಣ ಮಾಡಿದಾಗ ಆ ಚಿತ್ರದ ನಾಯಕಿ ಮಾನ್ಯ ಸದಸ್ಯರಾದ ತಾರ ಅನೂರಾಧರವರು. ಅವತ್ತಿನಿಂದ ಈವರೆಗೂ ಮಾನ್ಯ ಸದಸ್ಯರಲ್ಲಿ ನೋಡಿದಂತಹ ಒಂದು ಗುಣವೇನೆಂದರೆ, ಅದೇ ಮುಗ್ಧತೆ, ಅದೇ ಪ್ರೀತಿ. ನಾನು ಮಾನ್ಯ ಸದಸ್ಯರಲ್ಲಿ ಒಂದು ಕಿಂಚಿತ್ ಅಹಂಕಾರವನ್ನು ನೋಡಲಿಲ್ಲ ಇಲ್ಲ. ಅವರಿಗೆ ಎಷ್ಟೇ ವಿಚಾರಗಳೂ ಗೊತ್ತಿದ್ದರೂ ಏನೂ ಗೊತ್ತೇ ಇಲ್ಲ ಎಂದು ಹೇಳುವಂತಹ ಒಂದು ದೊಡ್ಡ ಗುಣ. ಅದು ಬೆಳೆಯುವ ಗುಣ. ಒಂದಿಷ್ಟು ಅಹಂಕಾರವನ್ನು ನಾನು ಮಾನ್ಯ ಸದಸ್ಯರಾದ ತಾರಾ ಅನೂರಾಧರವರಲ್ಲಿಯೂ ಸಹ ಕಾಣಲಿಲ್ಲ. ಮಾನ್ಯ ಸದಸ್ಯರು ಎಲ್ಲರನ್ನೂ ಕೂಡ ಒಂದು ಮನೆಯ ಸದಸ್ಯರಂತೆ ಒಟ್ಟುಗೂಡಿಸಿಕೊಂಡು ಕಾಣುವಂತಹದ್ದು ಬಹಳ ಹೆಮ್ಮೆಯಾಗುತ್ತದೆ. ಮಾನ್ಯ ಸದಸ್ಯರು ಅತ್ಯಂತ ಒಳ್ಳೆಯ ಚಿತ್ರಗಳಲ್ಲಿ ನಟಿಸಿದ್ದಾರೆ.

ನನಗೆ ಯಾವಾಗಲೂ ಅವರ ಮುಖವನ್ನು ನೋಡಿದಾಗ ನೆನಪಾಗುತ್ತದೆ. ನಿಮಗೂ ಸಹ ಸಮಯಾವಕಾಶ ಸಿಕ್ಕಿದಾಗ 'ಇಂಗೆಯೂಂ ಒರು ಗಂಗೈ' ಎಂಬ ಬಹಳ ಒಳ್ಳೆಯ ಚಿತ್ರದಲ್ಲಿ ಅಭಿನಯಿಸಿರುವುದನ್ನು ನೋಡಿ. ತುಂಬಾ ಚೆನ್ನಾಗಿ ಹಿಟ್ ಆಯಿತು. ಶ್ರೀ ಸಿದ್ದಲಿಂಗಯ್ಯನವರ ಮಗ ಮುರುಳಿ ಈ ಚಿತ್ರದ ನಾಯಕರಾಗಿದ್ದರು. ಬಹಳ ಒಳ್ಳೆಯ ಚಿತ್ರವಾಗಿದೆ. ಯಾವತ್ತು ಸಹ 'ಕಾನೂರು ಹೆಗ್ಗಡತಿ' ಎಂಬ ಸಿನಿಮಾವನ್ನು ಮರೆಯುವುದಕ್ಕೆ ಆಗುವುದಿಲ್ಲ. ಅದಕ್ಕಿಂತ ಇನ್ನೂ ಉನ್ನತವಾದ 'ಹಸೀನಾ' ಚಿತ್ರ ಸಹ ಖಂಡಿತವಾಗಿಯೂ ನೋಡಲೇಬೇಕಾಗಿರುವಂಥದ್ದು. ಯಾವುದೇ ಪಾತ್ರವನ್ನು ಮಾನ್ಯ ಸದಸ್ಯರು ತೆಗೆದುಕೊಂಡರು ಸಹ ತಾನಾಗಿಯೇ ಆ ಪಾತ್ರಕ್ಕೆ ಒಂದು ಜೀವ ತುಂಬುವ ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳ್ಳೆಯ ಕಲಾವಿದೆ. ಒಂದು ಮಾತನ್ನು ಮಾತ್ರ ಹೇಳಬಲ್ಲೆ. ಯಾವ ಕ್ಷೇತ್ರದಲ್ಲಿ ಕೆಲಸ ಮಾಡಿದರೂ ಸಹ ತಮ್ಮ ಛಾಪನ್ನು ಮೂಡಿಸಿದ್ದಾರೆ. ಅವರು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆಯಾಗಿದ್ದಾಗ, ಬಹುಶಃ ತುಂಬು ಗರ್ಭಿಣಿ ಎಂದೆನ್ನಿಸುತ್ತದೆ. ಆ ತುಂಬು ಗರ್ಭಿಣಿಯಾಗಿದ್ದಾಗಲೂ ಎಲ್ಲರನ್ನೂ ಒಟ್ಟು ಗೂಡಿಸಿ, ಅದೆಷ್ಟು ಚೆನ್ನಾಗಿ ಅಂತರರಾಷ್ಟ್ರೀಯ ಚಿತ್ರೋತ್ಸವವನ್ನು ನಡೆಸಿಕೊಟ್ಟರು ಎನ್ನುವುದನ್ನು ಮರೆಯುವುದಕ್ಕಾಗುವುದಿಲ್ಲ. ನಾನು ಈ ಸದನಕ್ಕೆ ಬಂದಾಗ ಅವರ ಮುಂದೆ ನಾನು ಜೂನಿಯರ್ ಎಂದು ಹೇಳಬಹುದು. ಏಕೆಂದರೆ, ಮಾನ್ಯ ಸದಸ್ಯರು ನನಗಿಂತ ಮೊದಲು ಸದನಕ್ಕೆ ಬಂದಿರತಕ್ಕಂಥವರು. ನಾನು ಮಾನ್ಯ ಸದಸ್ಯರನ್ನು ನೋಡಿದಾಗ ಮುಗ್ಧತೆಯ ಮುಖವನ್ನು ಈ ಸದನದಲ್ಲಿ ಕಂಡೆ. ಇಂತಹ ಮುಖವನ್ನು ನೇರವಾಗಿ ನೋಡುವಂತಹ ಅವಕಾಶ ಸಿಗುವುದಿಲ್ಲ. ಸದನದಲ್ಲಿ ಪ್ರಶ್ನೆಗಳನ್ನು ಕೇಳುಯವುದಕ್ಕಾಗಿ ಸಿದ್ದತೆಗಳನ್ನು ಮಾಡಿಕೊಳ್ಳುವಂತದ್ದು, ವಿಷಯಗಳನ್ನು present ಮಾಡುವಂತಹ ರೀತಿಯಲ್ಲಿ ಆಕೆ ನಿರ್ವಹಿದಂತಹ ಪಾತ್ರದಲ್ಲಿ ಯಾವುದೇ ಸಮಸ್ಯೆಯಾಗಲಿ, ಆ ಸಮಸ್ಯೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿ, ಈ ಸದನದ ಒಬ್ಬ ಒಳ್ಳೆಯ Spokesperson ಆಗಿ ತುಂಬಾ ಅಚ್ಚುಕಟ್ಟಾಗಿ ಅವರ ಕೆಲಸವನ್ನು ನಿರ್ವಹಿಸಿದ್ದಾರೆ. ಒಂದು ವಿಚಾರವೇನೆಂದರೆ, ಈ ಸದನದಲ್ಲಿ ದಮನಿತ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರ ಬಗ್ಗೆ ಅಧ್ಯಯನ ಮಾಡಲಿಲ್ಲ. ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸದಸ್ಯರು ಲಿಂಗತ್ವ ಅಲ್ಪಸಂಖ್ಯಾತರ ಬಗ್ಗೆ ಒಳ್ಳೆಯ ಗಮನವನ್ನು ಸೆಳೆದಿದ್ದಾರೆ. ಅದು ನಿಜಕ್ಕೂ ಈ ಸಮಾಜದಲ್ಲಿ ಕಣ್ಣು ತೆರೆಸುವಂತಹ ಕೆಲಸ. ಅದರ ಬಗ್ಗೆ ನಾವು ಅಧ್ಯಯನ ಮಾಡಿರಲಿಲ್ಲ. ಆದರೆ, ಮಾನ್ಯ ಸದಸ್ಯರು ಅದರ ಬಗ್ಗೆ ಮಾತನಾಡಿ ತುಂಬಾ ಒಳ್ಳೆಯ ಕೆಲಸವನ್ನು ಮಾಡಿದ್ದರು. ಮಾನ್ಯ ಸದಸ್ಯರೆ, ಈ ಸದನದೊಳಗೆ ಬರುವವರು ಶಾಶ್ವತವಾಗಿ ಇರುವುದಿಲ್ಲ. ಹಾಗೆಯೇ ಈ ಸದನದಿಂದ ಹೊರಗೆ ಹೋಗುವವರು ಶಾಶ್ವತವಾಗಿ ಹೋಗುವುದಿಲ್ಲ. ಅವಕಾಶ ಸಿಕ್ಕಿದಾಗ ಬರುತ್ತಿರುತ್ತಾರೆ, ಸಮಯ ಬಂದಾಗ ಹೋಗುತ್ತಿರುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರುಗಳಿಬ್ಬರಿಗೂ ನಾನು ಹೇಳುವುದೇನೆಂದರೆ, ಅವರುಗಳಿಗೆ 100–150 ಕ್ಕಿಂತ ಹೆಚ್ಚು ಆಯಸ್ಸನ್ನು ಭಗವಂತ ನೀಡಲಿ, ಇಂಥವರುಗಳು ಈ ಸದನಕ್ಕೆ ಬೇಕೇ ಬೇಕು. ಮಾನ್ಯ ಸದಸ್ಯರಾದ ತಾರಾ ಅನೂರಾಧರವರೇ, ನೀವು ಮತ್ತೆ ಈ ಸದನದೊಳಗೆ ಬಂದೇ ಬರುತ್ತೀರಾ. ಏಕೆಂದರೆ ತಾವು ಅಷ್ಟು potential ಇರುವವರು.

(ಮುಂದು) . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(286)/12.07.2018/5.30/ಎಸ್‌ಕೆ-ಬಿಎನ್‌ಎಸ್

**ಡಾ. ಜಯಮಾಲ ರಾಮಚಂದ್ರ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀಮತಿ ತಾರಾಅನೂರಾಧ ಅವರು ನಮ್ಮ ಈ ಮನೆಯ ಮಗಳು ಮತ್ತು ಚಿತ್ರರಂಗದ ಮಗಳು ಎಂದು ಹೇಳುವುದಕ್ಕೆ ಬಹಳ ಹೆಮ್ಮೆಯಾಗುತ್ತದೆ. ಅದೇರೀತಿ ಹಿರಿಯ ಸದಸ್ಯರಾದ ಸನ್ಮಾನ್ಯ ಕೆ.ಬಿ.ಶಾಣಪ್ಪನವರು ರಾಜಕಾರಣದ ಗಣ್ಯರು. ಇವರಿಬ್ಬರಿಗೂ ಕೂಡ ನಾನು ಶುಭ ಹಾರೈಸುತ್ತೇನೆ.

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಬಿ.ಶಾಣಪ್ಪನವರು ಮತ್ತು ಶ್ರೀಮತಿ ತಾರಾಅನೂರಾಧರವರು ಆಗಸ್ಟ್ 9ನೇ ತಾರೀಖು ಈ ಸದನದಿಂದ ನಿರ್ಗಮಿಸುವಂತಹ ಅನಿವಾರ್ಯತೆ ಇದೆ. ಮಾನ್ಯ ಕೆ.ಬಿ. ಶಾಣಪ್ಪನವರು ಇವತ್ತಿನ ರಾಜಕಾರಣದ ಜೀವನದಲ್ಲಿ ಹಣ ಬಲದ ಮೂಲಕ ಮಾತ್ರ ರಾಜಕಾರಣ ಮಾಡಬಹುದು ಎಂದು ನಾವೆಲ್ಲಾ ನಂಬುವಂತಹ ಕಾಲಘಟ್ಟದಲ್ಲಿ, ಅಪರೂಪಕ್ಕೆ ಒಬ್ಬ ಆದರ್ಶ ರಾಜಕಾರಣಿಯಾಗಿ ನನಗೆ ಮಾನ್ಯ ಕೆ.ಬಿ. ಶಾಣಪ್ಪನವರು ಕಾಣಿಸಿದ್ದಾರೆ. ಅವರ ಪ್ರಮಾಣಿಕತೆ, ನಿಷ್ಕಳಂಕತೆ, ಸಜ್ಜನಿಕೆ ಮತ್ತು ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವಂತಹ ರೀತಿ ಮತ್ತು ಅವರು ಹೇಳುವ ಮಾತಿನಲ್ಲಿರುವ ವ್ಯಂಗ್ಯತೆ, ಮೊನಚು, ಹಾಸ್ಯ, ವಿಡಂಬನೆ ಇವುಗಳೆಲ್ಲಾ ಸಹ ಇಂತಹ ಅಪರೂಪದ ಯೋಗ್ಯ ರಾಜಕಾರಣಿಗಳಲ್ಲಿ ಮಾತ್ರ ಇರುವುದಕ್ಕೆ ಸಾಧ್ಯ ಎಂಬುದು ನನ್ನ ಅನಿಸಿಕೆ. ಎಲ್ಲಕ್ಕಿಂತ ಹೆಚ್ಚಿನದಾಗಿ ನಾನು ಅವರಲ್ಲಿ ಕಂಡುಕೊಂಡಿರುವುದು ಹಾಗೂ ನನಗೆ ಅರ್ಥವಾಗದೇ ಇರುವುದು ಏನೆಂದರೆ, ಅವರು ಕಮ್ಯೂನಿಸ್ಟ್ ವಿಚಾರಧಾರೆಗಳಿಂದ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭ ಮಾಡಿದಂಥವರು. ಅಲ್ಲಿಂದ ನೇರವಾಗಿ ಭಾರತೀಯ ಜನತಾ ಪಕ್ಷದ ಮಧ್ಯೆ ಬಂದಾಗಲೂ ಕೂಡ ಕಮ್ಯೂನಿಸ್ಟ್ ಸಿದ್ಧಾಂತ ಇರುವವರನ್ನು ಬಿ.ಜೆ.ಪಿ. ಪಕ್ಷದವರಾದ ನಾವು ಅರಗಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಆದರೆ ಮಾನ್ಯ ಕೆ.ಬಿ. ಶಾಣಪ್ಪನವರು ಅಲ್ಲಿಂದ ಮೇಲೆದ್ದು ಬಂದವರು, ಬಹುಶಃ ನಮ್ಮನ್ನೂ ಅರಗಿಸಿಕೊಂಡಿದ್ದಾರೆ ಎನ್ನುವಷ್ಟರ ಮಟ್ಟಿಗೆ ಅವರು ನಮಗೆ ಮಾರ್ಗದರ್ಶನ ಕೊಡುವಷ್ಟು ಎತ್ತರಕ್ಕೆ ಬೆಳೆದಿದ್ದಾರೆ. ಹಾಗಾಗಿ, ಸಾರ್ವಜನಿಕ ಜೀವನದಲ್ಲಿ ಇರುವಂತಹ ಪ್ರಾಮಾಣಿಕತೆಯ ಪಳೆಯುಳಿಕೆ ಏನಾದರೂ ಉಳಿದುಕೊಂಡಿದ್ದರೆ, ಅದು ಮಾನ್ಯ ಕೆ.ಬಿ. ಶಾಣಪ್ಪನವರಂತಹ ಹಿರಿಯರಿಂದ ಮಾತ್ರ ಇರುವುದಕ್ಕೆ ಸಾಧ್ಯ ಎಂದು ನಾನು ಭಾವಿಸುತ್ತೇನೆ. ನನ್ನ ಪಕ್ಷದ ಪರವಾಗಿ ಮತ್ತು ನನ್ನ ಪಕ್ಷದ ಹಿರಿಯರ ಪರವಾಗಿ ಮತ್ತು ಸದನದ ಎಲ್ಲರ ಪರವಾಗಿ ಅವರ ಮುಂದಿನ ಜೀವನ ಯಶಸ್ವಿಯಾಗಲಿ ಮತ್ತು ಅವರ ಹಿರಿತನ, ಗೌರವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಒಳ್ಳೆಯತನ ಈ ಎಲ್ಲ ಅಂಶಗಳು ಅವರನ್ನು ಮತ್ತೊಮ್ಮೆ ಈ ಸದನಕ್ಕೆ ಕರೆತರುವಂತಹ ವಾತಾವರಣ ನಿರ್ಮಾಣವಾಗಲಿ ಎಂದು ನಾನು ಶುಭ ಹಾರೈಕೆಯನ್ನು ವ್ಯಕ್ತಪಡಿಸುತ್ತೇನೆ.

ನಮ್ಮ ಇಡೀ ಸದನಕ್ಕೆ ಶ್ರೀಮತಿ ತಾರಾಅನೂರಾಧರವರು ಒಬ್ಬ ತಂಗಿ ಇದ್ದಂತೆ. ಅವರ ಮಾತು, ನಡತೆ, ಕೃತಿ, ನಡವಳಿಕೆಗಳೆಲ್ಲವೂ ರಾಜಕಾರಣದಲ್ಲಿ ಬಹಳ ಅನುಭವ ಹೊಂದಿದವರಂತಿವೆ. ನಾವೆಲ್ಲ ಸುಮಾರು ಹತ್ತು-ಇಪ್ಪತ್ತು ವರ್ಷಗಳಿಂದ ರಾಜಕಾರಣ ಮಾಡಿಕೊಂಡು ಬಂದವರು. ಅಷ್ಟೆಲ್ಲ ರಾಜಕಾಣದಲ್ಲಿದ್ದರೂ ಕೂಡ ಇಲ್ಲಿ ಬಂದು ನಮಗೆ ಮಾತನಾಡುವುದಕ್ಕೆ ಒಂದು ರೀತಿಯ ತಳಮಳ, ಗೊಂದಲ, ಆತಂಕ ಅಥವಾ ಯಾವುದೋ ಒಂದು ರೀತಿ ನಮ್ಮನ್ನು ಕಾಡುತ್ತದೆ. ಆದರೆ ಶ್ರೀಮತಿ ತಾರಾಅನೂರಾಧರವರು ಈ ಸದನಕ್ಕೆ ಬಂದ ದಿವಸವೇ ಗಿಳಿ ಪಾಠ ಮಾಡಿದ ಹಾಗೇ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ಆ ರೀತಿಯ ಪ್ರತಿಭೆ ಬಹುಶಃ ಎಲ್ಲ ಕಡೆಗಳಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಅವರು ಈ ಸದನದಲ್ಲಿದ್ದ ಆರು ವರ್ಷಗಳ ಕಾಲ ನಮ್ಮ ಪಕ್ಷದ ಗೌರವವನ್ನು ಹೆಚ್ಚಿಸಿದ್ದಾರೆ. ನಮ್ಮ ಪಕ್ಷದ ಸಂಘಟನೆಗೆ ಶ್ರಮ ಪಟ್ಟಿದ್ದಾರೆ. ಈ ಸದನದಲ್ಲಿರುವ ಎಲ್ಲರನ್ನೂ ಸಹೋದರರಂತೆ ಕಂಡಿದ್ದಾರೆ. ಒಳ್ಳೆಯ ವಿಚಾರಗಳನ್ನು ಮಂಡಿಸಿ, ನಮ್ಮೆಲ್ಲರ ಪ್ರೀತಿ, ಗೌರವಕ್ಕೆ ಪಾತ್ರರಾಗಿದ್ದಾರೆ. ಶ್ರೀಮತಿ ತಾರಾಅನೂರಾಧರವರ ಕನಸುಗಳು ನನಸಾಗಲಿ ಎಂದು ಹೇಳುತ್ತಾ, ಈ ಇಬ್ಬರು ಸದಸ್ಯರುಗಳು ಈ ಸದನಕ್ಕೆ ಮತ್ತೆ ಬರುವಂತಹ ಅವಕಾಶಗಳು ಸಿಗಲಿ ಎಂದು ನಾನು ಅವರಿಗೆ ಶುಭ ಹಾರೈಸುತ್ತೇನೆ.

**ಸಭಾಪತಿಯವರು:-** ಸದನದ ಎಲ್ಲಾ ಸದಸ್ಯರ ಪರವಾಗಿ ಹಿರಿಯರಾದಂತಹ ಮಾನ್ಯ ಕೆ.ಬಿ. ಶಾಣಪ್ಪನವರು ಮತ್ತು ಶ್ರೀಮತಿ ತಾರಾಅನೂರಾಧರವರು ಇಲ್ಲಿಯವರೆಗೆ ಈ ಸದನದಲ್ಲಿ ಮಾಡಿರುವ ಉತ್ತಮವಾದಂತಹ ಕೆಲಸಗಳಿಂದಾಗಿ, ನಾವು ಅವರನ್ನು ಜೀವನದಲ್ಲಿ ಎಂದೂ ಮರೆಯುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಕೆ.ಬಿ.ಶಾಣಪ್ಪನವರು ಯಾವಾಗಲೂ ಎಲ್ಲಾ ವಿಚಾರಗಳನ್ನು ನಮಗೆ ಹೇಳಿದ್ದಾರೆ. ನಾನು ಕಳೆದ ಮೂವತ್ತೆಂಟು ವರ್ಷಗಳಿಂದ ಈ ಸದನದಲ್ಲಿ ಅನೇಕ ಜನರನ್ನು ನೋಡಿದ್ದೇನೆ ಮತ್ತು ಅನೇಕ ಜನ ಸದಸ್ಯರು ನಿವೃತಿಯಾಗಿದ್ದಾರೆ ಹಾಗೂ ಅನೇಕ ಜನ ಸದಸ್ಯರು ಪುನರಾಯ್ಕೆಯಾಗಿ ವಾಪಸ್ಸು ಬಂದಿದ್ದಾರೆ. ಅನೇಕ ಸಂಗೀತಗಾರರು, ಪತ್ರಕರ್ತರು, ಸಿನಿಮಾ ರಂಗದವರು ಸಹ ಈ ಸದನದ ಸದಸ್ಯರಾಗಿ ಬಂದಿದ್ದಾರೆ. ಶ್ರೀಮತಿ ತಾರಾಅನೂರಾಧರವರು ಸಿನಿಮಾ ರಂಗದಿಂದ ಬಂದವರಾಗಿದ್ದಾರೆ. ಮಾನ್ಯ ಕೆ.ಬಿ. ಶಾಣಪ್ಪನವರನ್ನು ನಾನು ಕಳೆದ ಮೂವತ್ತು ವರ್ಷಗಳಿಂದ ನೋಡುತ್ತಿದ್ದೇನೆ. ಇವರಿಬ್ಬರು ಈ ಸದನದ ಸದಸ್ಯರಾಗಿ, ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ ಮತ್ತು ನಮ್ಮೆಲ್ಲರ ಪ್ರೀತಿಗೆ ಪಾತ್ರರಾದಂತಹ ಮಾನ್ಯ ಕೆ.ಬಿ. ಶಾಣಪ್ಪ ಮತ್ತು ಶ್ರೀಮತಿ ತಾರಾಅನೂರಾಧರವರಿಗೆ ಇಡೀ ಸದನದ ಪರವಾಗಿ ನಾನು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಈ ಸದನಕ್ಕೆ ಮತ್ತೆ ಬರುವಂತಹ ಅವಕಾಶ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ, ನಿಮ್ಮಿಬ್ಬರಿಗೂ ಅನಂತಾನಂತ ಕೃತಜ್ಞತೆಗಳನ್ನು ಹೇಳಲು ಬಯಸುತ್ತೇನೆ. ಈ ಸದನದ ಒಟ್ಟಾಭಿಪ್ರಾಯವಾಗಿ ತಮ್ಮನ್ನು ಬಹಳ ಗೌರವದಿಂದ, ಈ ಸದನದಿಂದ ಬೀಳ್ಕೊಡುವಂತಹ ಕಾರ್ಯಕ್ರಮಕ್ಕೆ ಇರುತ್ತೀರಿ ಮತ್ತು ಬೀಳ್ಕೊಟ್ಟ ನಂತರ ಮತ್ತೊಮ್ಮೆ ಈ ಸದನಕ್ಕೆ ಬರುತ್ತಾರೆ. ನಾನು ಬೀಳ್ಕೊಟ್ಟಾಗಲೂ ಸಹ, ನಾನು ಈ ಸದನಕ್ಕೆ ಸದಸ್ಯನಾಗಿ ವಾಪಸ್ಸು ಬಂದೆ. ತಮಗೂ ಈ ರೀತಿಯ ಅವಕಾಶ ಸಿಗಲಿ ಎಂದು ಹಾರೈಸುತ್ತಾ, ಆ ಭಗವಂತನು ತಮಗೆ ಒಳ್ಳೆಯದು ಮಾಡಲಿ ಎಂದು ನಾನು ಮತ್ತೊಮ್ಮೆ ಆಶಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ವಿಚಾರ ಇದೆ. ಆಗಲೇ ಮಾನ್ಯ ಅಲ್ಪಸಂಖ್ಯಾತ ಇಲಾಖೆಯ ಸಚಿವರು ಹೇಳಿರುವಂತಹ ಒಂದು ಮಾತನ್ನು ತಾವು ಸ್ಪಷ್ಟಪಡಿಸುವುದಾಗಿ ತಿಳಿಸಿದ್ದಿರಿ. ಅವರು ನೇರವಾಗಿ ಹೇಳುತ್ತಾರೆ, ನೀವು ಆಫರ್ ಮಾಡಬೇಕು. ನೀವು ಅದನ್ನು ಆಗಲೇ ಮಾಡಬೇಕಾಗಿತ್ತು. ನೀವು ಅದನ್ನು ಕೇಳಿ, ನಾನು ಸರಿಪಡಿಸುತ್ತೇನೆ ಎಂದು ತಾವು ಹೇಳಿದ್ದಿರಿ.

**ಸಭಾಪತಿಯವರು:–** ನನಗೆ ನೀವು ಲೆಟರ್‌ನ್ನು ಕೊಟ್ಟಿದ್ದೀರಿ. ಇದರಲ್ಲಿ ಏನು procedure ಇದೆಯೋ, ನಾವು ಆ procedure ಪ್ರಕಾರವಾಗಿ ಹೋಗುತ್ತೇವೆ. ನಾವೇನೂ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಆಯವ್ಯಯ ಚರ್ಚೆಯಿಂದ ಬೇರೆ ಕಡೆ ಸದನವನ್ನು ತೆಗೆದುಕೊಂಡು ಹೋಗಿ, ಅನೇಕ ವಿಚಾರಗಳ ಬಗ್ಗೆ ಮಾನ್ಯ ಕೆ.ಬಿ. ಶಾಣಪ್ಪನವರು ಮತ್ತು ಶ್ರೀಮತಿ ತಾರಾಅನೂರಾಧರವರು ಮೆಲುಕು ಹಾಕಿದಾಗ, ನನಗೆ ಅನ್ನಿಸಿದ್ದು ಏನೆಂದರೆ, ಇವತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಮೌಲ್ಯಗಳು ಕುಸಿಯುತ್ತಿದೆ. ಇವತ್ತು ಜಾತಿ, ಹಣ, ತೋಳ್ಬಲ ಅನೇಕ ಮೇಲುಗೈ ಸಾಧಿಸುತ್ತಿದೆ. ಆದರೂ ಇಂತಹ ಪರಿಸ್ಥಿತಿಯಲ್ಲಿ ತಾವುಗಳು ನಂಬಿದಂತಹ ಸಿದ್ಧಾಂತದ ಹಿನ್ನೆಲೆಯಲ್ಲಿ ಈ ಸದನಕ್ಕೆ ಬಂದು ಆ ನಂಬಿದಂತಹ ಸಿದ್ಧಾಂತವನ್ನು ಅತ್ಯಂತ ಪ್ರಕರವಾಗಿ ಜನತೆ ಮುಂದೆ ಇಡುವಂತಹದ್ದು.

**(ಈ ಹಂತದಲ್ಲಿ ಮಾನ್ಯ ಕೆ.ಬಿ. ಶಾಣಪ್ಪನವರು ಸಭಾಪತಿ ಪೀಠವನ್ನು ಅಲಂಕರಿಸಿದರು)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತಮ್ಮ ರಾಜಕೀಯ ವಿರೋಧಿಗಳನ್ನು, ಹೊರಗಡೆ ಎಷ್ಟೇ ಸ್ನೇಹವಿದ್ದರೂ ಕೂಡ ಸದನದಲ್ಲಿ ಮುಲಾಜಿಲ್ಲದೇ, ಅವರನ್ನು ತರಾಟೆಗೆ ತೆಗೆದುಕೊಳ್ಳುವಂತಹ ಪ್ರಯತ್ನಗಳನ್ನು ಇಬ್ಬರೂ ಸದಸ್ಯರು ಮಾಡಿದ್ದಾರೆ. ಬಹುಶಃ ಬೇರೆ ರಾಜಕಾರಣಿಗಳಿಗೂ ಅದು ಮಾರ್ಗದರ್ಶಕವಾಗಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಬಂದ ಆದಮೇಲೆ ಒಂದು ತರಹ match fixing ಗಿರಾಕಿಗಳು ಬಹಳಷ್ಟು ಜನ ಆಗಿ ಬಿಡುತ್ತಾರೆ. ಅಂತಹವರಲ್ಲಿ ಹೊರತಾದಂತಹ ಕೆಲವೇ ಕೆಲವರಲ್ಲಿ ಇವರಿಬ್ಬರು ಸಹ ಎಂದು ಹೇಳಲು ನಾನು ಭಾವಿಸಿದ್ದೇನೆ. ಹಾಗಾಗಿ ಇವರಿಬ್ಬರಿಗೂ ಸಹ ನಾನು ಈ ಸಂದರ್ಭದಲ್ಲಿ ಅತ್ಯಂತ ಹೃದಯಪೂರ್ವಕವಾಗಿ ಅಭಿನಂದಿಸುವುದಕ್ಕೆ ಬಯಸುತ್ತೇನೆ. ಇವರಿಬ್ಬರಿಗೂ ಮತ್ತಷ್ಟು ಬದುಕಿನಲ್ಲಿ ರಾಜಕಾರಣದಲ್ಲಿ ಅವಕಾಶಗಳು ಲಭ್ಯವಾಗಲಿ. ನಿಮ್ಮಿಂದ ಮತ್ತಷ್ಟು ಸಮಾಜಕ್ಕೆ ಸೇವೆ ಲಭ್ಯವಾಗಲಿ ಎಂದು ನಾನು ಆಶಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಆಯವ್ಯಯದ ಬಗ್ಗೆ ಹೇಳುವುದಾದರೆ, ಬಹುಶಃ ಅನೇಕರು ಈ ಆಯವ್ಯಯದಲ್ಲಿ ಬರೆದಿರತಕ್ಕಂಥದ್ದು ಮತ್ತೆ 16ನೇ ಫೆಬ್ರವರಿ 2018 ರಂದು ಸನ್ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವಂತಹ ಆಯವ್ಯಯದ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಬಹುಶಃ ಅದನ್ನೇ ನಾನು ಹೆಚ್ಚು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಮೊದಲನೆಯದಾಗಿ, 2005 ರ ಕರ್ನಾಟಕ ಅಧಿನಿಯಮ ಸಂಖ್ಯೆ 26, ನಾವೇ ಈ ಸದನಲ್ಲಿ ಒಂದು ಆ್ಯಕ್ಟ್ ಅನ್ನು ಮಾಡಿದ್ದೇವೆ. ಇದು 2006 ರಲ್ಲಿ ಜಾರಿಗೆ ಬಂದಿದೆ; ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ, 2005. ಇದರ ಪ್ರಕಾರ ಪ್ರತಿ ವರ್ಷ ಪ್ರಾರಂಭಿಕ ಅಧಿವೇಶನ ಜನವರಿ 2ನೇ ವಾರದಲ್ಲಿ ರಾಜ್ಯಪಾಲರ ಭಾಷಣವಾಗಬೇಕು. It is mandatory as per the provisions of the said Act. ಕನಿಷ್ಠ ರಾಜ್ಯಪಾಲರ ಭಾಷಣ ಅದಂತಹ ಸಂದರ್ಭದಲ್ಲಿ ಮಾನ್ಯ ಜಬ್ಬಾರ್‌ರವರೇ, ಸುಮಾರು ಹದಿನೈದು ದಿನಗಳ ಕಾಲ ಸದನ ನಡೆಯಬೇಕು. ನಾವು ಮತ್ತು ನೀವು ಎಂದರೆ ಎಲ್ಲರೂ ಸೇರಿ ಈ ಆ್ಯಕ್ಟ್ ಅನ್ನು ಮಾಡಿದ್ದೇವೆ.

(ಮುಂದು...)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(287) 12.07.2018 ಟಿಸಿಹೆಚ್/ಜಿಆರ್ 5.40

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು):-**

ಜನವರಿ 2ನೇ ವಾರದಲ್ಲಿ, ಗೌರವಾನ್ವಿತ ರಾಜ್ಯಪಾಲರ ಭಾಷಣ ಕನಿಷ್ಠಪಕ್ಷ 15 ದಿವಸಗಳ ಕಾಲ ನಡೆಯಬೇಕು. ಎರಡನೆಯದಾಗಿ, ಆಯವ್ಯಯ ಅಧಿವೇಶನ ಮಾರ್ಚ್ ಮೊದಲನೇ ವಾರದಲ್ಲಿ ಪ್ರಾರಂಭವಾಗಬೇಕು. ಈ ಅಧಿವೇಶನ ಕನಿಷ್ಠಪಕ್ಷ 20 ದಿವಸಗಳ ಕಾಲ ನಡೆಯಬೇಕೆಂದು ನಾವೇ ರೂಪಿಸಿಕೊಂಡಿರತಕ್ಕಂಥ ಕಾನೂನು. ಮೂರನೆಯದಾಗಿ ಮಳೆಗಾಲದ ಅಧಿವೇಶನ, ಜುಲೈ ಎರಡನೆಯ ವಾರದಲ್ಲಿ ನಡೆಸಬೇಕು. ಈ ಅಧಿವೇಶನವು ಕನಿಷ್ಠಪಕ್ಷ 15 ದಿವಸಗಳ ಕಾಲ ನಡೆಯಬೇಕು. ನಾಲ್ಕನೇ ಅಧಿವೇಶನ ಚಳಿಗಾಲದ ಅಧಿವೇಶನ. ಇದು ನವೆಂಬರ್ ಎರಡನೇ ವಾರದಲ್ಲಿ ಕನಿಷ್ಠಪಕ್ಷ 10 ದಿನಗಳ ಕಾಲ ನಡೆಯಬೇಕು. ವಿಧಾನ ಮಂಡಲದ ಅಧಿವೇಶನವು ಕನಿಷ್ಠಪಕ್ಷ 60 ದಿವಸಗಳ ಕಾಲ ನಡೆಯಬೇಕೆಂದು ನಾವೇ ಕಾನೂನು ಜಾರಿಗೆ ತಂದು, mandatory ಎಂದು ಮಾಡಿದ್ದೇವೆ. ನಾನು ಈ ಸಂದರ್ಭದಲ್ಲಿ ಆ ಪುಣ್ಯಾತ್ಮ ಮಾನ್ಯ ಡಿ.ದೇವರಾಜ್ ಅರಸ್‌ರವರನ್ನು ನೆನೆಯುವುದಕ್ಕೆ ಬಯಸುತ್ತೇನೆ. ಅವರ ಅಧಿಕಾರದ ಅವಧಿಯಲ್ಲಿ ಯಾವುದೇ ಆಕ್ಟ್ ಇರಲಿಲ್ಲ. ಆಗ ವಿಧಾನಸಭೆಯಲ್ಲಿ ಸನ್ಮಾನ್ಯ ಹೆಚ್.ಡಿ.ದೇವೇಗೌಡರವರು ಮಾನ್ಯ ವಿರೋಧಪಕ್ಷದ ನಾಯಕರಾಗಿದ್ದರು. ಕಾಲಘಟ್ಟದಲ್ಲಿ ವಿಧಾನಪರಿಷತ್ತಿನಲ್ಲಿ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು, ಮತ್ತು ಶ್ರೀ ಎಸ್.ಆರ್.ಬೊಮ್ಮಾಯಿಯವರು ಇಂತಹ ಘಟಾನುಘಟಿಗಳೆಲ್ಲಾ ಮಾನ್ಯ ವಿರೋಧಪಕ್ಷದ ನಾಯಕರಾಗಿದ್ದರು. ಆ ಸಂದರ್ಭದಲ್ಲಿ ಸದನವು ಒಂದು ವರ್ಷದಲ್ಲಿ 103 ದಿವಸಗಳ ಕಾಲ ನಡೆದಿದೆ. ಅತಿ ಕಡಿಮೆ ಎಂದರೆ, 70 ದಿವಸಗಳ ಕಾಲ ಸದನವನ್ನು ನಡೆಸಿರಕ್ಕಂಥದ್ದನ್ನು ನಾವು ನೋಡಬಹುದು.

ನಾನು ಇಷ್ಟನ್ನೇ ಹೇಳುವುದಕ್ಕೆ ಬಯಸುತ್ತೇನೆ, ಹೆಚ್ಚಿಗೆ ಹೇಳುವುದಕ್ಕೆ ಬಯಸುವುದಿಲ್ಲ. ರಾಜಕಾರಣದಲ್ಲಿ ಯಾರಿಗೂ ಯಾವುದೇ ಸ್ಥಾನಮಾನ ಶಾಶ್ವತವಲ್ಲ. ಅದು ಸನ್ಮಾನ್ಯ ಮುಖ್ಯಮಂತ್ರಿ ಇರಲಿ, ಮಾನ್ಯ ಮಂತ್ರಿಯಾಗಿರಲಿ, ಮಾನ್ಯ ಶಾಸಕನಾಗಿರಲಿ, ಯಾರಿಗೂ ಆ ಸ್ಥಾನಮಾನ ಶಾಶ್ವತವಲ್ಲ. ಯಾವುದು ಶಾಶ್ವತ ಎಂದರೆ, ಅವರು ಮಾಡಿ ಹೋಗಿರತಕ್ಕಂಥ ಸಾಧನೆಗಳು. ಜನಪರವಾಗಿರತಕ್ಕಂಥ, ಸಮಾಜದ ಪರವಾಗಿರತಕ್ಕಂಥ ಸಂವಿಧಾನದ ರೀತಿಯಲ್ಲಿ ನಡೆದುಕೊಂಡಿರತಕ್ಕಂಥದ್ದು ಶಾಶ್ವತ ಎನ್ನುವುದನ್ನು ನಾವೆಲ್ಲರೂ ಸಹ ಗಮನಿಸಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಭಾರತ ಸಂವಿಧಾನದ ಅನುಚ್ಛೇದ 202ರ ಪ್ರಕಾರ, ಪ್ರತಿ ವರ್ಷ ಆಯಾಯ ಸರ್ಕಾರಗಳು ಅಂದರೆ, ಕೇಂದ್ರ ಸರ್ಕಾರ ಅಧಿಕಾರದಲ್ಲಿರಲಿ, ಅಥವಾ ರಾಜ್ಯ ಸರ್ಕಾರ ಅಧಿಕಾರದಲ್ಲಿರಲಿ, Annual Financial Statement ನ್ನು ಮಾಡಬೇಕಾಗುತ್ತದೆ. ಅದು ಏನು ಹೇಳುತ್ತದೆ ಎಂದರೆ:

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> “(1) The Governor shall in respect of every financial year ……”

‘Governor’ ಎಂದು ಹೇಳುತ್ತದೆ. ಯಾವುದೇ ರಾಜ್ಯ ಸರ್ಕಾರ ಗೌರವಾನ್ವಿತ ರಾಜ್ಯಪಾಲರ ಹೆಸರಿನಲ್ಲಿ ನಡೆಯುತ್ತದೆ. ಕೇಂದ್ರ ಸರ್ಕಾರದಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳ ಹೆಸರಿನಲ್ಲಿ ಸರ್ಕಾರ ನಡೆಯುತ್ತದೆ. Article 202 of the Constitution of India reads thus:

> “(1) The Governor shall in respect of every financial year cause to be laid before the House or Houses of the Legislature of the State a statement of the estimated receipts and expenditure of the State for that year, in this Part referred as the “annual financial statement”.

In *Practice and Procedure of Parliament*, written by Sri M.N.Kaul and S.L.Shakdher, what is the financial statement ಎನ್ನುವುದನ್ನು ಹೇಳುತ್ತಾರೆ. ಈ ಪುಸ್ತಕದಲ್ಲಿ financial statement ಎಂದರೆ, it is nothing but a Budget. It reads thus:

> “In respect of every financial year, the President causes to be laid before both the Houses of Parliament an “annual financial statement” or the estimated receipts and expenditure of the Government of India. The annual financial statement, otherwise known as the ‘Budget’ .. ..”

ಈ ಬಜೆಟ್ ಬಗ್ಗೆ *Practice and Procedure of Parliament*, written by Sri M.N.Kaul and S.L.Shakdher, ಪುಸ್ತಕದಲ್ಲಿ ಹೇಳಿರುವಂತೆ, ಬಜೆಟ್‌ನ್ನು present ಮಾಡಿದ ಮೇಲೆ ಕನಿಷ್ಠಪಕ್ಷ 8 ದಿವಸದಿಂದ 10 ದಿವಸಗಳ ಕಾಲಾವಕಾಶ ಕೊಟ್ಟು, ಅದರ ಅಧ್ಯಯನದ ನಂತರ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇವತ್ತು ಬಹಳಷ್ಟು ಜನರಿಗೆ ಒಂದು ದೊಡ್ಡ ಸಂಶಯ ಕಾಡುತ್ತಿದೆ. ನಮ್ಮ ಭಾರತ ಸಂವಿಧಾನದಲ್ಲಿ, ಎರಡನೇ ಆಯವ್ಯಯವನ್ನು ಮಂಡನೆ ಮಾಡುವುದಕ್ಕೆ ಅವಕಾಶ ಇದೆಯೇ ಎಂಬುದನ್ನು ನಾನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ಸಂವಿಧಾನದ ಅನುಚ್ಛೇದ 202ರ ಪ್ರಕಾರ, ಪ್ರತಿ ವರ್ಷ ಒಂದು Financial Statement ನ್ನು ಮಾಡುವುದಕ್ಕೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಬಳಸಬಾರದು”

ಸ್ಪಷ್ಟಪಡಿಸಲಾಗಿದೆ. ಆದರೆ, rightly or wrongly, after the 70 years of Indian independence, ನಾವು conventions ಅಥವಾ ರೂಪಿಸಿಕೊಂಡಿರತಕ್ಕಂಥ ಯಾವೆಲ್ಲಾ ಸಂಪ್ರದಾಯಗಳಿವೆ, ಆ ಸಂಪ್ರದಾಯಗಳ ಹಿನ್ನೆಲೆಯಲ್ಲಿ, general election ಆಗಿ ಹೊಸ ಸರ್ಕಾರಗಳು ಅಧಿಕಾರಕ್ಕೆ ಬರುತ್ತವೆ. ಅವರು ಏಕೆ ಆ ಚುನಾವಣೆಗಳಲ್ಲಿ ಜೆ.ಡಿ(ಎಸ್)ನವರು ಒಂದು manifesto, ಕಾಂಗ್ರೆಸ್‌ನವರು ಒಂದು manifesto, ಬಿ.ಜೆ.ಪಿಯವರು ಒಂದು manifesto ಕೊಟ್ಟಿರುತ್ತೇವೆ. ಆದರೆ, ದುರಂತ ಎಂದರೆ, ಕಳೆದ 70 ವರ್ಷಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ manifesto ಬಗ್ಗೆ ಹೇಳುತ್ತವೆ. ಆದರೆ, ಅಧಿಕಾರಕ್ಕೆ ಬಂದ ನಂತರ, 5 ವರ್ಷಗಳ ತಮ್ಮ ಅಧಿಕಾರವಧಿಯಲ್ಲಿ ಯಾವ ಸರ್ಕಾರಗಳು ಕೂಡ manifesto ನ್ನು ಯಥಾವತ್ತಾಗಿ ಜಾರಿಗೆ ತಂದಿಲ್ಲ. ನನಗೆ ಅನೇಕ ಬಾರಿ ಅನಿಸುವುದೇನೆಂದರೆ, ಯಾವುದೇ ಪೊಲಿಟಿಕಲ್ ಪಾರ್ಟಿ manifesto ವನ್ನು ಜನತೆಯ ಮುಂದೆ ಇಡುತ್ತಾರೆ. ಅವರು ಅಧಿಕಾರಕ್ಕೆ ಬಂದಾಗ, it is their bounden duty to implement it. ಆಗ 5 ವರ್ಷಗಳಲ್ಲಿ ಕಾನೂನಿಗೆ ಬದಲಾವಣೆ ತಂದಾಗ, ಮನಸೋಯಿಚ್ಛೆ ಹೇಳಿಕೆ ಕೊಡತಕ್ಕಂತಹ ಅಥವಾ manifesto ಕೊಡುವುದನ್ನು ನಿಯಂತ್ರಿಸುವುದಕ್ಕೆ ಸಾಧ್ಯತೆ ಇದೆ. ನನಗೆ ಈಗಲೂ ಅನಿಸುವುದೇನೆಂದರೆ, ಪಾರ್ಲಿಮೆಂಟ್‌ನಲ್ಲಿ ಇರತಕ್ಕಂತಹ ಮಾನ್ಯ ಸದಸ್ಯರು ಈ manifesto ವನ್ನು ಮನಸೋಯಿಚ್ಛೆ ಕೊಡುವುದನ್ನು ನಿಯಂತ್ರಿಸುವುದಕ್ಕೆ, ಸಂವಿಧಾನಕ್ಕೆ ತಿದ್ದುಪಡಿ ತಂದು, 5 ವರ್ಷಗಳಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಲಿಲ್ಲವೆಂದರೆ, ಅಂತಹ ರಾಜಕೀಯ ಪಕ್ಷಗಳಿಗೆ Option-1, Option-2 ಅಥವಾ Option-3 ಎನ್ನುವುದನ್ನು ಕೊಟ್ಟು, re-recognize ಮಾಡುವಂತಹ ಕಾನೂನನ್ನು ಜಾರಿಗೆ ತಂದರೆ, ರಾಜಕೀಯ ಪಕ್ಷಗಳು ಮನಸೋಯಿಚ್ಛೆ ಹೇಳಿಕೆ ಕೊಡತಕ್ಕಂಥದ್ದು ಆಗದೇ ಇರತಕ್ಕಂಥ ಸಾಧ್ಯತೆ ಇದೆ ಎಂದು ನಾನು ಭಾವಿಸುತ್ತೇನೆ.

ಈ manifesto ಆಧಾರದ ಮೇಲೆ ಅಧಿಕಾರಕ್ಕೆ ಬಂದ ನಂತರ, ಅದು ಒಂದೇ ವರ್ಷಕ್ಕೆ ಸೀಮಿತ ಅಲ್ಲ. ಕಳೆದ 70 ವರ್ಷಗಳಲ್ಲಿ ಅವರು ಅಧಿಕಾರದಲ್ಲಿರತಕ್ಕಂಥ 5 ವರ್ಷಗಳ ಕಾಲ ಆ manifesto ವನ್ನು phased manner ನ್ನು implement ಮಾಡುವುದಕ್ಕೆ ಸರ್ಕಾರಗಳು ಪ್ರಯತ್ನ ಮಾಡುತ್ತಾ ಬಂದಿವೆ. ಚುನಾವಣೆ ಆದ ನಂತರ, ಜನತೆ ಅವರಿಗೆ ತಿಳಿದಿರುವ ಕಾರಣಗಳ ಹಿನ್ನೆಲೆಯಲ್ಲಿ, ಈ ರಾಜ್ಯದಲ್ಲಿ ಬಿಜೆಪಿಯವರು ಹೇಳಿದ್ದರು; ನಾವು ಕನಿಷ್ಠಪಕ್ಷ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Mission-150 ರ ಗುರಿಯನ್ನಯ ಸೀಟುಗಳನ್ನು ಗೆಲ್ಲುತ್ತೇವೆಂದು ಹೇಳಿದ್ದರು, ಆದರೆ ಪಾಪ, ಅವರಿಗೆ ಅಷ್ಟು ಸೀಟುಗಳು ಬರಲಿಲ್ಲ. ಕಾಂಗ್ರೇಸ್‌ನವರು ಕನಿಷ್ಟಪಕ್ಷ 130 ರಿಂದ 135 ಸೀಟುಗಳು ಬರಬಹುದೆಂದು ಹೇಳಿದ್ದೆವು. ಆದರೆ ನಮಗೂ ಅಷ್ಟು ಸೀಟುಗಳು ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ನಮ್ಮ ಪಕ್ಷವು ಕನಿಷ್ಟಪಕ್ಷ 113 ಸೀಟುಗಳನ್ನು ಗೆಲ್ಲುತ್ತದೆ ಎಂದು ಹೇಳಿದ್ದರು. ಅವರ ಪಕ್ಷಕ್ಕೂ ಕೂಡ ಅಷ್ಟು ಸೀಟುಗಳು ಬರಲಿಲ್ಲ. ಬಹುಶಃ ಈ ರಾಜ್ಯದ ಜನ ಎಲ್ಲೋ ಒಂದು ಕಡೆ, ಈ ಮೂರು ಪಕ್ಷದವರು independent ಆಗಿ ಸರ್ಕಾರ ನಡೆಸುವುದು ಬೇಡ, ಯಾವುದಾದರೂ ಒಂದು ಪಕ್ಷಕ್ಕೆ ಕಾಂಬಿನೇಷನ್‌ನಲ್ಲಿ ಹೋಗಿ ಎಂದು ತೀರ್ಮಾನಿಸಿದ್ದಾರೆ, ಇದು ಜನಾದೇಶ. ಒಂದು ಕಡೆ ಕಾಂಗ್ರೆಸ್‌ನ manifesto, ಇನ್ನೊಂದು ಕಡೆ ಜನತಾದಳದ manifesto ಇದೆ. ಬಿ.ಜೆ.ಪಿ ಪಕ್ಷದವರು ಸರ್ಕಾರ ರಚಿಸಲು ಪ್ರಯತ್ನ ಮಾಡಿದರು. ಅವರು 2008ರಲ್ಲಿ ಸರ್ಕಾರ ರಚಿಸಲು ಪ್ರಯತ್ನ ಮಾಡಿದಂತೆ, ಈಗಲೂ ಕೂಡ 'ಆಪರೇಷನ್ ಕಮಲ' ಮತ್ತು ಬೇರೆ ಪಕ್ಷದೊಂದಿಗೆ ಸೇರಿ ಅಧಿಕಾರಕ್ಕೆ ಬರಬಹುದು ಎಂದು ಪ್ರಯತ್ನ ಮಾಡಿದರು.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(288)12.7.2018/5.50/ಎಂ.ಎಂ-ಜಿ.ಆರ್**

**ಶ್ರೀ ವಿ.ಎಸ್. ಉಗ್ರಪ್ಪ (ಮುಂದು):-**

ಈ ಸಲ 'ಆಪರೇಷನ್ ಕಮಲ' ಸಾಧ್ಯ ಇಲ್ಲ ಎಂದು ಹೇಳಿದ ಮೇಲೆ ವೈಚಾರಿಕ ಹಿನ್ನೆಲೆಯಲ್ಲಿ ಸ್ವಲ್ಪಮಟ್ಟಿಗೆ ಅಕ್ಕರೆ ಇರುವಂತಹ ವಿಶೇಷವಾಗಿ ಸಂವಿಧಾನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜಾತ್ಯಾತೀತ ತತ್ವದಲ್ಲಿ;

**ಡಾ: ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಕೆಲವೊಂದು ಮಹತ್ವದ ಅಂಶಗಳನ್ನು ಹೇಳಿದರು. ಜಾರಿ ಮಾಡುವುದಕ್ಕೆ ಇಲ್ಲದೇ ಇರುವಂತಹ manifesto ಗಳಲ್ಲಿ ಬೇಕಾಬಿಟ್ಟಿ ಕೊಡುವುದನ್ನು ನಿಯಂತ್ರಣ ಮಾಡಬೇಕಾದ ಅವಶ್ಯಕತೆ ಇದೆ ಎನ್ನುವುದನ್ನು ದೇಶ ಮತ್ತು ರಾಜ್ಯದ ದೃಷ್ಟಿಯಿಂದ ನಾನು ಸ್ವಾಗತಿಸುತ್ತೇನೆ. 2008ರಲ್ಲಿ 'ಆಪರೇಷನ್ ಕಮಲ' ದ ವಿಚಾರವನ್ನು ಪ್ರಸ್ತಾಪ ಮಾಡಿದರು. ಇದುವರೆಗೂ ನಡೆದುಬಂದಿರುವಂತಹ ನಡವಳಿಗಳಲ್ಲಿ ಪ್ರಜಾಪ್ರಭುತ್ವದಲ್ಲಿ largest democratic party ಗೆ first option ಇರುತ್ತದೆ. 224ರಲ್ಲಿ ಸದನದಲ್ಲಿ 110 ದೊಡ್ಡ ಸಂಖ್ಯೆಯಾಗಿತ್ತು. ಸರ್ಕಾರ ಮಾಡುವುದಕ್ಕೆ ಬೇಕಾದಂತಹ ಸಂಖ್ಯೆ ಕಡಿಮೆ

ಇತ್ತು. ಈಗಲೂ ಕೂಡ ಸಪ್ತಪದಿಯಲ್ಲಿ ನಮ್ಮ ಪಕ್ಷ ಹಿಂದೆ ಬಿದ್ದಿತು. 'ಆಪರೇಷನ್ ಕಮಲ' ಎಂದು ಹೆಸರು ಕೊಡುವುದಕ್ಕೆ ಮುಂಚೆ, ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಇದ್ದಾಗಲೂ ಕೂಡ ಸನ್ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ 'ಆಪರೇಷನ್ ಹಸ್ತ' ನಡೆದಿತ್ತು. ಅಂದು ಜನತಾದಳದಿಂದ ಅವಶ್ಯಕತೆ ಇಲ್ಲದಿದ್ದರೂ ಕೂಡ ಶಾಸಕರು ಪ್ರಸ್ತುತ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿರುವ ಶ್ರೀ ಕೃಷ್ಣ ಭೈರೇಗೌಡರನ್ನೂ ಒಳಗೊಂಡಂತಂತಹ ಅನೇಕ ಯುವಕರು ಆ ಕಡೆಗೆ ಹೋದರು. ನಾವು ಇವತ್ತು ಪಕ್ಷಾತೀತವಾಗಿ ಚಿಂತನೆ ಮಾಡಬೇಕಾಗಿರುವಂಥದ್ದು, ಒಂದು ಪಕ್ಷದಲ್ಲಿ ಇದ್ದ meritorious people ಅವಶ್ಯಕತೆ ಇಲ್ಲದಿದ್ದರೂ ಯಾವ ಸಂದರ್ಭದಲ್ಲಿ ಇನ್ನೊಂದು ಪಕ್ಷಕ್ಕೆ ಹೋಗುತ್ತಾರೆ? ಆ ಅಸುರಕ್ಷಿತ ಭಾವನೆ ಏಕೆ ಬರುತ್ತದೆ? 'ಆಪರೇಷನ್ ಕಮಲ' ನಾವು ಮಾಡಲಿಲ್ಲ. ಇಂದು ಕೂಡ ಹೇಳುತ್ತೇವೆ, 'ಆಪರೇಷನ್ ಹಸ್ತ' ಅಥವಾ 'ಆಪರೇಷನ್ ತೆನೆ' ಎನ್ನುತ್ತೀರೋ ಮುಖ್ಯಮಂತ್ರಿ ಸ್ಥಾನವನ್ನೇ ಸಂಖ್ಯೆಗಳ ಅವಶ್ಯಕತೆಗೆ ಹತ್ತಿರ ಇಲ್ಲದಿದ್ದರೂ ನೀವು ಕೊಟ್ಟಿರಲ್ಲಾ ನಿಮ್ಮನ್ನು ಆಪರೇಷನ್ ಏನೆಂದು ಕರೆಯಬೇಕು? 80 ಸ್ಥಾನಗಳನ್ನು ಗಳಿಸಿದ ಪಕ್ಷ 37 ಸ್ಥಾನಗಳನ್ನು ಗಳಿಸಿದ ಪಕ್ಷಕ್ಕೆ ಮುಖ್ಯಮಂತ್ರಿಯ ಸ್ಥಾನವನ್ನು ಬಿಟ್ಟುಕೊಟ್ಟದ್ದು ಆಮಿಷ ಅಲ್ಲವೇ? ಮಾನ್ಯ ಉಗ್ರಪ್ಪನವರು ಇದರಲ್ಲಿ ಚರ್ಚೆಯಾಗಲಿ ಎಂದು ನಿಷ್ಠೂರವಾಗಿ ಮಾತನಾಡಿದರು. ನೀವು ಮಾಡಬಹುದಾಗಿತ್ತು, ಅದಕ್ಕೆ ನನ್ನ ಅಭ್ಯಂತರವೇನೂ ಇರಲಿಲ್ಲ. 80 ಸ್ಥಾನಗಳನ್ನು ಗಳಿಸಿದ್ದ ಕಾಂಗ್ರೆಸ್ ಪಕ್ಷ ಮಾಡಿದ್ದಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಜೆಡಿಎಸ್ ನಿಮಗೆ ಬೆಂಬಲ ಕೊಟ್ಟು ಮಾಡಿದ್ದರೆ. Democratically, second largest ಆಗಿ ಬಂದಂತಹ ನೀವು ಜನತೆ ಕೊಟ್ಟ ಆಶಯಕ್ಕೆ ವಿರುದ್ಧವಾಗಿ, ಜನತೆ ಬಿ.ಜೆ.ಪಿಗೆ ಹೆಚ್ಚು ಆಶಯ ಕೊಟ್ಟಿದ್ದರು. ಜನತೆ ಅವರ 2ನೇ ಆಯ್ಕೆಯನ್ನು ಕಾಂಗ್ರೆಸ್‌ಗೆ, 3ನೇ ಆಯ್ಕೆಯನ್ನು ಜನತಾದಳಕ್ಕೆ ಕೊಟ್ಟರು. ಇವತ್ತು ನೀವು ಅಧಿಕಾರವನ್ನು ಉಳಿಸಿಕೊಳ್ಳಬೇಕೆಂದರೆ, ಆ ಮೌಲ್ಯಗಳನ್ನು compromise ಮಾಡಿಕೊಂಡು ಆ ಪಕ್ಷಕ್ಕೆ ಮುಖ್ಯಮಂತ್ರಿ ಸ್ಥಾನದ ಆಮಿಷವನ್ನು ತೋರಿ ಬಿಟ್ಟುಕೊಟ್ಟ ಕಾರಣಕ್ಕಾಗಿ ಮಾತ್ರ ಅಧಿಕಾರದಲ್ಲಿ ಇದ್ದೀರಿ. ಆದ್ದರಿಂದ ಕಾಂಗ್ರೆಸ್ ಪಕ್ಷ ಆತ್ಮಾವಲೋಕನ ಮಾಡಿಕೊಳ್ಳಬೇಕು ಎನ್ನುವ ವಿನಂತಿಯನ್ನು ನಾನು ಈ ಸದನದಲ್ಲಿ ಮಂಡಿಸುತ್ತೇನೆ.

(ಗೊಂದಲ)

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಮೇಘಾಲಯದಲ್ಲಿ, ಮಣಿಪುರದಲ್ಲಿ, ನಾಗಾಲ್ಯಾಂಡ್‌ನಲ್ಲಿ . . .

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತೇಜಸ್ವಿನಿ ಗೌಡ:–** ಅಂದು ನಾವು ಮಾಡಿದ್ದು ತಪ್ಪಾದರೆ ಇಂದು ನೀವು ಮಾಡಿರುವುದು ಹೇಗೆ ಸರಿಯಾಗುತ್ತದೆ? ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಚಿವರೇ, ಒಂದು ನಿಮಿಷ, ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಸನ್ಮಾನ್ಯ ದೇವೇಗೌಡರವರು ವಿರೋಧಪಕ್ಷದಲ್ಲಿದ್ದರು. ನಾವು ಆಗ ಚಿಕ್ಕವರಾಗಿದ್ದು, ಇನ್ನೂ ಓದುತ್ತಾ ಇದ್ದೆವು. ನಾವು 30 ವರ್ಷಗಳ ಕಾಲದಿಂದ ನೋಡಿಕೊಂಡು ಬಂದಿದ್ದೇವೆ. ಇವತ್ತು ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಕಾಲಾವಧಿಯಲ್ಲಿ ನಡೆದಂತಹ ನಡವಳಿಕೆಗಳನ್ನು ಒಂದು ರಾಷ್ಟ್ರೀಯ ಪಕ್ಷವಾದ ಬಿ.ಜೆ.ಪಿ ಏನೋ ಅಪಚಾರ ಮಾಡಿಬಿಟ್ಟಿದೆ, 110 ಸ್ಥಾನಗಳನ್ನು ಗಳಿಸಬೇಕಾದರೆ ಆ ಪಕ್ಷ ಎಷ್ಟು ಕಷ್ಟ ಪಟ್ಟಿದೆ. ಇಂದು ಕೂಡ 104 ಸ್ಥಾನಗಳನ್ನು ಗಳಿಸಿಕೊಳ್ಳಬೇಕಾದರೆ ರಾಜಕೀಯ ವ್ಯವಸ್ಥೆಯಲ್ಲಿ ಜನರ ಮಧ್ಯೆ ಹೋಗಿದ್ದು, ಅದಕ್ಕೆ verdict ಬಂದಿದೆ. ಅವರನ್ನು ತೇಜೋವಧೆ ಮಾಡುವಂತಹದಿದ್ದರೆ ಹೊರಗಡೆ ಮಾತನಾಡಲಿ ನನ್ನ ಅಭ್ಯಂತರವೇನೂ ಇಲ್ಲ. ಈ ಸದನದಲ್ಲಿ ಕೂಡ ಮಾನ್ಯ ಯಡಿಯೂರಪ್ಪನವರ ಬಗ್ಗೆ ಅವರು ಜೈಲಿಗೆ ಹೋದವರು ಎಂಬಂತಹ ಸಣ್ಣ ಸಣ್ಣ . .

(ಗೊಂದಲ)

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಸತ್ಯ ಹೇಳಿದರೆ ಕಹಿ ಆಗುತ್ತದೆ.

(ಗೊಂದಲ)

**ವೈಸ್‌ಛೇರ್ಮನ್:–** ದಯಮಾಡಿ ಕುಳಿತುಕೊಳ್ಳಿ. ಏನಿದು? Don't consider me as a weak Chairman. I know how to utilise my powers. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಎಸ್.ಆರ್. ಪಾಟೀಲರು ಮಾತನಾಡಬಯಸುತ್ತಿದ್ದಾರೆ, ಮಾತನಾಡಿ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಯಡಿಯೂರಪ್ಪನವರನ್ನು ಅವಕಾಶವಾದಿ ಈ ಮನೆಯಲ್ಲಿ ಆಗಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ತೇಜಸ್ವಿನಿ ಗೌಡ:– ಮಾನ್ಯ ಸಭಾಪತಿಯವರೆ, ಯಡಿಯೂರಪ್ಪನವರು ಅವಕಾಶವಾದ ಎನ್ನುವ

**XXX** ಈ ಮನೆಯಲ್ಲಿ ಆಗಬಾರದು

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ತೇಜಸ್ವಿನಿಯವರೇ, ನೀವು ಕಾಂಗ್ರೆಸ್ ಪಕ್ಷದಲ್ಲಿದ್ದಾಗ ಮಾನ್ಯ ಯಡಿಯೂರಪ್ಪನವರನ್ನು ಅವಕಾಶವಾದಿಗಳು ಎಂದು ಹೇಳಿದ್ದಿರಿ.

(ಗೊಂದಲ)

VICE CHAIRMAN:- I will verify it. ಕಡತವನ್ನು ತರಿಸಿಕೊಂಡು ಒಂದು ವೇಳೆ ಅದರಲ್ಲಿ unwanted word ಇದ್ದರೆ it will be removed.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್‌ನವರು ಮತ್ತು ಮಾನ್ಯ ಶರವಣರವರು ಹೇಳಿದರು. Political attack ಬೇರೆ, ಈ ಸದನದ ಒಳಗೆ ಮಾತನಾಡಬೇಕಾದರೆ . . .

(ಗೊಂದಲ)

**ವೈಸ್‌ಛೇರ್ಮನ್:–** ಈ ಮನೆಯಲ್ಲಿ ಆಗಬಾರದು. **XXX** ಅನ್ನುವ ಪದವನ್ನು ಕಡತದಿಂದ ತೆಗೆಯಬೇಕು. Remove it.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಯಡಿಯೂರಪ್ಪನವರು ಅವಕಾಶವಾದಿಗಳು ಎಂಬ ಪದವನ್ನು ಹಾಗೂ ಅವರು ಜೈಲಿಗೆ ಹೋಗಿದ್ದರು ಎಂಬ ಪದವನ್ನೂ ಬಳಕೆ ಮಾಡಿಲ್ಲ. ಆಪರೇಷನ್ ಕಮಲ ಎನ್ನುವ ಒಂದು ಶಬ್ದವನ್ನು ಮಾತ್ರ ಬಳಕೆ ಮಾಡಿದ್ದಾರೆ.

**ವೈಸ್‌ಛೇರ್ಮನ್:–** ತಪ್ಪೇನಿದೆ?

---

**XXX** ಸಭಾಪತಿಯವರ ಅಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:–** ಆದರೆ ಮಾನ್ಯ ತೇಜಸ್ವಿನಿಯವರು 78 ಸದಸ್ಯರ ಬಲ ಇರುವಂತಹ ಕಾಂಗ್ರೆಸ್‌ನವರು 37 ಸದಸ್ಯರ ಬಲ ಇರುವಂತಹ ಜೆಡಿಎಸ್‌ಗೆ ಬೆಂಬಲ ಕೊಟ್ಟು ಅವರನ್ನು ಮುಖ್ಯಮಂತ್ರಿ ಮಾಡಿದರು ಎಂದು ಹೇಳಿದರು. 2006ರಲ್ಲಿ ಇವರಿಗೆ ಬಿ.ಜೆ.ಪಿ ಮತ್ತು ಜೆ.ಡಿ.ಯು ಸೇರಿಸಿ 84 ಸದಸ್ಯರ ಬಲ ಇತ್ತು. ಆಗ ಜನತಾದಳದವರು 38 ಜನರಿದ್ದರು. ಆಗ ಇವರು ಜನತಾದಳದವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಿದರು. ಯಾಕೆ ಮಾಡಿದಿರಿ ಹೇಳಿ? ಇಲ್ಲಿ ಜಾತ್ಯಾತೀತ ಶಕ್ತಿಗಳು ಒಂದುಗೂಡಬೇಕೆನ್ನುವ ವಿಚಾರದಿಂದ ಸಂವಿಧಾನ ಶಿಲ್ಪಿ, ಭಾರತರತ್ನ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಕೊಟ್ಟಿರುವ ಸಂವಿಧಾನದ ಪ್ರಿಯಾಂಬಲ್‌ನಲ್ಲಿ ಹೇಳಿದೆ. ‘India is a secular democratic sovereign country, ಭಾರತವು ಜಾತ್ಯಾತೀತ, ಪ್ರಜಾಸತ್ತಾತ್ಮಕ, ಸಾರ್ವಭೌಮ ರಾಷ್ಟ್ರ’ ಎಂದು ಹೇಳಿದೆ. ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನದ ಪೀಠಿಕೆಯಲ್ಲಿ ಹೇಳಿದ್ದಾರೆ. ಜಾತ್ಯಾತೀತ ಶಬ್ಧಕ್ಕೆ ಬೆಲೆ ಕೊಟ್ಟು ಜಾತ್ಯಾತೀತ ತತ್ವದಲ್ಲಿ ನಂಬಿಕೆ ಇರುವಂತಹ ನಮ್ಮ ಕಾಂಗ್ರೆಸ್ ಪಕ್ಷ ಮತ್ತು ಜನತಾದಳ ಒಂದಾಗಿ ಸರ್ಕಾರ ರಚನೆ ಮಾಡಿದ್ದೇವೆ. ಈ ದೇಶದಲ್ಲಿ ಅನೇಕ ಜಾತಿ, ಮತ, ಪಂಥ, ಪಂಗಡ, ಭಾಷಿಕರು, ಧರ್ಮೀಯರು ಸಾವಿರಾರು ವರ್ಷಗಳಿಂದ ಇಲ್ಲಿ ನೆಲೆಸಿದ್ದಾರೆ. ಕಾರಣವೆಂದರೆ, ಜಾತ್ಯಾತೀತತೆ ಮತ್ತು ಭಾವನಾತ್ಮಕ ಸಂಬಂಧ ಇದೆ. ಆದ್ದರಿಂದ ಈ ದೇಶ ದೇಶವಾಗಿ ಉಳಿದಿದೆ. ವಿವಿಧತೆಯಲ್ಲಿ ಏಕತೆ ಹೊಂದಿದ ಯಾವುದಾದರೂ ರಾಷ್ಟ್ರ ಈ ಪ್ರಪಂಚದಲ್ಲಿ ಇದೆಯೆಂದರೆ ಅದು ಭಾರತ. ಇದನ್ನು ಬಹಳ ಅಭಿಮಾನದಿಂದ ಹೇಳುತ್ತೇನೆ. ಜಾತ್ಯಾತೀತ ಶಬ್ಧಕ್ಕೆ ಬೆಲೆ ಬರಬೇಕು, ಜಾತ್ಯಾತೀತ ಶಕ್ತಿಗಳು ಒಂದಾಗಬೇಕು ಎನ್ನುವ ವಿಚಾರದಿಂದ ಇಂದು ನಾವು 78 ಜನರ ಸದಸ್ಯ ಬಲ ಇದ್ದರೂ 37 ಜನರಿಗೆ ಬೆಂಬಲ ಕೊಟ್ಟಿದ್ದೇವೆ. 84 ಸ್ಥಾನವಿದ್ದ ನೀವು 38 ಸ್ಥಾನವಿದ್ದ ಜನತಾದಳಕ್ಕೆ ಬೆಂಬಲ ಕೊಟ್ಟು ಆಗಲೂ ಇವರು ಶ್ರೀ ಕುಮಾರಸ್ವಾಮಿಯವರನ್ನೇ ಮುಖ್ಯಮಂತ್ರಿ ಮಾಡಿದರು. ಅದನ್ನು ತಮ್ಮ ಮುಖಾಂತರ ಮಾನ್ಯ ಸಹೋದರಿಗೆ ನೆನಪು ಮಾಡಿಕೊಟ್ಟಿದ್ದೇನೆ.

**ವೈಸ್‌ಛೇರ್ಮನ್:–** ಅದೆಲ್ಲಾ ಮುಗಿದ ಕಥೆ, ಅದನ್ನೇಕೆ ಈಗ ಕೆದಕುತ್ತಿದ್ದೀರಿ? ದಯಮಾಡಿ ಮುಂದಕ್ಕೆ ಹೋಗಿ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸೆಕ್ಯುಲರ್ . . .

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

VICE CHAIRMAN:- They are the closed chapters now. ಪುನಃ ಆ ವಿಚಾರವನ್ನೇ ಎತ್ತಿ ಏಕೆ ಮತ್ತೆ ನಿಮ್ಮ ಮನಸ್ಸುಗಳನ್ನು ಕೆಡಿಸಿಕೊಳ್ಳುತ್ತೀರಿ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, . .

**ವೈಸ್‌ಛೇರ್ಮನ್:–** ಮಾನ್ಯ ಉಗ್ರಪ್ಪನವರೇ, ದಯಮಾಡಿ ಯಾವುದನ್ನೂ ಕೆದಕುವುದಕ್ಕೆ ಹೋಗಬೇಡಿ, ಮುಂದಕ್ಕೆ ಹೋಗಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, 1970ರ ಪ್ರಾರಂಭದಲ್ಲಿ ಅಲ್ಲೂ ಇದೇ ರೀತಿಯ ಅತಂತ್ರದ mandate ಇಲ್ಲದಿರುವ ಸಂದರ್ಭ ಬಂದಾಗ ಒಂದು ಕಡೆ ಶ್ರೀ ಜ್ಯೋತಿ ಬಸು ಅವರು ಇನ್ನೊಂದು ಕಡೆ ಕಾಂಗ್ರೆಸ್ಸಿನ ಶ್ರೀ ಸಿದ್ದಾರ್ಥ ಶಂಕರ್ ರಾಯ್, ಮಿ. ಘೋಷ್ ಎಂಬುವವರ ಬಳಿ 11 ಜನ ಶಾಸಕರು ಇದ್ದರು. ಲೆಕ್ಕಾಚಾರ ಹಾಕಿ, ಇಬ್ಬರೂ ಅವರನ್ನು ಅಪ್ರೋಚ್ ಮಾಡಿದರು. ಇವರ ಕಡೆ ಹೋದರೆ ಅವರು ಮುಖ್ಯಮಂತ್ರಿಯಾಗುತ್ತಾರೆ, ಅವರ ಕಡೆ ಹೋದರೆ; ಕೊನೆಗೆ ನಿಮಗೇಕೆ ನನಗೇ ಮುಖ್ಯಮಂತ್ರಿ ಸ್ಥಾನ ಕೊಡಿ ಎಂದು 11 ಜನ ಪ್ರೊಡಲು he became the Chief Minister. ಅಲ್ಲಿ ಕಮ್ಯುನಿಸ್ಟ್ ಪಾರ್ಟಿಯವರು ಉಪಮುಖ್ಯಮಂತ್ರಿಯಾದರು.

(ಮುಂದು)

(289) 12–07–2018/6–00/ಕೆಹೆಚ್/ಎಂಡಿ

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು):–**

ಈ ಹಿಂದೆ 2006ರಲ್ಲಿ ಆಗಿರುವ ಬಗ್ಗೆ ನಾನು ಹೇಳುವುದಕ್ಕೆ ಬಯಸುತ್ತೇನೆ. ರಾಜಕಾರಣದಲ್ಲಿ *Permutation and Combination* ನಲ್ಲಿ ಇದೇ ರೀತಿಯಾದಂತಹ ಕಾನೂನುಗಳಿಲ್ಲದೇ ಇರುವಂತಹದ್ದು ನಿಜ. Ideologically ಒಂದಿಷ್ಟು ರಾಜಿಯಾಗುವಂತಹ common philosophy ಇರುವಂತಹ ಹಿನ್ನೆಲೆಯಲ್ಲಿ ಹಿಂದೆ ವೆಸ್ಟ್ ಬೆಂಗಾಲ್‌ನಲ್ಲಿ ದಿವಂಗತ ಪ್ರಘುಲ್ಲ ಚಂದ್ರ ಘೋಶ್‌ರವರು ಮುಖ್ಯಮಂತ್ರಿ ಮತ್ತು ದಿವಂಗತ ಜ್ಯೋತಿ ಬಸುರವರು ಉಪ ಮುಖ್ಯಮಂತ್ರಿಗಳಾಗಿದ್ದರು. ಹಾಗೆಯೇ ಇವತ್ತಿನ ದಿವಸ fractured mandate ಇರುವಂತಹ ಸಂದರ್ಭದಲ್ಲಿ, ಅದೇ ರೀತಿಯಲ್ಲಿ ಸನ್ಮಾನ್ಯ ದೇವೇಗೌಡರವರು ಅಷ್ಟೇ ಅಲ್ಲ, ಶ್ರೀ ಅಟಲ್ ಬಿಹಾರಿ ವಾಜಪೇಯಿ, ಶ್ರೀ ವಿ.ಪಿ.ಸಿಂಗ್, ಶ್ರೀ ಚಂದ್ರಶೇಖರ್ ಮತ್ತು ಶ್ರೀ ಐ.ಕೆ.ಗುಜ್ರಾಲ್‌ರವರುಗಳು ಹಾಗೆಯೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೇಶದ ಪ್ರಧಾನ ಮಂತ್ರಿಗಳಾದರು. ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಯಾದಾಗ ಅವರಿಗೆ 48 ಸದಸ್ಯರ ಬೆಂಬಲವಿತ್ತು.

**ವೈಸ್‌ಛೇರ್ಮನ್:-** ಮಾನ್ಯ ಉಗ್ರಪ್ಪನವರೇ, ಕಳೆದ ಅರ್ಧ ಗಂಟೆಯಿಂದ ಮಾತನಾಡುತ್ತಿದ್ದೀರಿ. ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ? ಎಲ್ಲರಿಗೂ ಕಾಲಾವಕಾಶ ನೀಡಿದಂತೆ ತಮಗೂ ಸಹ ಕಾಲಾವಕಾಶವನ್ನು ನೀಡಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಬಹುಶಃ ನಮ್ಮ ಪಕ್ಷದ ಸದಸ್ಯರು ಉಳಿದಂತಹ ಎಲ್ಲಾ ಸಮಯವನ್ನು ನನಗೆ ಮಾತನಾಡುವುದಕ್ಕೆ ಕೊಟ್ಟಿದ್ದಾರೆ.

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ ಹೌದೇ. ಯಾರು ಮಾತನಾಡುವವರಿಲ್ಲವೇ? ತಾವು ಮಾತನಾಡಿ, ತಾವೇಕೆ ಕೈ ಎತ್ತಿದ್ದೀರಿ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ fractured mandate ಬಂದಾದ ಮೇಲೆ ಒಂದು ಕಡೆ ಸಿದ್ಧಾಂತದ ಹೋಲಿಕೆಗಳಿರುವಂತಹ ಹಿನ್ನೆಲೆಯಲ್ಲಿ ಶ್ರೀ ಕುಮಾರಸ್ವಾಮಿಯವರು ಮತ್ತು ಶ್ರೀ ದೇವೇಗೌಡರವರು ಸ್ವತಃ approach ಮಾಡಲಿಲ್ಲ. ಬಿ.ಜೆ.ಪಿ., ಪಕ್ಷದವರು ಕಾಂಗ್ರೆಸ್ ಮುಕ್ತ ಕರ್ನಾಟಕ ಮಾಡುತ್ತೇವೆನ್ನುವಂತಹ ಸವಾಲು ಹಾಕಿದ್ದರು. ಆ ಸವಾಲನ್ನು supportive ಆಗಿ ತೆಗೆದುಕೊಂಡಂತಹ ನಮ್ಮ ಪಕ್ಷದವರು ಬಿ.ಜೆ.ಪಿ., ಯವರಿಗೆ ಈ ರಾಜ್ಯದಲ್ಲಿ ಅವಕಾಶ ಕೊಡುವುದಿಲ್ಲವೆನ್ನುವ ಹಿನ್ನೆಲೆಯಲ್ಲಿ ಜೆ.ಡಿ.ಎಸ್., ಮತ್ತು ಕಾಂಗ್ರೆಸ್‌ನವರು ಸೇರಿ ಸರ್ಕಾರವನ್ನು ಮಾಡೋಣ ಎಂದು ಹೇಳಿರುವಂತಹದ್ದು, ಇದಕ್ಕೆ ಕಾರಣವೇನೆಂದರೆ ಇದನ್ನು ನಾನು ಹೇಳಿರುವುದಲ್ಲ. ಈ ದೇಶದ ಸರ್ವೋಚ್ಚ ನ್ಯಾಯಾಲಯದ 4 ಜನ ನ್ಯಾಯಾಧೀಶರು "There is a threat on Indian Democracy" ಎಂದು ಹೇಳಿದರು. Rightly or wrongly, neither the President of India nor the Prime Minister nor the Law Minister of this Country, neither they have denied nor they have given any sort of explanation on this. What inference we can draw?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಆ inference ಏಕೆ draw ಮಾಡುತ್ತೇವೆಂದರೆ, there is a threat.

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ, ಮಾನ್ಯ ರವಿಕುಮಾರ್‌ರವರು ಏನೋ ಮಾತನಾಡುತ್ತಾರಂತೆ. If you are prepared to yield, then I will allow him.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಬೇಡ. ಮಾನ್ಯ ರವಿಕುಮಾರ್‌ರವರು ಮಾತನಾಡಬೇಕಾದರೆ ನಾನು ಸುಮ್ಮನಿದ್ದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸದಸ್ಯರೇ, ಆಮೇಲೆ ತಮಗೆ ಎಷ್ಟು ಹೊತ್ತು ಬೇಕೋ ಅಷ್ಟು ಹೊತ್ತು ಮಾತನಾಡಿ.

**ವೈಸ್‌ಛೇರ್ಮನ್:-** ಮಾನ್ಯ ರವಿಕುಮಾರ್‌ರವರು ಎರಡು ನಿಮಿಷ ಮಾತನಾಡುವುದಕ್ಕೆ ಸಮಯವನ್ನು ಕೇಳುತ್ತಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ರವಿಕುಮಾರ್‌ರವರೇ ಬೇಡ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಉಗ್ರಪ್ಪನವರೇ ಮಾನ್ಯ ರವಿಕುಮಾರ್‌ರವರು ಒಳ್ಳೆಯ ಸಲಹೆಯನ್ನು ಕೊಡುತ್ತಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ, ದಯಮಾಡಿ ಕುಳಿತುಕೊಳ್ಳಿ. ಸದನಕ್ಕೆ ಮಾನ್ಯ ರವಿಕುಮಾರ್‌ರವರು ಹೊಸ ಸದಸ್ಯರಾಗಿರುವುದರಿಂದ ಮಾತನಾಡುವುದಕ್ಕೆ ಅವಕಾಶಕೊಡಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಉಗ್ರಪ್ಪನವರೇ, ತಾವು ಸ್ವಲ್ಪ ದೊಡ್ಡ ಮನಸ್ಸು ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸದಸ್ಯರೇ, ಸಭಾಪತಿಯವರು ಹೇಳುತ್ತಿದ್ದಾರೆಂದು ನಾನು ಕುಳಿತುಕೊಳ್ಳುತ್ತೇನೆ.

**ವೈಸ್‌ಛೇರ್ಮನ್:–** ಮಾನ್ಯ ಉಗ್ರಪ್ಪನವರೇ, ಸದನಕ್ಕೆ ಹೊಸ ಸದಸ್ಯರು ಬಂದಿದ್ದಾರೆ. ಅದಕ್ಕೆ ಅವರಿಗೆ ಮಾತನಾಡುವುದಕ್ಕೆ ಬಿಡಿ ಎಂದು ಹೇಳಿದೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, There is a threat on Indian Democracy ಎಂದು ಸರ್ವೋಚ್ಚ ನ್ಯಾಯಾಲಯದ 4 ಜನ ನ್ಯಾಯಾಧೀಶರು ಹೇಳಿದ್ದಾರೆಂದು ಮಾನ್ಯ ಉಗ್ರಪ್ಪನವರು ಹೇಳಿದರು. ಹಿಂದೆ ಪ್ರಧಾನ ಮಂತ್ರಿಯವರಾದ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದಂತಹ ಸಂದರ್ಭದಲ್ಲಿ democracy ಯನ್ನು ಕೊಲೆ ಮಾಡಿದಂತಹವರು ಯಾರು ಎನ್ನುವಂತಹ ವಿಷಯದ ಬಗ್ಗೆ ಚರ್ಚೆಯಾಗಬೇಕು.

(ಗೊಂದಲ)

**ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸದಸ್ಯರೇ, ಇದರ ಬಗ್ಗೆ ಚರ್ಚೆಯಾಗಬೇಕೆಂದರೆ, ಎಲ್ಲಾ ವಿಷಯಗಳ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಬೇಕಾಗುತ್ತದೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ಪತ್ರಿಕೆಗಳನ್ನು ban ಮಾಡಿದರು.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಸುಮಾರು 20 ರಾಜ್ಯಗಳಲ್ಲಿ ಬಿ.ಜೆ.ಪಿ., ಸರ್ಕಾರ ಅಧಿಕಾರದಲ್ಲಿದೆ.

(ಗೊಂದಲ)

**ವೈಸ್‌ಛೇರ್ಮನ್:–** ದಯಮಾಡಿ ಎಲ್ಲ ಸದಸ್ಯರು ಕುಳಿತುಕೊಳ್ಳಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದಂತಹ ಮಾನ್ಯ ಇಂದಿರಾ ಗಾಂಧಿಯವರಿಗೆ ಯಾವ ಶಿಕ್ಷೆ.....

(ಗೊಂದಲ)

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಆ ರೀತಿ ಯಾವ ಜಡ್ಜ್ ಕೂಡ ಹೇಳಲಿಲ್ಲ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ವೈಸ್‌ಛೇರ್ಮನ್:-** ಮಾನ್ಯ ನಾರಾಯಣಸ್ವಾಮಿಯವರೇ, ಏನಪ್ಪಾ.

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಆ ವಿಷಯದ ಬಗ್ಗೆ ತಾವು ಈ ಸಂದರ್ಭದಲ್ಲಿ ಮಾತನಾಡುವ ಅವಶ್ಯಕತೆ ಇಲ್ಲ.

**ವೈಸ್‌ಛೇರ್ಮನ್:-** ಮಾನ್ಯ ಉಗ್ರಪ್ಪನವರೇ, ತಾವು ಮಾತನಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಇಂದಿರಾ ಗಾಂಧಿಯವರು .

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ:-** ತಮ್ಮ ಬಾಯಿಯಲ್ಲಿ ಆ ಹೆಸರು ಕೇಳುವುದಕ್ಕೆ ಚೆನ್ನಾಗಿ ಕಾಣುವುದಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ನ್ಯಾಯಾಧೀಶರನ್ನು ಜೈಲಿಗೆ ಹಾಕಿರುವಂತಹ ಪಕ್ಷವೆಂದರೆ ಅದು ಕಾಂಗ್ರೆಸ್. ಈ ವಿಷಯದ ಬಗ್ಗೆ ಚರ್ಚೆಯಾಗಬೇಕು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, . . .

**ವೈಸ್‌ಛೇರ್ಮನ್:-** ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್‌ರವರು ಏನೋ ವಿಷಯವನ್ನು ಮಾತನಾಡುತ್ತಾರೆ ಎಂದು ಸಮಯವನ್ನು ಕೊಟ್ಟೆ. ಆದರೆ ಅವರು ನನ್ನನ್ನೇ ನಡುವೆ ಸಿಕ್ಕಿಸುತ್ತಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, democracy ಯ ಬಗ್ಗೆ ಚರ್ಚೆಯಾಗಬೇಕಾದರೆ . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**VICE CHAIRMAN:-** I don't allow you, if you misutilize the timings. ಮಾನ್ಯ ರವಿಕುಮಾರ್‌ರವರು ಮಾತನಾಡುತ್ತಾರೆಂದು ತಾವು ಹೇಳಿರುವುದಕ್ಕೆ ನಾನು ಸುಮ್ಮನಾದೆ ಎಂದು ಈಗ ಮಾನ್ಯ ಉಗ್ರಪ್ಪನವರು ನನ್ನನ್ನು ಬಿಡುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, . . .

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, democracy ಗೆ threat ಬಂದಿತ್ತು ಎಂದು ಮಾನ್ಯ ಸದಸ್ಯರು ಹೇಳಿದರು. ಈ ದೇಶದ ನ್ಯಾಯಾಲಯ, ಪ್ರತಿಕಾ ರಂಗ ಅಷ್ಟೇ ಅಲ್ಲ, ನಾನು ಇನ್ನೂ ಅನೇಕ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಮತ್ತು ಮಾನ್ಯ ಉಗ್ರಪ್ಪನವರು ಕೂಡ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಮ್ಮಿಬ್ಬರನ್ನೂ ಬೆಂಗಳೂರು ಜೈಲಿನಲ್ಲಿ ಇಟ್ಟರು. ನಾವಿಬ್ಬರೂ ಒಟ್ಟಿಗೆ ಜೈಲಿನಲ್ಲಿ ಇದ್ದೆವು. Emergency ಯ ವಿರುದ್ಧ ಮಾನ್ಯ ಉಗ್ರಪ್ಪನವರು ಹೋರಾಟ ಮಾಡಿದ್ದರು. ಹಾಗಾಗಿ ಅವರು ಯಾವ democracy ಬಗ್ಗೆ ಹೇಳುತ್ತಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ಅವರು ಹಳೆಯದನ್ನು ನೆನಪಿಸಿಕೊಂಡು ಮುಂದಕ್ಕೆ ಬಂದರೆ ಸರಿಹೋಗುತ್ತದೆ. ನಾವೆಲ್ಲರೂ ಜೈಲಿನಲ್ಲಿ ಒಟ್ಟಿಗೆ ಇದ್ದೆವು.

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಆದಾದ ಮೇಲೆ ಮಾನ್ಯ ಆಯನೂರು ಮಂಜುನಾಥ್‌ರವರು ನಮ್ಮ ಪಕ್ಷದಲ್ಲಿಯೇ ಇದ್ದರು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಒಂದು ವರ್ಷದ ಕಾಲ ಜೈಲಿನಲ್ಲಿಯೇ ಇದ್ದೆವು. ಅದರ ಬಿಸಿ ಮಾನ್ಯ ಸಭಾನಾಯಕರಿಗೆ ಗೊತ್ತಿಲ್ಲ.

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ ಕುಳಿತುಕೊಳ್ಳಿ. ಮಾನ್ಯ ಉಗ್ರಪ್ಪನವರೇ ಮಾತನಾಡುವುದಕ್ಕೆ ಪ್ರಾರಂಭ ಮಾಡಿ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿ ಗೌಡರವರು ನಮ್ಮ ಜೊತೆಯಲ್ಲಿಯೇ ಇದ್ದರು. ಆಗ democracy ಗೊತ್ತಿರಲಿಲ್ಲ, ಈಗ ಅವರಿಗೆ ಗೊತ್ತಾಗಿದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್‌ಛೇರ್ಮನ್:-** ನಿಮಗೆ ಹೇಳುವವರು ಕೇಳುವವರು ಯಾರು ಇಲ್ಲವೇ?

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ಎಲ್ಲಿನವರು ಎಂದು ತಾವು ನೆನೆಪು ಮಾಡಿಕೊಳ್ಳಬೇಕು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ದೇವೇಗೌಡರವರನ್ನು ಬಂಧಿಸಲಾಗಿತ್ತು. ಮಾನ್ಯ ದೇವೇಗೌಡರವರು, ಮಾನ್ಯ ಇಬ್ರಾಹಿಂರವರು, ನಾನು ಮತ್ತು ಮಾನ್ಯ ಉಗ್ರಪ್ಪನವರೆಲ್ಲಾ ಒಂದೂವರೆ ವರ್ಷಗಳ ಕಾಲ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಇದ್ದೆವು.

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ, ತಾವು ಜೈಲಿನಲ್ಲಿದ್ದಾಗ ನಾನು ಕೂಡ ಜೈಲಿನಲ್ಲಿ ಇದ್ದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ತಾವು ಕೂಡ ಇದ್ದಿರಿ.

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾವೆಲ್ಲಾ ಒಟ್ಟಿಗೆ ಜೈಲಿನಲ್ಲಿ ಇದ್ದುದರ ಬಗ್ಗೆ ನಾನು ಹೇಳಿದೆ. ಮಾನ್ಯ ಅಡ್ವಾಣಿಯವರು, ಮಾನ್ಯ ವಾಜಪೇಯಿಯವರು, ಶ್ರೀ ಶಾಮ್‌ನಂದನ ಮಿಶ್ರ, ಮಾನ್ಯ ಹೆಗಡೆಯವರು ಮತ್ತು ಎಲ್ಲಾ ನಾಯಕರುಗಳನ್ನು ಜೈಲಿನಲ್ಲಿ ಹಾಕಿದ ಪಕ್ಷವು democracy ಯ ಬಗ್ಗೆ ಮಾತನಾಡುತ್ತದೆ. ಮಾನ್ಯ ಉಗ್ರಪ್ಪನವರಿಗೆ ಇದು ಅನಿವಾರ್ಯ, ಏಕೆಂದರೆ ಮಾನ್ಯ ಉಗ್ರಪ್ಪನವರು ಆ ಪಕ್ಷದಲ್ಲಿ ಇದ್ದಾರೆ. ಅದಕ್ಕೆ ಅವರು defend ಮಾಡುತ್ತಾರೆ. ಅವರು ಸಹ ಒಬ್ಬ ಫಲಾನುಭವಿಯಾಗಿದ್ದಾರೆ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನನ್ನ ಸ್ನೇಹಿತರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.

**ವೈಸ್‌ಛೇರ್ಮನ್:-** ಮಾನ್ಯ ಉಗ್ರಪ್ಪನವರೇ, ನನ್ನ ಮಾತನ್ನು ಏನೂ ಕೇಳಬೇಡ. ನೀನು ಮಾತನಾಡುವುದನ್ನು ಬಿಟ್ಟು ಕುಳಿತುಕೊಳ್ಳಲೇ ಬೇಡ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನನ್ನ ಸ್ನೇಹಿತರು Emergency ಯ ಬಗ್ಗೆ ನೆನೆಪಿಸಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿಜ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಂದೆ ಪ್ರಧಾನ ಮಂತ್ರಿಯವರಾದ ಮಾನ್ಯ ಇಂದಿರಾಗಾಂಧಿಯವರು ಈ ದೇಶದ economy ಯನ್ನು ಸರಿಪಡಿಸುವಂತಹ ಹಿನ್ನೆಲೆಯಲ್ಲಿ ಅದು ತಪ್ಪೋ ಅಥವಾ ಸರಿಯೋ, ಅದು ಬೇರೆ ವಿಷಯ. On 25th June 1975 an emergency was declared.

**VICE CHAIRMAN:-** Is it the subject today to discuss?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ.

**ವೈಸ್‌ಛೇರ್ಮನ್:-** ಮಾನ್ಯ ಉಗ್ರಪ್ಪನವರೇ, ತಾವು ಮಾತನಾಡಿ. ತಾವು ಎಲ್ಲರಿಗೂ ಆಯವ್ಯಯದ ಬಗ್ಗೆ guide ಮಾಡಿ. ಹಳೆಯ ವಿಷಯಗಳು ಮುಗಿದು ಹೋಗಿದೆ. ಅದರ ಬಗ್ಗೆ ಮತ್ತೆ ಏಕೆ ಕೆದಕುವುದಕ್ಕೆ ಹೋಗುತ್ತೀರಿ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಹಳೆಯ ವಿಷಯಗಳು ಮುಗಿದು ಹೋಗಿಲ್ಲ. It is continuous.

**VICE CHAIRMAN:-** That is your choice, I can't help you.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, 25 ಮತ್ತು 26 ಜೂನ್ 1975ರ ಬೆಳಿಗ್ಗೆ ಬೆಂಗಳೂರಿನ ಅಶೋಕ ಹೋಟೆಲ್‌ನಲ್ಲಿ ಮಾನ್ಯ ಎಲ್.ಕೆ.ಅಡ್ವಾನಿಯವರು, ಮಾನ್ಯ ಮಧು ದಂಡವತೆ, ಮಾನ್ಯ ಶಾಮ್‌ನಂದನ ಮಿಶ್ರಾ, ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು, ಇವರೆಲ್ಲಾ Parliamentary Committee ಯಿಂದ ಬಂದಾಗ ಅವರನ್ನು arrest ಮಾಡಿದ್ದರು, ಆಗ ಅವರೆಲ್ಲಾ ನಮ್ಮ ಜೊತೆಯಲ್ಲಿಯೇ ಇದ್ದರು.

**ವೈಸ್‌ಛೇರ್ಮನ್:-** ಇಂತಹ ಸಮಯದಲ್ಲಿಯೇ ಅವರು ಸಹ ನಮ್ಮನ್ನು ಬಿಟ್ಟರು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, 17 ತಿಂಗಳು 20 ದಿವಸಗಳ ಕಾಲ ನಾನು ಜೈಲಿನಲ್ಲಿ ಇದ್ದೆ. ಅದರಿಂದ ಈ ದೇಶದ ಜನ, ultimately, on 19th March 1977 there was a mandate against the Emergency. On 21st March

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1977 Mr. Morarji Desai became the Prime Minister of this Country.

(ಮುಂದು)

**(290) 12.07.2018 ಎಸ್‌ಪಿಆರ್/ಎಂಡಿ 6.10**

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):-**

ಇದಾದ ಮೇಲೆ ಕಾಂಗ್ರೆಸ್ ಪಕ್ಷದ CWC (Congress Working Committee) ನಲ್ಲಿ ಕಾಂಗ್ರೆಸ್ ಪಕ್ಷದ ಜನರಲ್ ಅಧಿವೇಶನದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದ್ದು ತಪ್ಪು ಎಂಬುದಾಗಿ ನಮ್ಮ ಪಕ್ಷವು ವಿಷಾದವನ್ನು ವ್ಯಕ್ತಪಡಿಸಿದೆ. ನಾನು ನಿಮ್ಮ ಮೂಲಕ ನನ್ನ ಸನ್ಮಿತ್ರರನ್ನು ಕೇಳಲಿಕ್ಕೆ ಬಯಸುವುದೇನೆಂದರೆ, ಈ ದೇಶದ ಸರ್ವೋಚ್ಚ ನ್ಯಾಯಾಲಯದ ನಾಲ್ಕು ನ್ಯಾಯಾಧೀಶರುಗಳು there is a threat on democracy ಎಂಬುದಾಗಿ ಹೇಳಿರುವ ಹಿನ್ನೆಲೆಯಲ್ಲಿ ಈ ದೇಶದ ಪ್ರಧಾನ ಮಂತ್ರಿಗಳು ವಿಷಾದವನ್ನು ವ್ಯಕ್ತಪಡಿಸುತ್ತಾರೆಯೇ? ಈ ದೇಶದ ಜನರ ಕ್ಷಮೆಯನ್ನು ಕೇಳುತ್ತಾರೆಯೇ? ಈ ಬಗ್ಗೆ ವಿರೋಧ ಪಕ್ಷದ ಸದಸ್ಯರುಗಳು ಉತ್ತರವನ್ನು ನೀಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ದೇಶದ ಮಾನ್ಯ ಪ್ರಧಾನ ಮಂತ್ರಿಗಳಿಗೆ ಈ ಮಾತನ್ನು ಹೇಳಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಈಗ ಅಘೋಷಿತ ತುರ್ತು ಪರಿಸ್ಥಿತಿ ಬಂದಿದೆ.

**ವೈಸ್ ಛೇರ್ಮನ್:-** ದೇಶದ ಪ್ರಧಾನ ಮಂತ್ರಿಗಳಿಗೆ ಈ ಮಾತನ್ನು ಹೇಗೆ ಹೇಳುವುದಕ್ಕಾಗುತ್ತದೆ? **(ಗೊಂದಲ)** ದಯಮಾಡಿ ವಿಷಯದ ಮೇಲೆ ಮಾತ್ರವೇ ಮಾತನಾಡಿ. ಮಾನ್ಯ ಉಗ್ರಪ್ಪನವರೇ, ನಾನು ಈ ಸದನಕ್ಕೆ ಮಾರ್ಗದರ್ಶನ ನೀಡಲು ಕೇಳಿದ್ದೆನು. ಆದರೆ ನೀವು ದೇಶದ ಹಳೆಯ ಕಥೆಗಳನ್ನು ಹೇಳುತ್ತಿದ್ದೀರಿ. **(ಗೊಂದಲ)** ಈಗ ಯಾವ ರೀತಿಯ ತುರ್ತು ಪರಿಸ್ಥಿತಿ ಇದೆ? There is no emergency now.

**ಶ್ರೀ ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ದೇಶದ 21 ರಾಜ್ಯಗಳಲ್ಲಿ ಬಿ.ಜೆ.ಪಿ. ಪಕ್ಷದ ಅಧಿಕಾರವಿದೆ. ಇದನ್ನು ಮಾನ್ಯ ಆಡಳಿದ ಪಕ್ಷದ ಸದಸ್ಯರು ಜೀರ್ಣ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. They are unable to digest it.

**(ಗೊಂದಲ)**

**ವೈಸ್ ಛೇರ್ಮನ್:-** ತುರ್ತು ಪರಿಸ್ಥಿತಿ ಘೋಷಣೆಯಾದಾಗ ನಾವಿದ್ದೆವು. ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾದಾಗ ನೀವು ಇರಲಿಲ್ಲ. ಹೀಗಾಗಿ ಸುಮ್ಮನೆ ಏನೇನೋ ಮಾತನಾಡಬೇಡಿ.

**(ಗೊಂದಲ)**

**ಡಾ||ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಭಗತ್ ಸಿಂಗ್‌ನನ್ನು ಉಗ್ರಗಾಮಿ ಎಂದು ಹೇಳಿ, ಅವನನ್ನು ಜೈಲಿಗೆ ಹಾಕಿದಾಗ ಬ್ರಿಟೀಷ್ ಸರ್ಕಾರದ ವಿರುದ್ಧ ಅವರಿಗೆ ಯಾವುದೇ ರೀತಿಯ ರಕ್ಷಣೆಯನ್ನು ಕೊಡಲಿಕ್ಕೆ ಆಗಲಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ನಾನು ಚಲನಚಿತ್ರವೊಂದನ್ನು ನೋಡಿದ್ದೆನು. ಅದರಲ್ಲಿ ಮೋಹನ್ ಎಂಬುವ ವ್ಯಕ್ತಿ ಹಾಡನ್ನು ಹೇಳುತ್ತಾನೆ. "ಪೋರಸ್ ನೇ ಸಿಕಂದರ್ ಸೇ ಕಿತಿ ಲಡಾಯಿ, ಕಿತಿ ಲಡಾಯಿ ತೋ ಮೇ ಕ್ಯಾ ಕರು?" ಇದರರ್ಥ ಏನೆಂದರೆ, ಶಾಲೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗೆ ಇತಿಹಾಸಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದಾಗ, ವಿದ್ಯಾರ್ಥಿಯು "ಪೋರಸ್ ಎಂಬುವವನು ಯುದ್ಧವನ್ನು ಮಾಡಿದರೆ, ನಾನೇನು ಮಾಡಲಿ?" ಎಂಬುದಾಗಿ ಕೇಳುತ್ತಾನೆ. ದೇಶದಲ್ಲಿ ತುರ್ತು ಪರಿಸ್ಥಿತಿಯು ಬಹಳ ವರ್ಷಗಳ ಹಿಂದೆ ಆಗಿತ್ತು. ಆದರೆ ಆ ಸಂಗತಿಗಳನ್ನು ಈಗ ಏಕೆ ಹಲವಾರು ಬಾರಿ ಪ್ರಸ್ತಾಪ ಮಾಡುತ್ತೀರಿ? ಅದನ್ನು ಈಗ ಬಿಟ್ಟುಬಿಡೋಣ. We have buried everything. Why you want to raise that issue now. ಮಾನ್ಯ ಉಗ್ರಪ್ಪನವರೇ, ದಯಮಾಡಿ ಮುಂದಿನ ವಿಚಾರಕ್ಕೆ ಹೋಗಿ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವ ಮೊದಲು ಮಾತನಾಡಿದ ನಮ್ಮ ಸನದನ ಮಾನ್ಯ ಸದಸ್ಯರುಗಳು ಯಾವ ಯಾವ ಕಾಲಘಟ್ಟದ ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ ಎಂಬುದು ತಮಗೆ ಗೊತ್ತಿದೆ. ಪ್ರಸ್ತುತ ಆಯವ್ಯಯಕ್ಕೆ

ಸಂಬಂಧಪಟ್ಟಂತೆ ರೈತರ ಸಾಲ ಮನ್ನಾ ವಿಚಾರವಾಗಿ ಹೆಚ್ಚು ಚರ್ಚೆಯಾಗಿದೆ. ಮಾನ್ಯ ಯಡಿಯೂರಪ್ಪನವರು ರೈತರ ಸಾಲ ಮನ್ನಾ ಮಾಡಲೇಬೇಕು ಇಲ್ಲವೆಂದಾದರೆ ಬೀದಿಗಿಳಿದು ಹೋರಾಟ ಮಾಡುವುದಾಗಿ ಹೇಳಿದರು. 2008 ನೇ ಸಾಲಿನಲ್ಲಿಯೂ ಸಹ ಮಾನ್ಯ ಕುಮಾರಸ್ವಾಮಿಯವರು ಯಡಿಯೂರಪ್ಪನವರಿಗೆ ಬೆಂಬಲವನ್ನು ವ್ಯಕ್ತಪಡಿಸದಿದ್ದಾಗ ಬೀದಿಗಿಳಿಯುವುದಾಗಿ ಹೇಳಿ ತುಮಕೂರುವರೆಗೆ ಯಡಿಯೂರಪ್ಪನವರು ಹೋಗಿದ್ದರು.

**ಶ್ರೀ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಸದನದಲ್ಲಿ ಕೇವಲ ಒಬ್ಬ ಮಂತ್ರಿಗಳು ಮಾತ್ರ ಇದ್ದು ಬರೆದುಕೊಳ್ಳುತ್ತಿದ್ದಾರೆ. ಮಾನ್ಯ ಉಗ್ರಪ್ಪನವರ ಭಾಷಣ ಅದ್ಭುತವಾಗಿದೆ. ಆದರೆ ಅದನ್ನು ಯಾರಾದರೂ ಸಹ ದಾಖಲೆ ಮಾಡಿಕೊಳ್ಳಬೇಕಲ್ಲವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದನವನ್ನು ನಡೆಸುವಾಗ ಮೂರು ಜನ ಮಂತ್ರಿಗಳು ಹಾಜರಿರಬೇಕಾಗಿತ್ತು.

**(ಗೊಂದಲ)**

**ವೈಸ್ ಛೇರ್ಮನ್:-** ಇಬ್ಬರು ಅಥವಾ ಮೂರು ಮಂತ್ರಿಗಳನ್ನು ಈಗ ಸದನಕ್ಕೆ ಕರೆದುಕೊಂಡು ಬನ್ನಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸದನದ ಕಲಾಪವನ್ನು ಹತ್ತು ನಿಮಿಷಗಳವರೆಗೆ ಮುಂದೂಡಿ.

**(ಗೊಂದಲ)**

**VICE CHAIRMAN:-** Kindly don't force me to do that. ಆ ರೀತಿ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಭಾಪತಿಯವರು ಪೀಠಕ್ಕೆ ಬರಲಿ, ಅವರು ಏನು ಹೇಳುತ್ತಾರೋ ನೋಡೋಣ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮಾನ್ಯ ಯಡಿಯೂರಪ್ಪನವರು ಸರ್ಕಾರ ರೈತರ ಸಾಲ ಮನ್ನಾ ಮಾಡಬೇಕು ಎಂದು ಒತ್ತಡವನ್ನು ತಂದಿದ್ದಾರೆ, ತರುತ್ತಿದ್ದಾರೆ. ಈ ಕಾರಣಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈಗಾಗಲೇ ಅನೇಕ ಬಾರಿ

ಪ್ರಸ್ತಾಪವಾಗಿರುವ ವಿಚಾರವೇನೆಂದರೆ, ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಅಂದಿನ ಪರಿಸ್ಥಿತಿಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಸಂಕಷ್ಟದಲ್ಲಿದ್ದಾರೆ, ಹೀಗಾಗಿ ದಯಮಾಡಿ ರೈತರು ಮಾಡಿರುವ ಸಾಲ ಮನ್ನಾ ಮಾಡಿ ಎಂದು ದಿನಾಂಕ 31 ನೇ ಡಿಸೆಂಬರ್ 2009 ರಂದು as the Leader of the Opposition ಅಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರನ್ನು ಅಂಗಲಾಚಿದೆ.

**ವೈಸ್ ಛೇರ್ಮನ್:-** ಮಾನ್ಯ ಯಡಿಯೂರಪ್ಪನವರು ಪ್ರಸ್ತುತ ಸದನದಲ್ಲಿ ಇಲ್ಲ. ಹೀಗಾಗಿ ಅವರ ವಿಚಾರವನ್ನೇಕೆ ಮಾತನಾಡುತ್ತೀರಿ? I am sorry to say this.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಮಾನ್ಯ ಸದಸ್ಯರ ಮೂಲಕ ಮಾನ್ಯ ಯಡಿಯೂರಪ್ಪನವರು ಸರ್ವಾಂತರ್ಯಾಮಿಯಾಗಿದ್ದಾರೆ. You need not worry.

**ವೈಸ್ ಛೇರ್ಮನ್:-** ಚರ್ಚೆ ಮಾಡುವುದರಲ್ಲಿ ಯಾವುದಾದರೂ ಫಲಿತಾಂಶವಿರಬೇಕು. ಅದನ್ನು ಕೇಳುವುದರಲ್ಲಿ ನಮಗೆ ಆನಂದವೆನಿಸಬೇಕು. This is not necessary.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನನ್ನ ಮನವಿಗೆ ಪ್ರತಿಯಾಗಿ ಮಾನ್ಯ ಯಡಿಯೂರಪ್ಪನವರು "ನೋಟುಗಳನ್ನು ಪ್ರಿಂಟ್ ಮಾಡುವ ಅಧಿಕಾರ ನನಗೆ ಕೇಂದ್ರ ಸರ್ಕಾರ ಕೊಟ್ಟಿಲ್ಲ; ನಾನು ರೈತರ ಸಾಲ ಮನ್ನಾ ಮಾಡಲಿಕ್ಕೆ ಬರುವುದಿಲ್ಲ; ಕೇಂದ್ರ ಸರ್ಕಾರವೇ ರೈತರ ಸಾಲ ಮನ್ನಾ ಮಾಡಬೇಕು; ನಾವುಗಳೆಲ್ಲ ಕೇಂದ್ರಕ್ಕೆ ನಿಯೋಗವನ್ನು ಕರೆದುಕೊಂಡು ಹೋಗೋಣ" ಎಂಬುದಾಗಿ ಹೇಳಿದರು.

**ವೈಸ್ ಛೇರ್ಮನ್:-** ಮಾನ್ಯ ಉಗ್ರಪ್ಪನವರೇ, ಬೇಗ ತಮ್ಮ ಭಾಷಣವನ್ನು ಮುಗಿಸಿ. ಬಹಳ ಸಮಯದಿಂದ ಮಾತನಾಡುತ್ತಿದ್ದೀರಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ನರೇಂದ್ರ ಮೋದಿಯವರು ಚಂಢೀಗಢದಲ್ಲಿ ದಿನಾಂಕ 30/03/2014 ರಂದು ಲೋಕಸಭೆ ಚುನಾವಣಾ ಭಾಷಣ ಮಾಡಬೇಕಾದರೆ, ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ "I am not going to let down farmers as well as soldiers," ಎಂಬುದಾಗಿ ಹೇಳುತ್ತಾರೆ. ಆದರೆ ನಿನ್ನೆಯ ದಿವಸ ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಪಂಜಾಬ್ ರಾಜ್ಯದಲ್ಲಿ "Congress never cared

for farmers – says Prime Minister" ಎಂಬುದಾಗಿ ಹೇಳಿಕೆಯೊಂದನ್ನು ನೀಡುತ್ತಾರೆ. ಇದು ಹಿಂದೂ ಪತ್ರಿಕೆಯಲ್ಲಿ ವರದಿಯಾಗಿದೆ. ಕಾಂಗ್ರೆಸ್ ಪಕ್ಷದವರು ರೈತರ ಬಗ್ಗೆ ಕಾಳಜಿ ವ್ಯಕ್ತಪಡಿಸಿಲ್ಲ ಎಂದಾದರೆ, ಡಾ॥ ಮನ್‌ಮೋಹನ್ ಸಿಂಗ್‌ರವರು ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ 73,000 ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಿದ್ದಾರೆ. ಇಷ್ಟು ದೊಡ್ಡ ಮೊತ್ತದ ಸಾಲ ಮನ್ನಾವನ್ನು ಈ ದೇಶದ ಇತಿಹಾಸದಲ್ಲಿಯೇ ಯಾರೂ ಮಾಡಿರಲಿಲ್ಲ. ಡಾ॥ ಮನ್‌ಮೋಹನ್ ಸಿಂಗ್‌ರವರ ನೇತೃತ್ವದ ಕಾಂಗ್ರೆಸ್ ಸರ್ಕಾರ ರೈತರ ಬಗ್ಗೆ ಕಾಳಜಿಯನ್ನು ವಹಿಸಿತ್ತೋ ಅಥವಾ ಇಲ್ಲವೋ ಎಂಬುದನ್ನು ಈ ದೇಶದ, ಈ ರಾಜ್ಯದ ಜನ ಅರ್ಥ ಮಾಡಿಕೊಳ್ಳುತ್ತಾರೆ. ಮಾನ್ಯ ಸಿದ್ಧರಾಮಯ್ಯನವರು ಈ ಹಿಂದೆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ 8,163 ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಿದ್ದಾರೆ. ರಾಜ್ಯದಲ್ಲಿ ಇಷ್ಟು ದೊಡ್ಡ ಮೊತ್ತದ ಸಾಲವನ್ನು ಯಾವುದೇ ಸರ್ಕಾರ ಮಾಡಿತ್ತಾ? ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ದೊಡ್ಡ ಮೊತ್ತದ ರೈತರ ಸಾಲ ಮನ್ನಾ ಮಾಡಿದೆ.

**ವೈಸ್ ಛೇರ್ಮನ್:-** ದಯಮಾಡಿ ಕುಳಿತುಕೊಳ್ಳಿ. Kindly don't force me to call somebody to talk.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ 34,000 ಕೋಟಿ ರೂಪಾಯಿಗಳಷ್ಟು ರೈತರ ಸಾಲ, ಸುಸ್ತಿ ಹಾಗೂ ಬಡ್ಡಿಯನ್ನು ಮನ್ನಾ ಮಾಡುವಂತಹ . . . .

**ವೈಸ್ ಛೇರ್ಮನ್:-** ಮಾನ್ಯ ಉಗ್ರಪ್ಪನವರೇ ನಾನು ಹೇಳುತ್ತಿರುವುದು ನಿಮಗೆ ಕೇಳಿಸುತ್ತಿದೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಆಯವ್ಯಯದ ಮೇಲೆ ಮಾತನಾಡುತ್ತಿದ್ದೇನೆ.

**ವೈಸ್ ಛೇರ್ಮನ್:-** ನೀವು ಕಳೆದ 45 ನಿಮಿಷಗಳಿಂದ ಮಾತನಾಡುತ್ತಿದ್ದೀರಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಯಾವ ಸದಸ್ಯರೂ ಇನ್ನು ಮಾತನಾಡುವುದಿಲ್ಲ.

**ವೈಸ್ ಛೇರ್ಮನ್:-** ನಿಮಗೆ ಕೊಟ್ಟ ಸಮಯ ಮುಗಿದಿದೆ. ನಿಮ್ಮ ಪಕ್ಷದ ಎಲ್ಲಾ ಸದಸ್ಯರು ಮಾತನಾಡಲಿ, ನಾನು ಬೇಡವೆಂದು ಹೇಳುವುದಿಲ್ಲ. ನಿಮ್ಮ ಪಕ್ಷದ ಸದಸ್ಯರೇ ಮಾತನಾಡಲು ಅವಕಾಶ ಕೋರಿ ಪಟ್ಟಿಯನ್ನು ನೀಡಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಯಾವ ಸದಸ್ಯರೂ ಮಾತನಾಡುವುದಿಲ್ಲ ಎಂಬುದಾಗಿ ನನಗೆ ಹೇಳಿದ್ದಾರೆ.

**ವೈಸ್ ಛೇರ್ಮನ್:-** ನೀವು ಇನ್ನೂ ಎಷ್ಟು ಸಮಯದವರೆಗೆ ಮಾತನಾಡುತ್ತೀರಿ? **(ಗೊಂದಲ)** ಇನ್ನೂ ಸಾಕಷ್ಟು ಸದಸ್ಯರು ಮಾತನಾಡುವವರಿದ್ದಾರೆ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ನಮ್ಮ ಪಕ್ಷದ ಯಾವ ಸದಸ್ಯರೂ ಮಾತನಾಡುವುದಿಲ್ಲ ಎಂಬುದಾಗಿ ಹೇಳಿರುವ ಹಿನ್ನೆಲೆಯಲ್ಲಿ ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದಾರೆ.

**(ಮುಂದು)**

(291) 12-07-2018 ಬಿಎಸ್‌ಡಿ-ಎಕೆ 6.20

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ :-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದವರು ಯಾರೂ ಮಾತನಾಡುವುದಿಲ್ಲ ಎಂದು ಹೇಳಿರುವ ಹಿನ್ನೆಲೆಯಲ್ಲಿ ಅವಕಾಶ ಕೊಟ್ಟಿದ್ದೀರಿ.

**ಶ್ರೀ ಆಯನೂರು ಮಂಜುನಾಥ್ :-** ಮಾನ್ಯ ಸಭಾಪತಿಯವರೇ, ಮಧ್ಯಾಹ್ನ ನನಗೆ ತಾವು ಮಾತನಾಡಲು ಬಿಡಲಿಲ್ಲ, ಯಾವ ಪಕ್ಷಗಳಿಗೂ ಸಮಯ allotment ಆಗಿಲ್ಲ. ಮಧ್ಯಾಹ್ನ 20 ನಿಮಿಷ ಆದ ಕೂಡಲೇ ಗಂಟೆ ಹೊಡೆದು ಕೂರಿಸಿದಿರಿ. ಕೆಲವರಿಗೆ ಮುಕ್ಕಾಲು ಹಾಗೂ ಕೆಲವರಿಗೆ ಒಂದು ಗಂಟೆ ಸಮಯವನ್ನು ಮಾತನಾಡಲು ಕೊಡುತ್ತೀರಿ. ಆ ರೀತಿ ಮಾಡಬಾರದಲ್ಲವೇ?

**VICE CHAIRMAN:** I am sorry for it; that's all. What am I to do? You tell me. What am I to do?

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕ

**ಶ್ರೀ ಆಯನೂರು ಮಂಜುನಾಥ್ :-** ಪಕ್ಷಗಳಿಗೆ ತಾವು ಸಮಯವನ್ನು ನಿಗದಿ ಮಾಡಿಲ್ಲ. ಇಷ್ಟು ಸದಸ್ಯರು ಎಂದು ಎಣಿಕೆ ಮಾಡಿಲ್ಲ. ನಾನೇನು ದ್ರೋಹ ಮಾಡಿದ್ದೇನೆ?

**ಶ್ರೀ ವಿ.ಎಸ್. ಉಗ್ರಪ್ಪ :-** ನಾನು yield ಆಗಿಲ್ಲ.

**ವೈಸ್ ಛೇರ್ಮನ್:-** ಅವರು yield ಆಗಿಲ್ಲ.

(ಗೊಂದಲ)

**ಶ್ರೀ ಎನ್. ರವಿಕುಮಾರ್ :-** ಮಾನ್ಯ ಸಭಾಪತಿಯವರೇ, ಇನ್ನೂ ಮೂರ್ನಾಲ್ಕು ಜನರು ಮಾತನಾಡುವವರಿದ್ದೇವೆ.

**ಶ್ರೀ ವಿ.ಎಸ್. ಉಗ್ರಪ್ಪ :-** ನಾನು ಮಾತನಾಡಿದ ನಂತರ ಅವರು ಮಾತನಾಡುವಾಗ ರಾತ್ರಿ ಎಷ್ಟು ಸಮಯ ಬೇಕಾದರೂ ಕೂರುತ್ತೇನೆ.

**ಶ್ರೀ ಲಹರ್‌ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಅವರು yield ಆಗಿದ್ದಾರೆ. ಅವರು yield ಆಗಿ ಮಾನ್ಯ ಕುಮಾರಸ್ವಾಮಿಯವರನ್ನು C.M. (Chief Minister) ಮಾಡಿದ್ದಾರೆ.

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ :-** ಮಾನ್ಯ ಸಭಾಪತಿಯವರೇ, ಒಂದು ಕಡೆ ರೈತರ ಸಾಲ ಮನ್ನಾ ಮಾಡುವ ಕೆಲಸವನ್ನು non-BJP ಬಿಜೆಪಿ ನಾಯಕರುಗಳು ಮಾಡಿದ್ದಾರೆ. ನಾನು ದಾಖಲಾತಿಗಳನ್ನು ತರಿಸಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :-** ಅವರು ಹೇಳಿದ್ದೇ ಸತ್ಯವಾಗುತ್ತದೆಯೇ?

(ಗೊಂದಲ)

**ಶ್ರೀ ಎನ್. ರವಿಕುಮಾರ್ :-** ಮಾನ್ಯ ಸಭಾಪತಿಯವರೇ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಸಾಲ ಮನ್ನಾ ಮಾಡಿಲ್ಲವೇ? ಕರ್ನಾಟಕದಲ್ಲಿ ಮಾನ್ಯ ಯಡಿಯೂರಪ್ಪನವರು ಸಾಲ ಮನ್ನಾ ಮಾಡಿಲ್ಲವೇ? Zero interest loan ಗೆ ಹಣವನ್ನು ಯಾರು ಕೊಟ್ಟರು? ಕಾಂಗ್ರೆಸ್‌ನವರು ಕೊಟ್ಟಿದ್ದಾರೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ವೆಂಕಟರಾವ್ ನಾಡಗೌಡ:–** ಮಾನ್ಯ ಸಭಾಪತಿಯವರೇ, ಆ ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀ ರವಿಕುಮಾರ್ ರವರು ಆಯವ್ಯಯದ ಮೇಲೆ ಮಾತನಾಡುವಾಗ ಹೇಳಲಿ. ಈಗ ಮಾನ್ಯ ಸದಸ್ಯರಿಗೆ ಮಾತನಾಡಲು ಬಿಡಿ.

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ :–** 2017ರಲ್ಲಿ ರಾಜ್ಯಸಭಾದಲ್ಲಿ ಬರವಣಿಗೆಯಲ್ಲಿ ಒಂದು ಉತ್ತರವನ್ನು ಕೊಟ್ಟಿದ್ದಾರೆ.

**VICE CHAIRMAN:** I know how to utilize this position. But I don't want to do it. I am not that much of an illiterate. I know what is the position of this seat. I am requesting the Members of this House to help me by speaking to the point. If they don't understand, what can I do?

**Sri V.S. UGRAPPA:** Mr. Chairman, Sir, "In a written reply to a question in Rajya Sabha, the Modi Goverment said that between 2014 and September 2017, the public sector banks had written off 2.41 lakh crore rupees..."

**ವೈಸ್ ಛೇರ್ಮನ್:–** ಮಾನ್ಯ ಉಗ್ರಪ್ಪನವರೇ, ತಮ್ಮ ಮಾತುಗಳನ್ನು ಮುಕ್ತಾಯ ಮಾಡಿ, ಇಲ್ಲದಿದ್ದರೆ ನಾವು ಬೇರೆಯವರನ್ನು ಕರೆಯಬೇಕಾಗುತ್ತದೆ.

**ಶ್ರೀ ವಿ.ಎಸ್. ಉಗ್ರಪ್ಪ :–** ನನಗೆ ಅರ್ಥವಾಗುತ್ತಿಲ್ಲ.

**ವೈಸ್ ಛೇರ್ಮನ್:–** ನನಗೂ ಅರ್ಥವಾಗುತ್ತಿಲ್ಲ. ತಾವು ಮುಕ್ತಾಯ ಮಾಡುತ್ತಿಲ್ಲ, 5 ನಿಮಿಷ 10 ತೆಗೆದುಕೊಳ್ಳುತ್ತೇನೆ ಎಂದರೆ some other Members are also waiting to speak. ಐದಾರು ಜನ ಅಲ್ಲಿಯೂ ಮಾತನಾಡಬೇಕು. ತಾವು ಎಷ್ಟು ಸಮಯ ಮಾತನಾಡುತ್ತೀರಿ?

**ಶ್ರೀ ವಿ.ಎಸ್. ಉಗ್ರಪ್ಪ :–** ಇನ್ನೂ ಅರ್ಧ ಗಂಟೆ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್ :-** ಮಾನ್ಯ ಸಭಾಪತಿಯವರೇ, ನನಗೆ ಮಧ್ಯಾಹ್ನ ಮಾತನಾಡುವಾಗ ಸಮಯ ಕೊಡದೇ ಅನ್ಯಾಯ ಮಾಡಿದ್ದೀರಿ, ದಯವಿಟ್ಟು ನನಗೆ ಅವಕಾಶ ಕೊಡಬೇಕು. ಆಗ ತಾವೇ ಪೀಠದಲ್ಲಿ ಇದ್ದಿರಿ. ನಾನು ಮಲತಾಯಿ ಮಗನೇ? ನನಗೆ ನೀಡಿದ್ದ 20 ನಿಮಿಷಗಳಲ್ಲಿ 10 ನಿಮಿಷ ಗಲಾಟೆ ಮಾಡಿದರು. ನನಗೆ ಮತ್ತೊಮ್ಮೆ ಅವಕಾಶ ಕೊಡಿ.

**ವೈಸ್ ಛೇರ್ಮನ್:-** ದಯಮಾಡಿ ಕುಳಿತುಕೊಳ್ಳಿ, ಅವರು ಮಾಡುತ್ತಾರೆ ಎಂದರೆ ತಾವು ಹಾಗೆ ಮಾಡುತ್ತೀರಾ? ಆಯಿತು, ಅದು ಮುಗಿದು ಹೋದ ಕತೆ. Your chapter is closed.

**Sri V.S. UGRAPPA:** Corporate companies ಗಳಲ್ಲಿ ರೂ.2.41 ಲಕ್ಷ ಸಾವಿರ ಕೋಟಿಗಳನ್ನು waive off ಮಾಡಿರುವ ಪ್ರಧಾನ ಮಂತ್ರಿಗಳು....

**ಶ್ರೀ ಎನ್. ರವಿಕುಮಾರ್** :- ಇದರ ಬಗ್ಗೆ document ತಂದುಕೊಡಬೇಕು.

(ಗೊಂದಲ)

**ಶ್ರೀ ಲಹರ್‌ಸಿಂಗ್ ಸಿರೋಯಾಃ-** ವಿಜಯ್ ಮಲ್ಯಗೆ ಲೋನ್ ಕೊಟ್ಟಿದ್ದು ಯಾರು?

(ಗೊಂದಲ)

**ಶ್ರೀ ಎನ್. ರವಿಕುಮಾರ್ :-** ಇದರ ಬಗ್ಗೆ details ಕೊಡಲಿ, documents ಕೊಡಲಿ. ಎಲ್ಲಿ waive off ಮಾಡಿದ್ದಾರೆ ಎಂದು ತಿಳಿಸಲಿ.

**ಶ್ರೀ ವಿ.ಎಸ್. ಉಗ್ರಪ್ಪ :-** ಮಾನ್ಯ ಸಭಾಪತಿಯವರೇ, ರಾಜ್ಯಸಭೆಯಲ್ಲಿ ಉತ್ತರ ನೀಡಿರುವ ಪ್ರತಿಯಲ್ಲಿ ಇದೆ. ನಾನು ಹೇಳಿರುವುದು ಸುಳ್ಳಾದರೆ ಒಂದು ಕ್ಷಣ ಸದನದ ಸದಸ್ಯನಾಗಿ ಇರುವುದಿಲ್ಲ. ಅವರು ಇದರ ಬಗ್ಗೆ challenge ಮಾಡುತ್ತಾರೆಯೇ?

(ಗೊಂದಲ)

**ಶ್ರೀ ಲಹರ್‌ಸಿಂಗ್ ಸಿರೋಯಾಃ-** ಅವರು ಬಜೆಟ್ ಮೇಲೆ ಮಾತನಾಡುತ್ತಿದ್ದಾರೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿ.ಎಸ್. ಉಗ್ರಪ್ಪ :-** ನಾನು ಹೇಳುವುದು ಸುಳ್ಳಾದರೆ I will not continue as a Member of this House. ತಾಕತ್ತಿದ್ದರೆ ಅವರು challenge ತೆಗೆದುಕೊಳ್ಳಲಿ. ನಾನು prove ಮಾಡಿದರೆ ಎಲ್ಲರೂ ರಾಜೀನಾಮೆ ಕೊಟ್ಟು ಹೊರಗೆ ಹೋಗುತ್ತಾರೆಯೇ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :-** ಅವರು ಬಜೆಟ್ ಬಗ್ಗೆ ಚರ್ಚೆ ಮಾಡಲಿ.

**ಶ್ರೀ ವೈ.ಎ. ನಾರಾಯಣಸ್ವಾಮಿ :-** ವಿಜಯ್ ಮಲ್ಯರನ್ನು ಸದಸ್ಯರನ್ನಾಗಿ ಮಾಡಿದ್ದು ಯಾರು?

(ಗೊಂದಲ)

**ಡಾ॥ ತೇಜಸ್ವಿನಿ ಗೌಡ :-** ಮಲ್ಯರಿಗೆ ಸಾಲ ಕೊಟ್ಟಿದ್ದು ಯಾರು?

(ಗೊಂದಲ)

**ಶ್ರೀ ಆಯನೂರು ಮಂಜುನಾಥ್ :-** ಹೇಳುವವರು ಸತ್ಯ ಹರಿಶ್ಚಂದ್ರರಾಗಿದ್ದಾರೆಯೇ?

(ಗೊಂದಲ)

**Sri LAHAR SINGH SIROYA:** Democracy ಬಗ್ಗೆ ಮಾತನಾಡುವ ಅಧಿಕಾರ ಇದೆಯೇ?

**ಶ್ರೀ ವಿ.ಎಸ್. ಉಗ್ರಪ್ಪ :-** ಸತ್ಯ ಕಠೋರವಾಗಿ ಇರುತ್ತದೆ. ಅವರು ಏನು ಎಂದು ಚೆನ್ನಾಗಿ ಗೊತ್ತಿದೆ, ಸಾಕು ಕುಳಿತುಕೊಳ್ಳಬೇಕು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)

(ಗೊಂದಲ)

**ಸಭಾಪತಿಯವರು :-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ಎದ್ದು ನಿಂತಿದ್ದೇನೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಎದ್ದು ಸದನವನ್ನು ಬೇರೆ ದಾರಿಗೆ ಎಳೆಯಬೇಡಿ, ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಲಿ. ಅವರು ಮಾತನಾಡಿದ ಶಬ್ದಗಳು ಹೆಚ್ಚು ಕಡಿಮೆ ಇದ್ದರೆ ನಾನು ನೋಡಿಕೊಳ್ಳುತ್ತೇನೆ, ಅದನ್ನು ಕಡತದಿಂದ ತೆಗೆದುಹಾಕುತ್ತೇನೆ.

**ಶ್ರೀ ಆಯನೂರು ಮಂಜುನಾಥ್ :-** ಮಾನ್ಯ ಸಭಾಪತಿಯವರೇ, ನಾನು ಪೀಠಕ್ಕೆ ವಿನಂತಿ ಮಾಡುವುದೇನೆಂದರೆ, ಮಧ್ಯಾಹ್ನ ನಾನು ಮಾತನಾಡುವಾಗ 20 ನಿಮಿಷಗಳಿಗೆ ಬಲವಂತವಾಗಿ ಕುಳಿತುಕೊಳ್ಳುವಂತೆ ಹೇಳಿ, ಉಳಿದವರಿಗೆ ಒಂದು-ಒಂದೂಕಾಲು ಗಂಟೆ ಅವಕಾಶ ಕೊಡುತ್ತಿರುವಾಗ ನಾನೇನು ಅನ್ಯಾಯ ಮಾಡಿದ್ದೇನೆ?

**ಸಭಾಪತಿಯವರು :-** ಎಲ್ಲರಿಗೂ 20 ನಿಮಿಷ ಕೊಡುವುದಕ್ಕೆ ಆಗುವುದಿಲ್ಲ. ಒಬ್ಬರಿಗೆ 30 ನಿಮಿಷ, ಒಬ್ಬರಿಗೆ 40 ನಿಮಿಷ ಕೊಡಬೇಕಾಗುತ್ತದೆ, ಇದ್ಯಾವುದೂ restriction ಇಲ್ಲ. ಮಾನ್ಯ ರವಿ ರವರು ಮಾತನಾಡುತ್ತಿದ್ದರು, ವಿಷಯಗಳು ಬಹಳ ಹತ್ತಿರ ಇರುವಾಗ ಹತ್ತದಿನೈದು ನಿಮಿಷ ಹೆಚ್ಚು ಕಡಿಮೆ ಅವಕಾಶ ಕೊಡುವ ಅಧಿಕಾರ ಈ ಪೀಠಕ್ಕೆ ಇರುತ್ತದೆ. ಇನ್ನೊಂದು ಬಾರಿ ತಮ್ಮ ವಿಷಯ ಇರುವಾಗ ಹೆಚ್ಚು ಕೊಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್ :-** ಅದು ತಾರತಮ್ಯವಾಗುವುದಿಲ್ಲವೇ?

**ಸಭಾಪತಿಯವರು :-** ತಾರತಮ್ಯ ಇಲ್ಲ, ತಾವು Parliament Member ಆಗಿದ್ದವರು, ಇದು ತಾರತಮ್ಯ ಅಲ್ಲ, ಮಾತನಾಡುವಾಗ ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ. ನಾನೇನು ದೇವರಲ್ಲ. ತಾವು ದೊಡ್ಡ ಮನಸ್ಸು ಮಾಡಬೇಕು. ಸಹೋದರಿ ತೇಜಸ್ವಿನಿಯವರಿಗೆ ಸಾಕಷ್ಟು ಕೊಟ್ಟಿದ್ದೇನೆ. ಅದು ತಾರತಮ್ಯ ಅಲ್ಲ. Circumstances ಮೇಲೆ ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ.

**ಶ್ರೀ ಆಯನೂರು ಮಂಜುನಾಥ್ :-** ಮಾನ್ಯ ಸಭಾಪತಿಯವರೇ, ನಾನು ಟೀಕೆ ಮಾಡುತ್ತಿಲ್ಲ, ಆದರೆ ನಾನೇನು ಅನ್ಯಾಯ ಮಾಡಿದ್ದೇ ಎಂದು ಕೇಳುತ್ತಿದ್ದೇನೆ.

**ಸಭಾಪತಿಯವರು :-** ತಾವು ಏನೂ ಅನ್ಯಾಯ ಮಾಡಿಲ್ಲ, to the point ಮಾತನಾಡಿ, correct ಆಗಿ ಮಾತನಾಡಿದ್ದಕ್ಕೆ ನಿಮಗೆ ಸಮಯ.... ಮಾಡಿದೆ ಅಷ್ಟೇ. ಉಳಿದವರಂತೆ ತಾವು ಹೆಚ್ಚು ಸಮಯ ತೆಗೆದುಕೊಂಡಿಲ್ಲ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

292/12.07.2018/6.30/ಹೆಚ್‌ವಿಃಎಕೆ

**ಶ್ರೀ ಆಯನೂರು ಮಂಜುನಾಥಃ–** ಸನ್ಮಾನ್ಯ ಸಭಾಪತಿಯವರೇ, ನಾನು ಹಾಕಿದ ಬಾಲುಗಳ ಬಗ್ಗೆ ಗಲಾಟೆ ಆಯಿತು ಎಂದು ನನಗೆ ಮಾತನಾಡಲು ಅವಕಾಶವನ್ನೇ ಕೊಡದೇ ಕೂಡಿಸಿಬಿಟ್ಟರು. ನಾನು ಬೌಲಿಂಗ್ ಮಾಡಬಾರದೇ?

**ಸಭಾಪತಿಯವರುಃ–** ತಾವು ಮಾತನಾಡುವಾಗ, ಮಾನ್ಯ ಕೆ.ಬಿ.ಶಾಣಪ್ಪನವರು ಪೀಠದಲ್ಲಿ ಕುಳಿತಿದ್ದರು ಅಂತ ಕಾಣುತ್ತದೆ.

**ಶ್ರೀ ಆಯನೂರು ಮಂಜುನಾಥಃ–** ಸನ್ಮಾನ್ಯ ಸಭಾಪತಿಯವರೇ, ಆ ಪೀಠದಲ್ಲಿ ಯಾರಿದ್ದಾರೆ ಎನ್ನುವುದು ಮುಖ್ಯವಲ್ಲ, ಪೀಠ ಮುಖ್ಯವಾಗುತ್ತದೆ.

**ಸಭಾಪತಿಯವರುಃ–** ಮುಂದಿನ ಬಾರಿ ಈ ರೀತಿ ಆಗದಂತೆ ನೋಡಿಕೊಳ್ಳಲಾಗುವುದು.

**ಶ್ರೀ ಕೆ.ಬಿ.ಶಾಣಪ್ಪಃ–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ನನ್ನನ್ನು ಆ ಪೀಠದಲ್ಲಿ ಬಿಟ್ಟು ತಾವು ಹೋಗಬೇಡಿ. ಇವರುಗಳು ಬಹಳ ಅಪಾಯಕಾರಿಗಳಾಗಿದ್ದಾರೆ.

**(ಸದನದಲ್ಲಿ ನಗೆಯ ಅಲೆ)**

**ಶ್ರೀ ವಿ.ಎಸ್.ಉಗ್ರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಈ ದೇಶದ ಪ್ರಧಾನಮಂತ್ರಿಗಳಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದೇನೆ, ಅವರು 30ನೇ ಮಾರ್ಚ್ 2014ರಂದು ಚಂಢೀಗಡ್‌ನಲ್ಲಿ ಈ ದೇಶವನ್ನುದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ, "We are not going to let down farmers and soldiers" ಎಂದು ಹೇಳಿದ್ದರು. ನಮ್ಮ ರಾಜ್ಯದ ರೈತರು ಇವತ್ತು ಕಷ್ಟದಲ್ಲಿದ್ದಾರೆ. ನಾವುಗಳು ಕೈಮುಗಿದು ಮಾನ್ಯ ಪ್ರಧಾನಮಂತ್ರಿಗಳಲ್ಲಿ ಬೇಡುತ್ತಿದ್ದೇವೆ, ಈ ರಾಜ್ಯದ ರೈತರ ಹಿತಕ್ಕಾಗಿ ಅಗತ್ಯವಿದ್ದರೆ ಅವರ ಕಾಲಿಗೂ ಬೀಳುತ್ತೇವೆ. ದಯಮಾಡಿ, ರಾಷ್ಟ್ರೀಯ ಬ್ಯಾಂಕುಗಳಲ್ಲಿ ಇರುವಂತಹ ರೈತರ ಸಾಲವನ್ನು ಮನ್ನಾ ಮಾಡಿ ಎಂದು ಕೇಳಿಕೊಳ್ಳುತ್ತೇವೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು 31ನೇ ಡಿಸೆಂಬರ್ 2009ರಲ್ಲಿ ಹೇಳಿದಂತೆ ಈಗ ನಾವೆಲ್ಲರೂ ಅವರ ಮೂಲಕ, 'ರಾಜ್ಯದ ರೈತರ ಸುಮಾರು 34,000 ಕೋಟಿ ರೂಪಾಯಿಗಳ ಸಾಲವನ್ನು ಒಂದೇ ಬಾರಿಗೆ ಮನ್ನಾ ಮಾಡುವುದಕ್ಕೆ ಸಾಧ್ಯವಾಗುವ ಆರ್ಥಿಕ ಪರಿಸ್ಥಿತಿ ನಮ್ಮ ರಾಜ್ಯದಲ್ಲಿಲ್ಲ. ಅದಕ್ಕೋಸ್ಕರ ಈ ದೇಶದ ಪ್ರಧಾನಮಂತ್ರಿಗಳಲ್ಲಿ ಮತ್ತು ಭಾರತೀಯ ಜನತಾ ಪಕ್ಷದವರಲ್ಲಿ ಮನವಿ ಮಾಡುತ್ತಿದ್ದೇವೆ, ತಮಗೆ ರೈತರ ಬಗ್ಗೆ ಕಾಳಜಿ ಇರುವುದಾದರೆ, ತಮ್ಮನ್ನು ಜನರು ಮೆಚ್ಚಬೇಕಾದರೆ, ಸಮಯವನ್ನು ವ್ಯರ್ಥ ಮಾಡದೇ, ಹೇಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಪೋರೇಟ್ ಕಂಪನಿಗಳ ಸಾಲವನ್ನು ಮನ್ನಾ ಮಾಡಿದರೋ ಅದೇ ರೀತಿಯಲ್ಲಿ ಈ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡಬೇಕು' ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸೆಸ್ ವಿಧಿಸಿರುವುದು ಸರಿಯಲ್ಲ. ಮಾನ್ಯ ಮನಮೋಹನ್‌ಸಿಂಗ್‌ರವರು 2014ರ ಮೇ ತಿಂಗಳಿನಲ್ಲಿ ಈ ದೇಶದ ಪ್ರಧಾನ ಮಂತ್ರಿಗಳ ಸ್ಥಾನವನ್ನು ಬಿಟ್ಟುಕೊಡುವಾಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಬ್ಯಾರೆಲ್ ಕಚ್ಚಾ ತೈಲದ ಬೆಲೆ 139 ಡಾಲರ್ ಆಗಿತ್ತು. ಆದರೆ, ಇವತ್ತು ಅದರ ದರ 65 ಡಾಲರ್‌ಗೆ ಕುಸಿದಿದೆ. ಆದರೂ ರಾಷ್ಟ್ರವ್ಯಾಪಿ ಪೆಟ್ರೋಲ್ ಮತ್ತು ಡೀಸೆಲ್ ಕಡಿಮೆ ದರದಲ್ಲಿ ಜನ ಸಾಮಾನ್ಯರಿಗೆ ಸಿಗುತ್ತಿಲ್ಲ. ಅದು percolate ಆಗಿಲ್ಲ. ಇದಕ್ಕೆ ಕೇಂದ್ರ ಸರ್ಕಾರದವರು ಅವರದೇ ಆಗಿರುವ ಕಾರಣಗಳನ್ನು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದವರು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸಿಜಿಎಸ್‌ಟಿ ಅನ್ನು ಹೆಚ್ಚು ಮಾಡುತ್ತಿದ್ದಾರೆ ಎನ್ನುವ ಕಾರಣಕ್ಕಾಗಿ ರಾಜ್ಯದಲ್ಲಿ ಮಾನ್ಯ ಸಿದ್ದರಾಮಯ್ಯನವರು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸೆಸ್ ಅನ್ನು ಕಡಿಮೆ ಮಾಡಿದ್ದರು. ಈಗ ರೈತರ ಸಾಲ ಮನ್ನಾ ಮಾಡುವುದಕ್ಕಾಗಿ ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸೆಸ್ ವಿಧಿಸುತ್ತಿರುವುದು ಸರಿಯಲ್ಲ ಇದು ಜನಸಾಮಾನ್ಯರ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ, ದಯಮಾಡಿ ಇದನ್ನು ಕೈಬಿಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಕೇಂದ್ರ ಸರ್ಕಾರದ ಮೇಲೆ ಮತ್ತೊಮ್ಮೆ ಒತ್ತಡ ತಂದು ಸಾಲ ಮನ್ನಾದ ಬಗ್ಗೆ ಕೇಳೋಣ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಎಲ್ಲಿ ಪರ್ಯಾಯ ಅಥವಾ ಅಧಿಕ ಆದಾಯ ದೊರೆಯಬಹುದು ಎನ್ನುವುದರ ಬಗ್ಗೆ ಆಲೋಚನೆ ಮಾಡಿದರೆ, ಕಳೆದ ಅಧಿವೇಶನದಲ್ಲಿ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದಂತೆ ಕೇಬಲ್ ಆಪರೇಟರ್‌ಗಳಿಂದ ಕನಿಷ್ಠ 5,000 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಆದಾಯವನ್ನು ಪಡೆದುಕೊಳ್ಳುವ ಬಗ್ಗೆ ಬಹಳ ವಿಸ್ತಾರವಾಗಿ ಹೇಳಿದ್ದೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಬಹುಶಃ ಈ ರೀತಿ ಪರ್ಯಾಯ ಆದಾಯವನ್ನು ಪಡೆದುಕೊಳ್ಳುವ ಮಾರ್ಗಕ್ಕೆ ಸರ್ಕಾರ ಮುಂದಾಗಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಆಯವ್ಯಯದಲ್ಲಿ ಬಹಳಷ್ಟು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಈ ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡಾ 50ರಷ್ಟು ಮಹಿಳೆಯರಿದ್ದಾರೆ. 0-18 ವಯೋಮಾನದಲ್ಲಿರುವವರು ಸುಮಾರು ಶೇಕಡಾ 38ರಷ್ಟು ಇದ್ದಾರೆ. ಈ ರಾಜ್ಯದಲ್ಲಿ ಮಹಿಳೆಯವರು ಮತ್ತು ಮಕ್ಕಳು ಬಹು ಸಂಖ್ಯಾತರಾಗಿದ್ದಾರೆ. ನನಗೆ ಬಹಳ ನೋವನ್ನುಂಟು ಮಾಡಿದ ಸಂಗತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನೆಂದರೆ, ಇಡೀ ಆಯವ್ಯಯದಲ್ಲಿ ಎಲ್ಲಿಯೂ ಮಹಿಳೆಯವರು ಮತ್ತು ಮಕ್ಕಳ ರಕ್ಷಣೆಯ ದೃಷ್ಟಿಯಿಂದ ಏನೇನು ಕ್ರಮಗಳನ್ನು ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ವರದಿಯನ್ನು ನೀಡಲು ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ ನಿಯಂತ್ರಿಸುವ ಮತ್ತು ವರದಿಯನ್ನು ನೀಡುವ ತಜ್ಞರ ಸಮಿತಿಯನ್ನು ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ರಚನೆ ಮಾಡಲಾಗಿತ್ತು. ಮಾನ್ಯ ಎಂ.ಸಿ.ನಾಣಯ್ಯನವರು ಅಧ್ಯಕ್ಷರಾಗಿದ್ದ ಆ ಸಮಿತಿಗೆ ಸುಮಾರು 40 ಜನ ಶಾಸಕರು ಸದಸ್ಯರಾಗಿದ್ದರು. ತಾವು ಸಹ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದೀರಿ. ಶ್ರೀಯುತರುಗಳಾದ ಕೆ.ವಿ.ಶಾಣಪ್ಪ, ಶರಣಪ್ಪ ಮಟ್ಟೂರ, ಶ್ರೀಮತಿ ತಾರಾಅನೂರಾಧ ಹಾಗು ಡಾಃಜಯಮಾಲ ರಾಮಚಂದ್ರರವರು ಈ ಸಮಿತಿಯ ಸದಸ್ಯರುಗಳಾಗಿ ಕಾರ್ಯವನ್ನು ನಿರ್ವಹಿಸಿದ್ದರು. ರಾಜ್ಯದ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಮಾಡಿ ಸುಮಾರು ಆರು ಸಾವಿರ ಪುಟಗಳ 11 ಸಂಪುಟಗಳ ವರದಿಯನ್ನು ದಿನಾಂಕಃ 23.03.2018ರಲ್ಲಿ ನೀಡಲಾಯಿತು. ಈ ವರದಿಯನ್ನು ಯಾರೋ ನೀಡಿರುವ ವರದಿಯಲ್ಲ. ಸರ್ಕಾರವೇ ನೇಮಕ ಮಾಡಿದ್ದ ಸಚಿವ ಸಂಪುಟ ದರ್ಜೆಯ ಸಮಿತಿ ನೀಡಿರುವ ವರದಿ. ಈ ಸಮಿತಿಗೆ ನಾನೇ ಅಧ್ಯಕ್ಷನಾಗಿದ್ದೆ. ಆ ಸಮಿತಿಯು ತನ್ನ ಪ್ರಾಥಮಿಕ ವರದಿಯಲ್ಲಿ 17 ಶಿಫಾರಸ್ಸುಗಳನ್ನು ಮತ್ತು ಅಂತಿಮ ವರದಿಯಲ್ಲಿ 135 ಶಿಫಾರಸ್ಸುಗಳನ್ನು ನೀಡಿದೆ. ಆ 135 ಶಿಫಾರಸ್ಸುಗಳಲ್ಲಿ ಕೆಲವೊಂದು ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಜಾರಿಗೆ ತರುವಂತಹ ಪ್ರಯತ್ನಗಳನ್ನು ನಡೆಸಿದೆ. ಯಾರ ಮೇಲೆ ಅತ್ಯಾಚಾರವಾಗುತ್ತದೆ, ಯಾರು ಅಪಹರಣವಾಗಿರುತ್ತಾರೆ, ಯಾರ ಮೇಲೆ ವರದಕ್ಷಿಣೆ ಮತ್ತು ಕೌಟುಂಬಿಕ ದೌರ್ಜನ್ಯಗಳು ನಡೆದಿರುತ್ತವೆ ಅಂತಹ ಪ್ರಕರಣಗಳಲ್ಲಿ, ನಮ್ಮ ನಾಡಿನಲ್ಲಿ ಶೇಕಡಾ 3ರಷ್ಟು ಮಾತ್ರ conviction rate ಇದೆ. ಈ ಶೇಕಡಾ 3ರನ್ನು ಶೇಕಡಾ 60ಕ್ಕೆ ಅಥವಾ ಶೇಕಡಾ 95ಕ್ಕೆ ಏರಿಸಿದರೆ ಈ ರಾಜ್ಯದಲ್ಲಿ ಮಕ್ಕಳ ಮತ್ತು ಹೆಣ್ಣು ಮಕ್ಕಳ ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ವಿಶೇಷ ನ್ಯಾಯಾಲಯಗಳನ್ನು ಮತ್ತು ವಿಶೇಷ ನ್ಯಾಯಾಧೀಶರನ್ನು ನೇಮಕ ಮಾಡುವುದರ ಜೊತೆಗೆ ವಿಶೇಷ ಪೊಲೀಸ್ ಠಾಣೆಗಳನ್ನು ಸ್ಥಾಪನೆ ಮಾಡುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, 'ನಿರ್ಭಯಾ ನಿಧಿ' ಯಲ್ಲಿ ಮೊದಲು 200 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು ಈಗ ಅದರ ಮೊತ್ತ 2000 ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ. ಆದರೆ, ಇಲ್ಲಿಯವರೆಗೆ ನಮ್ಮ ರಾಜ್ಯದಲ್ಲಿ ಅತ್ಯಾಚಾರ ಅಥವಾ ಬೇರೆ ರೀತಿಯಲ್ಲಿ ದೌರ್ಜನ್ಯಕ್ಕೊಳಗಾದವರಿಗೆ ರಾಜ್ಯ ಸರ್ಕಾರದವರು 'ನಿರ್ಭಯಾ ನಿಧಿ'ಯಿಂದ ಒಂದೇ ಒಂದು ಪೈಸೆಯನ್ನು ಸಹ ಪಡೆದುಕೊಂಡಿಲ್ಲ. In rape cases, as per the provisions of Criminal Procedure Code, ಮೂರು ತಿಂಗಳಲ್ಲಿ ಚಾರ್ಜ್‌ಶೀಟ್ ಫೈಲ್ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಾರ್ಜ್‌ಶೀಟ್ ಹಾಕಿದ ದಿನದಿಂದ 60 ದಿನಗಳೊಳಗಾಗಿ trial complete ಆಗಬೇಕು. ಆದರೆ, ಇವತ್ತು 8-9 ವರ್ಷಗಳಾದರೂ trial complete ಆಗುತ್ತಿಲ್ಲ. ಹಸುಳೆಗಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು POCSO (Protection of Children from Sexual Offences) ಕಾಯ್ದೆಯಡಿಯಲ್ಲಿ ದಾಖಲು ಮಾಡಲಾಗುತ್ತದೆ. ಈ ಪ್ರಕರಣಗಳನ್ನು ಒಂದು ವರ್ಷದೊಳಗಾಗಿ ಇತ್ಯರ್ಥಗೊಳಿಸಬೇಕಾಗುತ್ತದೆ. ಆದರೆ, 3-4 ವರ್ಷಗಳಾದರೂ ಸಹ ಈ ಪ್ರಕರಣಗಳು ಮುಕ್ತಾಯದ ಹಂತವನ್ನು ಕಾಣುತ್ತಿಲ್ಲ. ನಾನು ಏನು ನಿರೀಕ್ಷೆ ಮಾಡಿದ್ದೆ ಎಂದರೆ, ರಾಜ್ಯ ಸರ್ಕಾರ ತೆಗೆದುಕೊಂಡಿರುವ ಸುಮಾರು ಆರು ಸಾವಿರ ಪುಟಗಳ ವರದಿಯ ಆಧಾರದ ಮೇಲೆ ಈ ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ಮಹಿಳೆಯವರು ಮತ್ತು ಮಕ್ಕಳ ಹಿತವನ್ನು ಕಾಪಾಡುವುದಕ್ಕೆ ಕ್ರಮವನ್ನು ಜರುಗಿಸಲಾಗುತ್ತದೆ ಮತ್ತು ಹಣವನ್ನು ಮೀಸಲಿಡಲಾಗುತ್ತದೆಂದು ಕಾಯುತ್ತಿದ್ದೆ, ಆ ರೀತಿಯ ಯಾವುದೇ ಅಂಶಗಳು ಈ ಆಯವ್ಯಯದಲ್ಲಿ ಕಂಡುಬರದೇ ಇರುವುದು ಬಹಳ ನೋವಿನ ಸಂಗತಿಯಾಗಿದೆ. ಈ ವರದಿಯನ್ನು ಸದನದ ಮುಂದೆ ಮಂಡಿಸಿ ಅದರ ಮೇಲೆ ಚರ್ಚೆ ಮಾಡಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಆ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

(ಮುಂದು)

(293) 12.7.2018 6.40 ಪಿಕೆ:ಆರ್‌ಎನ್

ಶ್ರೀ ವಿ.ಎಸ್.ಉಗ್ರಪ್ಪ(ಮುಂದುವರೆದುದು)

ಮಾನ್ಯ ಸಭಾಪತಿಯವರೇ, ಇಸ್ರೇಲ್ ದೇಶದಲ್ಲಿ ಅಳವಡಿಸಿಕೊಂಡಿರುವ ಕೃಷಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇಸ್ರೇಲ್ ದೇಶದಲ್ಲಿ ಅತಿ ಹೆಚ್ಚು ಬರಡು ಭೂಮಿ ಇದೆ. ಅವರು ಸಮುದ್ರದ ನೀರನ್ನು ಶುದ್ಧೀಕರಣಗೊಳಿಸಿ ನೀರಾವರಿಗೆ ಬಳಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕಾವೇರಿ, ಕೃಷ್ಣಾ, ಗೋದಾವರಿ, ಪಶ್ಚಿಮಘಟ್ಟಗಳು, ಪಿನಾಕಿನಿ ಇಷ್ಟೊಂದು ನದಿಗಳ ಮೂಲದಿಂದ 4000 ಟಿಎಂಸಿ ನೀರು ಲಭ್ಯವಾಗುತ್ತದೆ. 4000 ಟಿಎಂಸಿ ಯಲ್ಲಿ ಕಳೆದ 70 ವರ್ಷಗಳಿಂದ ಬಳಕೆ ಮಾಡಿಕೊಳ್ಳುತ್ತಿರುವುದು ಸುಮಾರು 2000 ಟಿಎಂಸಿ ನೀರು ಮಾತ್ರ. 2000 ಟಿಎಂಸಿ ನೀರು ಇವತ್ತು ಸಮುದ್ರದ ಪಾಲಾಗುತ್ತಿದೆ. ತಲಕಾವೇರಿಯಿಂದ ಹಿಡಿದು ಬೆಳಗಾವಿಯ ಖಾನಪುರದವರೆಗೆ ಬೀಳುವ ಹೆಚ್ಚಿನ ಮಳೆ ನೀರು ಸಮುದ್ರದ ಪಾಲಾಗುತ್ತಿದೆ. ಇವತ್ತು ವಿಜ್ಞಾನ, ತಂತ್ರಜ್ಞಾನ ಕ್ಷೇತ್ರ ಅಡ್ವಾನ್ಸ್ ಆಗಿದೆ. ನೀರಾವರಿ ತಜ್ಞರಾದ ಶ್ರೀ ಪರಮಶಿವಯ್ಯನವರು ಏನು ಹಿಂದೆ ವರದಿಯನ್ನು ಕೊಟ್ಟಿದ್ದಾರೋ, ಅದರ ಪ್ರಕಾರ ಪಶ್ಚಿಮ ಘಟ್ಟಗಳಿಂದ ಹರಿದು ಹೋಗುವಂತಹ ನೀರನ್ನು ಸದ್ಬಳಕೆ ಮಾಡಿಕೊಳ್ಳುವಂಥ ಮನಸ್ಸು ಮಾಡಿ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿದ್ದರಾಮಯ್ಯನವರು ಬಜೆಟ್‌ನಲ್ಲಿ 1 ಲಕ್ಷ 25 ಸಾವಿರ ಕೋಟಿ ರೂಪಾಯಿಗಳನ್ನು ಬರುವ 5 ವರ್ಷಗಳಲ್ಲಿ ವೆಚ್ಚ ಮಾಡುತ್ತೇವೆ ಎಂದು ಹೇಳಿದ್ದಾರೆ. ಬೇರೆ ಯೋಜನೆಗಳಿಗೆ ಹಣ ಕಡಿಮೆಯಾದರೂ ಚಿಂತೆ ಇಲ್ಲ, ಯುದ್ಧೋಪಾದಿಯಲ್ಲಿ ನೀರನ್ನು ಬಳಸಿಕೊಳ್ಳುವ ಕೆಲಸ ಆಗಬೇಕು. ಆಗ ನಮ್ಮ ರಾಜ್ಯ ನಂದನವನ ಆಗುತ್ತದೆ. ಆಗ ಈ ರಾಜ್ಯದ ರೈತರು ಸಾಯುವುದಿಲ್ಲ. ಎಲ್ಲರಿಗೂ ಸಹ ಉದ್ಯೋಗ ಸಿಗುತ್ತದೆ. ಸರ್ಕಾರ ಸಾಲ ಮಾಡುತ್ತದೆಯೋ, ಕೇಂದ್ರ ಸರ್ಕಾರದಿಂದ ಹಣ ತರುತ್ತದೆಯೋ ಅಥವಾ ವಿಶ್ವಬ್ಯಾಂಕ್‌ನಿಂದ ಹಣ ತರುತ್ತದೆಯೋ ಗೊತ್ತಿಲ್ಲ; ಒಟ್ಟಿನಲ್ಲಿ ಈ ರಾಜ್ಯದಲ್ಲಿ ಸಿಗುವ ನೀರನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಹೆಚ್ಚುವರಿ ನೀರು ಸಮುದ್ರಕ್ಕೆ ಹೋದರೆ ಚಿಂತೆಯಿಲ್ಲ. ಒಂದು ಕಡೆ, ಕಡಲ ತೀರದಲ್ಲಿರುವ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಸುರಿಯುತ್ತಿದೆ. ಆದರೆ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಈ ಭಾಗದಲ್ಲಿ ಈಗಲೂ ಮಳೆ ಬಿದ್ದಿಲ್ಲ, ಬಿತ್ತನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ರೈತರು ಬಹಳ ಕಷ್ಟದಲ್ಲಿದ್ದಾರೆ.

ಸಾಲ ಮನ್ನಾವನ್ನು ಇತಿಹಾಸದಲ್ಲಿ ಎಲ್ಲೋ ಒಂದು ಸಲ ಅಥವಾ ಎರಡು ಸಲ ಮಾಡುವುದು ಬೇರೆ. ಆದರೆ ರೈತರನ್ನು ಸಬಲೀಕರಣಗೊಳಿಸಬೇಕಾದರೆ, ಅವರು ತಮ್ಮ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ, ಕೃಷಿ, ತೋಟಗಾರಿಕೆ ಇತ್ಯಾದಿಗಳಿಗೆ ಸಹಾಯ ಹಸ್ತ ನೀಡಬೇಕು, ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಆಗ ಮಾತ್ರ ಈ ರಾಜ್ಯ ನಂದನವನ ಆಗುವುದಕ್ಕೆ ಸಾಧ್ಯವಿದೆ. ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು, ಸಮಾನ ಅವಕಾಶದ ವ್ಯವಸ್ಥೆ ಆಗುತ್ತದೆ.

ಮಾನ್ಯ ಸಭಾಪತಿಯವರೇ, ಅನೇಕರು ಈ ಸರ್ಕಾರವನ್ನು ಸಾಂದರ್ಭಿಕ ಶಿಶು ಎಂದು ಹೇಳುತ್ತಿದ್ದಾರೆ. ಸಾಂದರ್ಭಿಕ ಶಿಶು ಎಂದರೆ, ಅಸ್ವಾಭಾವಿಕವಾಗಿ ಹುಟ್ಟಿದ ಮಗು ಎನ್ನುವುದು ಕೆಲವರ ವಾದ. ಶಕುಂತಲೆ ಮತ್ತು ದುಷ್ಯಂತನ ಮಗ ಭರತ ಇವರ ಕುರಿತು ನಾನು ಆಗಲೇ ಪ್ರಸ್ತಾಪ ಮಾಡಿದೆ. ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಇವರುಗಳೂ ಸಹ ಸ್ವಾಭಾವಿಕವಾಗಿ ಹುಟ್ಟಲಿಲ್ಲ, ಪಾಯಸದ ಮೂಲಕ ಹುಟ್ಟಿದವರು. ಕರ್ಣ ಕೂಡ ಅಸ್ವಾಭಾವಿಕವಾಗಿ ಅಂದರೆ, ಸಾಂದರ್ಭಿಕವಾಗಿ ಹುಟ್ಟಿದ ಶಿಶು. ಸಾಂದರ್ಭಿಕವಾಗಿ ಹುಟ್ಟಿದಂತಹ ಕರ್ಣನ ಪಾತ್ರ ಒಂದು ರೀತಿ, ಸಾದರ್ಭಿಕವಾಗಿ ಹುಟ್ಟಿದ ಭರತ ಚಕ್ರವರ್ತಿಯ ಬದುಕು ಒಂದು ರೀತಿ, ಶಕುಂತಲೆಯ ಬದುಕು ಇನ್ನೊಂದು ರೀತಿ, ಶ್ರೀರಾಮನ ಬದುಕು ಮತ್ತೊಂದು ರೀತಿ. ಸಾಂದರ್ಭಿಕ ಶಿಶು ಎಂದು ಹೇಳುವಾಗ, ಬಹುಶಃ ಆ ಪಾಯಸದ ಮೂಲಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೌಸಲ್ಯ, ಸುಮಿತ್ರ, ಕೈಕೇಯಿೀಯ ನಾಲ್ಕು ಜನ ಮಕ್ಕಳ ಹೇಗಿದ್ದಾರೋ ಹಾಗೆಯೇ ಈ ಸರ್ಕಾರದಲ್ಲಿ, ರಾಮ–ಲಕ್ಷ್ಮಣರ ರೀತಿಯಲ್ಲಿ, ಸಾಂದರ್ಭಿಕ ಶಿಶುಗಳಾಗಿ ಸರ್ಕಾರವನ್ನು ಮುನ್ನಡೆಸುವಂಥವರು ಕೆಲಸ ಮಾಡುತ್ತಿದ್ದಾರೆ. ಬಹುಶಃ ಆಕಡೆ ಕುಮಾರಸ್ವಾಮಿಯವರು ಇದ್ದಾರೆ, ಈಕಡೆ ಸಿದ್ಧರಾಮಯ್ಯನವರು ಇದ್ದಾರೆ. ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ತಮ್ಮ ರಾಜ್ಯವನ್ನು, ಧರ್ಮವನ್ನು ಉಳಿಸುವುದಕ್ಕೆ ಏನು ಪ್ರಯತ್ನ ಮಾಡಿದರೋ ಅದೇರೀತಿಯ ಕೆಲಸವನ್ನು ಸಾಂದರ್ಭಿಕ ಸರ್ಕಾರದ ಶಿಶುಗಳಾಗಿರುವ ಸನ್ಮಾನ್ಯ ಸಿದ್ದರಾಮಯ್ಯ, ಸನ್ಮಾನ್ಯ ಜಿ.ಪರಮೇಶ್ವರ್ ಮತ್ತು ಸನ್ಮಾನ್ಯ ಕುಮಾರಸ್ವಾಮಿ ಇನ್ನಿತರ ಎಲ್ಲಾ ಮಂತ್ರಿಮಂಡದವರು ಸೇರಿ ಈ ರಾಜ್ಯವನ್ನು ಉಳಿಸುವುದಕ್ಕೆ ಬದ್ಧತೆಯನ್ನು ತೋರಿಸುತ್ತಾರೆ ಎನ್ನುವ ಮಾತನ್ನು ಹೇಳಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ಜಯಮಾಲ (ಸಭಾನಾಯಕರು) :–**ಮಾನ್ಯ ಸಭಾಪತಿಯವರೇ, ನಿಯಮ 72ರ ಅಡಿಯಲ್ಲಿ ಸ್ವೀಕೃತವಾಗಿದ್ದಂತಹ 62 ಸೂಚನೆಗಳ ಪೈಕಿ 14 ಸೂಚನೆಗಳನ್ನು ಚರ್ಚೆಗೆ ತೆಗೆದುಕೊಂಡು ಉತ್ತರಿಸಲಾಗಿದ್ದು, ಉಳಿದ 15 ಸೂಚನೆಗಳಿಗೆ ಬಂದಿರುವ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ನಿಯಮ 330ರ ಅಡಿ ಸ್ವೀಕೃತವಾಗಿದ್ದ 24 ಸೂಚನೆಗಳ ಪೈಕಿ 6 ಸೂಚನೆಗಳು ಚರ್ಚೆಯಾಗಿದ್ದು, ಉಳಿದ 3 ಸೂಚನೆಗಳಿಗೆ ಬಂದಿರುವ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ದಿನಾಂಕ 12ನೇ ಜುಲೈ 2018ರ ಸಮೂಹ–4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 89 ಪ್ರಶ್ನೆಗಳ ಪೈಕಿ ಈಗಾಗಲೇ 52 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗಿದ್ದು, ತಡವಾಗಿ ಬಂದ 25 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ದಿನಾಂಕ: 9.7.2018ರಂದು ಹಾಗೂ ಶ್ರೀ ಎಸ್.ನಾಗರಾಜುರವರು ದಿನಾಂಕ: 10.7.2018ರಂದು ಮತ್ತು ಮಾನ್ಯ ಎಂ.ಪಿ.ಸುನೀಲ್ ಸುಬ್ರಮಣಿರವರು, ಮಾನ್ಯ ರುದ್ರೇಗೌಡರು, ಮಾನ್ಯ ತಾರಾಅನೂರಾಧರವರು ದಿನಾಂಕ 11.7.2018ರಂದು ಶೂನ್ಯವೇಳೆ ಅಡಿ ಪ್ರಸ್ತಾಪಿಸಿದ ಸೂಚನೆಗಳಿಗೆ ಉತ್ತರಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಶ್ರೀ ಎಸ್. ರುದ್ರೇಗೌಡ :– (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಮೊದಲ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯನಾಗಿ ಈ ಸದನದಲ್ಲಿ ಉಪಸ್ಥಿತನಿದ್ದೇನೆ. ಈ ಸಂದರ್ಭದಲ್ಲಿ 2018–19ರ ಆಯವ್ಯಯದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಆಯಾ ಪಕ್ಷದ ಹಿರಿಮೆ–ಗರಿಮೆಗಳು, ಈ ನಾಡನ್ನು ಕಟ್ಟುವಲ್ಲಿ ಮಾಡಿದಂತಹ ಹಲವಾರು ಹೊಂದಾಣಿಕೆಗಳ ಬಗ್ಗೆ ಪರ–ವಿರೋಧ ಚರ್ಚೆಗಳಾಯಿತು. ನಾನು ಕೈಗಾರಿಕಾ ಕ್ಷೇತ್ರದಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿದ್ದೇನೆ. 1970ರ ದಶಕದಲ್ಲಿ ಸನ್ಮಾನ್ಯ ವೈ.ಆರ್.ಪರಮೇಶ್ವರಪ್ಪನವರು ಪರಿಷತ್ತಿನ ಸದಸ್ಯರಾದಾಗ ನನಗೆ ಗ್ಯಾಲರಿಯಲ್ಲಿ ಕುಳಿತು ಎಲ್ಲಾ ನಡವಳಿಗಳನ್ನು ನೋಡುವ ಅವಕಾಶ ಕಲ್ಪಿಸಿಕೊಟ್ಟಿದ್ದರು. ಮುಖ್ಯಮಂತ್ರಿಗಳಾಗಿ, ಈ ನಾಡಿಗೆ ಒಂದು ಗೌರವವನ್ನು ತಂದು ಕೊಟ್ಟ, ರಾಷ್ಟ್ರ ಮಟ್ಟದಲ್ಲಿ ಕರ್ನಾಟಕದ ಗರಿಮೆ ಹೆಚ್ಚಿಸಿದಂತಹ ದಿವಂಗತ ಸನ್ಮಾನ್ಯ ಕೆಂಗಲ್ ಹನುಮಂತಯ್ಯನವರನ್ನು ನೆನೆಸಿಕೊಂಡಿದ್ದೇವೆ, ಸನ್ಮಾನ್ಯ ದಿವಂಗತ ನಿಜಲಿಂಗಪ್ಪನವರನ್ನು ನೆನೆಸಿಕೊಂಡಿದ್ದೇವೆ; ಅದೇರೀತಿ ದಿವಂಗತ ಸನ್ಮಾನ್ಯ ರಾಮಕೃಷ್ಣ ಹೆಗ್ಗಡೆಯವರು, ಮಾನ್ಯ ಜೆ.ಹೆಚ್. ಪಟೇಲ್‌ರವರನ್ನೂ ನೆನೆಸಿಕೊಂಡಿದ್ದೇವೆ. ಇದೇರೀತಿ ಶ್ರಮಿಸಿ, ಇಷ್ಟೇ ಗೌರವಕ್ಕೆ ಪಾತ್ರರಾದ ಇಬ್ಬರು ಹಿರಿಯರು ನಮ್ಮ ಜೊತೆಗಿದ್ದಾರೆ. ಅವರು, ಸನ್ಮಾನ್ಯ ಎಸ್.ಎಂ.ಕೃಷ್ಣರವರು ಮತ್ತು ಸನ್ಮಾನ್ಯ ದೇವೇಗೌಡರು. ಇದರ ಜೊತೆಯಲ್ಲಿ, ವಿಶೇಷ ರೀತಿಯಲ್ಲಿ ರಾಜಕೀಯ ಕ್ಷೇತ್ರದಲ್ಲಿ ಬೆಳೆದು, ರೈತರಿಗೋಸ್ಕರ, ಬಡ ಜನರಿಗೋಸ್ಕರ ಹೋರಾಟ ಮಾಡಿ ಮುಖ್ಯಮಂತ್ರಿ ಪದವಿಯನ್ನು ಏರಿದವರು ಎಂದರೆ ಮಾನ್ಯ ಯಡಿಯೂರಪ್ಪನವರು. ಅವರ ಹೋರಾಟ, ರೈತಪರ ಕಾಳಜಿಯನ್ನು ತಾವೆಲ್ಲರೂ ಮೆಚ್ಚಿಕೊಂಡಿದ್ದೀರಿ. ಎಲ್ಲಾ ಪಕ್ಷದವರೂ ಕೂಡ ಅವರನ್ನು ಒಪ್ಪಿಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ನಾನು ಈ ಹಿಂದೆ 2006 ರಿಂದ 2011ರವರೆಗೆ ಲೋಕಸೇವಾ ಆಯೋಗದಲ್ಲಿ ಒಬ್ಬ ಸದಸ್ಯನಾಗಿ ಕೆಲಸ ಮಾಡಿದ್ದೆ.

(ಮುಂದು)

(294)12-7-2018 6.50 ಡಿಎಸ್-ಆರ್‌ಸಿ

**ಶ್ರೀ ಎಸ್.ರುದ್ರೇಗೌಡ(ಮುಂದು):-**

ಭಾರತೀಯ ಜನತಾ ಪಕ್ಷದ ಸರ್ಕಾರ ನನಗೆ ಒಂದು ಅವಕಾಶವನ್ನು ಕೊಟ್ಟಿತ್ತು. ಅದೇ ಪಕ್ಷ ಮತ್ತೊಮ್ಮೆ ಇವತ್ತು ನನಗೆ ಅವಕಾಶವನ್ನು ಕೊಟ್ಟಿದೆ. ಕೆಲವು ಕ್ಷಣಗಳ ಹಿಂದೆ ಹಿರಿಯರಾದಂತಹ ಮಾನ್ಯ ಶಾಣಪ್ಪನವರು, ಅದೇ ರೀತಿ ನಿರ್ಗಮಿಸುತ್ತಿರುವಂತಹ ಮತ್ತೊಬ್ಬ ಶಾಸಕಿ ಸಹೋದರಿಯವರಾದ ಶ್ರೀಮತಿ ತಾರ ರವರು ಅದ್ಭುತವಾದ ಮಾರ್ಗದರ್ಶನದ ನುಡಿಗಳು ಈಗಲೂ ಕೂಡ ಒಂದು ರೀತಿ ನನಗೆ ಸ್ಫೂರ್ತಿಯಾಗಿ, ಮತ್ತೊಂದು ಕಡೆ ನಮ್ಮ ಕರ್ತವ್ಯವನ್ನು ಎಚ್ಚರಿಸುವಂತಹ ರೀತಿಯಲ್ಲಿ ಕಿವಿಯಲ್ಲಿ ಮಾರ್ಧನಿಸುತ್ತಿದೆ. ಈಗ ತಾನೇ ಹಿರಿಯರಾದ ಮಾನ್ಯ ಉಗ್ರಪ್ಪನವರು ಮಾಡಿದಂತಹ ಅದ್ಭುತವಾದ ಕೆಲವು ಚರ್ಚೆಗಳನ್ನು ನಾವು ಕೇಳಿದ್ದೇವೆ. ಒಂದು ಹಂತದಲ್ಲಿ ಅವರು ಆಯವ್ಯಯದ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಆದರೆ, ಅದರ ತೀವ್ರತೆ ನನಗೆ ಗೊತ್ತಾಗಲಿಲ್ಲ. ಯಾವುದೇ ಒಂದು ಆರ್ಥಿಕ ವರ್ಷದಲ್ಲಿ ಒಮ್ಮೆ ನಾವು ಆಯವ್ಯಯವನ್ನು ಮಂಡಿಸಿದ ನಂತರ ಮತ್ತೊಮ್ಮೆ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯವ್ಯಯವನ್ನು ಮಂಡಿಸಿದಾಗ ಅದು ಪೂರಕವಾಗಿರಬೇಕು ಅಥವಾ ಅದಕ್ಕೊಂದು ಪೂರಕವಾದ ಆಯವ್ಯಯವಾಗುತ್ತದೆ, ಇಲ್ಲದಿದ್ದರೆ ಪರಿಷ್ಕೃತ ಆಯವ್ಯಯವಾಗುತ್ತದೆ. 2018-19 ರಲ್ಲಿ ಈಗಾಗಲೇ ಮೂರು ತಿಂಗಳುಗಳು ಕಳೆದಿವೆ. ಇದಾದ ನಂತರ ಮತ್ತೊಂದು ಆಯವ್ಯಯ ಪತ್ರ ನಮ್ಮ ಕೈಯಲ್ಲಿದೆ. ಈಗಾಗಲೇ ಸಾಕಷ್ಟು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆಗೊಳಗಾಗಿ ಅದರಲ್ಲಿರುವಂತಹ ಹಲವಾರು ಒಳ್ಳೆಯ ಅಂಶಗಳನ್ನು, ಹಲವಾರು ನ್ಯೂನತೆಗಳನ್ನು ಎಲ್ಲಾ ಗೌರವಾನ್ವಿತ ಸದಸ್ಯರುಗಳು ಗಮನಕ್ಕೆ ತಂದಿದ್ದಾರೆ. ಈ ಚರ್ಚೆಯ ಮುಖ್ಯ ಉದ್ದೇಶ ನಾನು ಅಂದುಕೊಂಡಿರುವುದು ಇಡೀ ರಾಜ್ಯದಲ್ಲಿ ಎಲ್ಲಾ ವರ್ಗದ ಜನಗಳಿಗೆ, ವಿಶೇಷವಾಗಿ ಯಾರಿಗೆ ಬೇರೆ ಬೇರೆ ಕಾರಣಗಳಿಗಾಗಿ ಜೀವನದಲ್ಲಿ ನೆಮ್ಮದಿಯಿಂದ ಬಾಳುವುದಕ್ಕಾಗುತ್ತಿಲ್ಲ ಅವರ ಕುಟುಂಬದವರಿಗೆ ಆರೋಗ್ಯದ ಕಡೆ ಗಮನ ಕೊಡುವುದಕ್ಕಾಗುತ್ತಿಲ್ಲ, ಅವರ ಕುಟುಂಬದ ಕುಡಿಗಳಿಗೆ ವಿದ್ಯಾಭ್ಯಾಸವನ್ನು ಕೊಡುವುದಕ್ಕಾಗುತ್ತಿಲ್ಲ, ಆ ನಿಟ್ಟಿನಲ್ಲಿ ಪ್ರತಿಯೊಂದು ಸರ್ಕಾರದ ಜವಾಬ್ದಾರಿ ಅದನ್ನು ಒಗಿಸುವ ಬಗ್ಗೆ ಚಿಂತನೆಗಳು ನಡೆಯಬೇಕು. ಈ ಸಂದರ್ಭದಲ್ಲಿ ಆಯವ್ಯಯ ಪತ್ರ ನಮ್ಮ ಕೈಗೆ ಪೂರ್ಣವಾಗಿ ದೊರೆತಿಲ್ಲ. ಆದರೂ ಕೂಡ ಅದರಲ್ಲಿ ನೋಡಿದಂತಹ ವ್ಯತ್ಯಾಸ ಕೇವಲ 9 ತಿಂಗಳಲ್ಲಿ 9,307 ಕೋಟಿ ರೂಪಾಯಿಗಳ ಹೆಚ್ಚುವರಿ ಆಯವ್ಯಯದ ವೀಕ್ಷಣೆಯಲ್ಲಿ ಕೊಡಲಾಗಿದೆ. ಸಾಲ ಮನ್ನಾ ಬಗ್ಗೆ ಹಲವಾರು ಗೊಂದಲಗಳಿರುವುದರ ಬಗ್ಗೆ ತಾವೆಲ್ಲರೂ ಚರ್ಚೆ ಮಾಡಿದ್ದೇವೆ. ನಾನು ಮತ್ತೊಮ್ಮೆ ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಸುಸ್ತಿ ಸಾಲ ಇರುವುದನ್ನು ಮಾತ್ರ ಮನ್ನಾ ಮಾಡಬೇಕೆನ್ನುವ ಆಲೋಚನೆಯಲ್ಲಿ ಬಜೆಟ್ ಮಂಡನೆಯಾದರೂ ಕೂಡ ರೈತರ ಸುಸ್ತಿ ಸಾಲ 34,000 ಕೋಟಿ ಮನ್ನಾ ಆಗುತ್ತದೆಯೇ ಎನ್ನುವ ಜಿಜ್ಞಾಸೆ ಕೂಡ ಇದೆ. ಇದರ ಬಗ್ಗೆ ಸಾಕಷ್ಟು ಅಂಕಿ-ಅಂಶಗಳು ನಮಗೆ ದೊರೆಯಬೇಕಾಗಿದೆ. ಆ ನಿಟ್ಟಿನಲ್ಲಿ ಸಾಕಷ್ಟು ಮಾಹಿತಿಯನ್ನು ಗೌರವಾನ್ವಿತ ಸದಸ್ಯರು ಈಗಾಗಲೇ ಒದಗಿಸಿದ್ದಾರೆ. ನಾನು ಗಮನಿಸಿರುವಂತಹ ಹಲವಾರು ವಿಷಯಗಳಲ್ಲಿ ಒಣ ಭೂಮಿ ಅಭಿವೃದ್ಧಿಗೆ ವಿಶೇಷವಾದ ಒತ್ತನ್ನು ಕೊಟ್ಟಿರುವಂಥದ್ದು. Post Harvesting ಅಂದರೆ ಒಂದು ಬೆಳೆಯ ಕೊಯ್ಲು ಆದನಂತರ ಅದನ್ನು ಸಂರಕ್ಷಣೆ ಮಾಡುವ ರೀತಿಯಲ್ಲಿ ವಿಶೇಷವಾಗಿ Vaccum Technology ಎನ್ನುವ ಇತ್ತೀಚಿನ ತಂತ್ರಜ್ಞಾನವನ್ನು ಬಳಸಿಕೊಂಡಿರುವಂಥದ್ದು. ಈ ಎಲ್ಲವೂ ಇದ್ದರೂ ಕೂಡ ನಾವು ಕೇಂದ್ರ ಸರ್ಕಾರದಿಂದ ಘೋಷಿತವಾಗಿರುವಂತಹ MSP (Minimum Support Price) ಅದರ ಬಗ್ಗೆ ರಾಜ್ಯ ಸರ್ಕಾರ ಮಾಡಬೇಕಾಗಿರುವಂತಹ ಖರೀದಿ ಕೇಂದ್ರಗಳ ಬಗ್ಗೆ ಪೂರಕವಾಗಿರುವಂತಹ ಯೋಜನೆಗಳು ಇದರಲ್ಲಿ ಪ್ರಸ್ತಾಪವಾಗಿಲ್ಲ ಎನ್ನುವುದು ಎದ್ದು ಕಾಣಿಸುತ್ತಿದೆ. ಅದೇ ರೀತಿ ಈಗಿನ ತಂತ್ರಜ್ಞಾನಕ್ಕೆ ತಕ್ಕಹಾಗೆ Bio-Technology ಯಲ್ಲಿ ಹಲವಾರು ತಾಂತ್ರಿಕತೆಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪಯೋಗಿಸಿಕೊಂಡು ಮಾಡಬಹುದಾದಂತಹ ಹಲವಾರು ಅವಿಷ್ಕಾರಗಳು, ಇತ್ತೀಚೆಗೆ ಆದಂತಹ Floriculture ಇರಬಹುದು, Green House Production ಇರಬಹುದು, ಈ ರೀತಿಯ ತಂತ್ರಜ್ಞಾನಗಳಿಗೆ ಉತ್ತೇಜನ ಕೊಡುವ ಅವಕಾಶ ಇದರಲ್ಲಿ ಪ್ರಸ್ತಾಪವಾಗಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೈಗಾರಿಕಾ ಕ್ಷೇತ್ರದ ಬಗ್ಗೆ ಹೇಳುವುದಾದರೆ, ನಿನ್ನೆ ಮಾನ್ಯ ಇಬ್ರಾಹಿಂ ರವರು ಸಾಕಷ್ಟು ವಿಸ್ತಾರವಾಗಿ ಕೈಗಾರಿಕಾ ಕ್ಷೇತ್ರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಬೆಂಗಳೂರು ಬೆಳೆದಿರುವ ರೀತಿಯಲ್ಲಿ ಬೆಂಗಳೂರಿಗೆ ಮತ್ತೆ ಹೆಚ್ಚು ಒತ್ತನ್ನು ಕೊಡುವುದರ ಬದಲು ಬೇರೆ ಬೇರೆ 2 ಮತ್ತು 3ನೇ ಹಂತದ ನಗರಗಳಿಗೆ ಹೆಚ್ಚಿಗೆ ಒತ್ತನ್ನು ಕೊಟ್ಟಿದ್ದರೆ ಇನ್ನು ವೇಗವಾಗಿ ಬೆಳೆಯಬಹುದಾಗಿತ್ತು. ಈ ನಗರಗಳಲ್ಲಿ ಒಂದು ರೀತಿಯ ದಟ್ಟನೆಯ ಸಮಸ್ಯೆ ಇದೆ ಅದಕ್ಕೊಂದು ಉತ್ತರ ಸಿಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ಕೈಗಾರಿಕಾ ಕ್ಷೇತ್ರದಲ್ಲಿ ನಾವು ಸಾಕಷ್ಟು ಆಶದಾಯಕವಾದ ಹಲವಾರು ಅಂಕಿ–ಅಂಶಗಳನ್ನು ನಾವು ಕೊಟ್ಟಿದ್ದೇವೆ. ಆದರೆ ವಾಣಿಜ್ಯ ಮತ್ತು ಕೈಗಾರಿಕೆಯವರು ಕೊಟ್ಟಿರುವಂತಹ ಮಾಹಿತಿ ಪ್ರಕಾರ ಕಳೆದ ಐದು ವರ್ಷಗಳಲ್ಲಿ 1263 ಘಟಕಗಳನ್ನು 2,87,342 ಕೋಟಿ ರೂಪಾಯಿಗಳ ಬಂಡವಾಳ ಹೂಡಿ ಸುಮಾರು 9 ಲಕ್ಷ ಜನರಿಗೆ ಉದ್ಯೋಗ ಕೊಡುತ್ತೇವೆಂದು ಹೇಳಿಕೊಂಡಿದ್ದೆವು. ಆದರೆ, ನಾವು ಸಾಧಿಸಿರುವುದೇನು? ಕೇವಲ 192 ಘಟಕಗಳು ಸ್ಥಾಪನೆಯಾಗಿವೆ. 60,210 ಕೋಟಿ ಮಾತ್ರ ಬಂಡವಾಳ ವಿನಿಯೋಗವಾಗಿದೆ. 1,25,112 ಜನರಿಗೆ ಉದ್ಯೋಗ ಕೊಡುವ ಮಟ್ಟಿಗೆ ಸಾಧ್ಯವಾಗಿದೆ. ಇದರ ಮುಂದುವರೆದ ಭಾಗವಾಗಿ ಇವುಗಳನ್ನು ಪುನಶ್ಚೇತನಗೊಳಿಸುವಂತಹ ಯಾವುದೇ ರೀತಿಯ ಪ್ರಸ್ತಾಪಗಳು ಆಯವ್ಯಯದಲ್ಲಿ ಚರ್ಚೆಯಾಗಿಲ್ಲ. ಅದರ ಜೊತೆಗೆ ಈಗಾಗಲೇ ಚರ್ಚೆಯಾಗಿರುವಂತಹ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಹಾಕಿರುವಂತಹ ತೆರಿಗೆ ಅದು ಕೇವಲ ಹಣದ ರೂಪದಲ್ಲಿಲ್ಲ. ಬೇರೆ ಬೇರೆ ಕ್ಷೇತ್ರಕ್ಕೂ ಅದು ನೇರವಾಗಿ ಅಲ್ಲಿನ ಉತ್ಪಾದನೆ ಮೇಲೆ ಪರಿಣಾಮ ಬೀರುತ್ತದೆ. ಸಾಮಗ್ರಿಗಳ ಬೆಲೆ ಮೇಲೂ ಪರಿಣಾಮ ಬೀರುತ್ತದೆ ಎನ್ನುವುದನ್ನು ಗಮನಿಸಬೇಕು. ಇವೆಲ್ಲದರ ಮಧ್ಯೆದಲ್ಲಿ ನಾವು ನಮ್ಮ ಆರ್ಥಿಕ ಸ್ಥಿತಿಗತಿಯ ಬಗ್ಗೆ ನೋಡಬೇಕಾಗಿದೆ. ಕಳೆದ ಐದು ವರ್ಷಗಳಲ್ಲಿ ಕೊಟ್ಟಿರುವಂತಹ ಸಿ.ಐ.ಜಿ. ವರದಿ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ಅವನ ತಲೆಯ ಮೇಲೆ ಕೇವಲ 13,000 ರೂಪಾಯಿಗಳ ಸಾಲ ಇದ್ದರೆ 2015 ರಿಂದ 2018 ರವರೆಗೆ 30,000 ರೂಪಾಯಿಗಳಾಗಿವೆ. ಅದರ ಜೊತೆಗೆ ಹಣದ ಅವಶ್ಯಕತೆಯ ಒತ್ತಡ ಹಣಕಾಸಿನ ಮೇಲೆ ಇದೆ. ಹಾಗಾಗಿ ಇದನ್ನೆಲ್ಲಾ ಈ ಸರ್ಕಾರ ಹೇಗೆ ಸರಿದೂಗಿಸುತ್ತದೆ ಎನ್ನುವುದರ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲ. ಇಷ್ಟನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಈ ಆಯವ್ಯಯದಲ್ಲಿ ಅತ್ಯಂತ ಹೆಚ್ಚು

ಪ್ರಸ್ತಾಪಿಸಿರುವಂತಹ ರೈತರ ಸಾಲದ ಬಗ್ಗೆ ಘೋಷಣೆಯನ್ನು ಮಾಡಲಾಗಿದೆ. ಜೊತೆಗೆ ಹಲವಾರು ಸುಧಾರಣೆಗಳನ್ನು ವಿಶೇಷವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡಿರುವಂತಹ ಹೋಬಳಿಗೊಂದು ವಸತಿ ಶಾಲೆ, ಇವೆಲ್ಲವೂ ಅತ್ಯಂತ ಒಳ್ಳೆಯ ಅಂಶಗಳಿವೆ. ಅದರ ಜೊತೆಗೆ ಈಗಿರುವಂತಹ ಆರ್ಥಿಕ ಪರಿಸ್ಥಿತಿಯಲ್ಲಿ ಹೆಚ್ಚಿನ ಒಟ್ಟಾರೆ ಆದಾಯವನ್ನು ಹೇಗೆ ರೂಪಿಸುತ್ತಾರೆ ಎನ್ನುವುದು ದೊಡ್ಡ ಸವಾಲು ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಈಗ ಮಾತನಾಡುವವರು ಇನ್ನು 7 ಜನರಿದ್ದಾರೆ. ಅವರೆಲ್ಲಾ ಈಗ ಮಾತನಾಡುವುದಕ್ಕಾಗುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಹೇಳಲಿ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟ ಮೇಲೆ ತಾವೆಲ್ಲರೂ ಸ್ಪಷ್ಟೀಕರಣವನ್ನು ಕೇಳಿ.

(ಮುಂದು)

295/12-07-2018/ಬಿಕೆಪಿ-ಆರ್‌ಎನ್/7-00

**ಸಭಾಪತಿಯವರು:-** ಈಗ ಇನ್ನೂ 7 ಜನ ಸದಸ್ಯರುಗಳು ಮಾತನಾಡಬೇಕೆಂದು ಇದ್ದಾರೆ. ಅವರುಗಳೆಲ್ಲರೂ ಈಗ ಮಾತನಾಡಲಿಕ್ಕೆ ಆಗುವುದಿಲ್ಲ. ಮೊದಲು ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ. ನಂತರ ಅದರ ಬಗ್ಗೆ clarification ಕೇಳಬಹುದಾಗಿದೆ. ಅವಕಾಶವನ್ನು ಕೊಟ್ಟರೂ ಸಹಿತ ಯಾರು ಸಹ ಐದೈದು ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸುವುದಿಲ್ಲ. ಈಗಾಗಲೇ ಸುಮಾರು ಜನ ಮಾತನಾಡಿದ್ದಾರೆ. ಈಗ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಅದಕ್ಕೂ ಮೊದಲು ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಮುಖ್ಯಮಂತ್ರಿಗಳು ಮಾತನಾಡುವುದಕ್ಕಿಂತ ಮೊದಲು ದಿನಾಂಕ:09-07-2018 ರಂದು ಶ್ರೀ ವಿ.ಎಸ್.ಉಗ್ರಪ್ಪನವರು ಸಭಾಪತಿಯವರ ಚುನಾವಣೆಯ ಬಗ್ಗೆ ಒಂದು Point of Order ಅನ್ನು raise ಮಾಡಿದರು. ಆದರೆ, ಅಂದು ಎಲ್ಲಿಯೂ ಸಹ ಸಭಾಪತಿಯವರ ಚುನಾವಣೆಯ ಬಗ್ಗೆ ಮಾತನಾಡಿರುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಪ್ರಾಣೇಶ್‌ರವರು ಮಾತನಾಡುವಾಗ ಒಬ್ಬರನ್ನು ಸಚಿವರನ್ನಾಗಿ ಮಾಡಬೇಕೆಂದರು. ಆಗ ಶ್ರೀಯುತ ಉಗ್ರಪ್ಪನವರು Point of Order ಅನ್ನು raise ಮಾಡಿದರು. ಆ Point of Order ಇಲ್ಲಿ ಉದ್ಭವವಾಗುವುದಿಲ್ಲವೆನ್ನುವುದನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

# 2018-19ನೇ ಸಾಲಿನ ಆಯವ್ಯಯ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ

**ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)** ಮಾನ್ಯ ಸಭಾಪತಿಯವರೇ, 2018-19ನೇ ಸಾಲಿನ ಆಯವ್ಯಯಕ್ಕೆ ಸದನದಲ್ಲಿ ಅಂಗೀಕಾರ ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಈಗಾಗಲೇ ಕಳೆದ ನಾಲ್ಕೈದು ದಿವಸಗಳಿಂದ ಸುಮಾರು 26 ಜನ ಸದಸ್ಯರುಗಳು ಸುಮಾರು 13 ಗಂಟೆಗಳಿಗಿಂತಲೂ ಹೆಚ್ಚು ಈ ಸದನದಲ್ಲಿ ಆಯವ್ಯಯದಲ್ಲಿರುವಂತಹ ಹಲವಾರು ಅಂಶಗಳ ಬಗ್ಗೆ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆಯವ್ಯಯವನ್ನು ಮಂಡನೆ ಮಾಡಿದ ನಂತರ ಬಹಳ ತೀಕ್ಷಣವಾದ ರೀತಿಯಲ್ಲಿ ಸದನದ ಒಳಗಡೆ ಮತ್ತು ಹೊರಗೆ ಮಾನ್ಯ ಸದಸ್ಯರುಗಳು ಮಾತನಾಡಿರತಕ್ಕಂತಹ ಮತ್ತು ಪ್ರತಿಕ್ರಿಯೆಗಳ ಬಗ್ಗೆಯೂ ಸಹ ನಾನು ಗಮನಿಸಿದ್ದೇನೆ. ಈ ಆಯವ್ಯಯದ ಬಗ್ಗೆ ತಮ್ಮಲ್ಲಿ ಇರುವಂತಹ ಹಲವಾರು ಅನುಮಾನಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಹಲವಾರು ಮಾಹಿತಿಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರುಗಳು ತಮ್ಮ ಟೀಕೆಗಳ ಮೂಲಕ ಕೇಳಿರತಕ್ಕಂತಹ ತಮ್ಮಗಳ ಭಾವನೆಗಳೇನಿದೆ ಮತ್ತು ಈ ಆಯವ್ಯಯವನ್ನು ಬೆಂಬಲಿಸಿ ಮಾತನಾಡಿರತಕ್ಕಂತಹ ಆಡಳಿತ ಪಕ್ಷದ ನಮ್ಮ ಶಾಸಕ ಮಿತ್ರರುಗಳು ಏನಿದ್ದಾರೆ, ಅವರುಗಳಿಗೆ ಮೊದಲನೆಯದಾಗಿ ನನ್ನ ಗೌರವಪೂರ್ವಕ ವಂದನೆಗಳನ್ನು ತಮ್ಮ ಮೂಲಕ ಅರ್ಪಿಸಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರುಗಳನ್ನೂ ಸಹ ಒಳಗೊಂಡಂತೆ ಹಲವಾರು ಹಿರಿಯ ಸದಸ್ಯರುಗಳು ಈ ಸದನದಲ್ಲಿ ಆಯವ್ಯಯದ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ. ಈ ಬಗ್ಗೆ ಹಲವಾರು ಜನರಲ್ಲಿ ಇರತಕ್ಕಂತಹ ಭಾವನೆ ಈ ರೈತರ ಸಾಲ ಮನ್ನಾ ವಿಷಯ ಬಹುಶ ಇದು ಎಲ್ಲರಿಗೂ ಒಂದು ರೀತಿಯ ಯಕ್ಷ ಪ್ರಶ್ನೆ ಎನ್ನುವುದು ನನ್ನ ಅಭಿಪ್ರಾಯ. ಎಲ್ಲರಿಗೂ ಒಂದು ರೀತಿಯಲ್ಲಿ ಇದನ್ನು ಮಾಡಲಿಕ್ಕೆ ಸಾಧ್ಯವೇ ಎನ್ನುವ ಸಂಶಯವಿದೆ. 34,000 ಕೋಟಿ ರೂಪಾಯಿಗಳ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಇದಕ್ಕೆ ನಿಜವಾಗಿಯೂ ಸಹ ಹಣವನ್ನು ಎಲ್ಲಿಂದ ತರುತ್ತಾರೆ, ಇದಕ್ಕೆ ಹಣವನ್ನು ಯಾವ ರೀತಿಯಲ್ಲಿ ಹೊಂದಿಸಿಕೊಂಡಿದ್ದಾರೆ, ಈ ರೀತಿಯಲ್ಲಿ ಹಲವಾರು ಅನುಮಾನಗಳನ್ನು ವ್ಯಕ್ತ ಮಾಡುವುದು ಸಹಜ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ನಾನು ಚುನಾವಣೆಯ ಸಂದರ್ಭದಲ್ಲಿ ನಮ್ಮ ಪಕ್ಷದ ಪ್ರಣಾಳಿಕೆಯ ಮೂಲಕ ಜನತೆಯ ಮುಂದೆ ಹಲವಾರು ವಿಷಯಗಳನ್ನು ಮಂಡನೆ ಮಾಡಿದ್ದೇನೆ. ಅದರಲ್ಲಿ ರೈತರ ಸಾಲ ಮನ್ನಾ, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲ ಮನ್ನಾ, ನೇಕಾರರ ಸಾಲ ಮನ್ನಾ. ಮತ್ತೆ ಅಲ್ಲಿಂದ ಹಿರಿಯ ನಾಗರೀಕರಿಗೆ ತಿಂಗಳಿಗೆ 6,000 ರೂಪಾಯಿಗಳ ಗೌರವಧನ, ಗರ್ಭಿಣಿ ತಾಯಿಂದಿರ ಮತ್ತು ಮಕ್ಕಳ ರಕ್ಷಣೆಗೆ ಪ್ರತಿ 6,000 ರೂಪಾಯಿಗಳಂತೆ 6 ತಿಂಗಳುಗಳ ಕಾಲ ಒಟ್ಟು 36

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾವಿರ ರೂಪಾಯಿಗಳನ್ನು ಕೊಡುವಂತಹ ಕಾರ್ಯಕ್ರಮ, ಈ ರೀತಿಯಲ್ಲಿ ಹಲವಾರು ಕಾರ್ಯಕ್ರಮಗಳ ಬಗ್ಗೆ ಜನತೆಯ ಮುಂದೆ ಹೇಳಿದ್ದೇವೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಸ್ವತಂತ್ರವಾಗಿ ನನಗೆ ಒಂದು ಅವಕಾಶವನ್ನು ಕಲ್ಪಿಸಿದರೆ ಈ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತೇನೆ, ರೈತರ ಸಾಲವನ್ನು 24 ಗಂಟೆಯೊಳಗಡೆ ಮನ್ನಾ ಮಾಡುತ್ತೇನೆಂದು ಹೇಳಿ ಜನತೆಯ ಮುಂದೆ ನಮ್ಮ ಪಕ್ಷದ ಪ್ರಣಾಳಿಕೆಯನ್ನು ನಾನು ಮಂಡನೆ ಮಾಡಿದ್ದೆ. ಆದರೆ, ರಾಜ್ಯದ ಜನತೆ ನಮ್ಮ ಪಕ್ಷಕ್ಕೆ ಸಂಪೂರ್ಣವಾದ ಬಹುಮತವನ್ನು ಕೊಡಲಿಲ್ಲ. ಇವತ್ತು ಈ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ಪಕ್ಷಗಳನ್ನೊಳಗೊಂಡು ಒಂದು ಸಮ್ಮಿಶ್ರ ಸರ್ಕಾರವನ್ನು ಮಾಡಿ, ಮೊದಲನೆಯದಾಗಿ ಒಂದು ಆಯವ್ಯಯವನ್ನು ಮಂಡನೆ ಮಾಡಿದ್ದೇವೆ. ಈ ಆಯವ್ಯಯದ ವಿಚಾರವಾಗಿ ಹಲವಾರು ರೀತಿಯಲ್ಲಿ ಸಾರ್ವಜನಿಕ ಗೊಂದಲಗಳಿದ್ದರೂ, ಹಲವಾರು ರೀತಿಯಲ್ಲಿ ಪರಸ್ಪರ ವಿಷಯಗಳನ್ನು ಚರ್ಚೆ ಮಾಡಿದಾಗ ಸಾರ್ವಜನಿಕವಾಗಿ ಕೆಲವು ಪ್ರತಿಕ್ರಿಯೆಗಳು ಬಂದಿರುವುದನ್ನೂ ಸಹ ನಾನು ಗಮನಿಸಿದ್ದೇನೆ. ಆಯವ್ಯಯವನ್ನು ಮಂಡನೆ ಮಾಡಿದ ನಂತರ ನಮ್ಮ ಮಾಧ್ಯಮದ ಮಿತ್ರರು, ವಿಶೇಷವಾಗಿ ನಮ್ಮ ಎಲೆಕ್ಟ್ರಾನಿಕ್ ಮಾಧ್ಯಮದವರು ನಿರಂತರವಾದಂತಹ ರೀತಿಯಲ್ಲಿ ಪ್ರತಿದಿನ ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ ಮತ್ತು ರಾತ್ರಿ ಈ ಒಂದು ಆಯವ್ಯಯದ ವಿಷಯದಲ್ಲಿ ದೊಡ್ಡ ಮಟ್ಟದಲ್ಲಿ ಎಲ್ಲಾ ಚಾನಲ್ ಮಟ್ಟದಲ್ಲಿಯೂ ಸಹ ದೊಡ್ಡ ಚರ್ಚೆಗಳಾಗಿವೆ, ಅವರೆಲ್ಲರಿಗೂ ಅನುಮಾನ. ನಮ್ಮ ಸದನದ ಕೆಲವು ಸದಸ್ಯರುಗಳು ಮಾತನಾಡುತ್ತಾ, ಈ ಬಜೆಟ್ ಒಂದೇ ಕುಟುಂಬದ ಬಜೆಟ್, ಒಂದೇ ಕುಟುಂಬದವರಾದ ರೇವಣ್ಣನವರು, ಕುಮಾರಸ್ವಾಮಿಯವರು ಮತ್ತು ತಮ್ಮಣ್ಣನವರು ಈ ಬಜೆಟ್‌ನಲ್ಲಿ ಸುಮಾರು 53 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದಾರೆಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಈ ಬಜೆಟ್‌ನಲ್ಲಿ ಇರುವಂತಹ ಹಣವನ್ನು ನಾನು ಎಲ್ಲಿಗೆ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯ? ಬಹುಶ: ಇದನ್ನು ಮಾನ್ಯ ಸದಸ್ಯರಾದ ಶ್ರೀಯುತ ರವಿಕುಮಾರ್ ರವರೇ ಇರಬಹುದು, ಅವರು ಹೇಳಿದ್ದನ್ನು ನಾನು ಕೇಳಿಸಿಕೊಂಡಿದ್ದೇನೆ. ಮುಖ್ಯಮಂತ್ರಿಗಳು ಸುಮಾರು 11 ಇಲಾಖೆಗಳನ್ನು ಅವರೇ ತಮ್ಮ ಕೈಕೆಳಗಡೆ ಇಟ್ಟುಕೊಂಡಿದ್ದಾರೆಂದು ಹೇಳಿದ್ದಾರೆ. ಹೌದು. ಯಾವುದೇ ಪಕ್ಷದ ಮುಖ್ಯಮಂತ್ರಿಯಾಗಿರಲಿ ಈ ರಾಜ್ಯದಲ್ಲಿ ಅಧಿಕಾರವನ್ನು ನಡೆಸಬೇಕಾದರೆ ಅದಕ್ಕೆ ಒಂದು ಶಿಷ್ಟಾಚಾರ ಇರುತ್ತದೆ. ಅದು ಯಾರೇ ಮುಖ್ಯಮಂತ್ರಿಯಾಗಿರಲಿ, ಕೆಲವು ಇಲಾಖೆಗಳು ಮುಖ್ಯಮಂತ್ರಿಗಳ ಕೈಕೆಳಗಡೆಯೇ ಇರಬೇಕೆನ್ನುವುದು ಮೊದಲನಿಂದಲೂ ಬಂದಿರುವ ವಾಡಿಕೆಯಾಗಿದೆ. ಶ್ರೀಯುತ ತಮ್ಮಣ್ಣನವರು ಸಾರಿಗೆ ಸಚಿವರು, ಇನ್ನು ಶ್ರೀಯುತ ರೇವಣ್ಣನವರು ಲೋಕೋಪಯೋಗಿ ಮಂತ್ರಿಗಳು. ಇವರುಗಳೇ 53 ಸಾವಿರ ಕೋಟಿ ರೂಪಾಯಿಗಳನ್ನು ಎತ್ತಿಕೊಂಡು ಹೋಗಿದ್ದಾರೆಂದು

ಹೇಳಿದ್ದಾರೆ. ನಾವುಗಳು ಈ 53 ಸಾವಿರ ಕೋಟಿ ರೂಪಾಯಿಗಳನ್ನು ಎಲ್ಲಿ ಹೊತ್ತುಕೊಂಡು ಹೋಗಲಿಕ್ಕಾಗುತ್ತದೆ? ಆ ಇಲಾಖೆಗಳ ಮೂಲಕ ರಾಜ್ಯದ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಕೊಡುತ್ತಿದ್ದೇವೆ. ಯಾವುದೇ ಇಲಾಖೆಗಳಲ್ಲಿ ಮಂತ್ರಿಗಳು ಏನಿರುತ್ತಾರೆ, ಸರ್ಕಾರದ ಆಯವ್ಯಯವನ್ನು ನಾವುಗಳು ಏನು ಘೋಷಣೆ ಮಾಡಿ ಹಣವನ್ನು ಮೀಸಲಿಟ್ಟಿರುತ್ತೇವೆ, ಅದರ ಜವಾಬ್ದಾರಿಯನ್ನು ನಿರ್ವಹಿಸಬೇಕಾದುದ್ದು ಆಯಾಯ ಇಲಾಖೆಯ ಮಂತ್ರಿಗಳ ಕೆಲಸವಾಗಿರುತ್ತದೆ. ಅದೇ ರೀತಿಯಲ್ಲಿ ಈ ಸರ್ಕಾರದ ಬಜೆಟ್ ಏನಿದೆ, ಅಣ್ಣ–ತಮ್ಮಂದಿರ ಬಜೆಟ್, ಮತ್ತೆ ಕೇವಲ 2–3 ಜಿಲ್ಲೆಗಳಿಗೆ ಸಿಮೀತವಾಗಿರುವಂತಹ ಬಜೆಟ್, ರೈತರ ಸಾಲ ಮನ್ನಾದ ವಿಷಯದಲ್ಲಿ ಯಾವುದೇ ರೀತಿಯಲ್ಲಿ ಸ್ಪಷ್ಟತೆ ಇಲ್ಲ, ಅಸ್ಪಷ್ಟವಾಗಿದೆ, ಸುಸ್ತಿ ಮನ್ನಾ ಎಂದು ಹೇಳಿದ್ದಾರೆ, ಎಷ್ಟು ಜನರದ್ದು ಇದೆ? ಅದರಲ್ಲಿ ಕೇವಲ 8 ಕೋಟಿ, 10 ಕೋಟಿ ರೂಪಾಯಿಗಳು ಮಾತ್ರ ರೈತರ ಸಾಲ ಮನ್ನಾವಾಗುತ್ತದೆ. ರೈತರಿಗೆ 'ಸಾಲ ಮನ್ನಾ' ಹೆಸರಿನಲ್ಲಿ ಅವರಿಗೆ ಟೋಪಿಯನ್ನು ಹಾಕುತ್ತಿದ್ದಾರೆಂದು ಹೇಳುತ್ತಿದ್ದಾರೆ. ಈ ರೀತಿಯಲ್ಲಿ ಹಲವಾರು ವ್ಯಾಖ್ಯಾನಗಳು ಒಂದು ಕಡೆ. ಮತ್ತೊಂದು ಕಡೆಯಾದರೆ, ಹಲವಾರು ಮಾಧ್ಯಮಗಳು ಸಹ "ರೈತರಿಗೆ ಸಾಲ ಮನ್ನಾ, ಬೇರೆಯವರಿಗೆ ಗುನ್ನಾ" ಎನ್ನುವಂತಹ ರೀತಿಯಲ್ಲಿ ಅವರದ್ದೇ ಕೆಲವು ವಿಶ್ಲೇಷಣೆಗಳಿವೆ. ಅದು ತಪ್ಪು ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಏಕೆಂದರೆ, ಕೆಲವೊಂದು 2–3 ಇಲಾಖೆಗಳಲ್ಲಿ ತೆರಿಗೆ ಸಂಗ್ರಹ ಮಾಡಲಿಕ್ಕೆ ಸ್ವಲ್ಪಮಟ್ಟಿಗೆ ನಾನು tax ಗಳನ್ನು ಹಾಕಿದ್ದೇನೆ. ಏಕೆಂದರೆ, ಸರ್ಕಾರ ನಡೆಯಬೇಕೆಂದರೆ, ಯಾವುದೇ ಒಂದು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕಾದರೆ ಖಜಾನೆಗೆ ಅದಾಯದ ಉತ್ಪತ್ತಿ ಬೇಕಲ್ಲವೇ? ಅದರ ಹಿನ್ನೆಲೆಯಲ್ಲಿ ನಾನು ಈ ಒಂದು ರೀತಿಯಲ್ಲಿ ತೀರ್ಮಾನ ಮಾಡಿದ್ದೇನೆ. ಅದನ್ನು ಜನ ಸಾಮಾನ್ಯರ ಮೇಲೆ ಒಂದು ರೀತಿಯಲ್ಲಿ ಹೊರೆ ಹಾಕಲಿಕ್ಕೆ ಹೊರಟಿದೆ ಎಂದು ಹೇಳಿ ಈ ರೀತಿ ಭಾವನೆ ಮೂಡಿಸಲಿಕ್ಕೆ ಕೆಲವು ಪ್ರಯತ್ನಗಳಾಗಿವೆ. ನಾನು ಇದನ್ನು ತಪ್ಪು ಎಂದು ಹೇಳಲಿಕ್ಕೆ ಹೋಗುವುದಿಲ್ಲ. ಈ ಒಂದು ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಎಲ್ಲಾ ರಾಜ್ಯಗಳಲ್ಲೂ ಇದೆ. ಈ ದೇಶದಲ್ಲಿ 'One Nation-One Tax' ಎನ್ನುವ ತೀರ್ಮಾನಕ್ಕೆ ಬಂದು ಈ ದೇಶದಲ್ಲಿ G.S.T. (Goods and Service Tax) ವ್ಯವಸ್ಥೆ ಪ್ರಾರಂಭವಾದ ನಂತರ ಇವತ್ತು ನಮಗೆ ಒಂದೆರಡು ಬಾಬ್ತಿನಲ್ಲಿ ಬಿಟ್ಟರೆ ನಮಗೆ ಹಣ ಸಂಗ್ರಹ ಮಾಡುವಂತಹ ಅವಕಾಶಗಳಿಲ್ಲ. ಇರತಕ್ಕಂತಹ ನಮ್ಮ ವ್ಯಾಪ್ತಿಯಲ್ಲಿ ನಾವು ತೀರ್ಮಾನ ಮಾಡಲೇ ಬೇಕಾಗಿದೆ. ಅದು ಅನಿವಾರ್ಯವಾಗಿದೆ. ಆದ್ದರಿಂದ, ತೆರಿಗೆಯನ್ನು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ನಲ್ಲಿ ಇರಬಹುದು, ಪೆಟ್ರೋಲ್ ಮತ್ತು ಡೀಸೆಲ್‌ನಲ್ಲಿ ಸ್ವಲ್ಪ ಮಟ್ಟದ ತೆರಿಗೆಯನ್ನು ಏರಿಕೆ ಮಾಡಿರುವುದು ಇದೆ. ಮತ್ತೆ, ನಮ್ಮ ಅಬಕಾರಿ ಇಲಾಖೆಯಲ್ಲಿ ಇರಬಹುದು, ಹೀಗೆ ಒಂದೆರಡು ಮೂರು ಇಲಾಖೆಗಳಲ್ಲಿ ಸ್ವಲ್ಪಮಟ್ಟಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆರಿಗೆಯನ್ನು ಏರಿಕೆ ಮಾಡಿದ್ದೇವೆ. ಅದರಿಂದ ಸ್ವಲ್ಪ ಆದಾಯವನ್ನು ನಾವು ನಿರೀಕ್ಷೆ ಮಾಡಿದ್ದೇವೆ. ಅದರ ಬಗ್ಗೆ ನಾನು ಮಾಹಿತಿಯನ್ನು ಕೊಟ್ಟಿದ್ದೇನೆ.

ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ವಿಷಯವನ್ನು ನಾನು ಬಹಳವಾಗಿ ಎಳೆಯಲಿಕ್ಕೆ ಹೋಗುವುದಿಲ್ಲ. ನಾನು ಈ ಮೈತ್ರಿ ಸರ್ಕಾರದ ನಾಯಕತ್ವವನ್ನು ಏನು ವಹಿಸಿಕೊಂಡಿದ್ದೇನೆ, ನಮ್ಮ ಸರ್ಕಾರದ, ಒಟ್ಟಾರೆ ಒಂದು vision ಇಟ್ಟುಕೊಂಡಿರುವಂತಹದ್ದು ಯಾವುದೇ ಎರಡು-ಮೂರು ಜಿಲ್ಲೆಗಳನ್ನಿಟ್ಟುಕೊಂಡಿರುವಂತಹ ಸರ್ಕಾರವಲ್ಲ.

**ಮುಂದು. . .**

**(296) 12.07.2018 07.10 ಎಸ್‌ವಿ-ವಿಕೆ**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು):-**

ಈ ಒಂದು ಮೈತ್ರಿ ಸರ್ಕಾರದ ನಾಯಕತ್ವವನ್ನು ನಾನು ವಹಿಸಿಕೊಂಡಿದ್ದು, ನನ್ನ ಸರ್ಕಾರ ಯಾವುದೋ ಎರಡು ಮೂರು ಜಿಲ್ಲೆಗಳ ಸರ್ಕಾರ ಅಲ್ಲ. ಒಟ್ಟಾರೆ ಒಂದು vision ಇಟ್ಟುಕೊಂಡಿರತಕ್ಕಂಥ ಸರ್ಕಾರ. ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಮಾಡತಕ್ಕಂತಹ ಸರ್ಕಾರ. ಅದರಲ್ಲಿ ಯಾರಿಗಾದರೂ ಅನುಮಾನವಿದ್ದರೆ, ಅಂತಹ ಅನುಮಾನಗಳನ್ನು ಬಗೆಹರಿಸುವುದಕ್ಕಾಗಿಯೇ ನಾನು ಇಲ್ಲಿ ತಮ್ಮ ಮುಂದೆ ಬಂದು ನಿಂತಿದ್ದೇನೆ. ಸಾಲ ಮನ್ನಾ ಬಗ್ಗೆ ತೆಗೆದುಕೊಳ್ಳುವುದಾದರೆ, ಒಟ್ಟು ಸಾಲ ಎಷ್ಟಿದೆ? ನಾವು ಅಧಿಕಾರಕ್ಕೆ ಬಂದರೆ 53,000 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತೇನೆ ಎಂದು ಹೇಳಿದ್ದು ನಿಜ. ನಂತರ ಎರಡು ಮೂರು ಸಭೆಯನ್ನು ಆರ್ಥಿಕ ಇಲಾಖೆಯ ಅಧಿಕಾರಿಗಳು ಹಾಗೂ ರಾಷ್ಟ್ರೀಕೃತ/ಕೋ-ಆಪರೇಟಿವ್ ಬ್ಯಾಂಕುಗಳು ಅಂದರೆ ಕೆನರಾಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಜಯಾ ಬ್ಯಾಂಕ್ ಈ ರೀತಿ A, B, C category ಯ ಬ್ಯಾಂಕುಗಳೊಂದಿಗೆ ಚರ್ಚೆ ಮಾಡಿರುತ್ತೇನೆ. ಅದರ ಪ್ರಕಾರ outstanding loan ಇರತಕ್ಕಂಥದ್ದು Co-operative Sector Banks ಸಾಲವೂ ಸೇರಿದ ಹಾಗೆ ಸುಮಾರು 48,000 ಕೋಟಿ ರೂಪಾಯಿಗಳು ರೈತರ ಸಾಲ ಇರುತ್ತದೆ. ನಾವು ಈಗ ಘೋಷಣೆ ಮಾಡಿರುವ ಕಾರ್ಯಕ್ರಮದ ಪ್ರಕಾರ overdue loan ಅನ್ನು ಮನ್ನಾ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಅದರ ಪ್ರಕಾರ ಸುಮಾರು 22,000 ಕೋಟಿ ಸಾಲ ಮನ್ನಾ ವ್ಯಾಪ್ತಿಯಲ್ಲಿ ಬರುತ್ತದೆ. ಚಾಲ್ತಿ ಸಾಲ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವವರಿಗೆ ರೂ.25,000/-ದಷ್ಟು incentive ಅನ್ನು ಕೊಡಲಾಗುವುದು ಎಂದು ಬಜೆಟ್‌ನಲ್ಲಿ ನಾನು ಘೋಷಿಸಿದ್ದೇನೆ. Overall ನನಗೆ ರೂ.29,278 ಕೋಟಿ ಇದೆ. ರೂ.49,000 ಕೋಟಿ ಇದ್ದರೂ ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು 'ಋಣ ಸಮಾಧಾನ ಪರಿಹಾರ ಯೋಜನೆ' ಎಂದು ಜಾಹೀರಾತನ್ನು ನೀಡಿರುತ್ತಾರೆ. ಅದರ ಪ್ರಕಾರ ಕರ್ನಾಟಕ ಸರ್ಕಾರ ರೂ.50,000 ವರೆಗಿನ ರೈತರ ಸಾಲ ಮನ್ನಾ ಮಾಡಲು ತೀರ್ಮಾನಿಸಿರುವ ರೀತಿ ಸಾರ್ವಜನಿಕ ಕ್ಷೇತ್ರಗಳ ಬ್ಯಾಂಕುಗಳಿಗೆ ಅನ್ವಯಿಸುವುದಿಲ್ಲ. ಭಾರತೀಯ ಸ್ಟೇಟ್ ಬ್ಯಾಂಕ್ ಹೆಚ್ಚಿನ ಸಾಲಗಾರರಿಗೆ ಅನುಕೂಲವಾಗಬೇಕೆನ್ನುವ ಉದ್ದೇಶದಿಂದ ಭಾಗಶಃ ಸಾಲ ಮನ್ನಾ ಹಾಗೂ ಬಡ್ಡಿ ಮನ್ನಾವನ್ನು ಏಕ ಕಾಲದಲ್ಲಿ ಇತ್ಯರ್ಥಗೊಳಿಸುವ ಮೂಲಕ ಹೊಸ ಯೋಜನೆಯನ್ನು ಜೂನ್ 2018ರಿಂದ ಜಾರಿಗೆ ತಂದಿದ್ದಾರೆ. ಬಡ ಮತ್ತು ಮಧ್ಯಮ ವರ್ಗದ ಸಾಲಗಾರರಿಗೆ OTS (One Time Settlement) ನಿಂದ ಅನುಕೂಲವಾಗುವಂತೆ ರೂ.20 ಲಕ್ಷಕ್ಕಿಂತ ಕಡಿಮೆ ಬಾಕಿ ಇರುವ ಸಾಲಗಾರರಿಗೆ ಈ ಯೋಜನೆಯಡಿಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಸಾಲದ ಮೊತ್ತದ ಮೇಲೆ 25% ಯಿಂದ 50% ಸಾಲ ಮನ್ನಾ ಮಾಡಿಕೊಡುತ್ತೇವೆ, reduce ಮಾಡುತ್ತೇವೆ ಎಂದು ಹೇಳಿದ್ದಾರೆ. ಜೊತೆಗೆ ಸಾಲ ಸುಸ್ತಿಯಾದ ದಿನಾಂಕದಿಂದ ಆಕರ್ಷಿತ ಬಡ್ಡಿಯನ್ನೂ ಸಹ ಮನ್ನಾ ಮಾಡಲಾಗುವುದು ಎಂದು ಹೇಳಿದ್ದಾರೆ. ಈ ರೀತಿಯ ಜಾಹೀರಾತನ್ನು ಎಲ್ಲಾ ಬ್ಯಾಂಕುಗಳವರೂ ಕೊಟ್ಟಿದ್ದಾರೆ. ಈ ಸೌಲಭ್ಯಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ನಾನು ಇದನ್ನು ಗಮನದಲ್ಲಿಟ್ಟುಕೊಂಡು ಜನರಲ್ಲಿ ನನಗೊಂದು ಅವಕಾಶ ನೀಡಿದರೆ ಸಾಲ ಮನ್ನಾ ಮಾಡುವುದಾಗಿ ಹೇಳಿದ್ದೆನು.

ನಾನು ಇಲ್ಲಿ ಸುದೀರ್ಘವಾಗಿ ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಇರತಕ್ಕಂತಹ ಸುಸ್ತಿ ಸಾಲ ಮನ್ನಾ ವಿಷಯದಲ್ಲಿ ಕೆಲವರು ಸುಸ್ತಿದಾರರಿಗೆ ಸಾಲ ಮನ್ನಾ ಮಾಡಿದರೆ ಎಷ್ಟಿದೆ ದುಡ್ಡು ಎಂದು ದೊಡ್ಡ ಚರ್ಚೆ ಆಯಿತು. ಒಂದೊಂದು ಜಿಲ್ಲೆಯಲ್ಲಿ ಏಳು ಕೋಟಿ, ಎಂಟು ಕೋಟಿ ಇದೆ, ಅದರಿಂದ ನಮಗೇನೂ ಉಪಯೋಗವಾಗುವುದಿಲ್ಲ ಎಂದು confuse ಮಾಡಿಕೊಂಡಿದ್ದಾರೆ. ಇಲ್ಲಿ ನಾನು ನಿನ್ನೆ ದಿನಾಂಕ 10.07.2018ರವರೆಗೆ ಎಲ್ಲಾ ರೀತಿಯ ಸಂಪೂರ್ಣ ಮಾಹಿತಿಗಳನ್ನೂ ತರಿಸಿಕೊಂಡಿದ್ದೇನೆ. ಏಕೆಂದರೆ ಚಾಲ್ತಿ ಸಾಲದವರಿಗೆ ರೂ.25,000 ಮನ್ನಾ ಮಾಡುತ್ತೇನೆಂದು ಹೇಳಿದಾಗ ಬಹಳ ಜನ ಶಾಸಕ ಮಿತ್ರರು ರೂ.25,000 ಕೊಟ್ಟರೆ ನಮಗೇನೂ ಅನುಕೂಲವಾಗುವುದಿಲ್ಲ. ಸಹಕಾರಿ ಬ್ಯಾಂಕ್‌ಗಳಲ್ಲಿರುವ ಸಾಲಕ್ಕೆ ಸಂಬಂಧಿಸಿದಂತೆ ರೈತರಿಗೆ ಯಾವುದೇ ರೀತಿಯ ಅನುಕೂಲಗಳಿಲ್ಲ ಎಂದು ಹೇಳಿ ನನ್ನ ಮೇಲೆ ಒತ್ತಾಯವನ್ನು ಹಾಕಿದರು. ಇಷ್ಟೆಲ್ಲಾ risk ತೆಗೆದುಕೊಂಡು ಮಾಡುತ್ತಿದ್ದೀರಿ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

at least ಒಂದು ಹೆಸರು ಬರುವ ರೀತಿಯಲ್ಲಿ ತೀರ್ಮಾನಕ್ಕೆ ಬನ್ನಿ ಎಂದರು. ಈಗ ಹಾಕಿಕೊಂಡಿರುವ guidelines ಉಪಯೋಗಕ್ಕೆ ಬರುವುದಿಲ್ಲ ಎಂದು ಹೇಳಿ ಎಲ್ಲಾ ಶಾಸಕರೂ ನನ್ನ ಬಳಿ ಜಗಳ ಆಡಲಿಕ್ಕೆ ಶುರು ಮಾಡಿದರು. ಮೊದಲು ಸಹಕಾರಿ ಬ್ಯಾಂಕುಗಳ ಎಲ್ಲ 22 ಲಕ್ಷ ಜನರಿಗೂ ರೂ.25,000 ಮನ್ನಾ ಮಾಡಿ ಎಂದು ಹೇಳಿದರು. ಆಮೇಲೆ ರೂ.25,000 ಸಾಕಾಗುವುದಿಲ್ಲ, ಅದನ್ನು ರೂ.50,000ಕ್ಕೆ ಏರಿಸದಿದ್ದರೆ ಜನ ನಿಮ್ಮನ್ನು ಒಪ್ಪುವುದಿಲ್ಲ ಎಂದರು.

ಇವುಗಳನ್ನೆಲ್ಲಾ ಲೆಕ್ಕಾಚಾರ ಮಾಡಿಕೊಂಡು ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ದಿನಾಂಕ 20.06.2017ಕ್ಕೆ ರೂ.8,164 ಕೋಟಿ ರೈತರ ಸಾಲವನ್ನು ಮನ್ನಾ ಮಾಡುವಂತಹ ಒಂದು ಘೋಷಣೆಯನ್ನು ಮಾಡಿದರು. ಅವರು ಆ ತೀರ್ಮಾನ ಮಾಡಿದ ಮೇಲೆ ರೂ.50,000/-ಗಳವರೆಗೆ 15,58,228 ರೈತರ ಸಂಖ್ಯೆ, ಸಾಲದ ಹೊರಬಾಕಿ ರೂ.4,637.78 ಕೋಟಿ ಇದು ಮನ್ನಾ ಆಗಿದೆ. ಅದರ ಒಂದು ವ್ಯಾಪ್ತಿಯಲ್ಲಿ ಬರತಕ್ಕಂತಹ ಬಾಕಿ ಮೊತ್ತ ಯಾವುದೂ ಇಲ್ಲ. 50,000 ದಿಂದ 1 ಲಕ್ಷ ರೂಪಾಯಿಗಳವರೆಗೆ 1,57,267 ರೈತರ ಸಂಖ್ಯೆ ಇದೆ. ಸಾಲದ ಹೊರಬಾಕಿ ರೂ.2,231 ಕೋಟಿ ಇತ್ತು. ಸಾಲ ಮನ್ನಾದ ಲಾಭ ದೊರಕತಕ್ಕಂಥದ್ದು ರೂ.784 ಕೋಟಿ. ಇದರಲ್ಲಿ ಇನ್ನೂ ರೂ.1,445 ಕೋಟಿ ಇದೆ. ಎರಡು ಲಕ್ಷಕ್ಕಿಂತ ಹೆಚ್ಚಿಗೆ ತೆಗೆದುಕೊಂಡಂತಹ ರೈತರು ಸಾಲಮನ್ನಾ ಯೋಜನೆಯೊಳಗೆ ಪಡೆದಿರುವುದು ರೂ.324.95 ಕೋಟಿ. ಇದು 64,991 ರೈತರ ಸಂಖ್ಯೆ. ಇದೆಲ್ಲಾ ಒಟ್ಟಿಗೆ ಸೇರಿದರೆ ಬಾಕಿ ರೂ.3,765 ಕೋಟಿ ಇದೆ. ನಮ್ಮ ಸಹಕಾರ ಸಚಿವರು ನನ್ನ ಬಳಿ ಬಂದು ಈಗಿರುವ ರೂ.3,765 ಕೋಟಿಯ ಜೊತೆಗೆ ಎರಡು ಲಕ್ಷ ಸಾಲ ತೆಗೆದುಕೊಂಡಿರುವವರದ್ದು ರೂ.3613 ಕೋಟಿ ಹೆಚ್ಚುವರಿ ಹೊರೆ ಬೀಳುತ್ತದೆ ಎಂಬುದಾಗಿ ಚರ್ಚೆ ನಡೆಯಿತು. ಈ ಒಂದು ವ್ಯಾಪ್ತಿಯಲ್ಲಿ ಇದ್ದಂತಹ ಸುಸ್ತಿದಾರರಿಗೆ ಕೇವಲ ರೂ.145 ಕೋಟಿ ಅನುಕೂಲವಾಗುತ್ತಿತ್ತು. ನಾನು ಅದನ್ನು ಸಭೆಯ ಗಮನಕ್ಕೆ ತರಲು ಬಯಸುತ್ತೇನೆ.

ಈಗ ಇಲ್ಲಿ ನಮ್ಮ ಶಾಸಕರ ಒತ್ತಡ ಹಾಗೂ ಜನತೆಯ ಭಾವನೆಗೆ ಅನುಗುಣವಾಗಿ ಇಷ್ಟು ದೊಡ್ಡ ಮಟ್ಟದಲ್ಲಿ ಸವಾಲು ಸ್ವೀಕರಿಸಿ ನಾನು ಒಂದು ತೀರ್ಮಾನಕ್ಕೆ ಬಂದಿದ್ದೇನೆ. ನನಗೆ ನಿನ್ನೆಯವರೆಗೆ ಮಾಹಿತಿಗಳನ್ನು ಒದಗಿಸಲಾಗಿದೆ. ರೂ.25,000 ದವರೆಗೆ ಇರುವ ಚಾಲ್ತಿ ಸಾಲಕ್ಕೆ ಏನಾದರೂ ತೀರ್ಮಾನ ತೆಗೆದುಕೊಂಡರೆ 5,94,537 ಜನ ರೈತರಿದ್ದಾರೆ. ರೂ.1,129 ಕೋಟಿ ಹೊರಬಾಕಿ ಮೊತ್ತ ಇದೆ. 21,67,908 ಜನಕ್ಕೆ ಈಗ ಸಾಲವನ್ನು ಕೊಡಲಾಗಿದೆ. ಇದು ನಿನ್ನೆಯವರೆಗೆ ಸಹಕಾರಿ ಬ್ಯಾಂಕ್‌ನಲ್ಲಿ ಒಟ್ಟು ಕೊಟ್ಟಿರುವ ಸಾಲ. ರೂ.25,000 ಗಳವರೆಗೆ ನಾವು ಸಾಲ ಮನ್ನಾ ಮಾಡಿದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.5000 ಕೋಟಿ ನಮಗೆ ಹೊರೆಯಾಗುತ್ತದೆ. ರೂ.25,000ಗಳಿಂದ ರೂ.50,000ದವರೆಗೆ ಸಾಲ ಮನ್ನಾ ಮಾಡಿದರೆ 9,29,916 ಸಂಖ್ಯೆ ರೈತರು ಇದ್ದು, ಇದರಲ್ಲಿ ರೂ.3,638 ಕೋಟಿ ಸಾಲ ಇದೆ.

**(...ಮುಂದು)**

(297 ) 12.07.2018 7.20 ಕೆಜಿ.ಬಿಎನ್‌ಎಸ್

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು...):-** ಈ ಐವತ್ತು ಸಾವಿರ ರೂಪಾಯಿಗಳ range ನಲ್ಲಿ ಏನಾದರೂ ಸಾಲ ಮನ್ನಾ ಘೋಷಣೆ ಮಾಡಿದರೆ, ಈಗ ಚಾಲ್ತಿಯಲ್ಲಿರುವವರಿಗೆ 7,985 ಕೋಟಿ ರೂಪಾಯಿಗಳು ಮನ್ನಾ ಆಗುತ್ತದೆ. ಐವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡಿದರೆ ಇದರಲ್ಲಿ 4,20,974 ಸಂಖ್ಯೆಯಷ್ಟು ರೈತರು ಇದ್ದು, 2,629 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಇಲ್ಲಿ 21 ಲಕ್ಷ ಜನರಿಗೆ 8,492 ಕೋಟಿ ರೂಪಾಯಿಗಳು ಆಗುತ್ತದೆ. ಇವತ್ತು ಎಲ್ಲರ ಭಾವನೆಗಳನ್ನು ಅರ್ಥ ಮಾಡಿಕೊಂಡು ನಮ್ಮ ಅಧಿಕಾರಿಗಳು ಇದಕ್ಕೆ ಬಹಳ ಕಷ್ಟ ಪಟ್ಟಿದ್ದಾರೆ. ಅದಕ್ಕೆ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿ 8,165 ಸಾವಿರ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಈ ವರ್ಷ ಕೊಡಬೇಕೆಂದು ಇಟ್ಟಿದ್ದಾರೆ. ಆ ನಾಲ್ಕು ಸಾವಿರ ಕೋಟಿ ರೂಪಾಯಿಗಳು ಇದೆ. ನಾವು ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಇವತ್ತು ಒಂದು ಲಕ್ಷ ರೂಪಾಯಿಗಳವರೆಗಿನ ಸಾಲ ಮನ್ನಾ ಮಾಡಬೇಕು ಎಂಬುದನ್ನು ತೀರ್ಮಾನ ಮಾಡಿದ್ದೇವೆ. ಅದು ಸಹಕಾರ ಬ್ಯಾಂಕ್‌ಗಳದ್ದು. ನಾವು ಇದನ್ನು ಎಲ್ಲಾ ಲೆಕ್ಕಾಚಾರ ಮಾಡಿದ್ದೇವೆ. ಇದು ಒಂದು ಭಾಗ.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು)

ಮಾನ್ಯ ಸಭಾಪತಿಯವರೇ, ಇನ್ನು nationalized bank ಗಳಲ್ಲಿನ ಸಾಲದ ಬಗ್ಗೆ ಹೇಳುವುದಾದರೆ ನಾನು ಮೊದಲೇ ಹೇಳಿದಂತೆ, ನಾವು incentive ಅನ್ನು 25 ಸಾವಿರ ರೂಪಾಯಿಗಳೆಂದು ಘೋಷಣೆ ಮಾಡಿದ್ದೇವೆ. ಇಲ್ಲಿ 7,100 ಕೋಟಿ ರೂಪಾಯಿಗಳು ಇತ್ತು. ಈ ವರ್ಷ ನಾವು 34 ಸಾವಿರ ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೇವೆ. ಆ ಹಣವನ್ನು ಈ ವರ್ಷದಲ್ಲಿಯೇ ಕಟ್ಟಬೇಕಾಗಿರುವಂತಹ ಅವಶ್ಯಕತೆ ಇಲ್ಲ. ಈ ಬಗ್ಗೆ ಬ್ಯಾಂಕಿನವರ ಜೊತೆಗೆ 3 ರಿಂದ 4 ಬಾರಿ ಸಭೆಗಳನ್ನು ನಡೆಸಿದ್ದೇವೆ. ಇದು ಈಗಾಗಲೇ finalise ಆಗಬೇಕಾಗಿತ್ತು. ಮೊನ್ನೆ ದಿವಸ Parliamentary Committee meeting ಇದ್ದಿದ್ದರಿಂದ ಆ ಸಭೆ ದಿನಾಂಕ 20 ಕ್ಕೆ defer

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿದೆ. ಈಗಾಗಲೇ 3 ರಿಂದ 4 ಸಭೆಗಳನ್ನು ಮಾಡಿ ಅವರ ಅನುಮತಿ ದೊರೆತ ಹಿನ್ನೆಲೆಯಲ್ಲಿ ರಾಷ್ಟ್ರೀಕೃತ ಬ್ಯಾಂಕಿಗೆ ಸಂಬಂಧಪಟ್ಟಂತೆ over dues ಏನಿದೆ ಆ ಸಾಲ ಮನ್ನಾ ಮಾಡುವಂತಹದ್ದು ಮತ್ತೊಂದು incentive ಅನ್ನು ಉಳಿದವರಿಗೆ ಚಾಲ್ತಿ ಸಾಲದವರಿಗೆ ಕೊಡಬೇಕೆಂದು ನಿರ್ಧಾರ ಆಗಿದೆ. ಇದನ್ನು ಲೆಕ್ಕಚಾರ ಮಾಡಿ ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಯಾರಿಗೂ ಗೊಂದಲಗಳು ಬೇಡ. ಇದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಇದರಿಂದ ನನಗೆ ಬಹಳ risk ಇದೆ. ಆದರೆ, ಇದಕ್ಕೆ ಯಾವ ರೀತಿ ಹಣ ಹೊಂದಿಸಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇನೆ. ಇದರ ಬಗ್ಗೆ ಯಾರಿಗೂ ಅನುಮಾನಗಳು ಬೇಡ. ಇವತ್ತು ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳವರ ಜೊತೆಗೆ ಚರ್ಚೆ ಮಾಡಿ ಎಲ್ಲರಿಗೂ ಋಣಮುಕ್ತ ಪತ್ರವನ್ನು ಕೊಡುವುದಕ್ಕೂ ಈಗಾಗಲೇ ತೀರ್ಮಾನ ಮಾಡಿದ್ದೇವೆ. ಮತ್ತೆ ಈಗ ಒಂದು ಬಾರಿ ರಾಜ್ಯ ಸರ್ಕಾರ ಮತ್ತು ಬ್ಯಾಂಕುಗಳ ನಡುವೆ ಮುಂದಿನ ವಾರದಲ್ಲಿ ಒಪ್ಪಂದ ಆಗುತ್ತಿದೆ. ಇದಾದ ನಂತರ, ಸಾಲವನ್ನು ಮನ್ನಾ ಮಾಡಿದ ಮೇಲೆ ಪುನಃ ರೈತರಿಗೆ ಸಾಲ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅದನ್ನು ಬಹಳ ಸ್ಪಷ್ಟವಾಗಿ ಸಭೆಯ ಮೂಲಕ ಹೇಳುತ್ತೇನೆ. ನಾನು ಸಾಲ ಮನ್ನಾ ವಿಚಾರದಲ್ಲಿ ಯಾರಿಗೂ ಸುಳ್ಳು ಹೇಳುವಂತಹ ಅಥವಾ ಮೋಸ ಮಾಡುವಂತಹ ಪ್ರಶ್ನೆಯೇ ಇಲ್ಲ. ಇವತ್ತು ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಇದೆ. ಈ ಸರ್ಕಾರದಲ್ಲಿ ಒಂದು ದೊಡ್ಡ ಮಟ್ಟದ ಸವಾಲನ್ನು ಇವತ್ತು ಅನುಷ್ಠಾನಕ್ಕೆ ತರಬೇಕೆಂಬ ತೀರ್ಮಾನವನ್ನು ಮಾಡಿದ್ದೇವೆ. ಇದರಲ್ಲಿ ಯಾವುದೇ ರೀತಿಯ ಗೊಂದಲಗಳು ನಮಗೆ ಇಲ್ಲ. ನಿಮಗೂ ಸಹ ಈ ಬಗ್ಗೆ clarity ಯನ್ನು ಕೊಟ್ಟಿದ್ದೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರು Petrol ಬೆಲೆ ಏರಿಕೆ, Petrol ಏರಿಕೆ ಎಂದು ದೊಡ್ಡ ಮಟ್ಟದಲ್ಲಿ ಚರ್ಚೆ ಮಾಡಿಕೊಂಡಿದ್ದಾರೆ. Petrol ಬೆಲೆಯಲ್ಲಿ ಒಂದು ರೂಪಾಯಿ ಜಾಸ್ತಿ ಆಗಿದೆ. Petrol ಬೆಲೆ ಏರಿಕೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರದಲ್ಲಿ; Official data shows that the Centre's gross revenue collections from petroleum products has risen steadily in these five years from 1.05 lakh Crore in 2014-15 to a projected 2.57 lakhs Crore in the next fiscal accompanied by an increase in excise duty. ಇಲ್ಲಿ ಕೇಂದ್ರದ ಮಾನ್ಯ ಹಣಕಾಸಿನ ಮಂತ್ರಿಗಳಾದ ಅರುಣ್ ಜೇಟ್ಲಿಯವರು ಈ ರೀತಿ ಹೇಳಿದ್ದಾರೆ; Finance Ministry, Government of India have time and again pointed out that revenue from excise duty on POL products is a significant source

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

of funds that has helped the Government to keep the fiscal deficit in check. ಇವತ್ತು ಸರ್ಕಾರದ expenditure ಗೆ ಆದಾಯವನ್ನು ಸ್ವಲ್ಪ ಹೆಚ್ಚಿಸಿಕೊಳ್ಳಬೇಕಾದರೆ, ಇದು inevitable, ಇದನ್ನು ಮಾಡಲೇಬೇಕೆಂದು ಮಾನ್ಯ ಕೇಂದ್ರದ ಹಣಕಾಸಿನ ಮಂತ್ರಿಗಳಾದ ಅರುಣ್ ಜೇಟ್ಲಿಯವರು ಹೇಳಿದ್ದಾರೆ. ಇಲ್ಲಿ ನಾವು ಜಾಸ್ತಿ ಮಾಡಿದ್ದೇವೆಂದು ಕೆಲವು ಟೀಕೆಗಳು ಪ್ರಾರಂಭ ಆಗಿದೆ. ಇದನ್ನು ತಮ್ಮ ಗಮನಕ್ಕೆ ತರುವುದಷ್ಟೇ ಅಲ್ಲ, ನಾವು ಈ ಬೆಲೆಯನ್ನು ಜಾಸ್ತಿ ಮಾಡಿದ ನಂತರವೂ ನಮ್ಮ ಒಂದು tax ಹಾಕಿರುವಂಥದ್ದು ಏನಿದೆ ಇದರಿಂದ ಈಗಲೂ ನಾವು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಬಹಳ ಕಡಿಮೆ ಇದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಈಗ ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ. ಸರ್ಕಾರ ಆಡಳಿತದಲ್ಲಿದೆ. ಅಲ್ಲಿ ಒಂದು ಲೀಟರ್ Petrol ಬೆಲೆ ರೂ.83.12 ಇದೆ. ಮಧ್ಯಪ್ರದೇಶದಲ್ಲಿ ರೂ.81.14 ಇದೆ. ಬಿಹಾರ್‌ನಲ್ಲಿ ರೂ.81.04 ಇದೆ. ಆಂಧ್ರ ಪ್ರದೇಶದಲ್ಲಿ ರೂ.80.03 ಇದೆ. ಜಮ್ಮು-ಕಾಶ್ಮೀರದಲ್ಲಿ ರೂ.79.99 ಇದೆ. ಕೇರಳದಲ್ಲಿ ರೂ.78.63 ಇದೆ. ನಮ್ಮ ರಾಜ್ಯದಲ್ಲಿ ರೂ.77.99 ಇದೆ. ದೆಹಲಿ ಮತ್ತು ಗೋವ ರಾಜ್ಯಗಳನ್ನು ಬಿಟ್ಟರೆ ಇನ್ನುಳಿದ ಯಾವುದೇ ರಾಜ್ಯಕ್ಕೆ ಹೋಲಿಕೆ ಮಾಡಿದರೆ, ನಮ್ಮ ರಾಜ್ಯದಲ್ಲಿ Petrol ಮತ್ತು ಡೀಸೆಲ್ ಬೆಲೆ ಕಡಿಮೆ ಇದೆ. ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸುಮಾರು 9 ಬಾರಿ ಬೆಲೆಗಳನ್ನು ಜಾಸ್ತಿ ಮಾಡಿದ್ದಾರೆ. Excise Duty ರೂ.9.20 ಇದ್ದಿದ್ದು ರೂ.19.48ಕ್ಕೆ ಹೋಯಿತು. ಅವರು ಮಾಡಿರುವಂಥದ್ದು, ಅದರಿಂದ ಇವತ್ತು ವಿರೋಧ ಪಕ್ಷದವರು ಏನು ಹೇಳಿದ್ದಾರೆ, ಇವತ್ತು ರೈತರ ಸಾಲ ಮನ್ನಾ ಇರಬಹುದು, ಅದರ ಜೊತೆಗೆ ರಾಜ್ಯ ಸರ್ಕಾರಿ ನೌಕರರಿಗೆ 6ನೇ ವೇತನ ಆಯೋಗ ಜಾರಿಗೆ ತರುವುದಕ್ಕೆ ಅವರಿಗೆ ವೇತನ ಹೆಚ್ಚಳ ಆಗಿರುವಂಥದ್ದಕ್ಕೆ ಇರಬಹುದು, ನಾವು ಇವತ್ತು ಹಲವಾರು ರೀತಿಯ ಯೋಜನೆಗಳನ್ನು ಜಾರಿಗೆ ತರುವುದಕ್ಕೆ additional burden ಇದೆ. ಅದರ ಹಿನ್ನಲೆಯಲ್ಲಿ ಆರ್ಥಿಕ ಶಿಸ್ತನ್ನು ಕಾಪಾಡಬೇಕು. ಆರ್ಥಿಕ ಶಿಸ್ತಿನಲ್ಲಿ fiscal deficit 3% ಒಳಗೆ ಇರಬೇಕಾಗಿತ್ತು. ಅದನ್ನು maintain ಮಾಡುವಂತಹ ಹಿನ್ನೆಲೆಯಲ್ಲಿ ಈ ತೀರ್ಮಾನವನ್ನು ಮಾಡಲೇಬೇಕಾಗಿದೆ. ಇದು ಒಂದು ಭಾಗ. Electricity ವಿಷಯದಲ್ಲಿ ಕೆಲವರಲ್ಲಿ ಏನೋ ಆಗಿಹೋಗಿದೆ ಎಂದು ಹೇಳುತ್ತಿದ್ದಾರೆ. ನಾವು ಸಾಮಾನ್ಯ ಗ್ರಾಹಕರ ಮೇಲೆ 6% ರಿಂದ 9% ಏರಿಕೆ ಮಾಡಿದ್ದೇವೆ. ನಮಗೆ ಅದರಲ್ಲಿ ಬರುವಂಥದ್ದು ಕೇವಲ 188 ಕೋಟಿ ರೂಪಾಯಿಗಳು. ಇದರಿಂದ ತಿಂಗಳಿಗೆ ಪ್ರತಿ ಗ್ರಾಹಕನಿಗೆ 10 ರೂಪಾಯಿ ಜಾಸ್ತಿ ಆಗುತ್ತದೆ. ಈ 10 ರೂಪಾಯಿ ಹೊರೆಯೇ ಎಂದು ನಾನು ಕೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಈ ಬಜೆಟ್ ಮಂಡನೆಯಾದ ನಂತರ ಇದು ಕೇವಲ 2 ರಿಂದ 3 ಜಿಲ್ಲೆಗಳಿಗೆ ಮಾತ್ರ ಸೀಮಿತವಾದಂತಹ ಬಜೆಟ್ ಎಂದು ಹೇಳುತ್ತಿದ್ದಾರೆ. ಉತ್ತರ ಕರ್ನಾಟಕ ಭಾಗದ ಯುವಕರಿಗೆ ಉದ್ಯೋಗ ದೊರಕುತ್ತಿಲ್ಲ. ಸಂವಿಧಾನದ ಅನುಚ್ಛೇದ 371 (ಜೆ) ಜಾರಿಗೆ ಬಂದ ನಂತರವು ಸುಮಾರು 40 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಕೊಡಲಿಲ್ಲ. ಅವರಿಗೆ ಹುದ್ದೆಗಳನ್ನು ಕೊಡುವುದರಲ್ಲಿ ಸರ್ಕಾರ ಎಡವಿದೆ ಎಂದು ಹೇಳುತ್ತಾರೆ. ಈ ಬಜೆಟ್‌ನಲ್ಲಿ ಗುಲ್ಬರ್ಗಾದಲ್ಲಿ ಒಂದು Industrial Cluster ತರುವುದಕ್ಕೆ ಇರಬಹುದು, ಕೊಪ್ಪಳಕ್ಕೆ ಇರಬಹುದು, ಬೀದರ್‌ಗೆ ಇರಬಹುದು, ಬಳ್ಳಾರಿಗೆ ಇರಬಹುದು ಅಥವಾ ಚಿತ್ರದುರ್ಗಕ್ಕೆ ಇರಬಹುದು, ಈ ರೀತಿ ಹಲವಾರು ಜಿಲ್ಲೆಗಳಲ್ಲಿ ಮುಂದಿನ ದಿನಗಳಲ್ಲಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿ ಮಾಡುವುದರ ಹಿನ್ನೆಲೆಯಲ್ಲಿ ಇವತ್ತು ಹಲವಾರು ರೀತಿಯ manufacturing sectors ಗೆ encourage ಮಾಡುವ ಕಾರ್ಯಕ್ರಮಗಳಿಗೆ 500 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಮುಂದಿನ ವರ್ಷ 2000 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಖಾಸಗಿಯವರು ಬಂಡವಾಳವನ್ನು ಹೂಡಿ industries ಅನ್ನು ಪ್ರಾರಂಭ ಮಾಡುವುದಕ್ಕೆ ಬಹಳ ಜನರು ಮುಂದೆ ಬರುತ್ತಿದ್ದಾರೆ. ಅದರಿಂದ ಇವತ್ತು ಉತ್ತರ ಕರ್ನಾಟಕದ ಭಾಗದಲ್ಲಿರುವಂತಹ ಉದ್ಯೋಗದ ಸಮಸ್ಯೆಯನ್ನು ಬಗೆಹರಿಸುವಂತಹ ಒಂದು ದೂರದೃಷ್ಟಿಯ ಕಾರ್ಯಕ್ರಮಗಳು ಈ ನಿಟ್ಟಿನಲ್ಲಿ ಪ್ರಾರಂಭವಾಗುತ್ತವೆ. ಕೇವಲ ಹಾಸನ ಜಿಲ್ಲೆ, ಮಂಡ್ಯ ಜಿಲ್ಲೆ ಮತ್ತು ಮೈಸೂರು ಜಿಲ್ಲೆಗೆ ಮಾತ್ರ ಸೀಮಿತವಾಗಿರುವಂತಹ ಬಜೆಟ್ ಅಲ್ಲ. ರಾಮನಗರ ಜಿಲ್ಲೆಯಲ್ಲಿ ಒಂದು film city ಮಾಡಬೇಕೆಂದು ಕೊಟ್ಟಿದ್ದೇವೆ. ಅದನ್ನು ಖಾಸಗಿಯವರು ಮಾಡುತ್ತಾರೆ. ನಾವು ಅದಕ್ಕೆ ರೂ.50 ಕೋಟಿ ರೂಪಾಯಿಗಳ seed money ಇಟ್ಟಿದ್ದೇವೆ. ಮೂಲ structure build up ಮಾಡಬೇಕು ಅಲ್ಲವೇ, ಈಗ film city ಅನ್ನು ಎಲ್ಲೋ ದೂರ ತೆಗೆದುಕೊಂಡು ಹೋದರೆ ಅದನ್ನು ಮಾಡುವುದು ಬಹಳ ಕಷ್ಟ. ರಾಮನಗರ ಬೆಂಗಳೂರಿಗೆ ಹತ್ತಿರ ಇರುವುದರಿಂದ ಎಲ್ಲಾ ರೀತಿಯಲ್ಲೂ film industry ಗೆ ಅನುಕೂಲವಾಗುತ್ತದೆ ಎನ್ನುವ ಒಂದು ದೃಷ್ಟಿಯಿಂದ ಹೊಸ concept ಅನ್ನು ಇಟ್ಟುಕೊಂಡು ಹೊರಟಿದ್ದೇವೆ. ಇದು ಒಂದು ಭಾಗ. ಅದರ ಜೊತೆಗೆ ರಾಮನಗರ ಜಿಲ್ಲೆಗೆ ಒಂದು Hi-Tech hospital ಗೆ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. Film city ಇಡೀ ರಾಜ್ಯದಲ್ಲಿರವಂತಹ ಯುವಕರಿಗೆ ಅನುಕೂಲವಾಗುವಂಥದ್ದು. ಅದು ಬರಿ ರಾಮನಗರ ಜನತೆಗೆ ಮಾತ್ರ ಅನುಕೂಲವಾಗುವಂತಹ ಯೋಜನೆ ಅಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(298):12.07.2018-7.30-ಎಂವಿ-ಬಿಎನ್‌ಎಸ್

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು...):-**

ಫಿಲ್ಮ್ ಸಿಟಿ ಇಡೀ ರಾಜ್ಯದಲ್ಲಿರುವಂತಹ ಯುವಕರಿಗೆ ಅನುಕೂಲವಾಗುವಂಥದ್ದು, ಆ ಯೋಜನೆ ಕೇವಲ ರಾಮನಗರದ ಜನತೆಗೆ ಅನುಕೂಲವಾಗುವಂಥದ್ದಲ್ಲ. ಅಲ್ಲಿ ಎಲ್ಲರೂ ಭಾಗವಹಿಸುವಂತಹ ರೀತಿಯ ಒಂದು ಕಾರ್ಯಕ್ರಮ. ಈಗ ನಾನು ರಾಮನಗರಕ್ಕೆ 50 ಕೋಟಿ ರೂಪಾಯಿಗಳನ್ನು ಕೊಟ್ಟ ತಕ್ಷಣವೇ, ದುಡ್ಡೆಲ್ಲಾ ಅಲ್ಲಿಗೆ ತೆಗೆದುಕೊಂಡು ಹೋಗಿಬಿಟ್ಟರು ಎಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ಕಳೆದ ಹತ್ತು ವರ್ಷದಲ್ಲಿ ರಾಮನಗರ ಜಿಲ್ಲೆಗೆ ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಅದರ ಬಗ್ಗೆ ಚರ್ಚೆ ಮಾಡೋಣ, ಅದಕ್ಕೆ ನಾನು ತಯಾರಿದ್ದೇನೆ. 2008ರಿಂದ ಬಿ.ಜೆ.ಪಿ. ಸರ್ಕಾರ ಐದು ವರ್ಷ ಇತ್ತು. ಆ ಐದು ವರ್ಷದಲ್ಲಿ ರಾಮನಗರ ಜಿಲ್ಲೆಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಶಿವಮೊಗ್ಗ ಜಿಲ್ಲೆಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಮತ್ತು ಬೇರೆ ಜಿಲ್ಲೆಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡಬೇಕು ಎಂದರೆ, ಅದಕ್ಕೆ ನಾನು ತಯಾರಿದ್ದೇನೆ. ಈಗ ಹಾಸನ ಜಿಲ್ಲೆಗೆ 2008ರಲ್ಲಿ ಅದಕ್ಕಿಂತ ಮುಂಚೆ ಏನು ಸಮ್ಮಿಶ್ರ ಸರ್ಕಾರ ಇತ್ತು, ಆಗ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು, ಆರ್ಥಿಕ ಸಚಿವರಾಗಿ ಹಾಸನ ಜಿಲ್ಲೆಯ ಔಟರ್ ರಿಂಗ್ ರೋಡ್‌ಗೆ 150 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆಗಿನ ಸರ್ಕಾರ ಹೋಯಿತು, ಮುಂದಿನ ಸರ್ಕಾರ ಬಂದ ಮೇಲೆ ಕೊಟ್ಟಿದ್ದಂತಹ ಆ 150 ಕೋಟಿ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡರು. ಕಳೆದ ಹತ್ತು ವರ್ಷದಿಂದ ಅಲ್ಲಿ ಔಟರ್ ರಿಂಗ್ ರೋಡ್ ಆಗಿಲ್ಲವೆಂದು, ಅಲ್ಲಿಯ ಜನತೆಯ ಕೊರಗು ಏನು ಇತ್ತು, ಅದಕ್ಕೆ 30 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ಮೆಗಾ ಡೈರಿ ಆಗಬೇಕೆಂದು ಇದೆ. ಈಗ ಹಾಸನದ ಸಿಟಿಯಲ್ಲಿ ಬಿ.ಜೆ.ಪಿ. ಶಾಸಕರೇ ಇರುವುದು, ಅಲ್ಲಿ ಜೆ.ಡಿ.(ಎಸ್) ಶಾಸಕರು ಇಲ್ಲ. ಮೊದಲನೇ ಬಾರಿಗೆ ಬಿ.ಜೆ.ಪಿ.ಯವರಿಗೆ ಒಂದು ಸ್ಥಾನವನ್ನು ಕೊಟ್ಟಿದ್ದಾರೆ. ಅದು ಬಿ.ಜೆ.ಪಿ. ಶಾಸಕರಿಗೆ ಕ್ರೆಡಿಟ್ ಬರುವಂಥದ್ದು ಮತ್ತು ಅವರಿಗೆ ಅನುಕೂಲವಾಗುವಂಥದ್ದು. ಅದರ ಜೊತೆಗೆ ಮೆಗಾ ಡೈರಿ. ಈ ರಾಜ್ಯದಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಕಾಲದಲ್ಲಿ ಒಂದು ಲೀಟರ್ ಹಾಲಿಗೆ ಪ್ರೋತ್ಸಾಹಧನ ಎಂದು ಎರಡು ರೂಪಾಯಿಗಳನ್ನು ಕೊಟ್ಟರು ನಂತರ ಮಾನ್ಯ ಸಿದ್ದರಾಮಯ್ಯನವರು ಬಂದ ಮೇಲೆ ಅದನ್ನು ಐದು ರೂಪಾಯಿ ಮಾಡಿದರು. ಇದರ ಹಿನ್ನೆಲೆಯಲ್ಲಿ ಮತ್ತು ಬರಗಾಲದ ಪರಿಸ್ಥಿತಿಯಲ್ಲಿ, ಹಲವಾರು ರೈತ ಕುಟುಂಬಗಳು ಹಾಲು ಉತ್ಪಾದನೆ ಮಾಡುವ ಮುಖಾಂತರ, ಅವರ ಕುಟುಂಬಗಳ ನಿರ್ವಹಣೆ ಮಾಡುವುದಕ್ಕೆ ಅನುಕೂಲವಾಯಿತು. ಇವತ್ತು ಸುಮಾರು 85 ಲಕ್ಷ ಲೀಟರ್ ಹಾಲು ಉತ್ಪತ್ತಿಯಾಗುತ್ತಿದೆ. ಈಗ ಅದನ್ನು ಮಾರಾಟ ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತಿಲ್ಲ. ಆದುದರಿಂದ ಹಾಲಿನ ಪುಡಿ ತಯಾರು ಮಾಡಿದ್ದು, ಅದು ಗೋದಾಮುಗಳಲ್ಲಿ ತುಂಬಿ ತುಳುಕುತ್ತಿದೆ. ಈ ರೀತಿಯ ಸಮಸ್ಯೆಗಳು ಇವೆ. ಒಂದು ಮೆಗಾ ಡೈರಿ ಆಗಬೇಕು ಎನ್ನುವಂತಹ ದೃಷ್ಟಿಯಿಂದ, ಅದು ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆ. ಈ ಮೂರು ಜಿಲ್ಲೆಗಳನ್ನು ಒಳಗೊಂಡಂತೆ ಅದು ಒಂದು ಒಕ್ಕೂಟ. ಮೂರು ಜಿಲ್ಲೆಯ ಹಾಲು ಉತ್ಪಾದಕರು ಅದರ ಸದಸ್ಯರು. ಅದು ಕೇವಲ ಹಾಸನ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಒಟ್ಟಾರೆಯಾಗಿ ಅದು ರೈತರಿಗೆ ಅನುಕೂಲವಾಗುವಂತಹ ಒಂದು ಕಾರ್ಯಕ್ರಮ. ಅಷ್ಟಕ್ಕೆ ದುಡ್ಡನ್ನೆಲ್ಲಾ ಹಾಸನ ಜಿಲ್ಲೆಗೆ ಎತ್ತಿಕೊಂಡು ಹೋಗಿಬಿಟ್ಟರು ಎಂದು ಈ ರೀತಿಯ ಕೆಟ್ಟ ಅಭಿಪ್ರಾಯವನ್ನು ಮೂಡಿಸುವುದು ಏನಿದೆ ಇದು ಸರಿಯಲ್ಲ. ಇವತ್ತು ದಾವಣಗೆರೆ ಜಿಲ್ಲೆಗೆ ಮತ್ತು ಧಾರವಾಡ ಜಿಲ್ಲೆಗೆ ಹಲವಾರು ಕಾರ್ಯಕ್ರಮಗಳನ್ನು ಘೋಷಣೆ ಮಾಡಿ ಹಣವನ್ನು ಸಹ ಕೊಟ್ಟಿದ್ದೇವೆ. ಒಂದು ಪತ್ರಿಕೆಯಲ್ಲಿ ಹಲವಾರು ಜಿಲ್ಲೆಗಳ ಒಂದು ಫೋಟೋವನ್ನು ಹಾಕಿ, ಯಾವ್ಯಾವ ಜಿಲ್ಲೆಗೆ ಏನೇನು ಕೊಟ್ಟಿದ್ದಾರೆಂದು ಮಾಹಿತಿ ನೀಡಿದ್ದಾರೆ.

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳು ಮನೆ ಮಾಡಿರುವುದು ಹುಬ್ಬಳ್ಳಿಯಲ್ಲಿ. ಆದರೆ, ಧಾರವಾಡಕ್ಕೆ ಏನನ್ನೂ ಸಹ ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹಲವಾರು ಬಾರಿ ಬಂದಿದ್ದಾರೆ. ಮಾನ್ಯ ಸಭಾಪತಿಯವರು ಸಹ ಅಲ್ಲಿಯವರು. ಮುಖ್ಯಮಂತ್ರಿಗಳು ಧಾರವಾಡಕ್ಕೆ ಏನನ್ನು ಕೊಟ್ಟಿದ್ದಾರೆಂದು ದಯವಿಟ್ಟು clear ಮಾಡಲಿ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, vote on accountನಲ್ಲಿ ತೆಗೆದುಕೊಳ್ಳಬೇಕಾದರೆ, ಮಾನ್ಯ ಸಿದ್ದರಾಮಯ್ಯನವರ ಬಜೆಟ್ ಏನಿದೆ. ಅವರ vote on account ಏನು ತೆಗೆದುಕೊಂಡರು, ಅವತ್ತು ಆಯವ್ಯಯವನ್ನು ಏನು ಮಂಡನೆ ಮಾಡಿದ್ದಾರೆ, ಆ ಎಲ್ಲಾ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಜಾರಿಗೆ ತರುತ್ತಿದ್ದೇವೆ. ನಮ್ಮ ಬಜೆಟ್‌ನ ಕಾರ್ಯಕ್ರಮ ಇಷ್ಟೇ ಎಂದು ನೀವು ತಿಳಿದುಕೊಂಡಿದ್ದರೆ, ದಯವಿಟ್ಟು ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿ ಅವರು ಏನು ಜುಲೈ 31ನೇ ತಾರೀಖಿನವರೆಗೆ, ಅಂದರೆ ಈ ತಿಂಗಳಿನವರೆಗೆ ಒಂದು ಲೇಖಾನುದಾನವನ್ನು ಪಡೆಯುವುದಕ್ಕೆ ಅವತ್ತು ಫೆಬ್ರವರಿ, 16ರಂದು ಎರಡು ಸದನದ ಮುಂದೆ ಮಂಡನೆ ಮಾಡಿದ್ದಾರೆ. ಆ ಎಲ್ಲಾ ಕಾರ್ಯಕ್ರಮಗಳನ್ನು ಯಾವುದನ್ನು ಸಹ ನಿಲ್ಲಿಸದೆ ಮುಂದುವರೆಸಿದ್ದೇವೆ. ನಿಮಗೆ ಜಿಲ್ಲಾವಾರು ಮಾಹಿತಿ ಬೇಕಾದರೆ, ಅದನ್ನು ಕೊಡುತ್ತೇನೆ. ಯಾವ ಜಿಲ್ಲೆಗೆ ಎಷ್ಟೆಷ್ಟು ಘೋಷಣೆ ಆಗಿದೆ ಎಂದು. ಅದರ ಜೊತೆಗೆ ನೀವು ಹೇಳಿದ್ದಿರಲ್ಲ, ನೀವು ಏನು ಕೊಟ್ಟಿಲ್ಲವೆಂದು, ಈಗ ವೀರ್ಯ ನಳಿಕೆಯ ವಿತರಣೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಂದ್ರವನ್ನು ಮಾಡುವುದಕ್ಕೆ, ನಮ್ಮ Department of Animal Husbandryಗೆ ಎರಡು ಕಾಲು ಕೋಟಿ ರೂಪಾಯಿಗಳನ್ನು, ನಾನು ಮಂಡಿಸಿರುವಂತಹ ಬಜೆಟ್‌ನಲ್ಲೇ ಧಾರವಾಡಕ್ಕೆ ಕೊಟ್ಟಿದ್ದೇನೆ. ಆದರೆ, ಕೊಟ್ಟಿಲ್ಲವೆಂದು ಅವರು ಹೇಗೆ ಹೇಳುತ್ತಾರೆ? ಅಲ್ಲಿಯ ಕೃಷಿ ಅಭಿವೃದ್ಧಿಗೆ ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಮತ್ತು ಈಗ ನಾನು ಮಂಡಿಸಿರುವಂತಹ ಬಜೆಟ್‌ನಲ್ಲೂ ಐದೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ನಾನು ಏನ್ನು ಮಾರ್ಚ್, 31ರವರೆಗೆ ಪೂರ್ಣಪ್ರಮಾಣದ ಬಜೆಟ್ ಅನ್ನು ಮಂಡನೆ ಮಾಡಿದ್ದೇನೆ ಆಗ ಧಾರವಾಡಕ್ಕೂ ಸಹ ಹಣವನ್ನು ಕೊಟ್ಟಿದ್ದೇನೆ. ಗದಗ ಜಿಲ್ಲೆಯಲ್ಲಿ 450 ಹಾಸಿಗೆಗಳ ಸಾಮರ್ಥ್ಯ ಇರುವ ಹೊಸ ಹೈ-ಟೆಕ್ ಆಸ್ಪತ್ರೆ ಕಟ್ಟುವುದಕ್ಕೆ ಸುಮಾರು 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇನೆ. ಬೆಳಗಾವಿಯ ಹೃದಯ ಮತ್ತು ಕ್ಯಾನ್ಸರ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಹಣ ಕೊಟ್ಟಿದ್ದೇವೆ. ಈ ಬಜೆಟ್‌ನಲ್ಲಿ ಚಿಕ್ಕೋಡಿ ಗ್ರಾಮಕ್ಕೆ ಕೃಷ್ಣ ನದಿ ಏತ ನೀರಾವರಿ ಯೋಜನೆಗೆ ಸುಮಾರು 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ಶಿವಮೊಗ್ಗ ಜಿಲ್ಲೆಗೆ ಒಳನಾಡು ಮತ್ತು ಭದ್ರತಾ ವಿಶ್ವವಿದ್ಯಾನಿಲಯಕ್ಕೆ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ಹಾವೇರಿ ಜಿಲ್ಲೆಗೆ ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ನಾಲ್ಕೈದು ಜಿಲ್ಲೆಗಳನ್ನು ಆಯ್ಕೆ ಮಾಡಿದ್ದೇವೆ. ಅದರಲ್ಲಿ ಹಾವೇರಿ ಜಿಲ್ಲೆಯನ್ನು ಸಹ ಆಯ್ಕೆ ಮಾಡಿದ್ದೇವೆ. ಅದಕ್ಕೆ ಸುಮಾರು 300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇನೆ. ಇದಕ್ಕೆ ಕೊಪ್ಪಳವನ್ನು ಸಹ ಸೇರಿಸಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾವೇರಿ ಜಿಲ್ಲೆಯ ಬಹುದಿನದ ಬೇಡಿಕೆ ವೈದ್ಯಕೀಯ ಕಾಲೇಜು. ಈಗಾಗಲೇ ಗದಗ ಜಿಲ್ಲೆ ಮತ್ತು ಕೊಪ್ಪಳ ಜಿಲ್ಲೆಗೆ ವೈದ್ಯಕೀಯ ಕಾಲೇಜುಗಳು declare ಆಗಿದೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು. ಒಂದು ನಿಮಿಷ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರರವರೇ, ನೀವು ಆಮೇಲೆ ಬರೆದುಕೊಡಿ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುತ್ತೇವೆ. ನಮಗೆ ಮೆಡಿಕಲ್ ಕಾಲೇಜುಗಳು ಬೇಕು. ಇವತ್ತು ಮೆಡಿಕಲ್ ಕಾಲೇಜುಗಳ civil construction ಆಗಿರುವಂಥದ್ದು, ಎಷ್ಟು ಕಡೆ ಲ್ಯಾಬ್ ಸೌಲಭ್ಯಗಳು ಇವೆ. ಎಷ್ಟು ಜನ ವೈದ್ಯರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಪ್ರೊಫೆಸರ್‌ಗಳು ಇದ್ದಾರೆ. ನಿಮಗೆ ಮೆಡಿಕಲ್ ಕಾಲೇಜುಗಳನ್ನು ಕಟ್ಟುವುದಕ್ಕಿಂತ ಇರುವ ಆಸ್ಪತ್ರೆಗಳನ್ನು ನೀವು improve ಮಾಡಿಕೊಂಡರೆ, ಅದರಿಂದ ನಮಗೆ ಅನುಕೂಲವಾಗುತ್ತದೆ. ಈಗ ಮೆಡಿಕಲ್ ಕಾಲೇಜುಗಳನ್ನು ಕೊಡುವುದಕ್ಕೆ ನನ್ನದೇನು ಅಭ್ಯಂತರವಿಲ್ಲ. ಈಗಾಗಲೇ, ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಸುಮಾರು ಆರು ಮೆಡಿಕಲ್ ಕಾಲೇಜುಗಳು ಘೋಷಣೆ ಆಗಿವೆ. ಅವುಗಳಿಗೆ ಕಟ್ಟಡ ಕಟ್ಟುವುದಕ್ಕೆ ಇನ್ನು ಪ್ರಾರಂಭ ಮಾಡಿಲ್ಲ.

## 13 ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನಸಭೆಯು ದಿನಾಂಕ:12.07.2018 ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತು ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತು ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ, 2018.

2) ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2018.

3) ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ, 2018.

4) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2018.

ಇದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

## 14. 2018–2019ರ ಆಯವ್ಯಯದ ಮೇಲಿನ ಚರ್ಚೆಗೆ ಮುಂದುವರೆದ ಸರ್ಕಾರದ ಉತ್ತರ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದೇ ರೀತಿಯಾಗಿ ಕೊಪ್ಪಳದಲ್ಲೂ ಸಹ ಹೈ–ಟೆಕ್ ಆಸ್ಪತ್ರೆಯನ್ನು 450 ಹಾಸಿಗೆಗಳ ಮೇಲ್ದರ್ಜೆಗೆ ಏರಿಸಲು ತೀರ್ಮಾನ ಮಾಡಿದ್ದೇವೆ. ಕೊಪ್ಪಳದಲ್ಲಿ ಒಂದು Industrial Cluster ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಚಿಕ್ಕಬಳ್ಳಾಪುರ ಜಿಲ್ಲೆಗೆ ಹಲವಾರು ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ಇಸ್ರೇಲ್ ಮಾದರಿಯ ಕಾರ್ಯಕ್ರಮವನ್ನು ಕೋಲಾರ ಜಿಲ್ಲೆಗೆ ಕೊಟ್ಟಿದ್ದೇವೆ. ಇವೆಲ್ಲದರ ಜೊತೆ ಪಕ್ಕದ ಆಂಧ್ರಪ್ರದೇಶದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

‘Zero Budget Natural Farming’ ಎಂದು ಅಲ್ಲಿ ಅದು 2016ರಲ್ಲಿ ಪ್ರಾರಂಭವಾದ ಒಂದು ಕಾರ್ಯಕ್ರಮ. ಅದು ರೈತರ ಬೆಳೆ ಪದ್ಧತಿಯನ್ನು ಬದಲಾವಣೆ ಮಾಡುವಂಥದ್ದು. ಅಲ್ಲಿ ಅದು ಯಶಸ್ವಿಯಾಗಿದೆ. ಅದನ್ನು ನಮ್ಮ ಕರ್ನಾಟಕದಲ್ಲೂ ಪ್ರಾರಂಭ ಮಾಡಬೇಕು ಎಂಬ ದೃಷ್ಟಿಯಿಂದ ಅದಕ್ಕೆ ಸುಮಾರು 50 ಕೋಟಿ ರೂಪಾಯಿಗಳನ್ನು ತೆಗೆದು ಇಟ್ಟಿದ್ದೇವೆ. ಅದು ಇಡೀ ರಾಜ್ಯದಲ್ಲೇ ಹೊಸ ಕೃಷಿ ಪದ್ಧತಿ. ಏಕೆಂದರೆ, ರೈತರ ಸಾಲ ಮನ್ನಾ ಮಾಡಿದ ತಕ್ಷಣ ರೈತರು ನೆಮ್ಮದಿಯಿಂದ ಬದುಕುತ್ತಾರೆಂದು ನಾನು ಹೇಳುವುದಿಲ್ಲ. ಹಲವಾರು ಕಡೆ ಈಗಾಗಲೇ ರಾಜ್ಯಗಳಲ್ಲಿ ಸಾಲ ಮನ್ನಾ ಮಾಡಿದರು, ಸಹ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ರೈತರ ಕೃಷಿ ಪದ್ಧತಿಯನ್ನು ಬದಲಾವಣೆ ಮಾಡದೆ ಇದ್ದರೆ, ರೈತರ ಸಾವುಗಳನ್ನು ನೋಡುವಂತಹ ಕೆಟ್ಟ ಪರಿಸ್ಥಿತಿಯ ದಿನಗಳು ಇವೆ. ಆದುದರಿಂದ ಕೃಷಿಯಲ್ಲಿ ಹೊಸ ಪದ್ಧತಿಗಳನ್ನು ತರಬೇಕು ಎಂಬುದು ನಮ್ಮ ಸಮ್ಮಿಶ್ರ ಸರ್ಕಾರದ ನಿಲುವು ಏನಿದೆ, ಅದಕ್ಕೆ ಹಲವಾರು ರೀತಿಯ ಯೋಜನೆಗಳನ್ನು ಈ ರಾಜ್ಯದಲ್ಲಿ ತರುತ್ತಿದ್ದೇವೆ. ಮೀನುಗಾರರಿಗೆ ಏನು ಮಾಡಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯನ್ನು ಮರೆತು ಬಿಟ್ಟಿದ್ದಾರೆ ಎಂದು ಹೇಳಿದ್ದಾರೆ. ಹಿಂದಿನ ಲೇಖಾನುದಾನದ ಹಿನ್ನೆಲೆ ಏನಿದೆ, ಮಾನ್ಯ ಸಿದ್ದರಾಮಯ್ಯನವರ ಬಜೆಟ್‌ನಲ್ಲಿ ಮೀನುಗಾರರಿಗೆ ಸುಮಾರು 252 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇನ್ನು ಸ್ವಲ್ಪ additional ಆಗಿ ಬೇಕೆಂದರೆ supplementary budgetನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇನೆ. ಮೀನುಗಾರರಿಗೆ ಇನ್ನು ಹೆಚ್ಚಿನ ನೆರವು ಬೇಕೆಂದರೆ. ಇನ್ನು ಎಂಟು ತಿಂಗಳ ಸಮಯವಿದೆ. ಇವತ್ತು ನೇಕಾರರಿಗೆ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕಳೆದ ವರ್ಷ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ನೇಕಾರರಿಗೆ ಸುಮಾರು 53 ಕೋಟಿ ರೂಪಾಯಿಗಳ ಸಾಲಮನ್ನಾ ಆಗಿದೆ. ಅದರ ಜೊತೆಗೆ ನೇಕಾರರ ಮಂಡಳಿ ಏನು ಇದೆ, ಅದಕ್ಕೆ ಸುಮಾರು 40 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಆಗಲೇ 26 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ ಇನ್ನು 14 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕು. ಉಳಿದಿರುವಂತಹ ಹಣವನ್ನು ಸದ್ಯದಲ್ಲೆ ಬಿಡುಗಡೆ ಮಾಡುತ್ತೇವೆ. ನಾವು ನೇಕಾರರನ್ನು ಸಹ ಕೈಬಿಟ್ಟಿಲ್ಲ. ಎಲ್ಲವನ್ನು ಹಂತ-ಹಂತವಾಗಿ ಮಾಡುತ್ತೇವೆ. ಹಿರಿಯ ನಾಗರಿಕರಿಗೆ 600 ರೂಪಾಯಿಗಳು ಇರುವುದನ್ನು, ಈಗ ಒಂದು ಸಾವಿರ ರೂಪಾಯಿ ಮಾಡಿದ್ದೇವೆ. ಗರ್ಭಿಣಿ ತಾಯಂದಿರಿಗೆ ಮೊದಲು ಒಂದು ಸಾವಿರ ರೂಪಾಯಿ ಕೊಡುತ್ತಿದ್ದೆವು, ಈಗ ಅದನ್ನು ಎರಡು ಸಾವಿರ ರೂಪಾಯಿಗೆ ಹೆಚ್ಚಿಸಿದ್ದೇವೆ. ಅದನ್ನು

ಹಂತ-ಹಂತವಾಗಿ ಮಾಡುತ್ತೇವೆ. ಇನ್ನು ಐದು ವರ್ಷಗಳ ಸಮಯವಿದೆ.

**(ಮುಂದು...)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(299) 12.07.2018 7.40 ವೈಎಲ್-ಜಿಆರ್ ಶ್ರೀ

ಹೆಚ್.ಡಿ.ಕುಮಾರಸ್ವಾಮಿ(ಮುಂದು):-

ಎರಡೂ ಪಕ್ಷಗಳು ಸೇರಿ ಮುಂದಿನ ಐದು ವರ್ಷದಲ್ಲಿ ಜನತೆಯ ಮುಂದೆ ಇಟ್ಟಿರತಕ್ಕಂಥ ಚುನಾವಣಾ ಪ್ರಣಾಳಿಕೆ ಕಾರ್ಯಕ್ರಮಗಳಿವೆ, ಅದನ್ನು ಇವತ್ತು ಹಂತ ಹಂತವಾಗಿ ಜಾರಿಗೆ ತರುವುದರಲ್ಲಿ ಸಮ್ಮಿಶ್ರ ಸರ್ಕಾರ ಗುರಿಯಿಟ್ಟುಕೊಂಡಿದೆ. ನಮ್ಮ ಆರ್ಥಿಕ ಶಿಸ್ತನ್ನು ಕಾಪಾಡುವುದಕ್ಕೆ 2.18 ಸಾವಿರ ಕೋಟಿ ಮೊತ್ತದ ಆಯವ್ಯಯವನ್ನು ಮಂಡನೆ ಮಾಡಿದ್ದೇವೆ, ನಾವು ಆರ್ಥಿಕ ಶಿಸ್ತನ್ನು ಕಾಪಾಡುವುದರಲ್ಲಿ ಎಲ್ಲಿಯೂ ಎಡವಿಲ್ಲ. G.S.D.P., ಯ 25% ವರೆಗೂ ಸಾಲ ಮಾಡಲು ಅವಕಾಶ ಇದೆ. ನಾವು 20% ಒಳಗೆ ಇದ್ದೇವೆ. ಹೀಗೆ ಹಲವಾರು ರೀತಿಯಲ್ಲಿ ಸರ್ಕಾರದ ಕಾರ್ಯಕ್ರಮಗಳ ಜೊತೆಗೆ ಯಾವುದನ್ನೂ ನಾವು ಉಲ್ಲಂಘನೆ ಮಾಡದೇ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೇವೆ. ಈ ವರ್ಷ ಹೊಸದಾಗಿ 102 ಕಾಲೇಜುಗಳನ್ನು ನಿರ್ಮಿಸುವುದಕ್ಕಾಗಿ 500 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಮೀಸಲಿಟ್ಟಿದ್ದೇವೆ. ಅದೇ ರೀತಿ ಪ್ರಾಥಮಿಕ ಶಾಲೆಗಳನ್ನು ರಿಪೇರಿ ಮಾಡುವುದಕ್ಕಾಗಿ 150 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಈ ರೀತಿ ಹಲವಾರು ಕಾರ್ಯಕ್ರಮಗಳನ್ನು ಸಮ್ಮಿಶ್ರ ಸರ್ಕಾರ ಹಮ್ಮಿಕೊಂಡಿದೆ. ಇವತ್ತು ಅಲ್ಪಸಂಖ್ಯಾತರ ಇಲಾಖೆಗೆ ಸಂಬಂಧಪಟ್ಟಂತೆ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಮೀಸಲಿಟ್ಟಿಲ್ಲ ಎಂದು ಕೆಲವರು ಮಾತನಾಡಿದ್ದಾರೆ. ಅದಕ್ಕೆ ಕಾರಣ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಮಂಡನೆ ಮಾಡಿರತಕ್ಕಂಥ ಲೇಖಾನುದಾನದಲ್ಲಿ ಈಗಾಗಲೇ ಸುಮಾರು 2,250 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ನೀಡಲಾಗಿದ್ದು, ಆ ಕಾರ್ಯಕ್ರಮಗಳು ಮುಂದುವರೆಯುತ್ತಿವೆ. ಆದ್ದರಿಂದ ಇದರ ಬಗ್ಗೆ ಅವರೇ ಯೋಚನೆ ಮಾಡಬೇಕು ಮತ್ತು ಅವರಲ್ಲಿಯೂ ಅಸಮಾಧಾನವಾಗಬಾರದು ಎಂಬ ಹಿನ್ನೆಲೆಯಿಂದ 2250 ಕೋಟಿ ರೂಪಾಯಿ ಇರುವುದನ್ನು 2500 ಕೋಟಿ ರೂಪಾಯಿಗಳವರೆಗೂ ತೆಗೆದುಕೊಂಡು ಹೋಗಬೇಕೆಂದು ನಿರ್ಧಾರ ಮಾಡಲಾಗಿದೆ.

ಇನ್ನೊಂದು ಪ್ರಮುಖವಾದಂತಹ ವಿಷಯವೆಂದರೆ, 'ಜಲಧಾರೆ' ಎಂಬ ನೂತನ ಯೋಜನೆಗೆ ಅದಕ್ಕೊಂದು D.P.R., ಮಾಡಿಸುತ್ತಿದ್ದೇವೆ. ನೆರೆಯ ತೆಲಂಗಾಣ ರಾಜ್ಯದಲ್ಲಿ 'ಮಿಷನ್ ಭಗೀರಥ' ಎಂಬ ಕಾರ್ಯಕ್ರಮದಡಿ ಎಲ್ಲಾ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರನ್ನು ನದಿ ಮೂಲದಿಂದ ಕೊಡುವ ತೀರ್ಮಾನ ಕೈಗೊಂಡಿದ್ದಾರೆ, ಅದೇ ರೀತಿ ಕರ್ನಾಟಕ ರಾಜ್ಯಕ್ಕೂ ನದಿ ಮೂಲದಿಂದ ಈ ರಾಜ್ಯದ ಎಲ್ಲಾ ಹಳ್ಳಿಗಳಿಗೆ, ನಗರ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರಿನ್ನು ಕೊಡಬೇಕೆನ್ನುವ ಹಿನ್ನೆಲೆಯಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ ಒಂದು D.P.R., ಮಾಡುವುದಕ್ಕೆ ಘೋಷಣೆ ಮಾಡಿದ್ದೇವೆ, ಅದಕ್ಕೆ ಸುಮಾರು 53 ಸಾವಿರ ಕೋಟಿ ರೂಪಾಯಿಗಳಾಗಬಹುದೆಂದು ಅಂದಾಜು ಮಾಡಲಾಗಿದೆ. 'ಜಲಧಾರೆ' ಎನ್ನುವಂತಹ ಹೆಸರಿನಲ್ಲಿ ಮುಂದಿನ ದಿನಗಳಲ್ಲಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿ, ರಾಜ್ಯದಲ್ಲಿ ಈ ಒಂದು ಯೋಜನೆಯನ್ನು 5 ವರ್ಷದಲ್ಲಿ ಅನುಷ್ಠಾನಕ್ಕೆ ತರಬೇಕೆಂದು ತೀರ್ಮಾನ ಮಾಡಿದ್ದೇವೆ. ಅದೇ ರೀತಿಯಲ್ಲಿ ಅಕ್ಕಿ ಕೊಡುವ ವಿಚಾರದಲ್ಲಿ ಈ ಹಿಂದೆ ಕುಟುಂಬ ಒಂದಕ್ಕೆ 7 ಕೆ.ಜಿ. ಕೊಡತಕ್ಕಂಥ ಅಕ್ಕಿಯನ್ನು ಸರ್ಕಾರವು 5 ಕೆ.ಜಿ., ಗೆ ಇಳಿಸಿದೆ ಎಂದು ಚರ್ಚೆ ನಡೆಯುತ್ತಿದೆ.

ಮಾನ್ಯ ಸಭಾಪತಿಯವರೇ, ಅಕ್ಕಿ ನೀಡುವ ಯೋಜನೆಯಲ್ಲಿರುವ ಸಮಸ್ಯೆಯೇನೆಂದರೆ, ಹಿಂದೆ ಕೇಂದ್ರ ಸರ್ಕಾರ 'ಅಕ್ಕಿ ಭಾಗ್ಯ' ಎಂಬ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ ನಂತರ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಮೊದಲು ಪ್ರತಿ ತಿಂಗಳು ಒಂದು ರೂಪಾಯಿಗೆ ಒಂದು ಕೆ.ಜಿ.ಯಂತೆ 30 ಕೆ.ಜಿ. ಅಕ್ಕಿ ಕೊಡುವಂತಹ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದರು. ಕಳೆದ ವರ್ಷದಿಂದ ಕೊಡುತ್ತಿದ್ದ 7 ಕೆ.ಜಿ. ಅಕ್ಕಿಯ ಪ್ರಮಾಣವನ್ನು 5 ಕೆ.ಜಿ. ಗೆ ಇಳಿಸಿದ್ದಾರೆ ಎಂದು ದೊಡ್ಡ ಚರ್ಚೆ ನಡೆಯುತ್ತಿದೆ. ಆದರೆ ಸಮಸ್ಯೆ ಏನಾಗಿದೆಯೆಂದರೆ, ಫೆಬ್ರವರಿ ಆಯವ್ಯಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಲೇಖಾನುದಾನ 3097 ಕೋಟಿ ರೂಪಾಯಿಗಳಲ್ಲಿ subsidy ಗೆ 2124 ಕೋಟಿ ರೂಪಾಯಿಗಳು, ಎಸ್.ಸಿ.ಪಿ., ಗಾಗಿ 678 ಕೋಟಿ ರೂಪಾಯಿಗಳು, ಟಿ.ಎಸ್.ಪಿ., ಗಾಗಿ 395 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದರು. 2018-19ನೇ ಸಾಲಿನಲ್ಲಿ ರೇಷನ್ ಕಾರ್ಡ್‌ಗಳ ಸಂಖ್ಯೆ ಸುಮಾರು 22 ಲಕ್ಷದಷ್ಟು ಹೆಚ್ಚಾಗಿದೆ. ನಾವು 7 ಕೆ.ಜಿ. ಅಕ್ಕಿ ನೀಡಿ, ಅದರ ಜೊತೆಗೆ ಬೇಳೆ ಮತ್ತು ಎಣ್ಣೆಗಳನ್ನು ಲೆಕ್ಕ ಹಾಕಿದರೆ ವರ್ಷಕ್ಕೆ 5158 ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ಹೆಚ್ಚುವರಿಯಾಗಿ 2 ಕೆ.ಜಿ. ಅಕ್ಕಿ ಕೊಡುವುದೇನಿದೆ, ಇದರಲ್ಲಿ 2500 ಸಾವಿರ ಕೋಟಿ ರೂಪಾಯಿಗಳು ಈ ಒಂದು ಆರ್ಥಿಕ ವರ್ಷಕ್ಕೆ ಬೇಕಾಗುತ್ತದೆ. 2 ಕೆ.ಜಿ. ಅಕ್ಕಿ ಜಾಸ್ತಿ ಮಾಡದೇ ಇರುವುದಕ್ಕೆ ಕಾರಣವೇನೆಂದರೆ, ನಾವು ಸುಮಾರು 29, 30 ರೂಪಾಯಿಗಳನ್ನು ಭರಿಸಿ 2 ಕೆ.ಜಿ. ಅಕ್ಕಿಯನ್ನು ಖರೀದಿ ಮಾಡಬೇಕಾಗುತ್ತದೆ. ಹಾಗೆಯೇ N.F.S.A., (National Food Security Act) ನಲ್ಲಿ 3 ರೂಪಾಯಿ ಕೊಟ್ಟು 5 ಕೆ.ಜಿ. ಅಕ್ಕಿಯನ್ನು ಖರೀದಿಸುತ್ತಿದ್ದೇವೆ. ಅದಕ್ಕೆ ಸುಮಾರು 1520 ಕೋಟಿ ರೂಪಾಯಿ ಖರ್ಚಾಗುತ್ತದೆ. ಹಾಗೆಯೇ ಬೇಳೆ ಖರೀದಿಸಲು 427 ಕೋಟಿ ರೂಪಾಯಿಗಳಾಗುತ್ತದೆ. ಜೊತೆಗೆ ಸಕ್ಕರೆ ಇವೆಲ್ಲಾವನ್ನು ಲೆಕ್ಕ ಹಾಕಿದರೆ 5158 ಕೋಟಿ ರೂಪಾಯಿ ಈ ವರ್ಷದ ಖರ್ಚಾಗುತ್ತದೆ. ಆದರೆ, ಈಗ 3097 ಕೋಟಿ ರೂಪಾಯಿ ಮೀಸಲಿಟ್ಟಿದ್ದಾರೆ. ಯಾವುದೇ ಹಳೆಯ ಕಾರ್ಯಕ್ರಮವನ್ನು ರದ್ದು ಮಾಡಬಾರದೆಂದರೆ, ನಮಗೆ ಈಗ ಹೆಚ್ಚುವರಿಯಾಗಿ ಸುಮಾರು 1500-1700 ಕೋಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳಷ್ಟು ಅನುದಾನ ಬೇಕಾಗುತ್ತದೆ. ಇದನ್ನು ಹೇಗೆ ಹೊಂದಿಸಬೇಕೆಂದು ಒದಾಡುತ್ತಿದ್ದೇನೆ. ಏಕೆಂದರೆ, ನಾವು ಒಂದು ಕಡೆ ಆರ್ಥಿಕ ಶಿಸ್ತನ್ನು maintain ಮಾಡಬೇಕು. ಅದನ್ನು ಹಾಳು ಮಾಡಬಾರದು. ಜೊತೆಗೆ ನಾವು Deficit Budget ಗೆ ಹೋಗುವ ಹಾಗೆಯೂ ಇಲ್ಲ. ಇಲ್ಲಿಯವರೆಗೂ Surplus Budget ಮಾಡಿ, ಮತ್ತೆ Deficit Budget ಗೆ ಹೋದರೆ, ಒಂದು ರೀತಿ ನಮಗೆ ಮುಜುಗರವಾಗುತ್ತದೆ. ಅದರ ಹಿನ್ನೆಲೆಯಿಂದ 5 ಕೆ.ಜಿ. ಅಕ್ಕಿ ನೀಡುವುದಕ್ಕೆ reduce ಮಾಡಿದ್ದೇವೆ. ಆಯವ್ಯಯದಲ್ಲಿ ಏನು ಅನುದಾನ ಮೀಸಲಿಟ್ಟಿದ್ದರೂ ಅದೆಲ್ಲವನ್ನು ಲೆಕ್ಕಾಚಾರ ಮಾಡಲಾಗಿದೆ. ಇವತ್ತು ಸಾರ್ವಜನಿಕವಾಗಿ 7 ಕೆ.ಜಿ. ಅಕ್ಕಿ ನೀಡಬೇಕೆಂದು ಚರ್ಚೆ ನಡೆಯುತ್ತಿದ್ದು, ಕೆಲವು ಸಾರ್ವಜನಿಕರು ನನ್ನ ಹತ್ತಿರ ಬಂದು ಎಣ್ಣೆ ಕೊಡುವುದು ಬೇಡ, ಬೇಳೆ ಕೊಡುವುದು ಬೇಡ ನಿಲ್ಲಿಸಿ ಬಿಡಿ ಎಂದು ಕೇಳುತ್ತಿದ್ದಾರೆ. ನಾನೇನಾದರೂ ಅದನ್ನು ನಿಲ್ಲಿಸಿದರೆ ಪೌಷ್ಠಿಕಾಂಶ ಆಹಾರವಾದ ಬೇಳೆ ನೀಡುತ್ತಿದ್ದರು, ಎಣ್ಣೆ ನೀಡುತ್ತಿದ್ದರು; ಈಗ ಅದನ್ನೆಲ್ಲಾ ನಿಲ್ಲಿಸಿಬಿಟ್ಟರು ಎಂದು ಮತ್ತೊಂದು ವರ್ಗ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತದೆ. ಒಟ್ಟಾರೆಯಾಗಿ ಈ ವರ್ಷದ ಆಯವ್ಯಯಕ್ಕೆ 1500 ಕೋಟಿ ರೂಪಾಯಿ ಹೆಚ್ಚುವರಿಯಾಗಿ ಮಾಡಬೇಕಾಗಿದ್ದು, ಈ ಅನುದಾನವನ್ನು ಹೇಗೆ ತರಬೇಕೆಂದು ಯೋಚನೆ ಮಾಡುತ್ತಿದ್ದೇನೆ. ನಮಗೂ 7 ಕೆ.ಜಿ. ಅಕ್ಕಿ ನೀಡಬೇಕೆಂಬ ಆಸೆ ಇದೆ. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಬಡವರಿಗಾಗಿ ಒಂದು ಒಳ್ಳೆಯ ಕಾರ್ಯಕ್ರಮವನ್ನು ತಂದಿದ್ದಾರೆ. ಬಡವರಿಗೆ 7 ಕೆ.ಜಿ. ಅಕ್ಕಿ ಕೊಡಬೇಕೆಂದು ಹೇಳುತ್ತಾರೆ. ಆದರೆ, ಇನ್ನೂ ಕೆಲವರು ಸರ್ಕಾರ ಕೊಡತಕ್ಕಂಥ 7 ಕೆ.ಜಿ. ಅಕ್ಕಿಯನ್ನು ಎಷ್ಟೋ ಜನರು ಮಾರುಕಟ್ಟೆ ಬೆಲೆಯಲ್ಲಿ ಮಾರಾಟ ಮಾಡಿಕೊಳ್ಳುತ್ತಾರೆ ಎಂದು ಮಾತನಾಡುತ್ತಿದ್ದಾರೆ, ನಾನು ಅದರ ಬಗ್ಗೆ ಲಘುವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ಈ ನಾಡಿನ ಬಡ ಜನರ ಬಗ್ಗೆ ಅಷ್ಟು ಸಣ್ಣತನದಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಪ್ರತಿ ದಿನ ಅವರು ಜೀವನ ಮಾಡುವುದಕ್ಕಾಗಿ ಪಡತಕ್ಕಂಥ ಕಷ್ಟ ಏನೆಂಬುದನ್ನು ನಾನು ಅರಿತುಕೊಂಡಿದ್ದೇನೆ. ಜನಾಭಿಪ್ರಾಯ ಮತ್ತು ಶಾಸಕರ ಅಭಿಪ್ರಾಯ ಏನಿದೆ ಅದರ ಬಗ್ಗೆಯೂ ನಾನು ಏನು ಮಾಡಬೇಕೆಂದು ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಇದನ್ನು ಮುಂದಕ್ಕೆ ಎಳೆದುಕೊಂಡು ಹೋಗದೇ, ಸಧ್ಯದಲ್ಲಿಯೇ ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಇವತ್ತಿನ ಈ ಆಯವ್ಯಯದಲ್ಲಿ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಸದನಕ್ಕೆ ಹಾಜರಾಗಿದ್ದಂತಹ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಮಾನ್ಯವಾಗಿ ಬಡವರಿಗೆ ಒಂದು ಸಲ ಕೊಟ್ಟ ನಂತರ ಅದನ್ನು ಬದಲಾವಣೆ ಮಾಡುವುದು ಸರಿಯಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ ಎಂದು ಹೇಳಿದ್ದಾರೆ. ಹಾಗಾಗಿ ದಯವಿಟ್ಟು ಅದರ ಬಗ್ಗೆ ಗೊಂದಲ ಬೇಡ. 1700 ಕೋಟಿ ರೂಪಾಯಿ ತರುವುದು ಕಷ್ಟದ ವಿಚಾರವಲ್ಲ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳೇ ಇದನ್ನು announce ಮಾಡುವುದು ಒಳ್ಳೆಯದು ಎಂದು ನನ್ನಗನಿಸುತ್ತದೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈ ಮಾತನ್ನು ನಾನು ಏಕೆ ಹೇಳಿದ್ದೆ ಎಂದರೆ, ಇವತ್ತು ಒಂದು ಕಡೆ ರೈತರ ಸಾಲಮನ್ನಾ ಮಾಡತಕ್ಕಂಥ ಒಂದು ದೊಡ್ಡ ಹೊರೆಯನ್ನು ಹೊತ್ತುಕೊಂಡಿದ್ದೇವೆ. ಮತ್ತೊಂದು ಕಡೆ 6ನೇ ವೇತನ ಆಯೋಗವನ್ನು ಮಾಡಿರತಕ್ಕಂಥದ್ದು ಏನಿದೆ, ಅದರ ಒಂದು ದೊಡ್ಡ ಹೊರೆ ಸಹ ಇದೆ. ಹೀಗೆ ಇವೆಲ್ಲದರ ನಡುವೆ ನಾನು ಈ ಕಾರ್ಯಕ್ರಮವನ್ನು ಮುಂದುವರೆಸಬೇಕಾಗಿದೆ. ಮತ್ತೊಂದು ಕಡೆ ನೀರಾವರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದನ್ನು ಅನುಷ್ಠಾನಕ್ಕೆ ತರಬೇಕೆಂದರೆ ಹಣವನ್ನು ಹೊಂದಿಸಬೇಕಾಗುತ್ತದೆ. ಇಂತಹ ಬಹಳ ದೊಡ್ಡ ದೊಡ್ಡ ನಿರೀಕ್ಷೆಗಳಿವೆ. ಮುಂದಿನ ದಿನಗಳಲ್ಲಿ ಅಂಗನವಾಡಿ ಕಾರ್ಯಕರ್ತರ ಸಮಸ್ಯೆ ಉದ್ಭವಿಸಬಹುದು. ಅತಿಥಿ ಉಪನ್ಯಾಸಕರು ಎಂದು ಶಿಕ್ಷಕರು ಮತ್ತು Graduates' Constituency ಯಿಂದ ಆರಿಸಿ ಬಂದಿರತಕ್ಕಂಥವರು ಬರಬಹುದು, ಅದರ ಜೊತೆಗೆ ವಿರೋಧ ಪಕ್ಷದವರು ಸಹ ಹೊಸ ಹೊಸ ಬೇಡಿಕೆಗಳನ್ನಿಟ್ಟುಕೊಂಡು ಬರುತ್ತಾರೆ. ಜೊತೆಗೆ ಮುಷ್ಕರ ಮಾಡುತ್ತಾರೆ. ಗಲಾಟೆ ಮಾಡಿಸುತ್ತಾರೆ. ಹೀಗೆ ಏನೇನು ಆಗಬಹುದೆಂಬುದರ ಬಗ್ಗೆ ನಾನು ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇನೆ.

(ಮುಂದು) . . .

(300)/12.07.2018/7.50/ಎಸ್‌ಕೆ-ಜಿಆರ್

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮುಂತ್ರಿ)(ಮುಂದು):-** ಮಾನ್ಯ ಸಭಾಪತಿಯವರೇ, ಮುಂದೆ ಏನೇನು ಆಗಬಹುದೆಂಬುದನ್ನು ನಾನು ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇನೆ. ಈಗಾಗಲೇ ದೇವೇಗೌಡರದು ಪ್ರಾರಂಭವಾಯಿತು. ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅಂತಹ ಮುಷ್ಕರವಾಗುತ್ತದೆಯೆಲ್ಲಾ ಮಾನ್ಯ ಮುಖ್ಯಮಂತ್ರಿಗಳು..

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರ ಇದ್ದಂತಹ ಸಂದರ್ಭದಲ್ಲಿ, ಯಾರಿಗೂ ಮುಷ್ಕರ ಮಾಡಿ ಎಂದು ನಾನು ಯಾರಿಗೂ ಪ್ರೋತ್ಸಾಹವೂ ಕೊಟ್ಟಿಲ್ಲ ಮತ್ತು ಚಿತಾವಣೆಯೂ ಮಾಡಿಲ್ಲ. ಮುಷ್ಕರ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಇರಿಸು–ಮುರಿಸು ಆಗಬಾರದು ಎಂದು ನಾನೇ ಸ್ಥಳಕ್ಕೆ ಹೋಗಿ, ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸೋಣ. ಸರ್ಕಾರದ ಮೇಲೆ ಹೊರೆ ಹೊರೆಸಬೇಡಿ. ದಯವಿಟ್ಟು, ನಿಮ್ಮ ಮುಷ್ಕರವನ್ನು ನಿಲ್ಲಿಸಿ ಎಂದು ನಾನೇ ಹಲವಾರು ಸಲ ಸಹಕಾರ ಕೊಟ್ಟಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ, ನಮ್ಮ ಸರ್ಕಾರ ಬಂದ ಮೇಲೆ ಖಂಡಿತ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿ):–**ಮಾನ್ಯ ಸಭಾಪತಿಯವರೇ, ನಾನು ಹಂತ ಹಂತವಾಗಿ ಭರವಸೆಯನ್ನು ಈಡೇರಿಸುತ್ತೇನೆಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದಕ್ಕೆ ಬಯಸುತ್ತೇನೆ. ನಾನು ಯಾವುದೇ ಕಾರಣಕ್ಕೂ ಯಾರಿಗಾದರೂ ಭರವಸೆ ಕೊಟ್ಟಿದ್ದರೆ ಅದನ್ನು ಈಡೇರಿಸದೇ ಪಲಾಯನ ಮಾಡುವುದಿಲ್ಲ. ನಮ್ಮ ಸರ್ಕಾರ ಐದು ವರ್ಷ ಇರುತ್ತದೆ. ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ತರುತ್ತೇವೆ. ನಿಮ್ಮ ನಿರೀಕ್ಷೆಗಳ ಏನಿವೇ? ನಿಮ್ಮ ನಿರೀಕ್ಷೆಗಳಿಗೆ ತಲುಪುವಂತಹ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ನಾವು ಕೊಡುತ್ತೇವೆ. ಅದರಿಂದ ನಾನು ಹಿಂದೆ ಸರಿಯುವಂತಹ ಪ್ರಶ್ನೆಯೇ ಇಲ್ಲ. ಆದ್ದರಿಂದ, ಸಭೆಯ ಗಮನಕ್ಕೆ ತರುವುದೇನೆಂದರೆ, 2018–19ನೇ ಸಾಲಿನ ಈ ಒಂದು ಆರ್ಥಿಕ ವರ್ಷದಲ್ಲಿ, ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರಾದ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ಅನುಮೋದಿಸಿದ ಮೊಬಲಿಗೆ ನೀಡಿದ್ದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ, ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ನಾನು ಒಬ್ಬೊಬ್ಬ ಸದಸ್ಯರನ್ನೇ ಮಾತನಾಡುವುದಕ್ಕೆ ಹೇಳುತ್ತೇನೆ. ಯಾರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲವೋ, ಅವರಿಗೆ ಮೊದಲು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಮಾನ್ಯ ಮುಖ್ಯಮಂತ್ರಿಯವರು ಬಹಳಷ್ಟು ವಿಶ್ವಾಸವಾದಂತಹ ಮಾತುಗಳನ್ನು ಹೇಳಿದ್ದಾರೆ. ಆ ಪ್ರಕಾರವಾಗಿ ಆಗಲಿ ಎನ್ನುವಂತಹ ಆಶಯವನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸುತ್ತೇನೆ. ಈ ಸಂದರ್ಭದಲ್ಲಿ, ಅವರು ಅತಿಥಿ ಉಪನ್ಯಾಸಕರ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ ಮತ್ತು ಆ ಹೋರಾಟ ಮಾಡುವಂತಹ ಸ್ಥಳಕ್ಕೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದರು. ಅತಿಥಿ ಉಪನ್ಯಾಸಕರು ಮತ್ತು ಶಿಕ್ಷಕರು ತಮ್ಮ ಮೇಲೆ ಆಗಾಧವಾದಂತಹ ಭರವಸೆಯನ್ನು ಇಟ್ಟುಕೊಂಡಿದ್ದಾರೆ. ಕಾರಣವೇನೆಂದರೆ, ಡಾಕ್ಟರೇಟ್, N.E.T., ಹಾಗೂ S.L.E.T., ಮಾಡಿಕೊಂಡಿರುವಂತಹ ಮತ್ತು ಎಲ್ಲಾ ಅರ್ಹತೆಯನ್ನು ಹೊಂದಿರುವಂತಹ ಆ ಯುವಕರು, ಖಾಯಂ ನೇಮಕಾತಿಗೊಂಡಿರುವಂತಹ ಉಪನ್ಯಾಸಕರು ಐವತ್ತು ಆರವತ್ತು ಸಾವಿರ ರೂಪಾಯಿಗಳವರೆಗೆ ವೇತನವನ್ನು ಪಡೆಯುತ್ತಿರುವಂತಹ ಸಂದರ್ಭದಲ್ಲಿ ಅದೇ ಸಮಾನವಾದಂತಹ ಅರ್ಹತೆಯನ್ನು ಇಟ್ಟುಕೊಂಡಿರುವವರು ಸುಮಾರು ಹನ್ನೊಂದು ಸಾವಿರ ರೂಪಾಯಿಗಳಿಂದ ಹದಿಮೂರು ರೂಪಾಯಿಗಳ ವೇತನವನ್ನು ಪಡೆಯುತ್ತಿದ್ದಾರೆ. ಯು.ಜಿ.ಸಿ., ನಿಯಮಾವಳಿಗಳ ಪ್ರಕಾರ, ಅವರ ವೇತನವನ್ನು ಜಾಸ್ತಿ ಮಾಡುವ ಕಡೆ ಯೋಚನೆ ಮಾಡಬೇಕೆಂಬ ವಿನಂತಿಯನ್ನು ನಾನು ಮಾಡುತ್ತೇನೆ.

ಎರಡನೆಯದಾಗಿ, ಅದೇ ಅತಿಥಿ ಶಿಕ್ಷಕರಿಗೆ, ಒಂದು ಮಾನವೀಯತೆ ಪ್ರಶ್ನೆ ಇದೆ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ಪ್ರಾರಂಭದಲ್ಲಿ ಹೆರಿಗೆ ಭತ್ಯೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. Social security ದೃಷ್ಟಿಯಿಂದ ಕೊಡುವಂತಹ ಅಲೋಚನೆಯನ್ನು ಸ್ವಾಗತ ಮಾಡುತ್ತಾ, ಒಬ್ಬ ಮಹಿಳೆ ಗರ್ಭಿಣಿಯಾದರೆ ಅವರಿಗೆ ಪೌಷ್ಠಿಕಾಂಶವನ್ನು ಕೊಡುತ್ತೇವೆ, ಭತ್ಯವನ್ನು ಕೊಡುತ್ತೇವೆ ಎಂದು ಅಂಗನವಾಡಿ ಕಾರ್ಯಕರ್ತೆಯರು ಹೋಗಿ ಅವರ ಬಗ್ಗೆ ಕೇರ್ ತೆಗೆದುಕೊಳ್ಳುತ್ತಾರೆ. ಆದರೆ ಅದೇ ಮಹಿಳೆ ವಿದ್ಯಾವಂತೆಯಾದ ಕಾರಣ ಅತಿಥಿ ಶಿಕ್ಷಕಿ ಅಥವಾ ಅತಿಥಿ ಉಪನ್ಯಾಸಕಿಯಾದಂತಹ ಸಂದರ್ಭದಲ್ಲಿ, ಆಕೆ ಗರ್ಭಿಣಿಯಾದರೆ ಆಕೆಗೆ ರಜೆ ಸಿಗುತ್ತಿರಲಿಲ್ಲ. ಈಗ ರಜೆ ಸಿಗುತ್ತದೆ. ಆದರೆ ವೇತನವನ್ನು ಕಡಿತ ಮಾಡುತ್ತಾರೆ. ಒಬ್ಬ ಮಧ್ಯಮ ವರ್ಗದ ಅಥವಾ ಬಡ ವರ್ಗದ ಯುವತಿ ಅತಿಥಿ ಶಿಕ್ಷಕಿಯಾದಾಗ, ಗರ್ಭಿಣಿಯಾದ ತಪ್ಪಿಗಾಗಿ ತನ್ನ ವೇತನವನ್ನು ಮತ್ತು ರಜೆಯನ್ನು ಕಳೆದುಕೊಳ್ಳುತ್ತಾರೆ ಎಂಬುದು ಒಂದು ಅಮಾನವೀಯವಾಗುತ್ತದೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಂದು ಕಡೆ ಸರ್ಕಾರ ಮಹಿಳೆಯು ಸುರಕ್ಷತೆಯಿಂದ ಸಮಾಜದಲ್ಲಿ ಬದುಕುವುದಕ್ಕೆ ಅವಕಾಶ ಕೊಡುತ್ತಿದೆ. ಆದರೆ ಇಲ್ಲಿ ವಿದ್ಯಾವಂತ ಹೆಣ್ಣು ಮಗಳಿಗೆ ಅವಕಾಶ ಕೊಡುತ್ತಿಲ್ಲ. ಇದನ್ನು ಸಹ ತಾವು ಪರಿಗಣಿಸಬೇಕು. ಮೂರನೆಯದಾಗಿ, ಅವರಿಗೆ ಸೇವಾ ಭದ್ರತೆ ಇಲ್ಲ. ಪ್ರತಿ ವರ್ಷವೂ ಆನ್‌ಲೈನ್‌ನಲ್ಲಿ ಕರೆಯುವಂಥದ್ದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಮಾಡುವಂಥದ್ದು ಇದೆ. ಈಗಾಗಲೇ ಹತ್ತು-ಹದಿನೈದು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಈಗ ಅವರನ್ನು ಮಧ್ಯದಲ್ಲಿ ಕೈಬಿಟ್ಟರೆ, ಅವರ ಭವಿಷ್ಯ ನರಕವಾಗುತ್ತದೆ ಮತ್ತು ವಯೋಮಿತಿಯನ್ನು ಮೀರುತ್ತಾ ಇದ್ದಾರೆ. ಆ ಕಾರಣಕ್ಕಾಗಿ, ಆ ತರಹ ಸೇವಾ ಭದ್ರತೆಯ ದೃಷ್ಟಿಯಿಂದ ತಾವು ಒಂದು ಭರವಸೆಯನ್ನು ಕೊಡಬೇಕೆಂದು ವಿನಂತಿ ಮಾಡುತ್ತಾ, ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಅಲ್ಲಲ್ಲಿ ಅಂದರೆ, ಹೊಸದಾಗಿ ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು, ಎರಡನ್ನೂ ಗಮನದಲ್ಲಿಟ್ಟುಕೊಂಡು, ಅವರಿಗೆ ಹೆಚ್ಚಿನ ಅವಕಾಶವನ್ನು ತಾವು ಕೊಡುವ ಬಗ್ಗೆ ಒಂದು ಭರವಸೆಯನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಮೂರನೆಯದಾಗಿ, ಕಾಲ್ಪನಿಕ ವೇತನದ ಬಗ್ಗೆ ಹೇಳಬೇಕೆಂದರೆ, ಮಾನ್ಯ ಸಭಾಪತಿಯವರೇ, ಈ ಕಾಲ್ಪನಿಕ ವೇತನದ ಅಧ್ಯಕ್ಷರಾಗಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಹಣದ commitment ಇಲ್ಲ. ಅದನ್ನು ಬಿಟ್ಟುಕೊಡುತ್ತೇವೆ ಎನ್ನುವಂತಹ ಮಾತನ್ನು ಕೂಡ ಕಳೆದ ಬಾರಿ ಸದನದಲ್ಲಿ ಚರ್ಚೆಯಾಗಿರುವುದನ್ನು ನಾನು ಗಮನಿಸಿದ್ದೇನೆ. ಅಧಿಕೃತವಾಗಿ ಪೂರ್ತಿ ಮಾಹಿತಿ ಇಲ್ಲದೇ ಇದ್ದರೂ, ಆ ಕಾಲ್ಪನಿಕ ವೇತನ ಸಮಸ್ಯೆ ಕೂಡ ಬಹಳ ಧೀರ್ಘಕಾಲದಿಂದಲೂ ಇದೆ, ಅದರ ಬಗ್ಗೆಯೂ ಕೂಡ ಒಂದು ಒಳ್ಳೆಯ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು, ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್.,), ಬಗ್ಗೆ ಹೇಳಬೇಕೆಂದರೆ, ನಾವು ಕೂಡ 2006 ರ ನಂತರ ಆಯ್ಕೆಯಾಗಿದ್ದೇವೆ. ನಾವು ಕೂಡ ಒಂದಲ್ಲ ಒಂದು ರೀತಿಯ ಸರ್ಕಾರಿ ನೌಕರರೇ. We are also Public Servants. ಅಲ್ಲಿ ಕುಳಿತವರಿಗಾಗಲಿ ಅಥವಾ ಇಲ್ಲಿ ಕುಳಿತವರಿಗಾಗಲಿ ಯಾರಿಗೂ ಹೊಸ ನೂತನ ಪಿಂಚಣಿ ಯೋಜನೆ ಅನ್ವಯವಾಗುವುದಿಲ್ಲ. ಅದು ತುಂಬಾ ಲಾಭದಾಯಕವಾದಂತಾದರೆ, ಆ ಯೋಜನೆ ಇಡೀ ದೇಶದಲ್ಲಿ ಜಾರಿಗೆ ಬಂದಿದೆ. ಆದರೆ ರಾಜ್ಯ ಸರ್ಕಾರಗಳಿಗೂ ಒಂದು ಅಧಿಕಾರ ಇದೆ. ಅಂದರೆ ಅದನ್ನು ಆಯ್ಕೆ, ಮಾಡಿಕೊಳ್ಳುವುದಕ್ಕಾಗಲಿ ತಿರಸ್ಕಾರ ಮಾಡುವುದಕ್ಕಾಗಲಿ, ತಿದ್ದುಪಡಿ ಮಾಡಿಕೊಳ್ಳುವುದಕ್ಕಾಗಲಿ ಅವಕಾಶಗಳಿವೆ. ಅದನ್ನು ತುಂಬಾ ಲಾಭದಾಯವಾದಂತಾದರೆ, ನಮ್ಮೆಲ್ಲ ಶಾಸಕರುಗಳಿಗೂ ಮತ್ತು ಎಲ್ಲಾ ಅಧಿಕಾರಿಗಳಿಗೂ ನೂತನ ಪಿಂಚಣಿ ಯೋಜನೆಯನ್ನು ಅನ್ವಯ ಮಾಡಬೇಕು, ಇಲ್ಲವಾದರೆ ಹಳೆಯ ಯೋಜನೆಗೆ ಹೋಗಬೇಕು ಎನ್ನುವಂತಹ ಒಂದು ಸಲಹೆ ತಮ್ಮ ಮುಂದಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಗೆ ಅನ್ನ ಭಾಗ್ಯದ ಬಗ್ಗೆ ತಾವು ಹೇಳಿದ್ದೀರಿ. ತಾವು ಹಳೆಯ ಸ್ಕೀಮ್ ಅನ್ನೇ ಮುಂದುವರೆಸಿದ್ದೇನೆಂಬ ಮಾತಿಗೆ ಅಪವಾದ ಆಗಬಾರದು. ಹಳೆ ಯೋಜನೆಯನ್ನೇ ಮುಂದುವರೆಸಿದ್ದೇ ಆದರೆ ಈಗ ಕೊಡುತ್ತಿರುವಂತಹ ಏಳು ಕೆಜಿ ಅಕ್ಕಿಯನ್ನು ಮುಂದುವರೆಸಬೇಕು.

ಸನ್ಮಾನ್ಯ ಸಾರಿಗೆ ಸಚಿವರು ಕೂಡ ಇಲ್ಲಿ ಇದ್ದಾರೆ. ಹಳೆಯ ಸ್ಕೀಮ್‌ನಲ್ಲಿ ಉಚಿತವಾಗಿ ವಿದ್ಯಾರ್ಥಿಗಳಿಗೆ ಪಾಸ್ ಕೊಡುತ್ತೇವೆಂಬ ಘೋಷಣೆ ಇದೆ. ಅದು Vote on Account ನಲ್ಲಿಯೂ ಕೂಡ ಪಾಸ್ ಆಗಿದೆ. ಉಚಿತ ಪಾಸ್‌ಗೋಸ್ಕರ ವಿದ್ಯಾರ್ಥಿಗಳು ಎಲ್ಲಾ ಕಡೆ ಹೋರಾಟ ಮಾಡುತ್ತಿದ್ದಾರೆ. ಅದನ್ನು ನಿಲ್ಲಿಸುವ ದೃಷ್ಟಿಯಿಂದ, ತತ್‌ಕ್ಷಣ ನಾಳೆಯಿಂದಲೇ ಆ ಪಾಸ್‌ಗಳ ವಿತರಣೆಯಾಗಬೇಕು ಎಂದು ಹೇಳುತ್ತಾ, ಈ ಮೂರು-ನಾಲ್ಕು ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ಬಹಳ ಸುದೀರ್ಘವಾಗಿ ಪಟ್ಟಿಯನ್ನು ಮಾಡದೇ, ಮತ್ತೆ ಮತ್ತೆ ಹೇಗೋ ಸದನವನ್ನು ತಾವು ಕರೆದೇ ಕರಯುತ್ತೀರಿ. ಆ ಸಮಯದಲ್ಲಿ ಮತ್ತೆ ಗಮನಕ್ಕೆ ತರಬಹುದು. ಆದರೆ ಒಂದು ವಿನಂತಿ ಏನೆಂದರೆ, ಹಿಂದಿನಗಿಂತ ಈ ಬಾರಿ ಹೆಚ್ಚು ದಿನಗಳ ಕಾಲ ಸದನವನ್ನು ತಾವು ದಯಮಾಡಿ ನಡೆಸಬೇಕು. ನಾವು ಮೂರು ತಿಂಗಳಿಗೊಮ್ಮೆ ಸದನವನ್ನು ಸೇರುತ್ತೇವೆ. ರಾಜ್ಯದಲ್ಲಿ ಸಂಕಷ್ಟಗಳು ಬಹಳ ಇವೆ. ಸರ್ಕಾರದ ಗಮನಕ್ಕೆ ತರುವುದಕ್ಕೆ ಅವಕಾಶ ಸಿಗುವುದು ಇದೊಂದೇ ಬಾರಿ. ಸದನದ ದಿನಗಳೇ ಕಡಿಮೆಯಾಗುತ್ತಿವೆ. ದಯಮಾಡಿ, ತಾವು ಸದನವನ್ನು ಕನಿಷ್ಠ 60 ದಿನಗಳಿಂದ 80 ದಿನಗಳವರೆಗೆ ನಡೆಸಿರುವ ಒಬ್ಬ ಯುವ ಮುಖ್ಯಮಂತ್ರಿ ದಿಟ್ಟತನದಿಂದ ಈ ರಾಜ್ಯದ ಚರ್ಚೆಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಒಂದು credit ತಮಗೆ ಸಿಗುತ್ತದೆ. ಸದನ ಹೆಚ್ಚು ದಿನಗಳ ಕಾಲ ನಡೆಯಲಿ. ಸದನಕ್ಕೆ ಬರುವಾಗ ನಮ್ಮ ಅಧಿಕಾರಿಗಳಾಗಲಿ ಮತ್ತು ಮಂತ್ರಿಗಳಿಗೆ ಮಂತ್ರಿಮಂಡಲ strict ಆಗಿಸಿದರೆ, ಅವರು ತಯಾರಾಗಿ ಬರಲಿ. ನಮಗೆ ಅಪರೂಪಕ್ಕೆ ಒಂದು ಪ್ರಶ್ನೆ ಸಿಕ್ಕಿರುತ್ತದೆ. ಅದಕ್ಕೆ ಕಾಲಾವಕಾಶ ಕೊಡುವುದು ಮತ್ತು ಅದನ್ನು ಮುಂದೆ ತೆಗೆದುಕೊಳ್ಳುತ್ತೇವೆ ಎನ್ನುವುದು ಮತ್ತೆ ಯಾವಾಗ ಕೇಳುವುದಕ್ಕೆ ಸಾಧ್ಯವಾಗುತ್ತದೆ ಎಂದರೆ ಇನ್ನು ಮೂರು ತಿಂಗಳು ಬಿಟ್ಟು, ಅಷ್ಟು ಹೊತ್ತಿಗೆ ಪರಿಸ್ಥಿತಿ ಬದಲಾವಣೆಯಾಗಿರುತ್ತದೆ. ಆ ದೃಷ್ಟಿಯಿಂದ ಸನ್ನದ್ದರಾಗಿ ಬರುವಂತಹ ಅಧಿಕಾರಿಗಳಿಗೂ ಮತ್ತು ನಮ್ಮ ಸಚಿವರಿಗಳಿಗೂ ತಿಳಿಸುವ ಜೊತೆಗೆ, ಸ್ವಲ್ಪ ಅವಧಿಯನ್ನು ಕನಿಷ್ಠ 60 ದಿನಗಳಿಂದ 80 ದಿನಗಳವರೆಗೂ ಸತತವಾಗಿ ಸದನವನ್ನು ನಡೆಸಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಕೊನೆಯದಾಗಿ, ತಾವು ಈ ವರ್ಷ ಬಹಳ ದೊಡ್ಡ ಹೊರೆಯನ್ನು ಹೊತ್ತಿದ್ದೀರಿ. ಇದು ಸಹಜ, ಈ ದೊಡ್ಡ ಸರ್ಕಾರದಲ್ಲಿ ಮತ್ತು ಇಷ್ಟು ದೊಡ್ಡ ಜನಸಂಖ್ಯೆಯಲ್ಲಿ ಇನ್ನೊಂದು ಸಾಲವನ್ನು ಮನ್ನಾ

ಮಾಡಬೇಕು. ಇದೆಲ್ಲದರ ಜೊತೆಗೆ, ಅದು ಯಾವುದು ಎಂದರೆ, ಶಿಕ್ಷಣದ ಸಾಲ. ಸಾಮಾನ್ಯ ಪದವಿಯನ್ನು ಪಡೆದ ಯಾವುದೇ ವಿದ್ಯಾರ್ಥಿಗಳಿಗೆ ಉದ್ಯೋಗಗಳು ಸಿಗುವುದಿಲ್ಲ. ಆದಕಾರಣ ಉನ್ನತ ಶಿಕ್ಷಣಗೋಸ್ಕರ ಮಧ್ಯಮ ವರ್ಗದ ಬಡವರು, ರೈತರ ಮಕ್ಕಳು, ಕೂಲಿ ಕಾರ್ಮಿಕರ ಮಕ್ಕಳು ಶಿಕ್ಷಣದ ಸಾಲ ತೆಗೆದುಕೊಳ್ಳುವರು. ಅಂದರೆ ಸಾಲ ತೆಗೆದುಕೊಳ್ಳುವಂಥವರು ಸಾಮಾನ್ಯ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳೇ ಹೊರೆತು ಯಾರೂ ಹಣವಂತರಲ್ಲ. ಅಂತಹ ವಿದ್ಯಾರ್ಥಿಗಳು ಸಾಲ ತೆಗೆದುಕೊಳ್ಳುವಾಗ surety ಗಳನ್ನೇ ತೆಗೆದುಕೊಳ್ಳಬಾರದು ಮತ್ತು security ತೆಗೆದುಕೊಳ್ಳಬಾರದು ಎಂದಿದ್ದರೂ ಕೂಡ ಬ್ಯಾಂಕ್‌ಗಳು ನಿಯಮವನ್ನು ಉಲ್ಲಂಘನೆ ಮಾಡಿ, security ತೆಗೆದುಕೊಂಡಿದ್ದಾರೆ. ಅವರ ಮನೆಗಳನ್ನೋ ಅಥವಾ ಜಮೀನುಗಳನ್ನು surety ಕೊಟ್ಟು, ಸಾಲ ತೆಗೆದುಕೊಂಡಿದ್ದಾರೆ. ಅವರ ಪದವಿಯನ್ನೋ ಮುಗಿದು ಹೋಗಿದೆ. ಉದ್ಯೋಗ ಸಿಕ್ಕಿಲ್ಲ. ಹಾಗಾಗಿ ಸಾಲವನ್ನು ವಾಪಸ್ಸು ಕಟ್ಟುವುದಕ್ಕೆ ಆಗುತ್ತಿಲ್ಲ. ಆದರೆ ಬ್ಯಾಂಕ್‌ಗಳು ಮೂರು ವರ್ಷ ಅವಧಿಯನ್ನು ಕೊಟ್ಟಿದ್ದು, ಬ್ಯಾಂಕ್‌ನವರು ನೋಟಿಸ್ ಕೊಟ್ಟು, ಈಗ ಹರಾಜು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ಆತಂಕಗೊಂಡ, ಆ ಯುವಕ ತನ್ನ ಕಡೆಯಿಂದ ತನ್ನ ಮನೆ ಹರಾಜಿಗೆ ಬಂತು ಎನ್ನುವ ದುಃಖದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಮುಟ್ಟಿದ್ದಾನೆ. ಆತ್ಮಹತ್ಯೆ ಮಾಡಿಕೊಂಡರೆ, ಆ ಕಾರಣಕ್ಕಾಗಿ ಆತ್ಮಹತ್ಯೆ ಎನಿಸುವುದಿಲ್ಲ. ವಿಪರ್ಯಾಸವೆಂದರೆ, ಆ ಯುವಕ ಆತ್ಮಹತ್ಯೆ ಮಾಡಿಕೊಂಡರೆ, ಇದು ಪ್ರೇಮ ಪ್ರಕರಣ ಇರಬಹುದು ಎಂದು ಹೇಳಿ ಭಾವಿಸುತ್ತಾರೆ. ಈ ಕಾರಣಕ್ಕಾಗಿ ಅದು ದೊಡ್ಡ ಪ್ರಮಾಣದಲ್ಲಿ ಇಲ್ಲ. ಸಾಧ್ಯವಾದಷ್ಟು ಸಾಲ ಮನ್ನಾ ಮಾಡಿದರೆ ಬಹಳ ಉಚಿತ. ಅದು ಆಗದಿದ್ದರೆ, ಕನಿಷ್ಠ ಶಿಕ್ಷಣಕ್ಕೆ ಬಡ್ಡಿ ರಹಿತ ಸಾಲವಾಗಿ ಏನಾದರೂ ಮರುಪಾವತಿ ಮಾಡಬೇಕು ಮತ್ತು ಬಡ್ಡಿಯನ್ನು ಮನ್ನಾ ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಸಭಾಪತಿಯವರು:–** ಎಸ್.ವ್ಹಿ. ಸಂಕನೂರವರೇ ಸ್ವಲ್ಪ ಚುಟಕಾಗಿ ಮಾತನಾಡಿ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾಗಿರುವ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಒಳ್ಳೆಯ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ನನ್ನ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎರಡು–ಮೂರು ಬೇಡಿಕೆಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕರ್ನಾಟಕ ವಿಶ್ವವಿದ್ಯಾಲಯದ ಗದಗ್‌ಗೆ ಪಿ.ಜಿ., ಸೆಂಟರ್ ಪ್ರಾರಂಭವಾಗಿ ಸುಮಾರು 15 ವರ್ಷಗಳಿಗೂ ಹೆಚ್ಚಾಗಿದೆ. ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಇದ್ದಾಗ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದರು. ಇವತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗದುಗಿನಲ್ಲಿ ಸುಮಾರು ಎಂಟು-ಹತ್ತು ಪಿ.ಜಿ., ಕೋರ್ಸ್‌ಗಳನ್ನು ನಡೆಸುವಂತಹ ಕಟ್ಟಡವಿಲ್ಲ. ಒಂದು ಕೋಟಿ ರೂಪಾಯಿಯೊಳಗೆ ಸುಮಾರು 35-40 ಎಕರೆ ಜಾಗ ಖರೀದಿಯಾಗಿದೆ. ಅದು ಬಿಟ್ಟರೆ ಮುಂದೆ ಯಾವುದೇ ಬೆಳವಣಿಗೆಯೂ ಆಗಿಲ್ಲ.

(ಮುಂದು...)

(301)12.07.2018 ಟಿಸಿಹೆಚ್/ಎಂಡಿ 6.00

**ಶ್ರೀಎಸ್.ವ್ಹಿ.ಸಂಕನೂರ (ಮುಂದು):-**

ನಾನು ಎಂ.ಎಲ್.ಸಿ ಯಾಗಿ ಸುಮಾರು ನಾಲ್ಕು ವರ್ಷವಾಯಿತು. ನಾನು ಪ್ರತಿ ವರ್ಷ ಈ ಸಂಬಂಧ ಮನವಿ ಮಾಡಿಕೊಳ್ಳುತ್ತಿದ್ದೇನೆ. ಗದಗದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒಂದು ಪೈಸೆ ಹಣವನ್ನು ಕೂಡ ಬಿಡುಗಡೆ ಮಾಡಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಕಳಕಳಿ ಮಾಡುವುದೇನೆಂದರೆ, ಈ ಗದಗ ಕರ್ನಾಟಕ ವಿಶ್ವವಿದ್ಯಾಲಯದ ಜೊತೆಗೆ ಹಾವೇರಿಯಲ್ಲಿ ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಈಗ ಹಾವೇರಿಯಲ್ಲಿ fully established Post Graduate Centre ಪ್ರಾರಂಭವಾಗಿದೆ. ಆದರೆ, ಗದಗಗೆ ಅನುದಾನ ಕೊಡದೇ ಅನ್ಯಾಯವಾಗಿದೆ. ಆದ್ದರಿಂದ ದಯವಿಟ್ಟು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಹೇಳುತ್ತೇನೆ. ಒಂದು ಸಂತೋಷದ ಸಂಗತಿ ಏನೆಂದರೆ, ಈ ಬಜೆಟ್‌ನಲ್ಲಿ ಜಾತ್ಯಾತೀತವಾಗಿ ದಾಸೋಹ ಮತ್ತು ಶಿಕ್ಷಣ ಕೊಡತಕ್ಕಂಥ ಸುಮಾರು 17 ಸಂಸ್ಥೆಗಳಿಗೆ 25 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, ಅದು ತಮಗೂ ಕೂಡ ಗೊತ್ತಿದೆ. ಗದಗನಲ್ಲಿ 'ವೀರೇಶ್ವರ ಪುಣ್ಯಾಶ್ರಮ' ಎಂದು ಒಂದು ವಿದ್ಯಾಸಂಸ್ಥೆ ಇದೆ. ಇವತ್ತಿನ ದಿವಸ ಅಲ್ಲಿ ಅಂಧ ಅನಾಥ ಮಕ್ಕಳುಗಳಿಗೆ ಆಶ್ರಯ ಕೊಟ್ಟು, ಶಿಕ್ಷಣವನ್ನು ಕೊಡಲಾಗುತ್ತಿದೆ. ವಿಶೇಷವಾಗಿ ಸಂಗೀತ ಶಿಕ್ಷಣವನ್ನು ಕೊಡುತ್ತಿದೆ. ಇದು ಇಡೀ ರಾಜ್ಯಕ್ಕೆ ಅಲ್ಲದೇ, ಇಡೀ ದೇಶಕ್ಕೆ ಸಂಗೀತ ಶಿಕ್ಷಣವನ್ನು ಕೊಡತಕ್ಕಂಥ ಒಂದು ಮಾದರಿ ಸಂಸ್ಥೆಯಾಗಿದೆ. ಇದು ಅಂಧರ ಏಳಿಗೆಗಾಗಿ ಶ್ರಮಿಸುತ್ತಿದೆ. ಪಂಚಾಕ್ಷರಿ ಗವಾಯಿಯವರಾದ ಶ್ರೀ ಪುಟ್ಟರಾಜ ಗವಾಯಿಯವರು ಈ ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಅವರೇನು ಈ ಸಂಸ್ಥೆಯನ್ನು ನಡೆಸುತ್ತಿದ್ದಾರೆ, ಅದಕ್ಕೆ ಅವರ ಕೆಲಸವನ್ನು ಮೆಚ್ಚಿಕೊಂಡು ರಾಜ್ಯ ಸರ್ಕಾರ 'ರಾಜ್ಯೋತ್ಸವ ಪ್ರಶಸ್ತಿ' ಹಾಗೂ ಹಲವಾರು ಪ್ರಶಸ್ತಿಗಳನ್ನು ಕೊಟ್ಟಿದೆ. ಕೇಂದ್ರ ಸರ್ಕಾರವು 'ಸಂಗೀತ ಅಕಾಡೆಮೆ ಪ್ರಶಸ್ತಿ'ಯನ್ನು ಕೊಟ್ಟಿದೆ. ಸುಮಾರು 800 ಅನಾಥ ಅಂಧ ಮಕ್ಕಳಿಗೆ ಆಶ್ರಯ ನೀಡಿ ಆ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಅಂದರೆ, ಶ್ರೀ ಪುಟ್ಟರಾಜು ಗವಾಯಿಯವರು third generation ನವರು. ಆದ್ದರಿಂದ ಈಗಾಗಲೇ 17 ಸಂಸ್ಥೆಗಳಿಗೆ ಅನುದಾನವನ್ನು ಮಂಜೂರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ಅದೇ ರೀತಿ ಈ ಸಂಸ್ಥೆಗೂ ಕೂಡ ವಿಶೇಷವಾದಂತಹ ಅನುದಾನವನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ಇನ್ನೂ ಮೂರನೆಯದಾಗಿ, 1995 ರವರೆಗೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಅನುದಾನವನ್ನು ಕೊಟ್ಟಿದ್ದಾರೆ. ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ಮತ್ತು ಪದವಿಪೂರ್ವ ಕಾಲೇಜುಗಳಿಗೆ 1995 ರವರೆಗೆ ಅನುದಾನವನ್ನು ಕೊಟ್ಟಿದ್ದಾರೆ. ಈಗಾಗಲೇ ಎಸ್.ಸಿ ಮತ್ತು ಎಸ್.ಟಿಯವರು ನಡೆಸುತ್ತಿರುವ ಪದವಿ ಕಾಲೇಜುಗಳಿಗೆ 1987 ರಿಂದ 1995ರವರೆಗೆ ಅನುದಾನ ಕೊಟ್ಟಿದ್ದಾರೋ ಅದೇ ರೀತಿ ಇತರೆಯವರು ನಡೆಸತಕ್ಕಂಥ ಪದವಿ ಕಾಲೇಜುಗಳಿಗೂ ಕೂಡ ಅನುದಾನವನ್ನು ಕೊಡತಕ್ಕಂಥ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ. ಈಗಾಗಲೇ ಮಾನ್ಯ ಸದಸ್ಯರುಗಳು ಕಾಲ್ಪನಿಕ ವೇತನದ ಬಗ್ಗೆ ಮತ್ತು ಎನ್.ಪಿ.ಎಸ್ ನೌಕರರ ಬಗ್ಗೆ ಕೂಡ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತಾ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಸದನದಲ್ಲಿ ಯಾವ ಸದಸ್ಯರು ಮಾತನಾಡಿಲ್ಲವೋ ಅಂತಹವರಿಗೆ ಮೊದಲು ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಶ್ರೀ ಅರುಣ ಶಹಾಪುರ ರವರೇ ತಾವು ಮಾತನಾಡಿ. ಬರೀ clarification ಕೇಳಿ. ತುಂಬಾ ಭಾಷಣ ಮಾಡುವುದು ಬೇಡ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, clarification ಮಾತ್ರ ಕೇಳುತ್ತೇನೆ. ಶಿಕ್ಷಣ ಇಲಾಖೆಗೆ ಈ ಬಜೆಟ್‌ನಲ್ಲಿ ಅನುದಾನ ಸಿಕ್ಕಿದೆಯೋ ಅಥವಾ ಶಿಕ್ಷಣ ಇಲಾಖೆಯಿಂದ ಅದನ್ನು ಕಿತ್ತುಕೊಂಡಿದ್ದಾರೋ ಎನ್ನುವಂತಹ ಒಂದು ಸಂಶಯ ಇದೆ. ದಿನ ಪತ್ರಿಕೆಯಯಲ್ಲಿ 'ಕನ್ನಡ ಶಾಲೆಗಳಿಗೆ ಕಂಟಕ, 28000 ಸರ್ಕಾರಿ ಶಾಲೆಗಳನ್ನು ಮುಚ್ಚುವಂತಹ ಹುನ್ನಾರ' ಎಂದು ವರದಿಯಾಗಿದೆ. ಸಾಹಿತಿಗಳು ಆಹ್ವಾನಿಸಿರುವಂತಹ ಸಭೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೋಗಿ ಹೇಳಿದ್ದಾರೆ. ಅದನ್ನು ಈ ಸದನದಲ್ಲಿ ಹೇಳುತ್ತಾರೆಂದು ಭಾವಿಸಿದ್ದೆನು. ಆದರೆ ಅವರು ಹೇಳಲಿಲ್ಲ. ಮೊದಲನೆಯದಾಗಿ, ಸುಮಾರು 28000 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದ್ದೇವೆ. ಸುಮಾರು 8500 ಶಾಲೆಗಳನ್ನು ವಿಲೀನ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ಪರಿಶೀಲನೆ ಮಾಡಬೇಕು. ಈ 28000 ಶಾಲೆಗಳನ್ನು ಮುಚ್ಚುವುದಕ್ಕೆ ನಿರ್ಣಯ ತೆಗೆದುಕೊಳ್ಳುವುದರ ಹಿಂದೆ, ಸರ್ಕಾರ ಯಾವುದಾದರೂ ವರದಿಯನ್ನು ತರಿಸಿಕೊಂಡಿದ್ದಾರೆಯೇ, ಇದರ ಬಗ್ಗೆ ಏನಾದರೂ ಅಧ್ಯಯನಗಳು ನಡೆದಿದೆಯೇ? 28000 ಸರ್ಕಾರಿ ಶಾಲೆಗಳು ಮುಚ್ಚಲ್ಪಟ್ಟರೆ, ಈ ರಾಜ್ಯದ ಶಿಕ್ಷಣ ವ್ಯವಸ್ಥೆ ಮೇಲೆ ಆಗುವಂತಹ ಪರಿಣಾಮಗಳೇನು ಎನ್ನುವುದರ ಬಗ್ಗೆ ತಮ್ಮಿಂದ ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾವಾರು ಯಾವ್ಯಾವ ಶಾಲೆಗಳನ್ನು ಮುಚ್ಚುತ್ತಿದ್ದೀರಿ ಎಂಬುದರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಮಾಹಿತಿ ಕೊಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಕೇಳುತ್ತಿದ್ದೇನೆ. ಇನ್ನು ಎರಡನೇ clarification ನನಗೆ ಬೇಕಾಗಿರುತ್ತದೆ. 4100 ಅಂಗನವಾಡಿ ಕೇಂದ್ರಗಳನ್ನು ಸರ್ಕಾರಿ ಶಾಲೆಗಳಿಗೆ ಸ್ಥಳಾಂತರ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ನಮ್ಮ ಶಿಕ್ಷಣ ನೀತಿಯಲ್ಲಿ ಏನಾದರೂ ಬದಲಾವಣೆ ಆಗಿದೆಯೇ? ಎಲ್‌ಕೆಜಿ ಮತ್ತು ಯುಕೆಜಿಯನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರಬೇಕೆಂದರೆ, National Policy for Children, 2013 ಪ್ರಕಾರ, 5 ವರ್ಷ 10 ತಿಂಗಳವರೆಗೆ ಮಕ್ಕಳಿಗೆ ಔಪಚಾರಿಕ ಶಿಕ್ಷಣವನ್ನು ಕೊಡುವಂತಿಲ್ಲ. ನಮ್ಮ ರಾಜ್ಯದಲ್ಲಿ ನಾವು Montessori, LKG and UKG ಶಿಕ್ಷಣವನ್ನು ಕೂಡ ಅಳವಡಿಸಿಕೊಳ್ಳುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರದ ಚಿಂತನೆ ಅಥವಾ ಸರ್ಕಾರದಲ್ಲಿ ಏನು ಬದಲಾವಣೆಯಾಗಿದೆ ಎನ್ನುವಂಥದ್ದನ್ನು ನಾನು ಕೇಳುವುದಕ್ಕೆ ಬಯಸುತ್ತಿದ್ದೇನೆ. ಇದರ ಜೊತೆಗೆ ಸುಮಾರು 1000 ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮವನ್ನೂ ಕೂಡ ಆರಂಭಿಸುತ್ತೇವೆಂದು ಹೇಳಿದ್ದಾರೆ. ನಾವು ಇದೆಲ್ಲವನ್ನೂ ನೋಡಿದಾಗ, ಬಹುತೇಕ ಸರ್ಕಾರಿ ಶಾಲೆಗಳನ್ನು ವ್ಯವಸ್ಥಿತವಾಗಿ ಹಾಳು ಮಾಡುತ್ತಿದ್ದೀವೇನೋ ಎನ್ನುವಂತಹ ಭಾವನೆ ಸಮಾಜದಲ್ಲಿ ಮತ್ತು ನಮ್ಮಲ್ಲಿ ಮೂಡುತ್ತಿದೆ. ಈ ಹಿನ್ನೆಲೆಯಲ್ಲಿ, ತಮ್ಮ ಬಜೆಟ್‌ನಲ್ಲಿ ಶಿಕ್ಷಣ ಇಲಾಖೆಗೆ ಸಿಕ್ಕಿದೆಯೋ ಅಥವಾ ಕಳೆದುಕೊಳ್ಳುತ್ತಿದ್ದೇವೆಯೋ ಎನ್ನುವಂತಹ ಭಾವನೆ ಇದೆ. ಆದ್ದರಿಂದ ದಯವಿಟ್ಟು ಇದನ್ನು clarify ಮಾಡಬೇಕು ಎನ್ನುವಂತಹ ವಿನಂತಿಯನ್ನು ಮಾಡುತ್ತಿದ್ದೇನೆ.

**ಸಭಾಪತಿಯವರು:–** ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನವರು ಮಾತನಾಡುವುದು. ಮೊದಲಿಗೆ ಯಾರಿಗೆ ಮಾತನಾಡಲು ಅವಕಾಶ ಸಿಕ್ಕಿಲ್ಲವೋ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲ ಮನ್ನಾ ಮಾಡುವಂತಹ ವಿಚಾರ ಇರಬಹುದು, ಇನ್ನಿತರೆ ಎಲ್ಲಾ ವಿಚಾರಗಳಿಗೆ ಸಂಬಂಧಪಟ್ಟಂತೆ ಸುಧೀರ್ಘವಾಗಿರತಕ್ಕಂಥ ಮತ್ತು ಸಮರ್ಪಕವಾಗಿರತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಅವರು ನೀರಾವರಿ ವಿಚಾರದ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಲಿಲ್ಲ. ಅದರ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲುವಂತಹ ಕೆಲಸವನ್ನು ಮಾಡುತ್ತಿದ್ದೇನೆ. ಸುಮಾರು 60ರ ದಶಕದಲ್ಲಿ ಸ್ಥಾಪನೆಯಾದಂತಹ ಆಲಮಟ್ಟಿ ನೀರಾವರಿ ಯೋಜನೆ ಪ್ರಾರಂಭವಾಗಿ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದು ಕಾರ್ಯಗತಗೊಳ್ಳುವುದಕ್ಕೆ ಸುಮಾರು 3 ದಶಕಗಳು ಸಂದಿವೆ. ಆದರೆ, ಆ ಕಾಮಗಾರಿ ಇನ್ನೂ ಮುಕ್ತಾಯವಾಗಿಲ್ಲ. ಆ ಒಂದು ಹಿನ್ನೆಲೆಯಲ್ಲಿ, ಮಾನ್ಯ Supreme Court and Krishna Water Dispute Tribunal ತೀರ್ಪಿನ ಪ್ರಕಾರ, ಇವತ್ತಿನ ದಿವಸ ಆಲಮಟ್ಟಿ ಡ್ಯಾಂನ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಬೇಕಾಗಿದೆ. ಒಟ್ಟು ಈ ಒಂದು ಯೋಜನೆಯು 5,30,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಿದೆ. ಇದಕ್ಕೆ ತಗಲುವ ಒಟ್ಟು ಅಂದಾಜು ವೆಚ್ಚ 51,148 ಕೋಟಿ ರೂಪಾಯಿಗಳು ಆಗುತ್ತದೆ. ಒಟ್ಟು 21 ಗ್ರಾಮಗಳು ಮುಳುಗಡೆಯಾಗುತ್ತವೆ. ಸುಮಾರು 2 ಲಕ್ಷ ಜನರಿಗೆ ಪುನರ್‌ವಸತಿಯನ್ನು ಕಲ್ಪಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ, ಇದು ಮತ್ತೆ ಮುಂದಿನ 3 ದಶಕಗಳ ಯೋಜನೆ ಆಗಬಾರದೆಂಬುದು ನನ್ನ ಒತ್ತಾಯವಾಗಿದೆ. ಉತ್ತರ ಕರ್ನಾಟಕ ಭಾಗದ ಜನರು ಸಮಗ್ರ ಕರ್ನಾಟಕದ ಕನಸನ್ನು ಕಂಡವರು. ಇದು ಮೊದಲು ಮೈಸೂರು ಪ್ರಾಂತ್ಯವಾಗಿತ್ತು. ಅಂದಿನ ಮುಂಬೈ ಪ್ರಾಂತ್ಯದ ಭಾಗವಾಗಿದ್ದ ಉತ್ತರ ಕರ್ನಾಟಕದ ಜನ ಸಮಗ್ರ ಕರ್ನಾಟಕದ ಕನಸನ್ನು ಕಂಡು, 'ನಾವು ಕನ್ನಡಿಗರು', ಕರ್ನಾಟಕದವರು, ನಾವೆಲ್ಲಾ ಒಂದಾಗಿರಬೇಕೆಂಬ ಭಾವನೆ ನಮ್ಮದು. ಆ ಹಿನ್ನೆಲೆಯಲ್ಲಿ, ಆಲಮಟ್ಟಿ ಯೋಜನೆಯಲ್ಲಿ Krishna Water Dispute Tribunal ತೀರ್ಪಿನ ಪ್ರಕಾರ ಡ್ಯಾಂನ ಎತ್ತರ ಮಾಡಬೇಕಾಗಿದೆ. ಅದಕ್ಕೆ ಸರ್ಕಾರ ಒಂದು ಸಂಪೂರ್ಣ ನೀಲಿನಕ್ಷೆಯನ್ನು ತಯಾರು ಮಾಡಿ, ಮುಳುಗಳಡೆಯಾಗುವಂತಹ ಗ್ರಾಮಗಳಿಗೆ ಪೂರ್ತಿ ಪುನರ್ವಸತಿ ಕಲ್ಪಿಸುವುದು ಇರಬಹುದು ಮತ್ತು ಅದರಿಂದಾಗತಕ್ಕಂಥ ನೀರಾವರಿ ಯೋಜನೆಗಳಿಗೆ ಕಾಲಮಿತಿಯಲ್ಲಿ ಯೋಜನೆಯನ್ನು ಕೈಗೊಳ್ಳಬೇಕಾಗಿದೆ ಎನ್ನತಕ್ಕಂಥ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಇದರ ಜೊತೆಗೆ ಅಥಣಿ ತಾಲ್ಲೂಕಿನ ಬಸವೇಶ್ವರ ಏತ ನೀರಾವರಿ ಯೋಜನೆ ಪ್ರಾರಂಭವಾಗಿದೆ. ಆದರೆ, ಅದು ಆದಷ್ಟು ಬೇಗನೆ ಪೂರ್ಣಗೊಳ್ಳುತ್ತದೆ ಎನ್ನತಕ್ಕಂಥ ವಿಶ್ವಾಸ ನಮಗಿಲ್ಲ. ಚಿಕ್ಕೋಡಿ ತಾಲ್ಲೂಕಿನ ಮಹಾಲಕ್ಷ್ಮೀ ಏತ ನೀರಾವರಿ ಯೋಜನೆಯನ್ನು ಶ್ರೀ ಜಗದೀಶ್‌ಶೆಟ್ಟರ್‌ರವರು ಸನ್ಮಾನ್ಯ ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಸುಮಾರು 12000 ಎಕರೆಗಳಿಗೆ ವಂಚಿತವಾಗಿರತಕ್ಕಂಥ ನೀರಾವರಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದಾರೆ. ನೀರಿನ ಹಂಚಿಕೆ ಕೂಡ ಆಗಿದೆ. ಆದರೆ, ಆ ಯೋಜನೆ ಇನ್ನೂ ಕಾರ್ಯಗತಗೊಂಡಿಲ್ಲ. ಬೆಳಗಾವಿಯಲ್ಲಿ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು, ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ 'ಸುವರ್ಣಸೌಧ'ವನ್ನು ಪ್ರಾರಂಭ ಮಾಡಿದ್ದಾರೆ. ಆದರೆ, ಈ 'ಸುವರ್ಣಸೌಧ'ವು ಅದೊಂದು ಸುವರ್ಣಸೌಧವಾಗಿದೆಯೇ ಹೊರತು, ಕಳೆದ 5 ವರ್ಷಗಳಲ್ಲಿ ಸುಮಾರು 50 ದಿನಗಳ ಕಾಲ ಸದನ ನಡೆದಿದೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಸನ್ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ನಾವು ಪ್ರತ್ಯೇಕ ರಾಜ್ಯದ ಕೂಗನ್ನು ಕೇಳುತ್ತಿದ್ದೇನೆ. ಆ ಕೂಗು ಪ್ರತ್ಯೇಕ ರಾಜ್ಯ ಆಗಬಾರದು. ಕರ್ನಾಟಕವು ಒಂದಾಗಿ ಉಳಿಯಬೇಕಾದರೆ, ಸುವರ್ಣ ಸೌಧದಲ್ಲಿ ಸರಿಯಾಗಿ ಸದನ ನಡೆಯಬೇಕು ಎನ್ನುವುದು ನಮ್ಮ ಒತ್ತಾಯ. ಇವತ್ತು ಆ ಭಾಗದಲ್ಲಿ ಇರತಕ್ಕಂಥ ರೈತರು ಇರಬಹುದು, ಇನ್ನುಳಿದಂಹ ಜನ ಸುವರ್ಣಸೌಧಕ್ಕೆ ಬರುವುದು, ಬೆಂಗಳೂರಿನ ದೊರೆ ಉತ್ತರ ಕರ್ನಾಟಕದ ಬೆಳಗಾವಿಗೆ ಬರುತ್ತಾರೆ ಎಂಬ ನಿರೀಕ್ಷೆ ಇಟ್ಟುಕೊಂಡು ಬರುತ್ತಾರೆ. ಆದರೆ, ಅಲ್ಲಿ ವರ್ಷಕ್ಕೆ ಬರೀ 10 ದಿನಗಳ ಕಾಲ ಸದನ ನಡೆಸಿದರೆ, ಆ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕೆ ಸಾಧ್ಯವಿಲ್ಲ. ಆ ಒಂದು ಹಿನ್ನೆಲೆಯಲ್ಲಿ, ಸುವರ್ಣಸೌಧದಲ್ಲಿ ಹೆಚ್ಚು ದಿನಗಳ ಕಾಲ ಅಧಿವೇಶನ ನಡೆಯಬೇಕು ಎನ್ನತಕ್ಕಂಥ ಒತ್ತಾಯವನ್ನು ಮಾಡುತ್ತೇನೆ. ಇವತ್ತು 'ಮಹಾಲಕ್ಷ್ಮೀ ಏತ ನೀರಾವರಿ ಯೋಜನೆ'ಗೆ ಮಾನ್ಯ ಮುಖ್ಯಮಂತ್ರಿಗಳು ಹಣವನ್ನು ಒದಗಿಸಬೇಕೆಂದು ಒತ್ತಾಯವನ್ನು ಮಾಡುತ್ತಾ, ಚಿಕ್ಕೋಡಿ ತಾಲ್ಲೂಕಿನ ಮಹಾಲಕ್ಷ್ಮೀ ಏತ ನೀರಾವರಿ ಯೋಜನೆಗೆ 100 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಏಕೆಂದರೆ, ಘಟಪ್ರಭಾ ಎಡದಂಡೆ ಕಾಲುವೆ tail end ಗ್ರಾಮಗಳಾಗಿವೆ. ಈ ಯೋಜನೆ ಪ್ರಾರಂಭವಾಗಿ ಸುಮಾರು 20 ವರ್ಷಗಳಾದರೂ ಸಹ ಇವತ್ತಿನ ದಿವಸ ಅಲ್ಲಿಗೆ ನೀರು ಬಂದಿರಲಿಲ್ಲ. ಅದಕ್ಕಾಗಿ ಸನ್ಮಾನ್ಯ ಮುಖ್ಯಮುಂತ್ರಿಗಳು ಬಜೆಟ್‌ನಲ್ಲಿ 100 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಅದು ನಮ್ಮ ಹತ್ತು ವರ್ಷಗಳ ಹೋರಾಟವಾಗಿತ್ತು. ಏಕೆಂದರೆ, ನೀರು ಬಂದಿಲ್ಲ ಎನ್ನತಕ್ಕಂಥ ಹೋರಾಟಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಸ್ಪಂದಿಸಿದ್ದಾರೆ. ಆ ವಿಚಾರವನ್ನೂ ಕೂಡ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇನ್ನು 'ಡಾ॥ ನಂಜುಂಡಪ್ಪ ನವರ ವರದಿ' ಆಧಾರದ ಮೇಲೆ ರಾಜ್ಯದಲ್ಲಿ ನೂತನ ತಾಲ್ಲೂಕುಗಳು ಆರಂಭಗೊಂಡಿವೆ. ಆ ಹಿನ್ನೆಲೆಯಲ್ಲಿ, ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳಾಗಿವೆ. ಆದರೆ, ಅಲ್ಲಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕಂಥ ಕೆಲಸ ಆಗಬೇಕು. ಅಲ್ಲಿ ಇರತಕ್ಕಂಥ ಕಟ್ಟಡಗಳು ಇರಬಹುದು, ಸಿಬ್ಬಂದಿಗಳನ್ನು ಒದಗಿಸಿದಲ್ಲಿ ಮಾತ್ರ ತಾಲ್ಲೂಕಿನ ಸಂಪೂರ್ಣ ಆಡಳಿತ ನಡೆಸುವುದಕ್ಕೆ ಸಾಧ್ಯತೆ ಇದೆ. ಅದಕ್ಕೆ ತಾವು ದಯವಿಟ್ಟು ಸುಮಾರು ಒಂದು ತಾಲ್ಲೂಕಿಗೆ 5 ಕೋಟಿ ರೂಪಾಯಿಗಳನ್ನು ಕೊಡಬೇಕು ಎನ್ನತಕ್ಕಂಥ ಒತ್ತಾಯವನ್ನು ಸಹ ಈ ಸಂದರ್ಭದಲ್ಲಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಶಿಕ್ಷಣ ವಿಚಾರದಲ್ಲಿ ಇವತ್ತು All India Entrance Exams for Medical and

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Engineering ಕೇಂದ್ರದ ಪರೀಕ್ಷೆಗೆ ನಮ್ಮ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕಾದರೆ, ವಿಶೇಷವಾಗಿ ಹಳ್ಳಿ ಪ್ರದೇಶದಲ್ಲಿನ ಮಕ್ಕಳಿಗೆ ಸಾಕಷ್ಟು ತೊಂದರೆ ಆಗುತ್ತಿದೆ. ಇವತ್ತಿನ ದಿವಸ NEET (National Eligibility-cum-Entrance Test) and JEE (Joint Entrance Examination) ಪರೀಕ್ಷೆಗೆ ಅಭ್ಯಾಸ ಮಾಡಬೇಕಾದರೆ, ಆ ವಿಧ್ಯಾರ್ಥಿಗಳು ಮಂಗಳೂರಿಗೆ ಅಥವಾ ಬೆಂಗಳೂರಿಗೆ ಬರಬೇಕಾಗುತ್ತದೆ. ಅದು ಉತ್ತರ ಕರ್ನಾಟಕ ಭಾಗದಲ್ಲಿರತಕ್ಕಂಥ ಜನರಿಗೆ ಇರಬಹುದು ಒಟ್ಟು ಸಮಗ್ರ ಕರ್ನಾಟಕದಲ್ಲಿರತಕ್ಕಂಥ ಸರ್ಕಾರಿ ವಿಜ್ಞಾನ ಮಹಾವಿದ್ಯಾಲಯಗಳಲ್ಲಿ ಅಭ್ಯಾಸ ಮಾಡತಕ್ಕಂಥ ವಿದ್ಯಾರ್ಥಿಗಳಿಗೆ NEET and JEE ಶಿಕ್ಷಣವನ್ನು ಕೊಡುವುದಕ್ಕೆ ಅವರಿಗೆ ಪ್ರತ್ಯೇಕವಾಗಿ training programme ಅನ್ನು ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು ಎನ್ನತಕ್ಕಂಥ ಒಂದು ವಿಚಾರವನ್ನು ಸಹ ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತೇನೆ.

**(ಮುಂದು...)**

**(302)12.7.2018/8.10/ಎಂ.ಎಂ-ಎಂ.ಡಿ**

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, clarification ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಸಾಕಷ್ಟು ಸದಸ್ಯರು ಮಾತನಾಡುತ್ತಿದ್ದ ಕಾರಣದಿಂದ ನಾನು ಬಜೆಟ್ ಭಾಷಣವನ್ನು ಮಾಡಲಿಲ್ಲ. ಈ ಮೂರು ಅಂಶಗಳ ಬಗ್ಗೆ clarification ಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಕೊಂಡಯ್ಯನವರೇ, ಅದಕ್ಕಾಗಿಯೇ ನಾನು ನಿಮಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಮಾತನಾಡಿ.

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2018-19ನೇ ಸಾಲಿನ ಬಜೆಟ್ ಅನ್ನು ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ ಮೇಲೆ ಆದಂತಹ ಚುನಾವಣೆ ಬದಲಾವಣೆಗಳಲ್ಲಿ ಸಮ್ಮಿಶ್ರ ಸರ್ಕಾರ ಬಂದು ಮಾನ್ಯ ಕುಮಾರಸ್ವಾಮಿಯವರು ಎರಡು ಬಜೆಟ್‌ಗಳನ್ನು ಒಂದುಗೂಡಿಸಿಕೊಂಡು ಒಂದು ಸಮಗ್ರವಾದಂತಹ ಬಜೆಟ್ ರೂಪಿಸಿ ಸದನದ ಎಲ್ಲಾ ಸದಸ್ಯರ ವಿಶ್ವಾಸವನ್ನು ತೆಗೆದುಕೊಂಡು ಮಾಡಿದ್ದಾರೆ. ಏಕೆಂದರೆ, ಹೊರಗಡೆ ಮುಖ್ಯಮಂತ್ರಿಯವರು ಹೇಳಿದಂತೆ ಪತ್ರಿಕೆಗಳಲ್ಲಿ, ದೂರದರ್ಶನಗಳಲ್ಲಿ ಅಂಕಣಕಾರರು ಎಲ್ಲರೂ ಬರೆದಂತಹ, ಹೇಳಿದಂತಹ ಅನುಮಾನಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ಭಾಷಣದಿಂದ clarify ಆಯಿತು. ನಾನು ಮೂರೇ ಮೂರು ವಿಷಯಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ರೈತ ಮತ್ತು ನೇಕಾರ. ಮಾನ್ಯ ಸಿದ್ದರಾಮಯ್ಯನವರು ರೈತರ ಸಾಲ ಸುಮಾರು 8,000 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದಾಗ ನೇಕಾರರ ಸಾಲ ಸುಮಾರು 50,000 ದಿಂದ 53,000 ಕೋಟಿ ರೂಪಾಯಿಗಳಷ್ಟು ಮತ್ತು ಹೌಸಿಂಗ್ ಸಾಲ ಮನ್ನಾ ಮಾಡಿದರು. ಈಗ ಸರ್ಕಾರ ರೈತರಿಗೆ ಸಾಲ ಮನ್ನಾ ಮಾಡುವುದನ್ನು ಹೇಗೆ ಹೆಚ್ಚಿಸಿದೆಯೋ ಅದೇ ರೀತಿ ನೇಕಾರರನ್ನೂ ಪರಿಗಣಿಸಬೇಕೆಂಬುದು ನನ್ನ ಕೋರಿಕೆಯಾಗಿದೆ. ಎರಡನೆಯದಾಗಿ ಸರ್ಕಾರದಲ್ಲಿ conventional types of taxes ಇವೆ. VAT (Value-Added Tax) collect ಮಾಡುವಾಗ GST (Goods and Services Tax) ಬಂದಿತು. ಅದೇ ರೀತಿ Excise Tax, Motor Tax and Registration Tax ಇದೆ. ಇನ್ನೂ ಸರ್ಕಾರ ಒಂದು ಪರಿಣಿತರ ಸಮಿತಿಯನ್ನು ಮಾಡಿ ಯಾವ ರೀತಿಯಾದ Taxation Instruments ಅನ್ನು ತೆಗೆದುಕೊಳ್ಳಬೇಕು, ಕೇಂದ್ರ ಸರ್ಕಾರ ಸೇವಾ ತೆರಿಗೆಯನ್ನು ಯಾವ ರೀತಿ ಮಾಡಿದ್ದಾರೆ ಆ ರೀತಿಯಾಗಿ ಮಾಡುತ್ತಾ ಹೋದರೆ, ಇವರ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಮೂರನೆಯದಾಗಿ ಸದನವನ್ನು 100 ದಿವಸ ನಡೆಸಬೇಕೆಂದು mandatory ಇದ್ದರೂ ಸಹ 40-50 ದಿವಸಗಳು ನಡೆಯುತ್ತಿವೆ. ನಾನು 2002ರಲ್ಲಿ ಎಂ.ಎಲ್.ಸಿ. ಆಗಿ ಬಂದಾಗ Subject Committees ಇದ್ದವು. ಅವುಗಳ ವ್ಯಾಪ್ತಿ ಏನಿತ್ತು ಎಂದರೆ, ಬಜೆಟ್ ಮಂಡನೆ ಮಾಡಿದ 15-30 ದಿವಸಗಳ ಒಳಗೆ ಆಯಾ ಇಲಾಖಾ ಸಮಿತಿಗೆ ಒಬ್ಬ ಅಧ್ಯಕ್ಷರು ಇದ್ದು, ಸವಿಸ್ತಾರವಾಗಿ ಆ ವಿಷಯವನ್ನು ಅಧ್ಯಯನ ಮಾಡಿ ಏನಾದರೂ recommendation ಮಾಡಿ within the budget ನಲ್ಲಿಯೇ ಸ್ಕೀಂಗಳನ್ನು ತೆಗೆಯುವುದು ಅಥವಾ ಸೇರಿಸುವುದನ್ನು ಮಾಡುತ್ತಿದ್ದರು. ಅದನ್ನು ಮಾಡಿದರೆ Extended House ಆಗಿ ಹೆಚ್ಚಿನ ಅವಕಾಶಗಳು ಆಗುತ್ತಿದ್ದವು. ಏಕೆಂದರೆ, 2002ರಿಂದ ಇವತ್ತಿನವರೆಗೆ Subject Committees ಆದ ಮೇಲೆ ಒಂದು ಇಲಾಖೆಯ ಚರ್ಚೆಯೂ ಇಲ್ಲಿ ನಡೆದಿಲ್ಲ. ಕಾರಣ ಗೊತ್ತಿಲ್ಲ. ಕೆಲವು 3-4 ಇಲಾಖೆಗಳ ಚರ್ಚೆ ಎಂದು ಅಜೆಂಡಾದಲ್ಲಿ ಹಾಕುತ್ತಿರುತ್ತಾರೆ. ಯಾವುದೋ ಗೊಂದಲವಾಗಿ ಸದನ adjourn ಆಗುತ್ತದೆ. ಅದಕ್ಕೆ ದಯವಿಟ್ಟು ಸದನವನ್ನು ಹೆಚ್ಚಿನ ದಿವಸ ನಡೆಸಬೇಕು. ಒಂದು ವೇಳೆ ಹೆಚ್ಚಿನ ದಿವಸ ನಡೆಸಲು ಆಗದಿದ್ದರೆ, ಆ Subject Committees revive ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಮ್ಮಿಶ್ರ ಸರ್ಕಾರದ ಚೊಚ್ಚಲ ಬಜೆಟ್‌ನಲ್ಲಿ ಭಾರತದೇಶದಲ್ಲಿ ಯಾವುದೇ ರಾಜ್ಯದಲ್ಲೂ ಕೂಡ ಇದುವರೆಗೂ ರೈತರ ಸಂಬಂಧ ಇಂತಹ ಒಂದು ಮಹತ್ವಪೂರ್ಣವಾದಂತಹ ಬಜೆಟ್ ಮಂಡನೆಯಾಗಿಲ್ಲ. ಇಂತಹ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ ದಾಖಲೆ ಕರ್ನಾಟಕ ರಾಜ್ಯದಿಂದ ಆಗಿದೆ. ಈ ಸಂದರ್ಭದಲ್ಲಿ ರೈತರಿಗೋಸ್ಕರ ತಮ್ಮ ಪ್ರಣಾಳಿಕೆ ಮೂಲಕ ಮಹತ್ವದ ತೀರ್ಮಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ಶಿಕ್ಷಣ ಇಲಾಖೆಗೆ ಹೆಚ್ಚಿನ ಒತ್ತು ಕೊಡಬೇಕೆಂದು ಹೆಚ್ಚಿನ ಒತ್ತಡವನ್ನು ನಾವು ಮಾನ್ಯ ಮುಖ್ಯಮಂತ್ರಿಗಳ ಮೇಲೆ ತಂದಿಲ್ಲ. ಆದರೆ ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡುವುದೇನೆಂದರೆ, ಈ ಹಿಂದೆ ಮುಖ್ಯಮಂತ್ರಿಗಳಾಗಿ ಸನ್ಮಾನ್ಯ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮತ್ತು ಸಭಾಪತಿಯಾದ ತಾವುಗಳೇ ಶಿಕ್ಷಣ ಸಚಿವರಾಗಿ ಶಿಕ್ಷಕ ಸಮುದಾಯಕ್ಕೆ ವೇತನ ತಾರತಮ್ಯ ಇದೆಯೆಂದು ತಾವು ಅದನ್ನು ಗುರುತಿಸಿ Ex-gratia ಎಂದು 200 ರೂಪಾಯಿಗಳನ್ನು ಕೊಟ್ಟಿರೋ ಅದು ಇಂದು 400 ರೂಪಾಯಿಗಳಷ್ಟು ಆಗಿದೆ. ಆದರೆ ದಿನಾಂಕ 01.08.2008ರ ನಂತರ ಇಲಾಖೆಗೆ ಹೊಸದಾಗಿ ನೇಮಕಗೊಂಡವರು ಬಡ್ತಿ ಪಡೆದ ಶಿಕ್ಷಕರಿಗೆ ಈ Ex-gratia ವನ್ನು ಮುಂದುವರೆಸುವ ವಿಚಾರದಲ್ಲಿ ಗೊಂದಲ ಉಂಟಾಗಿದೆ. ಮುಖ್ಯಶಿಕ್ಷಕರಿಗೆ ಇನ್ನೂ ಈ Ex-gratia ಮಂಜೂರಾಗಿಲ್ಲ. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಿಗೆ Ex-gratia ಮಂಜೂರಾಗಿಲ್ಲ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಇದನ್ನು ಚುಟುಕಾಗಿ ಹೇಳಿ ಸಾಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ಮುಂದಿನ ದಿನಗಳಲ್ಲಿ ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ. ಮತ್ತೊಂದು ಪ್ರಮುಖವಾದ ವಿಚಾರವೇನೆಂದರೆ, ಈ ರಾಜ್ಯದಲ್ಲಿ ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳಿಗೆ ವೇತನಾನುದಾನವನ್ನು ಕೊಟ್ಟಂತಹ ಕೀರ್ತಿ ಮೊಟ್ಟಮೊದಲ ಬಾರಿಗೆ ಶ್ರೀಮಾನ್ ಕುಮಾರಸ್ವಾಮಿಯವರಿಗೆ ಮತ್ತು ಅಂದು ಮಂತ್ರಿಗಳಾಗಿದ್ದ ತಮಗೆ ಸಲ್ಲುತ್ತದೆ. ಆದರೆ ಇಂದು ಅನುದಾನರಹಿತ ಶಾಲೆಗಳಲ್ಲಿ ಕಲಿಯುತ್ತಿರುವ ಬಡವರ ಮಕ್ಕಳು ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕೂಡ ಬಡವರ ಮಕ್ಕಳು ಶಿಕ್ಷಣ ಮಾಡುತ್ತಿದ್ದಾರೆ. ಆದರೆ ಆ ಮಕ್ಕಳಿಗೆ ಉಚಿತವಾಗಿ ಯಾವುದೇ ಸವಲತ್ತುಗಳು ದೊರೆಯುತ್ತಿಲ್ಲ. ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಯಾವುದೇ ವಿಧವಾದ ವೇತನಾನುದಾನ ಇಲ್ಲ. 10-15

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ವರ್ಷಗಳಿಂದ ಆ ಸಂಸ್ಥೆಗಳಲ್ಲಿ ಉಚಿತವಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಯಾರಿಗೂ ಕೂಡ ವೇತನ ಸಿಗುತ್ತಾ ಇಲ್ಲ. ಆದ್ದರಿಂದ ದಯಮಾಡಿ 1995ರ ನಂತರ ಪ್ರಾರಂಭವಾಗಿರುವ ಶಾಲಾ ಕಾಲೇಜುಗಳಿಗೆ ವೇತನಾನುದಾನ ಕೊಡಬೇಕು, ಕನ್ನಡ ಮಾಧ್ಯಮ ಅನುದಾನರಹಿತ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳಿಗೆ ಉಚಿತವಾದಂತಹ ಸವಲತ್ತುಗಳನ್ನು ವಿಸ್ತರಣೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ. ಕೊನೆಯದಾಗಿ, ಈ ನಾಡಿನಲ್ಲಿ ಗುಣಾತ್ಮಕ ಶಿಕ್ಷಣ ಕೊಡಬೇಕೆಂದು ಎಲ್ಲಾ ಸರ್ಕಾರಗಳೂ ಘೋಷಣೆ ಮಾಡಿವೆ. ಆದರೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸುಮಾರು 28 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಸುಮಾರು 28 ಸಾವಿರ ಶಿಕ್ಷಕರ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಗುಣಾತ್ಮಕವಾದ ಶಿಕ್ಷಣ ಕೊಡಿ ಎಂದು ಈಗಿರುವ ಶಿಕ್ಷಕರನ್ನು ಶಿಕ್ಷೆಗೊಳಪಡಿಸುತ್ತಿದ್ದಾರೆ. ದಯಮಾಡಿ 28 ಸಾವಿರ ಶಿಕ್ಷಕರ ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಆದ್ಯತೆ ಮೇಲೆ ಗಮನಹರಿಸಬೇಕೆಂದು ವಿನಂತಿ ಮಾಡುತ್ತಾ, ಈ ಚೊಚ್ಚಲ ಸಮ್ಮಿಶ್ರ ಸರ್ಕಾರದ ಬಜೆಟ್ ಭಾರತ ದೇಶಕ್ಕೆ ಮಾದರಿಯಾಗಿ ಒಬ್ಬ ರೈತನ ಮಗನಾಗಿ ಕೊಟ್ಟಂತಹ ಕೊಡುಗೆಯನ್ನು ಮತ್ತೊಮ್ಮೆ ಶ್ಲಾಘಿಸುತ್ತಾ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

## 15 ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ, ಕ.ವಿ.ಪ:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ:–

01. ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕ, 2018
02. ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2018
03. ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ, 2018
04. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2018

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**16 2018-19ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಕವಟಗಿಮಠರವರು ಉತ್ತರ ಕರ್ನಾಟಕದ ಜೀವನಾಡಿಯಾದಂತಹ ಕೃಷ್ಣೆಯ ವಿಚಾರವಾಗಿ ಹೇಳಿದ್ದಾರೆ. ಆಲಮಟ್ಟಿ ಜಲಾಶಯವನ್ನು 519.5 ರಿಂದ 524.256 ವರೆಗೆ ಎತ್ತರಿಸುವುದು ಬಹಳ ಅವಶ್ಯಕತೆ ಇದೆ. ಇಷ್ಟು ಎತ್ತರಿಸಿದಾಗ ಅಂದಾಜು 22 ಗ್ರಾಮಗಳು ಮುಳುಗಡೆಯಾಗುತ್ತವೆ. ಅದಕ್ಕೆ ಸುಮಾರು 1.26 ಲಕ್ಷ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಕೃಷ್ಣೆಗೆ ನ್ಯಾಯ ಒದಗಿಸದೇ ಹೋದರೆ ಉತ್ತರ ಕರ್ನಾಟಕದ ಮಕ್ಕಳು ಅನಾಥರಾಗುವುದರಲ್ಲಿ ಯಾವುದೇ ಸಂದೇಹ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ದೃಷ್ಟಿಯಿಂದ Rehabilitation and Resettlement ಗೆ ಬೇಕಾಗುವಂತಹ ಹಣ ಅಂದಾಜು ಸುಮಾರು 52,000 ಕೋಟಿ ರೂಪಾಯಿಗಳು ಇದೆ. 1964ರಲ್ಲಿ ಅಂದಿನ ಪ್ರಧಾನಿಯಾಗಿದ್ದ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಆಲಮಟ್ಟಿ ಜಲಾಶಯಕ್ಕೆ ಅಡಿಗಲ್ಲು ಹಾಕಿ 54 ವರ್ಷಗಳಾಗಿದೆ, ಅಂದಿನಿಂದ ಅದು ಕುಂಟುತ್ತಾ ಸಾಗಿದೆ. ಆದರೆ ಈ ಯೋಜನೆ ಈಗ ಕೊನೆಯ ಹಂತಕ್ಕೆ ಬಂದಿರುವ ಸಂದರ್ಭದಲ್ಲಿ ಆಲಮಟ್ಟಿ ಜಲಾಶಯದ ಎತ್ತರವನ್ನು ಆದಷ್ಟು ತ್ವರಿತವಾಗಿ ಎತ್ತರಿಸಬೇಕಾದರೆ, ಇವತ್ತು 22 ಗ್ರಾಮಗಳ ಪುನರ್ವಸತಿಯಾಗಬೇಕು ಮತ್ತು 1.26 ಲಕ್ಷ ಎಕರೆ ಭೂಮಿ ಸ್ವಾಧೀನ ಆಗಬೇಕು. Ganga Gigantic Belt ನಲ್ಲಿ ಎಷ್ಟು ಫಲವತ್ತಾದ ಭೂಮಿ ಇದೆ ಅಷ್ಟೇ ಫಲವತ್ತಾದ ಭೂಮಿ ಉತ್ತರ ಕರ್ನಾಟಕದಲ್ಲಿ ಮುಳುಗಡೆಯಾಗುವಂತಹ ಭೂಮಿ ಇದೆ. ಅದಕ್ಕೆ ಯೋಗ್ಯವಾದಂತಹ ಪರಿಹಾರವನ್ನು ಒದಗಿಸುವುದರ ಜೊತೆಗೆ 52,000 ಕೋಟಿ ರೂಪಾಯಿ ಹಣವನ್ನು ಎಷ್ಟು ಸಾಧ್ಯವೋ ಅಷ್ಟು ತ್ವರಿತವಾಗಿ ಗೌರವಾನ್ವಿತ ಮುಖ್ಯಮಂತ್ರಿಯವರು ಇದಕ್ಕೆ provision ಮಾಡುವುದು ಕೂಡ ಬಹಳಷ್ಟು ಅವಶ್ಯವಿದೆ. ಇದು ಉತ್ತರ ಕರ್ನಾಟಕಕ್ಕೆ ನ್ಯಾಯ ಕೊಡುವಂತಹ ಕೆಲಸ ಮತ್ತು ಆದ್ಯತೆ ಮೇಲೆ ತೆಗೆದುಕೊಳ್ಳುವಂತಹ ಕೆಲಸವಾಗಿದೆ. ಅದರ ಜೊತೆಗೆ ನಂಜುಂಡಪ್ಪ ವರದಿಯ ಅವಧಿ ಮುಗಿದು ಹೋಗಿದೆ. ಪ್ರಾದೇಶಿಕ ಅಸಮತೋಲನವನ್ನು ತಪ್ಪಿಸುವ ಸಲುವಾಗಿ ಹಿಂದಿನ ಸರ್ಕಾರದ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಅದನ್ನು ಐದು ವರ್ಷದವರೆಗೆ ವಿಸ್ತರಣೆ ಮಾಡಿ 114 ತಾಲ್ಲೂಕುಗಳು ಅತ್ಯಂತ ಹಿಂದುಳಿದ, ಅತಿ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳಿಗೆ ಪ್ರತಿವರ್ಷ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳನ್ನು ಐದು ವರ್ಷದವರೆಗೆ ಕೊಡುತ್ತೇವೆಂದು ಘೋಷಣೆ ಮಾಡಿದ್ದರು. ಶ್ರೀಮಾನ್ ಕುಮಾರಸ್ವಾಮಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, 114 ತಾಲ್ಲೂಕುಗಳ ಅಭಿವೃದ್ಧಿ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಲುವಾಗಿ ಏನು commitment ಇದೆ ಪ್ರತಿ ವರ್ಷ ಮೂರು ಸಾವಿರ ಕೋಟಿ ರೂಪಾಯಿಗಳ ಹಣವನ್ನು ಬಜೆಟ್‌ನಲ್ಲಿ ಒದಗಿಸುವುದು ಬಹಳ ಮಹತ್ವದ ವಿಚಾರವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಮುಂವ)

(303) 12–07–2018/8–20/ಕೆಹೆಚ್/ಎಕೆ

**ಶ್ರೀ ಎಸ್.ಆರ್. ಪಾಟೀಲ್ (ಮುಂದು):–** ಅದೇ ರೀತಿ ಸಂವಿಧಾನದ ಅನುಚ್ಛೇದ 371(ಜೆ) ಗೆ ತಿದ್ದುಪಡಿಯಾದ ನಂತರ ಪ್ರತಿ ವರ್ಷ ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಹೈದರಾಬಾದ್–ಕರ್ನಾಟಕದ 6 ಜಿಲ್ಲೆಗಳಿಗೆ ಹಣ ಒದಗಿಸುವಂತಹ ಒಂದು ನಿರ್ಣಯವನ್ನು ಕೈಗೊಂಡಿದ್ದಾರೆ. ಆ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು 5 ವರ್ಷಗಳ ಕಾಲ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಗಳಾಗಿ ತಾವು ರಾಜ್ಯಭಾರ ಮಾಡುವಂತಹ ಸಂದರ್ಭದಲ್ಲಿ ಅನುಚ್ಛೇದ 371ಜೆ ತಿದ್ದುಪಡಿ ಪ್ರಕಾರ 1500 ಕೋಟಿ ರೂಪಾಯಿಗಳನ್ನು 6 ಜಿಲ್ಲೆಗಳಿಗೆ ಒದಗಿಸುತ್ತಿದ್ದೇವೆ. ಅದನ್ನು ತಾವು ದಯಮಾಡಿ ಮುಂದುವರೆಸಿಕೊಂಡು ಹೋಗಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಬೆಳಗಾವಿ ಜಿಲ್ಲೆಯಲ್ಲಿ ಸುವರ್ಣ ಸೌಧ ಏನು ನಿರ್ಮಾಣವಾಗಿದೆ. ಇದು 2009ನೇ ಸಾಲಿನಲ್ಲಿ ಪ್ರಾರಂಭ ಮಾಡಿ 2012ನೇ ಸಾಲಿಗೆ ಮುಗಿದಿದೆ. 438 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾದಂತಹ ಈ ಸುವರ್ಣ ಸೌಧವು ಇವತ್ತಿನ ದಿವಸ ಏನಾಗಿದೆಯೆಂದರೆ, ಈ ಸುವರ್ಣ ಸೌಧಕ್ಕೆ 2013–14 ರಿಂದ 2017–18 ರವರೆಗೆ 18.88 ಕೋಟಿ ರೂಪಾಯಿಗಳನ್ನು ನಿರ್ವಹಣೆಗಾಗಿ ವೆಚ್ಚ ಮಾಡಲಾಗಿದೆ. ಪ್ರತಿ ವರ್ಷವು ಸುಮಾರು 4.00 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಈ ಸುವರ್ಣ ಸೌಧದ ನಿರ್ವಹಣೆಗಾಗಿ ಖರ್ಚು ಮಾಡುತ್ತಿದ್ದೇವೆ. ನವೆಂಬರ್ ತಿಂಗಳಲ್ಲಿ ಹೆಚ್ಚು ಅಂದರೆ 10 ದಿನಗಳ ಚಳಿಗಾಲದ ಅಧಿವೇಶನವನ್ನು ನಾವು ನಡೆಸುತ್ತೇವೆ. 10 ದಿನಗಳ ಕಾಲ ಅಧಿವೇಶನವನ್ನು ನಡೆದ ಮೇಲೆ ಏನು ಕೆಲಸಗಳೇ ನಡೆಯುವುದಿಲ್ಲ. ಬಾವುಲಿಗಳು ಹಾರಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಪ್ರತಿ ವರ್ಷವು ಸುಮಾರು 4.00 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಈ ಸುವರ್ಣ ಸೌಧದ ನಿರ್ವಹಣೆಗಾಗಿ ಖರ್ಚು ಮಾಡುತ್ತಿದ್ದು, ಇದರಿಂದ ಸರ್ಕಾರಕ್ಕೆ ಬೃಹತ್ ಮೊತ್ತದ ಹೊರೆ ಬೀಳುತ್ತಿದೆ. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದು ಅತ್ಯಂತ ಮಹತ್ವದ ಬೇಡಿಕೆಯೇನೆಂದರೆ, ಇವತ್ತಿನ ದಿವಸ ಉತ್ತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕವು ಯಾವ ಯಾವ ಭಾಗದಲ್ಲಿ ಹಿಂದುಳಿದಿದೆ. ಉದಾಹರಣೆಗೆ ನೀರಾವರಿಯ ಬಗ್ಗೆ ಆದ್ಯತೆಯನ್ನು ಕೊಡಬೇಕು. ಏಕೆಂದರೆ ಕನ್ನಡಾಂಬೆಗೆ ಎರಡು ಕಣ್ಣು, ಒಂದು ಕಾವೇರಿ, ಇನ್ನೊಂದು ಕೃಷ್ಣ. ಕಾವೇರಿ ನದಿಯ ಕೆಲಸ ಮುಗಿದಿದೆ. ಕೃಷ್ಣ ನದಿಯ ಕೆಲಸ ಬಹಳಷ್ಟು ಬಾಕಿ ಇದೆ. ಇವತ್ತಿನ ದಿವಸ ಕೃಷ್ಣ ನದಿಗೆ ನ್ಯಾಯ ಒದಗಿಸದೇ ಇದ್ದರೆ, ಉತ್ತರ ಕರ್ನಾಟಕದ ಅಭಿವೃದ್ಧಿಯು ಕನಸಾಗಿಯೇ ಉಳಿಯುತ್ತದೆ. ಅದು ನನಸಾಗುವುದಿಲ್ಲ. ಆ ದೃಷ್ಟಿಯಿಂದ ನೀರಾವರಿ ಇಲಾಖೆಯನ್ನು ಸಂಪೂರ್ಣವಾಗಿ ಸುವರ್ಣ ಸೌಧಕ್ಕೆ ಸ್ಥಳಾಂತರಿಸಬೇಕು. ಹಾಗೆಯೇ ಸಾಕ್ಷರತೆಯಲ್ಲಿ ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕದ ಜೊತೆ ತುಲನಾತ್ಮಕವಾಗಿ ನೋಡಿದರೆ ಶೇಕಡವಾರು ಕಡಿಮೆ ಇದೆ. ಸಮಯ ಬಹಳ ಕಡಿಮೆ ಇರುವುದರಿಂದ ನಾನು ಎಲ್ಲಾ ಇಲಾಖೆಯ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಕೇವಲ clarification ಮಾತ್ರ ಕೇಳುತ್ತಿದ್ದೇನೆ. ಉತ್ತರ ಕರ್ನಾಟಕ ಯಾವ್ಯಾವ ಕ್ಷೇತ್ರದಲ್ಲಿ ಹಿಂದುಳಿದಿದೆ ಮತ್ತು ಅದರಲ್ಲಿ ಎಷ್ಟು ಇಲಾಖೆಗಳಿವೆ. 5 ರಿಂದ 6 ಇಲಾಖೆಗಳ ಪ್ರಧಾನ ಕಾರ್ಯದರ್ಶಿಯವರಿಂದ ಹಿಡಿದು ಆ ಇಲಾಖೆಗಳನ್ನು ಸಂಪೂರ್ಣವಾಗಿ ಸುವರ್ಣ ಸೌಧಕ್ಕೆ ಏಕೆ ಸ್ಥಳಾಂತರಿಸಬಾರದು? ಇವತ್ತಿನ ದಿವಸ ಉತ್ತರ ಕರ್ನಾಟಕದ ಜನರು 500 ರಿಂದ 600 ಕಿ.ಮೀ ದೂರದಿಂದ ಇಲ್ಲಿಗೆ ಬಂದು ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತೇವೆ. ಆ ರೀತಿ ಉತ್ತರ ಕರ್ನಾಟಕವು ನೀರಾವರಿ, ಸಾಕ್ಷರತೆ ಇನ್ನು ಅನೇಕ ಕ್ಷೇತ್ರಗಳಲ್ಲಿ ಹಿಂದುಳಿದಿದೆ. ಮಾನ್ಯ ಸಚಿವರುಗಳ ಸಮೇತ ಆ ಇಲಾಖೆಗಳನ್ನು ಸುವರ್ಣ ಸೌಧಕ್ಕೆ ಸ್ಥಳಾಂತರಿಸುವಂತಹ ಒಂದು ದಿಟ್ಟವಾದ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಯವರಾದ ಕುಮಾರಸ್ವಾಮಿಯವರು ಕೈಗೊಂಡರೆ, ಉತ್ತರ ಕರ್ನಾಟಕಕ್ಕೆ ನ್ಯಾಯ ಒದಗಿಸಿದಂತಾಗುತ್ತದೆ ಮತ್ತು ಬಹುತರವಾಗಿ ಬಹಳಷ್ಟು ಪ್ರಚೋದನೆಗೆ ಒಳಗಾಗುವಂತಹ ಕೆಲಸ ಆಗುವುದಿಲ್ಲ. ಇಡೀ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ನಮ್ಮ ಸರ್ಕಾರವು ಕಂಕಣಬದ್ಧವಾಗಿದೆ. ಇದರಲ್ಲಿ ಉತ್ಸಾಹವಿರುವ ಮಾನ್ಯ ಮುಖ್ಯಮಂತ್ರಿಯವರು ಈ ಒಂದು ದಿಟ್ಟವಾದಂತಹ ನಿರ್ಣಯವನ್ನು ಕೈಗೊಂಡರೆ, ಉತ್ತರ ಕರ್ನಾಟಕವು ಸಂಪೂರ್ಣ ಅಭಿವೃದ್ಧಿಯಾದರೆ, ಇಡೀ ಕರ್ನಾಟಕ ರಾಜ್ಯ ಸರ್ವಾಂಗೀಣ ಅಭಿವೃದ್ಧಿಗೆ ಇದು ಪೂರಕವಾಗುತ್ತದೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ರಾಜಕೀಯ ಇಚ್ಛಾಶಕ್ತಿಯಿಂದ ತೆಗೆದುಕೊಳ್ಳುವಂತಹ ಒಂದು ದಿಟ್ಟವಾದಂತಹ ನಿರ್ಣಯವಾಗಿದೆ. ಈ ನಿರ್ಣಯವನ್ನು ಕೈಗೊಂಡರೆ ನಿಜವಾಗಿಯೂ ಉತ್ತರ ಕರ್ನಾಟಕದ ಜನರ ಪರವಾಗಿ ಈ ಸಮ್ಮಿಶ್ರ ಸರ್ಕಾರ ಅದರಲ್ಲೂ ವಿಶೇಷವಾಗಿ ನಮ್ಮ ಮುಖ್ಯಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಉತ್ತರ ಕರ್ನಾಟಕವು ಕೂಡ ದಕ್ಷಿಣ ಕರ್ನಾಟಕದಂತೆ ಅಭಿವೃದ್ಧಿಯಾಗುವುದಕ್ಕೆ ಸಾಧ್ಯತೆಯಿದೆ. ಇಲ್ಲಿ ಮಹಾರಾಜರುಗಳು ಇದ್ದರು. ನಮ್ಮಲ್ಲಿ ಆ ರೀತಿಯ ಮಹಾರಾಜರು ಯಾರು ಇರಲಿಲ್ಲ. ಮೈಸೂರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಹಾರಾಜರು ಈ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಪೂರ್ವದಲ್ಲಿ ಕೆ.ಆರ್.ಎಸ್., ಕನ್ನಂಬಾಡಿ ಅಣೆಕಟ್ಟನ್ನು ನಿರ್ಮಿಸಿದರು. ನಮ್ಮಲ್ಲಿ ಏನೇನು ಸಹ ಆಗಿಲ್ಲ. ಸುಮ್ಮನೆ ನಾವು ಜನಪ್ರತಿನಿಧಿಗಳ ಮೇಲೆ ಆಪಾದನೆ ಮಾಡುತ್ತೇವೆ. ನಮ್ಮಲ್ಲಿ ಆ ರೀತಿಯ ಮಹಾರಾಜರು ಇರಲಿಲ್ಲ. ಮಾನ್ಯ ಸಭಾಪತಿಯವರೇ ತಾವು ಕೂಡ ನಮ್ಮ ಜಿಲ್ಲೆಯವರಾಗಿದ್ದು, ತಮಗೂ ಇದರ ಬಗ್ಗೆ ಅನುಭವವಿದೆ. ಆ ದೃಷ್ಟಿಯಿಂದ ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕದ ಸರಿಸಮಾನವಾಗಿ ಅಭಿವೃದ್ಧಿಯಾಗಬೇಕಾದರೆ ಈ ದಿಟ್ಟವಾದ ನಿರ್ಣಯವನ್ನು ಕೈಗೊಳ್ಳಬೇಕು ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ನಾನು ಆಗಲೇ ಹೇಳಿದ ಹಾಗೆ R & R (Rehabilitation & Resettlement) ಕೆಲಸಕ್ಕಾಗಿ ಬೇಕಾದಂತಹ ಐವತ್ತೈರಡು ಸಾವಿರ ಕೋಟಿ ರೂಪಾಯಿಗಳನ್ನು ನಿಗದಿತ ಅವಧಿಯಲ್ಲಿ ಎಷ್ಟು ಸಾಧ್ಯವಿದೆಯೋ, ಅಷ್ಟು ಬೇಗನೆ ಹಣದ ವ್ಯವಸ್ಥೆಯನ್ನು ಮಾಡಿದರೆ, ನಿಜವಾಗಿಯೂ ಉತ್ತರ ಕರ್ನಾಟಕದ ಬಹಳಷ್ಟು ಜನರು ಇವತ್ತಿನ ದಿವಸ ಮುಂಬೈ-ಕರ್ನಾಟಕ ಪ್ರದೇಶಕ್ಕೆ ಶೇಕಡ 1ರಷ್ಟು, ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಶೇಕಡ 3ರಷ್ಟು, ಬೆಂಗಳೂರು ಭಾಗಕ್ಕೆ ಶೇಕಡ 89ರಷ್ಟು, ದಕ್ಷಿಣ ಕರ್ನಾಟಕದ ಉಳಿದ ಜಿಲ್ಲೆಗೆ ಶೇಕಡ 7ರಷ್ಟು ಎಂದು ಹೇಳುತ್ತಾರಲ್ಲವೇ, ಸಿಂಹಪಾಲನ್ನು ಉತ್ತರ ಕರ್ನಾಟಕಕ್ಕೆ ಕೊಟ್ಟಂತಾಗುತ್ತದೆ. ಇದು ಉತ್ತರ ಕರ್ನಾಟಕಕ್ಕೆ ಬೇಕಾದಂತಹ ಬೇಡಿಕೆಗಳಾಗಿವೆ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪೂರಕವಾದಂತಹ ವಿಚಾರಗಳನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ನಿಶ್ಚಿತವಾಗಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಂದನೆ ಮಾಡುತ್ತಾರೆಂದು ನನಗೆ ವಿಶ್ವಾಸವಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನರ್ಪಿಸಿ, ಮಾನ್ಯ ಎಸ್.ಆರ್.ಪಾಟೀಲ್‌ರವರು ಸಾಕಷ್ಟು ಉತ್ತಮವಾದಂತಹ ವಿಚಾರಗಳನ್ನು ಉತ್ತರ ಕರ್ನಾಟಕದ ನಾಯಕರಿಗೆ ಈಗಾಗಲೇ ಹೇಳಿದ್ದಾರೆ. ಮಾನ್ಯ ಸಭಾಪತಿಯವರು ಮತ್ತು ನಾವು ಒಂದೇ ಜಿಲ್ಲೆಗೆ ಮತ್ತು ಒಂದೇ ಊರಿಗೆ ಸೇರಿದಂತಹವರು. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರು ಚುನಾವಣೆಯಲ್ಲಿ ಭಾಗವಹಿಸಿದಾಗ ಇವರು ಹುಬ್ಬಳ್ಳಿಯಲ್ಲಿ ಒಂದು ಹೋಮವನ್ನು ಮಾಡಿ, ಎಲ್ಲಾ ರೀತಿಯ ಪೂಜಾ-ಪುನಸ್ಕಾರಗಳನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದ್ದರು. ಇದನ್ನು ನೋಡಿ ನಾವೆಲ್ಲಾ ಬಹಳ ಸಂತೋಷಪಟ್ಟಿದೇವೆ. ಮುಂದೆ ಯಾರಾದರೂ ಅಧಿಕಾರಕ್ಕೆ ಬರಲಿ, 'ಒಟ್ಟಾರೆಯಾಗಿ ಮಾನ್ಯ ದೇವೇಗೌಡರ ಕುಟುಂಬ ಯಾವತ್ತಿದ್ದರೂ ಕೂಡ ಉತ್ತರ ಕರ್ನಾಟಕಕ್ಕೆ ವಿರೋಧಿಗಳೆಂದು ಮತ್ತು ಆವತ್ತಿನ ದಿವಸ ನೈರುತ್ಯ ರೈಲ್ವೆ ಬಂದಾಗ ಮಾನ್ಯ ದೇವೇಗೌಡರವರು ಪ್ರಧಾನ ಮಂತ್ರಿಯಾಗಿದ್ದಾಗ ಅಡ್ಡ ಹೊಡೆದರು' ಎಂದು ಇವರನ್ನು ಬಹಳ ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗ ನೈರುತ್ಯ ರೈಲ್ವೆ ಬರಲಿಲ್ಲ. ನಾವು ಅದಕ್ಕೆ ಹೋರಾಟ ಮಾಡಿ ಮಾನ್ಯ ವಾಜಪೇಯಿರವರು ಇದ್ದಾಗ ನಮ್ಮ ಹುಬ್ಬಳ್ಳಿ ನೈರುತ್ಯ ರೈಲ್ವೆಯನ್ನು ತೆಗೆದುಕೊಂಡು ಬಂದೆವು.

**ಸಭಾಪತಿಯವರು:–** ಮಾನ್ಯ ಸದಸ್ಯರೇ ತಮಗೆ ಏನಾಗಬೇಕೆಂದು ಮಾತ್ರ ಹೇಳಿ.

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮುಂದೆ ಅದನ್ನೇ ಹೇಳುವುದಕ್ಕೆ ಬರುತ್ತೇನೆ. ಇದರ ಬಗ್ಗೆ ತಮಗೆ ಗೊತ್ತಿದೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ನಿಮ್ಮ ಹುಬ್ಬಳ್ಳಿಯಲ್ಲಿ ಈದ್ಗಾ ಮೈದಾನವನ್ನು ಹಲವಾರು ವಿಷಯಗಳ ಬಗ್ಗೆ ಇದ್ದಂತಹ ಸಮಸ್ಯೆಗಳೆಲ್ಲಾ ಮಾನ್ಯ ದೇವೇಗೌಡರವರು ಬಗೆಹರಿಸಿದ್ದು, ಇದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು.

**ಸಭಾಪತಿಯರು:–** ಮಾನ್ಯ ಸದಸ್ಯರೇ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಆ ವಿಷಯವನ್ನೆಲ್ಲಾ ತಾವು ತೆಗೆಯಬೇಡಿ. ನಾವೆಲ್ಲಾ ಹೋರಾಟ ಮಾಡಿ ಧ್ವಜಾರೋಹಣ ಮಾಡಿದ್ದೇವೆ.

**ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೇ, ಇಷ್ಟು ವರ್ಷಗಳಿಂದ ಸರ್ಕಾರವು ಕಾಂಗ್ರೆಸ್‌ನವರ ಕೈಯಲ್ಲಿ ಇತ್ತು. ಅವರೇ ಮುಖ್ಯಮಂತ್ರಿಗಳಾಗಿದ್ದರೂ ಕೂಡ ಹುಬ್ಬಳ್ಳಿ ನಗರದ ರಸ್ತೆಯನ್ನು ಸರಿಯಾಗಿ ಮಾಡುವುದಕ್ಕೆ ಆಗಲಿಲ್ಲ. ಮಾನ್ಯ ದೇವೇಗೌಡರು ಮಾಡುವುದಕ್ಕೆ ಆಗಲಿಲ್ಲ ಬಿಡಿ.

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಹೆಚ್.ಡಿ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಹುಬ್ಬಳ್ಳಿಯಲ್ಲಿ ಒಂದು ರಸ್ತೆ ಇದ್ದು, ನಾನು 2004 ರಿಂದ 2007ರವರೆಗೆ ಸಚಿವನಾಗಿ ಕೆಲಸವನ್ನು ಮಾಡಿದ್ದೆ. ಆಗ ನಮ್ಮ ಕಾಲದಲ್ಲಿ ಅನುಮೋದನೆಯಾಗಿರುವ ರಸ್ತೆ ಇವತ್ತಿನವರೆಗೂ ಯಾವ ಮಟ್ಟದಲ್ಲಿದೆ ಎಂದರೆ ಮೊನ್ನೆಯ ದಿವಸ ಹೋದಾಗ ಮೊದಲು ಯಾವ ರೀತಿಯಲ್ಲಿತ್ತೋ, ಅದೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ಇದೆ. ಮಾನ್ಯ ದೇವೇಗೌಡರು ಉತ್ತರ ಕರ್ನಾಟಕಕ್ಕೆ ಏನೇನು ಮಾಡಿದ್ದಾರೆ ಎನ್ನುವುದನ್ನು ಇವತ್ತಿನ ದಿವಸ ಒಂದು ಚರ್ಚೆಗೆ ಇಡೋಣ. ಆ ಕೃಷ್ಣ ಮೇಲ್ದಂಡೆ ಯೋಜನೆ ಮಾನ್ಯ ದೇವೇಗೌಡರವರು ಇಲ್ಲದೇ ಇದ್ದಿದ್ದರೆ ಅದು ಯಾವ ಮಟ್ಟಕ್ಕೆ ಬರುತ್ತಿತ್ತು. ಆ ಕೃಷ್ಣ ಯೋಜನೆಗೆ ದುಡ್ಡು ಯಾವ ರೀತಿಯಲ್ಲಿ ಕೊಟ್ಟರು, ಏನು ಮಾಡಿದರು, ಅದರ ಬಗ್ಗೆ ತಮಗೆ ಗೊತ್ತಿದೆಯೇ, ಅದನ್ನು ಪುಸ್ತಕದ ರೂಪದಲ್ಲಿ ಪ್ರಿಂಟ್ ಮಾಡಿಕೊಟ್ಟರು. ಆ ರೀತಿಯ ಸನ್ನಿವೇಶವಿದ್ದರೂ, ಇವತ್ತಿನ ದಿವಸ ಸುವರ್ಣ ಸೌಧ ಮತ್ತು ಹೈಕೋರ್ಟ್ ಮಾಡುವುದಕ್ಕೆ ಮಾನ್ಯ ಕುಮಾರಸ್ವಾಮಿಯವರು ಅಧಿಕಾರಕ್ಕೆ ಬರಬೇಕಾಗಿತ್ತೆ. ಮೊನ್ನೆಯ ದಿವಸ ಗುಲ್ಬರ್ಗಾ ನ್ಯಾಯಾಲಯದಲ್ಲಿ ಯಾರು ಜನರೇ ಇಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮುಖ್ಯ ನ್ಯಾಯಾಧೀಶರು ಹೇಳಿದರು. ನಮ್ಮ ಭಾಗಕ್ಕೆ ಅನ್ಯಾಯವಾದರೂ ಪರವಾಗಿಲ್ಲವೆಂದು ಉತ್ತರ ಕರ್ನಾಟಕಕ್ಕೆ ನ್ಯಾಯಾಲಯ, ಗುಲ್ಬರ್ಗಾ ನ್ಯಾಯಾಲಯ, ಹುಬ್ಬಳ್ಳಿ ನ್ಯಾಯಾಲಯ, ಇದನ್ನೆಲ್ಲಾ ಮಾಡುವುದಕ್ಕೆ ಮಾನ್ಯ ಕುಮಾರಸ್ವಾಮಿಯವರು ಬರಬೇಕಾಗಿತ್ತೆ. ಇದನ್ನು ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ಮಾತನಾಡಬಾರದು. ಆ ರೀತಿಯ message ಕೂಡ ಹೋಗಬಾರದು. ಅಖಂಡ ಕರ್ನಾಟಕದ ಬಗ್ಗೆ ಒಂದು instruction ಕೊಟ್ಟು ಬಂದೆ. ಇದರ ಬಗ್ಗೆ ಅಧಿಕಾರಿಗಳಿಗೆ ಹೇಳಿದ್ದೇನೆ. ಇದಕ್ಕೆ ನಾನು ವಿಶೇಷವಾಗಿ C.R.F. ನಲ್ಲಿ ದುಡ್ಡು ಕೊಡುವುದಿಲ್ಲ. ಆದರೂ ಇಪ್ಪತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಯೆಂದು ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಹೇಳಿದಾಗ ಆಗ ಮಾನ್ಯ ಸಭಾಪತಿಯವರು ಇದ್ದರು. ತಮ್ಮ ಸಮ್ಮುಖದಲ್ಲಿಯೇ ಇದರ ಬಗ್ಗೆ ಮಾತನಾಡಿದ್ದೇವೆ. ರಸ್ತೆ ಅಭಿವೃದ್ಧಿಗಾಗಿ ಸುಮಾರು 150 ಕೋಟಿ ರೂಪಾಯಿಗಳು ... ಆ ಬೈಪಾಸ್ ರಸ್ತೆಯನ್ನು ಮಾನ್ಯ ದೇವೇಗೌಡರು ಇದ್ದಾಗ ಮಾಡಿರುವುದು. ಇವತ್ತಿನವರೆಗೆ ಆ ಬೈಪಾಸ್ ರಸ್ತೆಯಲ್ಲಿ ವರ್ಷಕ್ಕೆ 250 ಜನರು ಸಾಯುತ್ತಾರೆ. ಮೊನ್ನೆಯ ದಿವಸ ನಮ್ಮ ಅಧಿಕಾರಿಗಳೆಲ್ಲಾ ಸೇರಿ ಒಂದು ಬೈಪಾಸ್ ರಸ್ತೆಯನ್ನು ಮಾಡುವುದಕ್ಕೆ ತೆಗೆದುಕೊಂಡಿದ್ದೇವೆ. ಮಾನ್ಯ ಸಭಾಪತಿಯವರೇ ತಾವು ಈಗ ಇದ್ದಿರಿಯಲ್ಲವೇ, ಅದರ ಬಗ್ಗೆ ಹೇಳಬೇಕು, ಅದನ್ನು ಬಿಟ್ಟು ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕದ ಬಗ್ಗೆ ಹೇಳುತ್ತಿದ್ದಾರೆ. ಅವರು ಏನು ಹೇಳಿದರೂ ಕೂಡ ಅವರಿಗೆ ಮತ ಸಿಗುವುದಿಲ್ಲ. ಅದನ್ನು ಅವರು ಹೇಳುತ್ತಲೇ ಇರಬೇಕೆನ್ನಿಸುತ್ತದೆ. ಆದ್ದರಿಂದ ದಯಮಾಡಿ ಇದನ್ನು ಮುಂದಕ್ಕೆ ಬಿಟ್ಟುಬಿಡಬೇಕು. ಈ ವಿಷಯಗಳನ್ನು ತೆಗೆಯುವುದಕ್ಕೆ ಹೋದರೆ ಹಿಂದೆ ಯಾವ ರೀತಿಯ ಸ್ಥಿತಿ ಇತ್ತೊ, ಅದೇ ಸ್ಥಿತಿಗೆ ಬಂದು ಬಿಡುತ್ತೀರಿ. ಅದರ ಬಗ್ಗೆ ಹೇಳುವುದಕ್ಕೆ ಹೋಗಬೇಡಿ. ಏಕೆಂದರೆ ಈಗ ಮಾನ್ಯ ಮುಖ್ಯಮಂತ್ರಿಯವರಾದ ಕುಮಾರ ಸ್ವಾಮಿಯವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೆನಪಿಸಿಕೊಳ್ಳಬೇಕು. ಕುಮಾರಣ್ಣ ಇಲ್ಲವೆಂದರೆ ಈ ರಾಜ್ಯದಲ್ಲಿ ಬಿ.ಜೆ.ಪಿ., ಎಲ್ಲಿ ಇರುತ್ತಿತ್ತು. ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ ಕೇಳಿ.

(ಮುಂದು)

ಉಪಯೋಗಿಸಕೂಡದು

**(304)12/07/2018/ಎಸ್‌ಪಿಆರ್/ಎಕೆ/8:30**

**ಸಭಾಪತಿಯವರು:-** ಸ್ಪಷ್ಟೀಕರಣ ಇದ್ದರೆ ಮಾತ್ರ ಕೇಳಿ, ಇಲ್ಲವೆಂದರೆ ಹಳೆಯ ವಿಚಾರಗಳನ್ನು ಪ್ರಸ್ತಾಪಿಸಬೇಡಿ. ನೀವು ಅವರ ವಿಚಾರಗಳನ್ನು ಪ್ರಸ್ತಾಪಿಸಿದರೆ, ಅವರು ನಿಮ್ಮ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾರೆ.

**ಶ್ರೀ ಪ್ರದೀಪ್ ಶೆಟ್ಟರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆಯವ್ಯಯಕ್ಕೆ ಸಂಬಂಧಪಟ್ಟಂತೆ ಮಾನ್ಯ ರೇವಣ್ಣನವರನ್ನು ಉತ್ತರ ಕೇಳದಿದ್ದರೆ ದಾರಿಯನ್ನು ತಪ್ಪಿಸದಂತಾಗುತ್ತದೆ. ಕೇಂದ್ರ ರಸ್ತೆ ನಿಧಿ (Central Road Fund) ಅಡಿ ನಾವು 1,200 ಕೋಟಿ ರೂಪಾಯಿಗಳ ಅನುದಾನವನ್ನು ತೆಗೆದುಕೊಂಡು ಬಂದಿದ್ದರಿಂದ ಒಳ್ಳೋಳ್ಳೆಯ ಕೆಲಸಗಳಾಗುತ್ತಿವೆ. ಕಳೆದ ಬಾರಿ ಮಾನ್ಯ ಮಂತ್ರಿಗಳು ಹುಬ್ಬಳ್ಳಿಗೆ ಭೇಟಿ ನೀಡಿದಾಗ ನೋಡಿದ್ದಾರೆ. ದಯಮಾಡಿ ಅಲ್ಲಿನ ರಸ್ತೆಗಳು ಕೆಟ್ಟಿದೆ ಎಂಬುದಾಗಿ ಹೇಳುವುದು ಬೇಡ. ನಿಮ್ಮ ಸರ್ಕಾರ ಐದು ವರ್ಷಗಳ ಕಾಲ ಅಧಿಕಾರದಲ್ಲಿತ್ತು, ಆಗ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರಲಿಲ್ಲ.

**ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರವು ಮೊದಲನೆ, ಎರಡನೆ ಹಾಗೂ ಮೂರನೇ ಹಂತಗಳಲ್ಲಿ ಅನುಕ್ರಮವಾಗಿ 3,000, 2,000 ಮತ್ತು 2,000 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರವು ವರ್ಷಕ್ಕೆ 500 ಕೋಟಿ ರೂಪಾಯಿಗಳಷ್ಟು ಸೆಸ್ ಹಣವನ್ನು ನೀಡುತ್ತದೆ. ಈಗಾಗಲೇ 250 ಕೋಟಿ ರೂಪಾಯಿಗಳ ಅನುದಾನಕ್ಕೆ ಅನುಮೋದನೆಯನ್ನು ನೀಡಿದ್ದಾರೆ. ಮೊನ್ನೆಯ ದಿನ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾನು ಕೇಂದ್ರ ಸರ್ಕಾರದ ಮಂತ್ರಿಗಳ ಬಳಿ ಹೋಗಿ ಅನುದಾನವನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಇದಕ್ಕೆ ಪ್ರತ್ಯುತ್ತರವಾಗಿ ಕೇಂದ್ರ ಸರ್ಕಾರವು 500

ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಅನುದಾನವನ್ನು ನೀಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದೆ. ವರ್ಷಕ್ಕೆ 500 ಕೋಟಿ ರೂಪಾಯಿಗಳಂತೆ ಅನುದಾನವನ್ನು ನೀಡಿದರೆ 14 ವರ್ಷಗಳು ಬೇಕಾಗುತ್ತವೆ. ಇದೇ ತಿಂಗಳ 18 ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯದ ಎಲ್ಲಾ ಸಂಸದರುಗಳ ಸಭೆಯನ್ನು ದೆಹಲಿಯಲ್ಲಿ ನಿಗದಿಪಡಿಸಲಾಗಿದೆ. ಪ್ರಸ್ತುತ 2,500 ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳು ನಡೆಯುತ್ತಿದೆ. 1,500 ಕೋಟಿ ರೂಪಾಯಿಗಳಷ್ಟು ಬಿಲ್ ಪಾವತಿಗಾಗಿ ಬಾಕಿ ಇದೆ. ಈ ಬಗ್ಗೆ ಆರ್ಥಿಕ ಇಲಾಖೆಯನ್ನು ಕೇಳಿದರೆ, ಅವರು ಸದರಿ ಮೊತ್ತವು ನಮಗೆ ಬರುವುದಿಲ್ಲ, ಕೇಂದ್ರ ಸರ್ಕಾರದಿಂದ 500 ಕೋಟಿ ರೂಪಾಯಿಗಳಷ್ಟು ಅನುದಾನ ಬಿಡುಗಡೆಯಾಗುತ್ತದೆ, ಅದನ್ನು ತೆಗೆದುಕೊಳ್ಳಿ ಎಂಬುದಾಗಿ ಹೇಳುತ್ತಾರೆ. ಹುಬ್ಬಳ್ಳಿಯ ಕಾಮಗಾರಿಯೊಂದಕ್ಕೆ 33 ಕೋಟಿ ರೂಪಾಯಿಗಳ ಗುತ್ತಿಗೆದಾರರ ಬಿಲ್ ಬಾಕಿ ಇದೆ. ಈ ವಿಚಾರವು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ಸಂಬಂಧವಾಗಿ ಸದರಿ ಗುತ್ತಿಗೆದಾರರನ್ನು ಹಾಗೂ ಜಗದೀಶ್ ಶೆಟ್ಟರ್‌ರವರುಗಳನ್ನು ಕರೆಸಿ ಸಭೆ ನಡೆಸಲಾಗಿದೆ. ಇನ್ನೂ 28 ಕೋಟಿ ರೂಪಾಯಿಗಳಷ್ಟು ಕಾಮಗಾರಿಯು ಬಾಕಿ ಇದೆ. ಬೇರೆ ಕಡೆಯಿಂದಾದರೂ ಸರಿ ಹಣವನ್ನು ತೆಗೆದುಕೊಂಡು ಬಂದು ಬಾಕಿ ಕೆಲಸಗಳನ್ನು ಪೂರ್ಣಗೊಳಿಸಿ ಎಂಬುದಾಗಿ ಸದರಿ ಗುತ್ತಿಗೆದಾರರಿಗೆ ಹೇಳಿದ್ದೇನೆ. ಬೆಂಗಳೂರು ನಗರದಂತೆ ಹುಬ್ಬಳ್ಳಿಯೂ ಸಹ ರಾಜಧಾನಿಯಂತೆ ಕೇಂದ್ರ ಸ್ಥಾನವಾಗಿದೆ. ಹೀಗಾಗಿ ಈ ವಾರದಲ್ಲಿ 20 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ; ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸುವಂತೆ ಸಭಾಪತಿಯವರಾದ ಮಾನ್ಯ ಬಸವರಾಜ ಹೊರಟ್ಟಿ, ವಿಧಾನಸಭಾ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್ ರವರ ಸಮ್ಮುಖದಲ್ಲಿ ಗುತ್ತಿಗೆದಾರರಿಗೆ ತಿಳಿಸಲಾಗಿದೆ. ಹುಬ್ಬಳ್ಳಿ ರಸ್ತೆಗೆ ಕೇಂದ್ರ ಸರ್ಕಾರದ ಅನುದಾನ ಸಿಕ್ಕಿದೆ ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇವರ ಹಿಂಸೆಯಿಂದಾಗಿ ಕೇಂದ್ರ ಸರ್ಕಾರದವರು ಸುಮ್ಮನೆ ಸೀಲ್‌ನ್ನು ಒತ್ತಿ ಕೊಟ್ಟಿದ್ದಾರೆ. ಕಾಮಗಾರಿಯ ಒಟ್ಟಾರೆ ಮೊತ್ತವನ್ನು ಕೇಂದ್ರ ಸರ್ಕಾರದಿಂದ ಪಡೆಯಲು 14 ವರ್ಷಗಳು ಬೇಕಾಗುತ್ತವೆ. ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರು ತಿಳಿದುಕೊಳ್ಳಲಿ. ಅವಶ್ಯಕವಾದರೆ, ಏಳು ಸಾವಿರ ಕೋಟಿ ರೂಪಾಯಿಗಳ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಲಾಗುವುದು, ಬೇಕಾದರೆ ಅವರೇ ಗುತ್ತಿಗೆಯ ಏಜೆನ್ಸಿಗಳನ್ನು ನಿಗದಿಪಡಿಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳಲಿ. ಇದಕ್ಕೆ ರಾಜ್ಯ ಸರ್ಕಾರದ ಯಾವುದೇ ಅಭ್ಯಂತರವಿಲ್ಲ. ಸದರಿ ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ವತಿಯಿಂದ ನಿರಾಪೇಕ್ಷಣಾ ಪತ್ರವನ್ನೂ ಸಹ ನೀಡಲಾಗುವುದು. ರಸ್ತೆ ನಿರ್ಮಾಣದ ಸಹವಾಸ ಸರ್ಕಾರಕ್ಕೆ ಬೇಡ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ರಸ್ತೆ ನಿರ್ಮಾಣಕ್ಕಾಗಿ ಬಿಡುಗಡೆಯಾಗುವ ಅನುದಾನದಲ್ಲಿ ಅನುಪಾತವಾರು ರಾಜ್ಯದ ಪಾಲು ಇರುತ್ತದೆ. ಹುಬ್ಬಳ್ಳಿ-ಧಾರವಾಡ

ಅವಳಿ ನಗರಗಳಿಗೆ ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆಯನ್ನು ತಂದಿದ್ದೇವೆ. ಇದರಲ್ಲಿಯೂ ಸಹ ರಾಜ್ಯ ಸರ್ಕಾರದ ಪಾಲು ಇರುತ್ತದೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸರಿಯಾಗಿ ಅನುದಾನಗಳು ಬಿಡುಗಡೆಯಾಗುತ್ತಿವೆ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ನಾನು ಲೋಕೋಪಯೋಗಿ ಇಲಾಖೆಯ ಸಚಿವನಾಗಿದ್ದಾಗ, ಹುಬ್ಬಳ್ಳಿಯಿಂದ ಧಾರವಾಡ ನಗರಕ್ಕೆ ಆರು ಪಥಗಳ ರಸ್ತೆಯನ್ನು ನಿರ್ಮಾಣ ಮಾಡಲು ಈಗ್ಗೆ 10 ವರ್ಷಗಳ ಹಿಂದೆ ಅನುಮೋದನೆಯನ್ನು ನೀಡಲಾಗಿತ್ತು. ಇತ್ತೀಚೆಗೆ ಕಿಲೋಮೀಟರ್‌ವಾರು ರಸ್ತೆ ನಿರ್ಮಾಣ ಕಾಮಗಾರಿಯನ್ನು ನಾನು ಪರಿಶೀಲಿಸಿದ್ದೇನೆ. ಸದರಿ ಗುತ್ತಿಗೆಯನ್ನು ಆರ್.ಎನ್.ಶೆಟ್ಟಿ ರವರಿಗೆ ವಹಿಸಿ 10 ವರ್ಷಗಳಾಯಿತು. ಇನ್ನೂ ಮೂರು ತಿಂಗಳಿನಲ್ಲಿ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲವೆಂದಾದರೆ ಸದರಿ ಗುತ್ತಿಗೆ ಕಂಪನಿಯನ್ನು "ಬ್ಲಾಕ್ ಲಿಸ್ಟ್" ಗೆ ಸೇರಿಸಲಾಗುವುದು ಎಂಬುದಾಗಿ ಹೇಳಿದ್ದೇನೆ. ಕೀಲೋಮೀಟರ್‌ವಾರು ಯಾವ ರೀತಿಯಾದ ಕೆಲಗಳಾಗಿವೆ ಎಂಬುದರ ಬಗ್ಗೆ ಮಾನ್ಯ ಬಸವರಾಜ ಹೊರಟ್ಟಿ ಹಾಗೂ ಶ್ರೀ ಜಗದೀಶ್ ಶೆಟ್ಟರ್‌ರವರ ಸಮ್ಮುಖದಲ್ಲಿ ಸಭೆಯನ್ನು ನಡೆಸಲಾಗಿದೆ. ಮಾನ್ಯ ಸದಸ್ಯರು ಯಾವುದೇ ರೀತಿಯಾದ ಯೋಚನೆಯನ್ನು ಮಾಡುವುದು ಬೇಡ. ಹುಬ್ಬಳ್ಳಿಯ ವಿಚಾರವಾಗಿ ವಿಶೇಷ ಗಮನಹರಿಸಲಾಗುವುದು. ಮಾನ್ಯ ಸದಸ್ಯರ ಕೈಯ್ಯಲ್ಲಿ ಆಗದೇ ಇರುವಂತಹ ಕೆಲಸಗಳನ್ನು ಸರ್ಕಾರ ಮಾಡಿ ತೋರಿಸುತ್ತದೆ.

**ಸಭಾಪತಿಯವರು:-** ಮಾನ್ಯ ರೇವಣ್ಣನವರ ವಿಚಾರವನ್ನು ಹೊರತುಪಡಿಸಿ ಮಾನ್ಯ ಸದಸ್ಯರು ಬೇರೆ ವಿಚಾರವನ್ನು ಮಾತನಾಡಲಿ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹುಬ್ಬಳ್ಳಿಯಲ್ಲಿ ಮನೆಯನ್ನು ಮಾಡಿದ್ದಾರೆ. ಆಕಸ್ಮಿಕವಾಗಿ ಮಾನ್ಯ ಸಚಿವರ ಪಕ್ಷವು ಅಧಿಕಾರಕ್ಕೆ ಬಂದಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಹಾಸನ, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳ ಬಗ್ಗೆ ಯಾವ ರೀತಿಯಾಗಿ ವಿಶ್ಲೇಷಣೆಯನ್ನು ಮಾಡಿದ್ದಾರೆ, ಆ ರೀತಿಯಾಗಿ ಉತ್ತರ ಕರ್ನಾಟಕದ ಧಾರವಾಡ ಹಾಗೂ ಇನ್ನಿತರೆ ಜಿಲ್ಲೆಗಳಿಗೂ ಸಹ ಮಾಡಲಿ. ಉತ್ತರ ಕರ್ನಾಟಕ ಪ್ರತ್ಯೇಕ ಎಂಬುದಾಗಿ ನಾವು ಹೇಳುತ್ತಿಲ್ಲ. ಆ ರೀತಿಯಾಗಿ ಅಂದುಕೊಂಡು ಬರುವುದು ರೂಢಿಯಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು ಹಾವೇರಿ ಜಿಲ್ಲೆಗೆ ವಿಶೇಷ ಅನುದಾನ ಬಿಡುಗಡೆ ಮಾಡಿದ್ದೇವೆ ಎಂಬುದಾಗಿ ಹೇಳಿದ್ದಾರೆ. ಮಾನ್ಯ ಸಭಾಪತಿಯವರು ಹಾಗೂ ನಾವು ಒಂದೇ ಊರಿನವರಾಗಿದ್ದು, ಅಕ್ಕ-ಪಕ್ಕದ ಮನೆಗಳಲ್ಲಿದ್ದೇವೆ. ಈ ವಿಚಾರ ಎಲ್ಲರಿಗೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಳಿದಿದೆ. ಮಾನ್ಯ ಮುಖ್ಯಮಂತ್ರಿಗಳು ಚುನಾವಣೆ ಪ್ರಚಾರಕ್ಕಾಗಿ ಹುಬ್ಬಳ್ಳಿಗೆ ಬಂದಾಗ 134 ಕೋಟಿ ರೂಪಾಯಿಗಳ ಪಿಂಚಣಿ ಹಣವನ್ನು ನೀಡುವುದಾಗಿ ಆಶ್ವಾಸನೆಯನ್ನು ನೀಡಿದ್ದರು. ಆ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರೂ ಸಹ ಅಲ್ಲಿ ಉಪಸ್ಥಿತರಿದ್ದರು. ಉತ್ತರ ಕರ್ನಾಟಕ ಭಾಗಗಳಾದ ಹುಬ್ಬಳ್ಳಿ-ಧಾರವಾಡ ನಗರಗಳನ್ನು ದತ್ತು ತೆಗೆದುಕೊಳ್ಳುವುದಾಗಿಯೂ ಸಹ ಅವರು ಹೇಳಿದ್ದರು. ಈ ಮಾಹಿತಿಯನ್ನು ನಾನು ಮಾಧ್ಯಮದವರಿಂದ ಪಡೆದುಕೊಂಡು ಮಾತನಾಡಲು ಸಿದ್ಧನಾಗಿ ಬಂದಿದ್ದೇನೆ. ನಾವು ಕಳೆದು ಐದು ವರ್ಷಗಳಿಂದ ನಿವೃತ್ತ ನೌಕರರಿಗೆ ನೀಡಬೇಕಾದ ಪಿಂಚಣಿ ಹಣಕ್ಕಾಗಿ ಹೋರಾಟವನ್ನು ಮಾಡಿದ್ದೇವೆ. ಹೀಗಾಗಿ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಆ ಹಣವನ್ನು ಕೊಡಿಸಬೇಕು. ಕಾರ್ಪೋರೇಷನ್‌ನವರು ನಿವೃತ್ತ ನೌಕರರಿಗೆ ಪಿಂಚಣಿಯನ್ನು ನೀಡಬೇಕು. ಮಾನ್ಯ ಮುಖ್ಯಮಂತ್ರಿಗಳು 135 ಕೋಟಿ ರೂಪಾಯಿಗಳಷ್ಟು ಪಿಂಚಣಿ ಹಣವನ್ನು ದಯಮಾಡಿ ಸಂದಾಯ ಮಾಡಲಿ. ಈ ಹಿಂದೆ ಹಲವು ಬಾರಿ ಮಾನ್ಯ ಸಿದ್ದರಾಮಯ್ಯನವರಿಗೆ, ಮಾನ್ಯ ರೋಷನ್ ಬೇಗ್ ರವರುಗಳಿಗೆ ಮನವಿಗಳನ್ನು ಸಲ್ಲಿಸಲಾಗಿತ್ತು. ಹಿಂದಿನ ಮಂತ್ರಿಗಳ ಮನೆಯ ಮುಂದೆ ಧರಣಿಯನ್ನೂ ಸಹ ಕೈಗೊಳ್ಳಲಾಗಿತ್ತು. ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡರೂ ಸಹ ಇನ್ನೂ ನಿವೃತ್ತ ನೌಕರರಿಗೆ ಪಿಂಚಣಿ ಹಣ ಸಂದಾಯವಾಗಿಲ್ಲ. ಅಲ್ಲಿನ ನಿವೃತ್ತ ನೌಕರರು ನೊಂದುಕೊಳ್ಳುತ್ತಿದ್ದಾರೆ. ಈ ವಿಚಾರವು ಮಾನ್ಯ ಸಭಾಪತಿಯವರಿಗೂ ಸಹ ತಿಳಿದಿದೆ. ಹುಬ್ಬಳ್ಳಿ ಧಾರವಾಡ ನಗರದ ನಿವೃತ್ತ ನೌಕರರಿಗೆ ಪಿಂಚಣಿ ಹಣವು ಬಹಳ ಮುಖ್ಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಖುಷಿಗಾಗಿ 30 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಇದಕ್ಕಿಂತ ಮುಖ್ಯವಾಗಿ ಅವಳಿ ನಗರಗಳಲ್ಲಿ ಹೆಚ್ಚಿನ ನೀರಿನ ಸಮಸ್ಯೆ ಇದೆ. 20 ದಿನಗಳಿಗೊಮ್ಮೆ ಕುಡಿಯುವ ನೀರಿನ ವ್ಯವಸ್ಥೆ ಇದೆ. ಚುನಾವಣೆಯ ಸಂದರ್ಭದಲ್ಲಿ ನಾವು ಆ ಭಾಗಗಳಲ್ಲಿ ಸಂಚಾರ ಮಾಡಿದ್ದೇವೆ. ಅಲ್ಲಿನ ನೀರಿನ ಸಮಸ್ಯೆ ಬಹಳವಾಗಿ ಇದೆ.

**ಸಭಾಪತಿಯವರು:-** ಯಾರಿಗೆ ಈವರೆಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ ಅವರಿಗೆ ಮೊದಲ ಅವಕಾಶವನ್ನು ನೀಡುತ್ತೇನೆ. ಮಾನ್ಯ ಪ್ರದೀಶ್ ಶೆಟ್ಟರ್‌ರವರೇ ಬೇಗ ಮುಗಿಸಿ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಭಯಂಕರವಾದ ಕುಡಿಯುವ ನೀರಿನ ಸಮಸ್ಯೆ ಕೇವಲ ಹುಬ್ಬಳ್ಳಿ-ಧಾರವಾಡ ನಗರಕ್ಕೆ ಮಾತ್ರ ಸೀಮಿತವಾಗಿಲ್ಲ. ಉತ್ತರ ಕರ್ನಾಟಕ ಜಿಲ್ಲೆಗಳಾದ ಹಾವೇರಿ, ಗದಗ ಜಿಲ್ಲೆಗಳಲ್ಲಿಯೂ ಸಹ ಕುಡಿಯುವ ನೀರಿನ ಸಮಸ್ಯೆಯುಂಟಾಗಿದೆ. ಚುನಾವಣೆಯ ಸಂದರ್ಭದಲ್ಲಿ ನಾವು ಮೂರು ಜಿಲ್ಲೆಗಳಲ್ಲಿ ಸಂಚಾರವನ್ನು ಮಾಡಿದ್ದೇವೆ. ಎಲ್ಲಾ ಕಡೆಗಳಲ್ಲಿ ಕುಡಿಯುವ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೀರಿನ ಹಾಹಾಕಾರವುಂಟಾಗಿದೆ. ನಮ್ಮ ಭಾಗದ ನೀರಾವರಿ ಯೋಜನೆಗಳಿಗೆ ಹೆಚ್ಚು ಒತ್ತನ್ನು ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಕುಮಾರಸ್ವಾಮಿರವರು ಮುಖ್ಯಮಂತ್ರಿಗಳು ಮತ್ತು ಶ್ರೀ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಜಗದೀಶ್ ಶೆಟ್ಟರ್‌ರವರು ಕಂದಾಯ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಸುವರ್ಣ ಸೌಧ ನಿರ್ಮಾಣಕ್ಕೆ ಅನುಮೋದನೆಯನ್ನು ನೀಡಲಾಯಿತು. ಇದು ಬಹಳ ದೊಡ್ಡ ಕೆಲಸವಾಗಿದೆ. ಯಾವುದೇ ಒಳ್ಳೆಯ ಕೆಲಸಗಳನ್ನು ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಉತ್ತರ ಕರ್ನಾಟಕ ಭಾಗದ ಜನರು ಏನು ಮಾತನಾಡಿಕೊಳ್ಳುತ್ತಿದ್ದಾರೆ ಅದನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಈ ಹಿಂದೆ ನಮ್ಮ ಪಕ್ಷ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಪಕ್ಷ ಒಟ್ಟಾಗಿ ಸರ್ಕಾರ ರಚನೆ ಮಾಡಿತ್ತು. ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ನಾವು ಈ ಹಿಂದೆ ಕೆಲಸವನ್ನು ಮಾಡಿದ್ದೇವೆ. ನಾನು ಮಾನ್ಯ ಮುಖ್ಯಮಂತ್ರಿಗಳ ಕುಟುಂಬದ ಬಗ್ಗೆ ಇಲ್ಲಿ ಮಾತನಾಡುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ಯಾರದೇ ಕುಟುಂಬದ ಬಗ್ಗೆ ಇಲ್ಲಿ ಮಾತನಾಡಬಾರದು.

**(ಗೊಂದಲ)**

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಸುವರ್ಣ ಸೌಧದಲ್ಲಿ ವರ್ಷಕ್ಕೆ ಎರಡು ಬಾರಿ ಅಧಿವೇಶನವನ್ನು ಮಾಡಿ ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇದರಿಂದಾಗಿ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಯಾಗುತ್ತದೆ ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಕರಾವಳಿ ಪ್ರದೇಶದಲ್ಲಿ ನದಿಗೆ ಸರಣಿ vented damಗಳನ್ನು ನಿರ್ಮಿಸುವುದರ ಮುಖಾಂತರ ಹಿಂದಿನ ಸರ್ಕಾರ ಪಶ್ಚಿಮ ವಾಹಿನಿಗೆ ಭರವಸೆಯನ್ನು ನೀಡಿತ್ತು. ಅದಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಬ್ರಹ್ಮಾವರದ ಸರ್ಕಾರಿ ಸಕ್ಕರೆ ಕಾರ್ಖಾನೆ ಪುನಃಶ್ಚೇತನವಾಗಬೇಕು. ರೈತರ ಸಂಪರ್ಕ ಸಭೆಗಳನ್ನು ಮಾಡಬೇಕು. ಏಕೆಂದರೆ, ಆಗಿಂದಾಗ್ಗೆ ಪಂಚಾಯಿತಿಗಳ ಮಟ್ಟದಲ್ಲಿ ರೈತರ, ಮಹಿಳೆಯರ ಹಾಗೂ ಇತರೆ ಗ್ರಾಮಸಭೆಗಳು ನಡೆಯುತ್ತಿರುತ್ತವೆ. ಆದರೆ ರೈತರ ಸಂಪರ್ಕ ಸಭೆಗಳನ್ನು ಕನಿಷ್ಠ ಆರು ತಿಂಗಳಿಗೊಮ್ಮೆ ತಾಲ್ಲೂಕು ಮಟ್ಟದಲ್ಲಿ ಮಾಡಿದರೆ, ರೈತರಿಗೆ ಅವರಿಗಾಗಿ ಇರುವ ಕಾರ್ಯಕ್ರಮಗಳು, ಅವರಿಗೆ ನೀಡಲಾಗುವ ಸೌಲಭ್ಯಗಳು ಕುರಿತಾದ ಮಾಹಿತಿಯನ್ನು ಕೇಳಲು, ಪಡೆಯಲು ಅವರಿಗೆ ವೇದಿಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೊರೆತಂತಾಗುತ್ತದೆ. ಹೀಗಾಗಿ ಈ ಬಗ್ಗೆ ಸರ್ಕಾರವು ಚಿಂತನೆಯನ್ನು ಮಾಡಬೇಕು. ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲಿ ನಿವೇಶನದ ಕೊರತೆ ಇದೆ. ಹೀಗಾಗಿ ಮಲೆನಾಡು ಪ್ರದೇಶಗಳಲ್ಲಿ ಜನರು ಎಲ್ಲೆಲ್ಲಿಯೋ ಹೋಗಿ ಮನೆಗಳನ್ನು ನಿರ್ಮಿಸುತ್ತಾರೆ. ಇದರಿಂದಾಗಿ ಇವತ್ತಿನ ದಿವಸ 94(ಎ) ಮತ್ತು 94(ಸಿ) ಅಡಿ ಸಮಸ್ಯೆಗಳು ಉದ್ಭವವಾಗಿದೆ. ಅಲ್ಲಿನ ಜನರಿಗೆ ನೀರು, ರಸ್ತೆ, ವಿದ್ಯುಚ್ಛಕ್ತಿ ಸಂಪರ್ಕ, ಇತ್ಯಾದಿಗಳ ವ್ಯವಸ್ಥೆಗಳನ್ನು ಮಾಡಿಕೊಡಬೇಕು. ಆ ಭಾಗದ ಜನರಿಗೆ ನಿವೇಶನಗಳನ್ನು ಖರೀದಿ ಮಾಡಿಯಾದರೂ ಸಹ ಹಂಚಿಕೆ ಮಾಡಿದರೆ, ಇಂತಹ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ ಹಾಗೂ ಒಂದೇ ಕಡೆಯಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಲು ಅವಕಾಶವಾಗುತ್ತದೆ.

ಪರಿಗಣಿಸಲ್ಪಟ್ಟ ಅರಣ್ಯ ಪ್ರದೇಶದಿಂದಾಗಿ ಮಲೆನಾಡು ಪ್ರದೇಶದಲ್ಲಿ ಎಲ್ಲಿಯೂ ಸಹ ಹೋಗಿ ವಾಸ ಮಾಡುವ ಹಾಗಿಲ್ಲ, ರಸ್ತೆ, ಕಟ್ಟಡಗಳ ನಿರ್ಮಾಣ ಮಾಡುವಂತಿಲ್ಲ. ಯಾವುದೇ ರೀತಿಯಾದ ಅಭಿವೃದ್ಧಿ ಕೆಲಸಗಳನ್ನು ಮಾಡಲು ಹೋದರೆ, ಪರಿಗಣಿಸಲ್ಪಟ್ಟ ಅರಣ್ಯ ಪ್ರದೇಶದ ಸಮಸ್ಯೆ ಇದೆ. ಇದಕ್ಕೆ ಯಾವುದೇ ಪರಿಹಾರವನ್ನು ನೀಡಿದದ್ದರೆ ತೊಂದರೆಯಾಗುತ್ತದೆ. ಕಾಡನ್ನು ತೆಗೆಯಬೇಕು ಎನ್ನುವ ವಾದ ಇಲ್ಲಿ ಇಲ್ಲ. ಪರಿಗಣಿಸಲ್ಪಟ್ಟ ಅರಣ್ಯ ಪ್ರದೇಶ ಹೆಸರಿನಡಿ ಕಾಡು ಇಲ್ಲದೇ ಇರುವ ಪ್ರದೇಶಗಳು ಆರ್.ಟಿ.ಸಿ.ಯಲ್ಲಿ ದಾಖಲಾಗಿವೆ. ಕಾಡನ್ನು ಹೊರತುಪಡಿಸಿ ಪರಿಗಣಿಸಲ್ಪಟ್ಟ ಅರಣ್ಯ ಪ್ರದೇಶಗಳನ್ನು ಸರಿಪಡಿಸಿಕೊಡಬೇಕು.

**(ಮುಂದು)**

(305) 12-07-2018 (08-40) ಬಿಎಸ್‌ಡಿ-ಆರ್‌ಎನ್

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಮುಂದು):-**

ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕಾಗಿದೆ, ಏಕೆಂದರೆ ಲೇಬರ್ ಸಮಸ್ಯೆ ಇರುವ ಸಂದರ್ಭದಲ್ಲಿ ರೈತರಿಗೂ ಕೃಷಿ ಯಾಂತ್ರೀಕರಣಕ್ಕೆ ಹೋಗಬೇಕೆಂಬ ಒಲವು ಇದೆ. ಅದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಾಣವಾದರೆ ಬಹಳಷ್ಟು ಸಮಸ್ಯೆಗಳು ಪರಿಹಾರವಾಗುತ್ತವೆ ಹಾಗೂ ರೈತರಿಗೆ ಕೃಷಿಗೆ ಪ್ರೋತ್ಸಾಹವನ್ನು ಕೊಟ್ಟಂತೆ ಆಗುತ್ತದೆ ಎಂದು ಹೇಳಲು ಬಯಸುತ್ತೇನೆ.

**ಶ್ರೀ ಎಸ್. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರೇಷ್ಮೆ ಉದ್ಯಮ ಬಹಳ ಸಂಕಷ್ಟದಲ್ಲಿದ್ದು, ಈ ವಿಚಾರವು ಮಾನ್ಯ ಮುಖ್ಯಮಂತ್ರಿಗಳಿಗೆ ನೇರವಾಗಿ ತಿಳಿದಿದೆ. ಏಕೆಂದರೆ ವಿಶೇಷವಾಗಿ ನಮ್ಮ ಭಾಗಗಳಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ. ಈಗ Cross Breed ರೂ.200 ರಿಂದ ರೂ.200 ಗಳ ಬೆಲೆ ಇದ್ದು, ಕಳೆದ ಬಾರಿ ಒಂದು ಕೆ.ಜಿ.ಗೆ ರೂ.400/- ಇತ್ತು. ಅದೇರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Bivoltine ಗೆ ರೂ.450 ರಿಂದ ರೂ.500 ಗಳು ಇದ್ದು, ಆಗ ರೂ.600/- ಇತ್ತು. ಆದ್ದರಿಂದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಯವರ ಸಹಾಯ ನಿಧಿಯಿಂದ ರೈತರಿಗೆ ಸಹಾಯ ಮಾಡಬೇಕು ಮತ್ತು ಶ್ರೀ ಬಸವರಾಜ ಸಮಿತಿಯ ವರದಿಯನ್ನು ಅನುಷ್ಠಾನ ಮಾಡಬೇಕು.

ಇನ್ನು ಹಾಲಿನ ಬಗ್ಗೆ ನಾನು ಮಾತನಾಡಿದ್ದು, ಎಲ್ಲಾ ಒಕ್ಕೂಟಗಳು ರೂ.2 ರಿಂದ ರೂ.4 ರವರೆಗೆ ಬೆಲೆ ಇಳಿಸಿದ್ದಾರೆ. ಅನೇಕ ರೈತರು ಬಜೆಟ್‌ನಲ್ಲಿ ಹಾಲಿನ ಬೆಲೆ ಬಗ್ಗೆ ನಿರೀಕ್ಷೆ ಮಾಡಿದ್ದಾರೆ. ಹೈನು ಉದ್ಯಮಕ್ಕೆ ಉತ್ತೇಜನ ಕೊಡಬೇಕು. ಕೆಳಮನೆಯಲ್ಲಿ ಘೋಷಣೆ ಮಾಡಿದ್ದಾರೆ ಎಂದು ಕೇಳಿದೆ. ಆದ್ದರಿಂದ ಹಾಲಿನ ಬೆಲೆ ಕುಸಿತದ ಬಗ್ಗೆ ನೆರವು ಕೊಡುತ್ತಾರೆ ಎಂದು ಭಾವಿಸುತ್ತೇನೆ.

**ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ನೇಕಾರರಿಗೆ ರೂ.63 ಕೋಟಿಗಳನ್ನು ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಹಾಗೂ ತಾವು ಮನ್ನಾ ಮಾಡಿರುವುದಕ್ಕೆ ಇಡೀ ಕರ್ನಾಟಕ ಜನತೆ ಹಾಗೂ ಹಿಂದುಳಿದ ವರ್ಗಗಳ ಪರವಾಗಿ ನಾನು ಅಭಿನಂದನೆ ಸಲ್ಲಿಸುತ್ತೇನೆ.

ತಮಗೆ ಗೊತ್ತಿರುವ ಹಾಗೆ ಹಿಂದುಳಿದ ವರ್ಗಗಳಲ್ಲಿ 102 ಜಾತಿಗಳಿದ್ದು, ಅವರವರ ಜಾತಿಗಳನ್ನು ಗಟ್ಟಿ ಮಾಡುವುದಕ್ಕೋಸ್ಕರ ಶ್ರೀಯುತ ದೇವರಾಜ್ ಅರಸ್ ಅಭಿವೃದ್ಧಿ ನಿಗಮ ಇದೆ. ಅದಕ್ಕೆ ಸಾಕಷ್ಟು ಅನುದಾನವೂ ಬರುತ್ತಿದೆ. ಆದರೆ ಕೆಲವೆ ಜಾತಿಗಳು ಮಾತ್ರ ಆ ಅನುದಾನದ ಬಳಕೆ ಮಾಡಿಕೊಳ್ಳುತ್ತಿದ್ದು, ಶೋಷಣೆಗೆ ಒಳಪಟ್ಟಿರುವ ಕೆಲವು ಜಾತಿಗಳನ್ನು ನಿರ್ಲಕ್ಷ್ಯ ಮಾಡಿ, ಆ ಜಾತಿಗಳಿಗೆ ಏನೂ ಸಿಗದಂತೆ ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ಕ್ರಮ ತೆಗೆದುಕೊಂಡು ಎಲ್ಲರಿಗೂ ಸಮನಾಗಿ ಹಂಚುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ ಹಿಂದುಳಿದ ವರ್ಗದಲ್ಲಿ ವಿಶ್ವಕರ್ಮ ಸಮಾಜ ಇದ್ದು, ನಾವು ಚಿನ್ನ-ಬೆಳ್ಳಿ ಕೆಲಸ, ಮರದ ಕೆಲಸ, ಕಂಚಿನ ಕೆಲಸ, ಶಿಲ್ಪಿಗಳ ಕೆಲಸ, ಕಬ್ಬಿಣದ ಕೆಲಸ ಸೇರಿದಂತೆ 5 ಕಸಬುಗಳಿಗೆ ಸಂಬಂಧಪಟ್ಟಂತೆ ನಮ್ಮ ಹೋರಾಟದ ಫಲವಾಗಿ ಕಾಂಗ್ರೆಸ್ ಸರ್ಕಾರವು ವಿಶ್ವಕರ್ಮ ಅಭಿವೃದ್ಧಿ ನಿಗಮವನ್ನು ಕೊಟ್ಟಿದೆ, ಅದಕ್ಕೆ ಮಾನ್ಯ ಸಿದ್ದರಾಮಯ್ಯನವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಆ ನಿಗಮದ ಸಿಬ್ಬಂದಿಗೆ ಸಾಕಾಗುವಂತೆ ಮಾತ್ರ ಅನುದಾನವನ್ನು ಕೊಟ್ಟಿದ್ದಾರೆ. ನಾನು ಅಭಿವೃದ್ಧಿ ನಿಗಮದಿಂದ ಕೊಟ್ಟಿರುವ ಸಾಲವನ್ನು ಮನ್ನಾ ಮಾಡಿ ಎಂದು ಕೇಳುತ್ತಿಲ್ಲ. ನಮಗೆ ಸಾಲ ಕೊಡುವ ಅನುದಾನವನ್ನು ಕೊಡಬೇಕು. ವಿಶ್ವಕರ್ಮ ಜನಾಂಗದ ಜನಸಂಖ್ಯೆ ಸುಮಾರು 40 ಲಕ್ಷ ಇದ್ದು, ರೂ.300

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಿದರೆ ಅನುಕೂಲವಾಗುತ್ತದೆ. ಈ ಜನಾಂಗದವರು ರೈತರಿಗೆ ಬೆನ್ನೆಲುಬಾಗಿದ್ದಾರೆ. ನಮ್ಮನ್ನು ಉಳಿಸುವ ಕೆಲಸ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತಾ, ಮಾನ್ಯ ಮುಖ್ಯಮಂತ್ರಿಯವರು ಸಲ್ಲಿಸಿರುವ 2018–19ನೇ ಸಾಲಿನ ಆಯವ್ಯಯಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇದರಲ್ಲಿ ವಿಶೇಷವಾಗಿ ಹೈದರಾಬಾದ್–ಕರ್ನಾಟಕದ ಬಗ್ಗೆ ಆಯವ್ಯಯ ಭಾಷಣದ ಪುಟ 38ರಲ್ಲಿ 81ನೇ ಪ್ಯಾರಾದಲ್ಲಿ " ಹೈದ್ರಾಬಾದ್ ಕರ್ನಾಟಕ ಕಲಂ 371(ಜೆ) ವ್ಯಾಪ್ತಿಗೆ ಬರುವ ಕಲಬುರಗಿ ನಗರದಲ್ಲಿ ಖಾಸಗಿ ತರಬೇತಿ ಕೇಂದ್ರಗಳ ಸಹಯೋಗದೊಂದಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಪದವೀಧರರಿಗೆ ಯು.ಪಿ.ಎಸ್.ಸಿ. / ಕೆ.ಪಿ.ಎಸ್.ಸಿ / ಬ್ಯಾಂಕಿಂಗ್ ಇತ್ಯಾದಿ ಸಂಸ್ಥೆಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ನೆರವು ನೀಡಲಾಗುವುದು" ಎಂದು ತಿಳಿಸಿರುವುದು ಬಹಳ ಒಳ್ಳೆಯ ವಿಚಾರವಾಗಿದೆ. ಇದಕ್ಕಾಗಿ ತಮಗೆ ಅಭಿನಂದಿಸುತ್ತೇನೆ. ಆದರೆ ಇಲ್ಲಿನ ಒಂದು ಅಳಲನ್ನು ತಮ್ಮಲ್ಲಿ ತೋಡಿಕೊಳ್ಳಲು ಬಯಸುತ್ತೇನೆ. ಉತ್ತರ ಕರ್ನಾಟಕ ಎಂದು ಎಲ್ಲಾ ವಿಚಾರಗಳನ್ನು ಇಲ್ಲಿ ಹೇಳುತ್ತಾರೆ. ಮಾನ್ಯ ಸಭಾಪತಿಯವರೇ ಆ ವಿಚಾರವಾಗಿ ನಾನು ಅನೇಕ ಸಲ ಚರ್ಚೆ ಮಾಡಿದ್ದೇನೆ. ಆದರೆ ಇಲ್ಲಿಂದ ಬಜೆಟ್ ಅನುದಾನ ಶಿರಾವರೆಗೂ ಹೋಗಿ ಬೆಳಗಾಂ, ಹುಬ್ಬಳ್ಳಿ, ಧಾರವಾಡಗಳ ಕಡೆಗೆ ತೆಗೆದುಕೊಂಡು ಹೋಗುತ್ತದೆ. ಆದರೆ ನಾವು ಅನುದಾನವನ್ನು ಕೇಳಿದಾಗ ' ನೀವು 371(ಜೆ) ರಡಿಯಲ್ಲಿ ನಿಮಗೆ ರೂ.1000 ಕೋಟಿ ಕೊಟ್ಟಿದ್ದೇವೆ, ರೂ.1500 ಕೋಟಿ ಕೊಟ್ಟಿದ್ದೇವೆ' ಎಂದು ಹೇಳುತ್ತಾರೆ. ಇನ್ನೂವರೆಗೂ ನಮ್ಮಲ್ಲಿ 45% ಶಿಕ್ಷಕರ ಕೊರತೆ ಇದೆ. ಮೂಲ ಶಿಕ್ಷಣವನ್ನೇ ಕೊಡುವುದಕ್ಕೆ ಆಗುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಸಂಕನೂರು ರವರುಗಳು ಈ ಬಗ್ಗೆ ಹೇಳಿದ್ದಾರೆ. ಆದರಿಂದ ತಾವು ಆ ಆ ವಿಚಾರ ಬಿಟ್ಟು ಬೇರೆ ಹೇಳಿ.

**ಶ್ರೀ ಶರಣಪ್ಪ ಮಟ್ಟೂರ:–** ನಮ್ಮಲ್ಲಿ ಶಿಕ್ಷಕರ ಕೊರತೆ ಇದ್ದು, Head Masters' Promotion file ಕ್ಯಾಬಿನೆಟ್ ಸಬ್– ಕಮಿಟಿಯಲ್ಲಿ ಪೆಂಡಿಂಗ್ ಇದ್ದು, ಅದನ್ನು ಕೂಡಲೇ ಮಾಡಿಕೊಡಬೇಕು. ಅಲ್ಲಿ ಉಪನ್ಯಾಸಕರು ಹಾಗೂ ಪ್ರಾಂಶುಪಾಲರ ಬೇಡಿಕೆ ಬಹಳ ಇದೆ. 413 ಡಿಗ್ರಿ ಕಾಲೇಜುಗಳಲ್ಲಿ 395 ಪ್ರಾಂಶುಪಾಲರ ಕೊರತೆ ಇದೆ. ಅದೇ ರೀತಿ ಹೈಸ್ಕೂಲ್‌ನಿಂದ ಪಿ.ಯು. ಕಾಲೇಜಿಗೆ ಪ್ರಮೋಷನ್ ಕೊಡುವ ವಿಷಯದ ಬಗ್ಗೆ ಪ್ರಸ್ತಾವನೆ ಸಲ್ಲಿಸಿ 7 ವರ್ಷಗಳು ಕಳೆದಿವೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಯವರು ದಯಮಾಡಿ ಇದರ ಬಗ್ಗೆ ಗಮನಹರಿಸಬೇಕು. Guest Lecturersಗಳ ವಿಚಾರವನ್ನು ಪ್ರಣಾಳಿಕೆಯಲ್ಲಿ ಹಾಕಿಕೊಂಡಿದ್ದು, ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಅಧಿಕಾರಕ್ಕೆ ಬಂದರೆ ಅವರನ್ನು ರೆಗ್ಯುಲರೈಸ್ ಮಾಡುವುದಕ್ಕೆ ನೋಡುವ ಬಗ್ಗೆ ಹೇಳಿದ್ದಾರೆ. ಅವರೆಲ್ಲರೂ 12,500 ಜನರಿದ್ದು, ಅವರೆಲ್ಲರನ್ನೂ ಒಂದೇ ಬಾರಿ ರೆಗ್ಯುಲರೈಸ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದರೆ ಜೆಓಸಿ ರೀತಿ absorb ಮಾಡಿ, ಖಾಲಿಯಿರುವ ಕಡೆಗಳಲ್ಲಿ ಕೊಡಲು ಇಚ್ಛಾಶಕ್ತಿ ವಹಿಸಬೇಕೆಂದು ಮನವಿ ಮಾಡುತ್ತೇನೆ.

ಇನ್ನು ಎಸ್‌ಪಿಎಸ್ ವಿಚಾರ ಹಾಗೂ ಡಿಗ್ರಿ ಕಾಲೇಜುಗಳ ಬಗ್ಗೆ ಮಾನ್ಯ ಸಂಕನೂರು ರವರು ಪ್ರಸ್ತಾಪ ಮಾಡಿದ್ದಾರೆ. ದಿನಾಂಕ 1-6-1987ರಿಂದ 1995ರವರೆಗೆ 37 ಎಸ್‌ಸಿ/ಎಸ್‌ಟಿ ಕಾಲೇಜುಗಳಿಗೆ ಅನುದಾನ ಕೊಟ್ಟಿದ್ದು, general management ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ದಿನಾಂಕ 6/2/2018ರಂದು ಕಾಲ್ಪನಿಕ ವೇತನದ ಬಗ್ಗೆ ವರದಿ ಕೊಟ್ಟಿದ್ದು, ಅದರಲ್ಲಿ ರೂ.359.84 ಕೋಟಿಗಳಿದ್ದು, ಇದನ್ನು ತಾವು ಒಪ್ಪಿ ಜಾರಿಗೆ ತರಬೇಕೆಂದು ವಿನಂತಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರ ಬಗ್ಗೆ Super CM ಎಂದು ಕರೆದಿದ್ದು, ಅದೇರೀತಿ Super Moon ಎಂದರೆ ಸಹಜ ಸ್ಥಿತಿಗಿಂತ ಒಳ್ಳೆಯ ಬೆಳಕನ್ನು ಕೊಡುವ Moon ಇದೊಂದು ವಿಶೇಷ ಸನ್ನಿವೇಶವಾಗಿದ್ದು, ಮಾನ್ಯ ರೇವಣ್ಣನವರು ರಾಜಕೀಯ ಪ್ರವೇಶ ಮಾಡಿ ಮುಂದಿನ ವರ್ಷ 25 ವರ್ಷಗಳಾಗಿರುವುದರಿಂದ ಬೆಳ್ಳಿ ಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ. 1994ರಲ್ಲಿ ಮೊದಲ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅವರ ಅನುಭವವೂ ಕಡಿಮೆ ಅಲ್ಲ. ಅದೃಷ್ಟದಂತೆ ಮಾನ್ಯ ಕುಮಾರಸ್ವಾಮಿಯವರು ಎರಡು ಸಾರಿ ಮುಖ್ಯಮಂತ್ರಿಗಳಾಗಿರಬಹುದು. ಅವರ ತಮ್ಮ ಮುಖ್ಯಮಂತ್ರಿಯಾದಾಗ ಮಾನ್ಯ ರೇವಣ್ಣನವರ ಆನಂದವನ್ನು ನೋಡಬೇಕು. ಅದು ನಮ್ಮ ಸಂಸ್ಕೃತಿಯ ಒಂದು ಭಾಗ. ನಾವು ಅದನ್ನು ಒಳ್ಳೆಯ ರೀತಿ ಸ್ವೀಕರಿಸೋಣ.

**ಸಭಾಪತಿಯವರು:-** ಇವರು ಶುರು ಮಾಡಿದರು.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಕುಮಾರಸ್ವಾಮಿಯವರು ಸಿಗುವುದಿಲ್ಲ, ಮಾನ್ಯ ರೇವಣ್ಣನವರು ಸಹಾಯಕ್ಕೆ ಬರಬೇಕು. ನನ್ನ ಮೂರು ಅಂಶಗಳನ್ನು ಮಾತ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತೇನೆ. ಒಟ್ಟಾರೆ ಆತ್ಮಹತ್ಯೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅತೀ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಶೇಷವಾಗಿ ಸ್ಥಗಿತಗೊಂಡಿರುವ ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನ ಮಾಡುತ್ತಾರೆ ಎಂದು ಗೊತ್ತು, ಅದಕ್ಕೆ ಆದ್ಯತೆ ಕೊಟ್ಟು ಮಾಡಬೇಕೆಂದು ವಿನಂತಿ. ಅದೇರೀತಿ ನೀರಾವರಿಯ ಬಗ್ಗೆ ಹೇಳಬೇಕಾದರೆ ಕಾವೇರಿ ನೀರು ಹಂಚಿಕೆಯಲ್ಲಿ ಹದಿನಾಲ್ಕು ಮುಕ್ಕಾಲು ಟಿಎಂಸಿ ಕುಡಿಯುವ ನೀರು ಸಿಕ್ಕಿದ್ದು, ಹೊಸ ನೀರಾವರಿ ಪ್ರದೇಶವನ್ನು ವಿಸ್ತರಣೆ ಮಾಡಲು ಅವಕಾಶ ಇದೆ. ಇದನ್ನು ಪ್ರಬಲ ಮಂತ್ರಿಯಾದ ಶ್ರೀ ಡಿ.ಕೆ. ಶಿವಕುಮಾರ್ ರವರಿಗೆ ಕೊಟ್ಟಿದ್ದು, ಅದು ಅನುಷ್ಠಾನ ಆಗುವುದರಲ್ಲಿ ಮುತುರ್ವಜಿ ವಹಿಸಬೇಕೆಂದು ಕೋರುತ್ತೇನೆ.

ಕೊಡಗು, ಮಲೆನಾಡಿನಲ್ಲಿ ಸಿಕ್ಕಾಪಟ್ಟೆ ಮಳೆ ಬಿದ್ದು ಪರಿಹಾರೋಪಾಯದಲ್ಲಿ ಸರ್ಕಾರಕ್ಕೆ ಹೆಚ್ಚಿನ ಹೊರೆ ಬೀಳುತ್ತಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ರಸ್ತೆಗಳಿಗೆ ಕೇವಲ ತೇಪೆ ಹಾಕದೇ, ಹೊಸ ರಸ್ತೆಗಳನ್ನು ಮಾಡಲು ಆದ್ಯತೆ ಕೊಡಬೇಕು. Ease of Doing Business ನಲ್ಲಿ ಸೀಮಾಂಧ್ರ, ತೆಲಂಗಾಣ, ಹರಿಯಾಣ ಮೂರು ಸ್ಥಾನಗಳಲ್ಲಿದ್ದು, ಕರ್ನಾಟಕವು 8ನೆಯ ಸ್ಥಾನದಲ್ಲಿದೆ. ದಯಮಾಡಿ administration improve ಮಾಡಬೇಕು. ಕೊನೆಯದಾಗಿ ಮಾನ್ಯ ಸಾರಿಗೆ ಸಚಿವರು ಸಾರಿಗೆ ಇಲಾಖೆ ನಡೆಸುವುದು ಕಷ್ಟ ಎಂದು ಸಂಕಷ್ಟವನ್ನು ತೋಡಿಕೊಳ್ಳುತ್ತಿದ್ದರು. ಈಗ 4,236 ಬಸ್ಸುಗಳು ಹಾಗೂ 80 ಎಲೆಕ್ಟ್ರಿಕ್ ಬಸ್ಸುಗಳನ್ನು ಖರೀದಿ ಮಾಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. 2008 ರಿಂದ 2013ರ ವರೆಗೆ ಬಿಜೆಪಿ ಸರ್ಕಾರ ಇದ್ದಾಗ TATA Marcopolo ಎನ್ನುವ ದೇಶಿಯ ಬಸ್ಸುಗಳನ್ನು ಒಂದು ಬಸ್ಸಿಗೆ ರೂ.25 ಲಕ್ಷಗಳಂತೆ ಖರೀದಿಸಲಾಗಿದೆ. ಆದರೆ ತದನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಒಂದು ವೋಲ್ವೋ ಬಸ್ಸಿಗೆ ರೂ. 1 ಕೋಟಿಯಂತೆ ವಿದೇಶಿ ಬಸ್ಸು ಖರೀದಿಸಲಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಮಾತನಾಡಿ, ಆದರೆ ಭಾಷಣ ಬೇಡ. ಈಗಾಗಲೇ ಮಾಡಿದ್ದ ಭಾಷಣಗಳು ರೆಕಾರ್ಡ್‌ನಲ್ಲಿ ಇರುತ್ತವೆ. ನೀವು ಮಾತನಾಡಿದ್ದನ್ನು ಮಾನ್ಯ ಮುಖ್ಯಮಂತ್ರಿಗಳ ಕಡೆ ಕೊಟ್ಟಿರುತ್ತಾರೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಇದ್ದಿದ್ದರೆ ನನಗೆ ಕಾಟವೇ ಕೊಡುತ್ತಿರಲಿಲ್ಲ. ನಾನು ಮಾತನಾಡುವಾಗ ಬಹಳ ಕಾಟ ಕೊಡುತ್ತಾರೆ. ಒಂದು ಬಸ್ಸಿಗೆ ರೂ.75 ಲಕ್ಷ ಜಾಸ್ತಿ ಕೊಟ್ಟು ಖರೀದಿ ಮಾಡಲಾಗಿದೆ. ಮಾನ್ಯ ಮುಖ್ಯಮಂತ್ರಿಯವರು ರಾಜ್ಯದ ಬೊಕ್ಕಸಕ್ಕೆ ಹೊರೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅನೇಕ ಸರಳೀಕೃತ ಕ್ರಮಗಳನ್ನು ಕೈಗೊಂಡಿರುವುದರಿಂದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರೇರಿತಳಾಗಿ ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ 8 ವರ್ಷ ಹಾಗೂ ಆರೂವರೆ ಲಕ್ಷ ಕಿಲೋಮೀಟರ್ ಪೂರೈಸದೇ ಇರುವ ಕೇವಲ 3 ಲಕ್ಷ ಕಿಲೋಮೀಟರ್ ಕ್ರಮಿಸಿರುವ ಬಸ್ಸುಗಳನ್ನು ಸ್ಕ್ರ್ಯಾಪ್ ಮಾಡಲಾಗಿದೆ.

(ಮುಂದು)

306/12.07.2018/8.50/ಹೆಚ್‌ವಿಃಆರ್‌ಎನ್

**ಡಾ॥ತೇಜಸ್ವಿನಿಗೌಡ(ಮುಂದುವರೆದದ್ದು):–**
ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿದೆ. ದೇಶೀಯ ಬಸ್ಸುಗಳನ್ನು ಕಡಿಮೆ ವೆಚ್ಚದಲ್ಲಿ ಖರೀದಿ ಮಾಡಿ, ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಆದ್ಯತೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ರೈತರ ಪರವಾಗಿರುವ ಆಯವ್ಯಯವನ್ನು ನೀಡಿರುವಂತಹ ಮಾನ್ಯ ಕುಮಾರಸ್ವಾಮಿಯವರಿಗೆ ವಂದಿಸುತ್ತಾ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪ್ರಮಾಣ ಶೇಕಡಾ 54ರಷ್ಟಿದೆ. ಹಿಂದಿನ ಸರ್ಕಾರದವರು ಹಿಂದುಳಿದ ವರ್ಗಗಳಿಗಾಗಿ ಕೊಟ್ಟಿರುವ ಕಾರ್ಯಕ್ರಮಗಳನ್ನು ಮುಂದುವರಿಸುವುದರ ಜೊತೆಗೆ ಮಾನ್ಯ ಕೆ.ಪಿ.ನಂಜುಂಡಿಯವರು ಹೇಳಿದಂತೆ ಅಸಂಘಟಿತ ಅಥವಾ ಅತೀ ಸೂಕ್ಷ್ಮ ಸಮಾಜಗಳು ಮುಖ್ಯವಾಹಿನಿಗೆ ಬರಲು ಕಷ್ಟವಾಗುತ್ತಿರುವ ಸಂದರ್ಭದಲ್ಲಿ ದೇವರಾಜ ಅರಸು ನಿಗಮದಿಂದ ನೀಡಲಾಗುವ ಸಾಲದಿಂದಲೂ ವಂಚಿತರಾಗಿರುವ, ಆ ಸಮುದಾಯಗಳ ಹೆಸರೇ ಗೊತ್ತಿಲ್ಲದಿರುವ ಶಿಳ್ಳೇಕ್ಯಾತ, ದೊಂಬಿದಾಸ ಇನ್ನೂ ಮುಂತಾದ ಸಮುದಾಯಗಳ ಅಭಿವೃದ್ಧಿಗಾಗಿ ಈ ಆಯವ್ಯಯದಲ್ಲಿ 10 ಕೋಟಿ ರೂಪಾಯಿಗಳನ್ನು ಮೀಸಲಾಗಿಡಲಾಗಿದೆ. ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವ ಆಯವ್ಯಯದಲ್ಲಿ 100 ಕೋಟಿಗಳನ್ನು ಮೀಸಲಿಡಲಾಗಿದೆ. ಈ 100 ಕೋಟಿಗಳ ಜೊತೆಗೆ ಈ 10 ಕೋಟಿ ರೂಪಾಯಿಗಳನ್ನು ಕೊಡಲಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿಯಾಗಿದ್ದರೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ ಹಾವನೂರು ವರದಿ ಒಂದು ಮಾದರಿ ವರದಿಯಾಗಿ ಅನೇಕ ಶೋಷಿತವರ್ಗದವರು ಮತ್ತು ಹಿಂದುಳಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಗದವರು ಮುಖ್ಯವಾಹಿನಿಗೆ ಬರಲು ಅವಕಾಶವಾಗಿದೆ. ಜಾತಿ ಆಧಾರದ ಮೇಲಿನ ಜನ ಗಣತಿ ನ್ಯಾ॥ಕಾಂತರಾಜುರವರ ವರದಿಯ ಮೂಲ ಉದ್ದೇಶವಾಗಿದೆ. ಇಲ್ಲಿಯವರೆಗೆ ಎಲ್ಲಿಯೂ ಜಾತಿ ಆಧಾರದ ಮೇಲೆ ಜನ ಗಣತಿ ಆಗಿಲ್ಲ. ನಮ್ಮ ರಾಜ್ಯದಲ್ಲಿ ಪ್ರಥಮ ಬಾರಿಗೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ 200 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿಕೊಟ್ಟು ಜಾತಿ ಗಣತಿ ಕಾರ್ಯವನ್ನು ಕೈಗೆತ್ತಿಕೊಂಡಿತ್ತು. ಆ ವರದಿ ಪೂರ್ಣಗೊಂಡಿರುವ ಮಾಹಿತಿ ನಮ್ಮ ಬಳಿಯಿದೆ. ಆ ವರದಿಯಲ್ಲಿನ ಅಂಶಗಳನ್ನು ಯಥಾವತ್ತಾಗಿ ಜಾರಿಗೊಳಿಸಬೇಕೆನ್ನುವುದು ನನ್ನ ಬೇಡಿಕೆಯಾಗಿದೆ.

ಕೊನೆಯದಾಗಿ ಹೇಳಬೇಕಾದರೆ, ಹಣದ ಸಂಕಷ್ಟದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿಕೊಂಡಿದ್ದಾರೆ. ಆದರೂ ಸಹ ಈ ರಾಷ್ಟ್ರದ ಸಂಪತ್ತಾಗಿರುವ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಹಿಂದಿನ ಸರ್ಕಾರದ ಕಾರ್ಯಕ್ರಮಗಳನ್ನು ಮುಂದುವರೆಸುತ್ತೇವೆಂದು ಹೇಳಿರುವ ಮಾತಿನಲ್ಲಿ ನನಗೆ ನಂಬಿಕೆಯಿದೆ. ಈ ಯೋಜನೆ ಸ್ವಲ್ಪ ಅತಂತ್ರದ ಸ್ಥಿತಿಯಲ್ಲಿದೆ. ಮಾಧ್ಯಮಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ಯೋಜನೆ ಇಲ್ಲವೆಂದು ಪ್ರಸಾರವಾಗುತ್ತಿದೆ. ಈ ಬಗ್ಗೆ ನಾನು ಅಧಿಕಾರಗಳಲ್ಲಿ ವಿಚಾರಿಸಿದ್ದಾಗ, 'ಹಣಕಾಸಿನ ಮಂಜೂರಾತಿ ಆಗಿಲ್ಲ' ಎನ್ನುವ ಮಾತನ್ನು ಹೇಳಿದ್ದರು. ದಯಮಾಡಿ ಉಚಿತ ಬಸ್‌ಪಾಸ್‌ಗೆ ಹಣಕಾಸಿನ ಮಂಜೂರಾತಿಯನ್ನು ಕೊಟ್ಟು ವಿದ್ಯಾರ್ಥಿಗಳ ಸಹಾಯಕ್ಕೆ ಸರ್ಕಾರ ಬರಬೇಕೆಂದು ಕೇಳಿಕೊಳ್ಳುತ್ತಾ, ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರ ರಾಯಚೂರಿನಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವ ಬಗ್ಗೆ ಘೋಷಣೆ ಮಾಡಿ 50 ಕೋಟಿ ರೂಪಾಯಿಗಳ ಅನುದಾನವನ್ನು ಸಹ ಮೀಸಲಿಟ್ಟಿತ್ತು. ಇದನ್ನು ಈ ಆಯವ್ಯಯದಲ್ಲಿ ತೆಗೆದುಕೊಳ್ಳಬೇಕೆನ್ನುವುದು ನನ್ನ ಒತ್ತಾಯವಾಗಿದೆ. ರಾಯಚೂರು ಮತ್ತು ಕೊಪ್ಪಳ ವೈದ್ಯಕೀಯ ಕಾಲೇಜುಗಳಲ್ಲಿ ಮೂಲಸೌಲಭ್ಯಗಳ ಸೃಷ್ಟಿಯಾಗಿದ್ದರೂ ಸಹ ಸಾಕಷ್ಟು ಜನ ಸಿಬ್ಬಂದಿಗಳ ಕೊರತೆ ಇದೆ. ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರುವುದೇನೆಂದರೆ, ದೇವದುರ್ಗ ತಾಲ್ಲೂಕಿನಲ್ಲಿ ಸುಮಾರು 133 ಕೋಟಿ ರೂಪಾಯಿಗಳ ಕೆಲಸವನ್ನು ಎಂ.ಡಿ.ಆರ್ ವತಿಯಿಂದ ಡಿ.ಆರ್.ಎನ್. ಕಂಪನಿ ಮಾಡುತ್ತಿತ್ತು. ಕಳೆದ ಮೂರು ವರ್ಷಗಳಿಂದ ಈ ಕೆಲಸ ಸ್ಥಗಿತಗೊಂಡಿದೆ. ಲೋಕೋಪಯೋಗಿ ಇಲಾಖೆಯ ಅಪೆಂಡಿಕ್ಸ್–ಸಿ ನಲ್ಲಿ ಹಣವನ್ನು ಒದಗಿಸದೇ ಇದ್ದ ಕಾರಣ ಅವರು ಕಾಮಗಾರಿಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಧಕ್ಕೆ ಬಿಟ್ಟು ಹೋಗಿದ್ದಾರೆ. ಇದು ತಾಲ್ಲೂಕಿನಲ್ಲಿ ಅತ್ಯಂತ ಮುಖ್ಯವಾಗಿರುವ ರಸ್ತೆಯಾಗಿದೆ. ಅತೀ ಶೀಘ್ರವೇ ಇದನ್ನು ಪೂರ್ಣಗೊಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ರಾಯಕೀಯ ಗೊಂದಲಗಳು ಮತ್ತು ಒತ್ತಡಗಳ ಮಧ್ಯೆ ಅತ್ಯಂತ ಉತ್ತಮವಾಗಿರುವ ಜನಪರವಾಗಿರುವ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಮಂಡನೆ ಮಾಡಿದ್ದಾರೆ. ನನ್ನ ಅಭಿಪ್ರಾಯದ ಪ್ರಕಾರ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮತ್ತು ಮಾನ್ಯ ಹೆಚ್.ಡಿ.ರೇವಣ್ಣನವರು ರಾಮಲಕ್ಷ್ಮಣರ ರೀತಿಯಲ್ಲಿ ಅತ್ಯಂತ ಸಮರ್ಥವಾಗಿ ಉತ್ತರಗಳನ್ನು ನೀಡುತ್ತಿದ್ದಾರೆ, ಅದಕ್ಕಾಗಿ ಅವರುಗಳನ್ನು ಅಭಿನಂದಿಸುತ್ತಿದ್ದೇನೆ.

**ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನಾವುಗಳು ಮಾನ್ಯ ಉಗ್ರಪ್ಪನವರ ಜೊತೆಗೆ ಇದ್ದವರು, ಅವರು ಏನು ಹೇಳಿಕೊಡುತ್ತಾರೆ ನಾವು ಅದನ್ನೇ ಹೇಳುತ್ತೇವೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ರೇವಣ್ಣನವರು ಸುಮಾರು 40 ವರ್ಷಗಳಿಂದ ಸ್ನೇಹಿತರಾಗಿದ್ದೇವೆ.

ಮಾನ್ಯ ದೇವರಾಜ್ ಅರಸುರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ಕನಿಷ್ಠ 70 ದಿನಗಳ ಕಾಲ ಗರಿಷ್ಠ 103 ದಿನಗಳ ಕಾಲ ಸದನವನ್ನು ನಡೆಸಿದ್ದಾರೆ. 2005ರಲ್ಲಿ ಈ ಸದನದಲ್ಲಿ ಒಂದು ಕಾಯಿದೆಯನ್ನು ತಂದಿದ್ದೆವು, 2006ನೇ ಇಸವಿಯಲ್ಲಿ ಅದನ್ನು ಜಾರಿಗೊಳಿಸಲಾಗಿತ್ತು. ಜನವರಿ ತಿಂಗಳಿನಲ್ಲಿ 15 ದಿನಗಳ ಕಾಲ, ಮಾರ್ಚ್ ತಿಂಗಳಿನಲ್ಲಿ 20 ದಿನಗಳ ಕಾಲ, ಜುಲೈ ತಿಂಗಳಿನಲ್ಲಿ 15 ದಿನಗಳ ಕಾಲ  ಮತ್ತು ನವೆಂಬರ್ ತಿಂಗಳಿನಲ್ಲಿ 15 ದಿನಗಳ ಕಾಲ ಹೀಗೆ ಕನಿಷ್ಠ 60 ದಿನಗಳ ಕಾಲ ಅಧಿವೇಶನವನ್ನು ನಡೆಸಬೇಕೆಂದು ನಾವೇ ಕಾನೂನು ಮಾಡಿದ್ದೇವೆ. ಹೆಚ್ಚು ಶಾಸಕರನ್ನು ಮತ್ತು ಸಂಸದರನ್ನು ಕೊಟ್ಟಿರುವ ಕುಟುಂಬವೆಂದರೆ, ಮಾನ್ಯ ಹೆಚ್.ಡಿ.ದೇವೇಗೌಡರ ಕುಟುಂಬ. ಆದ್ದರಿಂದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಕಾಲದಲ್ಲಿ ಈ ಸದನ ಕನಿಷ್ಠ 60 ದಿನಗಳ ಕಾಲ ನಡೆಯುವಂತೆ ಈ ಸರ್ಕಾರ ಕ್ರಮ ಜರುಗಿಸಬೇಕೆಂದು ಒತ್ತಾಯಿಸುತ್ತಿದ್ದೇನೆ. ಈ ಸದನಕ್ಕೂ ಸಹ ಗೌರವ ಘನತೆ ಮತ್ತು ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಅವರು ಮುಂದಾಗಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಆಯವ್ಯಯ ಪುಸ್ತಕದ ಕಂಡಿಕೆ 91ರಲ್ಲಿ ಮಹಿಳಾ ಮತ್ತು ಮಕ್ಕಳಿಗೆ ಕೆಲವು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ ಆಯವ್ಯಯದಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದರು. ಈ ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡಾ 50ರಷ್ಟು ಮಹಿಳೆಯರಿದ್ದಾರೆ. 0–18 ವಯೋಮಾನದಲ್ಲಿರುವವರು ಸುಮಾರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಕಡಾ 38ರಷ್ಟು ಇದ್ದಾರೆ. ನಾನು ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ ನಿಯಂತ್ರಿಸುವ ಮತ್ತು ವರದಿಯನ್ನು ನೀಡುವ ತಜ್ಞರ ಸಮಿತಿಯ ಅಧ್ಯಕ್ಷನಾಗಿ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಮಾಡಿ ಸುಮಾರು 6 ಸಾವಿರ ಪುಟಗಳ 11 ಸಂಪುಟಗಳ ವರದಿಯನ್ನು ದಿನಾಂಕಃ 23.03.2018ರಲ್ಲಿ ನೀಡಿದ್ದೇನೆ. ಎಲ್ಲರೂ ಅದನ್ನು ಸ್ವಾಗತಿಸಿದ್ದಾರೆ. ಮಹಿಳೆಯವರು ಮತ್ತು ಮಕ್ಕಳ ಮೇಲೆ ದೌರ್ಜನ್ಯ ಮತ್ತು ಶೋಷಣೆ ನಡೆಯುತ್ತಿರುವ ಸಂದರ್ಭದಲ್ಲಿ ಅವರಿಗೆ ರಕ್ಷಣೆ ಒದಗಿಸುವ, ನ್ಯಾಯ ಮತ್ತು ಪರಿಹಾರವನ್ನು ನೀಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಕಳೆದ ಕೆಲವು ವರ್ಷಗಳಿಂದ ಸಾವಿರಾರು ಜನ ಮಹಿಳೆಯರು ಅತ್ಯಾಚಾರಕ್ಕೆ ಮತ್ತು ದೌರ್ಜನ್ಯಕ್ಕೆ ಒಳಗಾಗಿ, ಪರಿಹಾರ ದೊರಕದೇ ಇರುವಂತಹ ಪರಿಸ್ಥಿತಿ ಇದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಗಮನಹರಿಸಿ ಹೆಚ್ಚಿನ ಅನುದಾನವನ್ನು ನೀಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಸಂಪನ್ಮೂಲಗಳ ಕ್ರೋಢೀಕರಣದ ಬಗ್ಗೆ ಹೇಳಬೇಕಾದರೆ, ಕಳೆದ ಅಧಿವೇಶನದಲ್ಲಿ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದಂತೆ ಕೇಬಲ್ ಆಪರೇಟರ್‌ಗಳಿಂದ ಕನಿಷ್ಠ 5 ಸಾವಿರ ಕೋಟಿ ಅಧಿಕ ಆದಾಯವನ್ನು ಪಡೆದುಕೊಳ್ಳುವ ಬಗ್ಗೆ ಬಹಳ ವಿಸ್ತಾರವಾಗಿ ಹೇಳಿದ್ದೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಬಹುಶಃ ಈ ರೀತಿ ಪರ್ಯಾಯ ಆದಾಯವನ್ನು ಪಡೆದುಕೊಳ್ಳುವ ಮಾರ್ಗಕ್ಕೆ ಸರ್ಕಾರ ಮುಂದಾಗಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಾನು, ಬಿ.ಡಿ.ಎ. ಆಯುಕ್ತರು ಮತ್ತು ಆಗಿನ ಕಾನೂನು ಇಲಾಖೆಯ ಕಾರ್ಯದರ್ಶಿಗಳು ಸೇರಿ ಬಿ.ಡಿ.ಎ. ಆಕ್ಟ್‌ನ ಸೆಕ್ಷನ್ 38ಕ್ಕೆ ತಿದ್ದುಪಡಿ ಬಿಲ್‌ನ ಕರಡು ಪ್ರತಿಯನ್ನು ತಯಾರು ಮಾಡಿಕೊಟ್ಟಿದ್ದೆವು. ಸರ್ಕಾರ ಅದನ್ನು ಸ್ವೀಕರಿಸಿತ್ತು. ಈಗ ಅದು ಕ್ಯಾಬಿನೆಟ್ ಸಬ್ ಕಮಿಟಿಗೆ ರೆಫರ್ ಆಗಿದೆ. ಬಿ.ಡಿ.ಎ. ಆಕ್ಟ್‌ನ ಸೆಕ್ಷನ್ 38ರಡಿಯಲ್ಲಿ ಬೆಂಗಳೂರಿನಲ್ಲಿ ಸುಮಾರು ಐದು ಸಾವಿರ ಎಕರೆಗಳು ಅಂದರೆ, ಒಂದು ಲಕ್ಷ ಬಿ.ಡಿ.ಎ. ಸೈಟ್‌ಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ, ಅದಕ್ಕೆ ಪರಿಹಾರವನ್ನು ನೀಡಿದ್ದಾರೆ ಸೆಕ್ಷನ್ 16ರಡಿಯಲ್ಲಿ ಸ್ವಾಧೀನಕ್ಕೆ ಪಡೆದುಕೊಳ್ಳಲಾಗಿದೆ ಆದರೆ, ಅನಧಿಕೃತವಾಗಿ ವಾಸವಿರುವವರನ್ನು ಸಕ್ರಮಗೊಳಿಸಿದರೆ 25 ಸಾವಿರ ಕೋಟಿ ರೂಪಾಯಿಗಳಷ್ಟು ಅಧಿಕ ಆದಾಯ ಸರ್ಕಾರಕ್ಕೆ ಬರುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(307) 12.7.2018 9.00 ಪಿಕೆ:ವಿಕೆ

ಶ್ರೀ ವಿ.ಎಸ್.ಉಗ್ರಪ್ಪ(ಮುಂದುವರೆದಿದೆ)

ಮಾನ್ಯ ಸಭಾಪತಿಯವರೇ, ಡಾ:ರಾಜಕುಮಾರ್ ಅವರ ಸಮಾದಿಯ ಎದುರಿಗೆ ಇರುವ 167 ಎಕರೆಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ, ಅದಕ್ಕೆ ಪರಿಹಾರ ಕೂಡ ಕೊಟ್ಟಿದ್ದಾರೆ. ಆದರೆ ಬಿಡಿಎನವರು ಅಲ್ಲಿ ಯಾವುದೇ ಅಲಾಟ್‌ಮೆಂಟ್ ಪ್ರಕ್ರಿಯೆ ನಡೆಸಿಲ್ಲ. ಯಾರು ಅಲ್ಲಿ ವಾಸ ಮಾಡುತ್ತಿದ್ದಾರೋ ಅವರಿಗೆ ಟೈಟಲ್ ಇಲ್ಲ, ಹಾಗಾಗಿ ಬಿಡಿಎ ಅವರಿಗೆ ಅದರಿಂದ ಆದಾಯ ಇಲ್ಲ. ಈ ರೀತಿ ಪರಿಸ್ಥಿತಿ ಅನೇಕ ಬಡಾವಣೆಗಳಲ್ಲಿ ಇದೆ. ಇದರ ಬಗ್ಗೆ ಸರ್ಕಾರ ಗಮನಹರಿಸಿದರೆ ಕನಿಷ್ಠ 25,000 ಕೋಟಿ ರೂಪಾಯಿಗಳ ಹೆಚ್ಚುವರಿ ಆದಾಯ ಸಿಗುವ ಸಾಧ್ಯತೆ ಇದೆ ಎಂದು ನಾನು ಭಾವಿಸುತ್ತೇನೆ. ಈ ಹಣದಿಂದ, ಜನಪರವಾಗಿರುವ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಸಾಧ್ಯತೆ ಇದೆ.

ಮಾನ್ಯ ಸಭಾಪತಿಯವರೇ, ಇಸ್ರೇಲ್ ಮಾದರಿ ಕೃಷಿಯ ಬಗ್ಗೆ ಪ್ರಸ್ತಾಪವಾಗುತ್ತಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನಮ್ಮ ರಾಜ್ಯದಲ್ಲಿ 4000 ಟಿಎಂಸಿ ನೀರು ಲಭ್ಯವಿದೆ. 70 ವರ್ಷಗಳಲ್ಲಿ ಕೇವಲ ನಾವು 2000 ಟಿಎಂಸಿ ನೀರನ್ನಷ್ಟೇ ಬಳಕೆ ಮಾಡಿಕೊಂಡಿದ್ದೇವೆ. ಈ 2000 ಟಿಎಂಸಿ ನೀರನ್ನು ಬಳಕೆ ಮಾಡುವ ಸಂಬಂಧ ಸರ್ಕಾರ ಯುದ್ಧೋಪಾದಿಯಲ್ಲಿ ಗಮನಿಸಬೇಕು ಎಂದು ಹೇಳಬಯಸುತ್ತೇನೆ.

**ಶ್ರೀ ಅ. ದೇವೇಗೌಡ (ಪದವೀಧರ ಕ್ಷೇತ್ರ) :-** ಮಾನ್ಯ ಸಭಾಪತಿಯವರೇ, ಕಿದ್ವಾಯಿ ಆಸ್ಪತ್ರೆಯಲ್ಲಿ ಮೊದಲ ಹಂತವಾಗಿ Bone Marrow Transplantation ಚಿಕಿತ್ಸೆಗೆಂದು ಪ್ರತ್ಯೇಕ ಘಟಕ ಸ್ಥಾಪಿಸಲು ರೂ.12 ಕೋಟಿ ಅನುದಾನ ನೀಡಿರುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ರಾಮನಗರದಲ್ಲಿನ ನನ್ನ ಸ್ನೇಹಿತರ ಮಗಳ ಚಿಕಿತ್ಸೆಗೋಸ್ಕರ ಮನೆ-ಮಠ, ಆಸ್ತಿ ಎಲ್ಲಾ ಮಾರಾಟ ಮಾಡಿ, ಬಂದ ರೂ. 60 ಲಕ್ಷ ಖರ್ಚು ಮಾಡಿ ಖಾಸಗಿ ಆಸ್ಪತ್ರೆಯಲ್ಲಿ ಸೇರಿಸಿಯೂ ಆಕೆ ಉಳಿಯಲಿಲ್ಲ. ಪ್ರತ್ಯೇಕ ಘಟಕವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಆದಷ್ಟು ಬೇಗ ಪ್ರಕ್ರಿಯೆಗಳನ್ನು ನಡೆಸುವ ಸಂಬಂಧ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರ ಸಂಬಳದ ನಡುವೆ ಶೇಕಡ 50 ರಷ್ಟು ಅಂತರ ಇದೆ. ಇದರಿಂದ ಭ್ರಷ್ಟಾಚಾರ ಜಾಸ್ತಿಯಾಗುತ್ತಿದೆ. ಆದ್ದರಿಂದ ದಯವಿಟ್ಟು 7ನೇ ವೇತನ ಆಯೋಗವನ್ನು ಜಾರಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮಾಗಡಿ ತಾಲ್ಲೂಕಿನಲ್ಲಿ ನಾಡಪ್ರಭು ಕೆಂಪೇಗೌಡರ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕು. ಬ್ರಾಹ್ಮಣ ಸಮುದಾಯದಲ್ಲಿ ಆರ್ಥಿಕವಾಗಿ ಹಿಂದುಳಿದವರ ಸಹಾಯ ಮಾಡುವುದಕ್ಕೆ ಮಂಡಳಿಯನ್ನು ಸ್ಥಾಪಿಸಿದ್ದೀರಿ, ಅದಕ್ಕೆ ನನ್ನ ಅಭಿನಂದನೆಗಳು. ಅದೇರೀತಿ, ವೀರಶೈವ-ಲಿಂಗಾಯತ ಸಮುದಾಯದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೋಸ್ಕರ ಜಗಜ್ಯೋತಿ ಬಸವಣ್ಣನವರ ಹೆಸರಿನಲ್ಲಿ ಒಂದು ಅಭಿವೃದ್ಧಿ ಮಂಡಳಿಯನ್ನು ತೆರೆಯಬೇಕು. ಒಕ್ಕಲಿಗ ಸಮುದಾಯದಲ್ಲೂ ಆರ್ಥಿಕವಾಗಿ ಹಿಂದುಳಿದಿರುವ ಜನ ಸಾಕಷ್ಟು ಜನರಿದ್ದಾರೆ. ಇವರಿಗೋಸ್ಕರ ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಅಭಿವೃದ್ಧಿ ಮಂಡಳಿಯನ್ನು ತೆರೆದರೆ ನಮ್ಮ ಸಮುದಾಯ ಮಾನ್ಯ ಮುಖ್ಯಮಂತ್ರಿಯವರನ್ನು ಸ್ಮರಿಸುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎನ್. ರವಿಕುಮಾರ್ :- (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇವಲ 4 ಅಂಶಗಳನ್ನು ಮಾತ್ರ ಪ್ರಸ್ತಾಪಿಸಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಮೆಡಿಕಲ್ ವಿದ್ಯಾರ್ಥಿಗಳ Fees ರೂ.16,700 ಯಿಂದ ರೂ. 50000ಕ್ಕೆ ಹೆಚ್ಚು ಮಾಡಿದ್ದಾರೆ. ಅಂದರೆ ಮೊತ್ತವನ್ನು ಮೂರುಪಟ್ಟು ಜಾಸ್ತಿ ಮಾಡಿದ್ದಾರೆ. ದಯವಿಟ್ಟು ಇದರ ಬಗ್ಗೆ ಗಮನಿಸಬೇಕು.

ಸರ್ಕಾರಿ ಹಾಸ್ಟೆಲ್‌ಗಳು ಎಂದರೆ, ಭೂಲೋಕದ ನರಕಗಳು ಎಂದು ಹೇಳಬೇಕಾಗುತ್ತದೆ. ಈ ಹಾಸ್ಟೆಲ್‌ಗಳನ್ನು ಸುಧಾರಣೆ ಮಾಡುವ ನಿಟ್ಟಿನಲ್ಲಿ ಗಮನ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅದೇರೀತಿ, ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ 5814 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುಂಬಬೇಕು.

ಬಜೆಟ್‌ನಲ್ಲಿ 9 ಜಿಲ್ಲೆಗಳಿಗೆ Nill Budget ಕೊಟ್ಟಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅವು ಯಾವ ಜಿಲ್ಲೆಗಳೆಂದು ಹೆಸರಿಸಬಯಸುತ್ತೇನೆ. ಯಾದಗಿರಿ, ರಾಯಚೂರು, ದಾವಣಗೆರೆ, ಬಾಗಲಕೋಟೆ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು . . .

**ಸಭಾಪತಿಯವರು:-** ಬೇಗ ನಿಮ್ಮ ಮಾತುಗಳನ್ನು ಮುಗಿಸಿ.

(ಗೊಂದಲ)

(ಈ ಹಂತದಲ್ಲಿ ಅನೇಕ ಜನ ಸದಸ್ಯರು ಎದ್ದು ನಿಂತು, ಮಾನ್ಯ ಎನ್.ರವಿಕುಮಾರ್‌ರವರು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ ಎಂದು ಹೇಳತೊಡಗಿದರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶಿತರು) :–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮೊದಲು ಜಂಟಿ ಶಾಸನ ಸಭೆಯನ್ನು ಕರೆಯಬೇಕು. ಏಕೆಂದರೆ, ಆಡಳಿತ ಪಕ್ಷದವರೇ ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ವಿರೋಧ ಪಕ್ಷದ ಸದಸ್ಯರು ಕಡಿಮೆ ಜನ ಇರುವುದರಿಂದ ಅವರಿಗೆ ಮಾತನಾಡುವುದಕ್ಕೆ ಅವಕಾಶ ಸಿಗುತ್ತಿಲ್ಲ. ಆಡಳಿತ ಪಕ್ಷದ ಸದಸ್ಯರು ಸರ್ಕಾರದೊಡನೆ ನೇರವಾಗಿ ಮಾತನಾಡಬಹುದು.

ಮಾನ್ಯ ಮುಖ್ಯಮಂತ್ರಿಯವರೂ ಕೂಡ ಚಲನಚಿತ್ರ ರಂಗದ ಒಂದು ಭಾಗದಿಂದಲೇ ಬಂದವರಾಗಿದ್ದಾರೆ. ಸುಮಾರು 30 ವರ್ಷಗಳಿಂದ ಬಜೆಟ್‌ಗಳಲ್ಲಿ Film City ನಿರ್ಮಾಣ ಮಾಡುವುದರ ಪ್ರಸ್ತಾಪವನ್ನು ನೋಡುತ್ತಲೇ ಇದ್ದಾರೆ. ಆ ಕನಸನ್ನು ದಯವಿಟ್ಟು ನನಸು ಮಾಡಿ. ಚಲನಚಿತ್ರ ವಿಶ್ವವಿದ್ಯಾಲಯ ಸ್ಥಾಪನೆ ಮಾಡತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಅದು ಸ್ವಾಗತಾರ್ಹ. ಚಲನ ಚಿತ್ರರಂಗದಲ್ಲಿ ತೊಡಗಿಸಿಕೊಂಡಿರುವ, ಕಲಾವಿದರು, ತಂತ್ರಜ್ಞಾರು, ನಿರ್ಮಾಪಕರು, ಲೈಟ್‌ಮೆನ್‌ಗಳಾಗಿರಬಹುದು ಇವರಿಗೆ Film Academy ಮೂಲಕ ಮಾಸಾಶನ ಕೊಡುವುದರ ಬಗ್ಗೆ ಯೋಚನೆ ಮಾಡಬೇಕು. ತಾವೇ ಚಲನಚಿತ್ರ ರಂಗಕ್ಕೆ ಸಂಬಂಧಪಟ್ಟಿರುವುದರಿಂದ ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಅಧಿಕಾರಿಗಳ ಸಹಾಯ ಬೇಕಾಗಿಲ್ಲ; ತಾವೇ ಈಗ ದಯವಿಟ್ಟು ಉತ್ತರ ಕೊಡಬಹುದು. ದಯವಿಟ್ಟು ಉತ್ತರ ಕೊಡಬೇಕು.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮಂಡಿಸಿರುವ ಬಜೆಟನ್ನು ನಾನು ಸ್ವಾಗತ ಮಾಡುತ್ತೇನೆ. ಈಗಿರುವ ಬೆಂಗಳೂರು ವಿಶ್ವವಿದ್ಯಾಲಯವನ್ನು Bangalore South University, Bangalore North University and Bangalore Central University ಎಂದು 3 ಭಾಗಗಳಾಗಿ ಮಾಡಿದ್ದಾರೆ. Bangalore North University ಯನ್ನು ಕೋಲಾರದಲ್ಲಿ ಮಾಡಿ 2 ವರ್ಷಗಳಾಗಿವೆ. ಅದಕ್ಕೆ ಅನುದಾನ ಕೊಟ್ಟಿಲ್ಲ, ಕಟ್ಟಡವನ್ನು ಕಟ್ಟಿಲ್ಲ. ಈ ನಿಟ್ಟಿನಲ್ಲಿ ಏನೂ ಅಭಿವೃದ್ಧಿ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಅನುದಾನ ಕೊಟ್ಟು ವಿಶ್ವವಿದ್ಯಾಲಯ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶೂನ್ಯವೇಳೆಯಲ್ಲಿ, ಕೋಲಾರ ಜಿಲ್ಲೆಯಲ್ಲಿ 4.26 ಲಕ್ಷ ಮೆಟ್ರಿಕ್ ಟನ್ ಮಾವನ್ನು ಬೆಳೆದಿದ್ದು, ಅದಕ್ಕೆ ಸೂಕ್ತ ಬೆಲೆ ಸಿಗದೇ ರಸ್ತೆಗೆ ಚೆಲ್ಲುವಂಥದ್ದನ್ನು ಮಾಡುತ್ತಿರುವ ಬಗ್ಗೆ ಪ್ರಸ್ತಾಪ ಮಾಡಿದ್ದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ 2.50 ರೂಪಾಯಿಗಳ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ್ದಾರೆ. ಈ ಮೊತ್ತ ಸಾಕಾಗುವುದಿಲ್ಲ; ಕನಿಷ್ಠ 10 ರೂಪಾಯಿ ಬೆಂಬಲ ಬೆಲೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು) :-** ಮಾನ್ಯ ಸಭಾಪತಿಯವರೇ, ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಹೆಚ್ಚುವರಿ ರೂ.250 ಕೋಟಿ ಅನುದಾನ ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ಕ್ರೈಸ್ತ ಅಭಿವೃದ್ಧಿ ಪರಿಷತ್ತು ಎಂದಿದೆ. ಕಳೆದ ಬಾರಿ ಇದಕ್ಕೆ ರೂ.200 ಕೋಟಿಗಳನ್ನು ಕೊಟ್ಟಿದ್ದಾರೆ. ಈ ಪರಿಷತ್ತನ್ನು ನಿಗಮವನ್ನಾಗಿ ಮಾಡಬೇಕೆನ್ನುವುದು ನಮ್ಮ ಮತ್ತು ಜೆಡಿ(ಎಸ್) ಚುನಾವಣಾ ಪ್ರಣಾಳಿಕೆಯಲ್ಲಿ ಇದೆ. Common Minimum Programme ನಲ್ಲೂ ಇದನ್ನು ಹಾಕಿಕೊಂಡಿದ್ದೇವೆ. ಕ್ರೈಸ್ತ ಅಭಿವೃದ್ಧಿ ಪರಿಷತ್ತನ್ನು ನಿಗಮವೆಂದು ಘೋಷಣೆ ಮಾಡಿದರೆ ನಮ್ಮ ಸಮುದಾಯಕ್ಕೆ, ನಮ್ಮದೇ ಆದ ಕಾರ್ಯಕ್ರಮಗಳನ್ನು ರೂಪಿಸಬಹುದು. ನಿಗಮ ಮಾಡುವುದರಿಂದ ಸರ್ಕಾರದಿಂದ ಬರುವ ಅನುದಾನ ನೇರವಾಗಿ ನಮ್ಮ ಸಮುದಾಯದವರಿಗೆ ತಲುಪಲು ಸಹಾಯವಾಗುತ್ತದೆ. ಕ್ರೈಸ್ತ ಅಭಿವೃದ್ಧಿ ಪರಿಷತ್ತನ್ನು ನಿಗಮವನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಕಡೆ ಏನು ಕಂಬಳ ಕ್ರೀಡೆ ನಡೆಯುತ್ತದೆಯೋ ಅದಕ್ಕೆ ಹಿಂದಿನ ಸರ್ಕಾರಗಳು ಹಣ ಕೊಡುತ್ತಿದ್ದವು. ಈ ಸರ್ಕಾರ ಕಂಬಳಕ್ಕೆ ಕನಿಷ್ಠ 5 ಕೋಟಿ ರೂಪಾಯಿಗಳನ್ನು ಮೀಸಲಿಡಬೇಕೆಂದು ಕೋರುತ್ತೇನೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶಿತರು) :-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಮನವಿ ಇದೆ. ಈಗಾಗಲೇ ಮೈಸೂರಿನಲ್ಲಿ Film City ಮಾಡುವುದಕ್ಕೆ 150 ಎಕರೆ allot ಆಗಿ tender process Tourism Department ನಲ್ಲಿ ಬಾಕಿ ಇದೆ. ಈ ಜಾಗ ಮಾಜಿ ಮುಖ್ಯಮಂತ್ರಿಗಳ ಕ್ಷೇತ್ರವಾದ ವರುಣಾದಲ್ಲಿ ಇದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ನಾವು National Scout Jamboree ಎಂದು ಮಾಡಿದ್ದೆವು. ಆದರೆ ಈಗ ಮತ್ತೆ ರಾಮನಗರದಲ್ಲಿ Film City ಮಾಡುವುದರಿಂದ ಒಂದು ರೀತಿ conflict ಆಗುವುದಿಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

(ಮುಂದು . . .)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(308) 12-07-2018 9.10 ಡಿಎಸ್:ವಿಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಬಹುತೇಕ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಸಹ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನನಗೆ ಇನ್ನೂ ಒಂದೆರಡು ಗಮನ ಸೆಳೆಯುವ ಸೂಚನೆಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಈ ಸದನವನ್ನು ನಾಳೆಗೆ ಮುಂದೂಡಬಹುದೆನ್ನುವ ಸುದ್ದಿ ನನಗೆ ಬಂದಿತ್ತು. ಇನ್ನೂ ನಮ್ಮ ಪಕ್ಷದಲ್ಲಿ 8 ಜನ ಸದಸ್ಯರು ಮಾತನಾಡುವವರಿದ್ದರು. ಹಾಗಾಗಿ ಈ ಸದನ ನಾಳೆಗೆ ಮುಂದುವರೆಯಬಹುದೆಂದು ನಾವು ತಿಳಿದುಕೊಂಡಿದ್ದೇವೆ. ಈ ಗ್ರಹಣ, ರಾಹುಕಾಲ ಇದನ್ನೆಲ್ಲ ನೋಡಬೇಕಾಗಿರುವುದರಿಂದ ಈ ಸರ್ಕಾರಕ್ಕೂ ಸಹ ಸದನ ಮುಂದುವರೆಸಲು ಕೆಲವೊಂದು ಸಮಸ್ಯೆಗಳಿರುತ್ತವೆ. ಯಾವುದೇ ಸರ್ಕಾರ ಆಗಲೀ ಅದು ತಾಯಿ ಹೃದಯವನ್ನು ಹೊಂದಿರಬೇಕೆನ್ನುವುದು ನನ್ನ ನಂಬಿಕೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಆತ್ಮಸಾಕ್ಷಿಯಾಗಿ ಕರ್ನಾಟಕ ರಾಜ್ಯದಲ್ಲಿ ಬಜೆಟ್ ಮಂಡಿಸಿದ ಮೇಲೆ ರಾಜ್ಯದ ಯಾವ್ಯಾವ ಭಾಗಗಳಿಂದ ಏನೇನು ಪ್ರತಿಕ್ರಿಯೆಗಳು ಬಂದಿವೆ ಎನ್ನುವುದನ್ನು ಗಮನಿಸಬೇಕು. ಇದನ್ನು ಮುಖ್ಯಮಂತ್ರಿಯಾಗಿ ಇಡೀ ಕರ್ನಾಟಕಕ್ಕೆ ಸರ್ವ ವ್ಯಾಪಿ, ಸರ್ವ ಸ್ಪರ್ಷಿಯಾದಂತಹ ಬಜೆಟ್ ಅನ್ನು ಕೊಟ್ಟಿದ್ದೇನೆ ಎಂದು ಅವರಿಗೆ ಅನಿಸಿದರೆ ನನ್ನ ಆಕ್ಷೇಪಣೆ ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯದಲ್ಲಿ ತಾಯಿಯ ಸ್ಥಾನದಲ್ಲಿದ್ದಾರೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಯಾವ ಜಿಲ್ಲೆಗೆ ಹೇಗೆ ಕರಾರುವಾಕ್ಕಾಗಿ ಅವಶ್ಯಕತೆಗನುಗುಣವಾಗಿ ಅನುದಾನಗಳನ್ನು ನೀಡಬೇಕಾಗಿತ್ತು ಅದನ್ನು ಮಾಡಿಲ್ಲವೆಂದು ರಾಜ್ಯವ್ಯಾಪಿ ಜನರು ಹೇಳುತ್ತಿದ್ದಾರೆ. ಜನರ ಆಶೋತ್ತರಗಳನ್ನು ಅವರ ಪ್ರತಿಭಟನೆ, ಅವರ ನೋವನ್ನು ರಾಜಕೀಯರಹಿತವಾದ ಜನರ ನಿರ್ಧಾರಗಳನ್ನು, ಅನೇಕ ಸಂದರ್ಭಗಳಲ್ಲಿ ನಿಮ್ಮ ಜೊತೆ ಜನರು ಹೇಳಿಕೊಳ್ಳಲಾಗದ ಆತಂಕಗಳನ್ನು ವಿರೋಧ ಪಕ್ಷ ಹೇಳಿದಾಗ ಸಹ ತಾವು ಮಾಡಿರುವುದು ಸರಿಯಿದೆ, ಎನ್ನುವಂತಹ ಮಾತುಗಳನ್ನು ಹೇಳಿದಾಗ ಎಲ್ಲರಿಗೂ ಸಮಾನತೆಯಲ್ಲಿ ಅನುದಾನ ನೀಡಲಾಗಿದೆ, ಎನ್ನುವ ಸಮಾಧಾನ ಸರ್ಕಾರಕ್ಕಿದ್ದರೆ, ಪುನಃ ನಾವು ಸರ್ಕಾರವನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಇಂತಹ ತಪ್ಪುಗಳು, ಅಸಮತೋಲನ ವಾಗಿವೆ. ಇನ್ನಾದರೂ ಸರ್ಕಾರ ಘೋಷಣೆಗಳನ್ನು ಮಾಡುವಾಗ ಸಮಾನತೆಯ ಅವಕಾಶಗಳನ್ನು ಕೊಡಬೇಕು, ಎನ್ನುವಂತಹ ಆಗ್ರಹವನ್ನು ನಾನು ಮಾಡುತ್ತೇನೆ.

2018ರ ಫೆಬ್ರವರಿ ತಿಂಗಳಿನಲ್ಲಿ ಮಾನ್ಯ ಸಿದ್ದರಾಮಯ್ಯನವರು 2,09,181 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡಿಸಿದ್ದರು. ಈಗ 2018ರಲ್ಲಿ ಈಗಿನ ಮುಖ್ಯಮಂತ್ರಿಗಳು 2,18,488 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡಿಸಿದ್ದಾರೆ. ಇದರಲ್ಲಿ 9,307 ಕೋಟಿ ರೂಪಾಯಿಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯತ್ಯಾಸವಿದೆ. ಈ ಸಾಲ ವಗೈರೆಗಳನ್ನು ತಾವು ಗಮನಿಸಿರಬಹುದು. ಹಿಂದಿನ ಆಯವ್ಯಯದಲ್ಲಿ 2,86,790 ಕೋಟಿ ರೂಪಾಯಿಗಳ ಸಾಲವಿತ್ತು. ಈ ಆಯವ್ಯಯದಲ್ಲಿ 2,92,220 ಕೋಟಿ ರೂಪಾಯಿಗಳ ಸಾಲ ಏರಿಕೆಯಾಗಿದೆ. ಸಾಲ ಹೆಚ್ಚು ಮಾಡುವುದು ಹೇಗೆನ್ನುವ ವ್ಯವಸ್ಥೆಗಳನ್ನು ಸರ್ಕಾರ ತಿಳಿದುಕೊಂಡಿದೆ ಅದಕ್ಕೆ ಸರ್ಕಾರ ಸೂಕ್ತ ಉತ್ತರವನ್ನು ನೀಡುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. 2013-14ರಲ್ಲಿ ಬಿಜೆಪಿ ಸರ್ಕಾರ ವಿಸರ್ಜಿಸುವ ಸಮಯದಲ್ಲಿ 1,36,000 ಕೋಟಿ ರೂಪಾಯಿಗಳ ಸಾಲವಿತ್ತು. 2008 ರಿಂದ 2013ರವರೆಗೆ ಪತ್ರಿ ವರ್ಷ ಸಾಲ 12,000 ಕೋಟಿ ರೂಪಾಯಿಗಳಷ್ಟು ಹೆಚ್ಚಾಗುತ್ತಾ ಹೋಗಿದೆ. ಈಗಿನ ಆಯವ್ಯಯ ನೋಡಿದಾಗಿ 47,134 ಕೋಟಿ ರೂಪಾಯಿಗಳ ಹೆಚ್ಚುವರಿ ಸಾಲ ಮಾಡಿರುವುದು ಕಂಡು ಬರುತ್ತದೆ. ಮಾನ್ಯ ಸಿದ್ದರಾಮಯ್ಯನವರು ಮಂಡನೆ ಮಾಡಿದಂತಹ ಬಜೆಟ್‌ನಲ್ಲಿ 39,378 ಕೋಟಿ ರೂಪಾಯಿಗಳ ಸಾಲ ಇತ್ತು. ಒಂದೊಂದು ವರ್ಷಕ್ಕೆ ಸಾಲದ ಮಟ್ಟ ಈ ರೀತಿ ಏರಿಕೆ ಆದರೆ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಯಾವ ಮಟ್ಟಕ್ಕೆ ಹೋಗಬಹುದು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಇನ್ನು ಹಲವಾರು ವಿಚಾರದ ಬಗ್ಗೆ ಸರ್ಕಾರದಿಂದ ಉತ್ತರವನ್ನು ಪಡೆಯಬೇಕಾಗಿತ್ತು. ಸರ್ಕಾರ, ನಾನು ಈಗ ಮಂಡಿಸುತ್ತಿರುವ ಬಜೆಟ್ ಹಾಗೂ ಹಿಂದೆ ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ಒಂದೇ ಆಗಿರುತ್ತದೆ, ಅದರಲ್ಲಿ ಯಾವುದೇ ಗೊಂದಲಗಳಿಲ್ಲ, ಹಿಂದಿನದನ್ನೇ ಮುಂದುವರೆಸಬೇಕೆಂದು ಹೋಗುತ್ತೇವೆಂದು ಹೇಳಿದ ಹಿನ್ನೆಲೆಯಲ್ಲಿ ಅನೇಕ ವಿಚಾರಗಳನ್ನು ನಾವು ಪ್ರಸ್ತಾಪ ಮಾಡುತ್ತಿಲ್ಲ. ಆದರೆ ಕೌಶಲ್ಯಾಭಿವೃದ್ಧಿಯ ಬಗ್ಗೆ ಪುಟ ಸಂಖ್ಯೆ 26ರಲ್ಲಿ ದಿಶಾ ಯೋಜನೆಯಡಿಯಲ್ಲಿ 2018-19ನೇ ಸಾಲಿನಲ್ಲಿ 2 ಕೋಟಿ ರೂಪಾಯಿಗಳ ಅನುದಾನದಲ್ಲಿ 1 ಲಕ್ಷ ಜನರಿಗೆ ತರಬೇತಿಯನ್ನು ನೀಡಲಾಗುವುದು ಎಂದು ಹೇಳುತ್ತೀರಿ. ಈ ಹಣವನ್ನು 1 ಲಕ್ಷ ಜನರಿಗೆ ನೀಡಿದಲ್ಲಿ ಒಬ್ಬರಿಗೆ 300 ರೂಪಾಯಿಗಳು ಬರಬಹುದು. ಇದರಿಂದ ತರಬೇತಿ ನೀಡಲು ಸಾಧ್ಯವೇ ಎನ್ನುವುದನ್ನು ನೀವು ಗಮನಿಸಬೇಕು. ನಾನು ಸರ್ಕಾರಿ ಶಾಲೆಗಳ ಬಗ್ಗೆ ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ಈ ಬಜೆಟ್ ಮೂಲಕವೇ 28,847 ಶಾಲೆಗಳನ್ನು ವಿಲೀನಗೊಳಿಸುವ ಪರಿಸ್ಥಿತಿ ನಿರ್ಮಾಣ ಆದರೆ ಅಂತಹ ಪರಿಸ್ಥಿತಿಯನ್ನು ತಡೆಗಟ್ಟಿಕೊಳ್ಳುವುದಕ್ಕೆ ಏನಾದರೂ ಕ್ರಮಗಳನ್ನು ಯೋಜನೆ ಮಾಡಲಾಗಿದೆಯೇ? ಶೇಕಡ 50ಕ್ಕಿಂತಲೂ ಹೆಚ್ಚು ಶಾಲೆಗಳನ್ನು ಮುಚ್ಚಲಾಗುತ್ತಿದೆ. ಸರ್ಕಾರದ ಉದ್ದೇಶ ಒಳ್ಳೆಯದಿರಬಹುದು, ನಾನು ಇಲ್ಲ ಎಂದು ಹೇಳುವುದಿಲ್ಲ. ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಯೋಚನೆ ಇರಬಹುದು, ಹಿಂದಿನ ಸರ್ಕಾರ ಪಂಚಾಯಿತಿ ಶಾಲೆಗಳನ್ನು ಮಾದರಿ ಶಾಲೆಯನ್ನಾಗಿ ಮಾಡುತ್ತೇವೆ, ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತೇವೆ, ಇದರ ಬಗ್ಗೆ ಒಂದೇ ವರ್ಷದಲ್ಲಿ ತೀರ್ಮಾನ ಮಾಡುತ್ತೇವೆಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಂದಿನ ಸರ್ಕಾರ ಹೇಳಿತ್ತು. ಆಗ ನಾವು ಬಹಳ ಖುಷಿ ಪಟ್ಟಿದ್ದೆವು. ಆದರೆ ಆ ವಿಚಾರದಲ್ಲಿ ಒಂದು ಹೆಜ್ಜೆ ಮುಂದಕ್ಕೆ ಹೋಗಿರುವುದಿಲ್ಲ. ಅದಕ್ಕೆ ಹಿಂದಿನ ಸರ್ಕಾರವನ್ನು ದೂರಿದರೆ ಏನೂ ಪ್ರಯೋಜನವಾಗುವುದಿಲ್ಲ. ಈಗ ಶೇಕಡ 50 ರಷ್ಟು ಶಾಲೆಗಳನ್ನು ಮುಚ್ಚುವಂತಹ ಪರಿಸ್ಥಿತಿ ಬಂದಿರುವಾಗ ಯಾವ ರೀತಿ ಇದನ್ನು ಅನುಷ್ಠಾನಗೊಳಿಸಲು ಯೋಚನೆ ಮಾಡಿದ್ದೀರಿ ಎನ್ನುವುದನ್ನು ಸರ್ಕಾರ ಗಮನಿಸಬೇಕೆನ್ನುವುದು ನನ್ನ ಆಗ್ರಹ. ಸರ್ಕಾರದ ಆಡಳಿತ ವ್ಯವಸ್ಥೆ ಜಡ್ಡುಗಟ್ಟಿದೆ ಎನ್ನುವ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅಧಿಕಾರಿಗಳು ಕಡತಗಳನ್ನು ವಿಲೇವಾರಿ ಮಾಡತಕ್ಕ ರೀತಿ, ವಿಳಂಬ ರೀತಿಯನ್ನು ಅನುಸರಿಸುತ್ತಿರುವುದು, ಗ್ರಾಮ ಮತ್ತು ತಾಲ್ಲೂಕು ಮಟ್ಟದವರೆಗೆ *ERPS* (Enterprise Resource Planning Software) ಜಾರಿಗೆ ತರಬೇಕೆನ್ನುವ ಕಲ್ಪನೆಗಳೇನಿವೆ, ಇವುಗಳ ಬಗ್ಗೆ ಬಜೆಟ್‌ನಲ್ಲಿ ಒಂದು ಅಂಶ ಪ್ರಸ್ತಾಪ ಮಾಡಿರುವುದು ಸಹ ನನಗೆ ಕಂಡುಬರುತ್ತಿಲ್ಲ. ಇದರ ಬಗ್ಗೆ ಸ್ಪಷ್ಟಪಡಿಸಬೇಕೆಂದು ನಾನು ಸರ್ಕಾರಕ್ಕೆ ಆಗ್ರಹಿಸುತ್ತೇನೆ.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸದಾನಂದಗೌಡರು "ಸಕಾಲ" ವನ್ನು ಜಾರಿಗೆ ತಂದಿದ್ದರು. ನಮ್ಮ ಸರ್ಕಾರ ಈ ಯೋಜನೆ ಜಾರಿಗೆ ತಂದಿತು ಎನ್ನುವುದನ್ನು ಹೇಳಲಿಕ್ಕೆ ನಾನು ಹೊರಟಿಲ್ಲ. ಆದರೆ ಸರ್ಕಾರಿ ಯಂತ್ರಕ್ಕೆ "ಸಕಾಲ" ದಿಂದ ಅದರದ್ದೇ ಆದ ಒಂದು ಶಕ್ತಿ ಬಂದಿತು. ಮುಂದಿನ 5 ವರ್ಷಗಳ ಅವಧಿಯಲ್ಲಿ ಈ ಸರ್ಕಾರ ಏನೇನು ಮಾಡುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. "ಸಕಾಲ" ವನ್ನು ಪೂರ್ಣವಾಗಿ ಅಕಾಲ ಮಾಡಿ, ಅದನ್ನು ಸರ್ವನಾಶ ಮಾಡತಕ್ಕ ಪ್ರಯತ್ನಗಳಾಯಿತು. ಕೆಲವು ಸರ್ಕಾರಿ ಕಚೇರಿಗಳಲ್ಲಿ "ಸಕಾಲ" ಕಾಯಿದೆಯ ಬೋರ್ಡ್‌ನಲ್ಲಿರುವ ನಿಗಧಿತ ದಿನಗಳ ಉಲ್ಲೇಖವನ್ನೇ ತುಂಡು ಮಾಡಿದ್ದಾರೆ. ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿರುವಾಗ ಆಡಳಿತ ಯಂತ್ರವನ್ನು ಚುರುಕುಗೊಳಿಸಲು "ಸಕಾಲ"ದಲ್ಲಿಯೇ ಸೇವೆಗಳನ್ನು ನೀಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಿಕ್ಕೆ ಸರ್ಕಾರ ಯಾವ ಯೋಜನೆಗಳನ್ನು ಮಾಡಿಲ್ಲ ಎನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಯಡಿಯೂರಪ್ಪನವರ ಆಡಳಿತಾವಧಿಯಲ್ಲಿ ಉತ್ತರ ಕರ್ನಾಟಕ ಭಾಗ ಅಭಿವೃದ್ಧಿ ಹೊಂದಿರುವುದನ್ನು ತಾವು ಗಮನಿಸಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅದನ್ನು ಆಡಳಿತ ಪಕ್ಷಗಳವರು ಒಪ್ಪಿಕೊಳ್ಳದಿದ್ದರೆ ಅದಕ್ಕೆ ನನ್ನ ಆಕ್ಷೇಪಗಳೇನೂ ಇಲ್ಲ. ಈಗ ಸಾಲ ಮನ್ನಾ ಎನ್ನುವುದು ಒಂದು ಭಜನೆಯ ರೂಪದಲ್ಲಿದೆ. ಸರ್ಕಾರದ ಆರ್ಥಿಕ ಸ್ಥಿತಿಯಲ್ಲಿ ಇದನ್ನೆಲ್ಲ ನಿರ್ವಹಣೆ ಮಾಡುವುದು ಎಷ್ಟು ಕಷ್ಟ ಎನ್ನುವುದು ನಮಗೂ ಸಹ ತಿಳಿದಿದೆ. ಈಗಷ್ಟೆ ಒಂದೂವರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಂಗಳಿನ ಹಿಂದೆ ಮುಖ್ಯಮಂತ್ರಿಗಳಾಗಿರುವವರಿಗೆ ಇನ್ನಷ್ಟು ಅವಕಾಶಗಳನ್ನು ನೀಡಬೇಕು. ಸುಮ್ಮನೆ ಟೀಕೆಗಳನ್ನು ಮಾಡುವವನಲ್ಲ ನಾನು. ಸಮಯಾವಕಾಶ ಕೊಟ್ಟು ಆನಂತರ ಚರ್ಚೆಗಳನ್ನು, ಟೀಕೆಗಳನ್ನು ಮಾಡಬೇಕಾಗುತ್ತದೆ. ಆದರೆ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಈ ಸರ್ಕಾರ 34,000 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಬೆಳೆ ಸಾಲ ಮತ್ತು ಚಾಲ್ತಿ ಸಾಲವನ್ನು ಸೇರಿಸಲಾಗಿದೆ ಎಂದು ಹೇಳಲಾಗುತ್ತಿದೆ. ನನ್ನ ಸಲಹೆ ಏನೆಂದರೆ ಈ ರೀತಿ ಸಾಲ ಮನ್ನಾ ಮಾಡುವಾಗ ಸೀಮಿತವಾದ ವ್ಯವಸ್ಥೆಗಳನ್ನು ಹೊರಗಿಟ್ಟು, ಜನಸಾಮಾನ್ಯರ ಬೇಡಿಕೆಗಳನ್ನು ಕೂಡ ಗಮನಿಸಬೇಕಾಗುತ್ತದೆ. ಈಗ ಸರ್ಕಾರ ವಿದ್ಯುತ್ ದರವನ್ನು ಮತ್ತು ಪೆಟ್ರೋಲ್, ಡಿಸೇಲ್ ದರವನ್ನು ಹೆಚ್ಚಿಗೆ ಮಾಡಿದೆ. ಇದರಿಂದ 6000 ದಿಂದ 8000 ಕೋಟಿ ರೂಪಾಯಿಗಳ ಆದಾಯ ಬರಬಹುದೆನ್ನುವುದು ನನ್ನ ಮೆಲ್ನೋಟದ ಒಂದು ಅಂದಾಜು. ಇದು ಹೆಚ್ಚು ಕಡಿಮೆ ಆಗಬಹುದು ನನಗೆ ಗೊತ್ತಿಲ್ಲ. ಇದರ ಜೊತೆಗೆ ರಾಜ್ಯಕ್ಕೆ ಬರುವ ವಾಣಿಜ್ಯ ತೆರಿಗೆಯನ್ನು ಲೆಕ್ಕ ಹಾಕಿದರೆ ನನ್ನ ಮಾಹಿತಿ ಪ್ರಕಾರ 7 ರಿಂದ 8 ಸಾವಿರ ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಬೇರೆ ಬೇರೆ ಮೂಲಗಳಲ್ಲಿ ಕೈಗೆ ಸಿಗದ ತೆರಿಗೆಗಳನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಂಡರೆ ಈ ಏರಿಕೆಗಳ ದರವನ್ನು ವಾಪಸ್ಸು ಮಾಡಬಹುದು ಎಂದು ನನಗೆ ಅನಿಸುತ್ತದೆ. ಈ ಮೀನುಗಾರರ ಸಾಲವನ್ನು ಮನ್ನಾ ಮಾಡುವುದು, ಸ್ತ್ರೀ ಶಕ್ತಿ ಸಂಘಟನೆಗಳ ಸಾಲವನ್ನು ಮನ್ನಾ ಮಾಡುವುದಕ್ಕೆ ಸರ್ಕಾರ ಮುಂದಾದರೆ ಟ್ರಾಕ್ಟರ್ ಖರೀದಿಸಿದವನ ಸಾಲ ಮನ್ನಾ ಮಾಡಬೇಡವೇ? ಉತ್ತರ ಕರ್ನಾಟಕದ ಬೆಳಗಾವಿಯಿಂದ ಬಂದ ಒಬ್ಬ ರೈತ ಸಹಕಾರ ಸಂಘಗಳು ನಾನು ನನ್ನ ಜಮೀನಿನ ಆರ್‌ಟಿಸಿ ಹೊಂದಿದ್ದರೂ ಸಹ ಸಾಲವನ್ನು ನೀಡುವುದಕ್ಕೆ ಹಿಂದೆ-ಮುಂದೆ ನೋಡುತ್ತಾರೆ, ಇದರಿಂದ ನಾನು ಚಿನ್ನವನ್ನು ಅಡವಿಟ್ಟು ಸಾಲವನ್ನು ಪಡೆದಿದ್ದೇನೆ ಎಂದು ಹೇಳಿದನು. ಈ ರೀತಿ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಸರ್ಕಾರಕ್ಕೆ ಅನಿಸುವುದಿಲ್ಲವೇ? ನಮಗೆ ಇವತ್ತು ಬೇರೆ ಯಾವುದೇ ವಿಚಾರಗಳನ್ನು ಹೇಳಬೇಕೆನ್ನುವ ಅವಶ್ಯಕತೆ ಇಲ್ಲ.

**ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಬರುವ ಆಗಸ್ಟ್ 15ರಂದು ಮಾನ್ಯ ಪ್ರಧಾನಮಂತ್ರಿಗಳು ಕೆಲವೊಂದು ಯೋಜನೆಗಳನ್ನು ಘೋಷಣೆ ಮಾಡುವವರಿದ್ದಾರೆ. ಆ ಉದ್ದೇಶದಿಂದ ಚಿನ್ನ ಅಡವಿಟ್ಟವರಿಗೆ ಅವರ ಘೋಷಣೆಗಳಿಂದ ಅನುಕೂಲವಾಗುತ್ತದೆ ಎಂದು ಭಾವಿಸಿ ನಾವು ಮಾಡಿರುವುದಿಲ್ಲ. ಕೇಂದ್ರ ಸರ್ಕಾರದವರಿಗೂ ಸಹ ಜನರಿಗೆ ಅನುಕೂಲ ಮಾಡುವುದಕ್ಕೆ ಸ್ವಲ್ಪ ಅವಕಾಶ ನೀಡಬೇಕಲ್ಲವೆ ಸ್ವಾಮಿ. ಅವರಿಗೂ ಅವಕಾಶ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡೋಣ. ನಾವೇ ಎಲ್ಲವನ್ನು ಮಾಡಿಬಿಟ್ಟರೆ ಅವರಿಗೆ ಏನೂ ಉಳಿಯುವುದಿಲ್ಲ. ಅದಕ್ಕೋಸ್ಕರ ಕುಮಾರಣ್ಣ ಸ್ವಲ್ಪ ಬಾಕಿ ಇಟ್ಟಿದ್ದಾರೆಂದು ಹೇಳಿದೆ ಸ್ವಾಮಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಬುದ್ಧಿವಂತಿಕೆಯಿಂದ ಮಾತನಾಡುವುದರಲ್ಲಿ ರೇವಣ್ಣನವರನ್ನು ಬಿಟ್ಟರೆ ಬೇರೆ ಯಾರಿಗೂ ಅವರಷ್ಟು ಬುದ್ಧಿವಂತಿಕೆ ಇಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:-** ನಾನು ಹೇಳುವುದೇನೆಂದರೆ, ಕೇಂದ್ರಸರ್ಕಾರ ನಡೆಸುತ್ತಿರುವ ಭಾರತೀಯ ಜನತಾ ಪಕ್ಷಕ್ಕೂ ಒಂದು ಹೆಸರು ಬರಬೇಕೆನ್ನುವುದು ನಮ್ಮ ಉದ್ದೇಶ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನನಗೆ ನೀವು ಏನೂ ಕಲಿಸಿಕೊಡುವುದು ಬೇಡ, ನಿಮ್ಮ ಬುದ್ಧಿವಂತಿಕೆಯನ್ನು ಕಲಿಸಿ ಕೊಡಿ ನನಗೆ ಬೇರೇನೂ ಬೇಕಿಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:-** ಮಾನ್ಯ ಪೂಜಾರ್‌ರವರೆ, ನಮಗೆ ನಿಮ್ಮ ಬಗ್ಗೆ ಗೌರವ ಇದೆ. ಮಾನ್ಯ ಪ್ರಧಾನ ಮಂತ್ರಿಗಳು 15ನೇ ತಾರೀಖು ಏನಾದರು ಘೋಷಣೆ ಮಾಡಬಹುದು ಎಂದು ಕಾಯುತ್ತಿದ್ದೇವೆ. ಪಾಪ ಅವರಿಗೂ ಸ್ವಲ್ಪ ಹೆಸರು ಬರಬೇಕಲ್ಲವೇ?

**ಸಭಾಪತಿಯವರು:-** ಅವರಿಗೆ ಏಕೆ ಪಾಪ ಎನ್ನುತ್ತೀರಿ?

**ಶ್ರೀ ಹೆಚ್.ಡಿ.ರೇವಣ್ಣ:-** ಕೇಂದ್ರ ಸರ್ಕಾರಕ್ಕೂ ಒಂದಿಷ್ಟು ಹೆಸರು ಬರಬೇಕು, ಅದಕ್ಕೋಸ್ಕರ ಅವರಿಗೆ ಸ್ವಲ್ಪ ಇರಲಿ ಎಂದು ನಮ್ಮ ಮುಖ್ಯಮಂತ್ರಿಗಳು ಇಟ್ಟಿದ್ದಾರೆ. ಬೇರೇನೂ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 34,000 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತಿದ್ದಾರೆ. ಅದರಲ್ಲಿ 53 ಸಾವಿರ ಕೋಟಿ ರೂಪಾಯಿ ಎಂದು ಹೇಳಿದ್ದಾರೆ, ಅದರಲ್ಲಿ ಒಬ್ಬ ಸಾಮಾನ್ಯ ರೈತನ ಚಿನ್ನಾಭರಣದ ಮೇಲಿನ ಸಾಲ ಮನ್ನಾಕ್ಕೆ ಕೇಂದ್ರ ಸರ್ಕಾರದ ಪ್ರಧಾನಿಯನ್ನು ತೋರಿಸುವುದು ಅವರ ಗುರಿ ಆದರೆ ಅದಕ್ಕೆ ನಾನು ಉತ್ತರ ಕೊಡಲಿಲ್ಲ. ನೀವು ಹೇಳಿದ್ದು ನನಗೆ ಅರ್ಥವಾಯಿತು. ಅಂದರೆ ಕೇಂದ್ರ ಸರ್ಕಾರ ಸಾಲಮನ್ನಾ ಮಾಡಲಿ ಎಂದು ಬಿಟ್ಟಿದ್ದೇವೆ, ಎಂದು ಹೇಳುವುದರ ಮೂಲಕ ನಿಮ್ಮ ವ್ಯಂಗ್ಯ, ನಿಮ್ಮ ವಿಡಂಬನೆ, ನಿಮ್ಮ ಮೊನಚು ಇದೆಲ್ಲಾ ಅರ್ಥವಾಗದೇ ಇರುವಷ್ಟು ದಡ್ಡರೇನು ಅಲ್ಲ ನಾವು. ಆದರೆ ಇದು ನಿಮಗೆ ಗೊತ್ತಿರಲಿ, ಸಾಲಮನ್ನಾದ ವ್ಯಾಪ್ತಿಯಲ್ಲಿ ಇದು ಬರಬೇಕಾಗುತ್ತದೆ ಎಂದು ನಾನು ಹೇಳಿದೆ. ಆದರೆ ಮಾಡುವುದು ಬಿಡುವುದು ನಿಮಗೆ ಸೇರಿದ ವಿಷಯ. ಈಗ ನಮ್ಮ ಆಗ್ರಹ ಏನೆಂದರೆ, 24 ಗಂಟೆಯೊಳಗೆ ACB (Anti

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Corruption Bureau) ಯನ್ನು ರದ್ದು ಮಾಡುತ್ತೇವೆ, ಲೋಕಾಯುಕ್ತವನ್ನು ಬಲಿಷ್ಠ ಮಾಡುತ್ತೇವೆಂದು ಹೇಳಿದವರು ಯಾರು? ಈ ಮಾತನ್ನು ಬಿ.ಜೆ.ಪಿ.ಯವರು ಹೇಳಿದ್ದಾರೆಯೇ ಅಥವಾ ಕುಮಾರಣ್ಣನಾ? ನಾವು ರದ್ದು ಮಾಡುತ್ತಿದ್ದೆವು.

(ಮುಂದು)

**(309) 12.07.2018 09.20** ಬಿ.ಕೆ.ಪಿ.-ಬಿ.ಎನ್.ಎಸ್.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು. . ):-**

ಶ್ರೀಯುತ ಯಡಿಯೂರಪ್ಪನವರು ಅಧಿಕಾರಕ್ಕೆ ಬಂದು 3-4, ದಿವಸಗಳಿರಬಹುದು, ಸಾಲ ಮನ್ನಾ ಘೋಷಣೆ ಮಾಡಿದ್ದಾರೆ. ಅಧಿಕಾರ ನಮಗೆ ಇಲ್ಲ. ಅಧಿಕಾರ ಹೋಯಿತು, ಅದರ ಬಗ್ಗೆ ನಮ್ಮ ವಾದವಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ತಾವು ಮುಖ್ಯಮಂತ್ರಿಯಾಗಿದ್ದೀರಿ, ಆ ಜವಾಬ್ದಾರಿ ತಮ್ಮದೇ ಅಲ್ಲವೇ? A.C.B. (Anti Corruption Bureau) ಯನ್ನು ರದ್ದು ಮಾಡುವಂತಹ ಜವಾಬ್ದಾರಿ ಯಾರದ್ದು? ನೀವು ಕನಕಪುರಕ್ಕೆ ಮೆಡಿಕಲ್ ಕಾಲೇಜನ್ನು ಕೊಟ್ಟಾಗ ನಾವು ಏನು ಹೇಳಿದೆವು. ಅದನ್ನು ನೀವು ಕೊಡಿ. ಅದನ್ನು ತಾವು ಸ್ವಲ್ಪ ಖುಷಿಯಿಂದ ಕೊಟ್ಟಿರಬಹುದು ಅಥವಾ ಸ್ವಲ್ಪ ಆತಂಕ ನಿವಾರಣೆಯಾಗಬಹುದು ಎಂದು ಹೇಳಿ ಅದನ್ನು ನೀವು ಕೊಟ್ಟಿರಬಹುದು. ಬೇರೆ ಕಡೆ ಏತಕ್ಕೆ ಕೊಡಲಿಲ್ಲವೆಂದು ಕೇಳಿದರೆ ಅದರಲ್ಲಿ ತಪ್ಪೇನಿದೆ?

ಆದ್ದರಿಂದ, ನಾನು ತಮ್ಮಲ್ಲಿ ಆಗ್ರಹ ಪಡಿಸುವುದೇನೆಂದರೆ ಈ ವಿಚಾರದಲ್ಲಿ ನಮಗೆ ನಿಮಗೆ ಗೊಂದಲ ಬೇಡ. ವ್ಯವಸ್ಥೆಯಲ್ಲಿ ಒಂದು ರಾಜೀ ಮಾಡಿಕೊಳ್ಳೋಣ. ವಿದ್ಯುತ್ ದರ ಏರಿಕೆಯನ್ನು ತಕ್ಷಣ ನೀವು ವಾಪಸ್ಸು ತೆಗೆದುಕೊಳ್ಳಿ. ಇದಕ್ಕೆ ಬೇರೆ ಏನೂ ಅಂಕಿ-ಅಂಶಗಳು ಬೇಡ. ರಾತ್ರಿ 9-15 ಗಂಟೆಯಾಯಿತು, ಸಭಾಪತಿಯವರಿಗೆ ಒಂದು ರೀತಿಯಲ್ಲಿ ಸಿಟ್ಟು, ಒಂದು ರೀತಿಯಲ್ಲಿ ನೋವು. ಬೇಗ ಸದನ ಮುಗಿಯುತ್ತದೆಯೇನೋ ಎನ್ನುವ ಖುಷಿ, ವಿಳಂಬವಾದ ಕೂಡಲೇ ಒಂದು ರೀತಿಯಲ್ಲಿ ಕೋಪ. ಈ ರೀತಿಯಲ್ಲಿ ಅವರಿಗೆ ಎಲ್ಲವೂ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಅವರಿಗೆ 70 ಸೀಟುಗಳು ಬರುವ ಕಡೆ 30 ಸೀಟುಗಳು ಜಾಸ್ತಿಯಾಗಿದೆ ಎಂದು ಹೇಳಲಿಕ್ಕೆ ಹೋಗಬೇಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಶ್ರೀಯುತ ರೇವಣ್ಣನವರ ಹತ್ತಿರ ರಾಜಕೀಯವಾಗಿ ರಾಜಿ ಮಾಡಿಕೊಳ್ಳುವಷ್ಟು ದಡ್ಡ ನಾನಲ್ಲ. ಏನಿದ್ದರೂ ಸಹ ರಾಜಕೀಯದಲ್ಲಿ ನಿಮ್ಮ ಜೊತೆ ಯುದ್ಧವೇ ಆಗಿರುತ್ತದೆ. ಶ್ರೀಯುತ ರೇವಣ್ಣನವರು ನೆನಪಿಟ್ಟುಕೊಳ್ಳಬೇಕು. ಇವತ್ತು ಅಲ್ಲ, ನಾಳೆ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬರುತ್ತದೆ. ಶ್ರೀಯುತ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುತ್ತಾರೆ. ಇದನ್ನು ಬರೆದಿಟ್ಟುಕೊಳ್ಳಿ.

**(ಗೊಂದಲ)**

ಶ್ರೀಯುತ ಐವನ್ ಡಿ'ಸೋಜಾ ರವರು, ಶ್ರೀಯುತ ಶರವಣರವರು, ಶ್ರೀಯುತ ಮರಿತಿಬ್ಬೇಗೌಡ ರವರು, ಶ್ರೀಯುತ ಖಾದರ್‌ರವರು, ಎಷ್ಟೇ ಒತ್ತಡದಲ್ಲಿದ್ದರೂ ಕೂಡ ಬರುವ ಲೋಕಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ 25 ಸ್ಥಾನಗಳನ್ನು ಗೆದ್ದೇ ಗೆಲ್ಲುತ್ತದೆ. ಅದರ ಬಗ್ಗೆ ಗೊಂದಲ ಬೇಡವೇ ಬೇಡ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ವಿರೋಧ ಪಕ್ಷದ ನಾಯಕರು ಇಲ್ಲಿ ಚುನಾವಣೆ ಭಾಷಣ ಮಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಈ ಭಾಷಣ ಮಾಡುವುದನ್ನು ಶ್ರೀಯುತ ರೇವಣ್ಣನವರಿಂದಲೇ ಕಲಿತಿರುವುದಾಗಿದೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಒಂದು ನಿಮಿಷ ತಮ್ಮ ಮಾತನ್ನು ನಿಲ್ಲಿಸಬೇಕು. ನಾನು ಒಂದೇ ಒಂದು ವಾಕ್ಯವನ್ನು ಹೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಬಜೆಟ್ ವಿಷಯವನ್ನು ಬಿಟ್ಟು ಬೇರೆ ವಿಷಯಕ್ಕೆ ಹೋಗಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿ.ಎಸ್.ಉಗ್ರಪ್ಪ:–** ನಾನು ಶ್ರೀಯುತ ಕೋಟ ಶ್ರೀನಿವಾಸ್ ಪೂಜಾರಿಯವರ ಆತ್ಮ ವಿಶ್ವಾಸವನ್ನು ಮೆಚ್ಚುತ್ತೇನೆ. ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಖಾಲಿ ಮಾಡಿದಂತಹ ಪಾರ್ಲಿಮೆಂಟ್ ಸೀಟ್‌ಗಳ ಬಗ್ಗೆ ಏನಾಯಿತು ಎನ್ನುವುದನ್ನು ಪಾಪ, ವಿರೋಧ ಪಕ್ಷದ ನಾಯಕರು ಮರೆತಂತೆ ಕಾಣುತ್ತದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಭಾರತ ದೇಶದಲ್ಲಿ 23 ರಾಜ್ಯಗಳ ಅಧಿಕಾರವನ್ನು ಪಡೆದಂತಹ ಒಂದು ರಾಜಕೀಯ ಪಕ್ಷಕ್ಕೆ ಯಾವುದೋ ಒಂದು ಉಪ ಚುನಾವಣೆಯಲ್ಲಿ ನೀವು ಎರಡು ಸೀಟುಗಳನ್ನು ಗೆದ್ದಿರುವುದು ನಿಮಗೆ ದೃಷ್ಟಿ ತೆಗೆದಂತೆ. ಇದು ಏನೂ ಅಲ್ಲ ಬಿಡಿ. ಶ್ರೀಯುತ ಉಗ್ರಪ್ಪಣ್ಣ ನವರೇ, ತಮಗೆ ಗೊತ್ತಿಲ್ಲ. ಸ್ವಲ್ಪ ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

**(ಗೊಂದಲ)**

ಈ ಸದನದಲ್ಲಿ ನಾನು ಶ್ರೀಯುತ ರೇವಣ್ಣನವರಿಂದ ಮತ್ತು ಶ್ರೀಯುತ ಉಗ್ರಪ್ಪನವರಿಂದ ಕಲಿಯುವುದು ಇದೆ. ಶ್ರೀಯುತ ಉಗ್ರಪ್ಪನವರಿಂದ ಕಲಿಯುವುದು ಸುಪ್ರೀಂ ಕೋರ್ಟಿನ ವಿಚಾರ. ಶ್ರೀಯುತ ರೇವಣ್ಣನವರಿಂದ ಬುದ್ಧಿವಂತಿಕೆಯ ಮಾತುಗಳನ್ನು ಕಲಿಯುವುದಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಶ್ರೀಯುತ ಪೂಜಾರ್‌ರವರಿಂದ ಏನು ಕಲಿಯಬೇಕೆನ್ನುವುದನ್ನು ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಾವು ಏನೂ ಕಲಿಯಲಿಕ್ಕೆ ಆಗುವುದಿಲ್ಲ. ಹಳ್ಳಿಯಿಂದ ಒಬ್ಬ ಸಾಮಾನ್ಯ ಮನುಷ್ಯನಾಗಿ ಬಂದಂತಹ ನನ್ನಿಂದ ಅವರು ಏನು ಕಲಿಯಲಿಕ್ಕೆ ಸಾಧ್ಯ? ಆದರೆ, ಶ್ರೀಯುತ ಉಗ್ರಪ್ಪನವರಿಂದ ನಾನು ಕಲಿಯಬೇಕೆನಿಸುತ್ತದೆ. ಅದು ಬಹಳ ಪ್ರಾಯ ಆಗುತ್ತಾ ಬಂತು. ನೋಡೋಣ ಮುಂದೆ. ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಕೇಳಿ.

**(ಗೊಂದಲ)**

**ಸಭಾಪತಿಯವರು:–** ಸಾಕು. ನಾನು ಎಷ್ಟು ಕೇಳಬೇಕು. ನಿಲ್ಲಿಸಿ, ಶ್ರೀಯುತ ಪೂಜಾರ್‌ರವರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮ್ಮ ಕಡೆಯಿಂದ ಏನೂ ತೊಂದರೆಯಿಲ್ಲ. ರಾಜಕಾರಣದಲ್ಲಿ ರಾಜಿ ಇಲ್ಲ. ವಿಷಯದ ಮೇಲೆ ಮಾನ್ಯ ಕುಮಾರಸ್ವಾಮಿಯವರು ಹೊಸದಾಗಿ ಮುಖ್ಯಮಂತ್ರಿಗಳಾಗಿದ್ದಾರೆ. ಅವರಿಗೆ ನಾನು ಗೌರವ ಕೊಡುತ್ತೇನೆ.

**ಸಭಾಪತಿಯವರು:-** ಶ್ರೀಯುತ ಪೂಜಾರಿಯವರೇ, ತಾವು ಸಹ ಹೊಸದಾಗಿ ವಿರೋಧ ಪಕ್ಷದ ನಾಯಕರಾಗಿದ್ದೀರಿ. ತಾವು ಬಹಳ ಮಾತನಾಡಬೇಡಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಪ್ರಾರಂಭ ಮಾಡಿರುವುದಿಲ್ಲ. ಆದರೆ, ನಾನು ಪೀಠಕ್ಕೆ ಗೌರವ ಕೊಡದೇ ಹೋಗುವುದಿಲ್ಲ. ಆ ಕಾರಣದಿಂದ ನಾನು ಒಂದೆರಡು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮತ್ತೇನೂ ತೊಂದರೆಯಿಲ್ಲ. ದಯವಿಟ್ಟು ಈ ವಿಚಾರದಲ್ಲಿ ಗೊಂದಲ ಬೇಡ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಇಷ್ಟೇ ಹೇಳಿದರೆ ಸಾಕು. ವಿದ್ಯುತ್ ತೆರಿಗೆಯನ್ನು ನಾವು ಏನು ಬಜೆಟ್‌ನಲ್ಲಿ ಹಾಕಿದ್ದೇವೆ, ಅದನ್ನು ವಾಪಸ್ಸು ಪಡೆದಿದ್ದೇವೆ. ಡೀಸಲ್ ಮತ್ತು ಪೆಟ್ರೋಲ್ ಬೆಲೆ ಏರಿಕೆಯನ್ನು ಮಾಡಿದ್ದು, ಅದನ್ನು ಸಹ ನಾವು ವಾಪಸ್ಸು ಪಡೆದಿದ್ದೇವೆ. ಮೀನುಗಾರರು, ಸ್ತ್ರೀಶಕ್ತಿ ಸಂಘಕ್ಕೆ, ಟ್ರ್ಯಾಕ್ಟರ್, ರೈತರ ಚಿನ್ನಾಭರಣಗಳ ಸಾಲ, ಎಲ್ಲಾ ಸಾಲಗಳನ್ನು ಮನ್ನಾ ಮಾಡಿದ್ದೇವೆ ಎನ್ನುವಂತಹ ಮಾತುಗಳನ್ನು ಹೇಳಿದರೆ ಸಾಕು. ರೈತರ ಸಾಲವನ್ನು ಪೂರ್ಣ ಮನ್ನಾ ಮಾಡಿದ್ದೇವೆ, A.C.B. ಯನ್ನು ರದ್ದು ಮಾಡಿ, ಲೋಕಾಯುಕ್ತಕ್ಕೆ ಶಕ್ತಿಯನ್ನು ಕೊಡುತ್ತೇವೆ ಎನ್ನುವಂತಹ ಮಾತುಗಳು ತಮ್ಮ ಕಡೆಯಿಂದ ಬಂದರೆ . . . . ಇಡೀ ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯೇ ಒಂದು ರೀತಿಯಲ್ಲಿ ಅಧೋಗತಿಗೆ ಇಳಿದು ಬಿಡುತ್ತದೆ. ಹೆಚ್.ಕೆ. ಪಾಟೀಲ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಾಗ ವ್ಯವಸ್ಥೆಗಳ ಬಗ್ಗೆ ನೋಡುವುದಕ್ಕೆ ಒಂದು ಅದ್ಭುತ ಇತ್ತು. ಇವತ್ತಿನ ದಿವಸ ಕುಡಿಯುವ ನೀರಿನ ವ್ಯವಸ್ಥೆಗಳನ್ನು ಹೊರತುಪಡಿಸಿ, ಮತ್ತೇನೂ ನಾನೂ ನೋಡಿಲ್ಲ. ನಾನು ಆಗ್ರಹಪಡಿಸುವುದೇನೆಂದರೆ ವಿದ್ಯುತ್ ತೆರಿಗೆಯನ್ನು ವಾಪಸ್ಸು ಮಾಡಿ, ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಿರುವುದನ್ನು ಹಿಂಪಡೆಯಿರಿ.

**ಸಭಾಪತಿಯವರು:-** ಈ ಮಾತುಗಳನ್ನು ತಾವು ಈಗಾಗಲೇ ಹೇಳಿದ್ದೀರಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮೀನುಗಾರರು, ಸ್ತ್ರೀ ಶಕ್ತಿ ಸಂಘಗಳು, ಟ್ರ್ಯಾಕ್ಟರ್ ಮತ್ತು ಚಿನ್ನಾಭರಣಗಳ ಮೇಲಿನ ರೈತರ ಸಾಲಗಳನ್ನು ವಾಪಸ್ಸು ಮಾಡುವಂತಹ ಕೆಲಸವನ್ನು ಏಕಕಾಲದಲ್ಲಿ ಘೋಷಣೆ ಮಾಡಬೇಕೆನ್ನುವ ಆಗ್ರಹ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಉತ್ತರಕ್ಕಾಗಿ ನಾನು ಕಾಯುತ್ತೇನೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಏನಾದರೂ ಹೇಳುವುದಿದೆಯೇ?

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಶ್ರೀ ಮಂಜುನಾಥ್‌ರವರಿಂದ ಪ್ರಾರಂಭ ಮಾಡಿ ಸುಮಾರು 21 ಜನ ಮಾನ್ಯ ಸದಸ್ಯರುಗಳು ಈ ಬಗ್ಗೆ ಮಾತನಾಡಿದ್ದಾರೆ.

**ಸಭಾಪತಿಯವರು:-** ಹೌದು, ಸುಮಾರು 21 ಜನ ಮಾನ್ಯ ಸದಸ್ಯರು ಈ ಬಗ್ಗೆ ಮಾತನಾಡಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಎಲ್ಲಾ 21 ಜನ ಮಾನ್ಯ ಸದಸ್ಯರುಗಳು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ನೀರಾವರಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿದ್ದಾರೆ. ನಮ್ಮ ವಿದ್ಯಾರ್ಥಿಗಳ ಸಾಲದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್‌ರವರು ಕಳೆದ ರಾಜ್ಯಪಾಲರ ಭಾಷಣದಲ್ಲಿಯೂ ಮಾತನಾಡಿದ್ದಾರೆ ಮತ್ತು ಈಗಲೂ ಸಹ ಮಾತನಾಡಿದ್ದಾರೆ. ಅದೇ ರೀತಿಯಲ್ಲಿ ಹಿಂದುಳಿದ ವರ್ಗಗಳಿಗೆ ಸ್ವಲ್ಪ ಹೆಚ್ಚಿನ ಆದ್ಯತೆ ಕೊಡಬೇಕೆಂದು, ಕ್ರಿಶ್ಚಿಯನ್ ಸಮುದಾಯದ ಒಂದು ಮಂಡಳಿ ರಚನೆ ಆಗಬೇಕೆಂದು ನಮ್ಮ ಶ್ರೀ ಐವನ್ ಡಿ'ಸೋಜಾರವರದ್ದು, ಕ್ರೀಡೆಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಶ್ರೀ ಗೋವಿಂದರಾಜುರವರದು ಮತ್ತು ಸಹೋದರಿಯವರಾದ ಶ್ರೀಮತಿ ತಾರಾರವರು ಚಿತ್ರರಂಗದ ಬಗ್ಗೆ ಮಾತನಾಡುತ್ತಾ, ಮಾಸಾಶನ ಬಗ್ಗೆ ಕೆಲವು ಚರ್ಚೆ ಮಾಡಿದ್ದಾರೆ ಮತ್ತು ನಮ್ಮ ಶ್ರೀ ಜಿ.ಟಿ. ದೇವೇಗೌಡರು Bone Marrow Transplantation ಬಗ್ಗೆ ಚರ್ಚೆ ಮಾಡಿದ್ದಾರೆ. ಕಳೆದ ಬಾರಿಯೂ ಸಹ ನಮ್ಮ ಶ್ರೀ ಕೆ.ಪಿ. ನಂಜುಂಡಿಯವರು ವಿಶ್ವಕರ್ಮ ಸಮಾಜಕ್ಕೆ 300 ಕೋಟಿ ಅನುದಾನ ಬೇಕು ಎಂದು ಹೇಳಿದ್ದರು. ಇದರ ಜೊತೆಗೆ ನಮ್ಮ ವಿರೋಧ ಪಕ್ಷದ ನಾಯಕರು ಟ್ರ್ಯಾಕ್ಟರ್ ಸಾಲ, ಚಿನ್ನಾಭರಣಗಳ ಮೇಲಿನ ಸಾಲ ಇನ್ನೂ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಎಲ್ಲಾ ಕೆಲಸಗಳನ್ನು ಕೇವಲ ಎರಡು ತಿಂಗಳಿನಲ್ಲಿ ಅದರಲ್ಲೂ ಮೊದಲನೇ ಬಜೆಟ್‌ನಲ್ಲಿ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ. ಇನ್ನು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಈ ರಾಜ್ಯದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವಂತಹ ಸರ್ಕಾರ ನಮ್ಮ ಸಮ್ಮಿಶ್ರ ಸರ್ಕಾರ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ನಮ್ಮ ಶಿಕ್ಷಕರ ಬಗ್ಗೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ತಾವೇ ಕೊಟ್ಟಿರತಕ್ಕಂತಹ ಒಂದು ವರದಿ ಬಗ್ಗೆ ಗಮನ ಸೆಳೆದಿದ್ದೀರಿ. ಜೊತೆಗೆ ನಮ್ಮ ಬಜೆಟ್ ಭಾಷಣದಲ್ಲಿ 28 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಾರೆನ್ನುವ ವಿಷಯದ ಹಿನ್ನೆಲೆಯಲ್ಲಿ ಈಗಾಗಲೇ ಕೆಲವು ನಾಡಿನ ಗಣ್ಯ ವ್ಯಕ್ತಿಗಳು ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರು ಮಾಧ್ಯಮಗಳಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ 28 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಲೇಬೇಕೆಂದಿಲ್ಲ. ಆದರೆ, ಸರ್ಕಾರದ ಅಧಿಕಾರಿಗಳು ಕೊಟ್ಟಿರತಕ್ಕಂತಹ ಕೆಲವು ಮಾಹಿತಿಗಳು ಏನಿದೆ, ಅದರ ವಿಚಾರವಾಗಿ ಈ ಸದನದಲ್ಲಿ ಶಿಕ್ಷಕರ ಕ್ಷೇತ್ರದಿಂದ ಬಂದಂತಹ ಶಾಸಕರು ಇದ್ದಾರೆ. ಸದರಿ ಶಾಸಕರನ್ನೂ, ಕೆಲವು ಗಣ್ಯ ವ್ಯಕ್ತಿಗಳು ಹಾಗೂ ಅಧಿಕಾರಿಗಳನ್ನು ಕರೆದು ಒಂದು ಸಭೆ ಮಾಡುತ್ತೇನೆ. ಆ ಸಮಯದಲ್ಲಿ ಸಭಾಪತಿಯವರಾದ ತಮ್ಮನ್ನೂ ಸಹ ಕರೆಯುತ್ತೇನೆ. ಅಲ್ಲಿ ಯಾವ್ಯಾವ ವಿಷಯಗಳ ಬಗ್ಗೆ ಚರ್ಚೆ ಮಾಡಿ ಯಾವ ರೀತಿ ಶಿಕ್ಷಣದಲ್ಲಿರತಕ್ಕಂತಹ ಲೋಪದೋಷಗಳನ್ನು ಸರಿಪಡಿಸಬೇಕು. ಇನ್ನು ನಮ್ಮ ಹಳ್ಳಿ ಮಕ್ಕಳಿಗೆ ಶಿಕ್ಷಣ ನೀಡುವುದರಲ್ಲಿ ಎಲ್ಲೆಲ್ಲಿ ನ್ಯೂನ್ಯತೆಗಳಿವೆ ಅದನ್ನು ಯಾವ ರೀತಿ ಸರಿಪಡಿಸಬೇಕು ಎನ್ನುವ ಬಗ್ಗೆ ತಮ್ಮಗಳ ಸಲಹೆಗಳನ್ನು ಪಡೆದು ನಾನು ಅಂತಿಮವಾದಂತಹ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ಯಾವುದೇ ರೀತಿಯ ಅನುಮಾನಗಳನ್ನು ತಾವುಗಳು ಇಟ್ಟುಕೊಳ್ಳಬಾರದು. ಇದರ ಜೊತೆಗೆ ವಿದ್ಯಾರ್ಥಿಗಳ ಸಾಲ ಏನಿದೆ, Graduation ವಿದ್ಯಾಭ್ಯಾಸ ಮಾಡಬೇಕಾದರೆ ತೆಗೆದುಕೊಂಡಿರತಕ್ಕಂತಹ ಸಾಲಗಳು ಇದ್ದು, ಅವುಗಳನ್ನು ಪರಿಶೀಲನೆ ಮಾಡುತ್ತೇನೆ. ಅದಕ್ಕೆ ಇನ್ನು ಸಮಯಾವಕಾಶ ಇದೆ. ಈ ವರ್ಷದ supplementary budget ಅನ್ನು ಮುಂದೆ ಮಂಡನೆ ಮಾಡತಕ್ಕಂಥದ್ದು ಏನಿದೆ ಅದರ ಬಗ್ಗೆ ನಾನು ಗಮನ ಕೊಡುತ್ತೇನೆ. ಅದರ ಜೊತೆಗೆ ನಮ್ಮ ವಿರೋಧ ಪಕ್ಷದ ನಾಯಕರು power sector ಬಗ್ಗೆ ಮೂರು ಮೂರು ಸಾರಿ ಒತ್ತಿ ಹೇಳಿದ್ದಾರೆ. ಅಲ್ಲಿ ಏನಾಗಿದೆಯೆಂದರೆ, ಒಂದು ಕುಟುಂಬಕ್ಕೆ, ಒಬ್ಬ ಗ್ರಾಹಕನಿಗೆ ಒಂದು ತಿಂಗಳಿಗೆ ಹತ್ತು ರೂಪಾಯಿ ಹೊರೆ ಬೀಳುತ್ತದೆ. ಅದು ಮಹಾನ್ ದೊಡ್ಡ ಹೊರೆ ಅಲ್ಲ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪೆಟ್ರೋಲ್ ಮತ್ತು ಡೀಸೆಲ್ ಬಗ್ಗೆ ಹೇಳಿದ್ದಾರೆ. ಇವತ್ತಿನ ದಿವಸ ನಾವು ಏರಿಕೆ ಮಾಡಿರತಕ್ಕಂತಹ ದರ ಏನಿದೆ ಅದು ಬೇರೆ ರಾಜ್ಯಗಳಿಗಿಂತಲೂ ಕಡಿಮೆ ದರ ನಿಗದಿಯಾಗಿದೆ. ಬಿ.ಜೆ.ಪಿ. ಆಡಳಿತ ನಡೆಸತಕ್ಕಂತಹ ಮಧ್ಯಪ್ರದೇಶದಲ್ಲಿ 81 ರೂಪಾಯಿ ಇದೆ. ಮಹಾರಾಷ್ಟ್ರದಲ್ಲಿ 83 ರೂಪಾಯಿ ಇದೆ. ನಾವು ಈಗ ಇಲ್ಲಿ 1 ರೂಪಾಯಿ ಏರಿಕೆ ಮಾಡಿದರೂ ಕೂಡ 77 ರೂಪಾಯಿಗಳಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

**(310) 12.07.2018 09.30 ಎಸ್‌ವಿ-ಬಿಎನ್‌ಎಸ್**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು):-**

ನಾವು ಒಂದು ರೂಪಾಯಿ ಏರಿಕೆ ಮಾಡಿದ ಮೇಲೆಯೂ ಕೂಡ ನಮ್ಮ ರಾಜ್ಯದಲ್ಲಿ ಡೀಸೆಲ್ ಬೆಲೆ ಒಂದು ಲೀಟರ್‌ಗೆ ರೂ.77 ಇದೆ. ಇಂದು ನಾವು ಕೆಲವು ಆದಾಯವನ್ನು ಸರ್ಕಾರಕ್ಕೆ ತರಬೇಕಲ್ಲವೆ? ಆದಾಯ ತರದೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ.

ಶಿಕ್ಷಕರಿಗೆ ಹಲವಾರು ರೀತಿಯ ಸೌಲಭ್ಯಗಳು ಬೇಕು ಎಂದು ಹೇಳಿದ್ದಾರೆ. ಪರ್ಮನೆಂಟ್ ಮಾಡಿ ಎಂದು ಹೇಳಿದ್ದಾರೆ. ಹೊರಗುತ್ತಿಗೆ ಮಾಡುವಂತಹ ಹಂಗಾಮಿ ನೌಕರರದ್ದು ಹಲವಾರು ಸಮಸ್ಯೆಗಳಿವೆ. ಅಂಗನವಾಡಿ ಹೆಣ್ಣುಮಕ್ಕಳದ್ದು ಹಲವಾರು ಸಮಸ್ಯೆಗಳಿವೆ. ಮುಂದಿನ ದಿನಗಳಲ್ಲಿ ಯಾವರೀತಿಯಲ್ಲಿ ಪ್ರತಿಭಟನೆಗಳು ಮತ್ತೊಂದು ಮಗದೊಂದು ನಡೆಯುತ್ತಿರುತ್ತವೆ ಎಂಬುದನ್ನು ನಾನು ಊಹಿಸಬಲ್ಲೆ. ಮಾನ್ಯ ಪ್ರದೀಪ್ ಶೆಟ್ಟರ್ ಅವರು ನೈರುತ್ಯ ವಲಯ ಎಂದು ಪ್ರಸ್ತಾಪಿಸಿದರು. ರೈಲ್ವೆ ನೈರುತ್ಯ ವಲಯ ಮಾನ್ಯ ವಾಜಪೇಯಿಯವರು ಕೊಟ್ಟದ್ದಲ್ಲ. ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾಗ ನೈರುತ್ಯ ವಲಯವನ್ನು ಕೊಟ್ಟರು. ಬೆಂಗಳೂರಿನಲ್ಲಿದ್ದ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸಿದ್ದಷ್ಟೇ ಮಾನ್ಯ ವಾಜಪೇಯಿಯವರು ಮಾಡಿದ ಕೆಲಸ. ಸದನದ ಕಲಾಪದಲ್ಲಿ ಅದು ತಪ್ಪಾಗಿ ದಾಖಲಾಗಬಾರದು. ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾಗ ನೈರುತ್ಯ ವಲಯವನ್ನು ಕರ್ನಾಟಕ ರಾಜ್ಯದ ಬೆಂಗಳೂರಿಗೆ ಕೊಟ್ಟರು. ಹುಬ್ಬಳ್ಳಿಗೆ ವರ್ಕ್‌ಶಾಪ್ ಅನ್ನು ಕೊಟ್ಟರು. ಅದಕ್ಕೆ ರೂ.50 ಕೋಟಿ ಹಣವನ್ನೂ ಸಹ ಕೊಟ್ಟಿದ್ದರು. ನಮಗೆ ಉತ್ತರ ಕರ್ನಾಟಕದ ವಿರೋಧಿ ಭಾವನೆ ಇದೆ ಎಂದು ಹೇಳುತ್ತಾರೆ. Accelerated Irrigation Benefit Programme (A.I.B.P.) ಅನ್ನು ಪ್ರಥಮ ಬಾರಿಗೆ ಮಾನ್ಯ ದೇವೇಗೌಡರು ತಂದರು. ಅದರಿಂದ ನಮ್ಮ ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಸುಮಾರು 12 ರಿಂದ 15 ಸಾವಿರ ಕೋಟಿ ಹಣ ಹೆಚ್ಚುವರಿಯಾಗಿ ಬಂದಿತು. ಇಂದು ಉತ್ತರ ಕರ್ನಾಟಕದಲ್ಲಿ ನೀರಾವರಿ ಸೌಲಭ್ಯಗಳು ಅಭಿವೃದ್ಧಿಯಾಗಿದ್ದರೆ ಅದು ಮಾನ್ಯ ದೇವೇಗೌಡರು ಕೊಟ್ಟಿರುವ ಕಾರ್ಯಕ್ರಮದಿಂದಾಗಿ ಎಂದು ಹೇಳಬಯಸುತ್ತೇನೆ. ಮಾನ್ಯ ದೇವೇಗೌಡರಾಗಲೀ, ಮಾನ್ಯ ರೇವಣ್ಣನವರಾಗಲೀ, ನಾನಾಗಲೀ ಅಥವಾ ನಮ್ಮ ಕುಟುಂಬದವರು ಯಾರೂ ಉತ್ತರ ಕರ್ನಾಟಕದ ವಿರೋಧಿಗಳಲ್ಲ. ಅವರೆಲ್ಲರೂ ನಮ್ಮ ಸಹೋದರರು ಎನ್ನುವ ಭಾವನೆ ನಮ್ಮ ಹೃದಯದಲ್ಲಿದೆ. ನಮ್ಮ ಕುಟುಂಬ ಅವರನ್ನು ಗೌರವಿಸತಕ್ಕಂತಹ ಜನ. ಕೆಲವರು ರಾಜಕೀಯದಲ್ಲಿ ಅವರ ಬೆಳವಣಿಗೆಗಾಗಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ದೇವೇಗೌಡರು ಹಾಗೂ ದೇವೇಗೌಡರ ಕುಟುಂಬ ಉತ್ತರ ಕರ್ನಾಟಕದ ವಿರೋಧಿಗಳೆಂದು ಬಿಂಬಿಸಿಕೊಂಡು ಬಂದಿದ್ದಾರೆ. ಮಾನ್ಯ ದೇವೇಗೌಡರು ಹಲವಾರು ವಿಷಯಗಳಲ್ಲಿ ವಿಶೇಷವಾಗಿ ರಾಜ್ಯದ ನೀರಾವರಿ ಯೋಜನೆಗಳಲ್ಲಿ ಕೊಡುಗೆಯನ್ನು ನೀಡಿದ್ದಾರೆ. ಇಲ್ಲಿ ಮಾನ್ಯ ಮನಗೂಳಿಯವರು ಕುಳಿತಿದ್ದಾರೆ. ಅವರನ್ನು ಕೇಳಿದರೆ ಯಾವ ರೀತಿಯಾಗಿ ಮಾನ್ಯ ದೇವೇಗೌಡರು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

Mahadayi Water Disputes Tribunal ತೀರ್ಪು ಆಗಸ್ಟ್ ತಿಂಗಳಿನಲ್ಲಿ ಕೊಡಬಹುದು. ಮಹದಾಯಿ ತೀರ್ಪು ಬರುವ ಹಿನ್ನೆಲೆಯಲ್ಲಿ ಸಮಯವನ್ನು ವ್ಯರ್ಥ ಮಾಡದೆ ತಕ್ಷಣ ಕಾರ್ಯಕ್ರಮವನ್ನು ಪ್ರಾರಂಭಿಸಲು ಈಗಾಗಲೇ ನಾವು ತೀರ್ಮಾನ ಮಾಡಿದ್ದೇವೆ ಎಂದು ಆಯವ್ಯಯದಲ್ಲಿ ಘೋಷಿಸಿದ್ದೇವೆ. ಮಾನ್ಯ ರವಿಕುಮಾರ್ ಅವರು ಆರೇಳು ಜಿಲ್ಲೆಗಳಿಗೆ ಏನೂ ಕೊಟ್ಟಿಲ್ಲವೆಂದು ಹೇಳಿದರು. ಎಲ್ಲಾ ಜಿಲ್ಲೆಗಳಿಗೂ ಹಣ ಬಿಡುಗಡೆಯಾಗಿದೆ.

ಮಾನ್ಯ ಸಿದ್ದರಾಮಯ್ಯನವರು ಮಂಡನೆ ಮಾಡಿರತಕ್ಕಂತಹ ಲೇಖಾನುದಾನ ಇರಬಹುದು, ಬರುವ ಮಾರ್ಚ್ 31ರವರೆಗೆ ನಾನು ನಿಮ್ಮೆಲ್ಲರ ಒಪ್ಪಿಗೆಯನ್ನು ಪಡೆಯಲಿಕ್ಕೆ ನಿಂತಿದ್ದೇನೆ. ಸಮಗ್ರವಾದ ಕರ್ನಾಟಕದ ಅಭಿವೃದ್ಧಿಗೆ ಯಾವುದೇ ಕ್ಷೇತ್ರದ ಎಲ್ಲಾ ರೀತಿಯ ಕಾರ್ಯಕ್ರಮಗಳಿಗೆ ಹಣವನ್ನು ಕಾಲಕಾಲಕ್ಕೆ ಕೊಡಲಾಗುವುದು. ಇನ್ನೂ ಹಲವಾರು ಕಾರ್ಯಕ್ರಮಗಳನ್ನು ತರಬೇಕಾಗಿದೆ. ನಮ್ಮ ಸಮ್ಮಿಶ್ರ ಸರ್ಕಾರದ ಮೇಲೆ ಎಲ್ಲರೂ ವಿಶ್ವಾಸವಿಡಬೇಕು. ಎರಡೂ ಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲಿ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಎರಡೂ ಪಕ್ಷಗಳ ಕಾರ್ಯಕ್ರಮಗಳನ್ನು ಮುಂದಿನ ಐದು ವರ್ಷಗಳಲ್ಲಿ ಸಂಪೂರ್ಣವಾಗಿ ತರತಕ್ಕಂಥದ್ದು ನಮ್ಮ ಬದ್ಧತೆ. ಅದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಕೊಟ್ಟಂತಹ ಮಾತುಗಳನ್ನೆಲ್ಲಾ ಒಂದೇ ವರ್ಷದಲ್ಲಿ ಈಡೇರಿಸಬೇಕೆಂದರೆ ಅದಕ್ಕೆ ಹಣ ಬೇಕಲ್ಲವೆ? ಏಳನೇ ವೇತನ ಆಯೋಗವನ್ನು ರಚನೆ ಮಾಡಿ ಎಂದು ಸರ್ಕಾರಿ ನೌಕರರು ಕೇಳಿದ್ದಾರೆ. ಇನ್ನೂ ನಾವು ಆರನೇ ವೇತನ ಆಯೋಗದ ಹಣವನ್ನು ಈ ಬಜೆಟ್‌ನಲ್ಲಿ ಕೊಡುತ್ತಿದ್ದೇವೆ. ಸರ್ಕಾರಿ ನೌಕರರ ಸಂಬಳ ಸಾಲದು, ಅನ್ಯಾಯವಾಗಿದೆ. ಏಳನೇ ವೇತನ ಆಯೋಗ ರಚನೆಯಾಗಬೇಕು ಎಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. ಒಬ್ಬೊಬ್ಬರದ್ದು ಒಂದೊಂದು ರೀತಿಯ ಸಮಸ್ಯೆಗಳು. ಎಲ್ಲದಕ್ಕೂ ನಾವು ಹಣದ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕಾಗಿದೆ. ಆರ್ಥಿಕ ಶಿಸ್ತನ್ನೂ ಕಾಪಾಡಬೇಕಾಗಿದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ಅವರ ಜಿಲ್ಲೆಗಳ ಅಥವಾ ಅವರು ವಿಧಾನಪರಿಷತ್ತಿನಲ್ಲಿ ಪ್ರತಿನಿಧಿಸತಕ್ಕಂತಹ ಕ್ಷೇತ್ರಗಳ ಬಗ್ಗೆ ಕೊಟ್ಟಿರುವ ಸಲಹೆಗಳನ್ನು ಹಂತ ಹಂತವಾಗಿ ಅನುಷ್ಠಾನಕ್ಕೆ ತರುವುದು ಈ ಸಮ್ಮಿಶ್ರ ಸರ್ಕಾರದ ಜವಾಬ್ದಾರಿಯಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ಸದನವನ್ನು ಹೆಚ್ಚು ದಿನ ನಡೆಸಬೇಕೆಂಬುದು ಮಾನ್ಯ ಸದಸ್ಯರ ಕೋರಿಕೆಯಾಗಿದೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಕುಳಿತು ಚರ್ಚೆ ಮಾಡೋಣ. ದಿವಂಗತ ದೇವರಾಜ ಅರಸು ಅವರ ಕಾಲದಲ್ಲಿ ವರ್ಷಕ್ಕೆ 103-104 ದಿನಗಳ ಕಾಲ ಅಧಿವೇಶನವನ್ನು ನಡೆಸಿರತಕ್ಕಂತಹ ದಾಖಲೆ ಇದೆ ಎಂದು ಮಾನ್ಯ ಉಗ್ರಪ್ಪನವರು ಹೇಳಿದರು. ಕನಿಷ್ಠ 60 ದಿನಗಳ ನಡೆಯಬೇಕೆಂದು ಆ್ಯಕ್ಟ್ ಅನ್ನು ಮಾಡಿದ್ದೇವೆಂದು ಹೇಳಿದರು. ಅದರ ಬಗ್ಗೆ ಗಮನ ಕೊಟ್ಟು ಕನಿಷ್ಠ 60 ದಿನಗಳ ಕಾಲ ನಡೆಸಲಾಗುವುದು.

Arya-Vysya Development Corporation ಗೆ ರೂ. 10 ಕೋಟಿ ಹಣವನ್ನು ಕೊಟ್ಟಿದ್ದು, ಬಜೆಟ್‌ನಲ್ಲಿ ಘೋಷಣೆ ಮಾಡಬೇಕೆಂದು ಮಾನ್ಯ ಶರವಣ ಅವರು ಸ್ಲಿಪ್ ಕಳುಹಿಸಿದ್ದಾರೆ. ಆರ್ಯವೈಶ್ಯ ಸಮಾಜದ ಅಭಿವೃದ್ಧಿಗಾಗಿ ರೂ.10 ಕೋಟಿಗಳನ್ನು ಮೀಸಲಿಡಲಾಗಿದೆ ಎಂದು ಈ ಮೂಲಕ ತಿಳಿಸಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರು ಮತ್ತೊಂದು ಮುಖ್ಯವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಮೇಲ್ಮನೆಗೆ ಕೆಳಮನೆಯಷ್ಟು ಆದ್ಯತೆಯನ್ನು ನೀಡಲಾಗುವುದಿಲ್ಲ ಎಂದು ಹೇಳಿದರು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೇಲ್ಮನೆ ಇರಲಿ ಅಥವಾ ಕೆಳಮನೆ ಇರಲಿ ಎರಡೂ ಸದನಗಳನ್ನು ಗೌರವಯುತವಾಗಿ ನಡೆಸಿಕೊಳ್ಳಲಾಗುವುದು.

**ಸಭಾಪತಿಯವರು:-** ಮೇಲ್ಮನೆಯಿಂದ ಒಬ್ಬರನ್ನೇ ಮಂತ್ರಿ ಮಾಡಲಾಗಿದೆ ಎಂದರು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಾತಿನಿಧ್ಯ ಸ್ವಲ್ಪ ಹೆಚ್ಚಿಗೆ ಕೊಡಿ ಎಂತಲೇ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ 76 ಜನ ಮಂತ್ರಿಗಳಲ್ಲಿ 20 ಜನ ರಾಜ್ಯಸಭಾ ಸದಸ್ಯರು. ಅದರಲ್ಲಿ ಟಾಪ್ ಟೆನ್ ಅಂದರೆ ಆರ್ಥಿಕ, ವಿದೇಶಾಂಗ, ರಕ್ಷಣಾ, ರೈಲ್ವೆ ಖಾತೆಗಳಿರಬಹುದು, ಇವುಗಳೆಲ್ಲವೂ ರಾಜ್ಯಸಭಾ ಸದಸ್ಯರಿಗೆ ನೀಡಲಾಗಿದೆ. ಮಹಾರಾಷ್ಟ್ರದಲ್ಲಿ 9 ಜನ ಇದ್ದಾರೆ. ಬಿಹಾರದಲ್ಲಿ ಏಳು ಜನ ಇದ್ದಾರೆ. ತೆಲಂಗಾಣದಲ್ಲಿ ಇಬ್ಬರು ಉಪಮುಖ್ಯಮಂತ್ರಿಗಳು ಎಂ.ಎಲ್.ಸಿ.ಗಳು. ಹಾಗೆಯೇ ಉತ್ತರಪ್ರದೇಶ ಹಾಗೂ ಸೀಮಾಂಧ್ರದಲ್ಲಿ ಇದ್ದಾರೆ. ಆದ್ದರಿಂದ ಯಾರಿಗೆ ಅನುಭವ, ಅರ್ಹತೆ ಹಾಗೂ ಹೋರಾಟದ ಹಿನ್ನೆಲೆಯನ್ನು ಹೊಂದಿದ್ದಾರೆಯೋ ಅವರನ್ನು ರಾಜ್ಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿತದೃಷ್ಟಿಯಿಂದ ಮಂತ್ರಿಗಳಾಗಿ ಮಾಡಬೇಕೆಂದು ಮನವಿ. ಇಂತಹವರೇ ಎಂದು ಹೇಳುವುದಿಲ್ಲ. ಮಾಜಿ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಮನಮೋಹನಸಿಂಗ್, ಶ್ರೀ ಹೆಚ್.ಡಿ.ದೇವೇಗೌಡರು ಮೇಲ್ಮನೆಯಿಂದ ಆದವರು. ಅದೇ ರೀತಿಯಲ್ಲಿ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸದಾನಂದಗೌಡರು ಈ ಮನೆಯವರಾಗಿದ್ದರು. ಕರ್ನಾಟಕದಲ್ಲಿ ವಿಧಾನ ಪರಿಷತ್ತಿನವರು ಎಂದು ಹೇಳಿದರೆ....

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣ ಅವರು ಹುಷಾರಾಗಿರಬೇಕು. ಅವರ ಕುರ್ಚಿಗೆ ಮಾನ್ಯ ಉಗ್ರಪ್ಪನವರು ಕಣ್ಣು ಹಾಕುತ್ತಿದ್ದಾರೆ.

**ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಕಷ್ಟಪಟ್ಟು ಮಾನ್ಯ ದೇವೇಗೌಡರನ್ನು ಹಿಡಿದುಕೊಂಡು 16 ಸೀಟು ಎಂ.ಎಲ್.ಎ.ಗಳಲ್ಲಿ ಆರು ಸೀಟುಗಳನ್ನು ನಾಯಕರ ಸಮಾಜಕ್ಕೆ ತಂದರು. ಆದರೂ ಅಲ್ಲಿನ ನಾಯಕರು ಅವರಿಗೆ ಗೌರವ ಕೊಡುವುದಿಲ್ಲ. ಏನು ಮಾಡುವುದು? ರಾಜ್ಯದಲ್ಲಿ ಇವತ್ತು 14 ಶಾಸಕರ ಸೀಟು ಎಸ್.ಟಿ. ಸಮಾಜಕ್ಕೆ ಬಂದಿದ್ದರೆ ಅದಕ್ಕೆ ಮಾನ್ಯ ಉಗ್ರಪ್ಪನವರ ಕೊಡುಗೆ ಇದೆ. ಮಾನ್ಯ ಉಗ್ರಪ್ಪನವರು ಮಾನ್ಯ ದೇವೇಗೌಡರನ್ನು ಹಿಡಿದುಕೊಂಡು ಮಾನ್ಯ ಚಂದ್ರಶೇಖರ್ ಅವರನ್ನು ಮಾಡಿದರು. ಇಷ್ಟೆಲ್ಲಾ ಮಾಡಿದರೂ ಮಾನ್ಯ ಉಗ್ರಪ್ಪನವರನ್ನು ಗುರುತಿಸುವುದಿಲ್ಲ. ನನಗೆ ಗೊತ್ತಿರುವ ಹಾಗೆ ಅವರು ಮಾಡಿದ್ದನ್ನು ಹೇಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಹಿಳೆಯರು ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಪ್ರಸ್ತಾಪ ಮಾಡಿದೆ. Additional revenue ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಅದರ ಬಗ್ಗೆ ಗಮನ ಹರಿಸಬೇಕು.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರು ನಂತರ ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಧನ ವಿನಿಯೋಗ ವಿಧೇಯಕ ಸಂಖ್ಯೆ 2 2018.....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ರೈತರ ಸಾಲಮನ್ನಾ ವಿಚಾರದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಯಾವುದೇ ವಿದ್ಯುತ್ ತೆರಿಗೆಯನ್ನು ಕಡಿಮೆ ಮಾಡಲಿಲ್ಲ. ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡುತ್ತೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಈ ಹಂತದಲ್ಲಿ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಸಭಾತ್ಯಾಗ ಮಾಡಿದಾಗ ಆಡಳಿತ ಪಕ್ಷದ ಸದಸ್ಯರು ಶೇಮ್ ಶೇಮ್ ಎಂಬ ಘೋಷಣೆಗಳನ್ನು ಕೂಗಿದರು.)**

**(...ಮುಂದು)**

(311) 12.07.2018 9.40 ಕೆಜಿ.ಜಿಆರ್

**ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕವನ್ನು ಅಂಗೀಕರಿಸುವುದು.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2**

**ಸಭಾಪತಿಯವರು:–** “ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ಪೀಠಿಕೆ ಮತ್ತು ಶೀರ್ಷಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.</u>**

**<u>ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ, 2018</u>**

**<u>ಪರ್ಯಾಲೋಚನಾ ಪ್ರಸ್ತಾವ</u>**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**<u>ಪ್ರಸ್ತಾವವನ್ನು ಮಂಡಿಸಲಾಯಿತು.</u>**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>**

**<u>ಖಂಡ 2 ಮತ್ತು 3</u>**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಡಿ.ಸಿ.ತಮ್ಮಣ್ಣ (ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2**

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಡಿ.ಸಿ.ತಮ್ಮಣ್ಣ (ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

(312):12.07.2018-9.50-ಎಂವಿ-ಜಿಆರ್

**ಸಭಾಪತಿಯವರು:-** ಮಾನ್ಯ ಸಭಾನಾಯಕರು ಸದನಕ್ಕೆ ಏನಾದರೂ ಹೇಳುವುದು ಇದ್ದರೆ ಹೇಳಿ.

**ಡಾ.ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ 135ನೇ ಅಧಿವೇಶನವನ್ನು ದಿನಾಂಕ:02.07.2018 ರಿಂದ 12.07.2018ರವರೆಗೆ ಹತ್ತು ದಿನಗಳ ಕಾಲ ನಡೆಸಲಾಯಿತು. ಮಾನ್ಯ ಸದಸ್ಯರುಗಳು ಬಹಳ ದೊಡ್ಡ ಪ್ರಮಾಣದಲ್ಲಿ ಹಾಜರಾಗಿದ್ದು, ವಿಧಾನ ಪರಿಷತ್ತಿನ ದಿನನಿತ್ಯದ ಕಲಾಪಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಚರ್ಚೆಗಳಲ್ಲಿ ಭಾಗವಹಿಸಿದ್ದು, ಈ ಅಧಿವೇಶನವನ್ನು ಅರ್ಥಪೂರ್ಣಗೊಳಿಸಿರುತ್ತಾರೆ. ಈ ಬಗ್ಗೆ ಮಾನ್ಯ ಸದಸ್ಯರುಗಳನ್ನು ಅಭಿನಂದಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಅಧಿವೇಶನದಲ್ಲಿ ಮಂಡಿಸಲಾದ ಚುಕ್ಕೆ ಗುರುತಿನ ಪ್ರಶ್ನೆಗಳ ಕುರಿತು ಮಹತ್ವಪೂರ್ಣ ಚರ್ಚೆಗಳಾಗಿದ್ದು, ಸರ್ಕಾರವು ತೃಪ್ತಿಕರವಾಗಿ ಮತ್ತು ಸಮರ್ಥ ರೀತಿಯಲ್ಲಿ ಉತ್ತರಗಳನ್ನು ನೀಡವಲ್ಲಿ ಯಶಸ್ವಿಯಾಗಿದೆ. ಬಾಕಿ ಇರುವ ಪ್ರಶ್ನೆಗಳಿಗೆ ಶೀಘ್ರದಲ್ಲೇ ಉತ್ತರಗಳನ್ನು ಒದಗಿಸಲಾಗುವುದು.

ಮುಂದುವರೆದಂತೆ, ಈ ಅಧಿವೇಶನದಲ್ಲಿ ಸಾರ್ವಜನಿಕ ಮಹತ್ವದ ಹಲವಾರು ವಿಷಯಗಳಲ್ಲಿ ಅರ್ಥಪೂರ್ಣ ಚರ್ಚೆಗಳಾಗಿವೆ.

ವಿತ್ತೀಯ ಕಾರ್ಯಕಲಾಪಗಳಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳವರು ಸದನದಲ್ಲಿ ಮಂಡಿಸಿದ 2018–19ನೇ ಸಾಲಿನ ಆಯ–ವ್ಯಯ ಅಂದಾಜುಗಳ ಮೇಲಿನ ಚರ್ಚೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರುಗಳು ಸದನದಲ್ಲಿ ವ್ಯಕ್ತಪಡಿಸಿದಂತಹ ಸಂದೇಶ ಮತ್ತು ಆಕ್ಷೇಪಣೆಗಳಿಗೆ ಆಯಾ ಮಾನ್ಯ ಸಚಿವರುಗಳು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳವರು ಅತ್ಯಂತ ಸಮಾಧಾನಕರ ಉತ್ತರಗಳನ್ನು ನೀಡಿದ್ದು, ಆಯವ್ಯಯ ಪತ್ರವು ಸದನದಲ್ಲಿ ಅಂಗೀಕೃತವಾಗುವುದರೊಂದಿಗೆ ಪರಿಷತ್ತಿನ ಕಲಾಪಗಳು ಅತ್ಯಂತ ಯಶಸ್ವಿಯಾಗಿ ಮುಕ್ತಾಯದ ಹಂತವನ್ನು ಇಂದು ತಲುಪಿವೆ.

ಈ ನಿಟ್ಟಿನಲ್ಲಿ ನನಗೆ ಮಾರ್ಗದರ್ಶನ, ಸಹಕಾರ ಮತ್ತು ಪ್ರೋತ್ಸಾಹ ನೀಡಿದ ಗೌರವಾನ್ವಿತ ಸಭಾಪತಿಯವರಿಗೆ, ಗೌರವಾನ್ವಿತ ಮುಖ್ಯಮಂತ್ರಿಯವರಿಗೆ, ಸನ್ಮಾನ್ಯ ಉಪ–ಮುಖ್ಯಮಂತ್ರಿಯವರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಹಾಗೂ ಇತರೇ ಎಲ್ಲಾ ಸಚಿವರಿಗೂ ಮತ್ತು ವಿರೋಧ ಪಕ್ಷದ ನಾಯಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ, ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ, ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳಿಗೆ/ನೌಕರ ವರ್ಗದವರಿಗೆ ಹಾಗೂ ಮಾಧ್ಯಮದ ಎಲ್ಲಾ ಮಿತ್ರರಿಗೂ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಅಧಿಕಾರಿಗಳು ಮತ್ತು ನೌಕರರಿಗೆ. ನನಗೆ ಸಹಕಾರ ನೀಡಿದ್ದಕ್ಕಾಗಿ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:–** ವಿಧಾನ ಪರಿಷತ್ತಿನ 135ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸುವುದಕ್ಕೆ ಇಚ್ಛಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸಾರಂಶದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಧನ್ಯವಾದಗಳು.

**ರಾಷ್ಟ್ರಗೀತೆಯೊಂದಿಗೆ ಸದನವು ರಾತ್ರಿ 10 ಗಂಟೆ 01 ನಿಮಿಷಕ್ಕೆ ಅನಿರ್ದಿಷ್ಟಾವಧಿಯವರೆಗೆ ಮುಂದೂಡಲ್ಪಟ್ಟಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"